ಹಾಲುಮತ ಅಧ್ಯಯನದ ಆಕರಗಳು
ಸ್ವರೂಪ ಮತ್ತು ವಿಶ್ಲೇಷಣೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ ಮಹಾಪ್ರಬಂಧ)

ಸಂಶೋಧಕರು
ಶ್ರೀಮತಿ ಅನ್ನಪೂರ್ಣ ಗೋಸ್ಬಾಳ

ಮಾರ್ಗದರ್ಶಕರು
ಡಾ. ಎಫ್.ಟಿ. ಹಳ್ಳಿಕೇರಿ
ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೧

ಹಾಲುಮತ ಅಧ್ಯಯನದ ಆಕರಗಳು

ಸ್ವರೂಪ ಮತ್ತು ವಿಶ್ಲೇಷಣೆ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಶ್ರೀಮತಿ ಅನ್ನಪೂರ್ಣ ಗೋಸ್ಬಾಳ

ಮಾರ್ಗದರ್ಶಕರು

ಡಾ. ಎಫ್.ಟಿ. ಹಳ್ಳಿಕೇರಿ

ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೧

ದೃಢೀಕರಣ ಪತ್ರ

ಶ್ರೀಮತಿ ಅನ್ನಪೂರ್ಣ ಗೋಸ್ಬಾಳ ಇವರು ಹಾಲುಮತ ಅಧ್ಯಯನದ ಆಕರಗಳು ಸ್ವರೂಪ ಮತ್ತು ವಿಶ್ಲೇಷಣೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೩೦.೩.೨೦೧೧

(ಡಾ. ಎಫ್.ಟಿ. ಹಳ್ಳಿಕೇರಿ)
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಹಾಲುಮತ ಅಧ್ಯಯನದ ಆಕರಗಳು ಸ್ವರೂಪ ಮತ್ತು ವಿಶ್ಲೇಷಣೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ಎಫ್.ಟಿ. ಹಳ್ಳಿಕೇರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಭಾಷಾ ನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಅನ್ನಪೂರ್ಣ ಗೋಸ್ಪಾಳ)
ಸಂಶೋಧಕರು

ಸ್ಥಳ : ವಿದ್ಯಾರಣ್ಯ
ದಿನಾಂಕ : ೩೦.೦೩.೨೦೧೧

ನಿವೇದನೆ

ವಿಭಕ್ತ ಕುಟುಂಬದಿಂದ ಅವಿಭಕ್ತ ಕುಟುಂಬಕ್ಕೆ ಬಂದು ಹತ್ತು ವರ್ಷಗಳ ತರುವಾಯ ಪುನಃ ಪ್ರಾರಂಭವಾದ ಶೈಕ್ಷಣಿಕ ಜೀವನ ನನ್ನ ಪಾಲಿನ ವಿಶೇಷ ಸಂದರ್ಭವೇ ಸರಿ. 'ಏನನ್ನಾದರೂ ಮಾಡಬೇಕು ನನ್ನಿಂದಾದ ಸೇವೆಯನ್ನು ಸಲ್ಲಿಸಬೇಕು' ಎಂಬ ತುಡಿತದೊಂದಿಗೆ ಪ್ರಾರಂಭವಾದ ಅಧ್ಯಯನ ಪದವಿಪೂರ್ವದಿಂದ ಈ ಮಹಾಪ್ರಬಂಧ ರಚನೆ(೧೯೯೯-೨೦೧೦)ಯವರೆಗೆ ನಡೆದು ಬಂ ರಿಯಲ್ಲಿ ಎದುರಾದ ದೊಡ್ಡ ದೊಡ್ಡ ಸಮಸ್ಯೆಗಳು ಸಣ್ಣಾವಾದವು. ಅಂಥ ಸಮಯದಲ್ಲಿ ನನ್ನ ನೆರವಿಗೆ ಬಂದ ಅನೇಕ ಮಹನೀಯರನ್ನು ಸ್ಮರಿಸುವುದು ನನ್ನ ಆದ್ಯ ಕರ್ತವ್ಯ. ಕನ್ನಡ ಸಾಹಿತ್ಯ ಸಂಸ್ಕೃತಿಗಳತ್ತ ಚಿಕ್ಕಂದಿನಿಂದಲೂ ನನಗೆ ಆಸಕ್ತಿ. ಈ ಆಸಕ್ತಿಯನ್ನು ಇನ್ನೂ ವ್ಯಾಪಕವಾಗಿ ಬೆಳೆಸಿಕೊಳ್ಳಲು ಬಿಡುವಿನ ವೇಳೆಯಲ್ಲಿ ಅನೇಕ ಪುಸ್ತಕಗಳನ್ನು ಓದುತ್ತಿದ್ದೆ. ಈ ನನ್ನ ಓದಿನ ವಿಸ್ತರಣೆಗೆ ಬೌದ್ಧಿಕ ಶಕ್ತಿಯಾಗಿ ಪರಿಣಮಿಸಿದುದು ಹಂಪಿಯ ಕನ್ನಡ ವಿಶ್ವವಿದ್ಯಾಲಯ. ಇಲ್ಲಿಯೇ ಸ್ನಾತಕೋತ್ತರ (ಎಂ.ಎ. ಕನ್ನಡ) ಅಧ್ಯಯನವನ್ನು ಪೂರೈಸಿ ಆ ಕನಸನ್ನು ಸಾಕಾರಗೊಳಿಸಿದ ಕನ್ನಡ ವಿಶ್ವವಿದ್ಯಾಲಯಕ್ಕೆ ನಾನು ಸದಾ ಋಣಿಯಾಗಿದ್ದೇನೆ.

ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಗೌರವಾನ್ವಿತ ಕುಲಪತಿಗಳಾದ ಡಾ. ವಿವೇಕ ರೈ, ಡಾ. ಎ. ಮುರಿಗೆಪ್ಪ, ಮಾನ್ಯ ಕುಲಸಚಿವರುಗಳಾದ ಶ್ರೀ ವಿ. ಶಂಕರ, ಶ್ರೀ ಎಸ್.ಎಸ್. ಪೂಜಾರ, ಡಾ. ಮಂಜುನಾಥ ಬೇವಿನಕಟ್ಟಿ, ಡೀನರಾದ ಡಾ. ರಹಮತ್ ತರೀಕೆರೆ, ಅಧ್ಯಯನಾಂಗದ ನಿರ್ದೇಶಕರುಗಳಾದ ಡಾ. ಪಾಂಡುರಂಗಬಾಬು, ಡಾ. ವೀರೇಶ ಬಡಿಗೇರ, ಎಂ.ಎ. ಓದಿನಲ್ಲಿ ಸಂಯೋಜನಾಧಿಕಾರಿಗಳಾದ ಡಾ. ಮೋಹನ ಕುಂಟಾರ್, ಡಾ. ವಿಜಯ ಪೂಣಚ್ಚ ತಂಬಂಡ ಅವರಿಗೆ ಅನಂತ ವಂದನೆಗಳು.

ಕರ್ನಾಟಕದ ಪ್ರಸಿದ್ಧ ಸಂಶೋಧಕರು, ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಎಂ.ಎಂ. ಕಲಬುರ್ಗಿ ಅವರೊಂದಿಗೆ ನಾನು ಚರ್ಚಿಸಿದಾಗ ಪ್ರಸ್ತುತ ಮಹಾಪ್ರಬಂಧದ ಸ್ವರೂಪ ಸಂರಚನೆ ಬಗೆಗೆ ಮಾರ್ಗದರ್ಶನ ನೀಡಿ, ಇಂಥದೊಂದು ಅಧ್ಯಯನ ಅಗತ್ಯವಾಗಿ ನಡೆಯಬೇಕೆಂದು ಪ್ರೋತ್ಸಾಹಿಸಿದ್ದಾರೆ. ಅವರಿಗೆ ನನ್ನ ಗೌರವಪೂರ್ವಕ ನಮನಗಳು.

ಸಂಶೋಧನ ಗುರುಗಳಾದ ಡಾ. ಎಫ್.ಟಿ.ಹಳ್ಳಿಕೇರಿ ಮತ್ತು ಶ್ರೀಮತಿ ಯಶೋಧಾ ಹಳ್ಳಿಕೇರಿ ದಂಪತಿಗಳ ಸ್ನೇಹ, ಪ್ರೋತ್ಸಾಹಗಳು ಒಂದು ಅವಿಸ್ಮರಣೀಯ ಅನುಭವವಾಗಿದೆ. ವಿಷಯದ ಆಯ್ಕೆಯಿಂದ ಹಿಡಿದು

ಮಹಾಪ್ರಬಂಧ ಸಿದ್ಧಗೊಳ್ಳುವವರೆಗಿನ ಆಕರ ಸಂಗ್ರಹ, ತಲಸ್ಪರ್ಶಿ ಅಧ್ಯಯನ, ವಿಷಯ ವಿಶ್ಲೇಷಣೆ, ಕ್ರಮಬದ್ಧ ಬರವಣಿಗೆ ಹೀಗೆ ವಿವಿಧ ಹಂತಗಳಲ್ಲಿ ಮಾರ್ಗದರ್ಶನ ನೀಡಿ ನನ್ನಲ್ಲಿ ಸಂಶೋಧನ ಆಸಕ್ತಿಯನ್ನು ಮೂಡಿಸಿದ್ದಾರೆ. ಅಲ್ಲದೇ ಹಲವಾರು ಸಭೆ, ಸಮಾರಂಭ, ಸಮ್ಮೇಳನಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿ, ವಿವಿಧ ಲೇಖನಗಳನ್ನು ಬರೆಯಿಸಿ, ಅಗತ್ಯವಾದ ಆಕರಗಳನ್ನು ನೀಡಿ ಬೆಟ್ಟದಂತೆ ಹೊತ್ತೊಯ್ದ ಅನೇಕ ಸಮಸ್ಯೆಗಳಿಗೆ ನಗುತ್ತಲೇ ಪರಿಹಾರ ಸೂಚಿಸಿ ಸಂಶೋಧನೆಯಲ್ಲಿ ಪೂರ್ಣ ರೀತಿಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಿದ್ದಾರೆ. ಹಲವು ಒತ್ತಡಗಳೊಂದಿಗೆ ಅಧ್ಯಯನಕ್ಕೆ ತೊಡಗಿಕೊಂಡ ಸಂದರ್ಭಗಳನ್ನು ತಾಳ್ಮೆಯಿಂದ ಸಹಿಸಿ "ಸಂಶೋಧನೆಯಲ್ಲಿ ಬ್ಯಾಸರ ಮಾಡಿಕೋಬಾರದ್ರಿ" ಎಂದು ಶಿಸ್ತನ್ನು ಕಲಿಸಿ ನನ್ನೆಲ್ಲ ಉತ್ಸಾಹ ಕನಸುಗಳಿಗೆ ಒತ್ತಾಸೆಯಾಗಿ ನೀರೆರೆದು ಪೋಷಿಸಿದ ಸಹೃದಯಿ ಗುರುಗಳಿಗೆ ಅನಂತ ಪ್ರಣಾಮಗಳು.

ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಕೆ.ರವೀಂದ್ರನಾಥ, ಡಾ. ಎಸ್.ಆರ್.ಚೆನ್ನವೀರಪ್ಪ, ಡಾ. ಎಸ್.ಎಸ್.ಅಂಗಡಿ ಮತ್ತು ಆಡಳಿತ ವರ್ಗದವರ ಸಹಕಾರ, ಮಾರ್ಗದರ್ಶನಗಳಿಗೆ ಆದರ ಪೂರ್ವಕ ವಂದನೆಗಳು.

ಸಮಾಜಮುಖಿ ಚಿಂತಕರಾದ ಡಾ. ಕೆ.ಎಮ್.ಮೇತ್ರಿ ಅವರ ಪ್ರತಿ ಹಂತದ ಧೈರ್ಯ ತುಂಬುವ, ಓದಿನಲ್ಲಿ ವಿಶ್ವಾಸ ಕಳೆದುಕೊಳ್ಳದಂತೆ ಸಕಾಲಿಕ ಸೂಕ್ತ ಸಲಹೆ ಸೂಚನೆಗಳನ್ನು ನೀಡುವ ಮನೋಧರ್ಮ ನನ್ನ ಭಾಗದ ಸುದೈವವೇ ಆಗಿದೆ. ಕುರುಬರ ಸಾಂಸ್ಕೃತಿಕ ಪರಿಷತ್ತಿನ ಯೋಜನೆಯ ತಮ್ಮ 'ಕಳ್ಳು-ಬಳ್ಳಿ' ಎಂಬ ಸಂಪುಟ ರಚನೆಗೆ ಕ್ಷೇತ್ರಕಾರ್ಯ ಸಹಾಯಕಳನ್ನಾಗಿ ನೇಮಿಸಿ ಅಧ್ಯಯನಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹರಿಸಿದ ಅಣ್ಣ ಕೆ.ಎಂ.ಮೇತ್ರಿ ಅವರಿಗೆ ತುಂಬು ಹೃದಯದ ನಮಸ್ಕಾರಗಳು. ತಂಗಿ ಡಾ. ದಾಕ್ಷಾಯಿಣಿ ಮೇತ್ರಿ ಮತ್ತು ಚಿರಂಜೀವಿ ಸಹನಾಳ ಪ್ರೀತಿ ಪ್ರೋತ್ಸಾಹ ಸ್ಮರಣೀಯವಾದುದು.

ಡಾ. ಶಿವಾನಂದ ವಿರಕ್ತಮಠ, ಶ್ರೀಮತಿ ಶಕುಂತಲಾ ವಿರಕ್ತಮಠ, ಡಾ. ಅಶೋಕ ರಂಜರೆ, ಡಾ. ಭಾಗ್ಯಲಕ್ಷ್ಮಿ ರಂಜರೆ, ಕೆ.ಕೆ.ಮಕಾಳೆ ಕುಟುಂಬ, ವಿಶ್ವವಿದ್ಯಾಲಯದ ಇತರ ಅಧ್ಯಾಪಕರ ಸ್ನೇಹ, ಸೌಜನ್ಯ ಪ್ರೋತ್ಸಾಹಗಳು ನನ್ನಲ್ಲಿ ಹುರುಪನ್ನು ತುಂಬುತ್ತಿದ್ದವು. ಇವರಿಗೆ ನನ್ನ ನಮಸ್ಕಾರಗಳು.

ಶಿಕ್ಷಣದ ಬಗೆಗೆ ವಿಶೇಷ ಗೌರವ ಹೊಂದಿದ ಮಾವಂದಿರಾದ ಜಿ.ರಾಮಲಿಂಗಪ್ಪ, ಭಾವಂದಿರು, ಅಕ್ಕಂದಿರುಗಳಿಗೆ, ಚಿಕ್ಕಪ್ಪ, ಚಿಕ್ಕಮ್ಮಂದಿರುಗಳಿಗೆ ಮತ್ತು ಇವರ ಕುಟುಂಬ ವರ್ಗದವರಿಗೆ, ಅಧ್ಯಯನವು ಪೂರ್ಣಗೊಳ್ಳುವ ಮೊದಲೇ ದೈವಾಧೀನರಾದ ಶರಣ ಜಿ.ನಾಗಲಿಂಗಪ್ಪ ಮತ್ತು ಕುಟುಂಬದ ಎಲ್ಲ ಬಂಧುಬಾಂಧವರಿಗೆ, ನನ್ನನ್ನು ಮಗ ಎಂದು ಕರೆಯುವ ವಿಶಾಲ ಹೃದಯಿ ತಂದೆ ಬಸಪ್ಪ, ತಾಯಿ ಶಿವುಬಾಯಿ, ಅಣ್ಣ ಪ್ರಕಾಶ, ಅತ್ತಿಗೆ ನೇತ್ರಾವತಿ, ಪುಟಾಣಿ ಸಾಕ್ಷಿ, ಚಿಕ್ಕಪ್ಪ ಫಕೀರಪ್ಪ, ಚಿಕ್ಕಮ್ಮ ಪುಷ್ಪಾ, ಸಹೋದರರಾದ

ರಮೇಶ ಮತ್ತು ಯಮನೂರಪ್ಪ ಸಹೋದರಿ ಸುಜಾತ ಇವರೆಲ್ಲರ ಅಭಿಮಾನ ಪ್ರೀತಿ ಗೌರವಗಳಿಗೆ ತುಂಬು ಹೃದಯದ ವಂದನೆಗಳು.

ಅಧ್ಯಯನದ ಸಂದರ್ಭದಲ್ಲಿ ಸಾಕಷ್ಟು ಸಮಯವನ್ನು ಮಕ್ಕಳಿಗಾಗಿ ವಿನಿಯೋಗಿಸಲು ಸಾಧ್ಯವಾಗಲಿಲ್ಲ. ಅದರ ಕೊರತೆಯು ನನ್ನ ಗಮನಕ್ಕೆ ಬಾರದಂತೆ ಕಾಯ್ದು ಪ್ರಗತಿ ವಿಚಾರಿಸಿ ಪ್ರೋತ್ಸಾಹಿಸುವ ಪತಿ ಸದಾಶಿವಪ್ಪ, ಹಾಗೆಯೇ ನನ್ನ ಚಿರಂಜೀವಿಗಳಾದ ಯಶೋದಾ, ರಾಮಕೃಷ್ಣ ಮತ್ತು ರಾಜೇಶ್ವರಿ ಇವರಿಗೆ ತುಂಬು ಹೃದಯದ ನೆನಕೆಗಳು.

ಎಲ್ಲಿಗೆ ಬಂತು ಸಂಶೋಧನೆ ಎಂದು ವಿಚಾರಿಸುವ ಅಕ್ಕ ಡಾ.ಮಲ್ಲಿಕಾ ಘಂಟಿ, ಡಾ. ಶ್ರೀರಾಮ ಇಟ್ಟಣ್ಣನವರ, ಡಾ. ಬಿ.ಜಿ.ಬಿರಾದಾರ, ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಶಿವಪ್ಪ ನೀರಲಗಿ, ಹಿರಿಯರಾದ ಜೆ.ಆರ್. ರಾಮಮೂರ್ತಿ, ಬಸವರಾಜ ಬೋನಾ, ಭೂಪಾಳ ರಾಘವೇಂದ್ರಶೆಟ್ಟರು, ಜಿ.ಸರೋಜಮ್ಮ ಶಂಕರಗೌಡ, ಜಿ. ಭರಮ ಲಿಂಗನಗೌಡ, ಬಾಲ್ಯ ಸ್ನೇಹಿತೆ ಮಲ್ಲಮ್ಮ ಭರಮಲಿಂಗನಗೌಡ, ಥಿಯೋಸಾಫಿಕಲ್ ಕಾಲೇಜಿನ ಪ್ರೊ. ಯು. ರಾಘವೇಂದ್ರರಾವ್, ಬಿ.ತಾಯಪ್ಪ, ಶ್ರೀಮತಿ ಡಿ.ಎನ್.ಸುಜಾತ, ಶ್ರೀಮತಿ ಭಾಗ್ಯಲಕ್ಷ್ಮಿ ಭರಾಡೆ, ವಿಜಯನಗರ ಕಾಲೇಜಿನ ಡಾ. ಕೆ.ರೇವಣಸಿದ್ದಪ್ಪ, ಬಸಣ್ಣ ಡಿಗ್ಗಿ ಮೊದಲಾದವರ ಪ್ರೋತ್ಸಾಹಕ್ಕೆ ವಂದನೆಗಳು.

ಸಂಶೋಧನ ಸಂದರ್ಭದಲ್ಲಿ ನನ್ನೊಂದಿಗೆ ಚರ್ಚೆ, ಸಲಹೆ, ಸೂಚನೆ, ಸಹಕಾರ ನೀಡಿದ ಡಾ. ಡಿ.ಯರಿಯಪ್ಪ, ಡಾ. ಚಂದ್ರಪ್ಪ ಸೊಬಟಿ, ಡಾ. ಗವಿಸಿದ್ದಪ್ಪ ಹಂದ್ರಾಳ, ಎ.ಬಿ.ಬಾಳಪ್ಪ, ಲಿಂಗಪ್ಪ ಗಗ್ರಿ, ಅಧ್ಯಯನಕ್ಕೆ ಬೇಕಾದ ಗ್ರಂಥಗಳನ್ನು ಪೂರೈಸಿದ ಅಕ್ಷರ, ಸಿರಿಗನ್ನಡ ಹಾಗೂ ಹಾಲುಮತ ಅಧ್ಯಯನ ಪೀಠಗಳ ಆಡಳಿತ ವರ್ಗದವರ ಸಹಕಾರ ಸೌಜನ್ಯಗಳಿಗೆ, ಸಮಾಜ ಸೇವೆಯು ತಮ್ಮ ಪಾಲಿನ ಕರ್ತವ್ಯವೆಂದು ಗೌರವಿಸುವ ಹೊಸಪೇಟೆಯ ಪತಂಜಲಿ ಯೋಗ ಪೀಠದ ಸರ್ವ ಸದಸ್ಯರಿಗೆ, ನಿಗದಿತ ಸಮಯದಲ್ಲಿ ಅಚ್ಚುಕಟ್ಟಾಗಿ ಡಿ.ಟಿ.ಪಿ. ಕಾರ್ಯ ಪೂರೈಸಿದ ಯಾಜಿ ಗ್ರಾಫಿಕ್ಸ್‌ನ ಶ್ರೀಮತಿ ಸವಿತಾ ಯಾಜಿ, ಗಣೇಶ್ ಯಾಜಿ ಇವರೆಲ್ಲರ ಸಹಕಾರಕ್ಕೆ ಕೃತಜ್ಞತೆಗಳು.

ಅನ್ನಪೂರ್ಣ ಗೋಸ್ಬಾಳ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿ

ಕರ್ನಾಟಕದ ಪ್ರಮುಖ ಸಮುದಾಯಗಳಲ್ಲಿ ಹಾಲುಮತ ಜನಾಂಗವು ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ದೊಡ್ಡ ಪರಂಪರೆಯನ್ನು ಹೊಂದಿದೆ. ಈ ಸಮುದಾಯದವರನ್ನು ಕುರುಬರು ಎಂದೇ ಕರೆಯಲಾಗುತ್ತದೆ. ಭಾರತದಾದ್ಯಂತ ಕುರುಬರನ್ನು ಧನಗಾರರು, ಪಾಲರು, ಗಡ್ಡಿ, ಗಡರಿಯಾ, ಕುರುಂಬರು, ಕುರುಮನ ಎಂದು ವಿವಿಧ ರೀತಿಯಾಗಿ ಕರೆಯಲಾಗುತ್ತದೆ. ಇವರು ಪ್ರಾಚೀನ ಕಾಲದಿಂದಲೂ ಪಶುಪಾಲನೆ, ಕುರಿಸಾಕಾಣಿಕೆ, ಕಂಬಳಿ ತಯಾರಿಕೆ ಹಾಗೂ ಒಕ್ಕಲುತನವನ್ನು ಪ್ರಧಾನ ಉದ್ಯೋಗಗಳನ್ನಾಗಿ ಮಾಡಿಕೊಂಡು ಬಂದಿದ್ದಾರೆ. ತಮ್ಮ ಸಂಸ್ಕೃತಿಯ ಮೂಲ ಸೊಗಡನ್ನು ಪರಂಪರಾಗತ ಜೀವನ ಪದ್ಧತಿಯನ್ನು ಯಥಾವತ್ತಾಗಿ ಇಂದಿಗೂ ಉಳಿಸಿಕೊಂಡು ಬಂದ ಸಮುದಾಯಗಳಲ್ಲಿ ಕುರುಬರು ಪ್ರಮುಖರೆನಿಸುತ್ತಾರೆ. ಇದಕ್ಕೆ ಈಗಲೂ ನಡೆಯುವ ಹಬ್ಬ, ಆಚರಣೆ, ಉತ್ಸವ, ನಂಬಿಕೆ ಮತ್ತು ಸಂಪ್ರದಾಯಗಳು ನಿದರ್ಶನವಾಗಿವೆ. ಈ ಸಮುದಾಯವೇ ದಕ್ಷಿಣ ಭಾರತದ ಮೂಲ ನಿವಾಸಿಗಳೆಂದು ಗಸ್ತೋವ ಓಪರ್ಟ, ಎಡ್ಗರ ಥರ್ಸ್ಟನ್, ಎಂಥೋವನ್, ಸೊಂತ್ಮೈಮರ್, ಶಂಬಾ ಜೋಶಿ, ವಿ.ಆರ್.ಹನುಮಂತಯ್ಯ, ಚಿಂತಾಮಣಿ ಢೇರೆ, ಎಂ.ಎಂ.ಕಲಬುರ್ಗಿ ಅವರಂಥ ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಸಮುದಾಯದ ಪ್ರಾಚೀನತೆಯನ್ನು ಕುರಿತಂತೆ ಗಸ್ತೋವ ಓಪರ್ಟ ಅವರು ತಮ್ಮ original Inhabitants of India ಎಂಬ ಕೃತಿಯಲ್ಲಿ ಹೀಗೆ ಹೇಳಿದ್ದಾರೆ. "Indeed the kurubas must be regarded as very old inhabitants of this land. Who can constested with their Dravidian kinsmen the priority of occupation of Indian soil[೧] ಅಂದರೆ ಕುರುಬರು ಈ ನೆಲದ ಪ್ರಾಚೀನ ಸಮುದಾಯವೆಂದು ಮತ್ತು ದ್ರಾವಿಡ ಮೂಲದ ಜನಾಂಗವೆಂದು ಸ್ಪಷ್ಟಪಡಿಸಿದ್ದಾರೆ. ಅಲ್ಲದೆ ಇಂದಿನ ಹಲವಾರು ರಾಜಮನೆತನಗಳಿಗೆ ಹಾಗೂ ಜಾತಿ ಜನಾಂಗಗಳಿಗೆ ಮೂಲಪುರುಷರು ಎಂದು ಅಭಿಪ್ರಾಯಪಟ್ಟಿದ್ದಾರೆ. ಸಿ.ಜೆ. ಬ್ರೌನ್ ಅವರು ದಕ್ಷಿಣ ಭಾರತದಲ್ಲಿ ಸಿಗುವ ಅತಿ ಪ್ರಾಚೀನವಾದ ನಾಣ್ಯಗಳೆಂದರೆ ಕುರುಬರವು. ಇವು ಕ್ರಿ.ಶ. ಮೂರನೆಯ ಶತಮಾನದ ನಾಣ್ಯಗಳೆಂದು ಹೇಳಿದ್ದಾರೆ.[೨] ಹಾಲುಮತ ದರ್ಶನ ಕುರಿತು ಅಧ್ಯಯನ ಮಾಡಿದ ಶಂಬಾ ಜೋಷಿ ಅವರು ವೇದ ಕಾಲದಲ್ಲಿ ಈ ಜನಾಂಗ ಸುವಿಖ್ಯಾತವಾಗಿತ್ತೆಂದೂ ಕ್ರಿ.ಪೂರ್ವ ೧೨೦೦ರಿಂದ ೨೦೦೦

ವರ್ಷಗಳಷ್ಟು ಪ್ರಾಚೀನವಾಗಿತ್ತೆಂದು ಆಧಾರಪೂರ್ವಕವಾಗಿ ಹೇಳಿದ್ದಾರೆ. ಹೀಗೆ ಪ್ರಾಚೀನತೆಯನ್ನು ಹೊಂದಿದ ಕುರುಬ ಸಮುದಾಯವು ದಕ್ಷಿಣ ಭಾರತದ ರಾಜಕೀಯ ಕ್ಷೇತ್ರದಲ್ಲಿಯೂ ಪ್ರಮುಖ ಪಾತ್ರವನ್ನು ನಿರ್ವಹಿಸಿದೆ.[೭] ಇದಕ್ಕೆ ಸರ್ ಡಬ್ಲ್ಯು. ಎಲಿಯಟ್ ಅವರ ಮಾತುಗಳು ಹೀಗೆ ಪುಷ್ಟಿಯನ್ನು ನೀಡುತ್ತವೆ. "The kurubas one of the most important elements in the early population of south India. They appear as kurumbans in Tamil and Malayali, as Kurubas in Kanara and correspond to the dhanagars of Marathas and of northern India some in malbar and bondsman others in the malbars Karnataka bred horses and served as troppers in the East karnataka there are said to have formed a federal commurity of twenty four states to have been convented to Buddhism to have gatined much skill in thearts and to have been overthrown by a chala kings of tanjore in the fifth or sixth century[೮] ಹೀಗೆ ಈ ನೆಲದ ಮೂಲ ನಿವಾಸಿಗಳಲ್ಲಿ ಕುರುಬ ಸಮುದಾಯಯವು ಅತ್ಯಂತ ಪ್ರಾಚೀನವಾಗಿದೆ.

ಅಧ್ಯಯನದ ಉದ್ದೇಶ

ಹಾಲುಮತ ಸಾಹಿತ್ಯ ಸಂಸ್ಕೃತಿ ಕುರಿತು ಪ್ರಾಚೀನ ಕಾಲದಿಂದಲೂ ಕಾವ್ಯ ಪುರಾಣಗಳಂಥ ಲಿಖಿತ ಆಕರಗಳು ಶಾಸನ, ಸನ್ನದು, ನಿರೂಪ, ಕಾಗದಪತ್ರಗಳಂಥ ದಾಖಲು ರೂಪದ ಆಕರಗಳು ಡೊಳ್ಳಿನ ಹಾಡುಗಳು ಒಡೆಯರ ಹೇಳಿಕೆಗಳು, ಜನಪದ ಗೀತೆಗಳು, ಮೌಖಿಕರೂಪದ ಆಕರಗಳು ಸೃಷ್ಟಿಯಾಗುತ್ತ ಬಂದಿವೆ. ಇವುಗಳಲ್ಲಿ ತಗರ ಪವಾಡ, ಸಿದ್ಧಮಂಕ ಚರಿತೆ, ಮಾಳಿಂಗರಾಯನ ಕಾವ್ಯ, ಮೈಲಾರಲಿಂಗನ ಕಾವ್ಯ, ಜನಪದ ಹಾಲುಮತ ಮಹಾಕಾವ್ಯ, ಕೆಲವು ಶಿಲಾಶಾಸನ, ತಾಮ್ರಪತ್ರ, ನಿರೂಪ, ಸನ್ನದುಗಳು ಪ್ರಮುಖವಾಗಿವೆ. ಮೌಖಿಕ ಪರಂಪರೆಯ ಜನಪದ ಹಾಲುಮತ ಮಹಾಕಾವ್ಯವು ಕುರುಬರ ಆರಾಧ್ಯ ದೈವವಾದ ಬೀರಪ್ಪನ ಚರಿತ್ರೆಯನ್ನು ಸುದೀರ್ಘವಾಗಿ ಹೇಳುತ್ತದೆ. ಜೊತೆಗೆ ಬೀರಪ್ಪನ ಶಿಷ್ಯ ಪರಂಪರೆ ಆತನ ನೆಲೆಗಳು, ಆಚರಣೆ ಸಂಪ್ರದಾಯಗಳನ್ನು ಈ ಮಹಾಕಾವ್ಯ ಕಟ್ಟಿಕೊಡುತ್ತದೆ. ತಗರ ಪವಾಡ ಮತ್ತು ಸಿದ್ಧಮಂಕ ಚರಿತೆ ಕುರುಬರ ಗುರುಪರಂಪರೆಯನ್ನು ನಿರೂಪಿಸುವ ದೇಶೀ ಕಾವ್ಯಗಳಾಗಿವೆ. ರೇವಣಸಿದ್ಧ, ಶಾಂತಮುತ್ತಯ್ಯ, ಸಿದ್ಧರಾಮ, ಸಿದ್ಧಮಂಕರ ಜೀವನ ಮತ್ತು ಸಾಧನೆಗಳನ್ನು ಈ ಎರಡು ಕೃತಿಗಳು ಚಾರಿತ್ರಿಕ ನೆಲೆಯಲ್ಲಿ ಚರ್ಚಿಸುತ್ತವೆ. ಹನ್ನೆರಡನೆಯ ಶತಮಾನದ ಸರೂರಿನ ಶಿಲಾಶಾಸನವು ಸಿದ್ಧಮಂಕನನ್ನು ಪ್ರಸ್ತಾಪಿಸುತ್ತದೆ. ತುರುವೆಕೆರೆಯ ತಾಮ್ರಶಾಸನವು ಕುರುಬರಿಗೆ ಶಾಂತಮುತ್ತಯ್ಯನೇ ಗುರು ಎಂಬುದನ್ನು ನಿರೂಪಿಸಲು ಪ್ರಯತ್ನಿಸುತ್ತದೆ. ಹೀಗೆ ಆಧುನಿಕ ಪೂರ್ವದಲ್ಲಿ ಕಾವ್ಯ, ಪುರಾಣ, ಶಾಸನ, ನಿರೂಪ, ಸನ್ನದು ಮೊದಲಾದವು ಹಾಲುಮತ ಅಧ್ಯಯನಕ್ಕೆ ಪ್ರಮುಖ ಆಕರಗಳಾಗಿವೆ.

ಆಧುನಿಕ ಕಾಲಕ್ಕೆ ಬಂದರೆ ಹಾಲುಮತ ಸಮುದಾಯದ ಚರಿತ್ರೆ, ಗುರು ಪರಂಪರೆ, ಆರಾಧ್ಯ ದೈವಗಳು, ರಾಜಕೀಯ, ಇತಿಹಾಸ, ಉಪಪಂಗಡಗಳು, ಆಚರಣೆ, ಸಂಪ್ರದಾಯ, ಕಲೆ ಹೀಗೆ ಅನೇಕ ವಿಷಯಗಳ

ಬಗ್ಗೆ ವಿವಿಧ ವಿದ್ವಾಂಸರು ಚಿಂತನ ಮಂಥನ ನಡೆಸಿದ್ದಾರೆ. ಅಂಥವರಲ್ಲಿ ಥರ್ಸ್ಟನ್, ಸೊಂತೈಮರ, ಎಲಿಯಟ್, ಓಪರ್ಟ ಮೊದಲಾದ ವಿದೇಶಿ ವಿದ್ವಾಂಸರು, ವಿ.ಆರ್.ಹನುಮಂತಯ್ಯ, ಶಂಬಾ ಜೋಶಿ, ಚಿಂತಾಮಣಿ ಢೇರೆ, ಎಂ.ಎಂ.ಕಲಬುರ್ಗಿ, ಶಿವಾನಂದ ಗುಬ್ಬಣ್ಣನವರ, ಎಫ್.ಟಿ.ಹಳ್ಳಿಕೇರಿ ಮುಂತಾದ ದೇಶಿ ವಿದ್ವಾಂಸರು ಪ್ರಮುಖರಾಗಿದ್ದಾರೆ. ಇವರು ಹಾಲುಮತ ಸಮುದಾಯದ ವೈವಿಧ್ಯಮಯ ಚರಿತ್ರೆ ಮತ್ತು ಸಂಸ್ಕೃತಿಯನ್ನು ವಿವಿಧ ಆಕರಗಳಿಂದ ಪುನಃ ರಚಿಸಿದ್ದಾರೆ. ಜೊತೆಗೆ ನಾಡಿನ ಅನೇಕ ಸಂಶೋಧಕರು, ವಿದ್ವಾಂಸರು ಹಾಲುಮತ ಸಾಹಿತ್ಯ ಸಂಸ್ಕೃತಿ ಕಲೆ ಇತಿಹಾಸ ಇತ್ಯಾದಿ ವಿಷಯಗಳ ಮೇಲೆ ಹೊಸ ಬೆಳಕು ಚೆಲ್ಲಿದ್ದಾರೆ. ಹೀಗೆ ಪ್ರಾಚೀನ ಮತ್ತು ಆಧುನಿಕ ಕಾಲದಲ್ಲಿ ಬಂದ ಎಲ್ಲ ಅಧ್ಯಯನಗಳನ್ನು ಒಂದೆಡೆ ಸಂಗ್ರಹಿಸಿ ಅವುಗಳ ಸ್ವರೂಪವನ್ನು ಗುರುತಿಸುವ ಕಾರ್ಯ ಈವರೆಗೆ ಸಮಗ್ರವಾಗಿ ನಡೆದಿಲ್ಲ. ಈ ಕೊರತೆಯನ್ನು ಮನಗಂಡು ನಾನು "ಹಾಲುಮತ ಅಧ್ಯಯನದ ಆಕರಗಳು: ಸ್ವರೂಪ ಮತ್ತು ವಿಶ್ಲೇಷಣೆ" ಎಂಬ ಶೀರ್ಷಿಕೆಯಡಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದೇನೆ.

ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

ಪ್ರಸ್ತುತ ಮಹಾಪ್ರಬಂಧವು ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ, ಪ್ರಾಚೀನ ಕವಿ ಸಾಹಿತ್ಯ, ದಾಖಲು ಸಾಹಿತ್ಯ, ಮೌಖಿಕ ಸಾಹಿತ್ಯ, ಆಧುನಿಕ ಸಾಹಿತ್ಯ, ಹಾಲುಮತ ಅಧ್ಯಯನ: ವಿವಿಧ ವಿದ್ವಾಂಸರ ಕೊಡುಗೆ ಹಾಗೂ ಸಮಾರೋಪ ಎಂಬ ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳ ಸ್ವರೂಪ ಮತ್ತು ಉದ್ದೇಶ ಈ ಕೆಳಗಿನಂತಿವೆ.

ಅಧ್ಯಾಯ ೧ : ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿ

ಕರ್ನಾಟಕದಲ್ಲಿ ಹಾಲುಮತ ಸಂಸ್ಕೃತಿ ಕುರಿತು ಕಾವ್ಯ ಪುರಾಣಗಳು, ಶಾಸನ, ತಾಮ್ರಶಾಸನ, ಸನ್ನದು, ನಿರೂಪ, ಕಾಗದ ಪತ್ರಗಳು, ಡೊಳ್ಳಿನ ಹಾಡುಗಳು, ಹೇಳಿಕೆಗಳು ಇತ್ಯಾದಿ ಆಕರಗಳು, ಲಿಖಿತ ಮತ್ತು ಮೌಖಿಕ ರೂಪದಲ್ಲಿ ಸೃಷ್ಟಿಯಾಗಿವೆ. ಜೊತೆಗೆ ಅವುಗಳ ಶೋಧ ಸಂಗ್ರಹ, ಪರಿಷ್ಕರಣೆ ವಿಶ್ಲೇಷಣೆ ರೂಪದ ಅಧ್ಯಯನಾತ್ಮಕ ಗ್ರಂಥ ಮತ್ತು ಲೇಖನಗಳು ಪ್ರಕಟಗೊಂಡಿವೆ. ಇಂಥ ಎಲ್ಲ ಆಕರಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ಕುರಿತು ಈವರೆಗೆ ಸಮಗ್ರವಾದ ಅಧ್ಯಯನವು ನಡೆದಿಲ್ಲ. ಹೀಗಾಗಿ ಹಾಲುಮತ ಆಕರಗಳ ಸ್ವರೂಪವನ್ನು ಗುರುತಿಸಿ ಅವುಗಳ ವಿಶಿಷ್ಟತೆ ಮತ್ತು ವೈರುಧ್ಯಗಳನ್ನು ಅವಲೋಕಿಸುವುದು ಈ ಮಹಾ ಪ್ರಬಂಧದ ಉದ್ದೇಶವಾಗಿದೆ.

ಅಧ್ಯಾಯ ೨ : ಪ್ರಾಚೀನ ಕವಿ ಸಾಹಿತ್ಯ

ಹಾಲುಮತ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂಥ ಕಾವ್ಯ ಪುರಾಣಗಳನ್ನು ಪ್ರಾಚೀನ ಕವಿಗಳು ರಚನೆ ಮಾಡಿದ್ದಾರೆ. ತಗರ ಪವಾಡ, ಸಿದ್ಧಮಂಕ ಚರಿತೆ, ಹಾಲುಮತೋತ್ತೇಜಕ ಪುರಾಣ, ಮರುಳಸಿದ್ಧನ ಚರಿತೆ, ಚೆನ್ನಬಸವ ಕವಿಯ ಹಾಲುಮತ ಪುರಾಣಗಳಂಥ ಕೃತಿಗಳು ರಚನೆಗೊಂಡಿವೆ.

ತಗರ ಪವಾಡ ಮತ್ತು ಸಿದ್ಧಮಂಕ ಚರಿತೆಗಳು ನಡುಗನ್ನಡ ಸಾಹಿತ್ಯ ಸಂದರ್ಭದಲ್ಲಿ ರಚನೆಯಾದಂಥವು. ದೇಸೀಯತೆ ಈ ಎರಡೂ ಕಾವ್ಯಗಳ ಮೂಲ ಗುಣ. ಕುರುಬರ ಗುರುಪರಂಪರೆಯಲ್ಲಿ ರೇವಣಸಿದ್ಧ ಸಂಪ್ರದಾಯ, ಸಿದ್ಧರಾಮ ಸಂಪ್ರದಾಯ ಮತ್ತು ಅಮೋಘಸಿದ್ಧ ಸಂಪ್ರದಾಯ ಎಂಬ ಮೂರು ಕವಲುಗಳಿವೆ. ರೇವಣಸಿದ್ಧ ಸಂಪ್ರದಾಯವನ್ನು ಶಾಂತಮುತ್ತಯ್ಯನು ಮುಂದುವರಿಸಿಕೊಂಡು ಬಂದಿದ್ದಾನೆ. ಈ ಶಾಂತಮುತ್ತಯ್ಯನ ಮುಂದುವರಿಕೆಯಾಗಿ ಶಾಂತೊಡೆಯರು ಎಂಬ ಗುರುವರ್ಗ ಕುರುಬ ಸಮುದಾಯದಲ್ಲಿ ಈಗಲೂ ಕಾಣಬಹುದು. ತಗರ ಪವಾಡದಲ್ಲಿ ಶಾಂತಮುತ್ತಯ್ಯನೇ ಕಥಾನಾಯಕ. ಕುರುಬರು ಸತ್ತ ಕುರಿ ಮಾಂಸವನ್ನು ಪೇಟೆಯಲ್ಲಿ ಮಾರಿದ ಪ್ರಮಾದದಿಂದಾಗಿ ಕಲ್ಯಾಣಪಟ್ಟಣದಿಂದ ಊರ ಗಡಿಯಾಚೆ ಹೊರಹಾಕಲ್ಪಟ್ಟಿರುತ್ತಾರೆ. ಬಸವಾದಿ ಪ್ರಮಥರು ಶಾಂತಮುತ್ತಯ್ಯನಿಗೆ ದೀಕ್ಷೆಯನ್ನು ನೀಡಿ ಹಾಲುಮತದ ಗುರು ಎಂದು ನೇಮಿಸುತ್ತಾರೆ. ಕಲ್ಯಾಣಪಟ್ಟಣದಿಂದ ಹೊರಹಾಕಲ್ಪಟ್ಟ ಕುರುಬರಿಗೆ ಶಾಂತಮುತ್ತಯ್ಯ ದೀಕ್ಷೆಯನ್ನು ನೀಡಿ ಕಲ್ಯಾಣಪಟ್ಟಣಕ್ಕೆ ಮರಳಿ ಪ್ರವೇಶ ನೀಡುವಂತೆ ಮಾಡಿದ ಸಂಗತಿಯನ್ನು ತಗರ ಪವಾಡ ವಿವರವಾಗಿ ನಿರೂಪಿಸುತ್ತದೆ.

ಸಿದ್ಧರಾಮೇಶ್ವರನ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದವರು ಸಿದ್ಧಮಂಕ. ಈತನನ್ನು ಮರುಳಸಿದ್ಧೇಶ್ವರ ಎಂದೂ ಕರೆಯುತ್ತಾರೆ. ಸಿದ್ಧಮಂಕನ ಸಮಗ್ರ ವ್ಯಕ್ತಿತ್ವ ಮತ್ತು ಸಾಧನೆಯನ್ನು ತಿಳಿಸುವ ಚಾರಿತ್ರಿಕ ಕಾವ್ಯವಾಗಿದೆ, ಸಿದ್ಧಮಂಕ ಚರಿತೆ. ತಗರ ಪವಾಡದ ಕಥೆಯನ್ನು ಇದು ಹೋಲುತ್ತದೆ. ಆದರೆ ಕುರುಬ ಸಮುದಾಯದ ಗುರುಪರಂಪರೆಯ ಕವಲುಗಳಲ್ಲಿ ಒಂದಾದ ಸಿದ್ಧಮಂಕ ಪರಂಪರೆಯನ್ನು ದೀರ್ಘವಾಗಿ ಈ ಕೃತಿ ನಿರೂಪಿಸುತ್ತದೆ. ತಗರ ಪವಾಡದಲ್ಲಿ ರೇವಣಸಿದ್ಧ, ಶಾಂತಮುತ್ತಯ್ಯ, ಸಿದ್ಧಮಂಕ ಚರಿತೆಯಲ್ಲಿ ಸಿದ್ಧರಾಮ ಸಿದ್ಧಮಂಕ ಪ್ರಮುಖ ವ್ಯಕ್ತಿಗಳಾಗಿದ್ದಾರೆ. ಈ ಕಥಾನಾಯಕರ ಚರಿತ್ರೆಯನ್ನಲ್ಲದೆ ತಗರ ಪವಾಡ ಮತ್ತು ಸಿದ್ಧಮಂಕ ಚರಿತೆಗಳು ಕುರುಬ ಸಮುದಾಯದ ಪ್ರಾಚೀನತೆ, ಸಂಪ್ರದಾಯ, ಆಚರಣೆ, ಉದ್ಯೋಗ ಮೊದಲಾದ ವಿಷಯಗಳನ್ನು ಸಾಂದರ್ಭಿಕವಾಗಿ ತಿಳಿಸುತ್ತದೆ. ಹೀಗಾಗಿ ಈ ಎರಡೂ ಕಾವ್ಯಗಳು ಕುರುಬರ ಸಂಸ್ಕೃತಿಯನ್ನು ಚಾರಿತ್ರಿಕ ನೆಲೆಯಲ್ಲಿ ನಿರೂಪಿಸುವಲ್ಲಿ ಯಶಸ್ವಿಯಾಗಿವೆ.

ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ, ಚೆನ್ನಬಸವ ಕವಿಯ ಹಾಲುಮತ ಪುರಾಣಗಳು, ಕುರುಬರ ಗುರುಪರಂಪರೆ(ರೇವಣಸಿದ್ಧ, ಶಾಂತಮುತ್ತಯ್ಯ), ಆರಾಧ್ಯ ದೈವಗಳು(ಬೀರಪ್ಪ, ಮಾಳಿಂಗರಾಯ), ಕಂಬಳಿ ತಯಾರಿಕೆ, ಕುರಿ ಸಾಕಾಣಿಕೆ, ಕುರುಬರ ಕೆಲವು ಪರಂಪರಾಗತ ಆಚರಣೆಗಳನ್ನು ತಿಳಿಸುತ್ತವೆ. ಇಂಥ ಎಲ್ಲ ಕಾವ್ಯ ಪುರಾಣಗಳ ಕರ್ತೃ, ಕಥಾಸಾರ, ವೈಶಿಷ್ಟ್ಯತೆ ಹಾಗೂ ಈವರೆಗೆ ನಡೆದ ಅಧ್ಯಯನಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ೩ : ದಾಖಲು ಸಾಹಿತ್ಯ

ಕುರುಬರ ಇತಿಹಾಸ, ಸಂಸ್ಕೃತಿ, ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳ ಕುರಿತು ಶಿಲಾಶಾಸನ ತಾಮ್ರಶಾಸನ, ಕಾಗದಪತ್ರಗಳು ಪ್ರಾಚೀನ ಕಾಲದಿಂದಲೂ ರಚನೆಗೊಂಡಿವೆ. ಸರೂರು, ತುರುವೆಕೆರೆ,

ಕೊಟ್ಟೂರು, ಚಿತ್ರದುರ್ಗ, ಚಳ್ಳಕೆರೆ ಇತ್ಯಾದಿ ಸ್ಥಳಗಳಲ್ಲಿ ಶಿಲಾಶಾಸನಗಳು, ತಾಮ್ರಶಾಸನಗಳು ಶೋಧ ಗೊಂಡಿವೆ. ಅಲ್ಲದೆ ನಾಡಿನ ಅನೇಕ ಶಾಸನಗಳಲ್ಲಿ ಕುರುಬರ ಉಲ್ಲೇಖಗಳಿವೆ. ಕುರುಬರ ಸಾಮಾಜಿಕ, ಧಾರ್ಮಿಕ ಸಂಗತಿಗಳತ್ತ ಆ ಉಲ್ಲೇಖಗಳು ಹೊಸ ಬೆಳಕನ್ನು ಚೆಲ್ಲುತ್ತವೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಸೊಗಲದ ೯೮೦ರ ಶಾಸನವು ಕೇತಿಮಯ್ಯನ ಹೆಂಡತಿ ಕಂಚಿಕಬ್ಬೆಯ ವ್ಯಕ್ತಿತ್ವವನ್ನು ತಿಳಿಸುತ್ತದೆ. ಈಕೆಯು ಧನಗರ (ಕುರುಬ) ಸಮುದಾಯಕ್ಕೆ ಸೇರಿದವಳೆಂಬುದನ್ನು ಈ ಶಾಸನ ಪಠ್ಯದಿಂದ ಸ್ಪಷ್ಟವಾಗುತ್ತದೆ. ಬೆಳಗಾವಿ, ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿಭಾಗ. ಈ ಭಾಗಗಳಲ್ಲಿ ಕುರುಬರಿಗೆ ಧನಗಾರರೆಂದು ಕರೆಯಲಾಗುತ್ತದೆ. ಮಹಾರಾಷ್ಟ್ರದಲ್ಲಿ ಕುರುಬರಿಗೆ ಪರ್ಯಾಯವಾಗಿ ಧನಗಾರರೆಂದು ಕರೆಯುತ್ತಿರುವುದು ಇಲ್ಲಿ ಉಲ್ಲೇಖನೀಯ. ಹಾಗೆಯೇ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸರೂರು ಗ್ರಾಮವು ಕುರುಬ ಸಮುದಾಯದ ಒಂದು ಪ್ರಾಚೀನ ನೆಲೆ. ಮಲ್ಲಿಕಾರ್ಜುನ (ರೇವಣಸಿದ್ಧ) ದೇವಾಲಯ ಶಾಂತಮುತ್ತಯ್ಯನ ಗದ್ದಿಗೆ ಹಾಗೂ ಮರುಳಸಿದ್ಧನು ತಪಸ್ಸು ಮಾಡಿದನೆಂದು ಹೇಳಲಾದ ತೂಗುದ್ದಣಗಳು ಕುರುಬರ ಪ್ರಾಚೀನ ನೆಲೆಗಳಾಗಿವೆ. ಹೀಗೆಯೇ ಚಿತ್ರದುರ್ಗ ಜಿಲ್ಲೆಯ ತಾಳಿಕಟ್ಟೆ, ತುಮಕೂರು ಜಿಲ್ಲೆಯ ತುರುವೇಕೆರೆ, ಬಳ್ಳಾರಿ ಜಿಲ್ಲೆಯ ದೇವಲಾಪುರ ಮೊದಲಾದ ಕಡೆಗಳಲ್ಲಿ ಕುರುಬರಿಗೆ ಸಂಬಂಧಿಸಿದ ಶಾಸನಗಳು ಕಂಡುಬರುತ್ತವೆ. ಇಂಥ ಎಲ್ಲ ಶಾಸನಗಳ ವಿಶಿಷ್ಟತೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಶಾಸನೇತರ ದಾಖಲೆಗಳಾದ ಕೈಫಿಯತ್ತುಗಳು, ಸನದುಗಳು, ನಿರೂಪಗಳು, ವರದಿ ಮತ್ತು ಭಾಷಣಗಳು ಕೂಡಾ ಸಂಶೋಧನೆಯಲ್ಲಿ ಇತ್ತೀಚೆಗೆ ಪೂರಕ ಆಕರಗಳನ್ನಾಗಿ ಬಳಸಲಾಗುತ್ತದೆ. ಇಂಥ ಶಾಸನೇತರ ದಾಖಲೆಗಳಲ್ಲಿ ಕುರುಬರಿಗೆ ಸಂಬಂಧಿಸಿದ ವಾದ ವಿವಾದಗಳು, ಸಮುದಾಯದ ಅಭಿವೃದ್ಧಿ, ಪರಂಪರೆಯನ್ನು ತಿಳಿಸುವ ವಿವರಗಳು ಕುತೂಹಲಕಾರಿಯಾಗಿವೆ. ೧೯೧೦ರಲ್ಲಿ ಆಯೋಜಿಸಿದ ಹಾಲುಮತ ಧಾರ್ಮಿಕ ಮತ್ತು ವಿದ್ಯಾಭಿವೃದ್ಧಿ ಮಹಾಸಭೆಯ ವರದಿಯಲ್ಲಿ ಅನೇಕ ಮಹನೀಯರ ಭಾಷಣಗಳಿವೆ. ಈ ವರದಿ ಮತ್ತು ಭಾಷಣಗಳು ಕುರುಬ ಸಮುದಾಯ ಬೆಳವಣಿಗೆಯಾಗಬೇಕಾದ ಮಾರ್ಗಸೂಚಿಗಳನ್ನು ತಿಳಿಸುತ್ತವೆ. ಇಂಥ ಎಲ್ಲ ದಾಖಲೆಗಳನ್ನು ಸಂಗ್ರಹಿಸಿ ಅವುಗಳ ಮಹತ್ವ ಮತ್ತು ವಿಶೇಷತೆಯನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ೪ : ಮೌಖಿಕ ಸಾಹಿತ್ಯ

ಹಾಲುಮತ ಸಮುದಾಯದ ಆಚಾರ, ವಿಚಾರ, ಸಂಸ್ಕೃತಿ ಉಳಿದುಕೊಂಡು ಬಂದಿರುವುದು ಮೌಖಿಕ ರೂಪದಲ್ಲಿ ಎಂದು ಹೇಳಬಹುದು. ವಿಶೇಷವಾಗಿ ಡೊಳ್ಳಿನ ಹಾಡುಗಳು ಕುರುಬರ ಸಮಗ್ರ ಸಂಸ್ಕೃತಿಯನ್ನು ಹೇಳುತ್ತವೆ. ಜನಪದ ಸಾಹಿತ್ಯದಲ್ಲಿ ಡೊಳ್ಳಿನ ಹಾಡುಗಳಿಗೆ ವಿಶಿಷ್ಟ ಸ್ಥಾನವಿದೆ. ಕುರುಬರು ತಮ್ಮ ಬಿಡುವಿನ ವೇಳೆಯಲ್ಲಿ ಡೊಳ್ಳು ಬಾರಿಸುತ್ತ ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಹಾಡುಗಳ ಮುಖಾಂತರ ವ್ಯಕ್ತಪಡಿಸುತ್ತ ಬಂದಿರುವುದನ್ನು ಕಾಣಬಹುದು. ಈ ಹಾಡುಗಳಲ್ಲಿ ಕುರುಬರ ಆರಾಧ್ಯ ದೈವಗಳಾದ ಬೀರಪ್ಪ, ಮಾಳಪ್ಪ, ರೇವಣಸಿದ್ಧ, ಇಟ್ಟಪ್ಪ ಮೊದಲಾದವರ ಜೀವನ ವೃತ್ತಾಂತ ಮತ್ತು ಸಾಧನೆಗಳನ್ನು ಪ್ರಸಾರ ಮಾಡಲಾಗುತ್ತದೆ.

ಅಲ್ಲದೆ ರಾಮಾಯಣ, ಮಹಾಭಾರತದಂಥ ಕಾವ್ಯಗಳಲ್ಲಿರುವ ವಿಷಯಗಳನ್ನು ಡೊಳ್ಳಿನ ಹಾಡುಗಳ ಮೂಲಕ ಜನರಿಗೆ ತಿಳಿಹೇಳಲಾಗುತ್ತದೆ. ಇಂಥ ಡೊಳ್ಳಿನ ಹಾಡುಗಳ ಸಂಗ್ರಹ ಮತ್ತು ಪ್ರಕಟನ ಕಾರ್ಯ ನಡೆದಿರುವುದು ತುಂಬಾ ಕಡಿಮೆ. ಎಂ.ಎಸ್.ಸುಂಕಾಪುರ ಅವರು ಸಂಪಾದಿಸಿದ ಜೀವನ ಜೋಕಾಲಿ, ಶಿವಾನಂದ ಗುಬ್ಬಣ್ಣನವರ ಅವರ ದೇವರ ಬಂದಾವ ಬನ್ನಿರೆ, ಜಿ.ಬಿ.ಖಾಡೆ ಅವರ ಕಾಡು ಹೂಗಳು ಮೊದಲಾದ ಸಂಗ್ರಹಗಳು ಡೊಳ್ಳಿನ ಹಾಡುಗಳ ಅನನ್ಯತೆಯನ್ನು ತಿಳಿದುಕೊಳ್ಳಲು ಬಹುಮುಖ್ಯ ಆಕರಗಳಾಗಿವೆ. ಇಂಥ ಅನೇಕ ಡೊಳ್ಳಿನ ಹಾಡುಗಳು ಮೌಖಿಕ ರೂಪದಲ್ಲಿ ಹಾಗೇ ಉಳಿದುಕೊಂಡು ಬಂದಿವೆ. ಇವುಗಳ ಸಂಗ್ರಹ, ಸಂಶೋಧನೆ ಮತ್ತು ವಿಶ್ಲೇಷಣೆಯ ವ್ಯಾಪ್ತಿಯನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ.

ಅಧ್ಯಾಯ ೫ : ಆಧುನಿಕ ಸಾಹಿತ್ಯ

ಬ್ರಿಟಿಷರ ಆಗಮನದಿಂದ ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಭಾರತದ ವಿವಿಧ ಸಮುದಾಯಗಳ ಸಂಸ್ಕೃತಿಯನ್ನು ದಾಖಲಿಸುವ ಕಾರ್ಯ ಪಾಶ್ಚಾತ್ಯ ವಿದ್ವಾಂಸರಿಂದ ಆರಂಭಗೊಂಡಿತು. ಈ ಪಾಶ್ಚಾತ್ಯ ವಿದ್ವಾಂಸರ ಪ್ರೇರಣೆಯಿಂದ ಸ್ವದೇಶಿ ವಿದ್ವಾಂಸರು ಸಮುದಾಯಗಳ ಅಧ್ಯಯನಕ್ಕೆ ತೊಡಗಿಕೊಂಡರು. ಈ ಹಿನ್ನೆಲೆಯಲ್ಲಿ ಹಾಲುಮತ ಸಮುದಾಯದ ಇತಿಹಾಸ ಗುರುಪರಂಪರೆ ದೈವಗಳು ಉಪಪಂಗಡಗಳು ಆಚರಣೆ ಸಂಪ್ರದಾಯ ಕಲೆಗಳ ಬಗ್ಗೆ ಸಂಶೋಧನೆ ಮತ್ತು ವಿಮರ್ಶಾತ್ಮಕ ನೆಲೆಯಲ್ಲಿ ಗ್ರಂಥಗಳು ಲೇಖನಗಳು ಪ್ರಕಟಗೊಂಡಿವೆ. ಆ ಎಲ್ಲ ಗ್ರಂಥ ಲೇಖನಗಳನ್ನು ವಿಷಯಾನುಸಾರವಾಗಿ ವರ್ಗೀಕರಿಸಿ ಅವುಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ಈ ಅಧ್ಯಾಯದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ

ಅಧ್ಯಾಯ ೬ : ಹಾಲುಮತ ಅಧ್ಯಯನ: ವಿವಿಧ ವಿದ್ವಾಂಸರ ಕೊಡುಗೆ

ಪಾಶ್ಚಾತ್ಯ ಶಿಕ್ಷಣದ ಪ್ರೇರಣೆಯಿಂದ ಭಾರತದಲ್ಲಿ ಕಳೆದೆರಡು ಶತಮಾನಗಳಿಂದ ಸ್ಥಳಿಯ ಚರಿತ್ರೆಗೆ ಹೆಚ್ಚಿನ ಮಹತ್ವ ಬಂದಿತು. ಸಮುದಾಯಗಳ ಪ್ರಾಚೀನತೆ ಧಾರ್ಮಿಕ ಸಾಮಾಜಿಕ ಸಂಗತಿಗಳನ್ನು ಅಧ್ಯಯನಕ್ಕೊಳಪಡಿಸಲು ಅನೇಕ ವಿದೇಶಿ ಹಾಗೂ ಸ್ವದೇಶಿ ವಿದ್ವಾಂಸರು ಪ್ರಯತ್ನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಹಾಲುಮತ ಸಂಸ್ಕೃತಿಯನ್ನು ಕುರಿತಂತೆ ವಿ.ಆರ್.ಹನುಮಂತಯ್ಯ, ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, ಶಂಬಾ ಜೋಶಿ, ಎಂ.ಎಂ.ಕಲಬುರ್ಗಿ, ಶ್ಯಾಮಸಿಂಗ್ ಶಶಿ, ಶಿವಾನಂದ ಗುಬ್ಬಣ್ಣನವರ, ಎಫ್.ಟಿ.ಹಳ್ಳಿಕೇರಿ ಮೊದಲಾದ ಸ್ವದೇಶಿ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಹಾಗೇಯೇ ವಿದೇಶಿ ವಿದ್ವಾಂಸರಾದ ಸೊಂತೈಮರ್, ಓಪರ್ಟ್, ಎಲಿಯಟ್ ಮುಂತಾದ ವಿದೇಶಿ ವಿದ್ವಾಂಸರು ಹಾಲುಮತ ಸಂಸ್ಕೃತಿಯನ್ನು ವಿವಿಧ ಆಯಾಮಗಳಲ್ಲಿ ಅಧ್ಯಯನ ಕೈಕೊಂಡಿದ್ದಾರೆ. ಈ ಎಲ್ಲ ವಿದ್ವಾಂಸರ ಹಾಲುಮತ ಸಂಸ್ಕೃತಿ ಬಗೆಗಿನ ಅಧ್ಯಯನದ ಕೊಡುಗೆಗಳನ್ನು ಇಲ್ಲಿ ಅವಲೋಕಿಸಲಾಗಿದೆ.

ಅಧ್ಯಾಯ ೭ : ಸಮಾರೋಪ

ಹಾಲುಮತ ಸಂಸ್ಕೃತಿ ಕುರಿತು ಈವರೆಗೆ ನಡೆದ ಅಧ್ಯಯನಗಳ ಸ್ವರೂಪ ಮತ್ತು ವಿಶ್ಲೇಷಣೆಯಿಂದ ಕಂಡುಕೊಂಡ ಫಲಿತಗಳನ್ನು ಇಲ್ಲಿ ಕ್ರೋಢೀಕರಿಸಲಾಗಿದೆ. ಜೊತೆಗೆ ಈ ಸಂಸ್ಕೃತಿಗೆ ಸಂಬಂಧಿಸಿದ ಲಿಖಿತ ಮತ್ತು ಮೌಖಿಕ ಆಕರಗಳನ್ನು ಸಂಗ್ರಹಿಸಿ ಕ್ರಮಬದ್ಧವಾಗಿ ಪ್ರಕಟಿಸಲು ಕೈಗೊಳ್ಳಬಹುದಾದ ವಿಧಾನಗಳನ್ನು ತಿಳಿಸಲಾಗಿದೆ. ಅನುಬಂಧದಲ್ಲಿ ಹಾಲುಮತ ಅಧ್ಯಯನ ಸೂಚಿ, ಸಹಾಯಕ ಗ್ರಂಥಸೂಚಿ ಹಾಗೂ ಛಾಯಾಚಿತ್ರದ ವಿವರಗಳನ್ನು ನೀಡಲಾಗಿದೆ.

ಕೊನೆ ಟಿಪ್ಪಣಿಗಳು

೧. Gustove oppert: The original Inhabitants of India, p: 123

೨. C.J. Brown: The Coins of India, p: 58

೩. ಶಂಬಾ ಕೃತಿ ಸಂಪುಟ ೨, ೧೯೯೯

೪. Tribes and Casts of Bombay Vol ii, p: 317

ಅಧ್ಯಾಯ ೨

ಪ್ರಾಚೀನ ಕವಿ ಸಾಹಿತ್ಯ

೧. ತಗರ ಪವಾಡ

೨. ಸಿದ್ಧಮಂಕ ಚರಿತೆ

೩. ಹಾಲುಮತೋತ್ತೇಜಕ ಪುರಾಣ (೧೯೧೨)

೪. ಹಾಲುಮತದ ಪುರಾಣ (೧೯೧೦)

೫. ಹಾಲುಮತದ ಪುರಾಣವು

೬. ಹಾಲ್ಮತದ ಶ್ರೀ ಸಿದ್ಧಬೀರೇಶ್ವರ ಅರ್ಥಾತ್ ಶ್ರೀ ಕರಿಸಿದ್ದೇಶ್ವರ ಪುರಾಣ

೭. ಮುದ್ದುಲಿಂಗೇಶ್ವರ ಚರಿತ್ರೆ

ಅಧ್ಯಾಯ ೨

ಪ್ರಾಚೀನ ಕವಿ ಸಾಹಿತ್ಯ

ಪ್ರಾಚೀನ ಕನ್ನಡಿಗರ ಇತಿಹಾಸ ಸಮುದಾಯ, ಸಾಹಿತ್ಯ, ಸಂಸ್ಕೃತಿಯ ಅಧ್ಯಯನಕ್ಕೆ ಆಕರ ಸಾಮಗ್ರಿಗಳು ಪ್ರಮುಖವಾಗಿ ಬೇಕಾಗುತ್ತವೆ. ಇಂಥ ಆಕರ ಸಾಮಗ್ರಿಗಳಲ್ಲಿ "ಪ್ರಾಚೀನ ಕವಿ ಸಾಹಿತ್ಯ" ಬಹುಮುಖ್ಯವಾಗಿದೆ. ಕನ್ನಡ ಕವಿಗಳು ಸಮಕಾಲಿನ ಸಂದರ್ಭದ ಸಂಗತಿಗಳನ್ನು ತಮ್ಮ ಕಾವ್ಯ ಪುರಾಣಗಳಲ್ಲಿ ದಾಖಲಿಸುವುದರ ಮೂಲಕ ನಮ್ಮ ಪ್ರಾಚೀನ ಪರಂಪರೆಯನ್ನು ತಿಳಿಸಿದ್ದಾರೆ. ಇದಕ್ಕೆ ಪಂಪ, ರನ್ನ, ಜನ್ನರಂತಹ ಮಾರ್ಗ ಕವಿಗಳು ಹರಿಹರ, ರಾಘವಾಂಕ, ಕುಮಾರವ್ಯಾಸರಂಥ ದೇಸೀ ಕವಿಗಳು ನಿದರ್ಶನರಾಗಿದ್ದಾರೆ.

ಮಹಾಭಾರತ, ರಾಮಾಯಣ, ಜೈನ-ವೀರಶೈವ-ವೈದಿಕ-ಧಾರ್ಮಿಕ ತತ್ವಗಳ ಹಿನ್ನೆಲೆಯಲ್ಲಿ ಕೃತಿಗಳನ್ನು ರಚಿಸಿದ್ದು ಈಗ ಇತಿಹಾಸ. ಆ ಮೂಲಕ ಇವರು ಕಳೆದು ಹೋದ ಸಮಾಜ ಮತ್ತು ಸಂಸ್ಕೃತಿಯನ್ನು ಪರಿಚಲನೆಗೊಳಿಸಿದ ಶ್ರೇಯಸ್ಸು ಇವರದಾಗಿದೆ. ಇದಕ್ಕೆ ಪೂರಕವಾಗಿ ಅನೇಕ ದೇಶಿ ಕವಿಗಳು ಸಮುದಾಯ ಆಚರಣೆ-ಸಂಪ್ರದಾಯ ಪರಂಪರೆಗಳನ್ನು ಪ್ರತಿಪಾದಿಸುವ ಕಾವ್ಯ ಪುರಾಣಗಳನ್ನು ಕಳೆದ ಐದು ಶತಮಾನಗಳಿಂದ ರಚನೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಕುರುಬ ಸಮುದಾಯದ ಸಂಸ್ಕೃತಿಯನ್ನು ಅನಾವರಣಗೊಳಿಸುವ ಕಾವ್ಯ ಪುರಾಣಗಳು ಈ ಅವಧಿಯಲ್ಲಿ ರಚನೆಗೊಂಡಿವೆ.

ಭಾರತದ ಬುಡಕಟ್ಟು ಸಮುದಾಯಗಳಲ್ಲಿ ಹಾಲುಮತ ಸಮುದಾಯವು ಪ್ರಮುಖವಾದುದು. ಪ್ರಾಚೀನ ಇತಿಹಾಸವನ್ನು ಹೊಂದಿದ ಈ ಸಮುದಾಯದ ಗುರು ಪರಂಪರೆ, ದೈವಗಳು, ಆಚರಣೆ-ನಂಬಿಕೆ-ಸಂಪ್ರದಾಯಗಳನ್ನು ಪ್ರತಿಪಾದಿಸುವ ಆಕರಗಳು ಲಭ್ಯವಿವೆ. ಅಂಥ ಆಕರಗಳನ್ನು ಶಿಷ್ಟ ಮತ್ತು ಜಾನಪದ ಆಕರಗಳೆಂದು ವರ್ಗೀಕರಿಸಬಹುದಾಗಿದೆ. ಶಿಷ್ಟ ಆಕರಗಳಲ್ಲಿ ಪ್ರಾಚೀನ ಕವಿಗಳು ರಚಿಸಿದ ಕಾವ್ಯ ಪುರಾಣಗಳು ಗಮನಾರ್ಹವಾಗಿವೆ.

ಹಾಲುಮತ ಸಮುದಾಯದ ಸಾಂಸ್ಕೃತಿಕ ಸಂಗತಿಗಳನ್ನು ತಿಳಿಸುವಲ್ಲಿ ಪ್ರಾಚೀನ ಕವಿ ಸಾಹಿತ್ಯದ ಪರಿಕರಗಳಾದ ಕಾವ್ಯ ಪುರಾಣಗಳು ನೆರವಾಗುತ್ತವೆ. ಅಂಥವುಗಳಲ್ಲಿ

೧. ತಗರ ಪವಾಡ

೨. ಸಿದ್ಧಮಂಕ ಚರಿತೆ

೩. ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ

೪. ಹಾಲುಮತ ಪುರಾಣ

೫. ಚನ್ನಬಸವ ಕವಿಯ ಹಾಲುಮತ ಪುರಾಣವು

೬. ಹಾಲ್ಮತದ ಸಿದ್ಧವೀರೇಶ್ವರ ಅರ್ಥಾತ ಶ್ರೀ ಕರಿಸಿದ್ದೇಶ್ವರ ಪುರಾಣ

೭. ಶಂಕರಾನಂದ ವಿರಚಿತ ಮುದ್ದುಲಿಂಗೇಶ್ವರ ಚರಿತೆ

ಈ ಎಲ್ಲ ಕಾವ್ಯ ಪುರಾಣಗಳು ಕುರುಬ ಸಮುದಾಯದ ಪ್ರಾಚೀನತೆ, ಆದಿಗೊಂಡ, ಆತನ ವಂಶಾವಳಿ, ವೃತ್ತಿ, ರೇವಣಸಿದ್ಧ, ಸಿದ್ಧರಾಮ, ಶಾಂತಮುತ್ತಯ್ಯ, ಮರುಳಸಿದ್ಧ ಮುಂತಾದವರ ಗುರು ಪರಂಪರೆ, ಕುರುಬರ ಪ್ರಮುಖ ಉದ್ಯೋಗವಾದ ಕಂಬಳಿ ತಯಾರಿಕೆ ಬಗೆಗೆ ಈ ಕೃತಿಗಳು ಬೆಳಕು ಚೆಲ್ಲುತ್ತವೆ. ಹೀಗೆ ಕುರುಬ ಸಮುದಾಯದ ಸಮಗ್ರ ಇತಿಹಾಸವನ್ನು ತಿಳಿದುಕೊಳ್ಳುವಲ್ಲಿ ಈ ಕಾವ್ಯ ಪುರಾಣಗಳು ಪ್ರಮುಖ ಆಕರಗಳಾತ್ತವೆ. ಆ ಎಲ್ಲ ಕಾವ್ಯ ಪುರಾಣಗಳ ಸ್ವರೂಪ, ವಸ್ತು ವೈವಿಧ್ಯ, ಕಥಾಸಾರ, ವಿಶೇಷತೆಯನ್ನು ಗುರುತಿಸುವ ಪ್ರಯತ್ನ ವನ್ನು ಇಲ್ಲಿ ಮಾಡಲಾಗಿದೆ.

೧. ತಗರ ಪವಾಡ

ಹಾಲುಮತ ಸಂಸ್ಕೃತಿ ಅಧ್ಯಯನದ ಆಕರಗಳಲ್ಲಿ ತಗರ ಪವಾಡ ಒಂದಾಗಿದೆ. ಕುರುಬ ಜನಾಂಗ ತನ್ನನ್ನು ಸಾಂಸ್ಕೃತಿಕವಾಗಿ ಗುರುತಿಸಲು ನಡೆಸುವ ಹೋರಾಟವನ್ನು ಈ ಕೃತಿಯಲ್ಲಿ ಕಾಣಬಹುದು. ಇದು 'ಸಿದ್ಧಮಂಕ ಚರಿತೆಯ' ನಂತರದ ಕೃತಿಯೆಂದು ಸಂಪಾದಕರು ಊಹಿಸಿದ್ದಾರೆ. ಒಂದುನೂರ ಅರವತ್ತೊಂದು ಪುಟಗಳ ಈ ಕೃತಿಯು ೨೦೦೪ರಲ್ಲಿ ಗದುಗಿನ ವಿದ್ಯಾನಿಧಿ ಪ್ರಕಾಶನದಿಂದ ಪ್ರಕಟಗೊಂಡಿದೆ. ಸುಮಾರು ಹದಿನೇಳನೆಯ ಶತಮಾನದಲ್ಲಿ ಈ ಕೃತಿ ರಚನೆಯಾಗಿರಬಹುದು. ಸಾಂಗತ್ಯ ಕೃತಿಯಾದ ಈ ಕಾವ್ಯ ಎಂಟು ಸಂಧಿಗಳನ್ನು ಹೊಂದಿದೆ. ಸಂಪಾದಕರು (ಡಾ. ಎಂ.ಎಂ.ಕಲಬುರ್ಗಿ, ಶ್ರೀ ಸಿ.ಕೆ.ಪರುಶುರಾಮಯ್ಯ, ಡಾ. ಎಫ್.ಟಿ. ಹಳ್ಳಿಕೇರಿ) ಪ್ರಸ್ತಾವನೆಯಲ್ಲಿ ಕೃತಿನಾಮ, ಕವಿನಾಮ, ಎಂಟು ಸಂಧಿಗಳ ಸಂಕ್ಷಿಪ್ತ ಕಥಾಸಾರ ಮೊದಲಾದ ವಿಷಯಗಳೊಂದಿಗೆ ಸಮಸ್ಯೆಗಳು, ಚಾರಿತ್ರಿಕ ಮಹತ್ವ, ಸಮಾಜೋ-ಧಾರ್ಮಿಕ ಪ್ರಾಮುಖ್ಯತೆ ಮತ್ತು ಪರಿಷ್ಕರಣದ ಶ್ರಮ ಹೀಗೆ ಅನೇಕ ವಿವರಗಳನ್ನು ಚರ್ಚಿಸಿದ್ದಾರೆ.

ಮೊದಲ ಸಂಧಿಯು ಎಪ್ಪತ್ತಾರು ಪದ್ಯಗಳಿಂದ ಕೂಡಿದೆ. ಮೊದಲ ಪದ್ಯ ವೃತ್ತ, ನಂತರ ಕಂದ, ಮುಂದುವರೆದ ಭಾಗ ಸಾಂಗತ್ಯವಾಗಿದೆ. ಸಿದ್ಧರಾಮ, ಚೆನ್ನಬಸವ, ಮಡಿವಾಳ ಮೊದಲಾದವರಿಗೆ ನಮಿಸುತ್ತೇನೆ

ಎಂದು ಕಾವ್ಯ ಪ್ರಾರಂಭವಾಗುತ್ತದೆ. ಪರಮೇಶ್ವರನನ್ನು ರೇವಣಸಿದ್ಧ ಎಂದು ಕರೆಯಲಾಗಿದೆ. ಅವನ ಒಡ್ಡೋಲಗದಲ್ಲಿ ಭೂಲೋಕದ ವಿಚಾರವಾಗಿ ತಿಳಿಸುತ್ತ, ಕೊಲ್ಲಾಪುರದ ಮಾಯೆಯ ಅನ್ಯಾಯವನ್ನು ನವಕೋಟಿ ಸಿದ್ಧರು ಅವಳ ರೂಪಕ್ಕೆ ಮನಸೋತು ಮನೆಯಲ್ಲಿ ದುಡಿಯುವುದನ್ನು ನಾರದನು ಶಿವನಿಗೆ ತಿಳಿಸಿ ಸಹಾಯವನ್ನು ಕೋರುತ್ತಾನೆ.

ಶಿವನು ರೇವಣಸಿದ್ಧ ಎಂಬ ಹೆಸರಿನಿಂದ ಕೊಲ್ಲಾಪುರದ ಮಾಯೆಯಲ್ಲಿಗೆ ಬಂದು ಅವಳು ಕೊಡುವ ಅನೇಕ ವಿಷದ ಕೊಡಗಳನ್ನು ಕುಡಿಯುತ್ತಾನೆ. ಅವನ ಅಸಾಮಾನ್ಯ ಶಕ್ತಿಗೆ ಬೆರಗಾದ ಮಾಯೆ ಸಿದ್ಧನಲ್ಲವೆಂದು ಅವನಿಗೆ ಸಾಷ್ಟಾಂಗ ನಮಸ್ಕಾರಗೈಯ್ಯುತ್ತಾಳೆ. ಅವಳ ತಪ್ಪಿಗಾಗಿ ರೇವಣಸಿದ್ಧ ಮೂಗು ಕೊಯ್ದು ಓಡಿಸುತ್ತಾನೆ. ನವಕೋಟಿ ಸಿದ್ಧರ ಅವಿವೇಕಕ್ಕೆ ಅನುಕಂಪ ಮತ್ತು ಸಿಟ್ಟು ಏಕಕಾಲಕ್ಕೆ ಉಂಟಾಗಿ ಅವರನ್ನು ಕುರಿಗಳಾಗುವಂತೆ ಶಪಿಸುತ್ತಾನೆ. ನಾನಾವರ್ಣದ ಕುರಿಗಳಾಗಿ ಶಿವನನ್ನು ಸುತ್ತುವರಿದ ನವಕೋಟಿ ಸಿದ್ಧರ ನಿರ್ವಹಣೆಯನ್ನು ಅಷ್ಟದೇವತೆಗಳಿಗೆ ವಹಿಸುತ್ತಾನೆ. ಅವರಿಗೆ ಕುರಿಕಾಯ್ದು ಸಾಕಾದ ನಂತರ ತಾನೇ ಶರಣರ ವೇಷದಲ್ಲಿ ಕೆಲದಿನ ಕುರಿಕಾಯುವನು. ತರುವಾಯ

ಹುತ್ತದ ಮೇಲೆ ಹಸ್ತವನೂರಿ ಗುರುರಾಯ
ಮುತ್ತುಗಮರ ಹುಟ್ಟಲೆಂದು
ಪದ್ಮಣ್ಣನಲ್ಲದೆ ಮತ್ತೋರ್ವ ಬಂದರೆ
ಭೂತವು ಹೆದರಿಸಲೆಂದು (೧-೧೨)

ತೊಗರಸಿಯ ಆದಿಗೊಂಡನ ಕೊಡಗಿ ಎಂಬ ಹೆಸರಿನ ಹೊಲದ ಮೂಲೆಯಲ್ಲಿಯ ಹುತ್ತದಲ್ಲಿ ಕುರಿಗಳನ್ನು ಹೊಗಿಸಿ ಮೇಲೆ ಮುತ್ತುಗದ ಮರವನ್ನು ನೆಟ್ಟು ಪದ್ಮಣ್ಣನ ಹೊರತಾಗಿ ಯಾರನ್ನು ಒಳಗೆ ಬಿಡದಂತೆ ವೀರೇಶನನ್ನು ಕಾವಲಿಟ್ಟು ಕೈಲಾಸಕ್ಕೆ ಹೋಗುತ್ತಾನೆ.

ಎರಡನೆಯ ಸಂಧಿಯು ಒಂದುನೂರಾ ಹನ್ನೆರಡು ಪದ್ಯಗಳಿಂದ ಕೂಡಿದೆ. ಇದು ಪದ್ಮಣ್ಣನ ವಿವರವನ್ನು ಒಳಗೊಂಡಿದೆ. ತೊಗರಸೆಯ ಆದಿಗೊಂಡನ ಏಳು ಮಕ್ಕಳಲ್ಲಿ ಕೊನೆಯವನಾದ ಪದ್ಮಣ್ಣನು ಉಂಡಾಡಿ ಯಾಗಿದ್ದನು. ತಾಯಿ ಮಲ್ಲಮ್ಮನ ಹಿತನುಡಿಯಿಂದ ಪ್ರಭಾವಿತನಾಗಿ ಹೊಲವನ್ನು ಹಸನು ಮಾಡುವಾಗ 'ಹುತ್ತವನ್ನು ಹೊಡೆಯಬೇಡ ಮುತ್ತುಗವನ್ನು ತರಿಯಬೇಡ ಮತ್ತಿಪ್ಪ ಮರಗಳನ್ನು ನೀ ತರಿ' ಎಂಬ ತಂದೆ ಆದಿಗೊಂಡನ ಮಾತನ್ನು ಪರೀಕ್ಷಿಸಲು ಹುತ್ತವನ್ನು ಒಡೆಯುತ್ತಾನೆ. ಆಗ ಹುತ್ತದಲ್ಲಿಂದ ಹೊರಬಂದ ಕುರಿಗಳು ಪದ್ಮಣ್ಣನನ್ನು ಹಿಂಬಾಲಿಸುತ್ತವೆ. ಆತಂಕಗೊಂಡ ಪದ್ಮಣ್ಣನನ್ನು ಶಿವ ಪ್ರತ್ಯಕ್ಷನಾಗಿ ಅವುಗಳ ನಿರ್ವಹಣಾ ಕಾರ್ಯಕ್ಕೆ ಸಹಾಯಕನಾಗಿ ವೀರಬೀರಯ್ಯನನ್ನು ಸೃಷ್ಟಿಸಿ ಕೈಲಾಸಕ್ಕೆ ತೆರಳುತ್ತಾನೆ.

ಪದ್ಮಣ್ಣ ಮತ್ತು ಬೀರಯ್ಯ ಕುರಿಕಾಯುತ್ತ ಕಾಡುಮೇಡು ಅಲೆಯುತ್ತಿರುವಾಗ ಬಕನೆಂಬ ರಾಕ್ಷಸನನ್ನು ಬೀರಯ್ಯ ಸಂಹರಿಸುತ್ತಾನೆ. ರಾಕ್ಷಸನ ಮಗಳು ಸಿರಿವಂತೆ ಅನಾಥೆಯಾದೆಯೆಂದು ದುಃಖಿಸುತ್ತಿರುವಾಗ ಬೀರಯ್ಯ ಪದ್ಮಣ್ಣನೊಂದಿಗೆ ಮದುವೆ ಮಾಡಿಸುತ್ತಾನೆ. ಶಿವ ಪ್ರತ್ಯಕ್ಷನಾಗಿ ಹಿರಿಯ ಹೆಂಡತಿ ಲಿಂಗಮ್ಮಗೆ ಹದಿಮೂರು ಮಂದಿ ಮಕ್ಕಳು 'ಹತ್ತಿಕಂಕಣ'ಕುರುಬರು ಕಿರಿಯ ಹೆಂಡತಿ ಸಿರಿವಂತೆಗೆ ಹದಿಮೂರು ಮಂದಿ 'ಉಣ್ಣೆಕಂಕಣ' ಕುರುಬರು ಎಂದು ಹೇಳಿ, ಕುರಿಯ ಜವಾಬ್ದಾರಿಯನ್ನು ಹೊತ್ತ ನೀನು 'ಕುರುಬಗೌಡ'ನಾಗು, ನಿನ್ನ ಕುಲದೇವರು ವೀರಬೀರಯ್ಯ, ನಿನ್ನ ಕುಲಗುರು ಶಾಂತಮುತ್ತಯ್ಯ (ಮಗನನ್ನೇ ಗುರುವಾಗಿ ಸ್ವೀಕಾರ) ಎಂದು ಆಶೀರ್ವದಿಸಿ ಮಾಯವಾಗುತ್ತಾನೆ.

ಪದ್ಮಣ್ಣ ತೊಗರಿಸಿಯನ್ನು ಬಿಟ್ಟು ಹೋದ ಮೇಲೆ ತಾಯಿ ಮಲ್ಲಮ್ಮ ಕನಸಿನಲ್ಲಿ ಮಗನನ್ನು ಕಂಡು ದುಃಖಿತಳಾಗಿದ್ದಳು. ಅಂದು ಬೆಳಿಗ್ಗೆ ಶರಣನೊಬ್ಬ ಬಂದು ಶುಭಕರ ಕನಸನ್ನು ಕಂಡಿರುವುದಾಗಿಯೂ ಮಗನು ಹಿಂದಿರುಗಿ ಬರುವುದಾಗಿ ತಿಳಿಸಿ ಮೊಮ್ಮಗ ಶಾಂತಯ್ಯನಿಗೆ ಪರವಿಗೊಂಡನ ಮೊಮ್ಮಗಳು ದೇವಮ್ಮ (ಸೂರಮ್ಮ)ನೊಂದಿಗೆ ಮದುವೆಯನ್ನು ಸಂಭ್ರಮದಿಂದ ಮಾಡುತ್ತಾರೆ.

ಶರಣರಾಡಿದ ಮಾತು ಸ್ಥಿರವೆಂದು ಶಾಂತಯ್ಯಗೆ
ಪರವಿಗೊಂಡನ ಮೊಮ್ಮಗಳ
ಹರಸಿ ಸೇಸೆಯನಿಟ್ಟು ಚಿರಂಜೀವಿಯಾಗೆಂದು
ಹರುಷದಿ ಮದುವೆ ಮಾಡಿದರು (೨-೮೬)

ಕುರಿಮಂದೆಯೊಂದಿಗೆ ತೊಗರಸೆಗೆ ಬಂದ ಪದ್ಮಣ್ಣ ಸೊಂಪಾಗಿ ಬೆಳೆದ ಹೊಲದಲ್ಲಿ ಕುರಿಗಳನ್ನು ಮೇಯಿಸುತ್ತಿರುವಾಗ ಊರ ಜನರು ಪ್ರತಿರೋಧ ಮಾಡುತ್ತಾರೆ. ಅವರನ್ನು ದೊಣ್ಣೆ ಬೀಸಿ ಓಡಿಸುತ್ತಾನೆ. ಸುದ್ದಿ ತಿಳಿದು ಆದಿಗೊಂಡ ಮಲ್ಲಮ್ಮ ಹೊಲಕ್ಕೆ ಬಂದು ಮಗನನ್ನು ಮನೆಗೆ ಕರೆದುಕೊಂಡು ಹೋಗುತ್ತಾರೆ. ಕುರಿಗಳನ್ನು ಮತ್ತು ಸಿರಿವಂತೆಯನ್ನು ಕುರುವುಗಲ್ಲಿನ ಹತ್ತಿರ ಬಿಟ್ಟು ಹೋಗುತ್ತಾನೆ.

ಮೂರನೆಯ ಸಂಧಿಯು ತೊಂಬತ್ತೊಂದು ಪದ್ಯಗಳಿಂದ ಕೂಡಿದೆ. ಇಲ್ಲಿಂದ ಶಾಂತಯ್ಯನ ಪ್ರಸ್ತಾಪ ಮುಖ್ಯವಾಗಿದೆ. ಬಹಳ ದಿನಗಳ ತರುವಾಯ ಮನೆಗೆ ಬಂದ ಪದ್ಮಣ್ಣನನ್ನು ತಂದೆ ತಾಯಿ ಮತ್ತು ಪತ್ನಿ (ಲಿಂಗಮ್ಮ) ಆದರದಿಂದ ಸತ್ಕರಿಸುತ್ತಾರೆ. ಮರುದಿನ ಹೊರಡಲು ಸಿದ್ಧನಾಗಲು ತಂದೆ ತಾಯಿ ದುಃಖಿತರಾಗುತ್ತಾರೆ. ಆಸ್ತಿ ಮತ್ತು ಹೆಂಡತಿ ಮಗನನ್ನು ತನ್ನೊಂದಿಗೆ ಒಯ್ಯಲು ತಿಳಿಸುತ್ತಾರೆ. ಹಣ, ಆಸ್ತಿಯನ್ನು ಅಣ್ಣಂದಿರಿಗೆ ಬಿಟ್ಟು, ಹೆಂಡತಿ ಮಕ್ಕಳೊಂದಿಗೆ ಹೊರಡುತ್ತಾನೆ. ಪದ್ಮಣ್ಣ ರಾಕ್ಷಸಿ ಸಿರಿವಂತೆಯೊಂದಿಗೆ ಸಹಭೋಜನ ಮಾಡುವುದನ್ನು ಕಂಡು ಬೇಸರಗೊಂಡ ಶಾಂತಮುತ್ತಯ್ಯ ಹೆಂಡತಿ ದೇವಮ್ಮನೊಂದಿಗೆ ಬೇರೆಯಾಗಿ ಜೀವಿಸತೊಡಗುತ್ತಾನೆ. ಇಲ್ಲಿಗೆ ಪದ್ಮಣ್ಣನ ಕತೆ ಮುಗಿದು ಶಾಂತಯ್ಯನೇ ಕತೆಯ ಕೇಂದ್ರ ವ್ಯಕ್ತಿಯಾಗುತ್ತಾನೆ.

ಮೇಲಾದ ಕುಲವನು ಕೀಳು ಮಾಳ್ಪನೆಯೆಂದು
ನಾಲ್ಕು ಕುರಿಯ ಹಿಂಡುಗಳ
ಲೀಲೆಯಿಂದಲಿ ಶಾಂತನ ವಶವಮಾಡೆ
ಹಾಲು ಹಣ್ಣಾಗುತಿರ್ದ (೩-೩೮)

ಅಚಲ ನಿಷ್ಠೆಯ ಶಿವಭಕ್ತರಾದ ಶಾಂತಯ್ಯ, ದೇವಮ್ಮ ಕುರಿಗಳೊಂದಿಗೆ ಚಕೋರ ಹೊಳೆಗೆ ಹೋಗುತ್ತಾರೆ. ಊಟದ ಸಮಯಕ್ಕೆ ಆಗಮಿಸಿದ ನವಕೋಟಿ ಜಂಗಮರಿಗೆ ಅಂಜದೆ ಉಣಬಡಿಸಿ ತೃಪ್ತಿಪಡಿಸುತ್ತಾರೆ. ಶಾಂತಮ್ಮನ ನೋಟದಿಂದ ಬಂಡಿಗಳು ತುಂಡುತುಂಡಾಗಲು ತೊಡಗುತ್ತವೆ. ಅನೇಕ ಪವಾಡಗಳನ್ನು ಮಾಡಿದ ಶಾಂತಯ್ಯನ ಭಕ್ತಿಗೆ ಮೆಚ್ಚಿ ಶಿವ 'ಯಾವುದಾದರು ವರವನ್ನು ಕೇಳಿಕೋ' ಎಂದಾಗ ತನಗೆ ಸಕಲ ಸೌಭಾಗ್ಯವಿದೆ ದೀಕ್ಷೆ-ಮೋಕ್ಷಗಳನ್ನು ನೀಡಬೇಕೆಂದು ಕೇಳಿಕೊಳ್ಳುತ್ತಾನೆ. ಪಂಡಿತಾರಾಧ್ಯ, ರೇವಣಾರಾಧ್ಯ, ಏಕೋರಾಮ, ಮರುಳಸಿದ್ಧ ಹೆಸರಿನ ನಾಲ್ಕು ಕಳಸ ಹೂಡಿ ದೀಕ್ಷೆಗೆ ಅಣಿಮಾಡುತ್ತಿರುವ ಹೊತ್ತಿನಲ್ಲಿ ಅಲ್ಲಿಯ ಶರಣರು ಪರಶಿವನ ಪುರದಲ್ಲಿಯ ಕರಿಮಲ್ಲಿಗೆಯ ಪುಷ್ಪವನ್ನು ಕೇಳಲು ಶಾಂತಯ್ಯ ಶಿರಚ್ಛೇದ ಮಾಡಿಕೊಳ್ಳಲು ತಯಾರಾದ ಸಂದರ್ಭದಲ್ಲಿ ಶಿವನು ಮೆಚ್ಚಿ ಕರಿಮಲ್ಲಿಗೆ ಪುಷ್ಪದ ಮಳೆ ಸುರಿಸುತ್ತಾನೆ. ಶಿವನು "ಇಂದಿನಿಂದ ನೀನು ನಿಜವಾದ ಶರಣನಾದೆ ಮುಂದೆ ನಿನ್ನ ತಂದೆಗೆ ರಾಕ್ಷಸಿಯಿಂದ ಹುಟ್ಟಿದ ಮಕ್ಕಳು ನಿನ್ನಲ್ಲಿಗೆ ಬರುವರು. ಆಗ ಅವರಿಗೆ ಕುಲವನ್ನಿತ್ತು ಗುರುವಾಗು ಅವರು ಉಣ್ಣೆಕಂಕಣದವರಾಗುವರು. ನಿನ್ನ ಸಂತತಿ "ಹತ್ತಿ ಕಂಕಣವಾಗುವದು" ಎಂದು ಹೇಳಿ ಮಾಯವಾಗುತ್ತಾನೆ.

ನಾಲ್ಕನೆಯ ಸಂಧಿಯು ಎಂಭತ್ತೈದು ಪದ್ಯಗಳನ್ನು ಒಳಗೊಂಡಿದೆ. ಈ ಸಂಧಿಯು ಶರಣರ ಮತ್ತು ಕಲ್ಯಾಣ ಪಟ್ಟಣದ ವಿಚಾರವನ್ನು ತಿಳಿಸುತ್ತದೆ. ಕಿನ್ನರಿ ಬ್ರಹ್ಮಯ್ಯನು ಅಕ್ಕಸಾಲಿಗನಾಗಿದ್ದನು. ಬಿಜ್ಜಳನ ರಾಣಿಯ ಆಭರಣದ ವಿಚಾರದಲ್ಲಿ ರಾಜನೊಂದಿಗೆ ಮನಸ್ತಾಪ ಉಂಟಾಗಿ ಆ ವೃತ್ತಿ ತ್ಯಜಿಸಿ ಕಿನ್ನರಿ ಬಾರಿಸಲು ಪ್ರಾರಂಭಿಸುತ್ತಾನೆ. ತ್ರಿಪುರಾಂತಕ ದೇವಾಲಯದಿಂದ ಪ್ರತಿದಿನ ಹನ್ನೊಂದು ಹಣ ಪಡೆದು ತನ್ನ ಜೀವನ ನಡೆಸುತ್ತಿದ್ದನು. ಕಲ್ಯಾಣದಲ್ಲಿ ಬೊಪ್ಪಯ್ಯನೆಂಬ ವಿಷಯಾಸಕ್ತನು ತನ್ನ ವೇಶ್ಯೆ ಚೆನ್ನಿ ಎಂಬವಳಿಗಾಗಿ ಒಂದು ತಗರನ್ನು ತರುತ್ತಿರುವ ಸಮಯದಲ್ಲಿ ಆಯಾಸವಾಗುತ್ತದೆ. ಕಾರಣ ದಾರಿಯಲ್ಲಿ ವಿಶ್ರಮಿಸುತ್ತಿರುವಾಗ ಇಳಿಸಿದ ತಗರು ತ್ರಿಪುರಾಂತಕ ದೇವಾಲಯ ಪ್ರವೇಶಿಸಿ ಗರ್ಭಗುಡಿಯ ಲಿಂಗವನ್ನು ಅಪ್ಪಿಕೊಳ್ಳುತ್ತದೆ.

ಬರುತ ಬೊಪ್ಪಯ್ಯನು ಬಯಲಲ್ಲಿ ಮೇಷನ
ಭರದಿಂದ ಇಳುಹಿ ಕುಳ್ಳಿರಲು
ಹರ ತ್ರಿಪುರಾಂತಕ ಲಿಂಗನ ಗುಡಿ ಹೊಕ್ಕು
ಗುರುವೆ ರಕ್ಷಿಸು ರಕ್ಷಿಸೆಂದು (೪-೨೦)

ಮೊರೆಹೊಕ್ಕವರನ್ನು ಕಾಯಬೇಕಲ್ಲದೆ ಕೊಲ್ಲುವುದು ಧರ್ಮವಲ್ಲವೆಂದು ಬ್ರಹ್ಮಯ್ಯ ಎರಡರಷ್ಟು ಬೆಲೆಕೊಟ್ಟುಕೊಂಡು ಸಾಕ್ಷಿಗಾಗಿ 'ಲಿಂಗಮುದ್ರೆ' ಒತ್ತುತ್ತಾನೆ. ವಿಷಯ ತಿಳಿದು ಚೆನ್ನಿ ಹಣ ಮುಟ್ಟಿದೆ ತನಗೆ ಅದೇ ತಗರು ಬೇಕೆಂದು ಹಿಂದಕ್ಕೆ ಕಳುಹಿಸುತ್ತಾಳೆ. ಬ್ರಹ್ಮಯ್ಯ ತಗರು ಕೊಡಲು ನಿರಾಕರಿಸಿದಾಗ ಬೊಪ್ಪಯ್ಯನೊಂದಿಗೆ ತನ್ನ ಸಹೋದರರನ್ನು ಕಳುಹಿಸತ್ತಾಳೆ.[೧] ಕಿನ್ನರಿ ಬ್ರಹ್ಮಯ್ಯ ಅವರೆಲ್ಲರನ್ನು ಕೊಂದು ಹಾಕಲು ದುಃಖಿತಳಾದ ಚೆನ್ನಿಯು ಬಿಜ್ಜಳನಲ್ಲಿಗೆ ದೂರು ಒಯ್ಯುತ್ತಾಳೆ. ದೊರೆ ಅವಳ ಸಹಾಯಕ್ಕೆಂದು ದೂತರನ್ನು ಕಳುಹಿಸುತ್ತಾನೆ. ಅವರನ್ನೂ ಸಹ ಬ್ರಹ್ಮಯ್ಯ ಗೆಲ್ಲುತ್ತಾನೆ. ಈ ವಿಷಯವನ್ನು ಬಿಜ್ಜಳ ಬಸವಣ್ಣನಿಗೆ ತಿಳಿಸುತ್ತಾನೆ.

ಐದನೆಯ ಸಂಧಿಯು ಅರವತ್ತು ಪದ್ಯಗಳನ್ನು ಒಳಗೊಂಡಿದೆ. ಬಸವಣ್ಣ "ಕಿನ್ನರಯ್ಯನೊಬ್ಬನ ಮೇಲೆ ಅಷ್ಟೊಂದು ಸೈನ್ಯವನ್ನು ಕಳಿಸಿದುದು ಸರಿಯಲ್ಲ" ಎಂದು ಶರಣ ಕಿನ್ನರಿ ಬ್ರಹ್ಮಯ್ಯನ ಪರವಾಗಿ ಮಾತನಾಡಲು ಬಿಜ್ಜಳ ನಿಜಸಂಗತಿ ಅರಿಯುವ ಸಲುವಾಗಿ ಕೊಂಡೆಯ ಮಂಚಣ್ಣನನ್ನು ತ್ರಿಪುರಾಂತಕ ದೇವಾಲಯಕ್ಕೆ ಕಳುಹಿಸುತ್ತಾನೆ. ಕೊಂಡೆಯ ಮಂಚಣ್ಣನಿಂದ ವಿಷಯ ತಿಳಿದು ಸ್ವತಃ ಪರೀಕ್ಷಿಸಲು ಬಿಜ್ಜಳ ಮತ್ತು ಬಸವ ದಂಡೇಶರು ತ್ರಿಪುರಾಂತಕ ದೇವಾಲಯಕ್ಕೆ ಬರುತ್ತಾರೆ. ಸಭೆಯ ಮುಂದೆ ಕಿನ್ನರಿ ಬ್ರಹ್ಮಯ್ಯ ಅನನ್ಯ ಭಕ್ತಿಯಿಂದ ಶಿವನನ್ನು ಪ್ರಾರ್ಥಿಸುತ್ತಾನೆ. ಆಗ ಶಿವಲಿಂಗವು "ನಿರುತವಹುದು ಮೇಷನ ಕೊಂಡದ್ದೆನುತಲಿ ಎಂಟೆಂಟು ಬಾರಿಗೆ ಉಂಟು" ಎಂದು ಹೇಳುತ್ತದೆ. ಬಿಜ್ಜಳನು ಕೈ ಮುಗಿದು ಶರಣರ ಮಹಿಮೆ ಅರಿಯಳವಲ್ಲ, ನಿಮ್ಮ ಶರಣರು ಮಹಿಮಾಶಾಲಿಗಳು ಎಂದು ಹೊಗಳುತ್ತಾ ಅರಮನೆಗೆ ಹಿಂದಿರುಗುತ್ತಾನೆ. ಕಿನ್ನರಯ್ಯ ತಗರಿಗೆ ಒಂಭತ್ತು ಹುರಿಯ ಚಿನ್ನದ ಮುಖವಾಡವನ್ನು ಹಾಕಿ ಮಾಣಿಕ್ಯದಿಂದ ಅಲಂಕೃತವಾದ ಗೆಜ್ಜೆಗಳನ್ನು ಹಾಕಿ ಶೃಂಗರಿಸಿ 'ಶಂಭು' ಎಂದು ಪ್ರೀತಿಯ ಹೆಸರಿನಿಂದ ಕರೆಯತೊಡಗುತ್ತಾನೆ.

ಒಂಬತ್ತು ಹುರಿಯ ಚಿನ್ನದ ಮುಖವಾಡವು
ಕೊಂಬು ಕೊಂಬಿಗೆ ಕೋಡಣಸು
ತುಂಬಿದ ಕೊರಳ ಪದಕದಿಂದ ಮೇಷನು
ಶಂಭುಯೆನಿಸಿಕೊಂಡಿಹನು (೫-೪೨)

ಕಿನ್ನರಯ್ಯನ ತಗರು ಮನೆ ಮನೆಗಳಲ್ಲಿ ಹೊಕ್ಕು ಉಪಟಳ ಕೊಡಲು ಪ್ರಾರಂಭಿಸುತ್ತದೆ. ಲಿಂಗಕ್ಕೆ ಕಿನ್ನರ ಮಾಡಿದ ಅಲಂಕಾರವನ್ನು ಕೆಡಿಸಲು ಪ್ರಾರಂಭಿಸುತ್ತದೆ. ಆಗ ತಗರಿನ ಜವಾಬ್ದಾರಿಯನ್ನು ಸರವೂರ ಶಾಂತಯ್ಯನಿಗೆ ವಹಿಸಿ ಕಲ್ಯಾಣಕ್ಕೆ ಹಿಂದಿರುಗುತ್ತಾನೆ.

ಆರನೆಯ ಸಂಧಿಯು ತೊಂಬತ್ತೊಂದು ಪದ್ಯಗಳನ್ನು ಒಳಗೊಂಡಿದೆ. ಕುರುಬರು ಕಲ್ಯಾಣದಲ್ಲಿ ಹಾಲು, ಮೊಸರು ಮಾರಿಕೊಂಡು ಜೀವನ ಸಾಗಿಸುತ್ತಿದ್ದರು. ಅವರನ್ನು ಪರೀಕ್ಷಿಸುವುದಕ್ಕಾಗಿ ಶಿವನು ಸಿದ್ಧಶೆಟ್ಟಿ

ಮತ್ತು ಮಲ್ಲಶೆಟ್ಟಿ ಎಂಬ ಎರಡು ರೂಪಗಳಲ್ಲಿ ಬಂದು ಕುರುಬರ ಪಕ್ಕದಲ್ಲೇ ವ್ಯಾಪಾರಕ್ಕೆ ತೊಡಗುತ್ತಾನೆ. ಅಲ್ಲಿ ವಾಸವಾದ ಗಂಗಶೆಟ್ಟಿ ಎಂಬ ವ್ಯಾಪಾರಿಯ ಮೂಲವನ್ನು ವಿಚಾರಿಸಲು 'ಕಟವಾಡ'ದಿಂದ ಬಂದಿರುವುದಾಗಿ ಹೇಳುತ್ತಾರೆ. ಕುರುಬರು ಹಾಲು ಮೊಸರಿನೊಂದಿಗೆ ಸತ್ತ ಕುರಿ ಮಾರಿದುದನ್ನು ಸಿದ್ಧಶೆಟ್ಟಿ ಮತ್ತು ಮಲ್ಲಶೆಟ್ಟಿಗಳು ಇತರ ಶರಣರ ಗಮನಕ್ಕೆ ತಂದು ಕಲ್ಯಾಣದಿಂದ ಹೊರಹಾಕಿಸುತ್ತಾರೆ. ಹೊರಹಾಕಲ್ಪಟ್ಟ ಕುರುಬರು ಕಲ್ಯಾಣದಿಂದ ಒಂದು ಯೋಜನ ದೂರದಲ್ಲಿ ಅಸ್ಪೃಶ್ಯರಾಗಿ ಬಾಳತೊಡಗುತ್ತಾರೆ. ಇದೇ ರೀತಿ ಹನ್ನೆರಡು ವರ್ಷ ಕಳೆಯುತ್ತಾರೆ. ಶಿವನು 'ಅರುವಣಿಗನ' ವೇಷದಲ್ಲಿ ಬಂದು ಸರವೂರಿನ ಶಾಂತಯ್ಯನನ್ನು ಕಂಡು ತಮ್ಮ ಕುಲವನ್ನು ಉದ್ಧರಿಸಿಕೊಳ್ಳಲು ಸೂಚಿಸುತ್ತಾನೆ. ಅದರಂತೆ ಶಾಂತಯ್ಯ ಸಮಸ್ಯೆಯನ್ನು ಹೊತ್ತು ತಂದ ಕುರುಬರನ್ನು ಸಮಾಧಾನದಿಂದ ಕೇಳುತ್ತಾನೆ. ಅದೇ ವೇಳೆ ಶಾಂತಯ್ಯ ಸಾಕಿದ ಬೊಮ್ಮಯ್ಯನ ತಗರು 'ಶಂಭು' ಸಾಯುತ್ತದೆ. ಇಂಥ ಸಂದರ್ಭದ ಸದುಪಯೋಗದ ಕಾಲ ಒದಗಿ ಬಂದಿರುವುದಾಗಿ ತಿಳಿಸಿ ಸತ್ತ ತಗರನ್ನು ಅಲಂಕರಿಸಿ ಮೆರವಣಿಗೆಯಲ್ಲಿ ಕಲ್ಯಾಣ ಪ್ರವೇಶಿಸುತ್ತಾನೆ. ಮಲ್ಲಿಶೆಟ್ಟಿ ಇತರ ಶರಣರು ಪ್ರತಿರೋಧ ವ್ಯಕ್ತಪಡಿಸಲು

> ಎಮ್ಮ ಒಡೆಯ ರೇವಣಸಿದ್ಧನರಿಕೆಯು
> ಚೆನ್ನ ತಗರ ಪವಾಡವನು
> ನಿರ್ಣಯಿಸದಿರೆ ನಿಮ್ಮ ಚರಣ ಸೇವಕನಲ್ಲ
> ಇನ್ನು ಭೇದಿಸುವನು ಶಿವ (೬-೨೦)

ಎಂದು ಉಗ್ಘಡಿಸುತ್ತಾನೆ. ಕಲ್ಯಾಣದ ತ್ರಿಪುರಾಂತಕ ದೇವಾಲಯದಲ್ಲಿ ಉತ್ಸವ ನೆರವೇರುವದು. ಅದನ್ನು ವೀಕ್ಷಿಸಲು ಬಸವಣ್ಣ, ಸಿದ್ಧರಾಮ, ಕಲಕೇತ ಬ್ರಹ್ಮಯ್ಯ, ಚನ್ನಯ್ಯ, ಒಕ್ಕಲಿಗ ಮುದ್ದಯ್ಯ, ನುಲಿಯ ಚೆಂದಯ್ಯ, ಅಂಬಿಗರ ಚೌಡಯ್ಯ ಮೊದಲಾದ ಶರಣ ಪ್ರಮುಖರು ಸೇರುತ್ತಾರೆ.

ಏಳನೆಯ ಸಂಧಿ ಅರವತ್ತೇಳು ಪದ್ಯಗಳನ್ನು ಒಳಗೊಂಡಿದೆ. ಕೊಂಡೆ ಮಂಚಣ್ಣ 'ತಗರ ಪವಾಡ' ಕುರಿತು ಅವಿಶ್ವಾಸ ವ್ಯಕ್ತಪಡಿಸಲು ಸೇರಿದ ಶರಣರೆಲ್ಲ ಚಿಂತೆಯಿಂದ ಒಬ್ಬರ ಮುಖ ಮತ್ತೊಬ್ಬರು ನೋಡಿಕೊಳ್ಳುತ್ತಾರೆ. ಬಸವಣ್ಣ "ಶರಣರ ಕರುಣೆ ಇದ್ದರೆ ಪವಾಡವನ್ನು ಗೆಲ್ಲಬಹುದು" ಎಂದು ಸಮಾಧಾನ ಪಡಿಸುತ್ತಾರೆ. ಶಾಂತಯ್ಯ ಭಸಿತವಿಟ್ಟು ಮೈದಡವಿ ತೀರ್ಥ ಪ್ರಸಾದ ಸಿಂಪಡಿಸಲು ಮಲಗಿದ್ದ ತಗರು ಎದ್ದು ನಿಲ್ಲುತ್ತದೆ. ಸೇರಿದ ಶರಣರೆಲ್ಲ ಶಾಂತಯ್ಯನ ಭಕ್ತಿ, ವಿಶ್ವಾಸ, ದೃಢತೆಗೆ ಬೆರಗಾಗುತ್ತಾರೆ. ಬಸವಣ್ಣ ಶಾಂತಯ್ಯನಿಗೆ "ಬೇಕಾದ ವರವನ್ನು ಬೇಡು" ಎನ್ನಲು "ನನಗೆ ಏನೂ ಬೇಡ ಊರಿನಿಂದ ಹೊರಹಾಕಲ್ಪಟ್ಟ ಕುರುಬರನ್ನು ಮತ್ತು ಕುರುಬಕುಲವನ್ನು ಉದ್ಧರಿಸು" ಎಂದು ಬೇಡಿಕೊಂಡನು. ಬಸವಣ್ಣನಿಗೆ ಶಾಂತಯ್ಯನ ವಿಶಾಲ ಮನಸ್ಸಿನ ಅರಿವಾಗಿ 'ಮೂರೇಣಿನ ಕಂಥೆ'ಯನ್ನು ಕೊಡುತ್ತಾನೆ.

ಕ್ಷೀರಕುಲಕ್ಕೆ ಎನ್ನ ಒಡೆಯನ ಮಾಡದೆ
ಕುರುಹು ಯಾವುದು ಎನ್ನ ಗುರುವೆ
ಮೂರು ಲೋಕಕೆ ಪ್ರಜ್ವಲಿಸುತಿಹ ಕುಲವೆಂದು
ಮೂರೇಣಿನ ಕಂಥೆಯನಿತ್ತ (೭-೪೫)

ಕಲಕೇತಯ್ಯ ತಗರಿನ ಕೊಂಬನ್ನು ಹಿಡಿದು ಕಂಬಕ್ಕೆ ತಿವಿದಾಗ ಬಂಗಾರದ ಮಳೆ ಸುರಿಯುತ್ತದೆ. ತಗರ ಪವಾಡಕ್ಕೆ ಸಾಕ್ಷಿಯಾಗಿ ಶಾಂತಯ್ಯ ತಗರಿನ ಕೊಂಬನ್ನು ಎರಡೂ ಕೈಯಿಂದ ಒತ್ತಿ ಹಿಡಿದಾಗ ಮೂಡಿದ ಬೆರಳಿನ ಗುರುತನ್ನು ಇಂದಿಗೂ ಗುರುತಿಸಬಹುದೆಂಬುದು ಜನಸಾಮಾನ್ಯರ ನಂಬಿಕೆಯಾಗಿದೆ.

ಎಂಟನೆಯ ಸಂಧಿಯು ಅರವತ್ತೆಂಟು ಪದ್ಯಗಳಿಂದ ಕೂಡಿದೆ. ಕಲ್ಯಾಣದಲ್ಲಿ ತಗರಪವಾಡ ಮೆರೆದು ಸರವೂರಿಗೆ ಬರಲು ಸಂಗಮ್ಮಾ (ಈಕೆ ದೇವಮ್ಮ ಆಗಿರಬಹುದೇ?) ಸಂಭ್ರಮದಿಂದ ಸ್ವಾಗತಿಸುತ್ತಾಳೆ. ಬಸವಣ್ಣ ಮತ್ತು ಉಳಿದ ಶರಣರು ಸಂತಸಗೊಂಡು "ಕುರುಬ ಕುಲಕ್ಕೆ ಒಡೆಯನಾಗು" ಎಂದು ಹರಸಿ ಕಲ್ಯಾಣಕ್ಕೆ ಮರಳುತ್ತಾರೆ.

ನಿಮ್ಮ ಕುಲಕೆ ನೀನು ಗುರುವಾಗಿ ಸ್ಥಿರಕಾಲ
ಸುಮ್ಮಾನದಲಿ ಬಾಳುಯೆಂದು
ನಿರ್ಮಲ ಹೃದಯ ಬಸವರಾಜ ಹರಕೆಯ
ಕೊಟ್ಟು ಕಲ್ಯಾಣಕ್ಕೆ ನಡೆಯ (೮-೬೦)

ಇದು ತಗರ ಪವಾಡದ ಸ್ಥೂಲ ಕಥಾಸಾರ.

ಶೈವ ಸಂಪ್ರದಾಯಕ್ಕೆ ಒಳಪಡುವ ಹಾಲುಮತವು ಪ್ರಾದೇಶಿಕ ಭಿನ್ನತೆ ಹೊಂದಿದ್ದು ಅನೇಕ ದೇವರನ್ನು ಪೂಜಿಸುತ್ತಿದ್ದರೂ ರೇವಣಸಿದ್ಧರನ್ನು ಮೂಲಗುರುವಾಗಿ ಪರಂಪರಾನುಗತವಾಗಿ ಒಪ್ಪಿಕೊಂಡಿದೆ.

'ತಗರ ಪವಾಡ' ಮೆರೆದ ಶಾಂತಮುತ್ತಯ್ಯ ಒಡೆಯ ಸಂಪ್ರದಾಯಕ್ಕೆ ಆದಿ ಪುರುಷನಾಗಿ ಕುರುಬರ ಮೊದಲ ಗುರುವಾಗುತ್ತಾನೆ. 'ನಾಥಶೈವದ ಮುಂದುವರಿಕೆಯ ಒಂದು ಹಂತವೇ ಕುರುಬರ 'ಶಾಂತಸಂಪ್ರದಾಯ' ವಾಗಿದೆ. ಕುರುಬರಲ್ಲಿ 'ಶಾಂತಸಂಪ್ರದಾಯ' ಮತ್ತು 'ಮಂಕ ಸಂಪ್ರದಾಯ' ಎಂಬ ಎರಡು ಕವಲುಗಳಿವೆ. ಸಿದ್ಧಮಂಕ ಸಂಪ್ರದಾಯದ ಸಾದಕುರುಬರ ಸಂಖ್ಯೆ ಕಡಿಮೆಯಾಗಿದೆ. ಕಾರಣ ಅವರು ಲಿಂಗಾಯತರಲ್ಲಿ ಲೀನವಾಗಿದ್ದಾರೆ. ಶಾಂತಸಂಪ್ರದಾಯದವರ ಸಂಖ್ಯೆ ಹೆಚ್ಚಾಗಿದೆ ಎಂದು ಕಲಬುರ್ಗಿಯವರು ಅಭಿಪ್ರಾಯ ಪಟ್ಟಿದ್ದಾರೆ.[೨] 'ಮೂರೇಣಿನ ಕಂತೆ'ಯನ್ನು ಕುರುಬರು ಇಂದಿಗೂ ಶುಭ ಸಂದರ್ಭದಲ್ಲಿ ಬಳಸುತ್ತಾರೆ. 'ಹಾಲೋಕುಳಿ', 'ಕರಿಯಕಂತೆ' ಮುಂತಾದವು ಕುರುಬರ ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳಲ್ಲಿ ವೈಶಿಷ್ಟ್ಯ ಪಡೆದಿವೆ. ಬಸವಣ್ಣನ ನೈತಿಕ ಬೆಂಬಲದಲ್ಲಿ ನಡೆದ 'ತಗರ ಪವಾಡ'ವು ಅಂದಿನ ಸಾಮರಸ್ಯ ಜೀವನವನ್ನು ಪ್ರತಿನಿಧಿಸುತ್ತದೆ.

೨. ಸಿದ್ಧಮಂಕ ಚರಿತೆ

ಹಾಲುಮತ ಶಿಷ್ಟ ಸಾಹಿತ್ಯದ ಅಧ್ಯಯನದಲ್ಲಿ ಸಿದ್ಧಮಂಕ ಚರಿತೆಯು ಮೊದಲನೆಯದಾಗುತ್ತದೆ. ಈ ಕೃತಿಯನ್ನು ಎಂ.ಎಂ.ಕಲಬುರ್ಗಿ ಮತ್ತು ವೈ.ಸಿ.ಭಾನುಮತಿ ಅವರು ೨೦೦೪ರಲ್ಲಿ ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಿದ್ದಾರೆ. ೧೫೨ ಪುಟಗಳ ಸಾಂಗತ್ಯ ಕೃತಿಯು ಗದುಗಿನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಲಿಂಗಾಯತ ಅಧ್ಯಯನ ಸಂಸ್ಥೆಯಿಂದ ಪ್ರಕಾಶನಗೊಂಡಿದೆ. ಹಾಲುಮತ ಸಂಸ್ಕೃತಿಯನ್ನು ಪರಿಚಯಿಸುವ ಈ ಕೃತಿ ೧೭ನೆಯ ಶತಮಾನದಲ್ಲಿ ರಚಿತವಾಗಿರಬಹುದು. ಕೃತಿಯು ನಾಲ್ಕು ಸಂಧಿಗಳನ್ನು ಹೊಂದಿದೆ. ಸಂಪಾದಕರು ಪ್ರಸ್ತಾವನೆಯಲ್ಲಿ ಸಂಕ್ಷಿಪ್ತ ಕಥಾಸಾರ, ಚಾರಿತ್ರಿಕ ಹಿನ್ನೆಲೆ, ಸಮಾಜೋಧಾರ್ಮಿಕ ಕಾರಣ ಮೊದಲಾದವನ್ನು ವಿವರಿಸಿದ್ದಾರೆ.

ಮೊದಲ ಸಂಧಿಯಲ್ಲಿ ರೇವಣಸಿದ್ಧ ಸಿದ್ಧರಾಮ ದೇವರ ಪ್ರತಿರೂಪವಾಗಿದ್ದಾರೆ. ಈ ಕೃತಿಯನ್ನು ಕೇಳಿದರೆ ಅನ್ನದಾನ, ಕನ್ಯಾದಾನ ಲಭಿಸುತ್ತದೆ ಎಂದು ಕವಿ ಕಾವ್ಯವನ್ನು ಪ್ರಾರಂಭಿಸುತ್ತಾನೆ.

ಭೃಂಗಿಯಿಂದ ಶಾಪಗ್ರಸ್ತರಾದ ಗಂಧರ್ವರ ಹೊಟ್ಟೆಯಲ್ಲಿ "ಉಣ್ಣದ ಉಸಿರಿಕ್ಕದ ಜಿತೇಂದ್ರಿಯ" ಮಗನಾಗಿ ಸಿದ್ಧರಾಮ ಹುಟ್ಟುವನು. ಭೂಮಿಯನ್ನು ಪಾವನ ಮಾಡುವುದಕ್ಕಾಗಿ ಭೂಲೋಕದಲ್ಲಿ ವೃದ್ಧರಾದ ಸುಗ್ಗವ್ವೆ ಮುದ್ದಯ್ಯರ ಮಗನಾಗಿ ಜನಿಸುತ್ತಾನೆ. ಲೋಕಕಲ್ಯಾಣಕ್ಕಾಗಿ ಜನ್ಮ ತಳೆದ ಸಿದ್ಧರಾಮನನ್ನು ಬಾಲ್ಯದಲ್ಲಿ ಧೂಳಿಮಾಕಾಳ ಎಂಬ ಹೆಸರಿನಿಂದ ಕರೆಯುತ್ತಾರೆ. ಎಲ್ಲ ಬಾಲಕರಂತೆ ಆಟವಾಡದೆ ಹೂ ಪತ್ರೆ ಏರಿಸುವ, ಲಿಂಗ ಪೂಜಿಸುವ ಕಾಯಕದಲ್ಲಿ ಮಗ್ನನಾಗಿರುತ್ತಿದ್ದನು.

ಸಿದ್ಧರಾಮ ಹೊಲದಲ್ಲಿ ಕರುಗಳನ್ನು ಕಾಯುವ ಕಾಲದಲ್ಲಿ ಶಿವ ತನ್ನ ಸರ್ವ ಆಭರಣಗಳಿಂದ ಅಲಂಕೃತನಾಗಿ ಕಾಣಿಸಿಕೊಂಡು ತನಗೆ ಹಸಿವೆಯಾಗಿರುವುದಾಗಿ ಆಹಾರ ಬೇಕೆಂದು ಶಿವ ಕೇಳುತ್ತಾನೆ. ಸಿದ್ಧರಾಮ ಓಡಿಹೋಗಿ ತರುವಷ್ಟರಲ್ಲಿ ಮಾಯವಾಗಿಬಿಟ್ಟಿದ್ದನು. ಶಿವನನ್ನು ಕಾಣದೆ ಹುಡುಕಾಡಿ ಬಳಲುತ್ತಿರಲು ಜಂಗಮವೇಷದ ಶಿವ ಶ್ರೀಶೈಲದತ್ತ ಹೋದುದಾಗಿ ತಿಳಿಸುತ್ತಾನೆ. ಶ್ರೀಶೈಲದಲ್ಲಿ ಹುಡುಕಿ ಸಿಗದಿದ್ದಾಗ ನಿರಾಶೆಯಿಂದ ಪ್ರಾಣತ್ಯಾಗ ಮಾಡಲು ನಿರ್ಧರಿಸಿ ಕಮರಿಯಲ್ಲಿ ಹಾರಿದಾಗ ಶಿವ ಪ್ರತ್ಯಕ್ಷನಾಗಿ ರಕ್ಷಿಸುವನು. ಶಿವನ ಆಜ್ಞೆಯಂತೆ ಭೈರವನು ನಲ್ವತ್ತೆಂಟು ಯೋಜನ ವಿಸ್ತಾರದ ಶ್ರೀಶೈಲವನ್ನು ತೋರಿಸುತ್ತಾನೆ. ಬರಡು ಕಪಿಲೆಯಿಂದ ಕರು ಹುಟ್ಟಿದ ದಿನ ಶಿವ ಬರುವ ಆಶ್ವಾಸನೆ ದೊರೆತ ನಂತರ ಸೊಲ್ಲಾಪುರಕ್ಕೆ ಬಂದು ಅಲ್ಲಿ ಶಿವಾಲಯ ನಿರ್ಮಿಸಿದನು.

ಶಿವನ ಶಾಪಕ್ಕೆ ಗುರಿಯಾದ ರೋಮಕೋಟಿ ಋಷಿಯು 'ಮಂಕು ಮರಳ' ಎಂಬ ಹೆಸರಿನಿಂದ ಭೂಲೋಕದಲ್ಲಿ ಹುಟ್ಟಿ ಸಿದ್ಧರಾಮನ ಶಿಷ್ಯನಾಗಲು ಮತ್ತು ದರ್ಶನಕ್ಕಾಗಿ ಸರೂರು ಗ್ರಾಮದ ಕೋಡುಗಲ್ಲಿನ ಮೇಲೆ ತಲೆ ಕೆಳಗೆ ಕಾಲು ಮೇಲೆ ಮಾಡಿ ಉಗ್ರ ತಪಸ್ಸಿಗೆ ತೊಡಗುತ್ತಾನೆ. ಅವನ ತಪಸ್ಸನ್ನು ನೋಡಲು ಸ್ವತಃ ಶಿವನು ನಂದಿಯನ್ನು ಏರಿ ಬರುತ್ತಾನೆ.

ಭೃಂಗಿಯನ್ನು ಕುರಿತು ಕಿನ್ನರರು ತಮಾಷೆ ಮಾಡಿದಾಗ ಭೃಂಗಿಯ ಶಾಪದಿಂದ ಕುರಿಗಳಾಗಿ ಭೂಲೋಕದಲ್ಲಿ ಹುಟ್ಟುತ್ತಾರೆ. ಆ ಕುರಿಗಳನ್ನು ಶಿವ ಗವಿಯಲ್ಲಿ ಹೊಗಿಸಿ ಕೈಲಾಸಕ್ಕೆ ಹೊರಡುತ್ತಾನೆ. ಶಿವಭಕ್ತ ಹೆಗ್ಗಗೌಡ ತನ್ನ ಹೊಲದಲ್ಲಿಯ ಮುತ್ತುಗದ ಮರವನ್ನು ಕಡಿದು ನೆಲಸಮ ಮಾಡಲು ಗವಿಯಿಂದ ಅಸಂಖ್ಯಾತ ಕುರಿಗಳು ಬರಲು ಪ್ರಾರಂಭಿಸುತ್ತವೆ. ವೃದ್ಧವೇಷದಿಂದ ಶಿವನು ಬಂದು ಕಪಿಲೆಯೊಂದನ್ನು ಕೇಳುತ್ತಾನೆ. ಆಗ ಹೆಗ್ಗಗೌಡನು ಇದು ತನ್ನ ಸಂಪತ್ತಲ್ಲವೆಂದು ತಿಳಿಸಲು ಶಿವನು ಅದನೆಲ್ಲ ಹೆಗ್ಗಗೌಡನಿಗೆ ಕೊಡುವುದಾಗಿ ತಿಳಿಸುತ್ತಾನೆ. ಕುರಿಯ ರಕ್ಷಣೆಗಾಗಿ ಮತ್ತು ಸಹಾಯಕ್ಕಾಗಿ ಶಿವನು ತಳವಾರನನ್ನು ಮತ್ತು ಊಳಿಗದವಳಾದ ರಾಕ್ಷಸಿಯನ್ನು ಕಳುಹಿಸುತ್ತಾನೆ. ಹೆಗ್ಗಗೌಡನು ರಾಕ್ಷಸಿಯನ್ನು ಮೋಹಿಸಿ ಮದುವೆ ಮಾಡಿಕೊಳ್ಳುತ್ತಾನೆ. ಈ ಮೊದಲೇ ಸ್ವಕುಲದ ಸಿದ್ದಮ್ಮಳನ್ನು ಮದುವೆಯಾಗಿದ್ದನು. ಅವಳ ನೆನಪಾಗಿ ಕುರಿಬೆಟ್ಟದೂರಿಗೆ ಬರುತ್ತಾನೆ. ತಂದೆ ಚಂದಗೊಂಡನು ಪ್ರತಿರೋಧ ಮಾಡಲು ಬಳಗದ ಜನವೆಲ್ಲ ಬೆಂಬಲಿಸುತ್ತಾರೆ. ತಂದೆಯಿಂದ ಆಸ್ತಿಯನ್ನು ಕುಲವಧುವನ್ನು ಪಡೆದು ಸೊಲ್ಲಾಪುರಕ್ಕೆ ಬಂದು ನೆಲಸುತ್ತಾನೆ. ಈ ಎಲ್ಲ ವಿವರಗಳನ್ನು ಎರಡನೆಯ ಸಂಧಿಯು ಹೊಂದಿದೆ.

ಮೂರನೆಯ ಸಂಧಿಯು ಮಂಕ ತಂದೆಯ ಉಗ್ರ ತಪಸ್ಸಿನ ವಿವರ ಹೊಂದಿದೆ. ಬಿಜ್ಜಳನು ಕಲ್ಯಾಣ ಪಟ್ಟಣದಿಂದ ಹೊರಹಾಕಿ ಏಳುಗೆರೆ ಹಾಕಿ ದಾಟಬಾರದೆಂದು ಆಜ್ಞೆಯಿತ್ತನು.

ಕುಲದೊಳು ಕಿಣಿದಾದರೆ ಆಚಾರದ
ನೆಲಮಾರ್ಗವು ಕಿಣಿದಲ್ಲ
ಕುಲದೊಳಧಿಕ ಶ್ವಪಚಯ್ಯ
ನೊಲಿದು ದೀಕ್ಷೆಯ ಕೊಟ್ಟುದಜಿಯ

ಎಂದು ಹೆಗ್ಗಗೌಡನು 'ಕುಲದಲ್ಲಿ ಕಿರಿಯರಾದರೂ ನಮ್ಮ ನಡತೆ' ಕಿರಿದಲ್ಲವೆಂದೂ ಕುಲದಲ್ಲಿ ಭಕ್ತಕುಲ, ಭವಿಕುಲ, ಎಂಬ ಎರಡು ಕುಲ ಮಾತ್ರ ಇರುವುದಾಗಿ ನಾನಾ ರೀತಿಯಿಂದ ಭಿನ್ನವಿಸಿಕೊಂಡನು.

ಪ್ರಸಿದ್ಧಿಗಾಗಿ ಕೆರೆ, ದೇವಾಲಯ ನಿರ್ಮಾಣವನ್ನು ಸಿದ್ಧರಾಮ ಮಾಡಲು ಅದನ್ನು ಅಲ್ಲಮನು ಖಂಡಿಸುತ್ತಾನೆ. ಸಿಟ್ಟಿಗೆದ್ದ ಸಿದ್ಧರಾಮ ಗುಡ್ಡರು ಹಿಡಿಯಲು ಹೋದರೆ ಸಿಗುವುದಿಲ್ಲ. ಕಲ್ಲಿನಿಂದ ಹೊಡೆದರೆ ಮಾಯವಾಗುತ್ತಾನೆ. ಸಿದ್ಧರಾಮ ಸಿಟ್ಟಿನಿಂದ ಹಣೆಗಣ್ಣು ತೆಗೆಯಲು ಅಲ್ಲಮನನ್ನು ಬಿಟ್ಟು ಇನ್ನುಳಿದ ಪ್ರದೇಶವು ಸುಟ್ಟು ಬೂದಿಯಾಗುತ್ತದೆ. ಅಂತ್ಯದಲ್ಲಿ ಅಲ್ಲಮನ ದೈವಿಕ ಶಕ್ತಿಯಿಂದ ಸಿದ್ಧರಾಮನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ರೇವಣಸಿದ್ಧರ ಸ್ಪರ್ಶದಿಂದ ಎಚ್ಚೆತ್ತ ಮಂಕಯ್ಯನು 'ರಾಜಧಾನಿಯ ಹೊರಗೆ ಏಳು ಬೇಲಿಯಾಚೆ ಕುರುಬಗೌಡ ಬದುಕುತ್ತಿದ್ದು, ಅವರನ್ನು ಗ್ರಾಮದೊಳಗೆ ಸೇರುವಂತೆ ಮಾಡು' ಎಂದು ಭಿನ್ನವಿಸಿಕೊಳ್ಳುತ್ತಾನೆ.

ನಾಲ್ಕನೇ ಸಂಧಿಯಲ್ಲಿ ಶಿವಶರಣರ ಮಹಿಮೆ, ಮಂಕಯ್ಯನ ಉಗ್ರತಪಸ್ಸು ಮೊದಲಾದ ವಿವರಗಳಿವೆ. ಮಂಗಳವಾಡದ ಬಿಜ್ಜಳ ಕುರುಬರನ್ನು ಹೊರಹಾಕಿದ ತಪ್ಪನ್ನು ಒಪ್ಪಿಕೊಂಡನು. ಮಂಕಯ್ಯ ತನ್ನನ್ನು ದಂಡಿಸಿ ಅನ್ಯರ ಹಿತ ಬಯಸುವ ತ್ಯಾಗವನ್ನು ಮೆಚ್ಚಿಕೊಂಡನು. ತಮ್ಮ ತಪ್ಪಿನಿಂದ ಮಂಕನ ಮನಸ್ಸು ನೋಯಿಸಿತು ಎಂದು 'ಗುರುಮಂಕ ತಂದೆಗೆ ಶರಣು' ಎಂದು ಹೆಗ್ಗಗೌಡನ ಮಕ್ಕಳು ಖಡ್ಗದಿಂದ ತಮ್ಮ ತಲೆಯನ್ನು ಕತ್ತರಿಸಿಕೊಂಡಂತೆ ಅವು ಪುನಃ ಜಿಗಿಯುತ್ತಿದ್ದವು. ಕುರುಬರಿಗೆ ಮಂಕ ತಂದೆಯ ಆದೇಶದಂತೆ ನಡೆದುಕೊಳ್ಳುವಂತೆ ಸಿದ್ಧರಾಮ ತಿಳಿಸಿ ಅವರ ಹಣೆಗೆ ವಿಭೂತಿಯನ್ನಿತ್ತು ಹರಸಿದನು. ಇದು ಈ ಕೃತಿಯ ಕಥಾಸಾರ. ಈ ಕೃತಿಯ ಸುಳಿವನ್ನು ನಲವತ್ತು ವರ್ಷಗಳ ಹಿಂದೆ ವಿದ್ವಾಂಸರಾದ ಡಿ.ಎಲ್ ನರಸಿಂಹಾಚಾರ್ ನೀಡಿದ್ದರು. ದೀರ್ಘಕಾಲದ ನಂತರ ಕಲಬುರ್ಗಿ ಮತ್ತು ಭಾನುಮತಿ ಅವರು ಕೃತಿಯನ್ನು ಸಂಪಾದಿಸಿ ಹೊಸ ವಿಚಾರಗಳನ್ನು ಬೆಳಕಿಗೆ ತಂದಿದ್ದಾರೆ. ಕುರುಬ ಜನಾಂಗವು ಮತಾಂತರ ಪ್ರಕ್ರಿಯೆಗೆ ಒಳಗಾಗುವ ಒಂದು ಕುಲವು ತನ್ನ ನೆಲೆಯನ್ನು ಭದ್ರಪಡಿಸಿಕೊಂಡು ಸಮಾಜದಲ್ಲಿ ಗುರುತಿಸುವ ಹೋರಾಟ ಹನ್ನೆರಡನೆಯ ಶತಮಾನದ ಶರಣರ ಒಳಜಗಳ, ಸಮಸ್ಯೆ, ಬಸವಣ್ಣನ ಸಮ್ಮುಖದಲ್ಲಿ ನ್ಯಾಯ ನಿರ್ಣಯ ಮೊದಲಾದ ಘಟನೆಗಳು ಗಮನ ಸೆಳೆಯುತ್ತವೆ. ಒಟ್ಟಾರೆ ಕುಲಭೇದ ನಿರಾಕರಣೆ ಇಲ್ಲಿ ಕೇಂದ್ರಪ್ರಜ್ಞೆಯಾಗಿದೆ. ಸಂಪ್ರದಾಯಗಳಿಗೆ ಒಳಪಟ್ಟ ಜನಸಮ್ಮುಖ ನಿರ್ಧಾರ, ನಿರ್ಣಯಗಳು ಅಂದಿನ ಸಾಮಾಜಿಕ ಪರಿಸ್ಥಿತಿಯನ್ನು ಪರಿಚಯಿಸುತ್ತವೆ.

ತೌಲನಿಕ ವಿವೇಚನೆ

ಎರಡೂ ಕೃತಿಗಳು ಬಹಳಷ್ಟು ವಿಷಯಗಳಲ್ಲಿ ಸಾಮ್ಯತೆ ಪಡೆದಿವೆ. ಹಾಲಕಂಬಿಯ ಮೇಲೆ ಸತ್ತ ಕುರಿಯ ಮಾಂಸವನ್ನು ಮಾರಿದ ತಪ್ಪಿನಿಂದಾಗಿ 'ರಟ್ಟಮತ'ದವರೆಂದು ಕಲ್ಯಾಣದಿಂದ ಏಳುಗೆರೆಯ ಆಚೆ ಅತಂತ್ರರಾಗಿ ಅಸ್ಪೃಶ್ಯರಂತೆ ಕನಿಷ್ಠರಾಗಿ ಹನ್ನೆರಡು ವರ್ಷ ಬದುಕು ನಡೆಸಬೇಕಾಯಿತು. ತಮ್ಮ ಪ್ರಮಾದದಿಂದ ಜಾಗೃತವಾದ ಹಾಲುಮತದವರ ಪರವಾಗಿ ಶಾಂತಮುತ್ತಯ್ಯ ಮತ್ತು ಮಂಕಸಿದ್ಧ ಹೋರಾಟ ನಡೆಸಿ ಜಯಶೀಲರಾಗುತ್ತಾರೆ. ಶಾಂತಮುತ್ತಯ್ಯ 'ತಗರ ಪವಾಡ'ದಲ್ಲಿ ಪ್ರಾಮುಖ್ಯತೆ ಪಡೆದರೆ, ಸಿದ್ಧರಾಮ 'ಸಿದ್ಧಮಂಕ ಚರಿತೆ'ಯಲ್ಲಿ ಪ್ರಮುಖ. ನಂತರದ ದಿನಗಳಲ್ಲಿ ಶಾಂತಮುತ್ತಯ್ಯನ ಸಂಪ್ರದಾಯದ ಶಾಂತೊಡೆಯರಿಗೂ ಸಿದ್ಧಮಂಕ ಸಂಪ್ರದಾಯದ ಮಂಕೊಡೆಯರಿಗೂ ಘರ್ಷಣೆ ಏರ್ಪಟ್ಟಿರಬಹುದು. ಇದಕ್ಕೆ ಪೂರಕವಾಗಿ ತುರುವೆಕೆರೆ ತಾಮ್ರಶಾಸನ ಮಹತ್ವದ ಮಾಹಿತಿ ಒದಗಿಸುತ್ತದೆ. ವಿಷಯಕ್ಕೆ ಸಾಕ್ಷ್ಯಾಧಾರವಾಗಿ ಚಿಕ್ಕನಾಯಕನಹಳ್ಳಿಯಲ್ಲಿ ಕುರುಬರ ಮೂರು ಮಠಗಳಿವೆ. ಎರಡು ಮಠಗಳು ಶಾಂತೊಡೆಯರಿಗೆ ಸೇರಿದ್ದರೆ ಇನ್ನೊಂದು ಮಂಕೊಡೆಯರ ಅಧೀನದಲ್ಲಿದೆ. ಅಲ್ಲದೆ ಸರೂರಿನ ರೇವಣಸಿದ್ಧ ಹೆಸರಿನ ಮಠವು ಮೂಲತಃ ಸಿದ್ಧರಾಮ ಪರಂಪರೆಯ ಮಲ್ಲಿಕಾರ್ಜುನ ದೇವಾಲಯ ಎಂದು ಪಂಡಿತರು ಊಹಿಸಿದ್ದಾರೆ. ಸರೂರಿನ ಸುಮಾರು ಐವತ್ತು ಮನೆಗಳಲ್ಲಿ ನಲವತ್ತು ಒಡೆಯರ ಮನೆಗಳಾದರೆ ಉಳಿದವು ಜಂಗಮರ ಮನೆಗಳಾಗಿವೆ. ಮಂಕೊಡೆಯರು ಲಿಂಗಾಯಿತ

ಜಂಗಮರಾಗಿರಬಹುದೆ? ಎರಡೂ ಕೃತಿಗಳಿಗೆ ನಿರ್ಣಾಯಕನಾಗಿ ಕಲ್ಯಾಣ ಪ್ರವೇಶ ನೀಡಿದ ಬಸವಣ್ಣ ಶೂದ್ರ ಕುಲವೆಂದು ಕಡೆಗಣಿಸಲ್ಪಟ್ಟ ಕುರುಬ ಕುಲಕ್ಕೆ ನ್ಯಾಯ ನೀಡಿ, ಸಮಾನತೆ ತತ್ವದೊಂದಿಗೆ ಅಂತಃಕರಣ ಮೆರೆದನು. ಅನ್ಯಾಯಕ್ಕೆ, ದೌರ್ಜನ್ಯಕ್ಕೆ ಒಳಗಾದವರಿಗೆ ಕಲ್ಯಾಣ ಪ್ರವೇಶಿಸಿ ಸಾಮಾಜಿಕ ಘನತೆ ಮರ್ಯಾದೆಯನ್ನು ದೊರಕಿಸಿ ತನ್ನ ಸ್ಥಾನಮಾನಗಳನ್ನು ಬಸವಣ್ಣ ಹೆಚ್ಚಿಸಿಕೊಂಡರೆ ಪ್ರತಿನಾಯಕನಾಗಿ ಬಿಜ್ಜಳ ಕಾಣಿಸಿಕೊಳ್ಳುತ್ತಾನೆ.

ತಗರ ಪವಾಡದಲ್ಲಿ ರೇವಣಸಿದ್ಧರ ಪ್ರಸ್ತಾಪ ಮೇಲಿಂದ ಮೇಲೆ ಬರುತ್ತದೆ. ಶಿವನನ್ನೇ ರೇವಣಸಿದ್ಧನೆಂದು ಕರೆದಿರಬಹುದೇ? ಎಂಬ ಸಂದೇಹ ಉಳಿಯುತ್ತದೆ. ಸತ್ತ ಕರುವನ್ನು ಮಂಟೇಸ್ವಾಮಿ ಹೊತ್ತೊಯ್ದರೆ, ಸತ್ತ ಕುರಿಯನ್ನು ಶಾಂತಮುತ್ತಯ್ಯ ಒಯ್ಯುತ್ತಾನೆ. ಎರಡೂ ಘಟನೆಗಳಲ್ಲಿ ಹೋಲಿಕೆಯಿದೆ. ವ್ಯಷ್ಟಿ ಕಲ್ಯಾಣವನ್ನು ಶಾಂತಮುತ್ತಯ್ಯನ ಲಿಂಗದೀಕ್ಷೆ ಸೂಚಿಸಿದರೆ, ಸಮಷ್ಟಿ ಕಲ್ಯಾಣವನ್ನು ತಗರ ಪವಾಡ ಸೂಚಿಸುತ್ತದೆ. ಒಬ್ಬ ಸಮರ್ಥ ನಾಯಕನ ಮುಖಾಂತರ ಜನಸಾಮಾನ್ಯರ ಕಲ್ಯಾಣ ಅಭಿವೃದ್ಧಿ ಆಗುತ್ತದೆ. ಒಟ್ಟಿನಲ್ಲಿ ಸ್ವಾರ್ಥ ಜೀವನದಿಂದ ಮುಕ್ತ ವಾತಾವರಣ ನಿರ್ಮಾಣವಾಗುತ್ತದೆ. ಕಾಡುವಾಸಿಗಳಾದರವನ್ನು ನಾಡ ಪ್ರಜೆಗಳನ್ನಾಗಿ ಮಾಡುವಲ್ಲಿ ಶರಣ ಸಮುದಾಯದ ಬೆಂಬಲ, ಪ್ರೀತಿ ಮತ್ತು ವಿಶ್ವಾಸಗಳು ಮುಖ್ಯ ಪಾತ್ರ ವಹಿಸಿವೆ.

ಶಾಂತಮುತ್ತಯ್ಯನ ಕಾರ್ಯಕ್ಷೇತ್ರ ಮುದ್ದೇಬಿಹಾಳ ತಾಲೂಕಿನ ಸರೂರು ಗ್ರಾಮ. ಈ ಗ್ರಾಮದ ಮಲ್ಲಿಕಾರ್ಜುನ (ರೇವಣಸಿದ್ಧ) ದೇವಾಲಯದ ಆವರಣದಲ್ಲಿರುವ ಕ್ರಿ.ಶ. ೧೨೦೮ ಮತ್ತು ೧೨೧೧ರ ಕಾಲದ ಶಾಸನಗಳಲ್ಲಿ ಮಂಕಯ್ಯನ ಪ್ರಸ್ತಾಪವಿದೆ. ಹಾಗೆಯೇ ಶಾಂತಮುತ್ತಯ್ಯನ ಗದ್ದುಗೆ ಮತ್ತು ಗುಡಿಗಳು ಇವೆ. ತಗರ ಪವಾಡ ಮೆರೆದ ಶಾಂತಮುತ್ತಯ್ಯನು ಕುರುಬರ ಕುಲಗುರುವಾಗಿ ಪೂಜಿಸಲ್ಪಡುತ್ತಾನೆ. ಪೂರಕವಾಗಿ 'ಸರೂರು ಸಂಪ್ರದಾಯ' ಎಂಬ ಗೋತ್ರವು ಕುರುಬರಲ್ಲಿದೆ. ಈ ವಿಷಯದನ್ವಯ ಸರೂರು ಕ್ಷೇತ್ರವು ಹಾಲುಮತದ ಸಾಂಸ್ಕೃತಿಕ ನೆಲೆಯಲ್ಲಿ ಮಹತ್ವವುಳ್ಳದ್ದಾಗಿದೆ. ಮದುವೆ ಕಾರ್ಯಗಳಲ್ಲಿ

'ಕಲಿಕಲಿಯಾಗಿ ಕರ್ಯಜ್ಞನಾಗಿ,
ಭೀಮಣ್ಣನಾಗಿ, ಭಿಲ್ಲರಾಜ್ಯವನಾಳಿ
ಗುರು ರೇವಣಸಿದ್ಧ ಕಟ್ಟಿದ ಸೇಸೆ ಸ್ಥಿರವಾಗಲಿ
ಸರೂರು ಶಾಂತಮುತ್ತಯ್ಯ ಕಟ್ಟಿಸಿದ ಕಲ್ಯಾಣ ಸ್ಥಿರವಾಗಲಿ
ಸೋಬತಿ ಸೋಬಾನ ಸೋಬತಿ ಸೋಬಾನ'

ಎಂಬ ವ್ಹಿ.ಆರ್.ಹನುಮಂತಯ್ಯನವರ 'ಭಾರತ ದೇಶದ ಕುರುಬರ ಚರಿತ್ರೆ'ಯಲ್ಲಿ ಉಕ್ತಗೊಂಡ ಪದ್ಯವನ್ನು ಒಡೆಯರು ವಧುವರರಿಗೆ ಹೇಳಿ ಆಶೀರ್ವದಿಸುತ್ತಾರೆ.[೩] ಇಲ್ಲಿ ಉಲ್ಲೇಖಿತರಾದ ಶಾಂತಮುತ್ತಯ್ಯ ಮತ್ತು ರೇವಣಸಿದ್ಧರ ಪ್ರಸ್ತಾಪವು ಅವರ ಪ್ರಾಚೀನತೆಯನ್ನು ತಿಳಿಸುತ್ತದೆ. ಆದರೆ ಇಂದು ಹಾಲುಮತ ಸಮಾಜ

ಕನಕದಾಸನ ಹೆಸರಿನಲ್ಲಿ ಪೀಠ ಸ್ಥಾಪಿಸಿ ಪುರಾತನ ಮೂಲ ಕುರುಹನ್ನೂ ಕೈ ಬಿಟ್ಟು ತನಗೆ ತಾನೇ ಅನ್ಯಾಯ ಮಾಡಿಕೊಂಡು ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಿಲ್ಲ ಎನ್ನುವ ಸ್ಥಿತಿಯಲ್ಲಿದೆ. ಪೂರಕವಾಗಿ ತುರುವೆಕೆರೆ ಶಾಸನವು ವಿಜಯನಗರ ರಾಜರ, ಹಿರಿಯರ, ಸ್ವಾಮಿಗಳ ಸಮ್ಮುಖದಲ್ಲಿ ಕುರುಬರಿಗೆ ಗುರುಗಳಾರು ಎಂಬ ವಾದದಲ್ಲಿ ಶಾಂತಮುತ್ತಯ್ಯ ಗೆದ್ದು ಮಂಕನನ್ನು ಸೋಲಿಸಿ ಕೊನೆಗೆ ಹಾಲುಮತಕ್ಕೆ ಶಾಂತಮುತ್ತಯ್ಯನೇ ಗುರು ಎಂದು ಸಭೆ ನಿರ್ಣಯಿಸುತ್ತದೆ ಎಂಬ ವಿಷಯವನ್ನು ತಿಳಿಸುತ್ತದೆ. 'ತಗರ ಪವಾಡ'ದಲ್ಲಿ ಬಸವಣ್ಣ 'ಹಾಲುಮತದ ಕುಲದವರಿಗೆಲ್ಲ ಶಾಂತಯ್ಯ ನೀನೇ ಗುರುವಾಗು' ಎಂದು 'ಮೂರೇಣಿನ ಕಂಥೆ' ಕೊಡುತ್ತಾನೆ. ಶಾಂತಮುತ್ತಯ್ಯನನ್ನು ಕುರಿತಾಗಿ ಸಿರಿವಾಳ(೧೧೭೦), ಕೆಲ್ಲೂರು(೧೧೭೫), ಹೋತಗಲ್ಲ(೧೧೭೫), ಸಿರಿವಾಳ (೧೧೭೮), ಹಿರೇಬೇವಿನೂರು(೧೧೯೦), ತುರುವೇಕೆರೆ(೧೪೮೦), ಹೀಗೆ ಆರು ಶಾಸನಗಳು ಲಭಿಸಿದೆ.[*]

ತಗರ ಪವಾಡದಲ್ಲಿ ಉಣ್ಣೆಕಂಕಣ ಮತ್ತು ಹತ್ತಿಕಂಕಣದ ಉಗಮವನ್ನು ಗುರುತಿಸಬಹುದು. ಪದ್ಮಗೊಂಡನ ಕಾಡುವಾಸಿ ರಾಕ್ಷಸಿ ಹೆಂಡತಿಯ ಮಕ್ಕಳನ್ನು ಉಣ್ಣೆಕಂಕಣದವರೆಂದೂ, ನಾಡವಾಸಿ ಲಿಂಗಮ್ಮನ ಮಕ್ಕಳಿಗೆ ಹತ್ತಿಕಂಕಣದವರೆಂದೂ ಕರೆದು ಆ ಸಂಪ್ರದಾಯವನ್ನು ಕುರುಬರು ಇಂದಿನವರೆಗೂ ಪಾಲಿಸುತ್ತ ಬಂದಿರುವುದು ವಿಶೇಷವಾಗಿದೆ.

'ಸಿದ್ಧಮಂಕ ಚರಿತೆ'ಯಲ್ಲಿ ಹೆಗ್ಗಗೌಡ 'ತಗರ ಪವಾಡ'ದ ಪದ್ಮಗೊಂಡನಾಗಿರುವನು. ಪದ್ಮಗೊಂಡ ಮತ್ತು ಹೆಗ್ಗಗೌಡನಿಗೆ ಇಬ್ಬರು ಹೆಂಡಂದಿರು. ಒಬ್ಬಳು ರಾಕ್ಷಸಿಯಾದರೆ ಮತ್ತೊಬ್ಬಳು ಕುಲವಧು. ಕಥಾನಾಯಕ ಶಾಂತಮುತ್ತಯ್ಯ ತಗರ ಪವಾಡದಲ್ಲಿ ಪದ್ಮಗೊಂಡನ ಮಗ. ಉಪಕಥಾನಾಯಕ ಹೆಗ್ಗಗೌಡ 'ಸಿದ್ಧಮಂಕ ಚರಿತೆ'ಯಲ್ಲಿ ಮಂಕಯ್ಯನ ರಕ್ಷಕ. ಮಂಗಳವೇಡ ಮತ್ತು ಕಲ್ಯಾಣ ಏಕಸ್ಥಳವೆಂಬಂತೆ 'ಸಿದ್ಧಮಂಕ ಚರಿತೆ'ಯಲ್ಲಿ ಚಿತ್ರಿಸಲಾಗಿದೆ.

'ಸಿದ್ಧಮಂಕ ಚರಿತೆ'ಯ ತೂಗುಡ್ಡವು ಮುದ್ದೇಬಿಹಾಳ ತಾಲೂಕಿನ ಸರೂರಿನಿಂದ ಸುಮಾರು ಎರಡು ಕಿಲೋ ಮೀಟರ್ ಅಂತರದಲ್ಲಿದೆ. ಇದೊಂದು ಪ್ರಸಿದ್ಧ ಐತಿಹಾಸಿಕ ಸ್ಥಳವಾಗಿದೆ. ಇಲ್ಲಿ ಸಿದ್ಧಮಂಕ ಸೂಜಿಗೆ ತಲೆಯೂರಿ ಕಾಲುಮೇಲೆ ಮಾಡಿ ಉಗ್ರ ತಪಸ್ಸು ಕೈಗೊಂಡ ವಿಷಯ ತಿಳಿಯುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ತೂಗುಡ್ಡದಲ್ಲಿ ಬಸವಣ್ಣನ ಕದನದಿಂದಾಗಿ ಇಂದಿಗೂ ರಕ್ತ ಹರಿಯುತ್ತದೆಂದು ಗ್ರಾಮವಾಸಿ ಕುಮಾರಿ ಸುಜಾತಾಳ ಹೇಳಿಕೆಯಾದರೆ ಲೇಖಕ ಶಿವಪ್ಪ ನೀರಲಗಿಯವರು ತ್ರಿಪದಿಯೊಂದನ್ನು ಉಲ್ಲೇಖಿಸುತ್ತ

ಕುಂಟೋಜಿ ಬಸವಣ್ಣ ಬಾಗೋಡಿ ಬಸವಣ್ಣ
ಕಾದಬಿದ್ದಾಗ ಯರಿಯಾಗ | ಕಾದಬಿದ್ದಾಗ ಯರಿಯಾಗ
ಯರನಾಳ ದ್ಯಾಮವ್ವ ಬಿಡಿಸ್ಯಾಳ

ಭಿನ್ನ ಅಭಿಪ್ರಾಯದ ಮೌಖಿಕ ತ್ರಿಪದಿಯನ್ನು ಹೇಳುತ್ತಾರೆ. ಅವರ ಪ್ರಕಾರ ಶರಣ ಬಸವಣ್ಣ ಮತ್ತು ಮೇಲಿನ ತ್ರಿಪದಿ ಬಸವಣ್ಣ ಬೇರೆ ಬೇರೆ ಆಗಿದ್ದಾರೆ. ಆದರೆ ತೂಗುಡ್ಡದಲ್ಲಿ ಬಸವಣ್ಣನ ಹೆಸರಂತೂ ಜನಪದರಲ್ಲಿ ಉಳಿದುಕೊಂಡು ಅಧ್ಯಯನಕ್ಕೆ ಪೂರಕಮಾಹಿತಿ ಒದಗಿಸಿಕೊಡುತ್ತದೆ. ಮಂಕಸಿದ್ಧನ ತಪೋ ಭೂಮಿಯಾದ ತೂಗುಡ್ಡವು ಹಾಲುಮತ ಸಂಸ್ಕೃತಿ ಅಧ್ಯಯನದ ಮಹತ್ವದ ಕ್ಷೇತ್ರವಾಗಿದೆ. ಏಕವ್ಯಕ್ತಿಯಾಗಿ ಮರಳುಮಂಕ, ಮಂಕತಂದೆ, ಮಂಕಸಿದ್ಧಯ್ಯ, ಮಂಕಯ್ಯ ಎಂಬ ನಾಮ ಭಿನ್ನತೆ ಹೊಂದಿರುವನು. ಮರುಳುಮಂಕನ ಉಲ್ಲೇಖವನ್ನು ತಗರ ಪವಾಡದಲ್ಲಿ ಕಾಣುವುದಿಲ್ಲ. ಶಾಂತಮುತ್ತಯ್ಯನ ಉಲ್ಲೇಖವನ್ನು ಸಿದ್ಧಮಂಕ ಚರಿತೆಯಲ್ಲಿ ಕಾಣುವುದಿಲ್ಲ. ಆದರೂ ಎರಡೂ ಕೃತಿಗಳು ಒಂದೇ ವಿಷಯವನ್ನು ಅನಾವರಣ ಗೊಳಿಸುತ್ತವೆ. ಒಂದೇ ದಾರಿಯ ಎರಡು ಕವಲುಗಳಾಗಿವೆ. ಈ ಕೃತಿಗಳು ಚರಿತ್ರೆ ಮತ್ತು ಪುರಾಣಗಳ ಅಂಶಗಳನ್ನೊಳಗೊಂಡಿವೆ.

ಸಿದ್ಧಮಂಕ ಚರಿತೆಯಲ್ಲಿ 'ಕಾದೋಡಿ ಒಡೆಯ ಸಿದ್ಧ ಬರೆದರ್ಥವ ಗಾಡದಿ ಬರೆದಡಗಿಸಿದ' ಎಂಬಲ್ಲಿ ಒಡೆಯಸಿದ್ಧನೆಂಬುವನು ಕಾದೋಡಿ ಗ್ರಾಮದವನಾಗಿ ಕೃತಿ ರಚಿಸಿರಬಹುದು. 'ಒಡೆಯ' ಎಂಬ ಪದವು ಕುರುಬರ ಗುರುಗಳನ್ನು ಸೂಚಿಸುವುದಾಗಿದೆ. ಸಿದ್ಧಮಂಕ ಚರಿತೆಯಲ್ಲಿ 'ಏಳು ಗೆರೆಯ ಬೇಲಿ ಹೊರಗೆ' ಎಂಬುದು ಏಳುಕೋಟಿ, ಏಳುಕೊಳ್ಳ, ಏಳುಗುಡ್ಡ, ಏಳು ಕಳಸ, ಏಳುತಾಯಿ, ಏಳು ಹೆಡೆ, ಏಳೂರು ದೇವರ ಕಾಳಗ ಮೊದಲಾದ ಪದಗಳಲ್ಲಿಯ 'ಏಳು' ಎಂಬ ಸಂಖ್ಯೆಯೊಂದಿಗೆ ಸಾಮ್ಯತೆ ಪಡೆದಿದೆ.

ಒಡೆಯರ ಒಡೇರಮ್ಮನಿಗೆ ಭಾರತದ ದೇಶದ ಯಾವ ಧರ್ಮವೂ ನೀಡದ ಮಾನ್ಯತೆಯನ್ನು ಗೌರವವನ್ನು ಹಾಲುಮತ ದೊರಕಿಸಿಕೊಟ್ಟಿದೆ. ಅವರು ಒಡೆಯರಷ್ಟೇ ಸಮಾನರಾಗಿ ಅವರ ಅನುಪಸ್ಥಿತಿಯಲ್ಲಿ ಕುರುಬರ ನಾಮಕರಣ, ಮದುವೆ, ಮರಣದಂತಹ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ನೆರವೇರಿಸಿಕೊಡುವರು. ಅವರು ವಿಧವೆಯರಾದರೂ ಸೌಭಾಗ್ಯದ ಸಂಕೇತಗಳಾದ ಕುಂಕುಮ, ಬಳೆ, ಮಾಂಗಲ್ಯ ಮೊದಲಾದವನ್ನು ತೆಗೆಯದೇ ಸುಮಂಗಲಿಯರಾಗಿ ಮಾನಸಿಕ ಭದ್ರತೆಯೊಂದಿಗೆ ಗೌರವಯುತವಾಗಿ ಬಾಳುತ್ತಾರೆ.

ಲಿಂಗದೀಕ್ಷೆಯನ್ನು ಒಪ್ಪಿಕೊಂಡ ಶಾಂತಮುತ್ತಯ್ಯನ ಶಾಂತ ಸಂಪ್ರದಾಯ ಷಟ್‌ಸ್ಥಲವನ್ನು ಒಪ್ಪಿಕೊಂಡಿದ್ದರೂ ಶರಣಧರ್ಮದಲ್ಲಿ ಸೇರಿ ಸ್ವಲ್ಪ ಪ್ರಮಾಣದ ನಾಥಶೈವೀಯ ಅಂಶ ಉಳಿಸಿಕೊಂಡಿರ ಬಹುದು. ಹಂಪಿ ಪರಿಸರದ ನೂರೊಂದು ವಿರಕ್ತರನ್ನು ಈ ಗುಂಪಿಗೆ ಸೇರಿಸಬಹುದಾಗಿದೆ. ಶಾಂತ ಪರಿಭಾಷೆಯ ಮದ್ದಳೆ ಶಾಂತ, ಮಿಡಿಬಿಲ್ಲಶಾಂತ, ವಚನ ಮತ್ತು ಸ್ವರವಚನಕಾರರು ನೂರೊಂದು ವಿರಕ್ತರ ಶಾಂತಪರಂಪರೆಯ ಲಿಂಗಾಯಿತರು, ಹದಿನಾರನೆಯ ಶತಮಾನದ ಶಾಂತಪರಂಪರೆಯ ಶಾಂತಲಿಂಗ ಸ್ವಾಮಿ ನಿಜಗುಣರ ವಿವೇಕ ಚಿಂತಾಮಣಿಯನ್ನು ಮರಾಠಿಗೆ ಅನುವಾದಿಸಿದರು. ಇದು ಅವರಿಬ್ಬರ ಶಾಂತ ಸಂಪ್ರದಾಯದ ಸಂಬಂಧ ಸೂಚಕವಾಗಿದೆ. ಹದಿನೈದು ಹದಿನಾರನೇ ಶತಮಾನದಲ್ಲಿ ಶ್ರೀಶೈಲಮೂಲದ ಪಂಡಿತಾರಾಧ್ಯರನ್ನು ಶಾಂತ ಪರಂಪರೆಯ ರೇವಣಸಿದ್ಧ, ಮರುಳಸಿದ್ಧರನ್ನೂ, ಕೇದಾರ ಮೂಲದ ಕಾಳಾಮುಖ ಮತ್ತು ಪಾಶುಪತರ

ಏಕೋರಾಮರನ್ನು ಸೇರಿಸಿ 'ಚತುರಾರ್ಯ'ವೆಂಬ ಕೃತಕ ವ್ಯವಸ್ಥೆಯನ್ನೂ ಶಾಂತ ಧರ್ಮದ ಮೇಲೆ ಶರಣ ಧರ್ಮ ಹೇರಲಾರಂಭಿಸಿತು. ಲಿಂಗಾಯತತನವನ್ನೂ ಒಪ್ಪಿಕೊಂಡ ಶಾಂತ ಸಂಪ್ರದಾಯ ವೀರಶೈವವಾಯಿತು. ಮಹಾರಾಷ್ಟ್ರದಲ್ಲಿ ಶಾಂತ ಸಂಪ್ರದಾಯದ ಲಿಂಗಾಯಿತರು ವೀರಶೈವಕ್ಕೆ ತಿರುಗಲಾರಂಭಿಸಿದರು. ಇದಕ್ಕೆ ಪುಷ್ಟಿಕೊಡುವಂತೆ ಚೆನ್ನಬಸವಣ್ಣನ ಕರಣ ಹಸಿಗೆಯನ್ನು ನಿಜಗುಣರ ವಿವೇಕ ಚಿಂತಾಮಣಿಯನ್ನು ಕರುಣಹಂಸ ಎಂಬ ಹೆಸರಿನಲ್ಲಿ ಸಿಂಗಣಾಪುರದ ಶಾಂತಲಿಂಗಸ್ವಾಮಿಗಳು ಅನುವಾದಿಸಿದ್ದಾರೆ. ಅಲ್ಪ ಪ್ರಮಾಣದಲ್ಲಿ ಶರಣ ಧರ್ಮದತ್ತ ವಾಲಿದ ನಾಥಶೈವೀ ಪಂಥವನ್ನು ಪೂರ್ಣವಾಗಿ ತನ್ನತ್ತ ಸೆಳೆಯಲು ನಡೆಸಿದ ಪ್ರಯತ್ನವಾಗಿರ ಬಹುದು.[*] ಎರಡೂ ಕಾವ್ಯಗಳಲ್ಲಿ 'ವಿಭೂತಿ', ಶರಣ, ಲಿಂಗದೀಕ್ಷೆ ಎಂಬ ಪದಗಳು ಕಾಣಿಸಿಕೊಳ್ಳುತ್ತವೆ. ಸಹಜವಾಗಿ ಕನಿಷ್ಠತೆಯಿಂದ ಶ್ರೇಷ್ಠತೆಯತ್ತ ಸಾಗುವ ವಿಕಸನ ಕ್ರಿಯೆಯಲ್ಲಿ ಜನಸಾಮಾನ್ಯರನ್ನು ಮಾನಸಿಕವಾಗಿ ಸಿದ್ಧಪಡಿಸಿರುವ ಸಾಧ್ಯತೆಗಳಿರಬಹುದು. ಹನ್ನೆರಡನೆಯ ಶತಮಾನದಲ್ಲಿ ಸಾಮರಸ್ಯ ಜೀವನ ನಡೆಸಿದ ಕುರುಬರು ಮತ್ತು ಲಿಂಗಾಯಿತರು ನಂತರದ ದಿನಗಳಲ್ಲಿ ಪ್ರತ್ಯೇಕಗೊಂಡಿರುವುದು ಕಂಡುಬರುತ್ತದೆ.

ನಾರದನು ವಿಭೂತಿಯನ್ನಿಟ್ಟು ಹೆಗ್ಗಗೌಡನಿಗೆ ಹರಸುವುದು, ಬಿಜ್ಜಳನಿಂದ ಕಲ್ಯಾಣ ಪ್ರವೇಶದ ಅನುಮತಿ ಪಡೆದ ಜನರಿಗೆ ವಿಭೂತಿ ವೀಳ್ಯ ಹಂಚುವ ಪ್ರಸಂಗ, ಹೀಗೆ 'ಭಂಡಾರ ಸಂಸ್ಕೃತಿ'ಯು ವಿಭೂತಿ ಸಂಸ್ಕೃತಿಯತ್ತ ಹೊರಳುವ ವಿಕಸನಶೀಲ ಧ್ವನಿ ಇಲ್ಲಿದೆ. ಕುಲಬೇಧ ನಿರಾಕರಣೆ ಕೇಂದ್ರ ಪ್ರಜ್ಞೆಯಾಗಿದೆ. ಲಿಂಗಾಯತ ಜಂಗಮರಂತೆ ಬದುಕುವ ಮರುಳುಮಂಕ ಸಂಪ್ರದಾಯದ ಮಂಕೊಡೆಯರು ಹೆಚ್ಚಾಗಿ ಸರೂರು ಮತ್ತು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ವಾಸವಾಗಿದ್ದಾರೆ. ಇದಕ್ಕೆ ಪೂರಕವಾಗಿ ತಗರ ಪವಾಡದಲ್ಲಿ ಕುರುಬರ ಮತ್ತು ಲಿಂಗಾಯತರ ಏಕೀಕರಣವನ್ನು ಗುರುತಿಸಬಹುದು.

ರೇವಣಸಿದ್ಧರ ಶಿಷ್ಯ ಶಾಂತಮುತ್ತಯ್ಯನಿಂದಾಗಿ 'ಶಾಂತ ಸಂಪ್ರದಾಯ', ಸಿದ್ಧರಾಮನ ಶಿಷ್ಯ ಸಿದ್ಧಮಂಕನಿಂದಾಗಿ 'ಮಂಕ ಸಂಪ್ರದಾಯ' ಕುರುಬರಲ್ಲಿ ಕವಲೊಡೆದಿದೆ. ಸಿದ್ಧಮಂಕ ಸಂಪ್ರದಾಯದ ಸಾದಗುರುಬರು ಲಿಂಗಾಯತರಾಗುತ್ತ ಬಂದ ಕಾರಣ, ಕುರುಬರಲ್ಲಿ ಮಂಕಸಂಪ್ರದಾಯದವರ ಸಂಖ್ಯೆ ತೀರ ಕಡಿಮೆ. ಶಾಂತ ಸಂಪ್ರದಾಯದವರ ಸಂಖ್ಯೆ ಹೆಚ್ಚು. ಅಮೋಘಸಿದ್ಧ ಸಂಪ್ರದಾಯದವರು ವಿಭೂತಿ ಹಚ್ಚಿಕೊಳ್ಳುವದು, ಹಂಡೆ ಕುರುಬರು ಲಿಂಗ ಧರಿಸುವುದು ಇವೆಲ್ಲ ಶಾಂತ ಸಂಪ್ರದಾಯದ ಲಿಂಗಾಯತ ತನವನ್ನು ಸೂಚಿಸುತ್ತದೆ. ಪೂರಕವಾಗಿ ದೊಡ್ಡಬಳ್ಳಾಪುರದ 'ಕುರುಬರ ಹಳ್ಳಿ' ಗ್ರಾಮದಲ್ಲಿ ಲಿಂಗಾಯಿತರು ವಾಸವಾಗಿರುವರು.

ಶರಣ ಚಳುವಳಿಗಳಲ್ಲಿ ವೀರಶೈವದತ್ತ ವಾಲಿದ ಅಮೋಘಸಿದ್ಧ, ಗೊಲ್ಲಾಳ ಮತ್ತು ರುದ್ರಮುನಿಯರಂತೆ, ಜನಸಾಮಾನ್ಯರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಲಿಂಗಾಯತರಾಗಿರುವ ಸಾಧ್ಯತೆ ಇದೆ.

ವಿಜಯನಗರದ ಸ್ಥಾಪಕರು ಹಕ್ಕಬುಕ್ಕರು ಮೈಸೂರಿನ ಒಡೆಯರು ಮೂಲತಃ ಕುರುಬರು. ಬಳ್ಳಾರಿ ಹಂಡೇ ಅರಸರು ಸಿದ್ಧರಾಮನ ಭಕ್ತರು. ಹೀಗೆ ಧಾರ್ಮಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ,

ಪೌರಾಣಿಕವಾಗಿ ಕುರುಬ ಮತ್ತು ಲಿಂಗಾಯಿತ ಸಮಾಜಗಳಲ್ಲಿ ಹೋಲಿಕೆಯಿದ್ದು ಕುರುಬರ ಪರಿಷ್ಕೃತರೂಪ ವೀರಶೈವವೆಂದು ಎಂ.ಎಂ.ಕಲಬುರ್ಗಿಯವರು ಅಭಿಪ್ರಾಯಪಟ್ಟಿದ್ದಾರೆ.

ಹೀಗೆ 'ತಗರ ಪವಾಡ' ಮತ್ತು 'ಸಿದ್ಧಮಂಕ ಚರಿತೆ' ಈ ಎರಡೂ ಕೃತಿಗಳು ಕುರುಬರ ಗುರುಪರಂಪರೆಯನ್ನು ಹೇಳುವಲ್ಲಿ ಯಶಸ್ವಿಯಾಗಿವೆ. ಜೊತೆಗೆ ಕುಲಕಸುಬುಗಳಾದ ಕಂಬಳಿ ತಯಾರಿಕೆ, ಕಂಬಳಿ ನೇಯ್ಗೆ, ಕಂಬಳಿ ಕಂಥೆ ಮೊದಲಾದ ಹಾಲುಮತದ ಪ್ರಾಚೀನ ಪರಂಪರೆ, ಸಂಸ್ಕೃತಿಯನ್ನು ತಿಳಿಸುವ ಪ್ರಮುಖ ಆಕರಗಳಾಗಿವೆ.

೩. ಹಾಲುಮತೋತ್ತೇಜಕ ಪುರಾಣ (೧೯೧೨)

ರಸ್ತಾಪುರ ಭೀಮಕವಿಯು ಗುಲಬರ್ಗಾ ಜಿಲ್ಲೆಯ ಶಹಪುರ ತಾಲೂಕಿನಲ್ಲಿ ೧೮೭೭ರಲ್ಲಿ ಜನಿಸಿದನು. ಈತನು ಹಾಲುಮತೋತ್ತೇಜಕ ಪುರಾಣವನ್ನು ೧೯೧೨ರಲ್ಲಿ ರಚಿಸಿದ್ದಾನೆ. ಕವಿಯು ತನ್ನನ್ನು ತಾನು ಪ್ರತಿಸಂಧಿಯ ಕೊನೆಯಲ್ಲಿ ಭೀಮಾಕ್ಯ, ಭೀಮನಾಯಕ ಎಂದು ಕರೆದುಕೊಂಡಿದ್ದಾನೆ. ತಂದೆ ಜಂಬಣ್ಣ, ತಾಯಿ ಭೀಮವ್ವ, ಗುರು ಲಕನಾಪುರದ ಗೌಡ ಹನುಮಂತರೆಡ್ಡಿ. ಕವಿಯು ಸುಮಾರು ೮೦ವರ್ಷಗಳವರೆಗೆ ಬಾಳಿ ೧೯೫೮ರ ಸೋಮವಾರದಂದು ಲಿಂಗೈಕ್ಯರಾದರು.[೬] ಕೃಷ್ಣಮ್ಮ, ಚಂದಮ್ಮ, ಚೆನ್ನಮ್ಮ ಎಂಬ ಮೂವರು ಪತ್ನಿಯರು ಕೃಷ್ಣಮ್ಮನಿಗೆ ಹುಟ್ಟಿದ ಮಕ್ಕಳು ಬದುಕುಳಿಯಲಿಲ್ಲ. ಇಪ್ಪತ್ತಕ್ಕೂ ಹೆಚ್ಚು ಬಯಲಾಟಗಳನ್ನು ಹತ್ತುನಾಟಕಗಳನ್ನು ರಚಿಸಿರುವುದಾಗಿ ಕವಿ 'ಚೋರಬಸವೇಶ್ವರ ಪುರಾಣ'ದಲ್ಲಿ ಹೇಳಿಕೊಂಡಿದ್ದಾನೆ. ಚಲತಿ ದುನಿಯಾ, ರಾಮರಾಜ ವಿಯೋಗ, ಶ್ರೀ ಸಿದ್ಧರಾಜ ಚರಿತೆ, ನಳ ಚರಿತೆ, ಕಾಳಿದಾಸಾಭ್ಯಾಸ, ಕುಶಲವರ ಕಾಳಗ, ಸತ್ಯಶೀಲ ಕಲ್ಪಿತಕಥಾ, ಬೊಂಬಾಯಿ ವ್ಯಾಪಾರ ಅಲ್ಲದೆ ಕಮಲಬಂಧ, ಚಕ್ರಬಂಧ ಇವು ಭೀಮಕವಿಯ ಕೃತಿಗಳೆಂದು ಚಂದ್ರಕಲಾ ಬಿದರಿ ಅಭಿಪ್ರಾಯಪಟ್ಟಿದ್ದಾರೆ.[೭]

ರೇವಣಸಿದ್ಧೇಶ್ವರ, ಶಾಂತಮುತ್ತಯ್ಯ, ಶಿವಪದ್ಮ, ಶಿವಸಿದ್ಧ, ಬೀರೇಶ್ವರ, ವೀರಗೊಲ್ಲಾಳ, ಮಾಳಿಂಗರಾಯ ಮೊದಲಾದವರನ್ನು ಕಥೆಯಲ್ಲಿ ಗುರುತಿಸಬಹುದು. ಪುರಾಣದೊಂದಿಗೆ ಚಾರಿತ್ರಿಕ ಅಂಶಗಳು ಸೇರಿಕೊಂಡಿವೆ. ಪ್ರತಿ ಸಂಧಿಯ ಆರಂಭದ ಸೂಚನೆಯಲ್ಲಿ ಆಯಾ ಸಂಧಿಯ ಸಂಕ್ಷಿಪ್ತ ಕಥಾಸಾರ ಹೊಂದಿದೆ. ಕೃತಿಯನ್ನು ಓದಿದವರಿಗೆ ಮತ್ತು ಕೇಳಿದವರಿಗೆ ಸಿಗುವ ಪ್ರತಿಫಲಗಳನ್ನು ಕವಿ ಪ್ರತಿ ಸಂಧಿಯ ಕೊನೆಯಲ್ಲಿ ತಿಳಿಸಿದ್ದಾನೆ.

ಹಾಲುಮತೋತ್ತೇಜಕ ಪುರಾಣವು ೯ ಸಂಧಿ ೫೯೮ ವಾರ್ಧಕ ಷಟ್ಪದಿ ಪದ್ಯಗಳನ್ನು ಹೊಂದಿದೆ. ಪ್ರತಿ ಸಂಧಿಯ ಆರಂಭದಲ್ಲಿ ಕವಿ ಶಿವನನ್ನು ವಿವಿಧ ಹೆಸರುಗಳಿಂದ ಸ್ತುತಿಸಿದ್ದಾನೆ. ವಿಘ್ನರಾಜ, ಗಂಗಾಧರ, ವರಕಾಳಿದಾಸ, ಸಿದ್ಧರಾಮೇಶ್ವರ, ಭವಭೂತಿ, ಮಲುಹಣ, ನಂದಿಕೇಶ, ಬಾಣ, ಕೆರೆಯ ಪದ್ಮರಸ, ಮೊಗ್ಗೆಯ ಮಾಯಿದೇವ, ಭೀಮಕವಿ, ಹಂಪಿಯ ಹರಿಹರ, ರಾಘವಾಂಕ, ಗುರು ಪಂಡಿತೇಶ, ಉದ್ಭಟ, ಚಾಮರಸ, ಮಲ್ಲರಾರ್ಯ, ನಿಜಗುಣ ಶಿವಯೋಗಿ ಮೊದಲಾದವರಿಗೆ ವಂದಿಸಿದ್ದಾನೆ. ಪಂಡಿತನೆನಿಸಿಕೊಳ್ಳುವ ಹಂಬಲವಿಲ್ಲ ವೆಂದು ತಪ್ಪಿದಲ್ಲಿ ಪಂಡಿತರು ತಿದ್ದಬೇಕೆಂದು ಬೇಡಿಕೊಳ್ಳುತ್ತಾನೆ.

ಮೊದಲ ಸಂಧಿಯು ೧೪ ಪದ್ಯಗಳಿಂದ ಕೂಡಿದೆ. ದೇವರ ಸ್ಮರಣೆ, ಗುರುಸ್ತುತಿ ಮಾಡುತ್ತಾ ಈ ಕೃತಿಯ ಒಡೆಯ ರೇವಣಸಿದ್ಧನೆಂದೂ, ಜಂಬುಲಿಂಗವೆಂಬುವನ ಮಗ ಭೀಮ ಎಂಬ ಹೆಸರಿನ ತಾನು ಲಖನಾಪುರದಗೌಡ ಹನುಮಂತರೆಡ್ಡಿ ಎಂಬ ಗುರೂವರನ ದಯದಿಂದ ರಚಿಸಿರುವುದಾಗಿ ಹೇಳಿಕೊಳ್ಳುತ್ತಾನೆ. ವಿನಯದಿಂದ ಪ್ರಾಚೀನ ಕವಿಗಳ ರಚನೆಗಳೆಲ್ಲವುಗಳನ್ನು ಸುಲಭವಾಗಿ ಎಲ್ಲರಿಗೂ ತಿಳಿಯುವಂತೆ ರಚಿಸಿರುವುದಾಗಿ ಹೀಗೆ ಹೇಳಿದ್ದಾನೆ.

ಪ್ರಾಚೀನ ಕಬ್ಬಿಗರ್ಪೇಳ್ದದ ಶಬ್ದಾರ್ಥಮಂ
ಯೋಚಿಸಿ ಕವಿತೆಯಂ ಸಕಲರರಿವಂತೆ ನಾಂ
ಸೂಚಿಸಿದೆಲ್ಲದೆಂನಾತ್ಮ ರಸಿಕತೆಯಿಂದ ರಚಿಸಲಾನೆನಿತರವನ (೧-೧೨)

ಎರಡನೆಯ ಸಂಧಿಯಿಂದ ಕಥಾ ವಿಷಯ ಪ್ರಾರಂಭವಾಗುತ್ತದೆ. 'ಸಿದ್ದೇಶ್ವರ ಚರಿತ್ರ'ವು ಎಂಬ ಶೀರ್ಷಿಕೆಯಡಿಯಲ್ಲಿ ೪೭ ಪದ್ಯಗಳನ್ನು ಹೊಂದಿದೆ. ರೇವಣಸಿದ್ದೇಶ್ವರನ ಜನನ ಕೊಲ್ಲಿಪಾಕಿಯ ಸೋಮಲಿಂಗದಲ್ಲಿ ಆಗುತ್ತದೆ. ತನ್ನ ಲೀಲೆಗಳನ್ನು ತೋರಿಸುತ್ತ ಸರೂರು ಗ್ರಾಮಕ್ಕೆ ಬಂದು ಶಾಂತಮುತ್ತಯ್ಯನಿಗೆ 'ನೀನಂದ ನುಡಿಗಳು ಭೂಮಿಯಲ್ಲಿ ಸತ್ಯವಾಗಲಿ' ಎಂದು ಆಶೀರ್ವದಿಸಿ ಹಾಲುಮತಕ್ಕೆ ಗುರುವಾಗಿ ಗುರು ಕಂಕಣವನ್ನು ಕಟ್ಟುತ್ತಾನೆ. ಆತನಿಗೆ ಸುವ್ವಿ ಮುತ್ತಯ್ಯ, ಜಗಮುತ್ತಯ್ಯ, ಲಲಿತಶಾಂತಯ್ಯರೆಂಬ ಮಕ್ಕಳಿದ್ದರು. ಅವರು ಗೋವುಗಳನ್ನು ಸಾಕುತ್ತಾ ಹನ್ನೆರಡು ವರ್ಷ ಜನರಿಗೆ ಹಾಲನ್ನು ಕೊಡುತ್ತ ಸುಖದಿಂದ ಬಾಳುತ್ತಿದ್ದರು. ಅಲ್ಲಿಯ ಸಿದ್ಧರು ವಾದ ಮಾಡಲು ಅವರನ್ನು ಗೆದ್ದು ನರಕುರಿಗಳನ್ನಾಗಿ ಮಾಡಿ ಅವಸರದಲ್ಲಿ ಬರುವ ಸಂದರ್ಭದಲ್ಲಿ ಮುಂಡಾಸುರ ಅಡ್ಡಾದನು. ಅವನನ್ನು ಕೊಂದು ಮೂರು ಭಾಗಗಳನ್ನಾಗಿ ಮಾಡಿ ಮೂರಡಿಯ ಕಂತೆಗಳಾಗಿ ಮುಡಿ ಧರಿಸೆಂದು ಗುರು ರೇವಣಸಿದ್ಧ ಶಾಂತಮುತ್ತಯ್ಯನಿಗೆ ಹೇಳಲು ಗುರುವಿನಾಜ್ಞೆಯಂತೆ ಶಿಷ್ಯ ಪಾಲಿಸಿ ಜಗತ್ಪ್ರಸಿದ್ಧನಾದನು. ನರಗುರಿಗಳನ್ನು ಕಂಡು ರೇವಣಸಿದ್ಧರು ಅವುಗಳ ಕೂದಲುಗಳಿಂದ ಕಂಬಳಿ ಗದ್ದುಗೆ, ಚರ್ಮವು ಗುರುಪಾದಪೂಜೆಗೆ ಉಪಯೋಗವಾಗುವ ಡೊಳ್ಳುವಾದ್ಯಗಳಾಗಲಿ ಎಂದು ಶಾಂತಮುತ್ತಯ್ಯನಿಗೆ ಆಶೀರ್ವದಿಸಿ ಆಕಾಶ ಮಾರ್ಗವಾಗಿ ಹೋಗುತ್ತಾನೆ.

ಮೇಷಗಳ ರೋಮಗುರ್ವಾಸನಕ್ಕೆ
ನಿಚ್ಚಳದ ಗದ್ದುಗೆಯ ಚರ್ಮ ಗುರುಪದ ಪೂಜೆ
ಗುಚ್ಚಿ ತಂಗೊಡುವ ಘನ ವಾದ್ಯಂಗಳಾಗಲೆಂ
ದುಚ್ಚರಿಸಿ ಶಾಂತಮುತ್ತಯ್ಯಗಾಶೀರ್ವದಿಸಿ ಮೇಘ ಮಾರ್ಗಕ್ಕೆ ಜಿಗಿದನ (೨-೪೬)

'ಶಿವಪದ್ಮ ಚರಿತ್ರ'ವು ಎಂಬ ಶೀರ್ಷಿಕೆಯ ಮೂರನೆಯ ಸಂಧಿಯು ೪೯ ಪದ್ಯಗಳನ್ನು ಹೊಂದಿದೆ. ಮುದ್ದುಗೊಂಡ ಮುದ್ದಾಯಿ ಶಾಪಕ್ಕೆ ಗುರಿಯಾಗಿ ಭೂಲೋಕದಲ್ಲಿ ಸತಿಪತಿಗಳಾಗಿ ಜನಿಸುತ್ತಾರೆ. ಇವರಿಗೆ

ಆದಿಗೊಂಡ ಎಂಬ ಮಗ ಹುಟ್ಟುತ್ತಾನೆ. ಮುದ್ದುಗೊಂಡ ತನ್ನ ಸಹೋದರಿಯ ಮಗಳು ಚುಂಚಲೆಯೊಂದಿಗೆ ಮದುವೆ ಮಾಡುತ್ತಾನೆ. ಆದಿಗೊಂಡ ಚುಂಚಲೆಯರಿಗೆ ಶಿವನ ಆಶೀರ್ವಾದದಂತೆ ಶಿವಪದ್ಮನೆಂಬ ಮಗ ಐದು ತಿಂಗಳಲ್ಲಿ ವೃದ್ಧಾಪ್ಯದಲ್ಲಿ ಜನಿಸುತ್ತಾನೆ. ಶಿವಸ್ವರೂಪದ ಆ ಮಗುವಿನ ಹತ್ತಿರ ಸರಸ್ವತಿ ರುದ್ರಕನ್ನೆಯರು ಚನ್ನೆಯರು ಸಂತೋಷದಿಂದ ಪಾರ್ವತಿಯೊಂದಿಗೆ ಬಂದು ಪ್ರೀತಿಯಿಂದ ಮುದ್ದಿಸಿ ಹರಿಸಿ ಕೈಲಾಸಕ್ಕೆ ತೆರಳುತ್ತಾರೆ.

ಸಿರಿಸರಸ್ವತಿ ರುದ್ರಕನ್ನೆಯರು ಚೆನ್ನೆಯರು
ಸರಸದಿಂ ಕೂಡಿ ಗಿರಿಜಾತೆಯಳು ಖ್ಯಾತೆಯಳು
ವರಬಾಲಕನಿಹ ಸ್ಥಲಕೆಗಮಿಸಿದಳು ಭ್ರಮಿಸಿದಳು ಸುತಕೆ ಮುದ್ದಿಡುವುದಕ್ಕೆ (೩-೪೪)

ನಾಲ್ಕನೆಯ ಸಂಧಿಯು ೫೧ ಪದ್ಯಗಳನ್ನು ಹೊಂದಿದೆ. 'ಶಿವಪದ್ಮ ಚರಿತ್ರವು' ಎಂಬ ಶೀರ್ಷಿಕೆಯಲ್ಲಿ ಶಿವಪದ್ಮನ ಬಾಲ್ಯ ಮದುವೆ ರೇವಣಸಿದ್ಧರಿಂದ ಆಶೀರ್ವಾದ ಮೊದಲಾದ ವಿವರಗಳನ್ನು ಹೊಂದಿದೆ. ಶಿವಪದ್ಮನ ಮದುವೆ ಜಿಂಕಾದೇವಿಯೊಂದಿಗೆ ನಡೆಯುತ್ತದೆ. ಶಿವಪದ್ಮನನ್ನು ಕಾಣಬೇಕೆಂದು ರೇವಣಸಿದ್ಧರು ಜಾಗ್ರತಿಪುರಕ್ಕೆ ಬರುತ್ತಾರೆ. ಅಲ್ಲಿ ಬಡವಿ ಗಂಗಮ್ಮಳ ಭಕ್ತಿಗೆ ಮೆಚ್ಚಿ ಅವಳನ್ನು ಹರಸಿ ಶ್ರೀಮಂತಳನ್ನಾಗಿ ಮಾಡುತ್ತಾನೆ. ನಂತರ ಆದಿಗೊಂಡನ ಮನೆಗೆ ಬಂದು ಶಿವಪದ್ಮನಿಗೆ ಪಂಚಾಕ್ಷರಿ ಮಂತ್ರವನ್ನು ಬೋಧಿಸಿ ಆಶೀರ್ವದಿ ಸುವರು.

ಶಿವ ಮಂತ್ರವನ್ನು
ಸಾನುರಾಗದಿನೋಧಿಸೆನಲಾಗ ಗುರುಸಿದ್ಧ
ಸೂನುವಿನನುಡಿಗೆ ತಲೆದೂಗೆ ಸಂಭ್ರಮದಿಂದ
ನೂನವಿಲ್ಲದೆ ಲಿಂಗಧರಿಸಿ ಪಂಚಾಕ್ಷರೀ ಮಂತ್ರಮಂ ಬೋಧಿಸಿದರು (೪-೪೮)

ಐದನೆಯ ಸಂಧಿಯು ೫೭ ಪದ್ಯಗಳನ್ನು ಒಳಗೊಂಡಿದೆ. 'ಶಿವಪದ್ಮ ಚರಿತ್ರವು' ಎಂಬ ಶೀರ್ಷಿಕೆಯಲ್ಲಿ ಶಿವಪದ್ಮನ ಮದುವೆ ಮತ್ತು ಮಕ್ಕಳ ವೃತ್ತಾಂತವನ್ನು ಚರ್ಚಿಸಲಾಗಿದೆ. ಶಿವಾಜ್ಞೆಯಂತೆ ಖೇಚರ ಜಾಬಾಲ ಮುನಿಯಾಗಿ ಜನಿಸುತ್ತಾರೆ ಮೃತ್ಯು ದೇವತೆ ಗಂಗಾಧರ ರಾಜನ ಮಗನ ರುಂಡವನ್ನು ಶಿವನ ಆದೇಶದ ಮೇರೆಗೆ ತಪಸ್ಸಿನಲ್ಲಿದ್ದ ಮುನಿಯ ಮುಂದೆ ತಂದಿಡುತ್ತಾಳೆ. ಕೋಪಗೊಂಡ ರಾಜ ಜಾಬಾಲ ಮುನಿಯ ರುಂಡವನ್ನು ತೆಗೆಸಲು, ಅಸಂಖ್ಯಾತ ಕುರಿಗಳು ಹುಟ್ಟುತ್ತವೆ. ಮಂತ್ರಿಗಳು, ರಾವುತರು, ರಾಜ, ಬ್ರಹ್ಮ, ಶ್ರೀಹರಿ ಹೀಗೆ ಸರದಿಯಂತೆ ಎಲ್ಲರೂ ಕುರಿಕಾಯ್ದು ಬೇಸರಗೊಳ್ಳಲು ಕೊನೆಗೆ ಸ್ವತಃ ಶಿವ ಕಾಯುತ್ತಾನೆ. ಶಿವನಿಗೆ ಬೇಸರವಾಗಲು ಪಾರ್ವತಿ ಮಗ ಗಣಪನನ್ನು ಕಂಕುಳಲ್ಲಿಟ್ಟುಕೊಂಡು ಕುರಿ ಕಾಯುತ್ತ ಕಾಡು-ಗುಡ್ಡ- ಬೆಟ್ಟಗಳಲ್ಲಿ ಅಲೆಯುತ್ತ ಜಾಗ್ರತಿಪುರಕ್ಕೆ ಬರುತ್ತಾಳೆ. ಕುರಿಕಾಯ್ದು ಸಾಕಾಗಿ ಮೂರು ಕಣ್ಣುಗಳ

ಹುತ್ತದಲ್ಲಿ ಕುರಿಗಳನ್ನು ಹೊಗಿಸಿ ತನ್ನ ಮುತ್ತಿನ ಮೂಗುತಿಯ ಮುದ್ರೆಯೊತ್ತಿ ಮುತ್ತುಗದ ಮರವಾಗಲೆಂದು ಹರಸಿ ವೀರಭದ್ರನನ್ನು ಕಾವಲಿರಿಸಿ ಹೊರಡುವಳು.

ಮತ್ತದಕೆ ವೀರಭದ್ರನ ಕಾವಲಿಟ್ಟು
ಮುತ್ತಿನ ಸುಮೂಗುತೆಗೆ ಪರಿಸಿ ಪೇಳ್ದಳು ಮುಂದೆ
ಮುತ್ತುಗದ ಮರನಾಗಿ ಬೆಳೆದು ಬಾಳೆಂದರಿಕೆಗೊಟ್ಟು
ಪೋದಳು ಬೇಗನೆ (೫-೩೩)

ತರುವಾಯ ಶಿವಪದ್ಮನು ನೇಗಿಲು ಹೂಡುವಾಗ ನೇಗಿಲಿಗೆ ಹುತ್ತ ತಗುಲಿ ಕುರಿಗಳು ಹೊರಬರುತ್ತವೆ. ಆ ಕುರಿಗಳನ್ನು ಕಾಯ್ದುಕೊಂಡು ಸುಖವಾಗಿ ಬಾಳುವ ಶಿವಪದ್ಮ ಜಿಂಕಾದೇವಿಯರಿಗೆ ರೇವಣ್ಣನೆಂಬ ಮಗ ಜನಿಸುತ್ತಾನೆ.

ಆರನೆಯ ಸಂಧಿಯು ೬೧ ಪದ್ಯಗಳನ್ನು ಹೊಂದಿದ್ದು 'ಶಿವಪದ್ಮನ ಚರಿತ್ರವು' ಎಂಬ ಶೀರ್ಷಿಕೆಯನ್ನು ಹೊಂದಿದೆ. ಶಿವಪದ್ಮನು ಕುದಯರಕ್ಕಸಿಯನ್ನು ಸಂಹರಿಸಿ ಚುಮುಲಾದೇವಿಯನ್ನು ಮದುವೆಯಾಗುತ್ತಾನೆ.

ಮುನಿಯ ಶಾಪಕ್ಕೆ ಗುರಿಯಾದ ಮೂವರು ಗಂಧರ್ವರು ಕಾಂಚಾಲ ಮರ, ಕಾಗೆ ಮತ್ತು ಕುದಯರಕ್ಕಸಿಯಾಗಿ ಜನ್ಮ ತಳೆಯುತ್ತಾರೆ. ರಾಕ್ಷಸಿಯು ಪ್ರತಿದಿನ ಒಬ್ಬರನ್ನು ಸರದಿಯಂತೆ ಆಹಾರವಾಗಿ ತಿನ್ನುತ್ತಿರಲು, ಜಾಗ್ರತಪುರದ ಅರಸನ ಮಗಳ ಸರದಿ ಬಂದಿತು. ದುಃಖಿತರಾದ ರಾಜರಾಣಿಯರು ಮಗಳು ಚುಮಲೆಯನ್ನು ಆಹಾರವಾಗಿ ಕಳುಹಿಸಿದರು. ಆದರೆ ಸುಂದರ ರೂಪವನ್ನು ಹೊಂದಿದ ರಾಜಕುಮಾರಿಯನ್ನು ಕೊಲ್ಲಲು ಇಚ್ಛಿಸದೆ ರಾಕ್ಷಸಿ ಪ್ರೀತಿಯಿಂದ ಸಾಕತೊಡಗಿದಳು. ಹೀಗೆ ಹನ್ನೆರಡು ವರ್ಷ ಕಳೆಯಿತು.

ಶಿವಪದ್ಮನು ಗಣತೃಪ್ತಿ ಪಡಿಸಲು ಬೆಂಕಿ ತರಲು ಕಾಡಿಗೆ ಹೋದನು. ದಟ್ಟಡವಿಯ ಮನೆಯೊಂದರಲ್ಲಿ ಹೊಗೆ ಕಂಡು ಅಲ್ಲಿಗೆ ಹೋಗಲು ಚುಮಲಾದೇವಿಯನ್ನು ಕಂಡನು. ಅವಳು ನಡೆದ ತನ್ನ ವೃತ್ತಾಂತವನ್ನು ತಿಳಿಸಿ ಬಿಡುಗಡೆಗೊಳಿಸಿ ತನ್ನನ್ನು ವರಿಸಲು ಬೇಡಿಕೊಂಡು ಹಲವು ದೃಷ್ಟಾಂತಗಳಿಂದ ಜಾತಿಯ ಅನುಮಾನ ಪರಿಹರಿಸುತ್ತಾಳೆ. ಶಿವಪದ್ಮನು ಚುಮುಲೆಯ ಸಹಾಯದಿಂದ ರಾಕ್ಷಸಿಯನ್ನು ಕೊಂದು ಮದುವೆ ಮಾಡಿಕೊಳ್ಳುತ್ತಾನೆ.

ಏಳನೆಯ ಸಂಧಿ 'ಶಿವಪದ್ಮ ಚರಿತ್ರವು' ಎಂಬ ಶೀರ್ಷಿಕೆ ಮತ್ತು ಉಪಶೀರ್ಷಿಕೆಯಲ್ಲಿ 'ಬೀರೇಶ್ವರ ಜನನವು' ಎಂದಿದ್ದು ೯೦ ಪದ್ಯಗಳನ್ನು ಹೊಂದಿದೆ. ರಾಕ್ಷಸಿಯನ್ನು ಕೊಂದು ಅವಳ ಅವಯವದಿಂದ ಐವತ್ತೆರಡು ಬಾವನ್ನ ಬಿರುದಾವಳಿಗಳನ್ನು ಮಾಡಿ ಬಂಕಾಪುರದಲ್ಲಿ ಇಡುತ್ತಾನೆ. ಚುಮಲೆಯೊಂದಿಗೆ ಕುರಿಕಾಯುತ್ತ ಜಾಗ್ರತಿಪುರಕ್ಕೆ ಬರುತ್ತಾನೆ. ಚುಮಲಾದೇವಿಗೆ ರೇಣುಕ ಮತ್ತು ರೇವಣಾಂಬೆ ಎಂಬ ಮಕ್ಕಳು ಜನಿಸುತ್ತಾರೆ. ಶಿವಾಜ್ಞೆಯಂತೆ ಶಿವಪದ್ಮ ಕೈಲಾಸಕ್ಕೆ ತೆರಳಿ ಎರಡನೇ ಜನ್ಮದಲ್ಲಿ ಧರ್ಮದೇವ ಸುರಾವತಿಯರ

ಮಗನಾಗಿ ಶಿವಸಿದ್ಧ ಬೀರೇಶನಾಗಿ ಜನ್ಮತಳೆಯುವನು. ಶಿಷ್ಯನಾಗಿ ಮಾಳಿಂಗರಾಯನನ್ನು ಶಿವನಿಂದ ಪಡೆಯುತ್ತಾನೆ.

> ಮೃಡಮೆಚ್ಚಿ ಮಗನೇನೀನಳ್ಳಬೇಡಳಲ ಬೇ
> ಡಡಿ ಮುಂದಕಿಡು ನಿನ್ನ ಸೇವಕ್ಕೆನಾಂಕಳಿಸಿ
> ಕೊಡುವೆ ಕೆಲದಿನಕೆ ಬಿಲ್ಲಾಳ ಸೋಮನ ಪುತ್ರ ಬೀರ ಮಾಳಿಂಗನನ್ನು
> ಮಿಡುಕುವದಿದುಚಿತವಲ್ಲಿಳೆಯೊಳಗೆ ನೀನಂದ
> ನುಡಿಯೆ ನಿಜಮಂತ್ರ ನಿಂದದ್ದೆ ಸುಕ್ಷೇತ್ರಮೇಣ್
> ಪಿಡಿದ ಮೃತ್ತಿಗೆ ನಿನಗೆ ಹೊನ್ನಾಗಲೆಂದು ಪಂಚಾಕ್ಷರಿಯ ಬೋಧಿಸಿದನು (೭-೫೭)

ಹೀಗೆ ಶಿಷ್ಯನಾಗಿ ಮಾಳಿಂಗರಾಯನನ್ನು ಪಡೆಯುವ ಆಶ್ವಾಸನೆಯನ್ನು ಶಿವನಿಂದ ಪಡೆದನು. ಶಿವಸಿದ್ಧ ಬೀರನಿಂದ ತನಗೆ ಅಪಾಯವಿದೆ ಎಂದು ತನ್ನ ತಂಗಿ ಗರ್ಭವತಿಯಾಗಿದ್ದಾಗಲೇ ಕೊಲ್ಲಲು ಕೃಷ್ಣ ಹಂಚಿಕೆ ಹಾಕಿ ವಿಫಲನಾಗಿ ಪುನಃ ಜ್ಯೋತಿಷಿಯಾಗಿ ಮಗು ಹುಟ್ಟಿದ ಸಮಯ ಸರಿಯಿಲ್ಲ ಎಂದು ತಂಗಿಯನ್ನು ನಂಬಿಸುತ್ತಾನೆ. ಸುರಾವತಿ ಮಗನನ್ನು ಅರಣ್ಯದಲ್ಲಿ ಬಿಟ್ಟು ಬರಲು ನಿಶ್ಚಯಿಸುತ್ತಾಳೆ. ಚಾರರು ತೊಟ್ಟಿಲನ್ನು ಕೊದಲಿಬನದ ಹಾಲಹೇವಲಿ ಹಳ್ಳಕ್ಕೆ ಹತ್ತಿರದ ವೃಕ್ಷದ ಕೆಳಗೆ ಇಟ್ಟು ಬಾವಿಯಲ್ಲಿ ನೀರನ್ನು ಕುಡಿದು ಬಂದು ನೋಡಲಾಗಿ ತೊಟ್ಟಿಲು ಇರುವುದಿಲ್ಲ. ಭಯದಿಂದ ರಕ್ತಕಾರಿ ಸಾಯುತ್ತಾರೆ. ಶಿವಪಾರ್ವತಿಯರು ಬ್ರಹ್ಮ ನಾರದರೊಂದಿಗೆ ಒಂದು ವಟವೃಕ್ಷದಲ್ಲಿ ನೇತಾಡುವ ತೊಟ್ಟಲಲ್ಲಿಯ ಮಗುವಿಗೆ ಶಿವಸಿದ್ಧ ಬೀರನೆಂದು ಹೆಸರಿಡುತ್ತಾರೆ. ಶಿವ ಪಾರ್ವತಿಯ ಹಾರೈಕೆಯಂತೆ ದೇವಗನ್ನೆಯರಿಗೆ ಹುಟ್ಟಿದ ಐದು ಹೆಣ್ಣು ಮಕ್ಕಳನ್ನು ಸಾಮಾಜಿಕ ಭೀತಿಯಿಂದ ತೆಪ್ಪದಲ್ಲಿ ಇಟ್ಟು ನದಿಯಲ್ಲಿ ತೇಲಿ ಬಿಡುತ್ತಾರೆ. ಮಕ್ಕಳಿಲ್ಲದ ಚಾಮರಾಯನಿಗೆ ಶಿಶುಗಳು ದೊರಕಲು ಪ್ರೀತಿಯಿಂದ ಸಾಕತೊಡಗಿದನು. ಅವರು ಬೆಳೆದು ದೊಡ್ಡವರಾದ ಮೇಲೆ ಹಾಲಹೇವಲಿ ಹಳ್ಳದ ದಡದಲ್ಲಿ ಮಗುವಿನ ಅಳುವಿನ ಧ್ವನಿ ಕೇಳಿ ಮಗು ತನಗೆ ಬೇಕು ನನಗೆ ಬೇಕು ಎಂಬ ಚರ್ಚೆ ನಡೆಯಲು ಮೊದಲು ಮಗು ಯಾರ ಉಡಿಯಲ್ಲಿ ಬೀಳುತ್ತದೆಯೋ ಅವರಿಗೆ ಆ ಮಗು ಸೇರಿದ್ದು ಎಂದು ತೀರ್ಮಾನಿಸುತ್ತಾರೆ. ಆ ಮಗು ಅಕ್ಕಮ್ಮನ ಉಡಿಯಲ್ಲಿ ಬೀಳುತ್ತದೆ.

ಎಂಟನೆಯ ಸಂಧಿಯು ೬೫ ಪದ್ಯಗಳನ್ನು ಒಳಗೊಂಡಿದೆ. 'ಶಿವಸಿದ್ಧ ಬೀರೇಶ್ವರ ಚರಿತ್ರವು' ಎಂಬ ಶೀರ್ಷಿಕೆಯನ್ನು ಹೊಂದಿದೆ. ಖೇಚರನ ಹೇಳಿಕೆಯಂತೆ ಅಕ್ಕಮ್ಮ ಕುರಿಯ ಕೊರಳ ಮೊಲೆ ಹಾಲನ್ನು ಕುಡಿಸಿ ಶಿವಸಿದ್ಧ ಬೀರೇಶನನ್ನು ಬೆಳೆಸುತ್ತಾಳೆ. ರೇವಣಸಿದ್ಧ ಪಂಚಾಕ್ಷರೀ ಮಂತ್ರ ಬೋಧಿಸಿ ಲಿಂಗದೀಕ್ಷೆ ನೀಡುತ್ತಾನೆ. ಬೀರಪ್ಪ ಹಠ ಹಿಡಿದು ಅಕ್ಕಮ್ಮನಿಂದ ಚೆಂಡು ಪಡೆಯುತ್ತಾನೆ. ಆಟ ಆಡುವ ಸಮಯದಲ್ಲಿ ಬಾಲಕನೋರ್ವನಿಗೆ ತಗುಲಿ ಸಾಯಲು ಅವನನ್ನು ವಿಭೂತಿ ಲೇಪಿಸಿ ಬದುಕಿಸುತ್ತಾನೆ. ಮಂಡಲಗಿರಿಯ ಜನ ಹಿಂಬಾಲಿಸಲು ಬೆಳ್ಳಿಗುತ್ತಿಗೆ ಬಂದು ಸರ್ಪಾಕೃತಿಯಾಗಿ ಹುತ್ತಿನೊಳಗೆ ಹೋಗುತ್ತಾರೆ. ಅಕ್ಕಮ್ಮ ಮತ್ತು

ಬೀರಪ್ಪ ಹುತ್ತಿನಿಂದ ಹೊರಬಂದ ನಂತರ ಆ ಸ್ಥಳ ನಾಗರಾಣಾ ಗ್ರಾಮವಾಗಲಿ ಎಂದು ಹರಸಿದರು. ಅಕ್ಕಮ್ಮನೊಡನೆ ಹಠಮಾಡಿ ಬಿಲ್ಲನ್ನು ಪಡೆದು ನೀರು ತರುವ ಏಳ್ನೂರು ತರುಣಿಯರ ತುಂಬಿದ ಕೊಡಗಳಿಗೆ ಬಾಣ ಬಿಡಲು ಕೊಡಗಳು ತೂತು ಬಿದ್ದವು. 'ತಂದೆ ತಾಯಿ ಕಾಣದ ಪರಮ ನೀಚನೆ' ಎಂದು ಬೈದ ತರುಣಿಯರ ಮಾತುಗಳಿಂದ ನೊಂದ ಬೀರಣ್ಣ ತನ್ನ ಪೂರ್ವ ವೃತ್ತಾಂತವನ್ನು ಅಕ್ಕಮ್ಮಳಿಂದ ತಿಳಿಯುತ್ತಾನೆ. ಅವನ ಬಾಲ್ಯದ ತುಂಟಾಟವನ್ನು ಹೀಗೆ ವರ್ಣಿಸಲಾಗಿದೆ.

ಬರದಿ ಬೈಲಿಗೆ ಬಂದು ನಿರ್ತರುವ ಏಳ್ನೂರು
ತರುಣಿಯರ ತುಂಬಿದ ಕೊಡಕ್ಕೆ ಬಾಣವನೆಸೆದು
ಲುಕಿ ಛಿದ್ರ ಬೀಳಲವರತಿ ಕೋಪದಿಂ ನಿಂದು ಜನನಿ ಜನಕರ ಕಾಣದ (೮-೩೨)

ಸಹೋದರ ಮಾವ ಕೃಷ್ಣನ ಮನೆಯಿಂದ ಕನ್ನಿಕಾಮಾಲೆಯನ್ನು ತರುವುದಾಗಿ ಪ್ರತಿಜ್ಞೆ ಮಾಡಿ ವೈಕುಂಠಪುರದತ್ತ ಹೊರಡುತ್ತಾನೆ. ಬಳೆಗಾರನ ವೇಷ ತಳೆದು ತರುಣಿ ಕನ್ನಿಕಾಮಾಲೆಯನ್ನು ಕಂಡು ನಡೆದ ವಿಷಯ ತಿಳಿದು ನಾಳೆ ಶಿವಸಿದ್ಧಬೀರೇಶನನ್ನು ಕರೆತರುವುದಾಗಿ ತಿಳಿಸುತ್ತಾನೆ. ಮರುದಿನ ಸಿಂಪಿಗನ ವೇಷಧಾರಿಯಾಗಿ ನಿನ್ನನ್ನು ಕರೆದೊಯ್ಯಲು ಬಂದಿರುವುದಾಗಿ ತಿಳಿಸಿ ಗುರುಸ್ಮರಣೆ ಮಾಡುತ್ತಾನೆ. ದೇವತೆಗಳು ಪ್ರತ್ಯಕ್ಷರಾಗಿ ಗಂಧರ್ವರು ಸುರಗಿಸುತ್ತಿ ವಧು ವರರಿಗೆ ಕಂಕಣಕಟ್ಟಿ ಮಂಗಲ ಸೂತ್ರವನ್ನು ಕಟ್ಟಿಸಿ ಪಂಚವರ್ಣದ ಕುದುರೆಯ ಮೇಲೆ ಹೋಗೆಂದು ಹರಸಿದರು. ಶಿವಸಿದ್ಧಬೀರೇಶ ಕೃಷ್ಣನಿಗೆ ತನ್ನ ವೃತ್ತಾಂತವನ್ನು ತಿಳಿಸಿ ಅಶ್ವದ ಮೇಲೆ ಕುಳಿತು ಕನ್ನಿಕಾಮಾಲೆಯೊಂದಿಗೆ ಶಿವಪುರಕ್ಕೆ ನಡೆದನು.

ಒಂಭತ್ತನೆಯ ಸಂಧಿಯಲ್ಲಿ ೧೬೩ ಪದ್ಯಗಳಿವೆ. 'ಶಿವಸಿದ್ಧ ಬೀರೇಶ್ವರನ ಚರಿತ್ರೆ' ಎಂಬ ಶೀರ್ಷಿಕೆಯನ್ನು ಹೊಂದಿದೆ. ನಾಲ್ಕು ಲೋಕಗಳನ್ನು ಪಾಲಿಸುವ ಶಿಷ್ಯನನ್ನು ದಯಪಾಲಿಸು ಎಂದು ಬೀರಪ್ಪ ಶಿವನಲ್ಲಿ ಕೇಳಿಕೊಳ್ಳಲು ವೀರಮಾಳಿಂಗರಾಯನನ್ನು ಶಿಷ್ಯನನ್ನಾಗಿ ನೇಮಿಸುತ್ತಾನೆ. ತುಕ್ಕಪ್ಪರಸ ಮತ್ತು ಕಾನಾಬಾಯಿಯವರ ಮಗನಾಗಿ ವೀರಮಾಳಿಂಗರಾಯ ಜನಿಸುತ್ತಾನೆ. ತರುವಾಯ ರೇವಣಸಿದ್ಧರು 'ಮಾಳಿಂಗ ನೀನು ಸುಜ್ಞಾನಿಯಾಗು ಪ್ರಜೆಗಳಿಗೆ ಅರಸನಾಗು ಶಿವಸಿದ್ಧ ಬೀರನಿಗೆ ಪರಮ ಶಿಷ್ಯನಾಗು ನೀನು ನುಡಿದಿದ್ದೆಲ್ಲಾ ದಿಟವಾಗಲಿ' ಎಂದು ಹರಸಿ ಕೊಲ್ಲಿಪಾಕಿಯ ಸೋಮಲಿಂಗದಲ್ಲಿ ಐಕ್ಯವಾದರು.

ಕೊಲ್ಲಿಪಾಕಿಯಿಂದ ಹಾಲ್ಬಾವಿ ಗ್ರಾಮಕ್ಕೆ ಬಂದಾಗ ಅಲ್ಲಿ ಹೆಂಡದ ದೇವಮ್ಮನನ್ನು ಹೊನ್ನದೇವಮ್ಮಳಾಗುವಂತೆ ಮಾಳಿಂಗರಾಯ ಆಶೀರ್ವದಿಸಲು ಶ್ರೀಮಂತಳಾಗುತ್ತಾಳೆ. ಹಣದ ಮದದಿಂದ ಅಹಂಕಾರಿಯಾದ ದೇವಮ್ಮನಿಗೆ ಶಿವಸಿದ್ಧ ಬೀರೇಶ ಶಾಪವೀಯಲು ಮೊದಲಿನಂತೆ ಹೆಂಡದ ದೇವಮ್ಮಳಾದಳು. ಹಾದಿಯಲ್ಲಿ ಬರುವಾಗ ಗುರುಶಿಷ್ಯರಿಬ್ಬರು ಕೂಡಿ ಮದವೇರಿದ ಕೋಣವನ್ನು ಕೊಂದರು. ಕೋಣ ಬಿದ್ದಲ್ಲಿ ಕೋಣಗನೂರು ಆಗಲೆಂದು ಮುಂಡಬಿದ್ದಲ್ಲಿ ಮುಂಡಗನೂರು ಆಗಲೆಂದು ಹರಸಿದರು. ಶಿಷ್ಯನ ಪ್ರತಿಭೆಯನ್ನು ಪ್ರಪಂಚಕ್ಕೆ ತೋರಿಸಲು ಕಪ್ಪೆ ಕಲಕದ ಜಲ ಪುಳ ಮುಟ್ಟದ ಪುಷ್ಪಗಳನ್ನು ತಂದು ಪೂಜಿಸಲು ಆಜ್ಞೆ ಮಾಡಿದನು.

ಆಜ್ಞಾಪಾಲಕನಾದ ಮಾಳಿಂಗರಾಯನು ಪಾಂಡ್ರಕೋಟೆಯ ದಾರಿಯಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಯಿತು. ಹೆದರದೆ ಬಂದ ವಿಪತ್ತುಗಳನ್ನು ಎದುರಿಸಿ ಗುರುವಿನ ಪೂಜೆ ಪೂರೈಸ ಬೇಕೆನ್ನುವಷ್ಟರಲ್ಲಿ ಬೀರಪ್ಪ ಸರ್ಪಾಕೃತಿಯಾಗಿ ಹುತ್ತಿನಲ್ಲಿ ಸೇರಿಕೊಳ್ಳುತ್ತಾನೆ.

ನಂಬಿಗೆಯ ಬಾವದಿಂದತ್ತಿತ್ತ ಶೋಧಿಸ
ಲ್ಕಿಂಬಾದ ಸ್ಥಲದ ಗುರು ಕೂತಿರಲು ಮಾಳಿಂಗ
ಬೆಂಬಿಡದೆ ಬರುವದಂ ತಿಳಿದು ಸರ್ಪಾಗಿ ಹುತ್ತಿನ ಮಧ್ಯದೊಳು ಪೊಕ್ಕನು
ಕಂಬಳಿಯ ಬೀಸುತ್ತ ಕರೆಕರೆದು ಬೇಸರದೊ
ಳಂಬಿಕಾ ವಲ್ಲಭನೆನಿಸುತ್ತ ವೃಕ್ಷನಿ ಕು
ರುಂಬಮಂದಾಂಟಿ ಹುತ್ತಿಗೆ ಬಂದು ನಿಂತವಳ ಸೇರಿರ್ದುದಂತಿಳಿದನು (೬-೧೩೧)

ಮಾಳಿಂಗರಾಯ ಕಂಬಳಿ ಬೀಸಿ ಬೀಸಿ ಸುಸ್ತಾದರೂ ಗುರು ಹೊರಬಾರದ್ದನ್ನು ತಿಳಿದು ಧ್ಯಾನಿಸಲು ಪ್ರಾರಂಭಿಸುತ್ತಾನೆ. ಗುರು ಶಿವಸಿದ್ಧ ಬೀರೇಶ ಪ್ರತ್ಯಕ್ಷನಾಗಿ ಶಿಷ್ಯನಿಂದ ಪೂಜೆಗೊಂಡು ಪರಮ ಶ್ರೇಷ್ಠ ಶಿಷ್ಯ ಎಂದು ಹರಸುತ್ತಾನೆ. ಗುರು ಅಪ್ಪಣೆಯಂತೆ ದೇಶ ಸಂಚಾರ ಮಾಡುತ್ತ ಹಲವಾರು ಪವಾಡಗಳನ್ನು ಮಾಡಲು ಅವನ ಪ್ರಸಿದ್ಧ ಪ್ರಭಾವ ದಿನದಿಂದ ದಿನಕ್ಕೆ ಹೆಚ್ಚುತ್ತದೆ. ಇದನ್ನು ಸಹಿಸದವರು ಮಾಳಿಂಗರಾಯನನ್ನು ಕೊಲ್ಲಲು ಪ್ರಯತ್ನಿಸುತ್ತಾರೆ. ಗುರು ಬೀರದೇವರ ಆಶೀರ್ವಾದದಿಂದ ಎಲ್ಲವೂ ನಿವಾರಣೆಯಾಗುವದು. ಶಿವನ ಇಚ್ಛೆಯಂತೆ ಶಿವಸಿದ್ಧ ಬೀರೇಶ್ವರ, ಅಕ್ಕಮ್ಮ, ಕನ್ನಿಕಾಮಾಲೆ ಮತ್ತು ಮಾಳಿಂಗರಾಯ ಎಲ್ಲರೂ ಸೇರಿ ಕೈಲಾಸಕ್ಕೆ ನಡೆಯುತ್ತಾರೆ. ಇದು ಈ ಕೃತಿಯ ಕಥಾಸಾರ.

ಕಥಾನಾಯಕರು ಕೈಲಾಸದಿಂದ ಭೂಲೋಕಕ್ಕೆ ಭೂಲೋಕದಿಂದ ಕೈಲಾಸಕ್ಕೆ ಓಡಾಡುತ್ತಾ ಶಿವನೊಂದಿಗೆ ನಿರಂತರವಾಗಿ ಒಡನಾಟವನ್ನು ಹೊಂದಿದ್ದಾರೆ. ಜನ್ಮಾಂತರದಲ್ಲಿ ಪವಾಡಗೈಯ್ಯುವ ನಾಯಕರ ಹೋರಾಟ ಅಸಾಮಾನ್ಯವಾಗಿದೆ. ಕೈಲಾಸ-ಭೂಲೋಕ, ದೇವ-ಮಾನವ ಇತ್ಯಾದಿಗಳಲ್ಲಿ ಅಂತರ ಕಡಿಮೆಯಾಗಿದೆ. ಎನ್.ಬಿ. ತೋಂಟಾಪುರ ಅವರ ಗದ್ಯ ಕೃತಿಯಲ್ಲಿ ಮಾಳಿಂಗರಾಯ ಸತ್ತ ಕುರಿಯನ್ನು ಬದುಕಿಸಿ ಬಸವಣ್ಣನ ಪ್ರೀತಿಗೆ ಪಾತ್ರನಾಗುತ್ತಾನೆ. ತಗರ ಪವಾಡದಲ್ಲಿ ಶಾಂತಮುತ್ತಯ್ಯ ಕಲ್ಯಾಣದಲ್ಲಿ ಸತ್ತ ತಗರನ್ನು ಬದುಕಿಸುತ್ತಾನೆ. ಸಿದ್ಧಮಂಕ ಚರಿತೆಯಲ್ಲಿ ಮಂಕಯ್ಯ ತಪಸ್ಸಿನಿಂದ ತನ್ನ ಜನಾಂಗದ ಉಳಿವಿಗಾಗಿ ಹೋರಾಡುತ್ತಾನೆ. ಹೀಗೆ ಹಾಲುಮತವು (ಕೆಳವರ್ಗ) ಅಲಕ್ಷಕ್ಕೊಳಗಾದ ಸಂದರ್ಭದಲ್ಲಿ ತಮ್ಮ ಧ್ವನಿಯನ್ನು ಇತರೆ ಸಮುದಾಯದವರಿಗೆ ತಲುಪಿಸಲು ಪ್ರಯತ್ನಿಸಿದ್ದು ಗಮನಕ್ಕೆ ಬರುತ್ತದೆ. ಶಿವಪದ್ಮನ ಜನನವೂ ಸಹ ಸಿದ್ಧರಾಮನಂತೆ ಪವಾಡ ರೀತಿಯಲ್ಲಿ ಮುಪ್ಪಿನ ವಯಸ್ಸಿನ ತಂದೆ-ತಾಯಿಗಳಿಗೆ ಐದು ತಿಂಗಳಲ್ಲಿ ಆಗುತ್ತದೆ. ಹಾಲುಮತೋತ್ತೇಜಕ ಪುರಾಣದಲ್ಲಿ ಅನೇಕ ಸ್ತ್ರೀ ಪಾತ್ರಗಳು ಪುರುಷ ಪಾತ್ರಗಳಿಗೆ ಪೂರಕವಾಗಿವೆ.

ಮೂರಡಿಯ ಕಂತೆ, ಕಂಬಳಿ ಗದ್ದುಗೆ, ಡೊಳ್ಳು ತಯಾರಿಕೆ ಮೊದಲಾದವು ಹಾಲುಮತ ಸಂಸ್ಕೃತಿಯನ್ನು ಕಟ್ಟಿಕೊಡುತ್ತವೆ. ಮಧ್ಯಕಾಲಿನ ಸಾಹಿತ್ಯದಲ್ಲಿ ಹಾಲುಮತ ಪುರಾಣಕೃತಿಗಳು ಅನಾಗರಿಕರೆಂದು ಹೊರದೂಡಲ್ಪಟ್ಟ ಹಾಲುಮತವು ಮಾನ್ಯತೆ ಪಡೆಯಲು ನಡೆಸಿದ ಹೋರಾಟವನ್ನು ಪ್ರತಿಬಿಂಬಿಸುತ್ತವೆ. ಅಲಕ್ಷ್ಯಕ್ಕೊಳಗಾದ ಮತ ತನ್ನ ಸ್ಥಾನಮಾನಗಳನ್ನು ಪುನಃ ಪಡೆದು ಶರಣರೊಂದಿಗೆ ಸೌಹಾರ್ದ ಜೀವನ ನಡೆಸಿದುದನ್ನು ಗುರುತಿಸಬಹುದು.

ಎನ್.ಬಿ.ತೋಂಟಾಪುರ, ಎಫ್.ಟಿ.ಹಳ್ಳಿಕೇರಿ, ನಿಂಗಣ್ಣ ಸಣ್ಣಕ್ಕಿ ಮೂವರು ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣವನ್ನು ಪರಿಷ್ಕರಿಸಿದ್ದಾರೆ. ಎನ್.ಬಿ.ತೋಂಟಾಪುರ ಅವರು ೧೯೯೨ರಲ್ಲಿ ಬೆಂಗಳೂರಿನ ಶಿವಪದ್ಮ ಪ್ರಕಾಶನದಿಂದ ಗದ್ಯರೂಪದ ಕೃತಿಯನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಶಾಂತಮುತ್ತಯ್ಯನ ಪ್ರಸ್ತಾಪವಿಲ್ಲ.

ಡಾ. ಎಫ್.ಟಿ.ಹಳ್ಳಿಕೇರಿ ಅವರು ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ೨೦೦೮ರಲ್ಲಿ ಪ್ರಕಟಿಸಿದ್ದಾರೆ. ಪ್ರತಿ ಸಂಧಿಯು ಸರಳಾನುವಾದದೊಂದಿಗೆ ಕಾವ್ಯಭಾಗ, ಕವಿಯ ಇತಿವೃತ್ತ, ಕೃತಿಸ್ವರೂಪ, ಕೃತಿ ವಿಶೇಷತೆ, ಕೃತಿ ಪರಿಷ್ಕರಣೆ ಮೊದಲಾದ ವಿವರಗಳನ್ನು ಚರ್ಚಿಸಲಾಗಿದೆ. ಈ ಕೃತಿಯು ಕನ್ನಡ ಸಾಹಿತ್ಯ ಪರಿಷತ್ತಿನ 'ದತ್ತಿ' ಪ್ರಶಸ್ತಿಗೆ ಪುರಸ್ಕೃತವಾಗಿದೆ. ಡಾ. ನಿಂಗಣ್ಣ ಸಣ್ಣಕ್ಕಿ ೨೦೦೮ರಲ್ಲಿ ಗದುಗಿನ ವಿದ್ಯಾನಿಧಿ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಕೃತಿಯು ಕಾವ್ಯದೊಂದಿಗೆ ಸಂಕ್ಷಿಪ್ತ ಕವಿಯ ಇತಿವೃತ್ತ ವಿಚಾರವನ್ನು ವಿವರಿಸುತ್ತದೆ.

೪. ಹಾಲುಮತದ ಪುರಾಣ (೧೯೧೦)

ಬಂಕಾಪುರದ ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರು ಈ ಕೃತಿಯನ್ನು ೧೯೧೦ರಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಲಕ್ಷ್ಮೇಶ್ವರದಲ್ಲಿ ನಡೆದ 'ಹಾಲುಮತ ಧಾರ್ಮಿಕ ಮಹಾಸಭೆ'ಯಲ್ಲಿ ಉಚಿತವಾಗಿ ಈ ಕಾವ್ಯವನ್ನು ಹಂಚಿರುವದು ತಿಳಿಯುತ್ತದೆ. 'ಹಾಲುಮತ ಪುರಾಣ' ಕೃತಿಯನ್ನು ತಾಡೋಲೆಯಿಂದ ಅಭ್ಯಸಿಸಿ ಬರೆದಿರುವುದಾಗಿ ಕವಿ ತಿಳಿಸಿದ್ದಾರೆ. ತಾಡೋಲೆ ದೊರೆಯದ ಕಾರಣ ಮೂಲ ಕರ್ತೃವಿನ ಬಗೆಗೆ ಯಾವ ಮಾಹಿತಿ ತಿಳಿಯುವುದಿಲ್ಲ.

ಈ ಕೃತಿಗೆ 'ಹಾಲುಮತ ಪುರಾಣ'ವು ಎಂದು ಹಳ್ಳವಳ್ಳಿ ಅವರು ಕರೆದಿದ್ದಾರೆ. ಆದರೆ ಕಾವ್ಯದ ಕೊನೆಯಲ್ಲಿಯ ಉಲ್ಲೇಖದಿಂದ ಇದು

ಮರಳುಸಿದ್ಧನಯನ ವರಚರಿತವ ಕೇಳೆ
ಹರನೊಲಿವನು ಕರುಣದಿ
ಕುರುಬರ ಕಥೆಯೆಂದು ಜರಿಯಲು ಬೇಡ
ಮರುಳಸಿದ್ಧಯ್ಯ ತಾ ಕುರುಬ (೫-೧೦೭)

'ಮರುಳಸಿದ್ಧನ ಚರಿತೆ' ಎಂದೂ ಇವನು ಜಾತಿಯಿಂದ ಕುರುಬನೆಂದೂ ತಿಳಿಯಬಹುದು. ಈ ಕಾವ್ಯವು ೧೯೯೯ರಲ್ಲಿ ಕೆಲವು ತಿದ್ದುಪಡಿಗಳಿಂದ ಪುನಃ ಮುದ್ರಣಗೊಂಡಿದ್ದು ತನ್ನ ಜನಪ್ರಿಯತೆಯನ್ನು ತಿಳಿಸುತ್ತದೆ. ಐದು ಸಂಧಿ ಹೊಂದಿದ್ದು ೪೧೫ ಸಾಂಗತ್ಯ ಪದ್ಯಗಳನ್ನು ಹೊಂದಿದೆ.

ಹಾಲುಮತದ ಪರಂಪರೆಯನ್ನು ತಿಳಿಸುವ ಕಾವ್ಯವಾಗಿದ್ದು ಜನಪದ ಹಾಲುಮತ ಮಹಾಕಾವ್ಯ 'ಸಿದ್ಧಮಂಕಚರಿತೆ', 'ತಗರ ಪವಾಡ' ಮೊದಲಾದ ಕೃತಿಗಳ ಮುಂದುವರಿಕೆಯಾಗಿದೆ.

ಪ್ರಾರಂಭದಲ್ಲಿ ಕವಿ ಗುರುವಿಗೆ ವಂದಿಸುತ್ತ
ಕರಿಯ ಕಂಬಳಿ ಕಂಥೆ ಕರದಲ್ಲಿ ಕಪ್ಪರ
ವರನಾಗ ಬೆತ್ತವ ಹಿಡಿದು
ದರಿಯ ಬ್ರಹ್ಮಾಂಡವ ಚರಿಸಿ ಭಿಕ್ಷವ ಕೇಳ್ವೆ
ಸರವೂರ ಸಿದ್ದೇಶ್ವರಗೆ ಶರಣು (೧-೩)

ಹೀಗೆ ಪ್ರಥಮ ಸಂಧಿಯನ್ನು ಪ್ರಾರಂಭಿಸುತ್ತಾನೆ. ನಂತರ ಕಥೆಯು ದೇವಲೋಕದತ್ತ ಸಾಗುತ್ತದೆ. ಮೊದಲನೆಯ ಸಂಧಿಯು ೪೫ ಪದ್ಯಗಳಿಂದ ಕೂಡಿದೆ. ಕೈಲಾಸದಲ್ಲಿ ಪಾರ್ವತಿ ಪರಮೇಶ್ವರ ಬೃಂಗಿಯ ವಿಷಯದೊಂದಿಗೆ ಭೂಲೋಕದಲ್ಲಿ ಶಿವಪಾರ್ವತಿಯರು ಕುರಿಯನ್ನು ಕಾಯ್ದು ಸಾಕಾದ ನಂತರ ಹುತ್ತದಲ್ಲಿ ಹೊಗಿಸಿ ಕೈಲಾಸಕ್ಕೆ ತೆರಳಿದ ವಿಷಯವನ್ನು ಹೊಂದಿದೆ.

ಕುರಿಯ ಹಿಂಡನು ಧರೆಯೊಳಗಿಟ್ಟು ಕೈಲಾಸ
ಗಿರಿಗೆ ಪೋದನು ಗೌರಿ ಸಹಿತ (೧-೪೩)

ಎರಡನೆಯ ಸಂಧಿಯು ೯೩ ಪದ್ಯಗಳನ್ನು ಹೊಂದಿದ್ದು ಸಿದ್ಧರಾಮನ ಹುಟ್ಟು, ಬಾಲ್ಯ ಶಿವನ ಪರೀಕ್ಷೆಯಲ್ಲಿ ಸಿದ್ಧರಾಮ ವಿಜಯಿಯಾದ ವಿಷಯವನ್ನು ಈ ರೀತಿಯಲ್ಲಿ ಗುರುತಿಸಬಹುದು.

ಮಲ್ಲಯ್ಯ ಮಲ್ಲಯ್ಯ ಮಲ್ಲಯ್ಯ ಎನುತಲಿ
ಅಲ್ಲಲ್ಲಿ ಕರೆದು ಬಳಲಿದನು
ನಿಲ್ಲದೆ ಕೋಡು ಕಲ್ಲಿನ ಮರಿಯೊಳು ಬೀಳಲು
ಮಲ್ಲಯ್ಯ ಕರವ ಹಿಡಿದಾನು (೨-೯೫)

ಮೂರನೆಯ ಸಂಧಿಯು ೧೦೦ ಪದ್ಯಗಳಿಂದ ಕೂಡಿದೆ. ಶಿವನು ಮರುಳಸಿದ್ಧನಿಗೆ ಹನ್ನೆರಡು ಸೂಜಿ, ಹನ್ನೆರಡು ಡಬ್ಬಣ ಕೊಟ್ಟು "ಭೂಮಿಯನ್ನು ತೂಗುತ್ತಾ ಹೋಗು, ಎಲ್ಲಿ ಭೂಮಿ ಒಂದು ಗುಂಜಿ ಹೆಚ್ಚಾಗುವುದೋ ಅಲ್ಲಿ ತಪೋಧರನಾಗು" ಎಂದು ತಿಳಿಸುತ್ತಾನೆ. ಸಿದ್ಧರಾಮನು ಶಿವನಿಂದ 'ಮರುಳಸಿದ್ದೇಶ' ಎಂಬ ಹೊಸ ಹೆಸರನ್ನು ಪಡೆದು

ತೂಗುತ ಬರಲು ಧರೆಯೊಳಗೆ
ತೂಗುಡ್ಡವೆಂಬಾ ಸ್ಥಳದಲ್ಲಿ
ತೂಗಿ ನೋಡಲು ಭೂಮಿಯ ತೂಕ ವೆಗ್ಗಳವಾಗಿ
ಜಾಗ ಮಾಡಿದ ಸ್ಥಲವಾ (೩-೧೨)

ತೂಗುಡ್ಡದಲ್ಲಿ ತಪಸ್ಸನ್ನು ಪ್ರಾರಂಭಿಸುತ್ತಾನೆ. ನಂತರದ ಕಥೆ ೧೬ನೇ ಪದ್ಯದಿಂದ ಕುರುಬರ ಮೂಲ ಪುರುಷ ಆದಿಗೊಂಡ ಮತ್ತು ಆತನ ಆರು ಜನ ಮಕ್ಕಳ ವಿಷಯವನ್ನೊಳಗೊಂಡಿದೆ.

ನಾಲ್ಕನೇ ಸಂಧಿಯು ೬೧ ಪದ್ಯಗಳನ್ನು ಹೊಂದಿದೆ. ಆದಿಗೊಂಡನ ಮಗ ಪದ್ಮಣ್ಣನ ಹಿರಿಯ ಹೆಂಡತಿ ಸಿದ್ದಮ್ಮ ಕಿರಿಯ ಹೆಂಡತಿ ಚನ್ನಮ್ಮರ ವಿಷಯದೊಂದಿಗೆ ಅವರ ವಂಶಾಭಿವೃದ್ಧಿ, ಹತ್ತಿಕಂಕಣ ಮತ್ತು ಉಣ್ಣೆ ಕಂಕಣದ ವಿಷಯವನ್ನೊಳಗೊಂಡಿದೆ. ಸಿದ್ಧಮಂಕನ ತಪಸ್ಸಿನ ತೀವ್ರತೆಯು ಹೀಗಿದೆ.

ಹುತ್ತ ಮೈಯೊಳಗಿಕ್ಕಿ ಬೆತ್ತ ಬೆಳ್ಳಿಯು ಹಬ್ಬಿ
ವೆತ್ತ ಗೀಜಗನ ಮನೆಮಾಡಿ
ಕತ್ತಲು ಹಗಲು ಎಂದರಿಯದೆ ತಪಸನು
ವಿಸ್ತರಿಸುವದಳಲ್ಲ (೪-೫೫)

ಐದನೆಯ ಸಂಧಿಯಲ್ಲಿ ೧೧೦ ಪದ್ಯಗಳಿವೆ. ಸಿದ್ಧಮಂಕ ತೂಗುಡ್ಡದಲ್ಲಿ ಕಠಿಣವಾದ ತಪಸ್ಸನ್ನು ಮಾಡಲು ವಿಷಯವನ್ನು ನಾರದನಿಂದ ಶಿವಪಾರ್ವತಿಯರು ತಿಳಿದು ನೋಡಲು ಬಂದರು. ಮರುಳಸಿದ್ಧೇಶನು ಶಿವಪಾರ್ವತಿಯರಿಂದ ತನ್ನನ್ನು ಹಾಲುಮತಕ್ಕೆ ಒಡೆಯನನ್ನಾಗಿ ಮತ್ತು ಸಣ್ಣ ಅಪರಾಧಕ್ಕಾಗಿ ಕಲ್ಯಾಣದಿಂದ ಹೊರಹಾಕಲ್ಪಟ್ಟ ಕುರುಬರಿಗೆ ಪುನಃ ಪ್ರವೇಶ ದೊರೆಯುವಂತೆ ಅನುಮತಿ ಪಡೆದನು. ರೇವಣಸಿದ್ಧನು ಸತ್ತ ತಗರನ್ನು ಬಸವಾದಿ ಪ್ರಮುಖರ ಸಮ್ಮುಖದಲ್ಲಿ ಬದುಕಿಸಿ ಕಲ್ಯಾಣವನ್ನು ಪ್ರವೇಶಿಸುತ್ತಾನೆ.

ಹೊಂದಿಸಿ ಕಟ್ಟಿದ ಇಂದಿನ ಪದವೆಲ್ಲ
ಅಂದು ಕಲ್ಯಾಣದಲ್ಲಿ ಬಸವ
ಬಂದಂದು ಗೆಲಿದ ಪವಾಡದ ಕಥೆಯಿದು
ಸಂಧಿ ಐದಾಯಿತು ಶರಣು (೫-೧೧೯)

ಎಂದು ಕವಿಯು ಕಾವ್ಯವನ್ನು ಮುಕ್ತಾಯಗೊಳಿಸುತ್ತಾನೆ.

ಈ ಕೃತಿಯು ಸಿದ್ಧಮಂಕ ಚರಿತೆ ಮತ್ತು ತಗರ ಪವಾಡಗಳೊಂದಿಗೆ ಸಾಮ್ಯತೆ ಹೊಂದಿದ್ದರೂ ಸಿದ್ಧಮಂಕ ಚರಿತೆಯ ಪ್ರತಿಕೃತಿಯಂತಿದೆ. ಹಾಲುಮತೋತ್ತೇಜಕ ಪುರಾಣವು ೧೯೧೨ರಲ್ಲಿ ಮುದ್ರಣಗೊಂಡಿದೆ. ಈ ಎಲ್ಲ ಕೃತಿಗಳಲ್ಲಿ ಕಲ್ಯಾಣದ ಪ್ರಸ್ತಾಪ ಬಂದಿದೆ.

ತಗರ ಪವಾಡದ ಶಾಂತಮುತ್ತಯ್ಯನಾಗಲಿ, ಸಿದ್ಧಮಂಕ ಚರಿತೆಯ ಹೆಗ್ಗಗೌಡನಾಗಲಿ ಈ ಕೃತಿಯಲ್ಲಿ ಬರುವುದಿಲ್ಲ. ಇಲ್ಲಿ ರೇವಣಸಿದ್ಧ ತಗರನ್ನು ಬದುಕಿಸಿ ಕಲ್ಯಾಣದ ಪ್ರವೇಶ ಪಡೆಯುತ್ತಾನೆ. ಸಿದ್ಧಮಂಕನು ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸರೂರು ಗ್ರಾಮದವನು. ಅಲ್ಲಿಂದ ೨-೩ ಕಿ.ಮೀ. ದೂರದ ತೊಗುದ್ನದಲ್ಲಿ ಸಿದ್ಧಮಂಕ ತಪಸ್ಸು ಮಾಡಿದ ವಿಷಯವು ಸರೂರಿನ ಎರಡು ಶಾಸನಗಳಿಂದ ಮತ್ತು ಒಡೆಯರ ಹೇಳಿಕೆಗಳಿಂದ ತಿಳಿಯಬಹುದು.

'ಶೈವ'ದಿಂದ 'ವೀರಶೈವ' ಮತ್ತು 'ಭಂಡಾರ'ದಿಂದ 'ವಿಭೂತಿ'ಯತ್ತ ವಾಲುವ ಸಂಸ್ಕೃತಿಯನ್ನು ಇಲ್ಲಿ ಕಾಣಬಹುದು. ಕುಲಭೇದ ನಿರಾಕರಣೆಯನ್ನು ಬಸವಣ್ಣನ ಸಮ್ಮುಖದಲ್ಲಿ ಕುರುಬ ಕುಲ ಸಮಾನತೆಯ ಸ್ಥಾನಮಾನವನ್ನು ಕಾಯ್ದುಕೊಳ್ಳುವಲ್ಲಿ ಸಫಲವಾದುದನ್ನು ಗುರುತಿಸಲಾಗಿದೆ. ಆ ಮೂಲಕ ಕವಿ ತನ್ನ ಸೃಜನ ಶೀಲತೆಯನ್ನು ವ್ಯಕ್ತಪಡಿಸಲು ಈ ಕೃತಿಯು ಸಹಾಯಕವಾಗಿದೆ. ಒಟ್ಟಿನಲ್ಲಿ ಹಾಲುಮತದ ಇತಿಹಾಸ, ಸಂಸ್ಕೃತಿ ಪರಂಪರೆಯನ್ನು ತಿಳಿಸಲು ಈ ಕೃತಿ ರಚನೆಗೊಂಡಿದೆ.

೫. ಹಾಲುಮತದ ಪುರಾಣವು (೧೯೫೯)

ಈ ಕೃತಿಯ ಕರ್ತೃ ಚನ್ನಬಸವಶಾಸ್ತ್ರಿ. ಇವರು "ಧರೆಯೊಳ್ ದಾವಣಗೆರೆ ಪ್ರಾಂತದೋಳಿರುವ ಆವರಗೆರೆ ಹಿರೇಮಠದಾರ್ಯ ಚರವರರಗ್ರಜ ಗುರುಸಿದ್ಧಶರ್ಮರ ವರಸತಿ ಗಂಗಮ್ಮನವರ" ಸುಪುತ್ರನು ಅಂದರೆ ದಾವಣಗೆರೆ ಸಮೀಪದ ಆವರಗೆರೆ ಗ್ರಾಮದ ಹಿರೇಮಠದ ಗುರುಸಿದ್ಧಶರ್ಮ ಹಾಗೂ ಗಂಗಮ್ಮನವರ ಪುತ್ರನಾದ ಚನ್ನಬಸವಶಾಸ್ತ್ರಿಗಳು ಹಾಲುಮತ ಸಮುದಾಯದವರ ಅಪೇಕ್ಷೆಯ ಮೇರೆಗೆ 'ಹಾಲುಮತ ಪುರಾಣವು' ಕೃತಿಯನ್ನು ರಚಿಸಿದ್ದಾಗಿ ಕವಿ ಆರಂಭದ ಸಂಧಿಯಲ್ಲಿ ಹೇಳಿಕೊಂಡಿದ್ದಾನೆ.

ಇವರು ವೀರಶೈವಾಚಾರ ದರ್ಪಣ, ಬೃಹತ್ ಶಿವಪೂಜಾವಿಧಿ, ಸಂಕ್ಷಿಪ್ತ ಶಿವ ಪೂಜಾವಿಧಿ, ಶ್ರೀಮದ್ವೇದ ವೇದಾಂತ ಶಾಸ್ತ್ರಾಂತರ್ಗತ ಶಬ್ದಸಾರ ಸಂಗ್ರಹ(ಸಂಕಲಿತ), ಆಯುರ್ವೇದ ಕೈಗನ್ನಡಿ ಒಂದು ಮತ್ತು ಎರಡನೆಯ ಭಾಗಗಳು(ಕಂದ ಪದ್ಯರೂಪ), ಜ್ಞಾನಮಾರ್ಗ ಪ್ರಶಂಸೆ(ಪ್ರಶ್ನೋತ್ತರ ರೂಪ), ಇಷ್ಟಲಿಂಗದ ಭಜನೆ, ಸ್ತೋತ್ರ ಗುರುಸ್ತವನಾದ್ಯನೇಕ ಹಾಡುಗಳು, ಆಧ್ಯಾತ್ಮ ಸಂಬಂಧವಾದ ಗದ್ಯಪದ್ಯಗಳು, ಕೋಳೂರು ಕೊಡಗೂಸಿನ ಚರಿತೆ (ಹಾಡಿನ ರೂಪ) ಭಕ್ತಿ ಜ್ಞಾನ ವೈರಾಗ್ಯಗಳಿಂದ ಕೂಡಿದ ಪದ್ಯಮಂಜರಿ, ಶಾಲಾಬಾಲಕರಿಗೆ ಉಪಯುಕ್ತವಾಗಿರುವಂತೆ ಪ್ರಭುವಿಜಯ ಚರಿತ್ರೆ, ನಾಟಕ, ಜಾತಕ ಫಲ, ಜ್ಯೋತಿಷ್ಯ ಸಂಗ್ರಹ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಸವಿವರರಾದ ಕವಿ ಪರಿಚಯವನ್ನು ಬಳ್ಳಾರಿಯ ವೀರಶೈವ ಕಾಲೇಜಿನ ಪ್ರಿನ್ಸಿಪಾಲರಾದ ದಂ. ಮರಿಯಪ್ಪನವರು ತಿಳಿಸಿದ್ದಾರೆ. ಎನ್.ಕರಿಬಸವಯ್ಯ ಅವರು ಈ ಪುರಾಣ ಕುರಿತು ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಅರಿಯಲು ಶಾಲಿವಾಹನ ಶಕೆಯೊಂದು ಸಾ

ವಿರದೆಂಟು ನೂರೆಪ್ಪತ್ತೆಂಟು

ವರುಷ ದುರ್ಮುಖಿಯರೊಳು ಮಾಘ ಶುದ್ಧದ

ವರಚತುರ್ದಶಿ ಬುಧವಾರ

ಮೇಲಿನ ಪದ್ಯದ ಪ್ರಕಾರ ಕೃತಿ ರಚನಾಕಾಲ ೧೯೫೬ರಲ್ಲಿ ಬುಧವಾರ ಪುಷ್ಯ ನಕ್ಷತ್ರದ ಶುಭ ಮಹೂರ್ತದಂದು ಬರೆಯಲ್ಪಟ್ಟಿದೆ. ಪ್ರಾರಂಭದ ಕಂದ ಪದ್ಯದಲ್ಲಿ ಕವಿ

ಸುಖಕಷ್ಟಗಳ ಸಮಸ್ಯೆಯ

ಯುಕುತಿನೊಳನುಭವಿಸಿ ಜನರ ಹಿತದೃಷ್ಟಿಯೊಳು

ಪ್ರಕಟಿಸಿಹ ಗ್ರಂಥವೋದಲು

ಸುಖ ನಿಮಗಹುದವರ ಶ್ರಮವು ಸಾರ್ಥಕವಹುದೈ

ಕಂತೆ ಪುರಾಣವೆಂದು ನಿರ್ಲಕ್ಷಿಸದೆ, ಸಂತೋಷದಿಂದ ಓದಿದರೆ ಕವಿಶ್ರಮ ಸಾರ್ಥಕವೆಂದು ತಿಳಿಸಿದ್ದಾರೆ. ಪಾಂಡಿತ್ಯ ಶಾಸ್ತ್ರಾನುಭವದ ಆಳ, ವಿನಯಶೀಲ ಲೋಕಾನುಭವ ಹೊಂದಿದ ಕವಿ ಅತಿಯಾದ ಶಬ್ದಾಡಂಭರ ವನ್ನು ಪ್ರದರ್ಶಿಸದೆ ಸರಳವಾದ ಮಾಧುರ್ಯವಾದ ಕಾವ್ಯವನ್ನು ರಚಿಸಿದ್ದಾರೆ. ಅತಿ ಕಡಿಮೆ ಪ್ರಮಾಣದಲ್ಲಿ ಭೂಕೈಲಾಸ ವರ್ಣನೆ ಮಾಡಿದ್ದಾರೆ. ಆದರ್ಶ ಕವಿಗಳ ಲಕ್ಷಣ ಮತ್ತು ಜವಾಬ್ದಾರಿಗಳನ್ನು ರೈತನ ಉದಾಹರಣೆಯ ಮೂಲಕ ವಿವರಿಸಿದ್ದಾರೆ.

ಈ ಕೃತಿಯು ೧೯೫೬ರಲ್ಲಿ ಬರೆಯಲ್ಪಟ್ಟರೂ ೧೯೫೯ರಲ್ಲಿ ದಾವಣಗೆರೆಯ ತಾಲೂಕಿನ ಚಿಕ್ಕಬೂದಿಹಾಳು ಗ್ರಾಮದ ಶ್ರೀಮದಭಿನವ ರೇಣುಕ ಗುರುಕುಲಾಶ್ರಮದಿಂದ ಪ್ರಕಟಗೊಂಡಿದೆ. ಸಾಂಗತ್ಯ ರೂಪದ ಕೃತಿಯಲ್ಲಿ ಹದಿನೈದು ಸಂಧಿಗಳಿದ್ದು ೧೬೨೯ ಪದ್ಯಗಳನ್ನು ಹೊಂದಿದೆ. ಕವಿಯು ಆರಂಭದಲ್ಲಿ ನಿಂದಕರ ಪ್ರಶಂಸೆ, ನೀತಿ ಪದ್ಯ, ಆತ್ಮ ತತ್ವಜ್ಞಾನ ಮೊದಲಾದ ವಿಚಾರಗಳನ್ನು ತಿಳಿಸುತ್ತದೆ. ಕಾವ್ಯದುದ್ದಕ್ಕೂ ವೀರಶೈವ ಪ್ರಭಾವ ಪ್ರಸರಿಸಿದೆ. ಪ್ರತಿ ಸಂಧಿಯ ಆರಂಭದಲ್ಲಿ ಕಥಾಸಾರವನ್ನು ತಿಳಿಸುವ ಪದ್ಯವಿದೆ.

ಮೊದಲ ಸಂಧಿಯು ೮೪ ಪದ್ಯಗಳನ್ನು ಹೊಂದಿದೆ. ಪ್ರಾರಂಭದಲ್ಲಿ ಕವಿ ಗುರು ದೇವತೆಗಳನ್ನು ಸ್ತುತಿಸಿದ್ದಾನೆ. ನಂತರ ಕೈಲಾಸದ ಶಿವ ಪಾರ್ವತಿಯರ, ಭೃಂಗಿಯ ಭೂಲೋಕದಲ್ಲಿ ಶಿವಮತೋದ್ಧಾರಕ್ಕಾಗಿ ಶ್ರೀ ರೇಣುಕ ಗಣಾಧೀಶ್ವರರು ಜನಿಸಲು ಶಿವನಿಂದ ಅಪ್ಪಣೆ ಮೊದಲಾದ ವಿಷಯವನ್ನೊಳಗೊಂಡಿದೆ.

ಎರಡನೆಯ ಸಂಧಿಯಲ್ಲಿ ೧೩೯ ಪದ್ಯಗಳಿದ್ದು ಶ್ರೀ ರೇವಣಸಿದ್ದೇಶ್ವರನ ಲಿಂಗಾವತಾರ ಮತ್ತು ಭುವನೋದ್ಧಾರ, ಸರೂರಿನ ಶಾಂತಮುತ್ತಯ್ಯನಿಗೆ ಲಿಂಗ ಪ್ರಧಾನೋಪದೇಶ ಮೊದಲಾದ ವಿಷಯಗಳನ್ನು ಗುರುತಿಸಬಹುದು. ೧೦೮ನೇ ಜಗದ್ಗುರು ರೇವಣಸಿದ್ಧರು ಶಾಂತಮುತ್ತಯ್ಯನಿಗೆ ಲಿಂಗದೀಕ್ಷೆಯನ್ನಿತ್ತು

ಬೋಧಿಸಿದನು. ಗುರುವಿನ ಅಪ್ಪಣೆ ಮೇರೆಗೆ ಶಾಂತಮುತ್ತಯ್ಯ ಕೊಲ್ಲಾಪುರದ ಕುಟಿಲ ಸಿದ್ಧರನ್ನು ನಿಗ್ರಹಿಸಿ ಬರುವಾಗ ಎದುರಾದ ಮುಂಡಾಸುರ ರಾಕ್ಷಸನನ್ನು ಮೂರು ಹೋಳಾಗಿಸಿ ಜ್ಞಾಪಕಾರ್ಥವಾಗಿ ಮುರುಡಿನ ಕಂಥೆ ಎಂಬ ಬಿರುದನ್ನು ಗುರುವಿನಿಂದ ಪಡೆಯುತ್ತಾನೆ. ಶಿಷ್ಯರ ಮೇಲೆ ದಂಡನ ಖಂಡನಾದಿಗಳನ್ನು ನಡೆಸಬೇಕಾದ ಕಾರಣ ಹಾಲುಮತದವರಿಗೆಲ್ಲಾ 'ಒಡೆಯರು' ಎನ್ನುವ ಪ್ರತೀತಿ ಇರಲೆಂದು ಗುರು ರೇವಣಸಿದ್ಧ ಅನುಗ್ರಹಿಸಿದನು. ಶಾಂತಮುತ್ತಯ್ಯನ ವಂಶೀಯರಾದ ಒಡೆಯರನ್ನು 'ಮುರುಡಿನ ಕಂತೆಯ ಒಡೆಯರು' ಎಂದು ಕರೆಯುವ, ಶಾಂತಮುತ್ತಯ್ಯ 'ಕುರುಬರಲಟ್ಟಮತ ಶಾಸ್ತ್ರ' ಎಂಬ ಭವಿಷ್ಯಗ್ರಂಥ ರಚಿಸಿದ ವಿವರ ಚರ್ಚಿಸಲಾಗಿದೆ. ವಿಷಯ ಸ್ಪಷ್ಟತೆಗಾಗಿ ಈ ಪದ್ಯ ಉದಾಹರಿಸಲಾಗಿದೆ.

> ಕುರುಬರ ರಟ್ಟಮತಶಾಸ್ತ್ರ ಭವಿಷ್ಯವ
> ವಿರಚಿಸಿ ಮುತ್ತಯ್ಯ ತಾನು
> ಧರೆಗುಪಕಾರಮಂ ಮಾಡಿ ಮೆರೆದ ನೀಗ
> ಲೊರೆವರು ಆ ಶಾಸ್ತ್ರವನು (೨-೯೮)

ಮೂರನೆಯ ಸಂಧಿಯು ೧೩೯ ಪದ್ಯಗಳನ್ನೊಳಗೊಂಡಿದೆ. ಕೈಲಾಸದ ಒಡ್ಡೋಲಗದ ಪ್ರಸಂಗದಲ್ಲಿ ಮುನಿಶಾಪದಿಂದ ಭೂಲೋಕದಲ್ಲಿ ಆದಿಗೊಂಡ ಚುಂಚಲೆಯರ ಜನನವಾಗುತ್ತದೆ. ಅವರಿಗೆ ಗುರು ರೇವಣಸಿದ್ಧರ ಆಶೀರ್ವಾದದಿಂದ ಆರನೆಯ ಮಗನಾಗಿ ಶಿವಪದ್ಮನ ಜನನವಾಗುತ್ತದೆ.

ನಾಲ್ಕನೆಯ ಸಂಧಿಯು ೬೮ ಪದ್ಯಗಳನ್ನು ಹೊಂದಿದೆ. ಶಿವಪದ್ಮನ ಬಾಲ್ಯದ ಚೇಷ್ಟೆಗಳಿಂದ ಚಿನ್ನಾಟಗಳಿಂದ ತಂದೆ-ತಾಯಿ, ಬಂಧು-ಬಾಂಧವರ ಸಂಭ್ರಮ, ಸಡಗರ, ಮಗುವಿನ ನಾಮಕರಣ, ಜೋಗುಳ ಹಾಡುವ, ತೊಟ್ಟಿಲು ತೂಗುವ ಸಂಭ್ರಮ ಸಡಗರದ ವರ್ಣನೆಯಿದೆ.

ಐದನೆಯ ಸಂಧಿಯು ೧೧೬ ಪದ್ಯಗಳನ್ನು ಹೊಂದಿದೆ. ಶಿವಪದ್ಮನ ಮದುವೆ, ರೇವಣಸಿದ್ಧರು ಜಾಗ್ರತಿಪುರಕ್ಕೆ ಆಗಮಿಸಿ ಬಡವಿ ಗಂಗಮ್ಮಳ ಭಕ್ತಿಗೆ ಮೆಚ್ಚಿ ಅವಳಿಗೆ ಐಶ್ವರ್ಯ ಸಂಪತ್ತುಗಳನ್ನು ಅನುಗ್ರಹಿಸುವ, ಶಿವಪದ್ಮ ಜಿಂಕಾದೇವಿಯರಿಗೆ ಆಶೀರ್ವದಿಸಿ ಲಿಂಗವನ್ನಿತ್ತು ಕುರಿಕಾಯುವಂತೆ ತಿಳಿಸುವ ವಿಚಾರಗಳನ್ನೊಳಗೊಂಡಿದೆ.

ಆರನೆಯ ಸಂಧಿಯು ೧೧೬ ಪದ್ಯಗಳಿಂದ ಕೂಡಿದೆ. ನೂತನಪುರದರಸ ಗಂಗಾಧರ ರಾಜನಿಂದ ಕೊಲ್ಲಲ್ಪಟ್ಟ ಮಹರ್ಷಿ ಜಾಬಾಲನ ರಕ್ತದಿಂದ ಅಸಂಖ್ಯಾತ ಕುರಿಗಳು ಹುಟ್ಟುತ್ತವೆ. ದಿಗ್ಭ್ರಮೆಗೊಂಡ ರಾಜ ಕೆಲ ಸಮಯ ಕಾಯ್ದು ಬೇಸತ್ತು ರಾವುತರನ್ನು ನೇಮಿಸುತ್ತಾನೆ. ಅವರು ಬೇಸರಗೊಳ್ಳಲು ಮಂತ್ರಿ ಬ್ರಹ್ಮನ ನಂತರ ಪಾರ್ವತಿ ಮಗ ಗಣಪನೊಂದಿಗೆ ಕುರಿಕಾಯಲು ಪ್ರಾರಂಭಿಸುತ್ತಾಳೆ. ಚಂಚಲವಾದ ಕುರಿಗಳನ್ನು ಕಾಯ್ದು ಸುಸ್ತಾಗಿ ಮೂರು ಕಣ್ಣಿರುವ ಹುತ್ತದಲ್ಲಿ ಹೊಗಿಸಿ, ಗುರುತಿಗಾಗಿ ಮುತ್ತಿನ ಮೂಗುತಿ ಇಟ್ಟು ವೀರಭದ್ರನನ್ನು ಕಾವಲಿರಿಸುತ್ತಾಳೆ.

ಏಳನೆಯ ಸಂಧಿಯು ೭೩ ಪದ್ಯಗಳನ್ನು ಹೊಂದಿದೆ. ಶಿವಪದ್ಮನಿಗೆ ರೇವಣ್ಣನೆಂಬ ಮಗ ಹುಟ್ಟುತ್ತಾನೆ. ಸಹೋದರರ ಅಸೂಯಾಗುಣಕ್ಕೆ ಬೇಸತ್ತ ಶಿವಪದ್ಮ ಭೂಮಿಯನ್ನು ಊಳುವ ಸಮಯದಲ್ಲಿ ಹುತ್ತ ಒಡೆದು ನಾನಾ ಬಣ್ಣದ ಕುರಿಗಳು ಹೊರ ಬರುತ್ತವೆ. ಕುರಿಗಳನ್ನು ಮೇಯಿಸುತ್ತಾ ಮನೆಗೆ ಹೋಗದೆ ಕಾಡಿನಲ್ಲಿ ಅಲೆಯುತ್ತಾನೆ. ಸಹಾಯಕ್ಕಾಗಿ ಶಿವನನ್ನು ಧ್ಯಾನಿಸಲು ಪ್ರತ್ಯಕ್ಷಗೊಂಡ ಶಿವ ವೀರೇಶ್ವರನನ್ನು ನೇಮಿಸುತ್ತಾನೆ.

ಎಂಟನೆಯ ಸಂಧಿಯಲ್ಲಿ ೧೦೪ ಪದ್ಯಗಳಿವೆ. ಶಾಪಗ್ರಸ್ಥ ಮೂರು ಜನ ಗಂಧರ್ವರು ಕಾಗೆ, ಕಾಂಚಾಲಮರ ಮತ್ತು ಕುದಯರಕ್ಕಸಿಯಾಗಿ ಭೂಲೋಕದಲ್ಲಿ ಜನಿಸುತ್ತಾರೆ. ನಂತರ ಶಿವನಿಂದ ಶಾಪವಿಮೋಚನೆಯ ಆಶ್ವಾಸನೆ ಪಡೆಯುವರು. ರಾಕ್ಷಸಿಯ ಸರದಿ ಆಹಾರ ಪದ್ಧತಿಯಂತೆ ಜಾಗ್ರತಿಪುರದರಸನ ಮಗಳು ಚುಮಲಾದೇವಿಯನ್ನು ಕಾಡಿಗೆ ಒಯ್ಯುತ್ತಾಳೆ. ಕೊಲ್ಲದೆ ಕರುಣೆಯಿಂದ ಸಾಕತೊಡಗುತ್ತಾಳೆ. ಶಿವಪದ್ಮ ಗುರುವಿನ ಅಪ್ಪಣೆಯಂತೆ ಚುಮಲಾದೇವಿಯೊಡನೆ ಮಾತನಾಡಿ ಬರುತ್ತಾನೆ. ಗುರು ರೇವಣಸಿದ್ಧರನ್ನು ಶಿವಪದ್ಮ ಸ್ಮರಿಸಲು ಪ್ರಸನ್ನನಾದ ರೇವಣಸಿದ್ಧ ಕ್ಷೀರದಿಂದ ಗಣಸಮೂಹವನ್ನು ತೃಪ್ತಿಪಡಿಸುತ್ತಾನೆ. ಗುರುವಿನ ಅಪ್ಪಣೆಯೊಂದಿಗೆ ತೆಗೆದಿರಿಸಿದ ಪ್ರಸಾದವನ್ನು ಕೊಡಲು ಚುಮಲಾದೇವಿಯಲ್ಲಿಗೆ ತೆರಳುತ್ತಾನೆ.

ಒಂಭತ್ತನೆಯ ಸಂಧಿಯಲ್ಲಿ ೭೮ ಪದ್ಯಗಳಿವೆ. ಶಿವಪದ್ಮ ಉಪಾಯದಿಂದ ರಾಕ್ಷಸಿಯ ಪ್ರಾಣದ ನೆಲೆಯನ್ನು ತಿಳಿದು ಕಂಜಿವಾಳದ ಮರದ ಮೇಲಿನ ಕಾಗೆಯನ್ನು ಕೊಲ್ಲುತ್ತಾನೆ. ಮರ ಬೀಳುತ್ತದೆ. ತದನಂತರ ರಾಕ್ಷಸಿಯನ್ನು ಕೊಲ್ಲುತ್ತಾನೆ. ಹೀಗೆ ಮೂರು ಜನ ಗಂಧರ್ವರು ಶಾಪಮುಕ್ತರಾಗಿ ಕೈಲಾಸಕ್ಕೆ ಮರಳುತ್ತಾರೆ. ಶಿವಪದ್ಮ ರಾಕ್ಷಸಿಯ ಅವಯವಗಳಿಂದ ಬಾವನ್ನ ಬಿರುದಾವಳಿಗಳನ್ನು ಮಾಡಿ ಬಂಕಾಪುರದಲ್ಲಿಡುತ್ತಾನೆ. ಶಿವನ ಅಪ್ಪಣೆ ಪ್ರಕಾರ ಕಾವಲಿಗಾಗಿ ಬಂಕಣ್ಣನೆಂಬುವವನನ್ನು ಕಾವಲಿರಿಸುತ್ತಾನೆ. ಗುರುರೇವಣಸಿದ್ಧರ ಸಮ್ಮುಖದಲ್ಲಿ ಚುಮಲಾದೇವಿ ಮತ್ತು ಶಿವಪದ್ಮರ ವಿವಾಹ ಹೀಗೆ ನಡೆಯುತ್ತದೆ.

ಎಂದ ಮಾತಿಗೆ ಗುರು ಸಂದೇಹ ಬಿಡುತಾ
ನಂದದಿ ಗಣ ಸಮೂಹದೊಳು
ಗಂಧರ್ವ ವಿವಾಹವಂ ಮಾಡಿ ಸಂತೈಸುತ
ಲೆಂದನಾಶೀರ್ವನವನು (೯-೭೪)

ಹತ್ತನೆಯ ಸಂಧಿಯು ೯೯ ಪದ್ಯಗಳನ್ನು ಹೊಂದಿದೆ. ಚುಮಲಾದೇವಿಯೊಂದಿಗೆ ಶಿವಪದ್ಮ ತನ್ನ ಮೊದಲಿನ ಊರಾದ ಜಾಗ್ರತಿಪುರಕ್ಕೆ ಬರುತ್ತಾನೆ. ಅನೇಕ ವರ್ಷಗಳ ನಂತರ ಕಂಡ ಶಿವಪದ್ಮನನ್ನು ಸಹೋದರರು ಗುರುತಿಸುವುದಿಲ್ಲ. ಜಂಗಮ ರೂಪದಲ್ಲಿ ಬಂದ ಶಿವನು ಶಿವಪದ್ಮನನ್ನು ಪರಿಚಯಿಸುತ್ತಾನೆ. ಕುಟುಂಬ ವರ್ಗದವರೊಂದಿಗೆ ಮನೆಗೆ ಬರುತ್ತಾನೆ. ಅಲ್ಲಿ ಅವನ ಮೊದಲ ಹೆಂಡತಿ ಜಿಂಕಾದೇವಿ ಮಗ ರೇವಣ್ಣ ಎರಡನೆಯ ಹೆಂಡತಿ ಚುಮಲಾದೇವಿ ಅವಳ ಮಕ್ಕಳು ರೇಣುಕ ಮತ್ತು ರೇವಗಾಂಬೆ ಎಲ್ಲರೂ

ಸುಖದಿಂದಿರುತ್ತಾರೆ. ನಂತರ ಕಥೆಯ ದಿಕ್ಕು ಬದಲಾಗುತ್ತದೆ. ಪುಷ್ಪದತ್ತ ಮತ್ತು ಹರಿಹರನ ಶಿವಪೂಜೆ ಹರಿಹರದೇವ ಕಾಶಿಯಿಂದ ಗಂಗಾಜಲ ತರುವವರೆಗೆ ಚಂದ್ರಗಿರಿಯ ಭರಮಭೂಪಾಲನನ್ನು ಶಿವಪೂಜೆಗಾಗಿ ನೇಮಿಸುತ್ತಾನೆ. ಭರಮಭೂಪಾಲನಿಗೆ ತನ್ನ ತಂಗಿ ಸುರಾವತಿಯನ್ನು ಕೊಟ್ಟು ವಿವಾಹ ಮಾಡುತ್ತಾನೆ. ಶಿವನಿಚ್ಛೆಯಂತೆ ಶಿವಸಿದ್ಧಬೀರನೆಂಬ ಸುವರ್ಣ ಜಡೆಯ ಮಗ ಜನಿಸುತ್ತಾನೆ. ಶಾಪ ವಿಮೋಚನೆ, ಶಿವಪದ್ಮನಿಗೆ ಕೈಲಾಸ ಪ್ರಾಪ್ತಿ, ವೀರೇಶ್ವರನು ಬೀರೇಶ್ವರನಾಗಿ ಬಂದು ಹಾಲುಮತಸ್ಥರ ದೈವವಾಗುವ ಬೀರೇಶ್ವರನು ತುಕ್ಕಪ್ಪನ ಮಗ ಮಾಳಿಂಗರಾಯನನ್ನು ಶಿಷ್ಯನಾಗಿ ಸ್ವೀಕರಿಸುವ ಪ್ರಸಂಗಗಳನ್ನು ಈ ಸಂಧಿಯಲ್ಲಿ ಗುರುತಿಸಬಹುದು.

ಹನ್ನೊಂದನೆಯ ಸಂಧಿಯು ೭೮ ಪದ್ಯಗಳಿಂದ ಕೂಡಿದೆ. ಪಂಚದೇವಿಯರ ಅವತಾರದಲ್ಲಿ ಅಕ್ಕಮ್ಮ ಮಗು ಬೀರೇಶ್ವರನನ್ನು ರಕ್ಷಿಸುವ ಅಕ್ಕಮ್ಮ ಶಿವನಿಂದ ಮಗುವಿನ ಪೂರ್ವವಿಚಾರಗಳನ್ನು ತಿಳಿಯುವ ಚರ್ಚೆಯನ್ನು ಒದಗಿಸುತ್ತದೆ.

ಹನ್ನೆರಡನೆಯ ಸಂಧಿಯಲ್ಲಿ ೧೩೦ ಪದ್ಯಗಳಿವೆ. ಶಿವನಿಂದ ವರ ಪಡೆದು ಅಕ್ಕಮ್ಮ ಬೀರೇಶನನ್ನು ಸಾಕುತ್ತಾಳೆ. ಅವನ ಇಷ್ಟದಂತೆ ಕುರಿಯ ಕತ್ತಿನ ಮೊಲೆಯ ಹಾಲನ್ನು ಕುಡಿಸುವ, ಗುರು ರೇವಣಸಿದ್ಧರಿಂದ ಆಶೀರ್ವಚನ, ಚೆಂಡಿನಾಟದಲ್ಲಿ ಮೃತಪಟ್ಟ ಬಾಲಕನನ್ನು ಭಸಿತವಿಟ್ಟು ಬದುಕಿಸುವ ಮಂದಲಗೆರೆಯಿಂದ ಬೆಳ್ಳಿಗುತ್ತಿಗೆ ಬರುವ, ನೀರು ತರುವ ತರುಣಿಯರ ಕೊಡಗಳಿಗೆ ಬಿಲ್ಲೆಸೆಯುವ, ತರುಣಿಯರ ಬೈಗುಳಗಳಿಂದ ನೊಂದ ಬೀರೇಶ ತನ್ನ ಪೂರ್ವಾಪರ ವೃತ್ತಾಂತವನ್ನು ಅಕ್ಕಮ್ಮಳಿಂದ ತಿಳಿಯುವ ತನ್ನ ಸೋದರ ಮಾವನ ಮಗಳು ಕನ್ನಿಕಾಮಾಲೆಯನ್ನು ಶೌರ್ಯದಿಂದ ಗೆದ್ದು ತರುವ ಬೀರೇಶ ತಕ್ಕ ಶಿಷ್ಯನಿಗಾಗಿ ಶಿವನಲ್ಲಿ ಪ್ರಾರ್ಥಿಸುವ ದೃಷ್ಟಾಂತಗಳನ್ನು ಪರಿಚಯಿಸಲಾಗಿದೆ.

ಹದಿಮೂರನೆಯ ಸಂಧಿಯು ೮೬ ಪದ್ಯಗಳಿಂದ ಕೂಡಿದೆ. ಶಿವಸಿದ್ಧ ಬೀರೇಶನಿಗೆ ಶಿವ ಪ್ರತ್ಯಕ್ಷನಾಗಿ ಶಿಷ್ಯನಿಗಾಗಿ ಬ್ರಾಹ್ಮಿದೇವಿಯಲ್ಲಿಗೆ ಕಳುಹಿಸುವದು, ಬ್ರಾಹ್ಮಿದೇವಿಯು ವೀರಮಾಳಿಂಗರಾಯನ ವೃತ್ತಾಂತವನ್ನು ತಿಳಿಸುವ, ಜಲಮಾಯಿ ಕೆರೆಯ ಬಳಿ ಶಿಷ್ಯನನ್ನು ಗೆಲ್ಲುವ ಮುಂತಾದ ವಿಷಯಗಳನ್ನು ಈ ಸಂಧಿಯು ಹೊಂದಿದೆ.

ಹದಿನಾಲ್ಕನೆಯ ಸಂಧಿಯಲ್ಲಿ ೧೮೩ ಪದ್ಯಗಳಿವೆ. ಬೀರೇಶ್ವರನು ಮದವೇರಿದ ಕೋಣವೊಂದನ್ನು ಕೊಂದು ಮುಂಡ ಬಿದ್ದಲ್ಲಿ ಮುಂಡಗನೂರಾಗಲಿ ಎಂದು, ಕೋಣ ಬಿದ್ದಲ್ಲಿ ಕೋಣಗನೂರಾಗಲಿ ಎಂದು ಹೆಸರಿಸಿ ಗುರುವನ್ನು ನೆನೆಯುತ್ತಾನೆ. ಗುರು ರೇವಣಸಿದ್ಧರು ಪ್ರತ್ಯಕ್ಷರಾಗಿ ಆಶೀರ್ವದಿಸಿ ಬೀರೇಶ್ವರನ ಇಚ್ಛೆಯಂತೆ ಹಾಲುಮತದ ಪೂರ್ವವೃತ್ತಾಂತವನ್ನು, ವೀರಗೊಲ್ಲಾಳನ ಕಥೆಯನ್ನು ಹೇಳುತ್ತಾರೆ. ತಾನು ಭೂಮಿಗೆ ಬಂದು ಹದಿನಾಲ್ಕುನೂರು ವರ್ಷಗಳಾದವೆಂದು ಶಿವಸನ್ನಿಧಿಗೆ ತೆರಳುವ ಸಮಯ ಸಮೀಪಿಸಿತೆಂದು ಬೀಳ್ಕೊಂಡು

ರಂಭಾಪುರಿ ಮಠದಲ್ಲಿ ತಮ್ಮ ವರಗುವರ ರುದ್ರಮುನಿಗೆ ಪಟ್ಟಾಭಿಷೇಕ ಮಾಡಿ ರೇವಣಸಿದ್ದೇಶ್ವರರು ಲಿಂಗೈಕ್ಯವಾಗುವರು.

ಹದಿನೈದನೆಯ ಸಂಧಿಯು ೧೩೫ ಪದ್ಯಗಳನ್ನು ಹೊಂದಿದೆ. ಶಿವಸಿದ್ಧ ಬೀರೇಶ್ವರನು ಅನೇಕ ಸುಕ್ಷೇತ್ರಗಳನ್ನು ಸಂದರ್ಶಿಸಿ ಬಂಕಾಪುರಕ್ಕೆ ಬಂದು ಪದ್ಮಾವತಾರದಲ್ಲಿ ರಚಿಸಲ್ಪಟ್ಟ ಬಾವನ್ನ ಬಿರುದಾವಳಿಗಳನ್ನು ಹೊಂದುತ್ತಾನೆ. ಅಲ್ಲಿದ್ದ ಬಂಕಣ್ಣನಿಗೆ ಕೈಲಾಸ ಪ್ರಾಪ್ತವಾಗುತ್ತದೆ. ಶಿಷ್ಯ ಮಾಳಿಂಗರಾಯ ಕಪ್ಪೆ ಕಲಕದ ಜಲ ತುಂಬಿ ಮುಟ್ಟದ ಪುಷ್ಪಗಳಿಂದ ಗುರುವನ್ನು ಪೂಜಿಸುವ, ಬೀರೇಶನ ಅಪ್ಪಣೆಯಂತೆ ಕಲ್ಯಾಣದ ಸತ್ತಗೂಳಿಯನ್ನು ಬದುಕಿಸುವ ಕೋಣನೂರಿನಲ್ಲಿ ಜಡೆಸಿದ್ಧರ ಅಗ್ನಿಕುಂಡದಲ್ಲಿ ಪವಾಡ ಮೆರೆಯುವ ಅಕ್ಕಮ್ಮ ಕನ್ನಿಕಾಮಾಲೆ ಮಾಳಿಂಗರಾಯರೊಂದಿಗೆ ಕೈಲಾಸಕ್ಕೆ ತೆರಳುವ ವಿಷಯವನ್ನು ವಿವರಿಸಲಾಗಿದೆ.

ಈ ಕಾವ್ಯವು ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣದ ಕಥೆಯನ್ನು ಹೋಲುತ್ತದೆ. ಭೀಮಕವಿ ವಾರ್ಧಕ ಷಟ್ಪದಿಯಲ್ಲಿ ರಚಿಸಿದರೆ ಚನ್ನಬಸವ ಕವಿ ಸಾಂಗತ್ಯದಲ್ಲಿ ರಚಿಸಿದ್ದಾರೆ. ಚನ್ನಬಸವ ಕವಿಯು ಕಾಡುಸಿದ್ಧರ ಪೂರ್ವೇತಿಹಾಸ, ರಟ್ಟಮತಶಾಸ್ತ್ರದ ರಚನಾಕಾರ ಶಾಂತಮುತ್ತಯ್ಯನೆಂದು, ಒಡೆಯರ ಗುರು ಶಾಂತಮುತ್ತಯ್ಯ ಎಂಬ ಅನೇಕ ವಿಶೇಷ ಮಾಹಿತಿಗಳನ್ನು ಈ ಕೃತಿ ಒದಗಿಸುತ್ತದೆ. ಇವತ್ತಿಗೂ ಸಹ ರಟ್ಟಮತಶಾಸ್ತ್ರ ಪ್ರಚಾರದಲ್ಲಿದೆ ಎಂದು ಹೇಳಲಾಗುತ್ತಿದೆ. ಹಾಲುಮತದ ಪ್ರಾಚೀನ ನೆಲೆಗಳಾದ ಕೋಣಗನೂರು, ಮುಂಡಗನೂರು, ಕೊಲ್ಲಿಪಾಕ, ಸರೂರು, ಜಾಗ್ರತಪುರ, ಬಂಕಾಪುರ ಮೊದಲಾದವುಗಳ ಉಲ್ಲೇಖ ಹೊಂದಿದೆ. ಈ ಕೃತಿಯ ಮೇಲೆ ಜನಪದ ಹಾಲುಮತ ಮಹಾಕಾವ್ಯದ ದಟ್ಟವಾದ ಪ್ರಭಾವ ಉಂಟಾಗಿದೆ. ಇದು ಹಾಲುಮತದ ಇತಿಹಾಸ, ಸಂಸ್ಕೃತಿಯನ್ನು ತಿಳಿಸುತ್ತದೆ. ರೇವಣಸಿದ್ಧರ ಸಮ್ಮುಖದಲ್ಲಿ ಕಥೆಯ ಎಲ್ಲ ಪ್ರಸಂಗಗಳು ಹಾಯ್ದು ಹೋಗುತ್ತವೆ.

ಶಿವಾಂಶಸಂಭೂತರಾದ ಶಿವಪದ್ಮ, ಶಿವಸಿದ್ಧ ಬೀರೇಶ್ವರ, ಮಾಳಿಂಗರಾಯ, ಶಾಂತಮುತ್ತಯ್ಯ, ರೇವಣಸಿದ್ಧ ಮೊದಲಾದವರ ಉಪಕಥೆಗಳನ್ನು ಹೊಂದಿದ ಒಂದು ಪುರಾಣವಾಗಿದೆ.

೬. ಹಾಲ್ಮತದ ಶ್ರೀ ಸಿದ್ಧಬೀರೇಶ್ವರ ಅರ್ಥಾತ್ ಶ್ರೀ ಕರಿಸಿದ್ದೇಶ್ವರ ಪುರಾಣ (೧೯೭೧)

ಸಿದ್ಧಬೀರೇಶ್ವರ ಪುರಾಣದ ಕರ್ತೃ ತನ್ನ ಪರಿಚಯವಾಗಲೀ ಯಾವುದೇ ಇತರ ವಿಚಾರಗಳನ್ನಾಗಲಿ ತಿಳಿಸಿಲ್ಲ. ೧೧ನೇ ಅಧ್ಯಾಯದ ಕೊನೆಯಲ್ಲಿ ಅಂದರೆ ಅಂತ್ಯದಲ್ಲಿ ಗ್ರಂಥ ರಚನೆ ಕುರಿತು ಹೇಳಿದ್ದಾರೆ. "ಈ ಗ್ರಂಥವನ್ನು ಶ್ರೀ ಕರಿಸಿದ್ಧೇಶ್ವರ ಪ್ರೇರಣೆಯಿಂದ ಬರೆಯಲು ಸುರುವಾಗಿ ಒಂದು ಸಪ್ತಕದಲ್ಲಿಯೇ ಸ್ವಾಮಿಯ ಪ್ರಸಾದದಿಂದ ಶ್ರೀ ಶಾಲಿವಾಹನ ಶಕ ೧೮೪೬ ರಕ್ತಾಕ್ಷಿನಾಮ ಸಂವತ್ಸರದ ಭಾದ್ರಪದ ವದ್ಯ ಅಷ್ಟಮೀ ರವಿವಾರ ದಿನದಲ್ಲಿ ಮುಗಿಯಿತು". ಅಂದರೆ ೧೬೨೪ರಂದು ಕೃತಿಯು ಪೂರ್ಣಗೊಂಡದ್ದಾಗಿ ತಿಳಿಯಬಹುದು.

ಈ ಕೃತಿಯು ೧೯೭೧ರಲ್ಲಿ ಮುದ್ರಣಗೊಂಡಿದೆ. ನಂತರ ೧೯೯೪ ಹಾಗೂ ೨೦೦೪ರಲ್ಲಿ ಮರು ಮುದ್ರಣ ಗೊಂಡಿದೆ. ಇದು ಕೃತಿಯ ಜನಪ್ರಿಯತೆಯನ್ನು ಸೂಚಿಸುತ್ತದೆ. ಈ ಕೃತಿಯಲ್ಲಿ ೧೧ ಅಧ್ಯಾಯಗಳಿದ್ದು ಗದ್ಯರೂಪವನ್ನು ಹೊಂದಿದೆ.

ಮೊದಲ ಅಧ್ಯಾಯವು ಸೃಷ್ಟಿ, ಬ್ರಹ್ಮ, ವಿಷ್ಣು, ಮಹೇಶ್ವರರ ಹುಟ್ಟು, ಕಂಬಳಿ ತಯಾರಿಕೆ, ಪರಮೇಶ್ವರನ ಪಟ್ಟಾಭಿಷೇಕ ಕಾಲಕ್ಕೆ ಬಾಲಕ ಸಿದ್ಧ ಬೀರೇಶನ ಉದ್ಭವ ಮೊದಲಾದ ಸಂಗತಿಗಳನ್ನು ತಿಳಿಸುತ್ತದೆ.

ಎರಡನೆಯ ಅಧ್ಯಾಯವು ಸುರಾವತಿ ಮತ್ತು ಧರ್ಮದೇವರ ಪುತ್ರನಾಗಿ ಶಿವನಿಚ್ಛೆಯಂತೆ ಬಂಗಾರದ ಜಡೆ ಹೊನ್ನಹೊಕ್ಕಳವನ್ನೊಳಗೊಂಡ ಶಿವಸಿದ್ಧಬೀರೇಶ್ವರನು ಜನಿಸುವನು. ಸುರಾವತಿಯ ಐಷಾರಾಮದ ಜೀವನ ಮತ್ತು ಅವಳು ಕಳೆಯುವ ನವಮಾಸದ ದಿನಗಳ ವರ್ಣನೆ, ಸುರಾವತಿಗೆ ಅಣ್ಣನಿಂದ ವಿಷದ ಬುತ್ತಿಯು ಬಂದಾಗ ಹೊಟ್ಟೆಯಲ್ಲಿಯೇ ಸಿದ್ಧಬೀರೇಶ್ವರನು ಮಾವನ ಕುತಂತ್ರವನ್ನು ತಿಳಿಸುವನು. ಆ ಎಚ್ಚರಿಕೆಯನ್ನು ನಿರ್ಲಕ್ಷಿಸಿ ಉಣ್ಣಲು ಹೊಟ್ಟೆಯಲ್ಲಿಯ ಸಿದ್ಧ ಬೀರೇಶ ವಿಷವನ್ನು ಹೀರಿ ತಾಯಿಯನ್ನು ಬದುಕಿಸುತ್ತಾನೆ. ನಾರಾಯಣ ಜ್ಯೋತಿಷಿಯ ವೇಷದಲ್ಲಿ ಬಂದು ಮಗುವಿನ ಕೆಟ್ಟ ಶಕುನ ತಿಳಿಸುವನು.

ಮೂರನೆಯ ಅಧ್ಯಾಯವು ಸಿದ್ಧಬೀರನನ್ನು ದಟ್ಟವಾದ ಅರಣ್ಯದಲ್ಲಿ ಬಿಡಲು ಅಲ್ಲಿಯ ಪ್ರಾಣಿ ಪಕ್ಷಿಗಳು ಎಲ್ಲ ರೀತಿಯ ಸಹಕಾರ ನೀಡುವವು. ಬಾಲಕನನ್ನು ಕಾಡಿನಲ್ಲಿ ಬಿಡಲು ಬಂದ ಆರು ಜನ ರಾಕ್ಷಸರಲ್ಲಿ ಐದು ಜನ ಶಿಲಾಮಯರಾಗುತ್ತಾರೆ. ಉಳಿದೊಬ್ಬ ರಾಕ್ಷಸ ಮಹಿಷಾಸುರನಾಗಿ ಭೂಮಿಯಲ್ಲಿ ಹುಟ್ಟುತ್ತಾನೆ. ಓಂ ದೇವಿ ತನ್ನ ಮಗ ಮಹಿಷಾಸುರನಿಗೆ ಸಹಾಯ ನೀಡಲು ಭೂಲೋಕದತ್ತ ನಡೆಯುತ್ತಾಳೆ.

ಹುಟ್ಟಿದ ಮಗು ದಕ್ಕದೇ ಹೋಯಿತೆಂದು ಸುರಾವತಿಯು ದುಃಖಿತಳಾಗಲು ಶಿವನ ಆಶೀರ್ವಾದದಿಂದ ಕೃತಯುಗದಲ್ಲಿ ದೇವಲೋಕದ ಏಳು ಜನ ದೇವಿಯರಲ್ಲಿ ಕೊನೆಯವಳಾದ ಮಾಯಾದೇವಿಯಾಗಿ ಜನಿಸುತ್ತಾಳೆ (ಒಂದು ಯುಗ ಕಳೆದರೂ ಬಾಲಕನಾಗೇ ಇರುವ ಬೀರಪ್ಪ). ಸುರಾವತಿ ಮರುಜನ್ಮದಲ್ಲಿ ಮಾಯಾದೇವಿ ತನ್ನ ಅಕ್ಕಂದಿರೊಂದಿಗೆ ಕದಳೀ ವನದಲ್ಲಿ ಬೇಟೆಯಾಡುವುದು, ಮಗುವಿನ ಅಳುವ ಸ್ವರ ಕೇಳಿ ತೊಟ್ಟಿಲು ಹಿಡಿಯಲು ಹೋದರೆ ಕೈಗೆ ನಿಲುಕದೆ ಅಂತರಿಕ್ಷದಲ್ಲಿ ತೇಲತೊಡಗುವದು. ಮಗುವಿನ ಪೂರ್ವ ವೃತ್ತಾಂತವನ್ನು ಯೋಗಿ ಕೋಳಲ ಬ್ರಹ್ಮನಿಂದ ತಿಳಿಯಲು ಆಶ್ರಮಕ್ಕೆ ತೆರಳುವರು.

ನಾಲ್ಕನೆಯ ಅಧ್ಯಾಯದಲ್ಲಿ ತೊಟ್ಟಿಲು ಪಡೆಯಲು ಪಾತಾಳ ಕನ್ನೆಯರಿಂದ ತೊಟ್ಟಿಲಬೀಜ ಪಡೆಯುವದು. ಕೊಳಲ ಬ್ರಹ್ಮನಿಂದ ಪಡೆದ ಬೀಜವನ್ನು ಏಳು ಜನ ಸಹೋದರಿಯರು ಭೂಮಿಯಲ್ಲಿ ನೆಟ್ಟು ತೊಟ್ಟಿಲನ್ನು ಹಿಡಿಯಲು ಹೋಗಲು ಫಣಿರಾಜ ಅಡ್ಡಗಟ್ಟುತ್ತದೆ. ಪ್ರತಿವರ್ಷ ಎರಡು ದಿವಸ ಪೂಜಿಸುವುದಾಗಿ ಪ್ರಾರ್ಥಿಸಲು ದಾರಿ ಬಿಡುತ್ತದೆ. ಪೂರ್ವಾವತಾರದಲ್ಲಿ ತಾಯಿಯಾದ ಮಾಯಾದೇವಿಯೇ ತಾಯಿಯೆಂದು ಸಹೋದರಿಯರೆಲ್ಲ ಒಪ್ಪುತ್ತಾರೆ. ನಾರಾಯಣ ಆಜ್ಞೆಯಂತೆ ಮಹಿಷಾಸುರನ ಜನ್ಮವಾಗುತ್ತದೆ. ಅವನ ಉಪಟಳವನ್ನು ತಡೆಯದೆ ಸುರರೆಲ್ಲ ರಕ್ಷಣೆಗಾಗಿ ಆದಿಶಕ್ತಿಯನ್ನು ಬೇಡಿಕೊಳ್ಳುತ್ತಾರೆ.

ಐದನೆಯ ಅಧ್ಯಾಯದಲ್ಲಿ ಮಹಿಷಾಸುರನು ಋಷಿಗಳನ್ನು, ಮುನಿಗಳನ್ನು, ಪಿಶಾಚಿಗಳನ್ನು, ನಂದಿಯನ್ನು ಹೀಗೆ ಒಬ್ಬೊಬ್ಬರಾಗಿ ಎಲ್ಲರನ್ನು ಸೋಲಿಸುತ್ತಾನೆ.

ಆರನೆಯ ಅಧ್ಯಾಯದಲ್ಲಿ ಶಿವನಿಚ್ಛೆಯಂತೆ ಸಿದ್ಧಬೀರೇಶನ ಬಾಲ್ಯ, ಯೌವ್ವನದ ವಿವರದೊಂದಿಗೆ ಮಹಿಷಾಸುರನ ಮರ್ದನದ ಸಮಯದಲ್ಲಿ ಮಹಿಷಾಸುರನ ಬೇಡಿಕೆಯಂತೆ ಮೂರು ಯುಗಗಳ ನಂತರ

ಮಡಿದ ಸ್ಥಳದಲ್ಲಿ ಕೋಣಗನೂರು ಎಂಬ ಗ್ರಾಮದಲ್ಲಿ ಕರಿಸಿದ್ದೇಶ್ವರನೆಂದು ಪ್ರಸಿದ್ಧನಾಗುವನೆಂದು ವರವಿತ್ತು ತರುವಾಯು ಮರಣ ಹೊಂದುವನು. ಸಿದ್ಧಬೀರೇಶ್ವರ ಮಾಯದ ಆಳಿಗಾಗಿ ದೆಹಲಿಯ ಬಾದಶಹನ ಮನೆಯಲ್ಲಿ ಗುರುವಾಗಿದ್ದನು.

ಏಳನೆಯ ಸಂಧಿಯಲ್ಲಿ ಶಿವನಿಂದ ಸೃಷ್ಟಿ ನಿರ್ಮಾಣ, ಕೃಷಿಗೆ ಬೇಕಾಗುವ ಸಕಲ ಸಾಧನ, ಕೋಣ, ಎತ್ತು, ನೇಗಿಲು, ಕುಡಿ, ಮಿಣಿ, ಬಾರಕೋಲು ಮೊದಲಾದ ಕೃಷಿ ಸಾಮಗ್ರಿಗಳ ನಿರ್ಮಾಣದೊಂದಿಗೆ ಯೋಗನಿದ್ರೆಯಲ್ಲಿರುವ ಶಿವನ ಜಡೆಯಿಂದ ನಾನಾ ವರ್ಣದ ಕುರಿಗಳು ಹುಟ್ಟುತ್ತವೆ. ಅವುಗಳ ಪಾಲನೆಗಾಗಿ ಪಾರ್ವತಿ, ಮುದ್ದವ್ವ, ಮುದ್ದಪ್ಪ ಎಂಬ ಗೊಂಬೆಗಳನ್ನು ನಿರ್ಮಿಸಿ ಶಿವ ಪ್ರಾಣ ತುಂಬಿ ಕಲ್ಯಾಣ ಪಟ್ಟಣದಲ್ಲಿ ನೆಲಸಿ ಕೃಷಿ ಮಾಡಿಕೊಂಡಿರಲು ತಿಳಿಸುವನು. ಅಲ್ಲಿ ಅವರ ವಂಶ ವೃದ್ಧಿಯಾಗುವದೆಂದು ಅವರಿಗೆ ರೇವಣಸಿದ್ಧ ಗುರುವಾಗುವರೆಂದು ಆಶೀರ್ವದಿಸುತ್ತಾನೆ. ಶಿವನ ಜಡೆಯಿಂದ ಉದಿಸಿದ ಕುರಿಗಳನ್ನು ಪಾಲನೆಗಾಗಿ ಬ್ರಹ್ಮ, ವಿಷ್ಣು, ಮಹೇಶ್ವರರೆಲ್ಲ ಒಬ್ಬೊಬ್ಬರಾಗಿ ಕಾಯ್ದು ಸುಸ್ತಾಗುತ್ತಾರೆ.

ಎಂಟನೆಯ ಸಂಧಿಯಲ್ಲಿ ಪಾರ್ವತಿಯು ಪರಮೇಶ್ವರನ ಕಷ್ಟ ಕಂಡು ತಾನು ಕಾಯಲು ಬರುತ್ತಾಳೆ. ಚಂಚಲವಾದ ಕುರಿಗಳು ಕೊಡುವ ತೊಂದರೆಯನ್ನು ತಾಳಲಾರದೆ ಮೂರು ಕಣ್ಣುಗಳಿರುವ ಹುತ್ತದಲ್ಲಿ ಹೊಗಿಸುತ್ತಾಳೆ. ಗುರುತಿಗಾಗಿ ತನ್ನ ಮುತ್ತಿನ ಮೂಗುತಿಯನ್ನು ಹುತ್ತಿನ ಮೇಲಿಟ್ಟು ಕೈಲಾಸಕ್ಕೆ ತೆರಳುತ್ತಾಳೆ. ರೇವಣಸಿದ್ಧರು ಕಲ್ಯಾಣದಲ್ಲಿ ಭೀಕ್ಷಾಟನೆಗೈಯುತ್ತ ಶಿವಭಕ್ತರಾದ ಮುದ್ದವ್ವ, ಮುದ್ದಪ್ಪರ ಮನೆಗೆ ಬರುತ್ತಾನೆ. ದಂಪತಿಗಳ ಭಕ್ತಿ ನಿಷ್ಠೆಗೆ ಮೆಚ್ಚಿ ಅವರ ಮಕ್ಕಳಾದ ಮುದ್ದುಗೊಂಡ, ಅಜ್ಜಗೊಂಡ, ಆದಿಗೊಂಡರಿಗೆ ವಿವಾಹ ಮಾಡಿಸುತ್ತಾನೆ. ಮುದ್ದುಗೊಂಡನಿಗೆ ಹರಿಯ ಮತವನ್ನು ಅನುಸರಿಸಿ ವೈಷ್ಣವನಾಗೆಂದೂ ಅಜ್ಜಗೊಂಡನಿಗೆ ಹರನ ಮತವನ್ನು ಅನುಸರಿಸಿ ಶೈವನಾಗು ಎಂದೂ ಎಲ್ಲರಿಗಿಂತ ಚಿಕ್ಕವನಾದ ಆದಿಗೊಂಡನಿಗೆ ಹಾಲ್ಮತಕ್ಕೆ ಆದಿಪುರುಷನಾಗೆಂದು ಆಶೀರ್ವದಿಸುತ್ತಾನೆ. ಹೀಗೆ ಬೇರೆ ಬೇರೆ ಮತಗಳು ಹುಟ್ಟಲು ಕಾರಣವಾಯಿತು. ಪರೀಕ್ಷೆಯಲ್ಲಿ ಗೆದ್ದ ಆದಿಗೊಂಡನಿಗೆ ಶಿವನು ಆಶೀರ್ವದಿಸುತ್ತಾನೆ.

ಒಂಭತ್ತನೆಯ ಅಧ್ಯಾಯವು ಶಿವನ ಆಶೀರ್ವಾದದಿಂದ ಶ್ರೀಮಂತನಾದ ಆದಿಗೊಂಡನಿಗೆ ಶಿವನ ಕೃಪೆಯಿಂದ ಉಂಡಾಡು ಪದ್ಮಣ್ಣನೆಂಬ ಮಗ ಜನಿಸುತ್ತಾನೆ. ಮಹೇಶ್ವರನ ವಚನದ ಪ್ರಕಾರವಾಗಿ ಕಲಿಯುಗ ಪ್ರಾರಂಭವಾದರೂ ತನ್ನ ಆಳು ಬರಲಿಲ್ಲವೆಂದು ಸಿದ್ಧಬೀರೇಶ್ವರನು ದೆಹಲಿಯ ಬಾದಶಹನ ಮನೆಯಿಂದ ಬಾರಾಮತಿ ತೇರಾಮತಿ ಎಂಬ ಗ್ರಾಮಕ್ಕೆ ಪ್ರಯಾಣ ಬೆಳಸುವನು. ಅಲ್ಲಿ ಸ್ವಾಮಿರಾಯ ತುಕ್ಕಪ್ಪರಾಯರ ಸತ್ಕಾರಕ್ಕೆ ತೃಪ್ತಿಗೊಂಡು ಅವರಿಗೆ ಜಕ್ಕರಾಯ, ಮಾಳಿಂಗರಾಯರೆಂಬ ಮಕ್ಕಳು ಹುಟ್ಟುವರೆಂದು ಆಶೀರ್ವದಿಸಿ ಹುಟ್ಟಿದ ಆ ಮಕ್ಕಳನ್ನು ತನ್ನ ಮಠದ ಸೇವೆಗಾಗಿ ನೀಡಬೇಕೆಂದು ತಿಳಿಸುವನು. ಕಲ್ಯಾಣ ಪಟ್ಟಣದಲ್ಲಿ ಉಂಡಾಡು ಪದ್ಮಣ್ಣನಿಗೆ ಪಂಚಾಕ್ಷರಿ ಮಂತ್ರ ಉಪದೇಶಿಸಿ ಶಿವಲಿಂಗವ್ವಳ ಜೊತೆ ಮದುವೆಯನ್ನು ಸಿದ್ಧಬೀರೇಶ್ವರನ ಸಮ್ಮುಖದಲ್ಲಿ ನಡೆಸುವರು. ರೇವಣಸಿದ್ಧರು ತಮ್ಮ ಮಠಕ್ಕೆ ಸಕಲ ಶಸ್ತ್ರಾಸ್ತ್ರಗಳನ್ನು ವೇದಾಂತಗಳನ್ನು ಕಲಿಯಲು ಬೀರೇಶ್ವರನನ್ನು ತಮ್ಮ ಮಠಕ್ಕೆ ಕರೆದೊಯ್ಯುವರು.

ಹತ್ತನೆಯ ಅಧ್ಯಾಯದಲ್ಲಿ ಸಾಕ್ಷಾತ್ ಪರಮೇಶ್ವರನೇ ಉಂಡಾಡು ಪದ್ಮಣ್ಣನಾಗಿ, ಪಾರ್ವತಿಯು ಪದ್ಮಾವತಿಯಾಗಿ ಜನಿಸುತ್ತಾರೆ. ಪದ್ಮಾವತಿ ರಾಕ್ಷಸಿಯ ಕರಾರಿನಂತೆ ಕಾರಣಾಂತರಗಳಿಂದ ರಾಕ್ಷಸಿಯಲ್ಲಿ ಬೆಳೆಯುತ್ತಾಳೆ. ಪದ್ಮಣ್ಣನು ರಾಕ್ಷಸಿಯನ್ನು ಏಳು ಕೊಪ್ಪರಿಗೆ ಹಾಲು ಕುಡಿದು ಕೊಲ್ಲುತ್ತಾನೆ. ಕಥೆಯು ಸಿದ್ಧಬೀರನತ್ತ ತಿರುಗುತ್ತದೆ. ಮಾಯಾದೇವಿಯಿಂದ ತನ್ನ ಪೂರ್ವ ವೃತ್ತಾಂತ ತಿಳಿದು ಕನ್ನಿಕಾಮಾಲೆಗಾಗಿ ಶೆಟ್ಟಿವೇಷ, ಬಳೆಗಾರ ವೇಷ, ಸ್ತ್ರೀವೇಷ ಧರಿಸುತ್ತಾನೆ. ತನ್ನ ಶಿಷ್ಯರಾದ ಮಾಳಿಂಗರಾಯ, ಜಕ್ಕರಾಯರಿಗೆ ಮದುವೆ ಮಾಡಿಸುತ್ತಾನೆ. ನಾರಾಯಣನು ಮುತ್ತಿನ ಚೆಂಡನ್ನು ಪಾಂಡವರ ಕೋಟೆಯ ಹಾಲಬಾವಿಯ ಹತ್ತಿರ ನಿಲ್ಲಿಸುವನು.

ಹನ್ನೊಂದನೆಯ ಅಧ್ಯಾಯವು ಬೀರೇಶ್ವರನು ಮುತ್ತಿನ ಚಂಡನ್ನು ಗದ್ದುಗೆಯ ಮೇಲಿಟ್ಟು ತನ್ನ ಮಾಯದ ಆಳಾದ ಮಾಳಿಂಗರಾಯನನ್ನು ಕುರಿ ಕಾಯುವದಕ್ಕೆ ನೇಮಿಸುತ್ತಾನೆ. ಉಂಡಾಡು ಪದ್ಮಣ್ಣನ ಮಗ ತಿರುಕೋಟಿ ಬೋಗಣ್ಣನಿಗೆ ತನ್ನ ಗದ್ದುಗೆಯ ನೇಮ ಮಾಡುವುದಕ್ಕಾಗಿ ನೇಮಿಸಿ ಕಲ್ಯಾಣ ಪಟ್ಟಣಕ್ಕೆ ತೆರಳುವನು. ಹಾಲಿನ ಗುಂಡಿಯಲ್ಲಿರುವ ಶಿಶುವನ್ನು ಅಮೋಘಸಿದ್ಧನೆಂದು ಹೆಸರಿಸಿ ಕಲ್ಯಾಣಕ್ಕೆ ಕಳುಹಿಸಿದರು. ಅಲ್ಲಿ ತಪಸ್ಸಿನ ಪ್ರಭಾವದಿಂದ ರೇವಣಸಿದ್ಧರನ್ನು ಗುರುವಾಗಿ ವರ ಪಡೆದು ಮಹೇಶ್ವರನಿಂದ ಹೋಮಗಂಬಳಿ ಹೊದ್ದುಕೊಂಡು ನೇಮದಂಡವನ್ನು ಕೈಯಲ್ಲಿ ಹಿಡಿದು ಕೊರಳಲ್ಲಿ ರುದ್ರಾಕ್ಷಿ ಹಾಕಿಕೊಂಡು ಕೈಲಾಸದಿಂದ ಕಲ್ಯಾಣ ಪಟ್ಟಣದೊಳಗಿರುವ ತನ್ನ ಗುರು ರೇವಣಸಿದ್ಧನ ಮಠಕ್ಕೆ ಬಂದನು. ಹೀಗೆ ಮಹೇಶ್ವರ ಲಿಂಗದಿಂದ ಉದ್ಭವಿಸಿದ ಅಮೋಘಸಿದ್ಧನಿಗೆ ಲಿಂಗದೀಕ್ಷೆಯನ್ನು ಕೊಟ್ಟು ಶಿವಪಂಚಾಕ್ಷರಿ ಮಂತ್ರವನ್ನು ಉಪದೇಶಿಸಿದನು. ಆದಿಗೊಂಡ ಮತ್ತು ಆತನ ಆರು ಜನ ಮಕ್ಕಳಿಗೆ ಅಮೋಘಸಿದ್ಧ ಗುರುವಾದನು. ಮಳ್ಳ ಮಾಯಪ್ಪನ ಹೊರತಾಗಿ ಮತ್ತ್ಯಾರಿಗೂ ವಶವಾಗದ ಬೀರೇಶ್ವರನ ಆದೇಶದಂತೆ ಹರನಪುರಕ್ಕೆ ಹೋಗಿ ಅಲ್ಲಿ ಇಟ್ಟಿರುವ ಬಿರುದಾವಳಿಯನ್ನು ತರಲು ಬೀರೇಶ್ವರನ ಮೇಲೆ ಬೆಳೆದ ಹುತ್ತವು ಇಬ್ಭಾಗವಾಗುತ್ತದೆ. ಸಿದ್ಧಬೀರೇಶ್ವರ ಮಾಳಿಂಗರಾಯನಿಗೆ ಬೀಜಗುತ್ತಿಯಲ್ಲಿ ಕುರಿಕಾಯ್ದುಕೊಂಡು ಲಿಂಗಪೂಜೆಯೊಂದಿಗೆ ತನ್ನ ಸ್ಮರಣೆ ಮಾಡಲು ತಿಳಿಸಿದನು. ಉಂಡಾಡಿ ಪದ್ಮಣ್ಣನ ಮಗ ತಿರುಕೋಟಿ ಭೋಗಣ್ಣನಿಗೆ ಲಿಂಗ ಭಕ್ತವೀರ ಜಯಪ್ಪನ ಮಗ ಮಳ್ಳ ಮಾಯಪ್ಪನಾಗಲು ಆಶೀರ್ವದಿಸಿದನು. ಮಾಯಾದೇವಿ ಮಹಿಷಾಸುರ ಮಡಿದು ಬಾಗಿಬಂಕನಾಥನೆಂದು ಪ್ರಸಿದ್ಧಿ ಹೊಂದಿದ ಬಾಗೀ ವನಕ್ಕೆ ಹೋದಳು. ಬಂಕನಾಥನ ಸೇವಕರು ತಡೆಯಲು ಲೆಕ್ಕಿಸದೆ ಬೇಟೆಯ ಹಾವಳಿಯನ್ನು ಎಬ್ಬಿಸುತ್ತಾಳೆ. ದೈತ್ಯ ಬಂಕನಾಥ ಆಕೆಯ ಮೈಮೇಲೇರಿ ಬರಲು ಬೀರೇಶ್ವರನು ಪಂಚಡಂಗಿ ಯಿಂದ ಸಂಹರಿಸುವನು. ತಾಯಿಯೊಂದಿಗೆ ಹಾಲಹಳ್ಳದ ಸಿಂಗಾಡಿ ಸುಲ್ತಾನನೆಂದು ಹೆಸರಾದ ಅಲಕನೂರಲ್ಲಿ ಬೀರಪ್ಪನಾಗಿ ನೆಲಸಿ ಸಿಡಿಯಾಣಕ್ಕೆ ಬರುತ್ತಾನೆ.

ಉಂಡಾಡು ಪದ್ಮಣ್ಣನ ಇಬ್ಬರು ಹೆಂಡತಿಯರಲ್ಲಿ ಮೊದಲ ಹೆಂಡತಿ ಶಿವಲಿಂಗಮ್ಮನ ಸಂತತಿ ಶಿವಮತವಾಗಿ ಹತ್ತಿಕಂಕಣದವರಾದರು. ಎರಡನೆಯ ಹೆಂಡತಿ ಪದ್ಮಾವತಿಯ ಸಂತತಿ ಉಣ್ಣೆಕಂಕಣವಾಗಿ

ಕುರಿಕಾಯುವ ಕೆಲಸ ನಿರ್ವಹಿಸಿದರು. ಉಂಡಾಡು ಪದ್ಮಣ್ಣನು ಗುರುವಿನ ಆಶೀರ್ವಾದದಿಂದ ಪವಾಡ ರೀತಿಯಲ್ಲಿ ಸತ್ತ ತಗರನ್ನು ಬದುಕಿಸುತ್ತಾನೆ. ಬರಗಾಲದಲ್ಲಿ ಕಂಬಳಿ ಬೀಸಿ ಮಳೆ ತರಿಸುತ್ತಾನೆ. ಕೊನೆಯಲ್ಲಿ ಮಾಯಪ್ಪನಿಂದ ಪರಿವಾರದವರಿಗೆಲ್ಲ ಪೂಜಾಕಾರ್ಯ ನಡೆಯುತ್ತದೆ.

ಸಿದ್ಧ ಬೀರೇಶ್ವರನು ತಾನಿರುವ ಕೋಣನೂರು ಹಾಲುಮತದವರಿಗೆ ಗುರುಸ್ಥಾನವಾಗಲಿ ಎಂದು ಕಲಿಯುಗದಲ್ಲಿ ಕರಿದೇವರೆಂದು ಪ್ರಸಿದ್ಧಿ ಹೊಂದುವ ವರವನ್ನಿತ್ತು ಮಳಲ ಗದ್ದುಗೆಯ ಮೇಲೆ ಸ್ಥಿರವಾಗುತ್ತಾನೆ.

ಹಲವು ಹಾಲುಮತ ಪುರಾಣಗಳ ಕಥಾಸಾರವನ್ನಿಲ್ಲಿ ಸಂಕ್ಷೇಪಗೊಳಿಸಿ ಅಪ್ಪಣ ವಾಸುದೇವರಾಯ ಮುತ್ತೂರ ಅವರು ಈ ಕೃತಿಯನ್ನು ರಚಿಸಿದ್ದಾರೆ. ಹೀಗಿದ್ದರೂ ಈ ಕೃತಿ ಅನೇಕ ಸಂಗತಿಗಳನ್ನು ಪರಿಚಯಿಸುತ್ತದೆ. ಸುರಾವತಿಯ ಪುರವೈಭವದ ವರ್ಣನೆ, ಕೂಸನ್ನು ಕಾಡಿಗೆ ಒಯ್ದು ಆರು ಜನರಲ್ಲಿ ಐದು ಜನ ಶಿಲಾಮಯರಾಗಿ ಭೂಮಿಗೆ ಉರುಳುವ, ದೇವಲೋಕದ ಸುರಾವತಿ ಜನ್ಮಾಂತರದಲ್ಲಿ ಸಾಮಾನ್ಯರಂತೆ ಬೇಟೆಯಾಡುವ, ಸಿದ್ಧಬೀರೇಶ್ವರ ಮತ್ತು ಕನ್ನಿಕಾಮಾಲೆಯರ ಮದುವೆಯ ಶಾಸ್ತ್ರೋಕ್ತ ವಿಧಿ ವಿಧಾನಗಳ ಪ್ರಸಂಗ, ಕೈಲಾಸದಲ್ಲಿ ಹುಟ್ಟಿದ ಕುರಿಗಳು ಭೂಲೋಕದಲ್ಲಿ ಹುತ್ತಿನೊಳಗೆ ಇರುವೆಯಾಗಿ ಜೀವಿಸುವ, ಕುರಿಕಾಯುವ ದೇವತೆಗಳ ಪರದಾಟ, ಮುದ್ದಪ್ಪನ ಮಕ್ಕಳಿಂದ ವೈದಿಕ, ವೀರಶೈವ ಮತ್ತು ಹಾಲುಮತ ಎಂಬ ಮೂರು ಮತಗಳ ಹುಟ್ಟು, ಕನ್ನಿಕಾಮಾಲೆಗಾಗಿ ಇಂಗು ಜೀರಿಗೆ ವ್ಯಾಪಾರಿಯಾಗಿ ಸಿದ್ಧಬೀರೇಶ್ವರ ದ್ವಾರಾವತಿ ಪಟ್ಟಣ ಪ್ರವೇಶಿಸುವ, ಉಂಡಾಡು ಪದ್ಮಣ್ಣ ತಗರ ಪವಾಡ ಮೆರೆಯುವ ಮುಂತಾದ ಪ್ರಸಂಗಗಳು ವಿಶೇಷತೆ ಹೊಂದಿವೆ. ಅಮೋಘಸಿದ್ಧನ ಜನನ, ಪದ್ಮಣ್ಣನ ಮಗ ತಿರುಕೋಟಿ ಬೋಗಣ್ಣನು ಮಾಯಪ್ಪನಾಗಿ ಜನಿಸುವ ಮೊದಲಾದ ಘಟನೆಗಳು ಇತರ ಕೃತಿಗಳಿಂದ ಭಿನ್ನವಾಗಿವೆ.

ಹಾಲುಮತದ ಸಾಂಸ್ಕೃತಿಕ ಆಚಾರ, ವಿಚಾರಗಳ ವಿವರಣೆ ನಾಗರ ಪಂಚಮಿ ಹಬ್ಬದ ಆಚರಣೆ, ಕಂಬಳಿ ಗದ್ದುಗೆ, ಉಣ್ಣೆ ಕಂಕಣ ಮತ್ತು ಹತ್ತಿಕಂಕಣದ ಹುಟ್ಟು, ಶೈವ-ವೀರಶೈವ-ವೈದಿಕ ಮತಗಳ ಉಗಮ ಮತ್ತು ವಿವಿಧ ಕೃಷಿ ಉಪಕರಣಗಳ ಬಳಕೆ ಹಬ್ಬಗಳ ಆಚರಣೆ ಮುಂತಾದವನ್ನು ಈ ಕೃತಿಯಲ್ಲಿ ಚರ್ಚಿಸಲಾಗಿದೆ.

೭. ಮುದ್ದುಲಿಂಗೇಶ್ವರ ಚರಿತ್ರೆ (೨೦೦೨)

ಅಂಬಾಸುತ ಕಾವ್ಯನಾಮದ ಎನ್. ಶಂಕರಾನಂದಪ್ಪ ವಿರಚಿತ ಕಾವ್ಯವು ೨೦೦೨ರಲ್ಲಿ ವಿದ್ಯಾನಿಧಿ ಪ್ರಕಾಶನದಿಂದ ಪ್ರಕಟಗೊಂಡಿದೆ. ಭಾಮಿನಿಷಟ್ಪದಿಯ ಈ ಕಾವ್ಯವು ೧೮ ಅಧ್ಯಾಯಗಳನ್ನು ಹೊಂದಿದೆ.

ಮೊದಲ ಅಧ್ಯಾಯವು ಕೈಲಾಸ ವರ್ಣನೆಯಿಂದ ಪ್ರಾರಂಭವಾಗುತ್ತದೆ. ಶಿವಪಾರ್ವತಿಯರು ನಾಟ್ಯದಲ್ಲಿ ಮಗ್ನರಾಗಿ ದಕ್ಷಬ್ರಹ್ಮನನ್ನು ಗಮನಿಸುವುದಿಲ್ಲ. ಕೋಪಗೊಂಡ ದಕ್ಷಬ್ರಹ್ಮ ಸೇಡುತೀರಿಸುವ ವಿವರಗಳನ್ನು ಚರ್ಚಿಸಲಾಗಿದೆ. ಶಿವನ ಆಶೀರ್ವಾದದಿಂದ ಕುರಿಗಳ ಹುಟ್ಟು, ಕುರಿಕಾಯುವ ವೀರಭದ್ರ, ಭೂಲೋಕದ ನಿಸರ್ಗ ರಮಣೀಯತೆಗೆ ಮತ್ತು ಮನಸೆಳೆಯುವ ನಿಸರ್ಗಕ್ಕೆ ಮನಸೋತ ಶಿವಪಾರ್ವತಿಯರು ತಂಗುದಾಣವಾದ, ಪಾರ್ವತಿಯ ಹಾಲಿನಿಂದ ತಯಾರಾದ ಎರಡು ಗೊಂಬೆಗಳಿಂದ ಉಗಮಗೊಂಡ ಹಾಲುಮತ, ಕುಟುಂಬ

ವರ್ಗಕ್ಕೆ ಉಂಡಾಡು ಪದುಮನ ದೈವೀ ಶಕ್ತಿಯ ಪರಿಚಯ, ಅಣ್ಣಂದಿರ ತಾತ್ಸಾರಕ್ಕೆ ಬೇಸತ್ತು ಹೊಲ ಹಸನು ಮಾಡಿ ಕಿತ್ತ ಗಿಡಗಳನ್ನು ಅಲ್ಲಿಯ ಹುತ್ತದ ಬಾಯಿಗಿಟ್ಟು ಬೆಂಕಿ ಹಚ್ಚುವ ಹುತ್ತದಿಂದ ನಾನಾ ವರ್ಣದ ಕುರಿಗಳು ಹೊರ ಬರುವ ಮುಂತಾದ ವಿವರಗಳು ಎರಡು ಮತ್ತು ಮೂರನೆಯ ಅಧ್ಯಾಯಗಳಲ್ಲಿವೆ.

ನಾಲ್ಕು ಮತ್ತು ಐದನೆಯ ಅಧ್ಯಾಯ ರೇಣುಕರ ಆಶೀರ್ವಾದದಿಂದ ರಾಕ್ಷಸಿಯನ್ನು ಕೊಂದು ಅವಳು ಸಾಕಿದ ರಾಜನ ಮಗಳನ್ನು ಮದುವೆಯಾಗುವ, ಕಾಲಾಂತರದಲ್ಲಿ ತನ್ನೂರಿಗೆ ಮರಳಿ ಇಬ್ಬರು ಹೆಂಡತಿಯರೊಂದಿಗೆ ಸುಖ ಜೀವನ ನಡೆಸುವ ವಿಷಯಗಳನ್ನು ವಿವರಿಸುತ್ತದೆ. ಆರನೆಯ ಅಧ್ಯಾಯವು ವೀರಭದ್ರ ಬೀರೇಶ್ವರನಾಗಿ ಜನಿಸುವ ಬಿಲ್ಲಾಸುರನ ಸಂಹಾರ ಮಾಡುವ ವಾಯುಪಕ್ಷಿಯನ್ನು ಶಿವನು ವಾಹನವಾಗಿ ಬೀರನಿಗೆ ನೀಡುವ ವಿವರಗಳನ್ನು ಹೊಂದಿದೆ.

ಏಳನೆಯ ಅಧ್ಯಾಯದಿಂದ ಶಿವಸಿದ್ಧಬೀರನ ವೃತ್ತಾಂತ ಪ್ರಾರಂಭವಾಗುತ್ತದೆ. ಭರಮದೇವ ಮತ್ತು ಸುರಾವತಿಯರಿಗೆ ಶಿವಸಿದ್ಧಬೀರನು ಹುಟ್ಟುವ ಸುರಾವತಿ ಅಣ್ಣನ ಕುತಂತ್ರಕ್ಕೆ ಒಳಗಾಗಿ ಕಾಡುಪಾಲಾದ ಕೂಸನ್ನು ಅಕ್ಕಮ್ಮ ಸಲುಹುವ ವಿವರಗಳಿವೆ. ಕಾಡಿನಲ್ಲಿ ಬಾಲ್ಯ ಕಳೆದ ಶಿವಸಿದ್ಧ ಬೀರನಿಗೆ ಪ್ರಾಣಿಪಕ್ಷಿಗಳ ಸಹಕಾರ, ಕುರಿಯ ಕೊರಳ ಮೊಲೆ ಹಾಲನ್ನು ಕುಡಿದು ಬೆಳೆದ ಶಿವಪದ್ಮನ ಬೋಳುಸುಡಿ ಕುರಿಯ ಪೂರ್ವ ಜನ್ಮದ ವೃತ್ತಾಂತಗಳನ್ನು ಹೊಂದಿದೆ. ನೀರು ತರುವ ತರುಣಿಯರ ಕೊಡಗಳಿಗೆ ಬಾಣಬಿಟ್ಟು ಅವರಿಂದ "ತಂದೆ ತಾಯಿ ತಿಳಿಯದ ಪರದೇಶಿ" ಎಂದು ಬೈಸಿಕೊಂಡು ಅಕ್ಕಮ್ಮಳಿಂದ ಪೂರ್ವ ವೃತ್ತಾಂತ ತಿಳಿಯುವ, ವಿವಿಧ ವೇಷಗಳಲ್ಲಿ ಕನ್ನಿಕಾಮಾಲೆಯನ್ನು ಭೇಟಿಯಾಗಿ ಮದುವೆಯಾಗುವ ಪ್ರಸಂಗಗಳನ್ನು ಎಂಟು ಮತ್ತು ಒಂಭತ್ತನೆಯ ಅಧ್ಯಾಯಗಳಲ್ಲಿ ಗುರುತಿಸಬಹುದು.

ಹತ್ತನೆಯ ಅಧ್ಯಾಯವು ಗುರುಶಿಷ್ಯರ ವಿವರಗಳನ್ನು ಹೊಂದಿದೆ. ಶಿವಸಿದ್ಧ ಬೀರಪ್ಪ ಮತ್ತು ಮಾಳಿಂಗರಾಯರು ಸಮಾಜ ಕಲ್ಯಾಣ ಚಮರೀ ಮೃಗದ ಕೂದಲಿನಿಂದ ಕಂಬಳಿ ತಯಾರಿಕೆ, ವಿವಿಧ ಗೋತ್ರಗಳ ವಿವರ, ಶರಣ ಗೊಲ್ಲಾಳನ ಕಥೆ, ಕೊಲ್ಲಿಪಾಕಿಯ ಹೆಂಡದ ದೇವಮ್ಮನ ವೃತ್ತಾಂತ, ಹುವ್ವನೂರಿನ ಅರಸನ ಸತ್ತ ಮಗನನ್ನು ಬಂಢಾರ ಎರಚಿ ಬದುಕಿಸುವ ಮೊದಲಾದ ಪವಾಡಗಳ ಮೂಲಕ ಮಾಳಿಂಗನ ಶಕ್ತಿಯನ್ನು ಸಮಾಜಕ್ಕೆ ತೋರಿಸುತ್ತಾನೆ. ಗುರು ಶಿವಸಿದ್ಧ ಬೀರಪ್ಪರ ಅಪ್ಪಣೆಯಂತೆ ತಗರ ಪವಾಡವನ್ನು ಕಲ್ಯಾಣದಲ್ಲಿ ಮಾಳಿಂಗರಾಯ ಮೆರೆಯುತ್ತಾನೆ. ಆಗ ಬದುಕಿನ ತಗರಿನ ಹಿಂಗಾಲು ಹಿಡಿದವರು ಕಟುಕರಾದ, ಶಿರವನ್ನು ಹಿಡಿದು ಟಗರ ಜೋಗಿಗಳಾದ ವಿಶೇಷ ವಿಷಯಗಳನ್ನು ಗಮನಿಸಬಹುದು. ಮಾಳಿಂಗರಾಯನನ್ನು ಕೊಣ್ಣೂರಿನ ಜಡೆಸಿದ್ಧರು ಕೊಲ್ಲುವ ಕುತಂತ್ರವನ್ನು ತಿಳಿದ ಶಿವಸಿದ್ಧಬೀರಪ್ಪ ಪಾರು ಮಾಡುವ, ಬರಗಾಲದಲ್ಲಿ ಬೀರೇಶ ಕಂಬಳಿ ಬೀಸಿ ಮಳೆ ತರಿಸುವ ವಿವರಗಳನ್ನು ಹನ್ನೊಂದು, ಹನ್ನೆರಡನೆಯ ಅಧ್ಯಾಯಗಳು ವಿವರಿಸುತ್ತವೆ.

ಹದಿಮೂರನೆಯ ಅಧ್ಯಾಯದಿಂದ ಕತೆಯು ಇತರ ಕೃತಿಗಳಿಂದ ಭಿನ್ನವಾಗಿದೆ. ಈ ಕೃತಿಯು ಈವರೆಗಿನ ಕೃತಿಗಳ ವಿಷಯಗಳ ಸಂಕ್ಷಿಪ್ತ ಸಂಗ್ರಹ ರೂಪವಾದರೂ ಹಾಲುಮತೋತ್ತೇಜಕ ಪುರಾಣದೊಂದಿಗೆ ಸಾಮ್ಯತೆ ಹೊಂದಿದೆ.

ಕಂಬಳಿ ತಯಾರಿಕೆ, ಕಂಬಳಿ ಬೀಸಿ ಮಳೆ ತರಿಸುವ, ಟಗರಜೋಗಿಗಳು, ಭಂಡಾರ ಮಹಿಮೆ ಮುಂತಾದವುಗಳು ಹಾಲುಮತದ ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಅಲ್ಲದೆ ಜನಾಂಗದ ಪ್ರಾಚೀನ ಪರಂಪರೆಯನ್ನು ಪರಿಚಯಿಸುತ್ತವೆ.

ಶಿಷ್ಟ ಸಾಹಿತ್ಯದ ತೌಲನಿಕ ಅಧ್ಯಯನದಲ್ಲಿ ತಗರ ಪವಾಡ, ಸಿದ್ಧಮಂಕ ಚರಿತೆ, ಚನ್ನಬಸವ ಕವಿಯ ಹಾಲುಮತದ ಪುರಾಣವು, ಶ್ರೀ ಸಿದ್ಧ ಬೀರೇಶ್ವರ ಪುರಾಣ, ಮುದ್ದುಲಿಂಗೇಶ್ವರ ಚರಿತೆ ಮೊದಲಾದವನ್ನು ಅಭ್ಯಸಿಸಬಹುದಾಗಿದೆ.

ತಗರ ಪವಾಡ ಮತ್ತು ಹಾಲುಮತೋತ್ತೇಜಕ ಪುರಾಣಗಳು ಬಹುವಿಧ ವ್ಯತ್ಯಾಸಗಳನ್ನು ಹೊಂದಿವೆ. ಪದ್ಮಣ್ಣ ಲಿಂಗಮ್ಮರ ಮಗ ಶಾಂತಮುತ್ತಯ್ಯನಾಗಿದ್ದಾನೆ. ಆದರೆ ಶಾಂತಮುತ್ತಯ್ಯನ ಪತ್ನಿ ಲಿಂಗಮ್ಮ ಎಂಬ ಭಿನ್ನ ಹೇಳಿಕೆಗಳು ಗೊಂದಲ ಹುಟ್ಟಿಸುತ್ತವೆ. 'ತಗರ ಪವಾಡ'ದ ಶಾಂತಮುತ್ತಯ್ಯ ಶರಣರೊಂದಿಗೆ ಒಡನಾಟ ಹೊಂದಿದ್ದಾನೆ. ಪವಾಡ ಪುರುಷ ನಾಯಕನಾಗಿ ಚಿತ್ರಿಸಲ್ಪಟ್ಟಿದ್ದಾನೆ. ಕೈಲಾಸದಿಂದ ಕರಿಮಲ್ಲಿಗೆಯ ಪುಷ್ಪವೃಷ್ಟಿ, ಶಿವನಿಂದ ದೀಕ್ಷೆ, ಬ್ರಹ್ಮಯ್ಯನಿಂದ 'ಶಂಭು' ಎನ್ನುವ ತಗರಿನ ಜವಾಬ್ದಾರಿಯ ನಿರ್ವಹಣೆ, ಸತ್ತ ತಗರನ್ನು ಶರಣರ ಸಮ್ಮುಖದಲ್ಲಿ ಭಸಿತವಿಟ್ಟು ಬದುಕಿಸುವ ಬಸವಣ್ಣನ ನೇತೃತ್ವದಲ್ಲಿ ಕುರುಬ ಕುಲಕ್ಕೆ ಗುರುವಾಗಿಸಿ, ಗುರುಪೀಠ ಕರುಣಿಸುತ್ತಾನೆ. ಹೀಗೆ ಶಾಂತಯ್ಯ ಹನ್ನೆರಡನೆಯ ಶತಮಾನದ ಶ್ರೇಷ್ಠ ಸಾಧಕನಾಗಿ ತಗರ ಪವಾಡ ಮೆರೆದು, ಶರಣ ಸಮೂಹದ ಮೆಚ್ಚುಗೆ ಗಳಿಸಿ, ಕುರುಬ ಜನಾಂಗಕ್ಕೆ ಪ್ರಥಮ ಗುರುವಾಗಿ ದೀಕ್ಷೆ ಪಡೆದ ವ್ಯಕ್ತಿಯಾಗಿದ್ದಾನೆ.

ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ ಒಂಭತ್ತು ಸಂಧಿಗಳ ವಾರ್ಧಕ ಷಟ್ಪದಿ ಕೃತಿಯಾಗಿದೆ. ಇಲ್ಲಿಯೂ ಕೂಡಾ ಚರಿತ್ರೆ ಮತ್ತು ಪುರಾಣಗಳ ಕಾಲ್ಪನಿಕತೆಗಳಿಂದ ಕಥೆಯು ಹೆಣೆದುಕೊಂಡಿದೆ. ರೇವಣಸಿದ್ಧರ ನಾಯಕತ್ವದಲ್ಲಿ ಅವರ ಸುತ್ತಮುತ್ತ ಕಥೆ ಸುತ್ತಿಕೊಂಡಂತಿದೆ. ತಗರ ಪವಾಡದಲ್ಲಿ ಶಾಂತಮುತ್ತಯ್ಯನ ಮಕ್ಕಳ ಪ್ರಸ್ತಾಪವಿಲ್ಲ. ಭೀಮಕವಿಯ ಕೃತಿಯು ಮಕ್ಕಳ ವಿವರವನ್ನು ಒದಗಿಸುತ್ತದೆ. ರೇವಣಸಿದ್ಧರ ಸಾಮಾಜಿಕ ಕಳಕಳಿ, ಸಮಾಜ ಸೇವೆ, ಸಾಮಾಜಿಕ ಸೇವೆಯನ್ನು ನಿರಾಕರಿಸಿದ ಪತ್ನಿಯ ಗರ್ಭದಿಂದ ರುದ್ರಮುನಿಯನ್ನು ಹೊರತೆಗೆದು ಪವಾಡ ರೀತಿಯಲ್ಲಿ ಬೆಳಸುವ, ಬಿಜ್ಜಳನ ಬಲಿಯಿಂದ ಹನ್ನೆರೆಡು ಸಾವಿರ ಬಾಲಕಿಯರನ್ನು ಬಂಧಮುಕ್ತರನ್ನಾಗಿಸುವ ಮೊದಲಾದ ಪ್ರಸಂಗಗಳಲ್ಲಿ ರೇವಣಸಿದ್ಧರ ಮಹಿಮೆಯು ಗಮನಕ್ಕೆ ಬರುತ್ತದೆ.

ಹಾಲುಮತೋತ್ತೇಜಕ ಪುರಾಣದಲ್ಲಿ ಶಾಂತಮುತ್ತಯ್ಯನಿಗೆ ರೇವಣಸಿದ್ಧರು ಶಿಷ್ಯನಾದರೆ ಕೆಲವು ಕೃತಿ (ಹಾಲುತೊರೆ)ಗಳಲ್ಲಿ ಶಾಂತಮುತ್ತಯ್ಯ ರೇವಣಸಿದ್ಧರಿಗೆ ತಂದೆ ಎಂದು ತಿಳಿಸಲಾಗಿದೆ. ಶಾಂತಮುತ್ತಯ್ಯ ರೇವಣಸಿದ್ಧರಿಗೆ ತಂದೆಯೋ, ಗುರುವೋ ಎಂಬ ಪ್ರಶ್ನೆ ಉಳಿಯುತ್ತದೆ. ಯಾರು ಮೊದಲು? ಆದರೆ ಸಿದ್ಧಮಂಕ ಚರಿತೆಯಲ್ಲಿ ಶಾಂತಮುತ್ತಯ್ಯ ಗುರುವಾಗಿ ಚಿತ್ರಿಸಲ್ಪಟ್ಟಿದ್ದಾನೆ. ಶಿವಪದ್ಮ ಜಿಂಕಾದೇವಿ ಮಗ ರೇವಣ್ಣ

ಎರಡನೇ ಮಡದಿ ಚುಮುಲೆಯ ಮಗ ರೇವಣ ಎನ್ನಲಾಗಿದೆ. ರೇವಣ ಮತ್ತು ರೇವಣ್ಣ ಭಿನ್ನರಾದರೆ ಹೆಸರುಗಳ ಅಭಿನ್ನತೆ ಗೊಂದಲ ಹುಟ್ಟಿಸುತ್ತದೆ. ಇಲ್ಲಿ ಚುಮುಲೆಯು ರಾಕ್ಷಸಿಯಲ್ಲ.

ಚೆನ್ನಬಸವ ವಿರಚಿತ ಹಾಲುಮತದ ಪುರಾಣವು ಹದಿನೈದು ಸಂಧಿಗಳ ಸಾಂಗತ್ಯ ಕೃತಿಯಾಗಿದೆ. ಇದು ರಸ್ತಾಪುರ ಭೀಮಕವಿಯ ಕೃತಿಯಿಂದ ಭಿನ್ನವಾಗಿಲ್ಲ. ಅದೇ ಕಥೆಯ ಸಂಪೂರ್ಣ ಹೋಲಿಕೆಯಿದೆ. ಭೀಮಕವಿ ವಾರ್ಧಕ ಷಟ್ಪದಿಯಲ್ಲಿ ಕಾವ್ಯ ರಚಿಸಿದರೆ ಚೆನ್ನಬಸವ ಕವಿ ಸಾಂಗತ್ಯದಲ್ಲಿ ರಚಿಸಿದ್ದಾನೆ. ಕಾಡಸಿದ್ಧರ ಪೂರ್ವೇತಿಹಾಸದೊಂದಿಗೆ ಶಿವಪದ್ಮ ಜಿಂಕಾದೇವಿಯರಿಗೆ ರೇಣುಕ, ರೇವಣಾಂಬೆ ಎಂಬ ಮಕ್ಕಳ ಪ್ರಸ್ತಾಪವಿದೆ.

ಈವರೆಗಿನ ಕಾವ್ಯ ಪುರಾಣಗಳ ಅವಲೋಕನದಿಂದ ಕಂಡು ಬರುವ ವಿಶೇಷ ಸಂಗತಿಗಳನ್ನು ಈ ಕೆಳಗಿನಂತೆ ಕ್ರೋಢೀಕರಿಸಬಹುದಾಗಿದೆ.

೧. ಸಿದ್ಧಮಂಕ ಚರಿತೆ ಮತ್ತು ತಗರ ಪವಾಡ ಈ ಕೃತಿಗಳು ಕುರುಬರ ಗುರುಪರಂಪರೆಯಲ್ಲಿ ಬರುವ ಎರಡು ಪ್ರಧಾನ ಮಾರ್ಗಗಳನ್ನು ತಿಳಿಸುತ್ತವೆ. ಸಿದ್ಧಮಂಕಚರಿತೆಯು ಸಿದ್ಧರಾಮೇಶ್ವರ ಪರಂಪರೆಯ ಸಿದ್ಧಮಂಕನ ಆ ಮೂಲಕ ಕುರುಬ ಒಡೆಯರಲ್ಲೊಂದಾದ 'ಮಂಕೊಡೆಯರ' ಬಗೆಗೆ ತಿಳಿಸುತ್ತದೆ. ತಗರ ಪವಾಡವು ರೇವಣಸಿದ್ಧ ಸಂಪ್ರದಾಯದ ಶಾಂತಮುತ್ತಯ್ಯನ ಚರಿತ್ರೆಯನ್ನು ನಿರೂಪಿಸುತ್ತದೆ. ಕುರುಬರ ಇನ್ನೊಂದು ಗುರುಪಂಗಡವಾದ ಶಾಂತೊಡೆಯರ ಸಂಪ್ರದಾಯವನ್ನು ಹೇಳುತ್ತದೆ. ಎರಡೂ ಕಾವ್ಯಗಳು ದೇಸೀ ಸಾಹಿತ್ಯರೂಪದ 'ಸಾಂಗತ್ಯ'ದಲ್ಲಿ ರಚನೆಗೊಂಡಿರುವುದು ವಿಶೇಷ.

೨. ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರು ಸಂಗ್ರಹಿಸಿ ಪ್ರಕಟಿಸಿದ 'ಹಾಲುಮತದ ಪುರಾಣ' ಕೃತಿಯ ಕರ್ತೃ ಯಾರೆಂಬುದು ತಿಳಿಯುವುದಿಲ್ಲ. ಇದೂ ಸಹಿತ ಸಿದ್ಧರಾಮನ ಶಿಷ್ಯನಾದ ಮರುಳ ಸಿದ್ಧನ ಇತಿವೃತ್ತವನ್ನು ಸ್ಥೂಲವಾಗಿ ನಿರೂಪಿಸುತ್ತದೆ. ಸಿದ್ಧಮಂಕ, ಮರುಳುಮಂಕ, ಮಂಕಯ್ಯ ಎಂದು ಭಿನ್ನ ಹೆಸರಿನಿಂದ ಕರೆಯಲಾಗಿದೆ. ಇವೆಲ್ಲ ಒಂದೇ ವ್ಯಕ್ತಿಯನ್ನು ಕುರಿತಾದುದು ಎಂದು ಸ್ಪಷ್ಟ ವಾಗುತ್ತದೆ. ಕವಿ 'ಮರುಳ ಸಿದ್ಧಯ್ಯನವರ ಚರಿತೆ' ಎಂದು ಈ ಕೃತಿಯಲ್ಲಿ ಸ್ಪಷ್ಟವಾಗಿ ಕರೆಯಲಾಗಿದೆ. ಹೀಗಾಗಿ ಸಿದ್ಧಮಂಕ ಚರಿತೆ ಹಾಗೂ ಮರುಳುಸಿದ್ಧೇಶ್ವರ ಚರಿತೆ ಒಂದೇ ಪರಂಪರೆಯ ಕೃತಿಗಳಾಗಿವೆ.

೩. ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ ಕುರುಬರ ದೈವವಾದ ಬೀರಪ್ಪನ ಕಥೆಯನ್ನು ಸ್ಥೂಲವಾಗಿ ಹೇಳುತ್ತದೆ. ಜೊತೆಗೆ ಈ ಕೃತಿಯಲ್ಲಿ ಆದಿಗೊಂಡ, ರೇವಣಸಿದ್ಧ, ಸಿದ್ಧರಾಮೇಶ್ವರ ಮೊದಲಾದ ದೈವಗಳ ಗುರುಪರಂಪರೆಯ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ.

೪. ಹಾಲ್ಮತದ ಶ್ರೀ ಸಿದ್ಧಬೀರೇಶ್ವರ ಅಥವಾ ಕರಿಸಿದ್ಧೇಶ್ವರ ಪುರಾಣವು ಕುರುಬರ ಆರಾಧ್ಯ ದೈವವಾದ ಬೀರಪ್ಪನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಹೇಳುತ್ತದೆ. ಬೀರಪ್ಪನಿಗೆ ಪರ್ಯಾಯವಾಗಿ ಕರಿಸಿದ್ಧೇಶ್ವರ, ಸಿದ್ಧಬೀರೇಶ್ವರ, ಸಿದ್ದೇಶ್ವರ ಎಂದು ಕರೆಯಲಾಗುತ್ತದೆ. ಜಮಖಂಡಿ ತಾಲೂಕಿನ ಕೋಣಗನೂರು, ರಾಯಭಾಗ ತಾಲೂಕಿನ ಅಲಕನೂರು ಗ್ರಾಮಗಳಲ್ಲಿ ದೊಡ್ಡದಾದ ಕರಿಸಿದ್ಧೇಶ್ವರ ದೇವಾಲಯಗಳಿವೆ.

ಈ ದೇವಾಲಯಗಳು ಪ್ರಾಚೀನತೆಯನ್ನು ಹೊಂದಿವೆ. ಇದಕ್ಕೆ ಅಲ್ಲಿರುವ ಲಿಖಿತರೂಪದ ಶಾಸನಗಳು, ಮೌಖಿಕ ರೂಪದ ಹಾಡುಗಳು ಸಾಕ್ಷಿಯಾಗಿವೆ.

೫. ಶಂಕರಾನಂದ ವಿರಚಿತ ಮುದ್ದುಲಿಂಗೇಶ್ವರ ಚರಿತೆ ಇತ್ತೀಚೆಗೆ ರಚನೆಗೊಂಡ ಕಾವ್ಯವಾಗಿದೆ. ಕುರುಬರ ಮೂಲ ಪುರುಷನಾದ ಮುದ್ದುಲಿಂಗೇಶ್ವರನ ಜೀವನ ಚರಿತ್ರೆಯನ್ನು ನಿರೂಪಿಸುತ್ತದೆ.

೬. ಇಲ್ಲಿನ ಕಾವ್ಯ ಪುರಾಣಗಳು ದೇಶೀ ಬಂಧಗಳಾದ ಸಾಂಗತ್ಯ, ಷಟ್ಪದಿಗಳಲ್ಲಿ ರಚನೆಗೊಂಡಂಥವುಗಳು.

೭. ಕುರುಬರ ಪ್ರಧಾನ ಉದ್ಯೋಗಗಳಲ್ಲಿ ಒಂದಾದ ಕಂಬಳಿ ತಯಾರಿಕೆಯ ಬಗೆಗೆ ಅನೇಕ ಸಂಗತಿಗಳನ್ನು ಈ ಕಾವ್ಯಗಳು ದಾಖಲಿಸಿವೆ. ಕುರಿ ಉಣ್ಣೆಯನ್ನು ಹಿಂಜುವುದು, ಉಣ್ಣೆಯನ್ನು ನೇಯುವುದು, ಮಗ್ಗದಿಂದ ಕಂಬಳಿ ತಯಾರಿಸುವ ವಿಧಾನಗಳನ್ನು ತಿಳಿಸುತ್ತವೆ.

೮. ಕುರುಬ ಸಮುದಾಯದ ಆಚರಣೆ, ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಇಲ್ಲಿ ಉಪಯುಕ್ತ ಮಾಹಿತಿಗಳಿವೆ. ರೇವಣಸಿದ್ಧೇಶ್ವರ, ಸಿದ್ಧರಾಮೇಶ್ವರನಿಗೆ ಅರ್ಪಿಸುವ ಕಂಥಾಧಾರಣ ಆಚರಣೆಯ ವಿವರಗಳು ಕುತೂಹಲಕಾರಿಯಾಗಿವೆ.

೯. ಕುರುಬರ ಗುರುಗಳಾದ ಒಡೆಯರು ಅವರ ಆಚರಣೆಗಳ ಸಂಪ್ರದಾಯಗಳ ಪ್ರಸ್ತಾಪ ಇಲ್ಲಿದೆ. ಕುರುಬರ ಸಾಮಾಜಿಕ-ಧಾರ್ಮಿಕ ಕಾರ್ಯಗಳಲ್ಲಿ ಒಡೆಯರು ಪುರೋಹಿತರಂತೆ ಕಾರ್ಯನಿರ್ವಹಿಸುವುದನ್ನು ಕಾವ್ಯ ಪುರಾಣಗಳು ಸೂಚ್ಯವಾಗಿ ಹೇಳುತ್ತವೆ.

೧೦. ಕುರುಬರ ಎರಡು ಪ್ರಮುಖ ಉಪಪಂಗಡಗಳಾದ ಹತ್ತಿಕಂಕಣ, ಉಣ್ಣೆಕಂಕಣಗಳು ಹುಟ್ಟಿಕೊಂಡ ರೀತಿಯನ್ನು ಇಲ್ಲಿ ಗುರುತಿಸಬಹುದು. ಶಿವಪದ್ಮನಿಗೆ ಇಬ್ಬರು ಹೆಂಡಂದಿರು ಕಾಡಿನಲ್ಲಿದ್ದ ಹೆಂಡತಿಯ ಸಂತತಿಯವರು ಉಣ್ಣೆಕಂಕಣದವರೆಂದು ಪ್ರಸಿದ್ಧರಾದರು. ಊರಿನಲ್ಲಿಯ ಹೆಂಡತಿಯ ಸಂತತಿಯವರು ಹತ್ತಿ ಕಂಕಣದವರೆಂಬುದನ್ನು ಸೂಚ್ಯವಾಗಿ ಈ ಕಾವ್ಯಗಳು ನಿರೂಪಿಸುತ್ತವೆ. ಈಗಲೂ ಕುರುಬ ಸಮುದಾಯದಲ್ಲಿ ಈ ಎರಡು ಉಪಪಂಗಡಗಳು ಬಹುಮುಖ್ಯವಾಗಿರುವುದನ್ನು ಕಾಣಬಹುದಾಗಿದೆ.

೧೧. ಸರೂರು, ಚಿಂಚಲಿ, ತೂಗುಡ್ಡ, ಹುಲಜಂತಿ, ಅಲಕನೂರು, ಕೋಣಗನೂರು, ಬಂಕಾಪುರ, ಕೊಲ್ಲಿಪಾಕಿ, ಸಿದ್ಧಗಿರಿ, ಸೊನ್ನಲಾಪುರ ಮೊದಲಾದ ಹಾಲುಮತ ಸಾಂಸ್ಕೃತಿಕ ಕ್ಷೇತ್ರಗಳ ಮಹತ್ವವನ್ನು ತಿಳಿದುಕೊಳ್ಳುವಲ್ಲಿ ಈ ಕಾವ್ಯ ಪುರಾಣಗಳು ನಮಗೆ ನೆರವಾಗುತ್ತವೆ.

ಹೀಗೆ ಕುರುಬ ಸಮುದಾಯದ ಇತಿಹಾಸ, ಪ್ರಾಚೀನತೆ, ಗುರುಪರಂಪರೆ, ಆರಾಧ್ಯ ದೈವಗಳು, ಸಾಂಸ್ಕೃತಿಕ ಕ್ಷೇತ್ರಗಳ ಪರಿಚಯ, ಆಚರಣೆ, ಸಂಪ್ರದಾಯಗಳು, ಉದ್ಯೋಗ, ಉಪಪಂಗಡಗಳು ಮೊದಲಾದವುಗಳ ಬಗೆಗೆ ಅಧ್ಯಯನ ಕೈಕೊಳ್ಳಲು ಈ ಕಾವ್ಯ ಪುರಾಣಗಳು ನಮಗೆ ಮಹತ್ವದ ಆಕರಗಳಾಗಿ ನೆರವಾಗುತ್ತವೆ. ಆದರೆ ಈ ಕಾವ್ಯ ಪುರಾಣಗಳ ಪಠ್ಯಗಳು ತುಂಬ ಅಶುದ್ಧವಾಗಿವೆ. ಅವುಗಳನ್ನು ಸರಿಯಾಗಿ ಪರಿಷ್ಕರಿಸಿ ಪುನರ್ ಪ್ರಕಟಿಸುವ ಅಗತ್ಯವೂ ಇದೆ. ಇವುಗಳ ಮೂಲ ಹಸ್ತಪ್ರತಿಗಳನ್ನು ಶೋಧಿಸಿ ಪರಿಷ್ಕರಿಸುವ ಕಾರ್ಯ ಈಗಲಾದರೂ ನಡೆಯಬೇಕಾಗಿದೆ.

ಕೊನೆಟಿಪ್ಪಣಿಗಳು

೧. ತಗರ ಪವಾಡ ಪ್ರಸ್ತಾವನೆಯಲ್ಲಿ ತಮ್ಮಂದಿರು ಎಂದು ಹೇಳಲಾಗಿದೆ. ಆದರೆ ಸಿ.ಕೆ.ಪರಶುರಾಮಯ್ಯನವರು ತಮ್ಮ ಒಂದು ಲೇಖನದಲ್ಲಿ ಅಣ್ಣಂದಿರು ಎಂದಿದ್ದಾರೆ ನೋಡಿ ಹಾಲತೊರೆ, ಪುಟ ೪೪

೨. ಲಿಂಗಾಯತ ೩-೯ ಡಿಸೆಂಬರ್ ೨೦೦೮

೩. ವಿ.ಆರ್.ಹನುಮಂತಯ್ಯ: ಭಾರತದ ಕುರುಬರ ಚರಿತ್ರೆ, ಪುಟ ೮೮

೪. ಎಂ.ಎಂ.ಕಲಬುರ್ಗಿ: ಮಾರ್ಗ ಸಂಪುಟ ೪, ಪುಟ ೩೮೦

೫. ಎಫ್.ಟಿ.ಹಳ್ಳಿಕೇರಿ: ಹಾಲುಮತ ಅಧ್ಯಯನಗಳು, ಪುಟ ೨೯

೬. ಚಂದ್ರಕಲಾ ಬಿದರಿ: ಚಿಂತನ ಚಲುವರಿದಾಗ ಪುಟ ೯೯

೭. ಭೀಮಕವಿಯ: ಶರಭಲಿಂಗೇಶ್ವರ ಪುರಾಣ ಒಂದನೆಯ ಸಂಧಿ, ೧೯ನೆಯ ಪದ್ಯ

ಅಧ್ಯಾಯ ೩

ದಾಖಲು ಸಾಹಿತ್ಯ

೧. ಶಾಸನಗಳು

೨. ಸನದುಗಳು

೩. ಕೈಫಿಯತ್ತುಗಳು


೪. ನಿರೂಪಗಳು

೫. ವರದಿಗಳು

ಅಧ್ಯಾಯ ೩

ದಾಖಲು ಸಾಹಿತ್ಯ

ಇಂದಿನ ವರ್ತಮಾನದಲ್ಲಿ ಭವಿಷ್ಯವನ್ನು ಕಟ್ಟಲು ಮುಖ್ಯವಾಗಿ ಬೇಕು ಚರಿತ್ರೆ. ಚರಿತ್ರೆಯನ್ನು ನಿರ್ಮಾಣ ಮಾಡಲು ದಾಖಲು ಸಾಹಿತ್ಯ ಮುಖ್ಯ ಆಕರಗಳಾಗುತ್ತವೆ. ದಾಖಲೆಗಳಲ್ಲಿ ಅಧಿಕವಾಗಿ ಶಾಸನ ಸಾಹಿತ್ಯವನ್ನು ವಿರಳವಾಗಿ ಸನ್ನದು ನಿರೂಪಗಳು, ಕೈಫಿಯತ್ತು, ಕಡತ, ಬಖೈರು ನಾಮೆಗಳನ್ನು ಮುಖ್ಯವಾಗಿ ಗುರುತಿಸಬಹುದು. ದಾಖಲು ಸಾಹಿತ್ಯದ ಪ್ರಕಾರಗಳನ್ನು ಕುರಿತು ಡಾ. ಕೆ.ರವೀಂದ್ರನಾಥರು ತಮ್ಮ 'ಕನ್ನಡ ದಾಖಲು ಸಾಹಿತ್ಯ'ದಲ್ಲಿ ಹೀಗೆ ಹೇಳಿದ್ದಾರೆ.[೧]



ಮೌಖಿಕ ಸಾಹಿತ್ಯದಲ್ಲಿ (ಜನಪದ) ಲಿಪಿಮಾಧ್ಯಮದಿಂದ ಹುಟ್ಟಿ ಬಂದ ಸಾಹಿತ್ಯದಲ್ಲಿ ಒಂದು ಕಾವ್ಯ ಸಾಹಿತ್ಯ, ಇನ್ನೊಂದು ದಾಖಲು ಸಾಹಿತ್ಯ. ಡಾ. ಎಂ.ಎಂ.ಕಲಬುರ್ಗಿಯವರು "ಕರ್ನಾಟಕದ ಶಾಸನಗಳು ಸಾಹಿತ್ಯಕ್ಕೆ ಸಾಹಿತ್ಯ ದಾಖಲೆಗೆ ದಾಖಲೆ ಎನಿಸಿವೆ" ಎಂದು ಶಾಸನಗಳ ಮಹತ್ವವನ್ನು ತಿಳಿಸಿದ್ದಾರೆ. ಹೀಗೆ ರಾಜಕೀಯ, ಧಾರ್ಮಿಕ, ಐತಿಹಾಸಿಕ, ಸಾಮಾಜಿಕ ಬದುಕನ್ನು ಚಿತ್ರಿಸುವ ಮತ್ತು ಇತಿಹಾಸ ರಚನೆಗೆ ದಾಖಲು ಸಾಹಿತ್ಯ ಪ್ರಮುಖ ಆಕರಗಳಾಗಿವೆ.[೨]

ದಾಖಲು ಸಾಹಿತ್ಯ ಹುಟ್ಟಲು ಕಾರಣ ನಡೆದ ವಿಷಯಗಳನ್ನು ನಂತರದ ತಲೆಮಾರಿಗೆ ತಿಳಿಸುವುದು ಮತ್ತು ಮನುಷ್ಯನ ಮಾತಿನಲ್ಲಿ ನಂಬಿಕೆ ಹೋದಾಗ ಅಂದರೆ ತಾನಾಡಿದ ಮಾತನ್ನು ಆಡಿಯೇ ಇಲ್ಲವೆಂದು ಭಾಷೆಗೆ ತಪ್ಪಿದಾಗ ಮೌಖಿಕ ಒಪ್ಪಂದವನ್ನು ದಾಖಲೆಯಾಗಿ ಹಿಡಿದಿಡುವ ಪ್ರಯತ್ನದ ಫಲವಾಗಿ ದಾಖಲೆಗಳು ಹುಟ್ಟಿಕೊಂಡಿವೆ. ಆದ ಕಾರಣ "ನುಡಿದುದೆ ತಾಮ್ರಶಾಸನಂ" "ಕಲ್ಲೊಳಿಟ್ಟ ಅಕ್ಕರ" ಇವನ ಮಾತು ಎಂದರೆ

ನೀರಿನ ಮೇಲೆ ಬರೆದ ಬರವಣಿಗೆಯಲ್ಲ ಎಂಬ ಹೇಳಿಕೆಗಳನ್ನು ಶಾಸನಗಳಲ್ಲಿ ಕಾಣಬಹುದು. ಇವು ವ್ಯಕ್ತಿಗಳ ಗುಣ-ಕುರಿತಾಗಿವೆ. ದಾಖಲೆಗಳಿಗೆ ಪ್ರತಿ ದಾಖಲೆಗಳನ್ನು ಸೃಷ್ಟಿಸಿ ಮನುಷ್ಯ ತನ್ನ ಕುಟಿಲ ಬುದ್ಧಿಯನ್ನು ಪ್ರಕಟಿಸಲು ಇಂಥ ಕೃತ್ಯಗಳನ್ನು ತಪ್ಪಿಸುವದಕ್ಕಾಗಿ ಬರೆದವನ, ಬರೆಸಿಕೊಳ್ಳುವವನ, ಬರೆಸಿಕೊಟ್ಟವನ, ಕಂಡವರ ಕೇಳಿದವರ ಸಾಕ್ಷಿ ಸಹಿ ಹಾಕಿದವರ ವಿವರಗಳನ್ನು ದಾಖಲಿಸಲಾಗಿದೆ. ಹೀಗೆ ಅಂಕಿತ ಮುದ್ರೆಗಳಿಂದ ಸಮಸ್ತ ದೈವದ ಸಮ್ಮುಖದಲ್ಲಿ ನಡೆದ ಒಪ್ಪಂದ ಕರಾರು ಲಿಪಿಮಾಧ್ಯಮದ ಮೂಲಕ ದಾಖಲೆಗಳು ಹುಟ್ಟು ಪಡೆದವು.

ದಾಖಲೆಗಳು ಜನಸಾಮಾನ್ಯರಿಗೆ ಸಂವಹನಗೊಳ್ಳಬೇಕೆಂಬ ಉದ್ದೇಶದಿಂದ ಶಿಲೆಯ ಮಾಧ್ಯಮದಲ್ಲಿ ಎರಡು ಪರಿಚಲನೆಗಳನ್ನು ಕಂಡುಕೊಂಡರು. ಒಂದು, ಶಾಸನದಲ್ಲಿ ಬರೆದ ಲಿಪಿ ಮಾಧ್ಯಮ, ಇನ್ನೊಂದು, ಕೊರೆಸಿದ ಶಿಲ್ಪ ಮಾಧ್ಯಮ. ಇವುಗಳಲ್ಲಿ ಲಿಪಿಮಾಧ್ಯಮ ಅಕ್ಷರಸ್ಥರಿಗೆ ಸಂಬಂಧಪಟ್ಟರೆ ಶಿಲ್ಪಮಾಧ್ಯಮ ನಿರಕ್ಷರಿಗಳಿಗೆ ಸಂಬಂಧಪಟ್ಟಿವೆ. ಈ ವಿಷಯವಾಗಿ ಕಲಬುರ್ಗಿಯವರು "ಶಿಲ್ಪಗಳು ನಿರಕ್ಷರರಿಗೆ, ಶಾಸನಗಳು ಸಾಕ್ಷರರಿಗೆ ಆಯಾ ಜನಾಂಗಗಳ ಮೌಲ್ಯಗಳನ್ನು ಬೋಧಿಸುವ ಪ್ರಸಾರ ಫಲಕಗಳಾಗಿ ಅಲ್ಲಲ್ಲಿ ನಿಂತಿವೆ" ಎಂದು ಅಭಿಪ್ರಾಯಪಟ್ಟಿದ್ದಾರೆ.[೩]

ಸುಮಾರು ಎರಡು ಸಾವಿರ ಇತಿಹಾಸವಿರುವ ಕನ್ನಡ ದಾಖಲು ಸಾಹಿತ್ಯ ಕಾಲದಿಂದ ಕಾಲಕ್ಕೆ ಪರಿವರ್ತನೆಗೊಳ್ಳುತ್ತ ಬಂದಿವೆ. ದಾಖಲಿಸಿಕೊಂಡ ಮಾಧ್ಯಮಗಳಲ್ಲಿ ಭಾಷೆ ಲಿಪಿಗಳಲ್ಲಿ ರೂಪ, ಸ್ವರೂಪಗಳಲ್ಲಿ ಬದಲಾಗುತ್ತಾ ಬಂದಿದ್ದರೂ ಅದರ ಒಟ್ಟು ಆಶಯ ಒಂದೇ ಆಗಿದೆ. ಚರಿತ್ರೆಯ ನಿರ್ಮಾಣಕ್ಕೆ ಕಾಗದ ಪತ್ರಗಳು ಸ್ವದೇಶಿ ವಿದೇಶಿಯರ ವರದಿ ದಾಖಲೆಗಳ ಆಕರಗಳಾಗಿ ಪರಿಣಮಿಸುತ್ತದೆ.

ಆಧುನಿಕವಾಗಿ ಮುಂದುವರಿದ ಅಲ್ಪಾಯುಷಿಗಳಾದ ಇಂದಿನ ದಾಖಲೆಗಳಿಂದ ಆಧುನಿಕ ಇತಿಹಾಸ ಕಟ್ಟುವದು ಮುಂದಿನ ತಲೆಮಾರಿನವರಿಗೆ ಕಷ್ಟ ಸಾಧ್ಯವಾಗುತ್ತದೆ ಎಂಬುದನ್ನು ನೆನೆಸಿಕೊಂಡರೆ ದೀರ್ಘಾಯುಷಿಗಳಾದ ಪ್ರಾಚೀನ ದಾಖಲೆಗಳ ಬಗ್ಗೆ ಹೆಮ್ಮೆಯೆನಿಸುತ್ತದೆ. ಈ ಹಿನ್ನೆಲೆಯಲ್ಲಿ ದಾಖಲೆಗಳಲ್ಲಿ ಹಾಲುಮತ ಸಂಸ್ಕೃತಿ ಅಭಿವ್ಯಕ್ತಗೊಂಡ ವಿವರಗಳನ್ನು ಅವಲೋಕಿಸಲಾಗುವದು.

೧. ಶಾಸನಗಳು

ಜನಾಂಗದ ಪ್ರಾಚೀನ ಜೀವನವನ್ನು ತಿಳಿದುಕೊಳ್ಳುವದು ಆಯಾ ಜನಾಂಗದ ಮುಖ್ಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಹಾಲುಮತ ಪ್ರಾಚೀನ ಜೀವನವನ್ನು ತಿಳಿಸಲು ಆಕರಗಳು ಉಪಯುಕ್ತ ಮಾಹಿತಿಗಳನ್ನು ಒದಗಿಸುತ್ತದೆ. ಈ ಜನಾಂಗ ವೇದಕಾಲದಿಂದ ಹುಟ್ಟಿದುದಾಗಿ ಸುಮಾರು ಕ್ರಿ.ಶ. ಪೂರ್ವ ೧೨೦೦ -೨೦೦೦ ವರ್ಷಗಳಷ್ಟು ಹಳೆಯದೆಂದು ಶಂಬಾ ಜೋಷಿಯವರ ಊಹೆಯಾಗಿದೆ.[೪] ಗುಸ್ತವ ಓಪರ್ಟರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ. 'ಈ ನೆಲದ ಅತ್ಯಂತ ಪ್ರಾಚೀನ ನಿವಾಸಿಗಳೆಂದರೆ ಕುರುಬರು. ಅವರು ಭಾರತದ ಮುಖ್ಯ ಕಸುಬಾಗಿಸಿಕೊಂಡಿರುವ ದ್ರಾವಿಡ ಸಂಬಂಧಿಕರೊಂದಿಗೆ ಸ್ಪರ್ಧಿಸಬಲ್ಲರು"[೫] ಪೂರಕವಾಗಿ

ಸಿ.ಜೆ.ಬ್ರೌನರು ದಕ್ಷಿಣ ದೇಶಗಳಲ್ಲಿ ಸಿಗುವ ಅತಿ ಪ್ರಾಚೀನವಾದ ನಾಣ್ಯಗಳು ಕುರುಬರವೆಂದು ಗುರುತಿಸಿದ್ದಾರೆ.[೬]

ಉಳಿದ ಜನಾಂಗಗಳಂತೆ ಕುರುಬರು ಸಹ ಇಂದು ತಮ್ಮ ವೃತ್ತಿಯನ್ನು ತ್ಯಜಿಸಿ ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿಕೊಂಡಿರುವರು. ಕುರಿಸಾಕುವದರೊಂದಿಗೆ ವ್ಯವಸಾಯ, ಕಂಬಳಿ ತಯಾರಿಕೆ, ಉಣ್ಣೆ ನೇಯ್ಗೆ, ಹೈನುಗಾರಿಕೆ ಮೊದಲಾದ ಕಸಬುಗಳನ್ನು ಮಾಡುತ್ತಿದ್ದರು. ಇಂಥ ಮುಖ್ಯ ವಿಷಯಗಳನ್ನು ಶಾಸನಗಳು ಅನಾವರಣ ಗೊಳಿಸುತ್ತವೆ. ಕುರುಬರ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳು ಆನುಷಂಗಿಕವಾಗಿ ಬಂದಿವೆ.

ಇವುಗಳಲ್ಲಿ ಬೆಳವಡಿಯ ಧನಗರ (ಕುರುಬ) ಸಮುದಾಯದ ಕುರಿತು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ೯೮೦ರ ಸೊಗಲದ ಶಾಸನವು ಕೇತಿಮಯ್ಯನ ಹೆಂಡತಿ ಕಂಚಿಕಬ್ಬೆಯ ವ್ಯಕ್ತಿತ್ವ ಅವಳು ಸುವರ್ಣಾಕ್ಷಿ ದೇವರಿಗೆ ದಾನ ನೀಡಿದ ವಿಷಯಗಳನ್ನು ವಿವರಿಸುತ್ತದೆ. ಶಾಸನ ರಚನಾಕಾರ ಕವಿ ಕಮಲಾದಿತ್ಯನು "..... ಸೂರ್ಯಗ್ರಹಣ, ನಿಮಿತ್ತದೊಳ್ಮನ್ನೆಯರುಂ ಸೋಲ ಮಾವದಿಂ ಬಗಳಂ ಧನಗರ ಕಂಚಿಕಬ್ಬೆ ಸ್ಥಾನಭೂಮಿಯಂ ಕೊಟ್ಟು ಸುವರ್ಣಾಕ್ಷಿದೇವ ತೀರ್ಥದಲ್ಲಪಂಗೆಯ್ಯ ತಪೋಧನರಾಹಾರದಾನಕ್ಕೆ ತ್ರಿಭುವನಸಿಂಗಿಪಂ(ಡಿ)ತರ ಕಾಲಂ ಕರ್ಚಿ ಬಿಟ್ಟ ಕಮ್ಮ ೫೦೦" ಎಂಬ ಗದ್ಯಭಾಗದ ಶಾಸನವು ಕಂಚಿಕಬ್ಬೆಯ ವಿಷಯವನ್ನು ವಿವರಿಸುತ್ತದೆ.[೭]

ಬೆಳಗಾವಿ ಮಹಾರಾಷ್ಟ್ರ ಕರ್ನಾಟಕ ಗಡಿಭಾಗವಾದ್ದರಿಂದ ಬೆಳಗಾವಿ ಜಿಲ್ಲೆಯಲ್ಲಿ ಕುರುಬರಿಗೆ ಧನಗಾರರು ಎಂಬ ಹೆಸರು ರೂಢಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಒಂಬತ್ತನೆಯ ಶತಮಾನದ ಕಂಚಿಕಬ್ಬೆ ಕುರುಬ ಸಮುದಾಯದ ಮೊದಲ ಮಹಿಳೆಯೆಂಬುದು ಈ ಶಾಸನದಿಂದ ತಿಳಿಯುತ್ತದೆ. ಕಂಚಿಕಬ್ಬೆಯ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

ಮೈಸೂರು ಜಿಲ್ಲೆಯ ಹೆಗ್ಗಡೆದೇವನಕೋಟೆ ತಾಲೂಕಿನ ಬೆಳತೂರು ಗ್ರಾಮದ ಕ್ರಿ.ಶ. ೧೦೫೭ರ ದೇಕಬ್ಬೆ ಶಾಸನವನ್ನು ಕುರುಬ ಸಮಾಜದ ಬಾಂಧವಮಲ್ಲ ಎಂಬ ಕವಿ ರಚಿಸಿರುವನು ಎಂದು ಶಿವಕುಮಾರ ನೀರಲಗಿ ಅವರು ಸಾಕ್ಷಾಧಾರಗಳಿಂದ ದೃಢಪಡಿಸಿದ್ದಾರೆ.[೮] ಚೋಳ ಅರಸ ರಾಜೇಂದ್ರದೇವನ ಶಾಸನ ಕುಡಿಯರ ಕುಲದ ದೇಕಬ್ಬೆ ಸತಿಹೋದ ಪ್ರಕರಣವನ್ನು ದಾಖಲಿಸಲು ಮತ್ತೊಬ್ಬ ಶೂದ್ರನಿಂದ ಸಾಧ್ಯ ಎಂದು ನೀರಲಗಿಯವರು ಸಮರ್ಥಿಸಿದ್ದಾರೆ. ಈ ಶಾಸನ ಉಲ್ಲೇಖ ಹೀಗಿದೆ.

೩೪....... ಮಱುಪರ ಚಕ್ರಂ ದ್ವಿಜರೊಳ್

ಕಱಿಮಱಿಯಿ

೩೫.. ಲ್ಲೆನಿಪ ಕುಱುಬನಾದಿತ್ಯಂ ಸನ್ನಱಿಕೆಯವಗಾದಮಲ್ಲಂ

ಜಱುಚದ ಕವಿರಾಜಬಾನ್ಧಮ ಬರೆದನಿದಂ

ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸರೂರಿನಲ್ಲಿ ಹಾಲುಮತದ ಪ್ರಾಚೀನ ಕುರುಹುಗಳು ದೊರೆತಿವೆ. ಇಲ್ಲಿ ಮಲ್ಲಿಕಾರ್ಜುನ (ರೇವಣಸಿದ್ಧ?) ದೇವಾಲಯದ ಆವರಣದಲ್ಲಿ ೧೨೦೮ ಮತ್ತು ೧೨೧೦ನೆಯ ಕಾಲದ ಎರಡು ಶಾಸನಗಳು ಸಿಕ್ಕಿವೆ.[೯] ೧೨೦೮ರ ಶಾಸನದಲ್ಲಿ "ಮಂಕಯಂಗಳಿಗೆ ಮಲ್ಲಿನಾಥ ರಾಮವಂಬನು ಸಂನಿಧಾನದಲು" ಎಂಬ ವಾಕ್ಯ ಮತ್ತು ೧೨೧೦ರ ಶಾಸನದಲ್ಲಿ "ಅರಸನಹಳ್ಳಿಯ ವೀರನಗೌಡರ ಹೊನಗುಂದದ ಬೀಚಗುರು ತಂನ ಮಗ ಕಾಲದಾ ಗುರುವಿಗೆ ಮಲ್ಲಿನಾಥದೇವರ ಸ್ತಾನವಧಾರಾಪೂರ್ವಕ ಮಾಡಿ ಕೊಟ್ಟರು" ಎಂಬ ವಾಕ್ಯಗಳು ಕುರುಬರ ಪರಂಪರೆಯಲ್ಲಿ ಒಬ್ಬನಾದ ಸಿದ್ಧರಾಮೇಶ್ವರನ ಅನುಯಾಯಿಯಾದ ಸಿದ್ಧಮಂಕನ ಬಗೆಗೆ ತಿಳಿಸುತ್ತವೆ. ಈ ಮೇಲಿನ ಉಲ್ಲೇಖಗಳಿಂದ ಸರೂರಿನ ಮಲ್ಲಿಕಾರ್ಜುನ ದೇವಾಲಯವು ೧೨-೧೩ನೆಯ ಶತಮಾನದಲ್ಲಿ ಬಹುಶಃ ಸಿದ್ಧರಾಮನ ಅನುಯಾಯಿಗಳ ಕೇಂದ್ರವಾಗಿರಬಹುದು.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ತಾಳೀಕಟ್ಟೆ ಗ್ರಾಮದ ಹಳ್ಳದ ಜಂಗಮ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ನೆಟ್ಟ ಶಾಸನವು ಕುರುಬರಿಗೆ ಸಂಬಂಧಿಸಿದಂತೆ ಅನೇಕ ಕುತೂಹಲಕಾರಿ ಸಂಗತಿಗಳನ್ನು ದಾಖಲಿಸಿದೆ.[೧೦] ಉದಾಹರಣೆಗಾಗಿ ಕೆಲವು ಸಾಲುಗಳು ಹೀಗಿವೆ.

೧೦........

೧೧. ಗಡದದೇವರಾಯ | ಬೋಜರಯ ಮಲ್ಲಿರಯ

೧೨. ಡಾರಯ | ಬುಕರಯ | ಜೋಗರಾಯ | ವಿತಾಕುರುಬಾರಯ

೧೩. ರು ಆಳಿದರು | ರಾಮಾರಾಜ | ಯಕಾಟಿರಾಯರು | ತಾ

೧೪. ಳವರತಿರುಮಲಾರಾಜಾ | ದಳವಾಲಿಜಗಾಮೈಯ| ಯಿ

೧೫. ಜಯನಗರಾದ ಆಳಿದರು | .... ಗಯಿದ ಕುರುಬಾ ಗೌ

೧೬. ಡಾಗಳು | ಕೋಟಲೆಯಚಿಕೋಡಾಗೌಡ | ಗುಜಜಿಗು

೧೭. ಡಿಯ ಗೌಡಾ | ಕೋಲುಕಾರಪ್ಪ | ನಾಗಿಗೌಡಾ ಪೂ

೧೮. ಜಾರಿಚಿಕೋಡಾ |ಲಾಕಿ ಬೋವಾನಮುದಿ ಬೋಗಪ್ಪಮು |

೧೯. ದಿರೇವಣಾವಡೆಯರು ಬಾಗುರಾಜಾನಾಯಕರು ಹೋ

ವಿಜಯನಗರವನ್ನಾಳಿದವರು ಹಕ್ಕಬುಕ್ಕರೆಂದೂ, ದೊಡ್ಡಬೀರಗೌಡ, ಕುರುಬಗೌಡ, ಪೂಜಾರಿಗಳು, ಕೋಲಕಾರ, ದಳವಾಯಿ ಮೊದಲಾದ ಹೆಸರುಗಳು ಇಲ್ಲಿ ಉಲ್ಲೇಖಗೊಂಡಿವೆ. ಆದರೆ ಶಾಸನ ರಚನಾಕಾಲವನ್ನು ಉಲ್ಲೇಖಿಸಿಲ್ಲ. ಶಾಸನ ತ್ರುಟಿತಗೊಂಡ ಕಾರಣ ಓದಲು ತೊಂದರೆಯಾಗುತ್ತದೆ. ಈ ಶಾಸನವನ್ನು ದೇವಾಲಯದ ಅಂಗಳದಲ್ಲಿ ಹೂತಿರುತ್ತಾರೆ. ಕಾರಣವೇನೆಂದು ವಿಚಾರಿಸಿದರೆ "ಶಾಸನದ ಕಲ್ಲು ಬಿಸಿಲು

ಮಳೆಗೆ ಹಾಳಾಗಬಾರದೆಂಬ ಉದ್ದೇಶದಿಂದ ಅಜ್ಜ ಮುತ್ತಾತರ ಕಾಲದಿಂದ ಅದನ್ನು ಭೂಮಿಯಲ್ಲಿ ಹೂಳಿಡಲಾಗಿದೆ. ಅಧ್ಯಯನಕಾರರು, ಆಸಕ್ತರು ಆ ಶಾಸನ ನೋಡಬೇಕೆಂದು ಕೇಳಿದರೆ "ಭೂಮಿಯನ್ನು ಅಗೆದು ಶಾಸನವನ್ನು ತೋರಿಸುತ್ತೇವೆ" ಎಂದು ಅಲ್ಲಿಯ ಜನ ಹೇಳುತ್ತಾರೆ.

ತುರುವೆಕೆರೆಯ ಶ್ರೀ ರೇವಣಸಿದ್ದೇಶ್ವರ ಮಠದಲ್ಲಿ ದೊರೆತ ತಾಮ್ರಶಾಸನವು ವಿಜಯನಗರದ ದೊರೆಗಳಾದ ವೀರಪ್ರತಾಪರಾಮರಾಜೈಯ್ಯ, ಸದಾಶಿವರಾಯ, ವೆಂಕಟಾದ್ರಿರಾಜ ಇವರ ಸಮ್ಮುಖದಲ್ಲಿ ವಿವಿಧ ಮಠಗಳ ಸ್ವಾಮಿಜಿಗಳು ಮತ್ತು ಹಿರಿಯರುಗಳ ನೇತೃತ್ವದಲ್ಲಿ ನಡೆದ ಹಾಲುಮತದ ಕುರುಬರಿಗೆ ಗುರುಗಳಾರು ಎಂಬ ವಾದವಿವಾದವನ್ನು ಹೊಂದಿದೆ.[೧೧] ಬಹುಶಃ ೧೮ನೆಯ ಶತಮಾನದಲ್ಲಿ ನಕಲು ಮಾಡಿರುವ ಸಾಧ್ಯತೆಗಳಿವೆ. ಈ ವಾದದಲ್ಲಿ ಶಾಂತಮುತ್ತಯ್ಯನು ಮಂಕನವರನ್ನು ಗೆದ್ದು ಸೆರೆಹಾಕಿದ ಪ್ರಸ್ತಾಪ ಬಂದಿದೆ. ಕುರುಬರ ಗುರುಗಳಾದ ಒಡೆಯರಲ್ಲಿ ಮೂರು ಪಂಗಡಗಳಿವೆ.

೧. ರೇವಣಸಿದ್ದೇಶ್ವರರ ಅನುಯಾಯಿಗಳಾದ ಶಾಂತೊಡೆಯರು

೨. ಸೊನ್ನಲಾಪುರದ ಸಿದ್ಧರಾಮನ ಅನುಯಾಯಿಗಳಾದ ಮಂಕೊಡೆಯರು

೩. ಅಮೋಘಸಿದ್ದೇಶ್ವರ ಅನುಯಾಯಿಗಳಾದ ಒಡೆಯರು

ರೇವಣಸಿದ್ಧ ಪರಂಪರೆಯ ಶಾಂತೊಡೆಯರೆ ಹಾಲುಮತದ ಕುರುಬರಿಗೆ ಗುರುಗಳು ಎಂಬುದು ಈ ಶಾಸನದಿಂದ ತಿಳಿಯುತ್ತದೆ.

ಶಾಸನತಜ್ಞರಾದ ದೇವರಕೊಂಡಾರೆಡ್ಡಿ ಹೇಳುವಂತೆ "ಇದೊಂದು ಜಯರೇಖೆ ಶಾಸನ. ಈ ಜಯರೇಖೆಯು ವಿಜಯನಗರ ಪಟ್ಟಣದಲ್ಲಿದ್ದ ಅಂದಿನ ಪೇಟೆಗಳು, ಮಠಗಳು ಉಕ್ತವಾಗಿವೆ. ಅಲ್ಲದೆ ತಿರುಮಲದೇವಿ ಪೇಟೆ ಉಲ್ಲೇಖಿಸಲಾಗಿದೆ. ಸಣ್ಣಕ್ಕಿ ಪೇಟೆಯು ತಿರುಮಲದೇವಿ ಪಟ್ಟಣದಲ್ಲಿದ್ದಿರಬೇಕು. ಇಂದಿನ ಸಣ್ಣಕ್ಕಿ ವೀರಭದ್ರದೇವಾಲಯದ ಹತ್ತಿರ ಈ ಪೇಟೆ ಇದ್ದಿರಬೇಕು. 'ಸೋಮವಾರದ ಬಾಗಿಲು' ಎಂಬ ಉಲ್ಲೇಖವು ಕುರುಬರಿಗೂ ಈ ಬಾಗಿಲಿಗೂ ಇದ್ದ ಸಂಬಂಧವನ್ನು ತಿಳಿಸುತ್ತದೆ. ಇದರ ಕುರಿತು ಇನ್ನೂ ಹೆಚ್ಚಿನ ಅಧ್ಯಯನದ ಅಗತ್ಯವಿದೆ.[೨]

ದೇವಲಾಪುರದ ಅಪ್ರಕಟಿತ ನಾಲ್ಕು ತಾಮ್ರಶಾಸನಗಳನ್ನು ಡಾ. ಎಫ್.ಟಿ.ಹಳ್ಳಿಕೇರಿ ಅವರು ಶೋಧಿಸಿದ್ದಾರೆ.[೧೩] ಕಂಪ್ಲಿ-ಬಳ್ಳಾರಿಯ ಮುಖ್ಯ ರಸ್ತೆಯಲ್ಲಿ ಕಂಪ್ಲಿಯಿಂದ ಹದಿನೈದು ಕಿಲೋಮೀಟರ ಅಂತರದಲ್ಲಿ ದೇವಲಾಪುರ ಗ್ರಾಮವಿದೆ. ಆ ಗ್ರಾಮದ ಸಿದ್ದಯ್ಯಸ್ವಾಮಿ ಒಡೆಯರ ಎಂಬುವವರ ಮನೆಯಲ್ಲಿ ನಾಲ್ಕು ತಾಮ್ರಪತ್ರಗಳು ದೊರೆತ ವಿಚಾರವನ್ನು ಲೇಖನವೊಂದರಲ್ಲಿ ತಿಳಿಸಿದ್ದಾರೆ. ಇಲ್ಲಿ ಸರೂರು ರೇವಣಸಿದ್ದೇಶ್ವರ ಮಠದ ಶಾಖಾಮಠವಿದೆ. ಈ ಮಠಕ್ಕೆ ೧೮೬೨ರಲ್ಲಿ ಸಣ್ಣಸಿದ್ದಯ್ಯನವರು ಒಡೆಯರಾಗಿದ್ದರು. ಇವರು ಮೂಲತಃ ದೇವಲಾಪುರದವರು. ಸಣ್ಣಸಿದ್ದಯ್ಯನವರ ತಂದೆ ಬಸಪ್ಪ ಅತನಿಗೆ ತಿಮ್ಮಪ್ಪ ಹಿರೇಸಿದ್ದಪ್ಪ

ಮತ್ತು ಸಣ್ಣಸಿದ್ದಪ್ಪ ಎಂಬ ಮೂವರು ಮಕ್ಕಳಿರುವ ಸಂಗತಿ ಈ ತಾಮ್ರ ಪತ್ರಗಳಿಂದ ತಿಳಿಯುತ್ತದೆ. ಗಾದಿಗನೂರು ದೇವಲಾಪುರಗಳು ವಿಜಯನಗರ ಪ್ರದೇಶದಲ್ಲಿರುವುದರಿಂದ ವಿದ್ಯಾನಗರ ಸಂಸ್ಥಾನ ಮತ್ತು ವಿದ್ಯಾನಗರ ಸರಕಾರ ಎಂದು ಪ್ರಾರಂಭವಾಗುತ್ತದೆ.

ತಾಮ್ರಪತ್ರ ೧

ಮೊದಲ ಪತ್ರವು ೨೪ ಸಾಲುಗಳನ್ನು ಒಳಗೊಂಡಿದೆ. ಇದು ಶಾ.ಶಕೆ ೧೭೯೪ರಲ್ಲಿ ಅಂದರೆ ೧೮೭೨ರಲ್ಲಿ ರಚನೆಗೊಂಡಿದೆ. ಈ ತಾಮ್ರಪತ್ರದಲ್ಲಿರುವ ವಿಷಯಗಳನ್ನು ಎಫ್.ಟಿ.ಹಳ್ಳಿಕೇರಿ ಅವರು ಹೀಗೆ ಕ್ರೋಢೀಕರಿಸಿದ್ದಾರೆ.

೧. ೧೮೭೨ರಲ್ಲಿ ಗಾದಿಗನೂರು ಶ್ರೀರೇವಣಸಿದ್ದೇಶ್ವರ ಮಠದ ಅಧಿಪತಿಗಳಾದವರು ದೇವಲಾಪುರದ ಸಣ್ಣಸಿದ್ಧಯ್ಯನವರು. ೨. ಚಿತ್ರಕಲ್ಲು, ದೊಡ್ಡಯ್ಯಗುತ್ತಿ ತಿಮ್ಮಯ್ಯ, ಯರೂರು ಮಲ್ಲಯ್ಯ, ಗದ್ವಾಲಿ ರಾಮಯ್ಯ, ಹಿರೇಸಮುದ್ರದ ನೆಂಬೆಣ್ಣ, ಹೊಸಪೇಟೆ ಲಿಂಗಣ್ಣ, ಉರುಕುಂದಿ ಹೇಮಯ್ಯ, ರಾಯದುರ್ಗದ ಹುಚ್ಚಯ್ಯ ಹಾಗೂ ವಂದವಾಗಲ ಬೀರಯ್ಯ ಮುಂತಾದ ಸಮಸ್ತ ದೇವಾಚಾರದವರು ಪಡೇರ ಸಣ್ಣಸಿದ್ದಯ್ಯನವರಿಗೆ ಕಾಣಿಕೆ ಕೊಡುವ ಕುರಿತು ವಿಜ್ಞಾಪನೆ ಮಾಡಿಕೊಂಡ ಮಾಹಿತಿಗಳಿವೆ. ೩. ಹಾಲುಮತಸ್ಥ ಜನರ ಪೈಕಿ ಸಂಡೂರು ಕರಿಬಸಣ್ಣನು ಈ ಒಡೆಯರಿಗೆ ಪ್ರತಿವರ್ಷ ಬಣ ಮಗ್ಗ ೧ಕ್ಕೆ ರೂ ೧, ಎಂಟು ಎತ್ತಿನ ಕಮತ(ಒಕ್ಕಲುತನ)ಕ್ಕೆ ೧೪ ಗಿದ್ದನ ದವಸ ಮೂರು ಕುಯ್ಯಲಿಗೆ ಒಂದು ಕುರಿ, ಒಂದು ಲಗ್ನಕ್ಕೆ ೫ ಟೆಂಕೆ ರೊಕ್ಕವನ್ನು ಕೊಡಬೇಕು. ೪ ಈ ವಿವಿಧ ಕಾಣಿಕೆಗಳನ್ನು ಒಡೆಯರು ಓಲೆ ಬರೆದ ಪ್ರಕಾರ ಮಾಘ ಮಾಸದಲ್ಲಿ ಸಮಸ್ತ ಹಾಲುಮತಸ್ಥ ಜನರು ಕೊಡಬೇಕು. ೫ ಈ ಪ್ರಕಾರ ಸಮಸ್ತ ದೈವಾಚಾರದವರು ಪ್ರತಿವರ್ಷ ತಪ್ಪದೇ ನಡೆಸಿಕೊಡಬೇಕು. ೬. ಈ ಪತ್ರವನ್ನು ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಮನ್ಮಹಾ ಶಾಲಿವಾಹನ ಶಖ ವರುಷಂಗಳು ೧೭೯೪ರಲ್ಲಿ ಬರೆಸಿವೆ. ಈ ತಾಮ್ರ ಪತ್ರದ ಕೆಲವು ಸಾಲುಗಳನ್ನು ಉದಾಹರಿಸಲಾಗಿದೆ.

೧೧. ......

೧೨. ಹಾಲುಮತಸ್ತ ಜನರ ಪೈಕಿ ಸಂಡೂರು ಕರಿಬಸಣ್ಣನು ನಮ್ಮ ಗುರುವುಗ

೧೩. ಳಾದ ವಡೇರ ಸಣ್ಣಸಿದ್ಧಯ್ಯನವರಿಗೆ ಪ್ರತಿ ವರುಷದಲ್ಲಿ ನಮ್ಮ ಕುಲಾಚಾರ

೧೪. ದಲ್ಲಿ ಗುರುವುಗಳಿಗೆ ಬಣಮಗ್ಗ ೧ಕ್ಕೆ ೧ ಅಕ್ಷರದಲ್ಲು ಚಲಾವಣೆ ವಂದು ರೂ

೧೫. ಪಾಯಿಯದರ ಶಿವಾಯ ೮ ಯತ್ತಿನ ಕಮತಕ್ಕೆ ೧೪ ಗಿದ್ದನ ದವಸ ಮೂರು

೧೬. ಮುರು ಕುಯ್ಯಲಿಗೆ ವಂದು ಕುರಿ ಅಂಗುವಂದು ಜಡೆಮರಿಲಗ್ನ ೧ ಕ್ಕೆ ಐದು

೧೭. ಟೆಂಕೆ ರೊಕ್ಕ ಯಿ ಪ್ರಕಾರ ಪ್ರತಿ ವರುಷದಲ್ಲಿ ಸಮಸ್ತವಾದ ಹಾಲುಮತ

೧೮. ಸ್ತ ಜನರು ನಮ್ಮ ಗುರುವುಗಳಿಗೆ ನಡೆಸಿಕೊಡಬೇಕು ಪ್ರತಿ ವರುಷದಲ್ಲಿವೊ...

ತಾಮ್ರಪತ್ರ ೨

ಎರಡನೆಯ ತಾಮ್ರಶಾಸನ ೨೦ ಸಾಲುಗಳನ್ನು ಹೊಂದಿದೆ. ಈ ತಾಮ್ರ ಪತ್ರದ ಕಾಲ ೨೯ ಜನವರಿ ೧೮೭೧. ಆರಂಭದಲ್ಲಿ ವಿದ್ಯಾನಗರ ಸರಕಾರ ಎಂದಿದೆ. ನಂತರ ಒಡೆಯರ ಬಸಪ್ಪನ ಮಕ್ಕಳು ತಿಮ್ಮಪ್ಪ ಹಿರೇಸಿದ್ದಪ್ಪ ಮತ್ತು ಸಣ್ಣಸಿದ್ದಪ್ಪ ಇವರಲ್ಲಿ ಸಣ್ಣಸಿದ್ದಪ್ಪನು ಪ್ರಮೋದೂತ ಸಂವತ್ಸರ(೧೮೯೨)ದ ವಿವರಗಳಿವೆ. ಅವು ಹೀಗಿವೆ. ೧. ಪೂರ್ವದ ಹಿರಿಯರಂತೆ ನಡೆದುಕೊಳ್ಳುತ್ತ ಬರಬೇಕೆಂದು ಸೂಚಿಸಲಾಗಿದೆ. ೨. ಕುಲದವರಿಂದ ಕಾಣಿಕೆ ತೆಗೆದುಕೊಳ್ಳುತ್ತ ಕುಲ ಮತಾಚಾರ ಪದ್ಧತಿಗೆ ವಿರೋಧವಾಗದಂತೆ ನಡೆದುಕೊಳ್ಳಬೇಕು. ೩. ಸ್ವಾಮಿರಾವು ಮಜುಮದಾರ ಎಂಬುವವರ ಉಲ್ಲೇಖ ಹೊಂದಿದೆ. ಬಹುಶಃ ಈತ ಸ್ಥಾನಿಕ ಅಧಿಕಾರಿ ಪ್ರಧಾನಿಗಳು ದಳವಾಯಿ ಗಳಾಗಿರಬಹುದು. ೪. ವೆಂಕಟರಾಮರಾಜನು ಆನೆಗೊಂದಿ ಸಂಸ್ಥಾನದಲ್ಲಿ ಪ್ರಧಾನಿಯಾಗಿದ್ದನೆಂದು ಬನವಾಸಿ ಸ್ಥಳದ ಕೈಫಿಯತ್ತು ತಿಳಿಸುತ್ತದೆ.[೧೯] ಉದಾಹರಣೆಗೆ ಕೆಲವು ಸಾಲುಗಳು ಹೀಗಿವೆ.

೯. ......

೧೦. ರ ಯಾವತ್ತು ವಿಚಾರಿಸಲಾಗಿ ನೀನು ಹಿರೇರ ಲಾಗಾಯ್ತು. ಹಾಲುಮತ

೧೧. ಕುಲಕ್ಕೆ ಗುರುವುಯೆಂಬುವಂತೆ ಸಾಬೀತು ಆಯ್ತು ಆದಕಾರ

೧೨. ಣ ಹಾಲುಮತ ಕುಲ ಅನಲಾಗಿ ಕುರುಬರ ಕುಲದಲ್ಲಿ ಯಿನ್ನು ಯಿ

೧೩. ಕುಲದ ಪೈಕಿ ಸೇರಿದ ಕುಲಗಳ ಜನರು ಯಾವತ್ತರಿಂದಲಿ ಗುರುತ್ವ

೧೪. ಮರಿಯಾದಿಗಳು ಸಲ್ಲುವಂತೆ ಮಾಮೂಲು ಪದ್ಧತಿ ಪ್ರಕಾರ

೧೫. ಆಯೀ ಜನರಿಂದ ಕಾಣಿಕೆ ತ್ಯಗದುಕೊಳ್ಳುತ್ತಾ ನಿಂಮ್ಮಕುಲಾಮ

೧೬. ತಾಚಾರ ಪದ್ಧತಿಗೆ ವಿರೋಧವಾಗದಂತೆ ನಡೆಕೊಂಡುಯಿರತಕ್ಕದೆಂದು

೧೭. ತಿಳಿಯೋದು 'ದ' ಸ್ವಾಮಿರಾವು ಮುಜಮದಾರು।

ತಾಮ್ರಪತ್ರ ೩

೧೬ ಸಾಲುಗಳನ್ನು ಹೊಂದಿದ ಈ ತಾಮ್ರಪತ್ರವು ಎರಡನೆಯ ತಾಮ್ರಪತ್ರದ ವಿಷಯವನ್ನು ಹೊಂದಿದೆ. ಆದರೆ ಕಾಲದಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವಿದೆ. ಸಣ್ಣಸಿದ್ಧಪ್ಪನು ಅರ್ಜಿಸಲ್ಲಿಸಿದ ಕಾಲ ಅಂಗೀರಸನಾಮ ಸಂವತ್ಸರ(೧೮೯೪)ದ ಅಶ್ವೀಜ ಶುದ್ಧ ೧ ಕೊನೆಯಲ್ಲಿ ಕುಮಾರ ರಾಘವರಾಜ ದೇವನ ಉಲ್ಲೇಖವಿದೆ.

ಹೀಗೆ ಈ ಮೂರು ತಾಮ್ರಪತ್ರಗಳು ಗಾದಿಗನೂರು ಶ್ರೀ ರೇವಣಸಿದ್ದೇಶ್ವರ ಮಠದ ಗುರುಗಳಾದ ಒಡೆಯರ ಸಣ್ಣಸಿದ್ದಪ್ಪನಿಗೆ ಸಂಬಂಧಿಸಿದ ವಿವರಗಳನ್ನು ನೀಡುತ್ತವೆ. ಈ ಗಾದಿನೂರು ಗ್ರಾಮವು ಹೊಸಪೇಟೆ ಬಳ್ಳಾರಿ

ಮುಖ್ಯರಸ್ತೆಯಲ್ಲಿ ಹೊಸಪೇಟೆಯಿಂದ ಮೂವತ್ತು ಕಿ.ಮೀ ಅಂತರದಲ್ಲಿದೆ. ಇಲ್ಲಿ ಸರೂರು ರೇವಣಸಿದ್ದೇಶ್ವರ ಮಠದ ಶಾಖಮಠವಿದೆ. ಈ ಮಠಕ್ಕೆ ೧೮೬೨ರಲ್ಲಿ ಗುರುಗಳಾಗಿದ್ದವರು ಒಡೆಯರ ಸಣ್ಣಸಿದ್ದಯ್ಯನವರ ತಂದೆ ಬಸಪ್ಪ. ಆತನಿಗೆ ತಿಮ್ಮಪ್ಪ, ಹಿರೇಸಿದ್ದಪ್ಪ ಮತ್ತು ಸಣ್ಣಸಿದ್ದಪ್ಪ ಎಂಬ ಮೂವರು ಮಕ್ಕಳಿದ್ದ ಸಂಗತಿ ಈ ತಾಮ್ರಪತ್ರಗಳಿಂದ ಗೊತ್ತಾಗುತ್ತದೆ. ಪರಂಪರಾನುಗತವಾಗಿ ಈಗಲೂ ಈ ಮನೆತನದ ಒಡೆಯರೇ ಗಾದಿಗನೂರು ಮಠಕ್ಕೆ ಗುರುಗಳಾಗಿದ್ದಾರೆ. ಶ್ರೀ ಸಿದ್ದಯ್ಯಸ್ವಾಮಿ ಒಡೆಯರ ಎಂಬುವವರು ಈಗ ಗುರುಗಳಾಗಿದ್ದು, ಗಾದಿಗನೂರು ಸುತ್ತಮುತ್ತಲಿನ ಹಳ್ಳಿಯ ಕುರುಬರ ಮನೆತನಗಳು ಈ ಮಠದ ವ್ಯಾಪ್ತಿಗೆ ಬರುತ್ತವೆ.

ಗಾದಿಗನೂರು ದೇವಲಾಪುರಗಳು ವಿಜಯನಗರ ಪ್ರದೇಶದಲ್ಲಿರುವದರಿಂದ "ವಿದ್ಯಾನಗರ ಸಂಸ್ಥಾನ ವಿದ್ಯಾನಗರ ಸರಕಾರ" ಎಂದು ಪ್ರಾರಂಭಗೊಳ್ಳುವುದು ಈ ತಾಮ್ರಪತ್ರಗಳು ವಿಶೇಷತೆಯಾಗಿದೆ. ಉಲ್ಲೇಖಗೊಂಡ ಸ್ವಾಮಿರಾವು ಮುಜಮದಾರ, ನಂದ್ಯಾಲು ವೆಂಕಟರಾಮರಾಜ ಪ್ರಧಾನಿ, ಕುಮಾರ ರಾಘುವರಾಜದೇವ ಹೆಸರುಗಳು ಸಹ ಕುತೂಹಲಕಾರಿಯಾಗಿವೆ. ಉದಾಹರಣೆಗಾಗಿ ಕೆಲವು ಸಾಲುಗಳು ಹೀಗಿವೆ.

೯. ....

೧೦. ತ್ವ ಮರ್ಯ್ಯಾದಿಗೆ ಸಲಿವಂಥಾ ಮಾಮೂಲು ಪದ್ಧತಿ ಪ್ರಕಾರ ಆ

೧೧. ಯಾ ಜನರಿಂದ ಕಾಣಿಕೆ ತೆಗೆದುಕೊಳ್ಳುತ್ತ ನಿಂಮ್ಮ ಕುಲಾಚಾರ ಮ

೧೨. ತದ ಪೂರ್ವ ಪದ್ಧತಿಗೆ ವಿರೋಧವಾಗದಂತೆ ನಡಕೊಂಡುಯಿರತಕ್ಕ

೧೩. ದೆಂದು ತಿಳಿಯೋದು ಸನ್ ೧೮೭೨ನೆ ಯಿಸವಿ ಮಾಹೆ ಆಗಟು

೧೪. ಬರ ಪೂಚರಾಚು ಕುಮಾರ ರಾಘುವರಾಜದೇವ

೧೫. ಮಹಾರಾರು ಚಂದು ೩ ತೇದಿ ಶಾಲಿವಾಹನ ಶಖ

೧೬. ಖು ದಳವಾಯಿಗಳ ರುಜುವು ೧೭೯೪

ತಾಮ್ರದ ಗುರುತಿನ ಬಿಲ್ಲೆಗಳು

ಒಡೆಯರು ಭಕ್ತರ ಮನೆಗೆ ಹೋಗುವಾಗ ಅಥವಾ ಸಾಮಾಜಿಕ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಬೇಕಾದರೆ ಇವುಗಳನ್ನು ಕಡ್ಡಾಯವಾಗಿ ಕೈಗೆಕಟ್ಟಿಕೊಂಡೇ ಹೋಗಬೇಕು. ಇವುಗಳಲ್ಲಿ ಒಡೆಯರ ಹೆಸರು ಮತ್ತು ಊರು ಗುರುತನದ ಹಕ್ಕುದಾರಿಕೆಯನ್ನು ನೀಡಿದ ದಿನಾಂಕ ಇತ್ಯಾದಿ ವಿವರಗಳಿರುತ್ತವೆ. ಅಂಥ ಎರಡು ಬಿಲ್ಲೆಗಳು ದೇವಲಾಪುರದ ಸಿದ್ದಯ್ಯನವರ ಮನೆಯಲ್ಲಿವೆ. ದೇವನಾಗರಿ ಲಿಪಿಯಲ್ಲಿರುವ ಆ ಬಿಲ್ಲೆಯ ವಿವರಗಳು ಹೀಗಿವೆ.

ಬಿಲ್ಲೆ ೧

ಶ್ರೀ

ಶ್ರೀ ರೇವಣಸಿದ್ದೇಶ್ವರ

ಹಾಲುಮತಾಚಾರ

ಸರೂರು ಮಠದ

ಬಸವಯ್ಯನವರು

ನವೆಂಬರ ೭ ಸನ್ (೧೮೬೨) ೧೭೮೪

ಸಾ. ದೇವಲಾಪುರ, ತಾಲ್ಲೂಕು ಹೊಸಪೇಟೆ, ಜಿಲ್ಲಾ ಬಳ್ಳಾರಿ

ಈ ಬಿಲ್ಲೆಗಳ ನೆರವಿನಿಂದ ಮಠ, ಆ ಮಠದ ಗುರುವಿನ ಹೆಸರು ಒಡೆತನ ದೊರಕಿದ ಕಾಲ ಇತ್ಯಾದಿ ವಿಷಯಗಳನ್ನು ತಿಳಿದುಕೊಳ್ಳಬಹುದು. ಇಂಥ ಅನೇಕ ತಾಮ್ರಪತ್ರಗಳು ಮತ್ತು ಬಿಲ್ಲೆಗಳು ಒಡೆಯರ ಮನೆಮಠಗಳಲ್ಲಿವೆ. ಇವು ಗುರುಪರಂಪರೆ ಹಾಗೂ ಸಂಸ್ಕೃತಿಯ ಬಗೆಗೆ ಹೊಸ ಸಂಗತಿಗಳನ್ನು ತಿಳಿಸುವ ಸಾಧ್ಯತೆಗಳಿವೆ.

ರಾಜಪರಿವಾರ ಮತ್ತು ದೈವ ಪರಿವಾರ ಸಮ್ಮುಖದಲ್ಲಿ ಕುರುಬರ ಮತ್ತು ಬಣಜಿಗರ ಮಧ್ಯ ಹುಟ್ಟಿಕೊಂಡ ಜಗಳ ಪರಿಹರಿಸಿಕೊಂಡ ಘಟನೆಯನ್ನು ಕೋಲಾರ ಜಿಲ್ಲೆ ಗೌರಿಬಿದನೂರಿನ ತಾಲೂಕಿನ ನಗರಗೆರೆ ಗ್ರಾಮದ ತಾಮ್ರಶಾಸನ ಹೊಂದಿದೆ.[೧೫] ಈ ಜಗಳ ಪ್ರಾರಂಭವಾಗಲು ಮುಖ್ಯ ಕಾರಣ ವೀರಭದ್ರನಿಗೂ ಮತ್ತು ಬೀರದೇವರಿಗೂ ಬಿರುದುಗಳು ಒಂದೇ ಆಗಿರುವದು. ಆದರೆ ಕುರುಬರು ಬೀರದೇವರ ಉತ್ಸವ ನಡೆಸುವಾಗ ಈ ಬಿರುದುಗಳನ್ನು ಹಾಕಿಕೊಳ್ಳಬಾರದೆಂದು ಬಣಜಿಗರ ವಾದ. ಶುಭ ಕಾರ್ಯಗಳಿಗೆ ಸಮಾರಂಭಗಳಿಗೆ 'ಕುರುಬರ ಬೋಣಿ' ಎಂದು ಅವರನ್ನೇ ಮುಂದೆ ಬೇಕು ಅವರ 'ಕಂಬಳಿ ಗದ್ದುಗೆ' ಬೇಕು ಆದರೆ ಅವರು ಉತ್ಸವಗಳಲ್ಲಿ ಬಿರುದುಗಳನ್ನು ಧರಿಸಲು ಅವಕಾಶವಿಲ್ಲವೇ ಎಂದು ಪ್ರಶ್ನಿಸುವ ಮೂಲಕ ಅರಸನು ಹಲವು ಗಣ್ಯರ ಸಮ್ಮುಖದಲ್ಲಿ ಈ ವ್ಯಾಜ್ಯವನ್ನು ಬಗೆಹರಿಸಿ ಎರಡೂ ಸಮುದಾಯದವರನ್ನು ಸಮಾಧಾನಪಡಿಸಿದ್ದಾನೆ. ಆ ಶಾಸನ ಪಾಠ ಹೀಗಿದೆ. "...... ಬಣಜಿಗರಿಗೂ ಕುರುಬರಿಗೂ ವ್ಯಾಜ್ಯ ಮಾಡಿಕೊಂಡಿದ್ದು ಯೇನು ಅಂದರೆ ತೋಪು ಜಾತ್ರೆ ಕಟ್ಟೆಮನೆಯಂದು ಹಂಪಿಯಲ್ಲಿ ಬಗೆಹರಿಯಬೇಕು.... ವ್ಯಾಜ್ಯ ಏನೆಂದರೆ ಕುರುಬರಿಗೆ ದೇವರಿಗೆ । ಸಾಲು ಸತ್ತಿಗೆ ಸುರುಟು ಹನುಮನ ಟಕ್ಕೆ ಹಗಲುದೀವಟಿಗೆ ಮೇಳ ಸಿಂಹ ಲಲಾಟ ಜೆಲ್ಲಿಸಾಲೆ ರುಂಡಮಾಲೆ ಹಸುರರಥವು ಸಂದಿಗೆ ಸಾವಿರ ಬಿರುದುಗಳು ಮಾತು ಅಂದರೆ ಬಣಜಿಗರಿಗೆ ಕುರುಬರು ಅಂದದ್ದು ಏನೆಂದರೆ ಬಣಜಿಗರಿಗೆ ಅಡ್ಡಪಟ್ಟಡಿ ಹಾಕಿ ಯತ್ತಿನ ಮೇಲೆ ಹೇರು ಹಾಕಲಾಗದು ಕುರುಬರ ದಾರಕಂಕಣ

ಕಟ್ಟಲಾಗದು । ಕಂಬಳಿ ಗದ್ದಿಗೆ ಹಾಕಲಾಗದು । ಚಿಕ್ಕತಕ್ಕಡಿ ದೊಡ್ಡ ತಕ್ಕಡಿ ಹಿಡಿಯಲಾಗದು। ಕುರುಬರ ಬದುಕು ಮುಟ್ಟಲಾಗದು ಎಂದು ಕುರುಬರು ಇದು ವಂದು ನಿಮಗೆ ಇದು ಸಲ್ಲದು ಎಂದು ಕುರುಬರು ಸರವೂರ ಶಾಂತಮುತ್ತಯ್ಯ ಸ್ವಾಮಿಗಳು ಹಸುಗೊಂಡೆ ನಾಗಪ್ಪ ಏಳುಸತ್ತಿಗೆ ವಂಧುವೀರ ।...

ಈ ಶಾಸನವನ್ನು ಧರ್ಮಶಾಸ್ತ್ರ ಶಾಸನವೆಂದು ಕರೆದಿರುವರು. ಇಲ್ಲಿ ಉಲ್ಲೇಖಗೊಂಡ ಕೃಷ್ಣರಾಜ ಒಡೆಯರು ಯಾರು ಎಂಬಂಥ ಪ್ರಶ್ನೆಗಳು ಸಹಜವಾಗಿ ಏಳುತ್ತವೆ. ವಿಜಯನಗರದ ದೊರೆ ಕೃಷ್ಣದೇವರಾಯನೊ ಅಥವಾ ಮೈಸೂರು ದೊರೆ ಕೃಷ್ಣರಾಜೊಡೆಯರೋ ಎಂಬುದಕ್ಕೆ ಸ್ಪಷ್ಟವಾದ ಉತ್ತರ ಸಿಗುವುದಿಲ್ಲ. ಶಾಸನದಲ್ಲಿ ಅಲ್ಪ ಪ್ರಮಾಣದಲ್ಲಿ ತೆಲುಗುಭಾಷೆ ಬಳಕೆಗೊಂಡಿದೆ. ಕುರುಬರ ಧಾರ್ಮಿಕ ಮತ್ತು ಸಾಮಾಜಿಕ ಪದ್ಧತಿಯನ್ನು ಕುರಿತು ಅಧ್ಯಯನ ಮಾಡುವಲ್ಲಿ ಈ ಶಾಸನ ಹೆಚ್ಚು ಸಹಕಾರಿಯಾಗುತ್ತದೆ. ಡಾ.ಎಫ್.ಟಿ.ಹಳ್ಳಿಕೇರಿ ಅವರು ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ಈ ಶಾಸನ ಲಭ್ಯವಾಗಿದೆ.

ದಾವಣಗೆರೆಯ ಗೌಡಿಕೆಯ ಹಕ್ಕನ್ನು ಕುರುಬರು ದಿವ್ಯದ ಮೂಲಕ ಮರಳಿ ಪಡೆದುಕೊಂಡದ್ದನ್ನು ವಿವರವಾಗಿ ನಿರೂಪಿಸುವ ಶಾಸನವನ್ನು ಚಿತ್ರದುರ್ಗದ ಡಾ.ಬಿ.ರಾಜಶೇಖರಪ್ಪ ಅವರು ಶೋಧಿಸಿದ್ದಾರೆ.[೬೬] ಶಾಸನದ ಕಾಲ ೧೭೦೬. ಆಗ ಚಿತ್ರದುರ್ಗದ ಸಂಸ್ಥಾನವನ್ನು ಕಾಮಗೇತಿ ಒಡೆತನದ ಭರಮಣ್ಣನಾಯಕ ಆಳುತ್ತಿದ್ದನು. ಕುರುಬರ ಬೀರದೇವರ ಪೂಜಾರಿ ಕರಿಯಣ್ಣನ ಮಗ ನಾಗಯ್ಯನು ದಾವಣಗೆರೆ ಗ್ರಾಮದ ಗೌಡಿಕೆಯನ್ನು ದಿವ್ಯದ ಮೂಲಕ ತನ್ನದಾಗಿಸಿಕೊಂಡಿದ್ದನ್ನು ಈ ತಾಮ್ರಶಾಸನ ವಿವರವಾಗಿ ನಿರೂಪಿಸುತ್ತದೆ. ರಾಜಶೇಖರಪ್ಪ ಅವರು ೧೦-೧-೧೯೨೪ ಎಂದು ತಾಮ್ರಶಾಸನದ ನಕಲನ್ನು ದಾಖಲಿಸಿದ್ದಾರೆ. ಪಾನು -೧ರಲ್ಲಿ ೪೦ ಸಾಲು, ಪಾನು ೨ರಲ್ಲಿ ೩೮ ಸಾಲುಗಳಿದ್ದು ಒಟ್ಟು ೭೮ ಸಾಲುಗಳ ಶಾಸನವಾಗಿದೆ. ಅದರ ಕೆಲವು ಸಾಲುಗಳು ಹೀಗಿವೆ.

ಪಾನು - ೧

ಶ್ರೀ ತಾಮ್ರ ಶಾಸನ ನಕಲು ದಿನಾಂಕ ೧೦-೧-೧೯೨೪

೧. ನಮಸ್ತುಂಗ ಶಿರಂಚುಂಬಾ ಚಂದ ಚಾಮರಾಜವೇ । ತ್ರೈಲೋಕ್ಯನಗರಾ

೨. ಭ್ಯ ಮೂಲಸ್ತಿಂಭಾಯ ಸ್ತಂಬವೇ । ಸೊಸ್ತಿ ವಿಜಯಭ್ಯುದಯ ಶಾಲಿವಾ

೩. ಹನ ಶಕ ವರ್ಷಂಗಳು ೧೬೨೮ ನೇ ಹಗಲು ಅಶ್ವೀಜ ಶುಕ್ಲ ತದಿಗಿ ರವಿವಾ

೪. ರದಲ್ಲು ಬೇತೂರು ಹೋಬಳಿ ದಾವಣಗೆರೆ ಗೌಡಿಕೆಯನ್ನು ಕುರುಬರ ಬೀರದೇ

೫. ವರ ಪುಜರಿ ಕರಿಯಂಣನ ಮಗ ನಾಗೈಯ್ಯ ಗೌಲ್ಲರ ಗಿಡ್ನ ಗಿರಿಯಂಣನ

೬. ಮೊಮ್ಮಗ ಗಿಡ್ನಯ್ಯ ಸಹಕಾರ ಹಾಕಿದ ಗಟ್ಟಿ ಎತ್ತಿ ಗೌಡಿಕೆ ಗೆದ್ದವಿದೆ

೭. ಜಯದ್ರೇಕೆ ಕ್ರಮವೇನಂದ್ರೆ.....

ಬಹು ಪ್ರಾಚೀನ ಕಾಲದಿಂದ ಬಂದಿದ್ದ ದಿವ್ಯಗಳು ಚಿತ್ರದುರ್ಗ ಪಾಳೆಯಗಾರ ದೊರೆಗಳ ಕಾಲದಲ್ಲೂ ಮುಂದುವರಿದುಕೊಂಡು ಬಂದಿದ್ದವೆಂದೂ ಆಗ ಅವನ್ನು 'ದೈವಾಚಾರ' 'ಸತ್ಯ ಮಾಡುವದು' ಮುಂತಾಗಿ ವಾಡಿಕೆಯಲ್ಲಿ ಕರೆಯುತ್ತಿದ್ದರೆಂದೂ ಇದರಿಂದ ವಿದಿತವಾಗುತ್ತದೆ.

ಅದೇನೇ ಇದ್ದರೂ ಶಾಸನ ತಿಳಿಸುವಂತೆ ಕೆಂಪಗೆ ಕಾದ ಉಕ್ಕಿನ ಗುಂಡಿನಿಂದ ಕೈ ಸುಡುವುದಿರಲಿ ಕೈಗೆ ಸುತ್ತಿದ್ದ ಅಂಗನೂಲು ಅರಳಿ ಎಲೆಗಳು ಸಹ ಸುಡಲಿಲ್ಲ ಎಂದು ಶಾಸನ ತಿಳಿಸುವಂಥ ಘಟನೆ ಅದ್ಭುತವಾದದ್ದೆಂದು ಹೇಳಲೇಬೇಕು. ಮೈನವಿರೇಳಿಸುವ ಪರೀಕ್ಷೆಯ ಹಿನ್ನಲೆಯಲ್ಲಿ ಕುರುಬರ ನಾಗಯ್ಯ ದಾವಣಗೆರೆ ಗ್ರಾಮದ ಗೌಡಿಕೆಯ ಸ್ಥಾನವನ್ನು ಮರಳಿ ತನ್ನದನ್ನಾಗಿ ಮಾಡಿಕೊಂಡ ಎಂಬುದನ್ನು ಪ್ರಸ್ತುತ ತಾಮ್ರಶಾಸನದಿಂದ ತಿಳಿದುಬರುತ್ತದೆ.

ಬಿ.ರಾಜಶೇಖರಪ್ಪನವರೇ ಶೋಧಿಸಿದ ಇನ್ನೊಂದು ಶಾಸನ ಕುರುಬರ ಉಪಪಂಗಡವಾದ ಹಂಡೆ ಧನುಗರ (ಕುರುಬರ) ಸಮುದಾಯದ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತದೆ.[೨] ರಾಜಶೇಖರಪ್ಪನವರೇ ಹೇಳುವಂತೆ "ಜಾತಿ ಪಾವಿತ್ರ್ಯದ ಭಾವನೆ ಮತ್ತು ಅದರ ರಕ್ಷಣೆಯ ಪ್ರಯತ್ನ ಸ್ವಾಭಿಮಾನ ಅನ್ಯಜಾತಿಯವರಿಗೆ ಸಿಕ್ಕಿ ಭ್ರಷ್ಟವಾಗದೆನ್ನುವ ಶೀಲಪ್ರಜ್ಞೆ ಈ ಮಧ್ಯೆಯೂ ದೇವರುಗಳನ್ನು ತೊರೆದು ಹೋಗದ ಭಕ್ತಿ ಮೊರೆ ಹೊಕ್ಕವರ ಸಂರಕ್ಷಣೆ ಹೊಸ ಗ್ರಾಮಗಳ ಸ್ಥಾಪನೆ ಮತ್ತು ಜನಾಂಗವೊಂದರೊಳಗಿನ ಕಟ್ಟು ಪಾಡುಗಳು ಇವೆಲ್ಲವೂ ಹಿಂದಿನ ಒಂದು ಕಾಲಕ್ಕೆ ನಮ್ಮ ಜನರಿಗಿದ್ದ ನಂಬಿಕೆಗಳನ್ನು ಶ್ರದ್ಧೆಗಳನ್ನು ಪದ್ಧತಿಗಳನ್ನು ಒಟ್ಟಾರೆ ಅವರ ಜೀವನ ವಿಧಾನಗಳನ್ನು ಈ ಶಾಸನದಲ್ಲಿ ಕಂಡರಿಸಿಟ್ಟಂತಿದೆ" ಹೀಗೆ ಸಾಂಸ್ಕೃತಿಕ ದೃಷ್ಟಿಯಿಂದಂತೂ ಇದು ಮುಖ್ಯ ಶಾಸನ ಎನ್ನಬಹುದು.

ಇಮ್ಮಡಿ ಮದಕೇರಿ ನಾಯಕನ ಕಾಲದ ತಾಮ್ರಪಟವು ಕನ್ನಡಲಿಪಿ ಮತ್ತು ಭಾಷೆಯಲ್ಲಿರುವ ಶಾಸನ ಮುಂಬದಿಯಲ್ಲಿ ೨೮ ಪಂಕ್ತಿ, ಹಿಂಬದಿಯಲ್ಲಿ ೨೭ ಪಂಕ್ತಿ ಒಟ್ಟು ೫೫ ಪಂಕ್ತಿಗಳಿವೆ. ೧೭ನೆಯ ಶತಮಾನದಲ್ಲಿ ನಡೆದ ಘಟನೆಯನ್ನು ಮತ್ತು ಅದರ ಪರಿಣಾಮಗಳನ್ನು ವಿಶದಪಡಿಸುತ್ತದೆ. ಹಂಡೆ ಕುರುಬ (ಹಂಡೆ ವಜೀರ) ಜನಾಂಗಕ್ಕೆ ಸಂಬಂಧಿಸಿದಂತೆ ಈ ಶಾಸನವು ಕೆಲವು ಮಾಹಿತಿಯನ್ನು ನೀಡುತ್ತದೆ. ಇವರ ಕುಲಾಭಿಮಾನ, ಕುಲಪಾವಿತ್ರ್ಯ, ರಕ್ಷಣೆಯ ಮನೋಭಾವ, ಧೈರ್ಯ, ಶೌರ್ಯ, ದೈವಶ್ರದ್ಧೆ ಮುಂತಾದವು ಶಾಸನದಲ್ಲಿ ಚೆನ್ನಾಗಿ ಸೂಚಿತವಾಗಿವೆ. "ಕುಲಪಾವಿತ್ರ್ಯಕ್ಕಾಗಿ ನಮ್ಮ ಪ್ರಾಚೀನ ಜನರ ಪ್ರಾಣಕ್ಕಿಂತಲೂ ಹೆಚ್ಚು ಬೆಲೆ ಕೊಡುತ್ತಿದ್ದರೆನ್ನುವದಕ್ಕೆ ಎಂಥ ಘೋರ ಅಪಾಯಗಳನ್ನು ಆಹ್ವಾನಿಸುತ್ತಿದ್ದರೆಂಬುದಕ್ಕೆ ಈ ಶಾಸನ ಒಳ್ಳೆಯ ನಿದರ್ಶನವಾಗಿದೆ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ಹಾಗೂ ಚಿತ್ರದುರ್ಗದಲ್ಲಿ ದೊರೆತ ಕ್ರಿ.ಶ. ೧೬ ಮತ್ತು ೧೭ನೆಯ ಶತಮಾನ ಎರಡು ತಾಮ್ರ ಶಾಸನಗಳ ಅಕ್ಷರರೂಪ ಮತ್ತು ಭಾಷೆಯನ್ನು ಹೋಲುತ್ತೆ" ಎಂದು ರಾಜಶೇಖರಪ್ಪ ಅಭಿಪ್ರಾಯಪಟ್ಟಿರುವರು. ಉದಾಹರಣೆಗಾಗಿ ಕೆಲವು ಸಾಲುಗಳು ಹೀಗಿವೆ.

ಮುಂಬದಿ

೯. .....

೧೦. ದನುಗರ ತಿಂಮ ರಉತನ ದಳವಾಇಗಳುಯಂಬಸ್ಯಕವೇನು ವಾಲ್ಮೀ

೧೧. ರಿಗೆ ಹೆಂಣ, ಕೇಳುಉದಕೆ ಹುಕುಮುಯೇನು ಇದೆಯಂದು ಹಂಣ ಕೇಳಿದವ

೧೨. ರಿಗೆ ಕಾಲಿಗೆ ಹಗ ಹಕಿಸಿ ಗ್ರಮ ಬಿಟು ಯಳಸಿದ ಕಾರಣ ಮದಿಕೇರ ಅರಸಿಗೆ ಪಿರಿ

೧೩. ಯಾದಿ ಹೇಳಿದರಿಂದ ೧೬೮ ಉಟ ಇಸಿರಂನು ಕಳುಹಿ ಕಂನಳಿ ಗ್ರಮ

೧೪. ಭಣಬೆ ಬೇಲಿಗೆ ಬೆಂಕಿ ಹಚಿ ಇನ ಇಕರ ಮನೆಗೆ ಮುತಿಗೆ ಮಾಡಿ ಲಕುಮ

೧೫. ೦ಬ ಹೆಣ ಹಿಡಿದ ಕಾರಣಂ, ಕೆಂನಳಿ ನಾಇಕರು ೫ ಜನ ಇವರ ಪುತ್ರರು ೧೫

೧೬. ಜನ ಕೂಡಿಕೊಂಡು ೧೬೮ ಜನವರ ಮೇಲೆ ಬದು ಲಡಯ ಮಾಡಿದಲಿ ಅರಸಿ

೧೭. ನ ಜನ ೧೧೨ ತಲೆ ಬಿದು ಕೆಂನಳಿ ರಾಉತರ ಜನ ೯ಲೆ(ಬಿ+)ದು

ದುರ್ಗದ ಜನ ಹಿಂ........

ಕುರಿಸಾಕಾಣೆ ಕುರುಬಸೇಣಿ, ಕುರಿದೆಙಿಗೆ, ಕಂಬಳಿ ಉದ್ಯಮ ಕುರಿತು ಶಾಸನಗಳಲ್ಲಿ ಉಲ್ಲೇಖಗಳನ್ನು ಕಾಣಬಹುದು. ೧೧೫೬ರ ಶಾಸನವೊಂದು ಕುರಿಗಳು ತೋಳಗಳಿಗೆ ಬಲಿಯಾಗುತ್ತಿದ್ದ ವಿಷಯವನ್ನು ದಾಖಲಿಸಿದೆ. ಪ್ರತಿಯೊಂದು ಸಮುದಾಯವು ತಾನು ಉತ್ಪಾದಿಸುತ್ತಿದ್ದ ಉತ್ಪಾದನೆಗಳ ಮಾರಾಟಕ್ಕಾಗಿ ಸಮಾನ ವೃತ್ತಿಯವರು ಕೂಡಿಕೊಂಡು ಸಹಕಾರ ಸಂಘಗಳನ್ನು ತಲೆತಲಾಂತರದಿಂದ ಸ್ಥಾಪಿಸಿಕೊಂಡು ಬರುತ್ತಿರುವುದು ಸರ್ವೇಸಾಮಾನ್ಯ. ಇಂಥ ಸಂಘಗಳಿಗೆ ಶಾಸನಗಳಲ್ಲಿ ಪರ್ಯಾಯವಾಗಿ ಸಂಘಸೇಣಿ, ಒಕ್ಕಲು, ಸಮಯ ಮೊದಲಾದ ಪದಗಳು ಪ್ರಯೋಗಗೊಂಡಿವೆ. ತೆಲ್ಲಿಗರೈವತ್ತೊಕ್ಕಲು ಮಾಲೆಗಾರ ನಾಲ್ವತ್ತೊಕ್ಕಲು, ಸಾಲಿಗ ಸಮಯದವರು, ಮೊದಲಾದ ಹೆಸರಿನ ಸಂಘಗಳಿರುವ ದಾಖಲೆಗಳನ್ನು ಶಾಸನಗಳು ತಿಳಿಸುತ್ತವೆ. "ನೂಲಪರ್ವಕ್ಕೆ ವರ್ಷಪ್ರತಿ ಕುರುಬಸೇಣಿಗರೊಕ್ಕಲೊಕ್ಕಲು ವೀಸವಯ್ದು ಕೊಟ್ಟರ್" ಎಂದು ೧೧೬೧ರ ಶಾಸನ ಹೇಳುತ್ತದೆ. ಪ್ರತಿವರ್ಷ ನೂಲ ಹಬ್ಬಕ್ಕೆ ಕುರುಬಸೇಣಿಯಿಂದಲೇ ಉಣ್ಣೆಯ ನೂಲನ್ನು ಕೊಡುತ್ತಿದ್ದರೆಂಬ ವಿಷಯ ಗೊತ್ತಾಗುತ್ತದೆ.

ಕುರಿದೆಙಿಗೆ ಎಂಬ ಪದವನ್ನು ಶಾಸನಗಳಲ್ಲಿ ಕಾಣಬಹುದು. ಇದು ಕುರಿಗಳ ಪೋಷಣೆಗಾಗಿ ಕೊಡುವ ತೆರಿಗೆಯಾಗಿದೆ. ಬಾಗುಳಿಯ ಶಾಸನ (ಕ್ರಿ.ಶ.೧೫೫೧)ವು ಬಾಗುಳಿಯ ಸುತ್ತಮುತ್ತಲಿನ ಗ್ರಾಮಗಳ ಕುರಿಗಳಿಗೆ ವಿಧಿಸಿದ ತೆರಿಗೆಯನ್ನು ಮನ್ನಾ ಮಾಡಿದುದನ್ನು ವಿವರಿಸುತ್ತದೆ. "ಬಾಗುಳಿಯ ಕಮಕರ ಬಸವಿಗೌಂಡನ ಮಗ ಲಿಂಗಗೌಡ ಮುಂತಾದ ಕುರುಬಗೌಡಗಳಿಗೆ ಕುರಿದೆಙಿಗೆಯಿಲ್ಲಾ ಎಂದು ಬಿಟ್ಟುಕೊಟ್ಟ ಶಾಸನ ಹಸ್ತಿನಾಮತಿಯ ವಳಿತದ ಪಾಂಡ್ಯದನಾಡವಳಗಣ (ಕೋ) ಗಳಿಯ ವೇಂಟೆಯಕೆಯಕೆ ಸಲುವ ಕೊಟ್ಟೂರು ಸೀಮೆಯ ವ್ಪೋ(ಳ)ಗಣ

ಬಾಗುಳಿಯ ಗ್ರಾಮ ೧ ಆ ಗ್ರಾಮಕ್ಕೆ ಸಲುವ ಕಾಲುವಳಿಗಳು ಮುಂತಾದ ಗ್ರಾಮೋಪಗ್ರಾಮಂಗಳಲು ಮಿಹಂತಾ ಕುಱಿಗಳಿಗೆ ತಱಿಗೆಯಿಲ್ಲಾ ಎಂದು ಬಿಟ್ಟ ಧರ್ಮಶಾಸನ(೧೧)"

ಈ ಶಾಸನದ ಪ್ರಾರಂಭದಲ್ಲಿ ಶಾಲಿವಾಹನ ಶಕ ವರ್ಷ ೧೪೭೨ನೆಯ ಸಾಧಾರಣ ಪಾಲ್ಗುಣ, ಶು ೫ಕ್ಕೆ ಸರಿಯಾದ ಕ್ರಿ.ಶ. ೧೧-೨-೧೫೫೧ರ ಬುಧವಾರದಂದು ಸದಾಶಿವರಾಯನು "ವಿದ್ಯಾನಗರದೊಳ ರತ್ನಸಿಂಹಾಸನಾಱೂಢನಾಗಿ" ಎಂದಿರುವದರಿಂದ ಈ ಶಾಸನ ಹಂಪೆಯ ವಿಷಯವನ್ನು ತಿಳಿಸುತ್ತದೆ.

ಇನ್ನೊಂದು ಮಹತ್ವದ ಶಾಸನ ಕ್ರಿ.ಶ. ೧೫೮೦ರ ಕೊಟ್ಟೂರು ಶಾಸನ. ಇದು ಕುರಿತೆರಿಗೆಯ ಬಗೆಗೆ ತುಂಬ ಸುದೀರ್ಘವಾಗಿ ತಿಳಿಸುತ್ತದೆ. ರಾಮರಾಜಯ್ಯನ ಮಗನಾದ ಮಾದಿನಾಯಕನು ತನ್ನ ಗುರು ತಂದೆತಾಯಿಗಳಿಗೆ ಒಳ್ಳೆಯದಾಗಲೆಂದು ಕೊಟ್ಟೂರು ಸೀಮೆಯ ಕುರುಬರಿಗೆ ಹಾಕುವ ತೆರಿಗೆಯನ್ನು ಬಾಗುಳಿಯ ಕಲಿನಾಥದೇವರ ಸನ್ನಿಧಿಯಲ್ಲಿ ದಾನ ಬಿಡುತ್ತಾನೆ. ಆ ಶಾಸನ ಭಾಗ ಹೀಗಿದೆ "ಕೊಟ್ಟೂರು ಸೀಮೆಯ ಕುರುಬಕುಲ ಸಿದ್ದಪ್ಪವೊಡೆಯರ ಮಕ್ಕಳು, ಸಿದ್ದಪ್ಪವೊಡೆಯರಿಗೂ ಅಳಿಯ ರೇವಣ್ಣವೊಡೆಯರಿಗೂ ಅಚ್ಯುತಪ್ಪ ಪೊಡೆಯರಿಗೂ ...ವೆಯ ಲಿಂಗಣ್ಣವೊಡೆಯರಿಗೆ ಬಾಗುಳಿಯ ಗೋಪನಗೌಡನ ಮಗ ಚಿಕ್ಕಣ್ಣಗೌಡ ಗುರುವನಗೌಡ ಇವರು ಮುಂತಾದ ಕೊಟ್ಟೂರು ಸೀಮೆಯ ಸಮಸ್ತ ಕುರುಬ ಪ್ರಜೆಗಳಿಗೆ ಕೊಟ್ಟು ಧರ್ಮಶಾಸನದ ಪಟ್ಟಿಯ ಕ್ರಮವೆಂತೆದರೆ ನಾವು ಆದವನಿ.... ಹಸ್ತಿನಾವಳಿತದ ಪಾಂಡ್ಯನಾಡ ಕೋಗಳಿ ವೇಂಠೆಯಕೆ ಸಲುವ ಕೊಟ್ಟೂರು ಸೀಮೆಯೊಳಗಣ.... ಗ್ರಾಮಗಳಿಗೆ ಇಂಹಂತಾ ಕುರುಬ ಒಕ್ಕಲುಗಳು ಅರಮನೆಗೆ ತೆರುವಂಥಾ ಕುರಿದೆಱಿಗೆಯನು..... ಪಕ್ಷದ ಸಮಯ ಪ್ರಸಂಗಗಳು ಬಂದು ಮಹಾ ಪರ್ವದಾ ಪುಣ್ಯಕಾಲದಲ್ಲು ಶ್ರೀ ಬಾಗುಳಿಯ ಕಲ್ಲಿನಾಥದೇವರ ಸನ್ನಿಧಿಯಲ್ಲಿ ನಮ್ಮ ಗುರುಸ್ವಾಮಿಗೂ ಮಾತಾಪಿತೃಗಳಿಗೂ ಪುಣ್ಯವಾಗಬೇಕೆಂದು ನಿಮ್ಮ ಸಮಸ್ತ ಪ್ರಜೆಗಳಿಗೆ ನಿಮ್ಮ ಪುತ್ರಪೌತ್ರ ಪರಂಪರೆಯಾಗಿ ಸರ್ವಸಾಮಾನ್ಯವಾಗಿ ನಡೆವ ಹಾಗೆ ಆ ಕುರಿದೆಱಿಗೆಯನ್ನು ಬಿಟ್ಟು ಧರ್ಮಧಾರೆಯ ನೆರೆದು ಕೊಟ್ಟೆವು. ಈ ಕುರಿದೆಱಿಗೆಯನ್ನು ಮಾನ್ಯಮಾಡಿ ಬಿಟ್ಟಂಥ ಧರ್ಮವನು.... ನಾವು ನಮ್ಮ ಸ್ವಾನುರುಚಿಯಿಂದಲೂ ಪ್ರವಾಚಾ ಒಡಂಬಟ್ಟು ಕೊಟ್ಟ ಕುರಿದೆಱಿಗೆಯ ಸರ್ವಮಾನ್ಯವಾಗಿ ಬಿಟ್ಟ ಧರ್ಮಶಾಸನ ಕಲ್ಲು." ಈ ಶಾಸನದಲ್ಲಿರುವ ಒಡೆಯರು ಎಂಬುದು ಹಾಲುಮತದ ಗುರುಪರಂಪರೆಯನ್ನು ಮುಂದುವರೆಸಿಕೊಂಡು ಬಂದ ಕಾರಣ ಒಂದು ಉಪಪಂಗಡವಾಗಿದೆ. ಮಧ್ಯಕರ್ನಾಟಕದಲ್ಲಿ ಇಂದಿಗೂ ಈ ಒಡೆಯರ ಮನೆತನಗಳು ಅಸ್ತಿತ್ವದಲ್ಲಿವೆ. ಲಿಂಗಾಯತ ಕುರುಬರೆಂದು ಕರೆಯಲ್ಪಡುವ ಇವರು ಸಸ್ಯಾಹಾರಿಗಳಾಗಿದ್ದಾರೆ. ಕುರುಬರ ಹುಟ್ಟು, ಮುಂಜಿ ಮದುವೆ, ಸಾವು ಮೊದಲಾದ ಸಂದರ್ಭಗಳಲ್ಲಿ ಒಡೆಯರು ಪೌರೋಹಿತ್ಯವನ್ನು ವಹಿಸಿಕೊಳ್ಳುತ್ತಾರೆ. ಇಲ್ಲಿ ಉಲ್ಲೇಖವಾದ ಸಿದ್ಧಪ್ಪ, ರೇವಣ್ಣ, ಲಿಂಗಪ್ಪ ಮುಂತಾದ ವ್ಯಕ್ತಿನಾಮಗಳು ಕುರುಬರಲ್ಲಿ ಈಗಲೂ ಕಂಡು ಬರುತ್ತವೆ. ಈ ಎಲ್ಲ ಕಾರಣಗಳಿಂದಾಗಿ ಉಲ್ಲೇಖಿತ ಮೇಲಿನ ಎರಡು ಶಾಸನಗಳು ಕುರುಬರಿಗೆ ಸಂಬಂಧಿಸಿದಂತೆ ಕೆಲವು ಸಂಗತಿಗಳತ್ತ ಕುತೂಹಲವನ್ನು ಹುಟ್ಟಿಸುತ್ತವೆ. ಇಂದಿಗೂ ಬಳ್ಳಾರಿ ಜಿಲ್ಲೆಯಲ್ಲಿ ವಿಶೇಷವಾಗಿ ಕೊಟ್ಟೂರು

ಬಾಗುಳಿ ಪ್ರಾಂತದಲ್ಲಿ ಕುರುಬರ ಸಂಖ್ಯೆ ಅಧಿಕ ಪ್ರಮಾಣದಲ್ಲಿ ಕಂಡು ಬರುತ್ತದೆ. ಈ ಎಲ್ಲ ಕಾರಣಗಳಿಂದಾಗಿ ಉಲ್ಲೇಖಿತ ಮೇಲಿನ ಎರಡು ಶಾಸನಗಳು ಕುರುಬರಿಗೆ ಸಂಬಂಧಿಸಿದಂತೆ ಕೆಲವು ಮಹತ್ವಪೂರ್ಣ ವಿಷಯಗಳನ್ನು ತಿಳಿಸುತ್ತವೆ. ಇಂದಿಗೂ ಬಳ್ಳಾರಿ ಜಿಲ್ಲೆಯಲ್ಲಿ ವಿಶೇಷವಾಗಿ ಕೊಟ್ಟೂರು ಬಾಗುಳಿ ಪ್ರಾಂತದಲ್ಲಿ ಕುರುಬರ ಸಂಖ್ಯೆ ಅಧಿಕ ಪ್ರಮಾಣದಲ್ಲಿದೆ.

ಕೃಷ್ಣದೇವರಾಯನ ೧೫೨೧ರ ಶಾಸನವು ಕಮ್ಮಾರ ತೆರಿಗೆ, ಮಾದಾರ ತೆರಿಗೆ ಜೊತೆಗೆ ಕುರಿದೆಱಿಗೆಯನ್ನು ತ್ರಿಯಂಬಕಪುರದ ತ್ರಿಯಂಬಕದೇವರಿಗೆ ಮಾನ್ಯ ಮಾಡಿದುದನ್ನು ವಿವರಿಸುತ್ತದೆ. ಅಂಚವಾಡಿಗ್ರಾಮದ ಶಾಸನವೊಂದು ದಳವಾಯಿ ತಿಮ್ಮಣ್ಣನಾಯಕರೆಂಬುವರು ಹದಿನಾಡ ಚಿಕ್ಕಪ್ಪರಸಗೌಡರಿಗೆ ಕುರಿದೆಱಿಗೆಯನ್ನು ಉಂಬಳಿಯಾಗಿ ಬಿಟ್ಟಿದ್ದನ್ನು ನಿರೂಪಿಸುತ್ತದೆ. ತಿರುಮಕೂಡಲು ನರಸಿಪುರ ಗ್ರಾಮದ ಶಾಸನವೊಂದು ವಿವಿಧ ತೆರಿಗೆಯನ್ನು ಉಲ್ಲೇಖಿಸುತ್ತಾ ದೇವನಗರದ ದ್ವಿತೀಯ ಶತಕದ ೮೦ ವೃತ್ತ ಮಹಾಜನಂಗಳು ಗ್ರಾಮದ ಆದಾಯಗಳಾದ ಹೆಣಂಗೆ ಹಣ, ಹೊಗೆಹಣ, ಕುರಿದೆಱಿಗೆ, ಚರಾದಾಯ ಮೊದಲಾದವುಗಳನ್ನು ಸುಖದಿಂದ ಅನುಭವಿಸಬೇಕೆಂದು ಹೇಳುತ್ತದೆ. ಹೀಗೆಯೇ ಅಂಚವಾಡಿ (೧೫೪೪) ನರಸಿಪುರ (೧೬೭೪) ತ್ರಿಯಂಬಕಪುರ (೧೫೨೧) ಮೊದಲಾದ ಶಾಸನಗಳಲ್ಲಿ ಕುರಿದೆಱಿಗೆಯ ವಿವರಗಳಿವೆ.

ಸ್ಥಳನಾಮಗಳು

ಕುರುಬರಿಗೆ ಸಂಬಂಧಿಸಿದಂತೆ ಕೆಲವು ಸ್ಥಳನಾಮಗಳು ಶಾಸನಗಳಲ್ಲಿ ದಾಖಲಾಗಿವೆ. ಕುರುಬರಹಳ್ಳಿ, ಕುರುಬನಕಟ್ಟೆ, ಕುರುಬಗೇರಿ, ಕುರುಬರಹಟ್ಟಿ ಮೊದಲಾದ ಸ್ಥಳನಾಮಗಳು ಶಾಸನಗಳಲ್ಲಿ ಉಕ್ತವಾಗಿವೆ. ಈ ಸ್ಥಳಗಳು ಕುರುಬರ ವಾಸಸ್ಥಳಗಳಾದ್ದವೆಂದು ಇದರಿಂದ ಗುರುತಿಸಬಹುದು. ಹಳ್ಳಿಗಳಲ್ಲಿ ಒಂದೊಂದು ಜನಾಂಗದ ಓಣಿಗಳು ಪ್ರತ್ಯೇಕವಿದ್ದ ಬಗೆಗೆ ಶಾಸನಗಳು ತಿಳಿಸುತ್ತವೆ. "ಹಂಡರಸನಳ್ಳಿಯ ಊರಿಂದ ಬಡಗಣ ಮಧ್ಯಕದಕಬ್ಬೆ ೧೦೦ ಕುರುಬಗೇರಿಯಲ್ಲಿ...." ಎಂಬ ಉಲ್ಲೇಖ ಶಾಸನವೊಂದರಲ್ಲಿ ಬರುತ್ತದೆ. ಹಂಡರಸನಹಳ್ಳಿಯೆಂಬ ಗ್ರಾಮವು ಬಡಗಣ (ಉತ್ತರ) ದಿಕ್ಕಿಗೆ ಕುರುಬ(ಕೇ)ಗೇರಿ ಇದ್ದಿತೆಂಬುದು ಸ್ಪಷ್ಟವಾಗುತ್ತದೆ. ಕೆಲವು ಸ್ಥಳನಾಮಗಳು ನಾಮಾಂತರಗೊಂಡಿರುವುದನ್ನು ಶಾಸನಗಳಲ್ಲಿ ಕಾಣುತ್ತೇವೆ. ಡಾ. ಎಂ.ಎಂ.ಕಲಬುರ್ಗಿಯವರು ಹೇಳಿರುವಂತೆ "ಕರ್ನಾಟಕದಲ್ಲಿ ಒಂದು ಹಳ್ಳಿಯನ್ನು ಅಗ್ರಹಾರವಾಗಿ ಬ್ರಾಹ್ಮಣರಿಗೆ ಕೊಡುವಾಗ ಇಲ್ಲವೆ ದೇವರ ಉಪಭೋಗಕ್ಕೆ ಕೊಡುವಾಗ ದಾನಿ ಆ ಊರ ಹೆಸರನ್ನು ತೆಗೆದು ಹಾಕಿ ತನ್ನ ಇಲ್ಲವೆ ತನ್ನ ಸಂಬಂಧಿಕರ ಇಲ್ಲವೆ ದೇವರ ಹೆಸರನ್ನಿಡುತ್ತಿದ್ದನು." ಇದಕ್ಕೆ ಕುರುಬನಹಳ್ಳಿಯೇ ಒಂದು ನಿದರ್ಶನ. "ಬಂಕಾಪುರ ಸೀಮೆಯೊಳಗಣಗಳ ವೇಂಠೆಯಕೆ ಸಲುವ ಕುರುಬನಹಳ್ಳಿಗೆ ಪ್ರತಿನಾಮನಾದ ನರಸಿಂಹಪುರ ಗ್ರಾಮವನು ನಾವು ನಿಮಗೆ ಧಾರಾಪೂರ್ವಕವಾಗಿ ಕೊಟ್ಟೆವು" ಕುರುಬನಹಳ್ಳಿಯು ನರಸಿಂಹಪುರವಾಗಿ ನಾಮಾಂತರಗೊಂಡಿದೆ. ಬಹುಶಃ ಇಂಥ ಉದಾಹರಣೆಗಳು ಶಾಸನಗಳಲ್ಲಿ ಹೇರಳವಾಗಿ ಕಾಣಬಹುದು. ಆರಾಧ್ಯದೈವ ಬೀರಪ್ಪನೊಂದಿಗೆ ಭಾವನಾತ್ಮಕ ಸಂಬಂಧವನ್ನು ಹೊಂದಿದ ಕುರುಬರು ಆತನನ್ನು

ಭಕ್ತಿ ಪೂರ್ವಕವಾಗಿ ಹಾಡಿ ಹೊಗಳುತ್ತಾರೆ. ಮೌಖಿಕ ರೂಪದ ಹಾಡು ಕಥೆಗಳ ಜೊತೆಗೆ ಶಾಸನಗಳಲ್ಲಿಯೂ ಬೀರಪ್ಪನ ಕುರಿತು ಕೆಲವು ಮಾಹಿತಿಗಳು ಉಪಲಬ್ಧವಿದೆ. ೧೦೬೧ರ ಶಾಸನದಲ್ಲಿ "ಯೀ ಬೀರಲಿಂಗಕ್ಕೆ ಹೋಲಬಾವಿ ಕಳೆಕೊಟ್ಟರು" ಎಂಬ ಉಲ್ಲೇಖವಿದೆ. ಮತ್ತು "ಜಮಖಂಡಿಯ ಬೀರದೇವರ ಅರವಟಿಗೆಗೆ ಕೋಣೆಗನೂರು ಮಹಾಜನರಿಂದ ಭೂಮಿ ಮತ್ತು ಗೃಹದಾನ......" ನೀಡಿದುದನ್ನು ಕೋಣಗನೂರು ಶಾಸನ ಉಲ್ಲೇಖಿಸುತ್ತದೆ. ಈ ದೇವಾಲಯದ ಅರವಟಿಗಾಗಿ ಭೂಮಿ ದಾನ ಮಾಡಿದುದನ್ನು ಈ ಮೇಲಿನ ಶಾಸನೋಲ್ಲೇಖಗಳು ಸ್ಪಷ್ಟವಾಗಿ ತಿಳಿಸುತ್ತದೆ.

ವ್ಯಕ್ತಿನಾಮಗಳು

ಶಾಸನಗಳಲ್ಲಿ ಕಂಡು ಬರುವ ಕೆಲವು ವ್ಯಕ್ತಿನಾಮಗಳನ್ನು ವಿಶ್ಲೇಷಿಸಿದಾಗ ಹೊಸ ಸಂಗತಿಗಳು ಗೋಚರಿಸುತ್ತವೆ. ನಮ್ಮಲ್ಲಿ ವೃತ್ತಿ ಬೆಳೆದು ಜಾತಿಯಾಗಿರುವುದರಿಂದ ವೃತ್ತಿವಾಚಿ ಹೆಸರುಗಳು ಜಾತಿವಾಚಿಗಳಾಗಿ ಪರಿಣಮಿಸಿವೆ. ಇಂಥ ಹೆಸರುಗಳಲ್ಲಿ ಅವರ ವೃತ್ತಿ ಮತ್ತು ಜಾತಿ ಎರಡನ್ನೂ ಗುರುತಿಸಬಹುದು. ಶಾಸನಗಳಲ್ಲಿ ಕುರುಬ (ಕುರಿ ಕಾಯುವವನು) ವೃತ್ತಿವಾಚಿಯ ಜೊತೆಗೆ ವ್ಯಕ್ತಿಯ ಹೆಸರುಗಳು ಬಳಕೆಗೊಂಡಿರುವುದು ಕಾಣಬಹುದು. ಉದಾ. ಕುರುಬರ ಚಿಕ್ಕ, ಕುರುಬರ ಸೂತ್ರ, ಕುರುಬರ ಹಲಗ, ಕುರುಬರ ಸಿದ್ದೇಶ್ವರ, ಕುರುಬರ ಕಾಳಯ್ಯ ಮುಂತಾದವುಗಳನ್ನು ಉದಾಹರಿಸಬಹುದು. "ಮೂಡಲು ಕುರುಬರ ಹಲಗನ ಹೊಲಕ್ಕೆ ಬಡಗಲು ಪಟ್ಟಣದ ಮಾರ್ಗದ ತೆಂಕಣ ಬೇಲಿವುತ್ತಿನಲ್ಲು ಪಡುವ ಮುಖವಾಗಿ ನೆಟ್ಟಕಲ್ಲು ೧ ಕಲ್ಲು" ಎಂಬ ಉಲ್ಲೇಖವನ್ನು ಅವಲೋಕಿಸಿದರೆ ಕುರುಬರು ವ್ಯವಸಾಯವನ್ನು ಮಾಡುತ್ತಿದ್ದಾರೆಂಬುದು ಮನದಟ್ಟಾಗುತ್ತದೆ.

ಬೀರಪ್ಪ ಕುರುಬರ ಪ್ರಮುಖ ಆರಾಧ್ಯದೈವ. ಕರ್ನಾಟಕದಾದ್ಯಂತ ಈತನ ಹೆಸರಿನ ದೇವಾಲಯಗಳು, ಗದ್ದುಗೆಗಳು ಕಂಡುಬರುತ್ತವೆ. ಕುರುಬರಲ್ಲಿ ಬೀರಪ್ಪ, ಬೀರಲಿಂಗಪ್ಪ, ಬೀರೇಗೌಡ ಎಂಬ ಹೆಸರನ್ನಿಡುವ ಪದ್ಧತಿ ಈಗಲೂ ಇದೆ. ಶಾಸನವೊಂದರಲ್ಲಿ 'ಬೀರಪ್ಪಗೌಡ' ಎಂಬ ವ್ಯಕ್ತಿಯ ಉಲ್ಲೇಖ ಬರುತ್ತಿದ್ದು ಆತ ಯರಗಾನ ಹಳ್ಳಿಯವನೆಂಬುದು ವಿದಿತವಾಗುತ್ತದೆ.

ಅಂದಂದಿನ ರಾಜ್ಯಾಡಳಿತದೊಂದಿಗೆ ಆ ಸಮುದಾಯದ ಜನ ಗುರುತಿಸಿಕೊಂಡಿರುವುದು ಚರಿತ್ರೆಯಿಂದ ತಿಳಿದುಬರುವ ಅಂಶ. ಶಾಸನಗಳಲ್ಲಿ ಕೆಲವು ಕುರುಬರು ಗ್ರಾಮವನ್ನಾಳುತ್ತಿದ್ದದು ತಿಳಿದುಬರುತ್ತದೆ. ಆರನೆಯ ವಿಕ್ರಮಾದಿತ್ಯನ ಗಾವುಂಡರಲ್ಲಿ ಒಬ್ಬನಾದ ಕುರುಬರ ಮುದ್ದಗಾವುಂಡನ ಮಗ ದಾಸಗಾವುಂಡನು ಏಕ ಭೋಗದಿಂದ ಉಕ್ಕಂದವನ್ನಾಳುತ್ತಿದ್ದನು. ಸತ್ಯಸೌಚಚಾರುಚಾರಿತ್ರ್ಯ ನಯ ವಿನಯ ಸುಶೀಲ ಸಂಪನ್ನ ಸುಜನೈಕಮಿತ್ರ, ಪರನಾರೀದೂರ, ಹರಚರಣಕಮಲ ಭೃಂಗ, ಅಯ್ಯನಸಿಂಗ ಮೊದಲಾದ ಬಿರುದು ಪ್ರಶಸ್ತಿಗಳು ಈತನಿಗಿದ್ದವು.

ಇಲ್ಲಿನ ಕುರುಬಗೌಡ ಬೀರಪ್ಪಗೌಡ ಮೊದಲಾದ ಹೆಸರುಗಳನ್ನು ಮತ್ತು ಅವರು ಗ್ರಾಮದ ಪ್ರಮುಖರಾಗಿದ್ದರೆಂಬುದನ್ನು ತಿಳಿಸುತ್ತವೆ.[೨೫] ಹೀಗೆ ಕುರುಬರ ಸಾಮಾಜಿಕ, ಧಾರ್ಮಿಕ, ಆಡಳಿತಾತ್ಮಕ

ಮುಂತಾದ ಸಂಗತಿಗಳನ್ನು ಶಾಸನಗಳಲ್ಲಿ ನಾವು ಗುರುತಿಸಬಹುದು. ಸಮಗ್ರವಾದ ಶಾಸನ ಸಂಪುಟಗಳನ್ನು ಅವಲೋಕಿಸಿದಾಗ ಕುರುಬ ಸಮುದಾಯ ಸಂಸ್ಕೃತಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಲು ಸಾಧ್ಯವಿದೆ. ದಾಖಲು ಸಾಹಿತ್ಯದಲ್ಲಿ ಕುರುಬರ ಸಂಸ್ಕೃತಿ ಕುರಿತು ಪ್ರತ್ಯೇಕ ಅಧ್ಯಯನ ಮಾಡಲು ಅವಕಾಶವಿದೆ ಯೆಂಬುದು ಇಲ್ಲಿಯವರೆಗಿನ ಅವಲೋಕನದಿಂದ ತಿಳಿದುಬರುತ್ತದೆ.

೨. ಸನದುಗಳು

ರಾಜರು ಗುರುಗಳು ಮಂತ್ರಿಗಳು ಮತ್ತು ಇತರ ಆಡಳಿತ ವರ್ಗದವರು ತಮಗೆ ಲಭ್ಯವಾದ ಅಧಿಕಾರದಿಂದ ವ್ಯಕ್ತಿಗಳಿಗೆ ಸಂಸ್ಥೆಗಳಿಗೆ ಹಕ್ಕು ಪತ್ರಗಳನ್ನು ಅಥವಾ ಆದೇಶಗಳನ್ನು ಹೊರಡಿಸುವುದಕ್ಕೆ ಸಾಮಾನ್ಯವಾಗಿ ಸನದು ಎಂದು ಕರೆಯಲಾಗುತ್ತದೆ.

ಹಾಲುಮತದ ಮೂಲ ಧಾರ್ಮಿಕ ನೆಲೆಯಾದ ಸರೂರ ಮಠದ ಸ್ವಾಮಿಗಳು ೧೯೦೪ ಜೂನ ೬ ರಂದು ಒಂದು ಸನದನ್ನು ಹೊರಡಿಸಿದ ವಿಷಯ ಹೀಗಿದೆ.[೧೯] "ಸನ್ನಧಿಯಿಂದ ಹಕ್ಕುಂ ವಿಧಿಸುವದು. ಏನೆಂದರೆ ಮೈಸೂರು ದೇಶಕ್ಕೆ ಸೇರಿದ ಹಾಲುಮತಾಚಾರಕ್ಕೆ ಗುರುಗಳಾದಂಥ ಅಣಚೀ ಮಠಕ್ಕೆ ಸೇರಿದ ಒಳಗೆರೆ ಹಳ್ಳಿಯ ಒಡೆಯರ ರೇವಪ್ಪನಿಗೆ ಇದೇ ಮೈಸೂರು ದೇಶಕ್ಕೆ ಸೇರಿದ ಸಮಸ್ತ ಹಾಲುಮತಾಚಾರಕ್ಕೆ ಆಚಾರ ವಿಚಾರ ಶಿಕ್ಷೆ ಮೋಕ್ಷ ಕೊಡುವುದಕ್ಕೂ ಆಯಾ ಕಾಲಕ್ಕೆ ಸಮಸ್ಥಾನದವರಾದ ನಾವುಗಳು ಮಕ್ಕಾಂ ಸರಕೀಟು ಮಾಡಿ ನಿಮ್ಮ ದೇಶಕ್ಕೆ ಬರಲು ಬಹಳ ದೂರ ಫಾಸಲೆಯಾದ್ದರಿಂದವಾದ ಕಾಶಿ ದೇಶವನ್ನೂ ಪೂನಾ ದೇಶಗಳನ್ನೂ ಸ್ವದೇಶಗಳನ್ನೂ ಸರಕೀಟು ಮಾಡುವುದೇ ಸಾಕಾಗುವುದರಿಂದ ನಿಮ್ಮ ದೇಶದ ಆಚಾರದ ಬಾಬ್ತು ಬಹಳ ತಕರಾರು ಆಯಾಯ ಓಟನ್ನೇ ಬಂದು ನೋಡಲು ಅವಕಾಶವಿಲ್ಲದ್ದರಿಂದ ನೀವುಗಳು ಸಾಯ ಸ್ಥಾನಕ್ಕೆ ನ್ಯಾಸಪೀಠಸ್ಥರಾದ್ದರಿಂದ ನೀವು ನಿಮ್ಮ ವಂಶ ಪರಂಪರೆಯವರೆಗೂ ಯಾವ ಕಾಲಕ್ಕೂ ತಪ್ಪದೆ ಮೈಸೂರು ದೇಶದಲ್ಲಿ ಇರತಕ್ಕ ಹಾಲುಮತಾಚಾರಕ್ಕೂ ಮಠ ಅಧಿಕಾರಿಗಳಿಗೂ ಆಚಾರ ವಿಚಾರ ಶಿಕ್ಷೆ ಕೊಡುವುದಕ್ಕೂ ಕಾಣಿಕೆ ವಸೂಲ್ ಮಾಡುವುದಕ್ಕೂ ಅಧಿಕಾರ ಕೊಡಲು ಈ ಆಜೂಬಾಜಿಗಾಗಿ ೪ ಬೆಳ್ಳಿಬಿಲ್ಲೆ, ೩೦ ಹಿತ್ತಾಳೆ ಬಿಲ್ಲೆ, ೧ ಮೊಹರು, ೧ ಭಡಿ ಈ ಸನ್ನದನ್ನು ಕೊಟ್ಟು ಅಧಿಕಾರ ಮಾಡಲು ನಿಮಗೆ ವಹಿಸಿರುತ್ತೆ" ಕಾಡಪ್ಪಯ್ಯ ಸರೂರು ೪೦.

"The cowherd who helped a king new light on the history of Golkonda fort" ಎಂಬ ಶೀರ್ಷಿಕೆಯಲ್ಲಿ ಆಂಗ್ಲ ಭಾಷೆಯ ದೀರ್ಘವಾದ ಲೇಖನವನ್ನು ಶ್ರೀ ಫತುಲ್ಲಾಖಾನರು ಬರೆದು ೩೧-೮-೧೯೪೭ರ ಹಿಂದೂ ಸಂಡೆ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ವಿ.ಆರ್.ಹನುಮಂತಯ್ಯನವರು ಆ ಸನದಿನ ವಿಷಯವನ್ನು ಮಾತ್ರ ಸಂಗ್ರಹಿಸಿ ಕನ್ನಡಿಸಿ 'ಜಯಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.[೨೦] ಗೋವಳಕೊಂಡದ ನಿರ್ಮಾಣಕ್ಕೆ ಒಬ್ಬ ಗೊಲ್ಲರ ನಾಯಕನು ಹೀಗೆ ಕಾರಣೀಭೂತನಾದನೆಂದು ರೋಮಾಂಚನಕಾರಿಯಾದ ಚರಿತ್ರೆಯನ್ನು ಈ ಸನದು ವಿವರಿಸುತ್ತದೆ. ಹನುಮಂತಯ್ಯನವರು ಹೇಳುವಂತೆ ದಕ್ಷಿಣ ದೇಶದಲ್ಲಿ ಅತಿ

ಪ್ರಖ್ಯಾತವಾದ ಗೋಲ್ಕೊಂಡದ ಕೋಟೆಯ ನಿರ್ಮಾಣ ಆ ರಾಜ್ಯದ ವೈಭವ, ಆ ಸುಲ್ತಾನರಾದ ಖಿಹತುಬಶಾಹೀ ವಂಶದವರ ಆಕಸ್ಮಿಕವಾದ ಅವನತಿ ಇವುಗಳ ಸಂಬಂಧವಾದ ಕೆಲ ಹೊಸ ವಿಷಯಗಳು ಈಗ ಪ್ರಚಾರಕ್ಕೆ ಬಂದಿರುತ್ತವೆ. ಹಿಂದೆ ಇದಕ್ಕೆ ಮೊದಲು ಯಾವ ಇತಿಹಾಸಕಾರನಾಗಲೀ ಪ್ರವಾಸಿಗಳಾಗಲೀ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸದ ಹಾಗೂ ಯಾರಿಗೂ ಗೊತ್ತಿಲ್ಲದ ಸುಮಾರು ೩೦೦ ವರ್ಷಗಳ ಅತಿ ಪ್ರಾಚೀನವಾದ ಒಬ್ಬ ಕುರುಬ (ಗೊಲ್ಲ)ರ ಗುರು ಧನಗಾರ (cowherd) ಕೊಂಡಯ್ಯನೆಂಬಾತನಿಗೆ ಕೊಡಲ್ಪಟ್ಟಂಥ ಸನದು. ಆತನ ವಂಶದವನೊಬ್ಬನಲ್ಲಿದ್ದುದು ನನಗೀಗ ದೊರತಿರುತ್ತದೆ. ಈ ಸನ್ನಿಧಿಗೆ ೧೬೨೬ರಿಂದ ೧೬೭೨ರವರೆಗೆ ಆಳಿದ ಗೋಲ್ಕೊಂಡ (ಗೊಲ್ಲಕೊಂಡ)ದ ಖುತಬಶಾಹೀ ವಂಶದ ೭ನೆಯ ಸುಲ್ತಾನ ಅಬ್ದುಲ್ ಖುತುಬ್‌ಶಾಹನೆಂಬ ರಾಜನ ಸೀಲು ಇರುತ್ತದೆ.

ಈ ಸನದು (೧೦೩೫-೧೦೮೩) ಜಮಾದಿ ಉಲ್ ಅವ್ವಲ್ ೧೦೭೧ನೇ ಹಿಜ್ರಿ ಸಂವತ್ಸರದಲ್ಲಿ ಕೊಡಲ್ಪಟ್ಟಿರುತ್ತದೆ. ಈ ದಸ್ತಾವೇಜು ತೆಲುಗು ಭಾಷೆಯಲ್ಲಿಯೂ ಮತ್ತು ಫಾರಸಿ ಭಾಷೆಯಲ್ಲಿಯೂ ಪ್ರತ್ಯೇಕವಾಗಿ ಬರೆಯಲ್ಪಟ್ಟಿದೆ. ಈ ಕೋಟೆಯಿದ್ದ ಸ್ಥಳದ ಪೂರ್ವದ ಹೆಸರು ಮನಗಾಲಕೋಟೆ ಉರುಫ್ ಗೋಲ್ಕೊಂಡ ಎಂಬುದಾಗಿ ಅಹಮ್ಮದನಗರದ ಬಳಿ ಭಾಗಾನಗರದ ಪಗರಣೆಗೆ ಸೇರಿದ್ದಿತು. ಇಂಥ ಅನೇಕ ಸನದುಗಳನ್ನು ಕುರುಬರ ಮನೆ ಮಠಗಳಲ್ಲಿ ಇಂದಿಗೂ ನೋಡಬಹುದು.

ಹದಿನಾಲ್ಕನೆಯ ಶತಮಾನದ ೧೩೩೬ರಲ್ಲಿ ಶ್ರೀ ಪ್ರತಾಪರುದ್ರದೇವ ಮಹಾರಾಜನಾಗಿ ವಾರಂಗಲ್ಲದ ಮತ್ತು ಬಾನಗಿರಿಯ ಕೋಟೆಗಳನ್ನು ಕಟ್ಟಿಸಿದ ದನಗಾರ ಕೊಂಡಯ್ಯನೇ ೧೬೬೬ರಲ್ಲಿ ಈ ಗೋಲ್ಕೊಂಡದ ಕೋಟೆಯನ್ನು ಕಟ್ಟಿಸಿದನೆಂಬುದು ನಂಬತಕ್ಕ ಮಾತಲ್ಲ. ಕಾರಣವೇನೆಂದರೆ ಈ ಕಾಲಕ್ಕೆ ಸದರಿ ಕೊಂಡಯ್ಯನಿಗೆ ೩೦೦ ವರ್ಷಗಳ ವಯಸ್ಸಾಗಿರುತ್ತದೆ. ಸಂಬಂಧವಿಲ್ಲದ ಕಾರಣ ಶ್ರೀ ಪ್ರತಾಪರುದ್ರದೇವನ ಧನಗಾರ ಕೊಂಡಯ್ಯನಿಗೆ ಈ ಸುಲ್ತಾನರ ಕಾಲದ ಕೊಂಡಯ್ಯನು ಮೂರನೆಯ ತಲೆಮಾರಿನವನಾಗಿ ಮೊಮ್ಮಗನಾಗಿರ ಬೇಕೆಂಬುದು ಸಮಂಜಸವಾಗಿ ಕಾಣುತ್ತದೆ.

ಈ ಸನದು ಎರಡು ಬಂಗಾರದ ಪ್ರತಿಮೆಯ ಕಥೆಯನ್ನು ಹೊಂದಿದೆ. ಈ ಕಥೆಯು ಬರಿ ಅದ್ಭುತ ಉತ್ಪ್ರೇಕ್ಷೆಯಾಗಿ ಆ ಕಾಲದಲ್ಲಿ ಯಾರೂ ನಂಬಲರ್ಹವಾಗಿರದಿದ್ದರೂ ಅರಿಯದ ಜನರು ಸಾಧುಗಳೆಂಬ ಧೂರ್ತರೂ ಮೋಸಗಾರರೂ ಆದವರ ಕೃಪೆಯಿಂದ ಪಾರಾಗುವಂತಹ ಭೋದಕಪ್ರದವಾದ ಕಥೆಯೆಂದು ಎಫ್.ಟಿ. ಹಳ್ಳಿಕೇರಿ ಅವರ ಅಭಿಪ್ರಾಯವಾಗಿದೆ.

೩. ಕೈಫಿಯತ್ತುಗಳು

ವಿಜಯನಗರೋತ್ತರ ಕಾಲದ ಕನ್ನಡ ನಾಡುನುಡಿ ಇತಿಹಾಸ ಸಂಸ್ಕೃತಿಯ ಅಧ್ಯಯನಕ್ಕೆ ಕೈಫಿಯತ್ತುಗಳು ಬಹುಮುಖ್ಯ ಆಕರಗಳಾಗಿವೆ. ಬೇರೆ ಬೇರೆ ಜನಾಂಗಗಳ ಆಚಾರ, ವಿಚಾರ, ರಾಜವಂಶಾವಳಿಗಳ ವಿವರ,

ಸ್ಥಳಪುರಾಣ, ನಂಬಿಕೆ, ವ್ಯಾಪಾರ, ವಹಿವಾಟು ಮೊದಲಾದ ವಿಷಯಗಳನ್ನು ತಿಳಿಸಿಕೊಡುವ ದಾಖಲೆಗಳು ಎಂಬ ಅರ್ಥದಲ್ಲಿ ಕೈಫಿಯತ್ತುಗಳು ಬಳಕೆಯಾಗಿವೆ. ಇಂಥ ಕೈಫಿಯತ್ತುಗಳನ್ನು ಬ್ರಿಟಿಷ್ ಅಧಿಕಾರಿ ಕರ್ನಲ್ ಮೆಕೆಂಜಿ ಬರೆಸಿದನು. ಕುರುಬರಿಗಾಗಿಯೇ ಪ್ರತ್ಯೇಕ ಕೈಫಿಯತ್ತುಗಳು ರಚನೆಗೊಳ್ಳದಿದ್ದರೂ ಸಾಂದರ್ಭಿಕವಾಗಿ ಬೇರೆ ಬೇರೆ ಕೈಫಿಯತ್ತುಗಳಲ್ಲಿ ಕೆಲವು ಮಹತ್ವದ ಮಾಹಿತಿಗಳನ್ನು ಗುರುತಿಸಬಹುದು. ವಸುಧಾರೆ ಕೈಫಿಯತ್ತು "ಶಕ ೧೨೫೮ ನೆಯ ಧಾತು ಸಂವತ್ಸರದಲ್ಲಿ ವಿದ್ಯಾರಣ್ಯಸ್ವಾಮಿ ಅನುಗ್ರಹದಿಂದಾ ಶಿಂಹ್ವಾಸನ ಮಾಡಿಕೊಂಡು ಅನೇಕ ದಿವಸ ಆಳಿದರು."[೨೧] ಈ ಉಲ್ಲೇಖದಿಂದ ವಿಜಯನಗರವನ್ನು ಹರಿಹರನ್ನೊಳಗೊಂಡು ೧೩ ಜನ ಆಡಳಿತ ನಡೆಸಿದ ವಿಷಯ ಸ್ಪಷ್ಟವಾಗುತ್ತದೆ. ಅಂತಾಪುರ ಕೈಫಿಯತ್ತು ರಾಮಾಪುರದ ಹಟ್ಟಿ ಕುರುಬರಿಗಾಗಿ ಕುಮಾರರಾಮನು ಗ್ರಾಮವನ್ನು ಕಟ್ಟಿಸಿಕೊಟ್ಟು ಆ ಗ್ರಾಮಕ್ಕೆ ಕೊಮಾರ ರಾಂಪುರ ಎಂದು ನಾಮಕರಣ ಮಾಡಿದ್ದು ಹತ್ತಿ ಬೆಳಗಲ್ಲು ಗ್ರಾಮಕ್ಕೆ ಬೆಟ್ಟದ ಮೇಲಿನ ದೇವಸ್ಥಾನಕ್ಕೆ ಕುರುಬರು ಭಕ್ತಿ ಭಾವದಿಂದ ನಡೆದುಕೊಳ್ಳುವ ಮಾಹಿತಿಯನ್ನು ದಾಖಲಿಸಿದೆ.[೨೨] ಕುರುಗೋಡು ಕೈಫಿಯತ್ತು ಹಂಡೆ ಪಾಳೆಯಗಾರರಲ್ಲಿ ಪ್ರಸಿದ್ಧನಾದ ಹನುಮಪ್ಪ ನಾಯಕನ ವಂಶಾವಳಿಯೊಂದಿಗೆ ಅವನ ಶೌರ್ಯ ಸಾಹಸಗಳನ್ನು ವರ್ಣಿಸಿ "ಕುರುಬರು ಕರ್ತೃತ್ವದ ಜನರು" ಎಂದು ತಿಳಿಸುತ್ತದೆ.[೨೩] ಕುಡುತಿನಿ ಗ್ರಾಮದಲ್ಲಿ ಬೀರಪ್ಪನ ದೇವಾಲಯದ ಉಲ್ಲೇಖಗಳಿವೆ.[೨೪] ಹೀಗೆ ಕುರುಬರಿಗೆ ಸಂಬಂಧಿಸಿದ ಅನೇಕ ವಿವರಗಳು ಕೈಫಿಯತ್ತುಗಳಲ್ಲಿ ದಾಖಲಾಗಿವೆ.

೪. ನಿರೂಪಗಳು

ನಿರೂಪವೆಂದರೆ ಬರಹ ರೂಪದ ಆಜ್ಞಾಪತ್ರ ಅಥವಾ ಆದೇಶದ ಪತ್ರವೆಂದು ಕರೆಯಲಾಗುತ್ತದೆ. ಇವುಗಳನ್ನು ಮೂರು ವಿಧಗಳಲ್ಲಿ ವಿಂಗಡಿಸಬಹುದು. ಅವು ೧.ದಾನ ನಿರೂಪ ೨. ಉಪಾಧಿ ನಿರೂಪ ೩.ಆದೇಶಿತ ನಿರೂಪಗಳು. ಹಾಲುಮತಕ್ಕೆ ಸಂಬಂಧಿಸಿದ ಕೆಲವು ನಿರೂಪಗಳನ್ನು ಬಿ.ರಾಜಶೇಖರಪ್ಪ ಮತ್ತು ಎಫ್.ಟಿ.ಹಳ್ಳಿಕೇರಿ ಮೊದಲಾದ ವಿದ್ವಾಂಸರು ಶೋಧಿಸಿದ್ದಾರೆ. ಕುರುಬರ ಗುರುಗಳು ಯಾರು ಎಂಬ ವಿಷಯದಲ್ಲಿ ರೇವಣಸಿದ್ಧ, ಸಿದ್ಧರಾಮ, ಅಮೋಘಸಿದ್ಧ, ಪರಂಪರೆಯ ಒಡೆಯರಲ್ಲಿ ಮನಸ್ತಾಪಗಳಿದ್ದು ಅವುಗಳನ್ನು ಗುರುಹಿರಿಯರ ಸಮಕ್ಷಮದಲ್ಲಿ ಬಗೆಹರಿಸಿಕೊಂಡ ಸಂಗತಿಯನ್ನು ನಿರೂಪಗಳಲ್ಲಿ ಹೊರಡಿಸಲಾಗಿದೆ. ಅಂಥ ಅನೇಕ ನಿರೂಪಗಳು ಒಡೆಯರ ಮನೆಮಠಗಳಲ್ಲಿವೆ. ಅಮೋಘಸಿದ್ಧ ಪರಂಪರೆಯ ಒಡೆಯರಿಗೂ, ರೇವಣಸಿದ್ಧ ಪರಂಪರೆಯ ಒಡೆಯರಿಗೂ ಗುರುಗಳಾಗುವ ವಿಷಯದಲ್ಲಿ ವಾದವಿವಾದ ನಡೆಸಿದ ಸಂಗತಿಯನ್ನು ಎಫ್.ಟಿ.ಹಳ್ಳಿಕೇರಿ ಅವರು ತಮ್ಮ "ಅಮೋಘಸಿದ್ಧ ಪಂರಪರೆಯ ಹಾಲುಮತ ಮಠಗಳು" ಎಂಬ ಲೇಖನದಲ್ಲಿ ವಿವರಿಸಿದ್ದಾರೆ.[೨೫] ಅಲ್ಲದೆ ಬಿ.ರಾಜಶೇಖರಪ್ಪನವರು ವಿಜಯನಗರದ ಅರಸರು ಕುರುಬರಾವುತನಿಗೆ ನೀಡಿದ ಮೂರು ನಿರೂಪಗಳನ್ನು ಪ್ರಕಟಿಸಿದ್ದಾರೆ.[೨೬] ಅವುಗಳ ವಿವರಗಳು ಹೀಗಿವೆ. "೧ ಶಾಲಿವಾಹನ ಶಕ ೧೨೭೭ನೆಯ ಕಾಳಮುಕ್ತಿ ಸಂವತ್ಸರದ ಅಶ್ವೀಜಶುದ್ಧ ೭ರಲ್ಲಿ ಶ್ರೀ ಮದ್ರಾಜಾಧಿರಾಜ ಪ್ರೌಢಪ್ರತಾಪ ವೀರನರಪತಿ ರಾಮರಾಯನ ಪೌತ್ರರಾದ ಅಚ್ಯುತರಾಯರ ಪುತ್ರರಾದ ಕೃಷ್ಣರಾಯರು

ವಿಜಯನಗರದ ಪಟ್ಟದಲ್ಲಿ ರತ್ನ ಸಿಂಹಾಸನಾರೂಢರಾಗಿ ಸಾಮ್ರಾಜ್ಯವನ್ನು ಆಳುತ್ತಿದ್ದಾಗ ಹಂಡೆದನುಗರ ತಿಮ್ಮ ರಾವುತನಿಗೆ ಬರೆಸಿಕೊಟ್ಟ ನಿರೂಪ ೨. ಶಾಲಿವಾಹನ ಶಕ ೧೨೭೮ನೆಯ ಸಿದ್ಧಾರ್ಥಿ ಸಂವತ್ಸರದ ಪಾಲ್ಗುಣ ಬಹುಳ ೭ರಲ್ಲಿ ಶ್ರೀ ಮದ್ರಾಜಾಧಿರಾಜ ಪ್ರೌಢಪ್ರತಾಪ ವೀರನರಪತಿ ರಾಮರಾಯರ ಪುತ್ರರಾದ ಅಚ್ಯುತರಾಯರ ಪುತ್ರರಾದ ಕೃಷ್ಣರಾಯರು ವಿಜಯನಗರದ ಪಟ್ಟಣದಲ್ಲಿ ರತ್ನ ಸಿಂಹಾಸನಾರೂಢರಾಗಿ ಸಾಮ್ರಾಜ್ಯವನ್ನು ಆಳುತ್ತಿದ್ದಾಗ ಹಂಡೆದನುಗರ ತಿಮ್ಮ ರಾವುತನಿಗೆ ಬರೆಸಿಕೊಟ್ಟ ನಿರೂಪ ೩. ತಿಮ್ಮ ರಾವುತನಿಗೆ ೧೨೦ ಜನ ಜಟ್ಟಿಗರೊಂದಿಗೆ ಹೋರಾಡಿ ಜಯಶಾಲಿಯಾಗಿದ್ದಕ್ಕೆ ಬರೆಸಿಕೊಟ್ಟ ನಿರೂಪ.

ಸಮಾಜದ ದೃಷ್ಟಿಯಲ್ಲಿ ಅಪರಾಧಿಗಳಿಂದ ಗುರುಮಠಕ್ಕೆ ದಂಡವನ್ನು ವಸೂಲಿ ಮಾಡಿ ಬಳಗದವರಿಗೆಲ್ಲ ಕುಲದ ಊಟವನ್ನು ಹಾಕಿಸಿದ ನಂತರ ಶುದ್ಧ ಮಾಡಿದ ವಿವರಗಳನ್ನು ತಿಳಿಸುವ ನಿರೂಪಗಳು ಕುರುಬರಲ್ಲಿ ಅಧಿಕ ಪ್ರಮಾಣದಲ್ಲಿವೆ. ಉದಾಹರಣೆಗೆ ಒಂದು ನಿರೂಪದ ಉಲ್ಲೇಖವು ಹೀಗಿದೆ. "ಶ್ರೀಮತ್ ಸಚ್ಚಿದಾನಂದ ಅವಿರಳ ಪರಂಜ್ಯೋತಿ ಸ್ವರೂಪಮಾನರಾದ ಹಾಲುಮತ ಕ್ಷೀರಸಾಗರಕ್ಕೆ ಕಾರಣಕರ್ತರಾದ ಸರವೂರ ಶಾಖಕ್ಕೆ ಸೇರಿದ ಶಾಂತಮುತ್ತು ವಡೆಯರಾದ ಆಸಂದಿ ಸಿಂಹಾಸನದ ಗುರುಗಳು ವಡೇರ ಭಾವಿಸಿದ್ದಪ್ಪ ಸ್ವಾಮಿಗಳವರ ಮಕ್ಕಳು ವಡೇರ್ ಶಿದ್ರಾಮಪ್ಪ ಸ್ವಾಮಿಗಳವರ ಸನ್ನಿಧಿ ಇಂದಾ

ಸನ್ ೧೯೪೧ನೇ ಇಸ್ವಿ ಜುಲೈ ತಾರೀಖು ೧೦ರಲ್ಲಿ ಚಿಕ್ಕಮಗಳೂರು ತಾಲೂಕು ಲಕ್ಯದ ಹೋಬಳಿ ಶಿಂದಿಗೆರೆ ಗ್ರಾಮದಲ್ಲಿರುವ ದಿಣ್ಣೆಹಳ್ಳಿ ಕೆಂಚೇಗೌಡ್ನ ಹೆಂಡತಿ ಅಪರಾಧಿ ಮಳ್ಳಮ್ಮನೆಂಬ ಗಂಡ ಸತ್ತ ವಿಧವೆಯು ಗರ್ಭಿಣಿಯಾದ್ದರಿಂದ ಮೇಲ್ಕಂಡ ತಪ್ಪಿತಸ್ತಳಿಗೆ ಗ್ರಾಮದ ದೊಡ್ಡಿ ಯಜಮಾನರುಗಳು ಮತ್ತು ಬಳಗಸ್ತರು ಸಹ ಸೇರಿ ಮೇಲ್ಕಂಡ ಗುರುಗಳು ಕುಲದ ಊಟವನ್ನು ಗುರುವಿನ ದಂಡವನ್ನು ತೆಗೆದುಕೊಂಡು ಮಳ್ಳಮ್ಮನಿಗೆ ಶುದ್ಧ ನಿರೂಪವನ್ನು ಕೊಟ್ಟಿರುತ್ತೇನೆ ಎಂಬ ನಿರೂಪಗಳು ಸಮಾಜದ ದೃಷ್ಟಿಯಿಂದ ಅಪರಾಧಿಯಾದ ವಿಧವೆ ಮಳ್ಳಮ್ಮನಿಂದ ಹೇಳಿಕೆಯನ್ನು ಪಡೆದುಕೊಂಡು ಅವಳಿಂದ ಗುರುಮಠಕ್ಕೆ ದಂಡಪಡೆದು ಬಂಧುಬಾಂಧವರಿಗೆಲ್ಲ ಕುಲದ ಊಟವನ್ನು ಹಾಕಿಸಿಕೊಂಡು ನಂತರ ಶುದ್ಧ ಮಾಡಿದ ವಿವರಗಳನ್ನು ತಿಳಿಸುತ್ತದೆ.[೨೨]

೫. ವರದಿಗಳು

ಕರ್ನಾಟಕದ ವಿವಿಧ ಸಮುದಾಯಗಳು ತಮ್ಮ ಸಂಘಟನೆ, ಸ್ಥಾನಮಾನ, ಆಚಾರ, ವಿಚಾರಗಳಲ್ಲಿ ಬದಲಾವಣೆ ತರಲು ನಡೆಸಿರುವ ಪ್ರಯತ್ನವನ್ನು ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ಗುರುತಿಸ ಬಹುದಾಗಿದೆ. ಇದೇ ಪ್ರಕ್ರಿಯೆಯನ್ನು ವೀರಶೈವ ಹಾಗೂ ಹಾಲುಮತ ಸಮುದಾಯಗಳಲ್ಲಿ ಕಾಣಬಹುದು. ೧೯೧೦ರಲ್ಲಿ ಹಾಲುಮತದ ಮಹಾಸಭೆ ಲಕ್ಷ್ಮೇಶ್ವರದಲ್ಲಿ ಮೊದಲ ಬಾರಿ ನಡೆದರೆ, ಅದೇ ಮಾದರಿಯಲ್ಲಿ ೧೯೦೪ರಲ್ಲಿ ವೀರಶೈವ ಮಹಾಸಭೆ ನಡೆದುದನ್ನು ಗುರುತಿಸಬಹುದು. ಹೀಗೆ ಎಚ್ಚೆತ್ತ ಸಮಾಜದಲ್ಲಿ ತಮ್ಮ ತಮ್ಮ ಜನಾಂಗಗಳ ಉನ್ನತಿಗಾಗಿ ಸಭೆ, ಸಮಾರಂಭಗಳನ್ನು ನಡೆಸಿ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿರುವ ಉದಾಹರಣೆಗಳಿವೆ. ಸುಮಾರು ೧೦೦ ವರ್ಷಗಳ ದಾಖಲೆಯನ್ನು ಡಾ. ಎಫ್.ಟಿ.ಹಳ್ಳಿಕೇರಿಯವರು

೨೦೦೯ರಲ್ಲಿ "ಹಾಲುಮತ ಮಹಾಸಭೆ: ಭಾಷಣಗಳು ಮತ್ತು ವರದಿಗಳು" ಎಂಬ ಕೃತಿಯ ಮೂಲಕ ಪ್ರಕಟಿಸಿದ್ದಾರೆ.[೨೫] ಜನಾಂಗದ ನಾಲ್ಕು ಹಾಲುಮತ ಧಾರ್ಮಿಕ ಹಾಗೂ ವಿದ್ಯಾವರ್ಧಕ ಮಹಾಸಭೆಗಳು, ನಾಲ್ಕು ಕರ್ನಾಟಕ ಹಾಲುಮತ ಪರಿಷತ್ತುಗಳು, ಮೂರು ಸಭೆಗಳ ಕಾರ್ಯಕ್ರಮಗಳ ವರದಿಗಳನ್ನು, ಭಾಷಣಗಳನ್ನು ಅಂತ್ಯದಲ್ಲಿ ಎರಡು ಕುರುಬರ ಬೋರ್ಡಿಂಗ್ ಸ್ಥಾಪನೆಯ ವರದಿಯನ್ನು ನೀಡಿ ಮಹತ್ವದ ಕಾರ್ಯವನ್ನು ಪೂರೈಸಿರುವುದಾಗಿ ೨೫-೪-೨೦೧೦ ರಂದು ಧಾರವಾಡದ ಪಾಟೀಲ ಪುಟ್ಟಪ್ಪ ಸ್ಮಾರಕಭವನದಲ್ಲಿ ಪುಸ್ತಕ ಬಿಡುಗಡೆಯ ಸಂದರ್ಭದಲ್ಲಿ ಡಾ. ಎಂ.ಎಂ. ಕಲಬುರ್ಗಿ ಅವರು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಜನಾಂಗದ ಸಮಗ್ರ ಅಭಿವೃದ್ಧಿಗಾಗಿ ಸುಮಾರು ಒಂದು ಶತಮಾನದಿಂದ ಅನೇಕ ಗಣ್ಯವ್ಯಕ್ತಿಗಳು, ಸಮಾಜದ ಮುಖಂಡರು, ಸಾಹಿತಿಗಳು ವಿದ್ವಾಂಸರು ತಮ್ಮ ಚಿಂತನೆಗಳ ಮುಖಾಂತರ ಸಮಾಜವನ್ನು ಎಚ್ಚರಿಸುತ್ತಾ ಬಂದಿರುವರು. ವರದಿಗಳ ಮುಖಾಂತರ, ಭಾಷಣಗಳ ಮುಖಾಂತರ ವಿದ್ಯೆ, ಲಿಂಗಾಧಾರಣೆ, ಸಾಮಾಜಿಕ ದುಷ್ಟಪದ್ಧತಿಗಳ ನಿರ್ಮೂಲನೆ, ರಾಜ್ಯ ಮತ್ತು ರಾಷ್ಟ್ರದ ಚಿಂತನೆ, ಉದ್ಯೋಗ, ಸಂಘ ಸಂಸ್ಥೆಗಳ ಸ್ಥಾಪನೆ- ಹೀಗೆ ಹಾಲುಮತ ಸಮುದಾಯದ ಸಮಗ್ರ ಚಿತ್ರಣವನ್ನು, ಸಮುದಾಯದ ಸಂಘಟನೆ, ಶೈಕ್ಷಣಿಕ, ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳ ರೂಪುರೇಷೆಗಳ ಚಿಂತನ ಮಂಥನಗಳನ್ನು ಅನುಷ್ಠಾನಗೊಳಿಸಿದ್ದಾರೆ. ಹಾಗೆಯೇ ಭಾರತದೇಶ ಮತ್ತು ಕರ್ನಾಟಕ ರಾಜ್ಯವು ಎದುರಿಸುತ್ತಿದ್ದ ಸಮಕಾಲೀನ ಸಂದರ್ಭದ ಸಮಸ್ಯೆ ಹಾಗೂ ಸವಾಲುಗಳಿಗೆ ಕುರುಬ ಸಮುದಾಯವು ಸಕಾರಾತ್ಮಕವಾಗಿ ಸ್ಪಂದಿಸಿದ ರೀತಿಯನ್ನು ಈ ಕೃತಿಯಲ್ಲಿ ಗುರುತಿಸಬಹುದಾಗಿದೆ.

ಲಕ್ಷ್ಮೇಶ್ವರದ ಸ್ಕೂಲಮಾಸ್ತರರಾದ ಕರಿಯಪ್ಪಾ ಶಿದ್ದಪ್ಪಾ, ಗುರುಪಾದಯ್ಯ, ಹಾಲುಮತ ಪುರಾಣದ ಕರ್ತೃ ಬಸವಣ್ಣೆಪ್ಪ ನೀಲಪ್ಪಾ ಹಳವಳ್ಳಿ, ಗುಡದಪ್ಪಯ್ಯನವರು, ಕಳಸಪ್ಪಾ ತಡಸದ, ಗುರುಶಾಂತಪ್ಪಾ ಅಣ್ಣಾ ಕನ್ನಿಲೇಟರ, ಹೆಡ್ ಮಾಸ್ತರಾದ ಸಿದ್ಧನಗೌಡ, ಕರಿಯಪ್ಪ ಫಕೀರಪ್ಪ, ತಿಮ್ಮಪ್ಪನವರ ಹಡಗಲಿ, ಗುರುಸಿದ್ದಯ್ಯ ಸ್ವಾಮಿಗಳು, ಸಂಗ್ರೇಶಕೊಪ್ಪ, ಆರ್.ನಾಗನಗೌಡ ಮೊದಲಾದ ಗಣ್ಯಮಾನ್ಯರು ಮಹಾಸಭೆಯಲ್ಲಿ ತಮ್ಮ ಭಾಷಣಗಳ ಮುಖಾಂತರ ಸಮಾಜದ ಸಮಕಾಲೀನ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದಾರೆ.

"ನಮ್ಮ ಹಿಂದುಳಿದ ಜನಾಂಗದ ಏಳಿಗೆಗೆ ವಿದ್ಯಾಭ್ಯಾಸ ದೊರೆಯಬೇಕು. ಮುಖ್ಯವಾಗಿ ಇಂಗ್ಲಿಷನ್ನು ಕಲಿತರೆ ಶೈಕ್ಷಣಿಕವಾಗಿ ಮುಂದುವರಿಯಬಹುದು ಎಂದು ಹೇಳುತ್ತಾ ಅಲ್ಪತೃಪ್ತರಾಗದೆ ಹಿಡಿದ ಕಾರ್ಯವನ್ನು ಬಿಡದೆ ಎಷ್ಟೇ ಕಷ್ಟ ಬಂದರೂ ಮುನ್ನಡೆದರೆ ಸಮಾಜ ಸುಧಾರಣೆಯಾಗಬಹುದು" ಎಂಬ ಭಾವನೆಯನ್ನು ಬಂಕಾಪುರದ ಗುರುಶಾಂತಪ್ಪನವರು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ಬಸವಣ್ಣೆಪ್ಪಾ ನೀಲಪ್ಪಾ ಹಳವಳ್ಳಿ ಅವರು ಹಾಲುಮತದ ಉಗಮವನ್ನು ಪೌರಾಣಿಕ ಹಿನ್ನೆಲೆಯಿಂದ ಪ್ರಾರಂಭಿಸಿದ್ದಾರೆ. ಗರುಡಪ್ಪಯ್ಯನವರ ತಿಮ್ಮಪ್ಪನವರು ಮತಬಾಂಧವರಿಗೆ "ಸಭ್ಯರೇ, ನಮ್ಮ ಮತದಲ್ಲೇ ಬೇರೆ ಸಿಂಹಾಸನವನ್ನೇರ್ಪಡಿಸಿ ಸದರೀ ಗುರುಸ್ಥಲದವರು ಶಿಷ್ಯರಿಗೆ ವಿದ್ಯಾಬುದ್ಧಿಗಳನ್ನು ಹೇಳುತ್ತಾ ನಮ್ಮ ಮತದಲ್ಲಿರುವ ಅನಾಚಾರ್ಯಗಳನ್ನು

ಬಿಡಿಸುತ್ತಾ ಇಷ್ಟಲಿಂಗವನ್ನು ಧರಿಸುತ್ತಾ ದುರ್ಗುಣಗಳನ್ನು ಹೋಗಲಾಡಿಸುತ್ತಾ ಸುಸ್ಶೀಲರನ್ನು ಶಿಷ್ಯರುಗಳಾಗಲೀ ವಿದ್ಯಾಭ್ಯಾಸ ಮಾಡಿದರೆ "ನಮ್ಮ ಮತದ ಹೀನಸ್ಥಿತಿ ಹೋಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಮುಖ್ಯ ನಮ್ಮ ಹೀನಸ್ಥಿತಿ ಹೋಗಲಾಡುವದಕ್ಕೆ ವಿದ್ಯಾಬುದ್ಧಿಯೇ ಕಾರಣ" (ಪುಟ ೧೩) ಎಂದು ಹೇಳಿರುವರು. ಗುರುಪಾದಯ್ಯನವರು ತಮ್ಮ ಭಾಷಣದಲ್ಲಿ ಬಾಲ್ಯವಿವಾಹವನ್ನು ವಿರೋಧಿಸಿ "ಬಾಲ್ಯ ವಿವಾಹವು ನೀಚವಾದದ್ದೇ ಸರಿ. ಯಾಕೆಂದರೆ ಚಿಕ್ಕತನದಲ್ಲಿ ದೈವವಶಾತ್ ವರನು ಗತಿಸಿದವರಾಗಲಿ ಸಮವಯಸ್ಕರಾಗದೆ ಕನ್ಯೆಯು ಪ್ರಬಲಿಸಿ ವರನು ಚಿಕ್ಕತನದಲ್ಲಿ ಆಗಲಿ ಅನಂತ ಪ್ರಮಾದಗಳು ವದಗುವದು. ಕಾರಣ ವಧುವರರು ಯುಕ್ತ ವಯಸ್ಸಿಗೆ ಬಾರದ ವಿನಹ ಮಾಡುವದು ಯೋಗ್ಯವಾಗುವುದಿಲ್ಲ" ಎಂದು ತಿಳಿಸಿದ್ದಾರೆ. ಸ್ಕೂಲ ಮಾಸ್ತರ ಕರಿಯಪ್ಪಾ ಸಿದ್ದಪ್ಪನವರು ತಮ್ಮ ಭಾಷಣದಲ್ಲಿ "ದಯಾಳು ಸರಕಾರದವರಾದ ಇಂಗ್ಲೀಷ್ ಮಹಾಪ್ರಭುಗಳು ನಮ್ಮ ಈ ಭರತಖಂಡವನ್ನು ಕೈವಶ ಮಾಡಿಕೊಂಡಂದಿನಿಂದ ಬೇಕಾದ ಜ್ಯಾತಿಯ ಜನರು ವಿದ್ಯೆ ಕಲಿಯಬೇಕೆಂಬುದರ ಸಲುವಾಗಿ ಅಲ್ಲಲ್ಲಿಗೆ ಶಾಲೆಗಳನ್ನು ಇಟ್ಟಿರುವರು. ಇದಲ್ಲದೆ ವಿದ್ಯೆಯಲ್ಲಿ ತೀರ ಹಿಂದುಳಿದ ಇತರೆ ಜ್ಯಾತಿಯ ಜನರನ್ನು ಸುಧಾರಿಸಬೇಕೆಂದು ಇಚ್ಛೆಯಿಂದ ಈಗ ಸಣ್ಣಪುಟ್ಟ ಹಳ್ಳಿಗಳಲ್ಲಿ ಕೂಡಾ ಶಾಲೆಗಳನ್ನು ಸ್ಥಾಪಿಸಿ ಬಡಹುಡುಗರಿಗೆ ತಮ್ಮ ಉದಾರ ಹಸ್ತದಿಂದ ಏನಾದರೂ ಉಪಕಾರ ಮಾಡುವರು. ಅಂದರೆ ಶಾಲೆಗಳಲ್ಲಿ ಫೀ ಇಲ್ಲದೆ ವಿದ್ಯೆ ಕಲಿಸುವದು. ಈ ಪ್ರಕಾರ ದಯಾಳು ಸರಕಾರದವರು ಪೂರ್ವಕಾಲದಲ್ಲಿ ವಿದ್ಯೆ ಕಲೆಯಲಿಕ್ಕೆ ಇದ್ದಂಥ ಅನೇಕ ತೊಂದರೆಗಳನ್ನು ಹೋಗಲಾಡಿಸಿ ಅನೇಕ ಅನುಕೂಲತೆಗಳನ್ನು ಒದಗಿಸಿಕೊಟ್ಟಿರುವರು" ಎಂದು ಬ್ರಿಟಿಷ್ ಸರಕಾರವನ್ನು ಹೊಗಳಿದ್ದಾರೆ. ಅರಸನಾದವನು ತನ್ನ ದೇಶದಲ್ಲಿ ಮಾತ್ರ ಪೂಜಿಸಲ್ಪಡುತ್ತಾನೆ. ಆದರೆ ಪಂಡಿತನು ಎಲ್ಲ ದೇಶಗಳಲ್ಲಿಯೂ, ಎಲ್ಲ ಕಾಲದಲ್ಲಿಯೂ ಪೂಜಿಸಲ್ಪಡುತ್ತಾನೆ. ಅಂದಮೇಲೆ ಅರಸನಿಗಿಂತಲೂ ಪಂಡಿತನು ಹೆಚ್ಚಿನ ಯೋಗ್ಯತೆಗೆ ಪಾತ್ರನೆಂದು ಹೇಳಿದಂತಾಯಿತು. ಒಬ್ಬ ಅರಸನು ಮತ್ತೊಬ್ಬ ಅರಸನ ಮೇಲೆ ದಾಳೀ ಮಾಡಿದರೆ ಅವರಲ್ಲಿ ಒಬ್ಬನು ಪರಾಜಿತನಾಗಿ ತನ್ನ ಅರಸತನವನ್ನು ಕಳಕೊಂಡು ಮುಂದೆ ಯಾರಿಂದಲೂ ಪೂಜಿಸಲ್ಪಡದಂತೆ ಆಗುವನು. ಆದರೆ ಒಬ್ಬ ಪಂಡಿತನು ಮತ್ತೊಬ್ಬ ಪಂಡಿತನ ಸಂಗಡ ವಾದವಿವಾದಗಳನ್ನು ಮಾಡುವಾಗ್ಯೆ ಅವನ ವಿದ್ವತ್ತು ಕಡಿಮೆಯಾಗದೇ ಅದು ಮತ್ತಷ್ಟು ಬೆಳೆಯುತ್ತದೆ..... ಧನವಂತನ ದ್ರವ್ಯವನ್ನು ಒಮ್ಮೊಮ್ಮೆ ಅರಸನು ಕಸಕೊಳ್ಳಬಹುದು. ಆದರೆ ವಿದ್ಯಾವಂತನ ವಿದ್ಯೆಯನ್ನು ಅರಸನು ಎಂದೂ ಕಸಕೊಳ್ಳಲಾರರು. ಹಣವು ವೆಚ್ಚ ಮಾಡಿದಂತೆ ಕಡಿಮೆಯಾಗುತ್ತದೆ. ಆದರೆ ವಿದ್ಯೆಯನ್ನು ವೆಚ್ಚ ಮಾಡುವುದರಿಂದ ಅದು ಮತ್ತಷ್ಟು ಹೆಚ್ಚಾಗುತ್ತದೆ ಎಂದು ವಿದ್ಯಾಭ್ಯಾಸದ ಮಹತ್ವವನ್ನು ವರ್ಣಿಸಿರುವರು.

ಸಭೆಯಲ್ಲಿ ಪಾಸಾದ ಠರಾವುಗಳನ್ನು ಸಭೆಯಲ್ಲಿದ್ದ ಸರ್ವರ ನಿರ್ಣಯಗಳಿಗೆ ಅನುಮತಿ ಪಟ್ಟಿ ಗುರುವರ್ಗದವರ ಹೆಸರುಗಳನ್ನು ಸಭೆಗೆ ಆಗಮಿಸಿದ ಮುಖ್ಯ ಪ್ರತಿನಿಧಿಗಳ ಹೆಸರುಗಳನ್ನು ದಾಖಲಿಸಿದ್ದಾರೆ.

ಎರಡನೆಯ ಹಾಲುಮತ ಪರಿಷತ್ತಿನ ಅಧ್ಯಕ್ಷರಾದ ಪವಾಡಿಗೌಡ ಫಕೀರಗೌಡ ಪಾಟೀಲ ಹರ್ಲಾಪುರ ಇವರು ಬಂಕಾಪುರ ಕ್ಷೇತ್ರದ ವರ್ಣನೆಯನ್ನು ಪೌರಾಣಿಕ ಹಿನ್ನೆಲೆಯಲ್ಲಿ ವರ್ಣಿಸಿ ಆ ಕ್ಷೇತ್ರದ ಮಹತ್ವವನ್ನು ತಿಳಿಸಿದ್ದಾರೆ. ಹಾಲುಮತವು ಪ್ರಗತಿ ಹೊಂದಲು ತೆಗೆದುಕೊಳ್ಳಬೇಕಾದ ನಿರ್ಧಾರಗಳು, ಸಮಾಜದ ಸಧ್ಯದ ದುಸ್ಥಿತಿ, ಸಾಮಾಜಿಕ ದುರವಸ್ಥೆ, ಸಾಂಪತ್ತಿಕ ದುಸ್ಥಿತಿ, ಔದ್ಯೋಗಿಕ ದುರ್ದಶೆ, ನೈತಿಕ ಅವನತಿ, ದುರ್ವ್ಯಸನಗಳು, ಧಾರ್ಮಿಕ ಅಧೋಗತಿ, ರಾಜಕೀಯ ಸ್ಥಿತಿಯು ನಮ್ಮ ಮುಂದಿನ ಕಾರ್ಯ, ಸರಕಾರದ ಸಹಾಯ ಮೊದಲಾದ ಅತಿ ಮುಖ್ಯವಾದ ವಿಷಯಗಳನ್ನು ಚರ್ಚಿಸಿದ್ದಾರೆ.

ಮೂರನೆಯ ಹಾಲುಮತ ಪರಿಷತ್ತಿನಲ್ಲಿ (೧೯೩೭) ಸರ್ವಾಧ್ಯಕ್ಷರಾಗಿ ಡಾ. ಆರ್.ನಾಗನಗೌಡರು ಭಾಷಣದಲ್ಲಿ "ಕುರುಬರಾದ ನಾವು ನಮ್ಮ ಹಿತ ಲಾಭ ಮತ್ತು ಸಿರಿತನಕ್ಕೆ ಅಧಿಕವಾಗಿ ಒತ್ತು ನೀಡಿ ಸದಾ ನಮ್ಮ ಸಾಮಾನ್ಯ ಕೆಲಸಗಳಲ್ಲಿ ಮುಳುಗಿರಬಾರದು. ನಮ್ಮಲ್ಲಿ ಯಾರಿಗೆ ಸಂಪತ್ತು ಇದೆಯೋ ಅವರು ಸಾರ್ವಜನಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಶ್ರಮಿಸಬೇಕು. ನಮ್ಮ ಜನಾಂಗಕ್ಕೆ ಸಲ್ಲಿಸುವ ಸೇವೆಯೇ ಸಾರ್ವಜನಿಕ ಕೆಲಸವಾಗುತ್ತದೆ. ಇಂತಹ ಕೆಲಸಕ್ಕೆ ಶಿಕ್ಷಣ ತರಬೇತಿ ಬೇಕಾಗುತ್ತದೆ. ಮತ್ತು ಅವೆರಡಕ್ಕೂ ಸಜ್ಜುಗೊಳ್ಳಬೇಕು" ಎಂದು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಕುರುಬರು ಹೆಚ್ಚಾಗಿ ವಾಸಿಸುವ ಜಿಲ್ಲೆಗಳ ಪಟ್ಟಿ, ಭಾರತದ ಕುರಿಗಳ ಸಂಖ್ಯೆ, ಕುರಿಗಳ ಗುಣಮಟ್ಟ, ಕರ್ನಾಟಕದ ಕುರಿಗಳ ಗುಣಮಟ್ಟ ಸುಧಾರಣೆ, ಭವಿಷ್ಯದ ಯೋಜನೆ, ಕಂಬಳಿ ನೇಯ್ಗೆಯ ಶಾಲೆ, ಕಂಬಳಿಗಳ ಮಾರುಕಟ್ಟೆ ತಾಲೂಕು ಅಥವಾ ಜಿಲ್ಲಾ ಮಟ್ಟದ ಸಹಕಾರ ನಿಯಮದನ್ವಯ ಮಾರುಕಟ್ಟೆ ಸಮಿತಿ ಸರಕಾರಿ ಹುಲ್ಲುಗಾವಲು ಮತ್ತು ಅದರ ಅಭಿವೃದ್ಧಿ, ಕಾಡ್ಗಿಚ್ಚು ಮತ್ತು ಕುರುಬರು, ಹುಲ್ಲುಗಾವಲಿನ ಅಭಿವೃದ್ಧಿ ರಾಜಕೀಯ ಮತ್ತು ಕುರುಬರು ಬಾಂಬೆ ಅಸೆಂಬ್ಲಿಯಲ್ಲಿ ಸ್ಥಳಕಾಯ್ದಿರಿಸುವಿಕೆ, ಕುರುಬರು ಮತ್ತು ಹಿಂದುಳಿದ ವರ್ಗಗಳು, ಸರಕಾರಿ ಸೇವೆಗಳು, ಸ್ಥಳೀಯ ಸಮಿತಿಗಳಲ್ಲಿ ಪ್ರಾತಿನಿಧ್ಯ, ಸಾಮಾಜಿಕ ಸುಧಾರಣೆಗಳು, ಉಪಜಾತಿಗಳ ಪರಿವರ್ತನೆ, ವೈಭೋವಪೇತ ಕುರುಬರ ಪ್ರಾಚೀನತೆ ಮೊದಲಾದ ವಿಷಯಗಳನ್ನು ನಿರ್ದಿಷ್ಟವಾಗಿ ಅಂಕಿ ಸಂಖ್ಯೆಗಳ ನೆಲೆಯಲ್ಲಿ ನಾಗನಗೌಡರು ತಮ್ಮ ಭಾಷಣದಲ್ಲಿ ಚರ್ಚಿಸಿರುವರು.

ಅಮೋಘ ಸಿದ್ಧಾರ್ಯ ಕುರುಬರ ಬೋರ್ಡಿಂಗ ಸ್ಥಾಪನೆಯ ವರದಿಯಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಕ್ರಮ, ರವಿವಾರ ಮತ್ತು ಹಬ್ಬದ ದಿವಸಗಳಲ್ಲಿ ವಿದ್ಯಾರ್ಥಿಗಳು ಸಾಮಾಜಿಕ ವಿಷಯಗಳ ಮೇಲೆ ಸಭೆ ಮಾಡಿ ಚರ್ಚೆ ಮಾಡುವದು, ವ್ಯಾಖ್ಯಾನ ಕೊಡುವದು, ಹಾಲುಮತದ ಏಳಿಗೆಗಾಗಿ ದುಡಿದ ಗಣ್ಯರಿಗೆ ಕೃತಜ್ಞತಾ ಪ್ರದರ್ಶನ ಮೊದಲಾದ ವಿಷಯಗಳನ್ನು ಚರ್ಚಿಸಲಾಗಿದೆ.

ಅತಿ ಮುಖ್ಯ ವಿಷಯಗಳಾದ ಸಾಕ್ಷರತೆ ಪ್ರಮಾಣ ಹೆಚ್ಚಿಸಲು ಕೈಕೊಳ್ಳಬೇಕಾದ ಕಾರ್ಯಕ್ರಮ, ಇಷ್ಟಲಿಂಗಧಾರಣೆ ವಿಚಾರವಾಗಿ ಹಾಲುಮತದವರು ಅನೇಕ ವಾದ ವಿವಾದಗಳಲ್ಲಿ ಗಮನ ಸೆಳೆಯುತ್ತಾರೆ. ಈ ವಿಷಯ ಕುರಿತಾಗಿ ಚಳುವಳಿ ರೂಪದ ವರದಿಗಳು ಪ್ರಕಟವಾಗಿವೆ. ವಿ.ಆರ್.ಹನುಮಂತಯ್ಯನವರ

೧-೭-೧೯೨೮ರ 'ಕುರುಬರ ಪತ್ರಿಕೆ'ಯಲ್ಲಿ 'ಕುರುಬರು ಏಕೆ ಲಿಂಗಕಟ್ಟಿಕೊಳ್ಳಬೇಕು?' ಎಂಬ ಲೇಖನವನ್ನು ಪ್ರಕಟಿಸಿದ್ದರು. ಸಾಮಾಜಿಕ ದುಷ್ಟ ಪದ್ಧತಿಗಳಾದ ಬಾಲ್ಯವಿವಾಹ, ವರದಕ್ಷಿಣೆ, ಮಾಂಸಾಹಾರ ಭಕ್ಷಣೆ, ತಂಬಾಕು, ಗಾಂಜಾ ಸರಾಯಿಗಳಂಥ ಮಾದಕ ಪದಾರ್ಥಗಳ ನಿಷೇಧಗಳ ಬಗ್ಗೆ ಸಭೆ, ಸಮಾವೇಶಗಳಲ್ಲಿ ತಿಳುವಳಿಕೆ ನೀಡಿ ಸ್ವಸ್ಥ ಸಮಾಜಕ್ಕೆ ಕರೆ ನೀಡಿದ್ದಾರೆ. ರಾಜ್ಯ ಮತ್ತು ರಾಷ್ಟ್ರದ ಪ್ರಗತಿಗಾಗಿ ಬ್ರಿಟೀಷರ ಆಳ್ವಿಕೆಯಿಂದ ಮುಕ್ತರಾಗಲು ಕರ್ನಾಟಕ ಏಕೀಕರಣಕ್ಕಾಗಿ, ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಅವಶ್ಯಕತೆ ಕುರಿತು ಅನೇಕ ಚಿಂತನೆಗಳನ್ನು ಚರ್ಚೆಗಳನ್ನು ನಡೆಸಿರುವ ದಾಖಲೆಗಳಿವೆ. ಕುರುಬರ ಪ್ರಮುಖ ಉದ್ಯೋಗಗಳಾದ ಕುರಿಸಾಕಣಿಕೆ ಮತ್ತು ಕಂಬಳಿ ತಯಾರಿಕೆ ಬಗೆಗೆ ಡಾ.ನಾಗನಗೌಡರು ಮಾಡಿರುವ ಚಿಂತನೆಗಳು ವೈಚಾರಿಕವಾಗಿವೆ. ಅವರು ಸಮುದಾಯದ ಉನ್ನತಿಗಾಗಿ ಮಾಡಿರುವ ಭಾಷಣವು ಅವರ ದೂರದರ್ಶಿತ್ವಕ್ಕೆ ನಿದರ್ಶನವಾಗಿವೆ. ಸಂಘಸಂಸ್ಥೆಗಳ ಸ್ಥಾಪನೆಗಳ ವರದಿಗಳ ಉಲ್ಲೇಖ ಮಹತ್ವದ್ದಾಗಿವೆ. ಸಮುದಾಯದ ಬೆಳವಣಿಗೆಯಲ್ಲಿ ಸಂಘಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಹಾಲುಮತ ಅಭಿವೃದ್ಧಿ ಸಂಸ್ಥೆ ಮತ್ತು ವಿದ್ಯಾರ್ಥಿಗಳ ಜ್ಞಾನಾರ್ಜನೆಗಾಗಿ ಬೋರ್ಡಿಂಗ್‌ಗಳ ಸ್ಥಾಪನೆ, ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಲಿಂಗಾಪುರ ಗ್ರಾಮದಲ್ಲಿ ೧೯೨೫ ಜೂನ ೬ರಂದು "ಅಮೋಘ ಸಿದ್ಧಾರ್ಯ ಕುರುಬರ ಬೋರ್ಡಿಂಗ್" ಸ್ಥಾಪನೆಯಾಗಿದೆ. ಆ ಬೋರ್ಡಿಂಗಗಳ ಸ್ಥಾಪನೆಯ ಉದ್ಘಾಟನೆ, ಸಮಾರಂಭ ಸಂದರ್ಭ, ಅಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳ ವಿವರ, ಆ ಬೋರ್ಡಿಂಗಿಗೆ ಜನರು ನೀಡಿದ ಸಹಾಯ ಸಹಕಾರಗಳ ವಿವರಗಳನ್ನು ವರದಿಯು ಸವಿವರವಾಗಿ ತಿಳಿಸುತ್ತದೆ. ೧೯೪೭ರಲ್ಲಿ ಶಿರಹಟ್ಟಿ ತಾಲೂಕಿನ ಬಟ್ಟೂರು ಗ್ರಾಮದಲ್ಲಿ 'ಕುರುಬರ ವಿದ್ಯಾರ್ಥಿಗಳ ಧರ್ಮಾರ್ಥ ಬೋರ್ಡಿಂಗ್, ಹೆಸರಿನ ವಿದ್ಯಾರ್ಥಿ ವಸತಿ ನಿಲಯ ಕಾರ್ಯ ನಿರ್ವಹಿಸಿದ್ದನ್ನು ೧೯೫೩ರ ವರದಿಯಲ್ಲಿ ಪ್ರಕಟವಾಗಿದೆ. ತುಮಕೂರಿನ ಚಿಕ್ಕನಾಯಕನಹಳ್ಳಿಯಲ್ಲಿ ಕುರುಬರ ಸಂಘದ ಸ್ಥಾಪನೆಗಾಗಿ ೧೯೨೫ ಮೇ ೨೧ ರಂದು ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಕುರುಬರ ಸಂಘದ ಜನರಲ್ ಸೆಕ್ರೆಟರಿ ನೀಲಗಿರಿ ಸಂಜೀವಯ್ಯನವರು ವಹಿಸಿದ್ದರು.

ಸಭೆ, ಮಹಾಸಭೆ, ಪರಿಷತ್ತು ನಡೆಸಿದ ಸಭೆ ಸಮಾರಂಭಗಳ ವರದಿಗಳು ಮತ್ತು ಭಾಷಣಗಳು ಕಳೆದ ಶತಮಾನದ ಪೂರ್ವಾರ್ಧದ ಕರ್ನಾಟಕ ಕುರುಬ ಸಮುದಾಯದ ಸಮಗ್ರ ಚಿತ್ರಣವನ್ನು ನಿರೂಪಿಸುತ್ತವೆ. ಒಟ್ಟಿನಲ್ಲಿ ಸಮುದಾಯದ ಸಂಘಟನೆ ಶೈಕ್ಷಣಿಕ, ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳ ರೂಪುರೇಷೆಗಳ ಬಗೆಗೆ ಚರ್ಚಿಸಿ ಹಲವಾರು ಕಾರ್ಯಯೋಜನೆಗಳನ್ನು ಜಾರಿಯಲ್ಲಿ ತಂದಿರುವ ವಿಷವನ್ನು ಇಲ್ಲಿ ಗುರುತಿಸಬಹುದು.

ಕರ್ನಾಟಕದ ಬಹುದೊಡ್ಡ ಸಮುದಾಯಗಳಲ್ಲಿ ಒಂದಾದ ಕುರುಬ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಚಿಂತನ ಮಂಥನ ಮಾಡಲು ಕಳೆದ ಶತಮಾನ ಆರಂಭದಲ್ಲಿ ಸಭೆ ಮಹಾಸಭೆ ಸಮ್ಮೇಳನಗಳನ್ನು ವಿವಿಧ ಸ್ಥಳಗಳಲ್ಲಿ ಏರ್ಪಡಿಸಿ ಸಮುದಾಯವನ್ನು ಸಂಘಟಿಸಿ ಜನಜಾಗೃತಿಯನ್ನು ಮೂಡಿಸಲು ಪ್ರಯತ್ನಿಸಿದ

ಬಗೆಗೆ ವರದಿಗಳು ಮತ್ತು ಭಾಷಣಗಳಿಂದ ತಿಳಿದುಕೊಳ್ಳಬಹುದು. ೧೯೧೦ ಅಕ್ಟೋಬರ ೨೩ರಿಂದ ೨೫ರ ವರೆಗೆ ಲಕ್ಷ್ಮೇಶ್ವರದಲ್ಲಿ ಏರ್ಪಡಿಸಿದ ಹಾಲುಮತ ಧರ್ಮೋತ್ತೇಜಕ ಮಹಾಸಭೆಯು ಮೊದಲನೆಯದಾಗಿದೆ. ನಂತರ ನಲವಡಿ(೧೯೨೦), ಪುಣೆಯ ಜೇಜೂರಿ(೧೯೨೦), ಅಮಳನೇರ(೧೯೨೨), ಹುಲ್ಲೂರು(೧೯೨೩), ದೇವಗಿರಿ(೧೯೨೩), ಬಂಕಾಪುರ(೧೯೨೪), ದೇವಿಹೊಸೂರು(೧೯೨೬), ಅಬ್ಬಿಗೇರಿ(೧೯೨೯), ರಾಣೆಬೆನ್ನೂರು (೧೯೩೭), ಗೋಕಾಕ (೧೯೩೬) ಹೀಗೆ ಅನೇಕ ಸ್ಥಳಗಳಲ್ಲಿ ಜಿಲ್ಲೆ, ರಾಜ್ಯ ರಾಷ್ಟ್ರಮಟ್ಟದ ಮಹಾಸಭೆ, ಸಮ್ಮೇಳನಗಳು ನಡೆದ ಬಗೆಗೆ ದಾಖಲೆಗಳು ತಿಳಿಸುತ್ತವೆ.

ಈ ಮಹಾಸಭೆ ಸಮ್ಮೇಳಗಳಲ್ಲಿ ಕುರುಬ ಸಮುದಾಯದ ಶೈಕ್ಷಣಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ, ಆರ್ಥಿಕ, ಔದ್ಯೋಗಿಕ ಮೊದಲಾದ ವಿಷಯಗಳ ಬಗೆಗೆ ವಿವಿಧ ಕ್ಷೇತ್ರದ ಗಣ್ಯ- ಮಾನ್ಯರು, ಗುರು- ಹಿರಿಯರು ಹಾಗೂ ವಿದ್ವಾಂಸರು ತಮ್ಮ ವಿಚಾರಗಳನ್ನು ವಿನಿಮಯ ಮಾಡಿಕೊಂಡಿದ್ದಾರೆ. ಆ ಮೂಲಕ ಸಮುದಾಯದ ಸಮಗ್ರ ಅಭಿವೃದ್ಧಿಗೆ ಕೈಕೊಳ್ಳಬೇಕಾದ ಯೋಜನೆಗಳು, ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ಅನುಸರಿಸಬೇಕಾದ ನೀತಿ- ನಿಯಮಗಳನ್ನು ಈ ವರದಿಗಳು ಮತ್ತು ಭಾಷಣಗಳಲ್ಲಿ ಕಾಣುತ್ತೇವೆ.

ಈವರೆಗಿನ ಅವಲೋಕನದಿಂದ ಕಂಡು ಬಂದ ಸಂಗತಿಗಳನ್ನು ಹೀಗೆ ಕ್ರೋಢೀಕರಿಸಬಹುದು.

೧. ಶಾಸನ, ಸನದು, ಕೈಫಿಯತ್ತು, ನಿರೂಪ ಹಾಗೂ ಭಾಷಣ, ವರದಿಗಳಂಥ ದಾಖಲು ರೂಪದ ಆಕರಗಳು ಕುರುಬ ಸಮುದಾಯದ ಇತಿಹಾಸ, ಧರ್ಮ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಂಘಟನೆ ಹೀಗೆ ಮೊದಲಾದ ಸಂಗತಿಗಳನ್ನು ತಿಳಿದುಕೊಳ್ಳಲು ನೆರವಾಗುತ್ತವೆ.

೨. ಶಾಸನಗಳಲ್ಲಿ ಕುರುಬರ ಗುರು ಪರಂಪರೆ, ವಿಶೇಷವಾಗಿ ಒಡೆಯರ ಕಾರ್ಯ ಚಟುವಟಿಕೆಗಳು, ಪ್ರಾಚೀನ ಕಾಲದ ಕುರುಬರ ವ್ಯಕ್ತಿನಾಮಗಳು, ಗ್ರಾಮಗಳನ್ನು ತಿಳಿದುಕೊಳ್ಳಲು ಉಪಯುಕ್ತ ಆಕರಗಳಾಗಿವೆ.

೩. ಕುರುಬರಿಗೂ ಮತ್ತು ಇತರೆ ಸಮುದಾಯದವರಿಗೆ ಧಾರ್ಮಿಕ ಸಾಮಾಜಿಕ ವಿಷಯದಲ್ಲಿ ವಾದವಿವಾದಗಳು ನಡೆದಾಗ ಅದನ್ನು ಬಗೆಹರಿಸಿಕೊಂಡ ಘಟನೆಯನ್ನು ತಿಳಿಸುತ್ತವೆ.

೪. ಹಾಲುಮತ ಮಹಾಸಭೆ, ಸಮ್ಮೇಳನಗಳ ವರದಿ ಹಾಗೂ ಭಾಷಣಗಳಲ್ಲಿ ಸ್ವಾತಂತ್ರಪೂರ್ವದ ಕುರುಬರ ಸಂಘಟನೆ ಶೈಕ್ಷಣಿಕ ಸಾಮಾಜಿಕ ಜನಜಾಗೃತಿಗಾಗಿ ಕೈಕೊಂಡ ಕ್ರಮಗಳನ್ನು ಗುರುತಿಸಬಹುದು.

೫. ಈ ಎಲ್ಲ ದಾಖಲು ರೂಪದ ಸಾಹಿತ್ಯವನ್ನು ಸಂಪುಟಗಳ ರೂಪದಲ್ಲಿ ಸಂಗ್ರಹಿಸಿ ಪ್ರಕಟಿಸಬೇಕಾದ ಅಗತ್ಯತೆಯಿದೆ. ಈ ವರೆಗೆ ಅಲ್ಲಲ್ಲಿ ಪ್ರಕಟವಾದ ಶಾಸನ, ನಿರೂಪ, ಸನದು ಇತ್ಯಾದಿ ಆಕರ ಸಾಮಗ್ರಿಯನ್ನು ಕ್ರಮಬದ್ಧವಾಗಿ ಜೋಡಿಸಿ ಅಧ್ಯಯನಕ್ಕೊಳಪಡಿಸಿದಾಗ ಕುರುಬ ಸಮುದಾಯ ಸಂಸ್ಕೃತಿ ಬಗೆಗೆ ಹೆಚ್ಚಿನ ವಿವರಗಳು ತಿಳಿದು ಬರುವ ಸಾಧ್ಯತೆಗಳಿವೆ. ಈ ನಿಟ್ಟಿನಲ್ಲಿ ಸಂಶೋಧಕರು ಗಮನಹರಿಸಬೇಕಾಗಿದೆ.

ಕೊನೆಟಿಪ್ಪಣಿಗಳು

೧. ಕೆ.ರವೀಂದ್ರನಾಥ, ಕನ್ನಡ ದಾಖಲು ಸಾಹಿತ್ಯ, ಪುಟ ೪

೨. ಎಂ.ಎಂ.ಕಲಬುರ್ಗಿ, ಶಾಸನ ಸೂಕ್ತಿ ಸುಧಾರ್ಣವ, ಪುಟ ೭

೩. ಎಂ.ಎಂ.ಕಲಬುರ್ಗಿ ಸಮಾಧಿ -ಬಲಿದಾನ ವೀರಮರಣ, ಸ್ಮಾರಕಗಳು

೪. ಶಂಬಾ ಜೋಶಿ -ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ, ೧೯೬೭, ಸಂಪುಟ ೩, ಕನ್ನಡ ಪುಸ್ತಕ ಪ್ರಾಧಿಕಾರ, ಪುಟ ೩೬೯

೫. Gustav oppert-original Inhabitants India (P.No. 126)

೬. C.J.Brown, The Coins of India, P. No. 58

೭. ಎಪಿಗ್ರಾಫಿಯ ಇಂಡಿಕಾ ಸಂ. xvi, (ಸಂ) ಎಫ್.ಡಬ್ಲ್ಯು ಥಾಮಸ್, ಎಚ್. ಕೃಷ್ಣಶಾಸ್ತ್ರಿ, ಆರ್ಕ್ಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ ೧೯೮೩, ಪುಟ ೪

೮. ಶಿವಕುಮಾರ ನೀರಲಗಿ, ಈರಪ್ಪ ಕಂಬಳಿ -ಜನಾಂಗದ ಶಾಸನ ಕವಿ ಕವಿರಾಜ ಬಾಂಧವಮಲ್ಲ, ಪಾವನ, ಕಾಗಿನೆಲೆ. ಮಹಾಸಂಸ್ಥಾನ ಕನಕಗುರು ಪೀಠದ ಸ್ಥಾಪನೆಯ ಸಂಸ್ಮರಣ ಗ್ರಂಥ (ಸಂ) ಎಂ.ಜೈಕುಮಾರ್, ೧೯೯೨, ಪುಟ ೧೦೪

೯. ೧. ಸೌತ್ ಇಂಡಿಯನ್ ಇನಸ್ಕ್ರಿಪ್ಷನ್ಸ್ ಸಂಪುಟ ೧೫, (ಸಂ) ಜಿ.ಎಸ್.ಗಾಯಿ, ಆರ್ಕ್ಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ ೧೯೮೬, ಪುಟ ೨೦೨

೧೦. ಎಪಿಗ್ರಾಫಿಯ ಕರ್ನಾಟಕ ಸಂಪುಟ xi, (ಸಂ) ಬಿ.ಎಲ್.ರೈಸ್, ಮೈಸೂರು ಗವರ್ನಮೆಂಟ್ ಪ್ರೆಸ್, ಪುಟ ೩೫.

೧೧. ತಗರ ಪವಾಡ, ಅನುಬಂಧ (ಸಂ) ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಎಫ್.ಟಿ.ಹಳ್ಳಿಕೇರಿ, ವಿದ್ಯಾನಿಧಿ ಪ್ರಕಾಶನ, ಗದಗ ೨೦೦೪, ಪುಟ ೯೯

೧೨. ಶಾಸನ ಅಧ್ಯಯನ ೨, (ಸಂ) ದೇವರಕೊಂಡಾರೆಡ್ಡಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೨೦೦೪, ಪುಟ ೩೨

೧೩. ಎಫ್.ಟಿ. ಹಳ್ಳಿಕೇರಿ, ದೇವಲಾಪುರದ ನಾಲ್ಕು ಅಪ್ರಕಟಿತ ತಾಮ್ರಪತ್ರಗಳು, ವಿಜಯನಗರ ಅಧ್ಯಯನ, ಸಂಪುಟ ೧೩, (ಸಂ) ಆರ್.ಗೋಪಾಲ್, ಬಿ.ಎಂ.ಚಿಕ್ಕರಾಮೇಗೌಡ, ಟಿ.ಎಸ್.ಗಂಗಾಧರ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೦೮, ಪುಟ ೩೦

೧೪. ಎಂ.ಎಂ.ಕಲಬುರ್ಗಿ -ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೧೯೯೪, ಪುಟ ೩೩೪.

೧೫. ಎಫ್.ಟಿ.ಹಳ್ಳಿಕೇರಿ, ಕುರುಬರಿಗೆ ಸಂಬಂಧಿಸಿದ ವಿಜಯನಗರದ ಅಪ್ರಕಟಿತ ತಾಮ್ರಶಾಸನ, ವಿಜಯನಗರ ಅಧ್ಯಯನ (ಸಂ. ೧೨, (ಸಂ) ಆರ್.ಗೋಪಾಲ್, ಬಿ.ಎಂ.ಚಿಕ್ಕಮಾರೇಗೌಡ, ಟಿ.ಎಸ್.ಗಂಗಾಧರ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೦೭, ಪುಟ ೭೬

೧೬. ರಾಜಶೇಖರಪ್ಪ ಬಿ., ಕುರುಬರು ದಾವಣಗೆರೆಯ ಗೌಡಿಕೆಯ ಹಕ್ಕನ್ನು ದಿವ್ಯದ ಮೂಲಕ ಗೆದ್ದುಕೊಂಡ ಶಾಸನ, ಹಾಲತೊರೆ, (ಸಂ) ಎಂ.ಕರಿಯಪ್ಪ, ನಗರ ಕುರುಬರ ಸಂಘ, ಶ್ರೀಬೀರೇಶ್ವರ ವಿದ್ಯಾರ್ಥಿ ನಿಲಯ, ದಾವಣಗೆರೆ ೨೦೦೩, ಪುಟ ೨೮೨

೧೭. ರಾಜಶೇಖರಪ್ಪ ಬಿ., ಇಮ್ಮಡಿ ಮದಕೇರಿ ನಾಯಕನ ಕಾಲದ ಒಂದು ತಾಮ್ರಪಟ, ನಿರಂತರ, ಶ್ರೀ ಲೋಕಪಾವನಿ ಪ್ರಕಾಶನ, ಪಾಂಡವಪುರ, ೨೦೦೧

೧೮. ಹೆಚ್ಚಿನ ವಿವರಗಳಿಗಾಗಿ ಎಫ್.ಟಿ.ಹಳ್ಳಿಕೇರಿ ಅವರ ಶಾಸನದಲ್ಲಿ ಕುರುಬರು (ಹಾಲಕೆನೆ ೨೦೦೨) ಹಾಗೂ ದಾಖಲೆಗಳು (ಹಾಲುಮತ ವ್ಯಾಸಂಗ-೧, ೨೦೦೯) ಲೇಖನಗಳನ್ನು ನೋಡಿ

೧೯. ಸರೂರಿನ ರೇವಣಸಿದ್ಧ ಪರಂಪರೆಯ ಜಗದ್ಗುರುಗಳಾದ ಕಾಡಪ್ಪಯ್ಯ ಒಡೆಯರು ೧೯೦೪ರಲ್ಲಿ ಹೊರಡಿಸಿದ ಸನದಿನ ಪ್ರತಿ, ಇದನ್ನು ಸಂರಕ್ಷಿಸಿಕೊಂಡು ಬಂದವರು ಹಾಸನ ಜಿಲ್ಲೆ ಚೆನ್ನರಾಯ ಪಟ್ಟಣ ತಾಲೂಕಿನ ಅಣತಿ ಶ್ರೀ ರೇವಣಸಿದ್ದೇಶ್ವರ ಮಠದ ಪೀಠಾಧಿಕಾರಿಗಳಾದ ಗುರುಸಿದ್ಧಯ್ಯ ಒಡೆಯರ್. ಅವರಲ್ಲಿ ಈ ಪ್ರತಿಯ ಮುದ್ರಣ ಪ್ರತಿಯಿದೆ

೨೦. ಜಯಕರ್ನಾಟಕ, ಸಂಪುಟ ೨೦ ಸಂಚಿಕೆ, ೧೯೪೨, ಪುಟ ೧೮೧

೨೧. ಕರ್ನಾಟಕದ ಕೈಫಿಯತ್ತುಗಳು (ಸಂ) ಎಂ.ಎಂ.ಕಲಬುರ್ಗಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೪, ಪುಟ ೧೧೮

೨೨. ಅದೇ, ಪುಟ ೪೦೮

೨೩. ಅದೇ, ಪುಟ ೪೬೦

೨೪. ಅದೇ, ಪುಟ ೫೫೦

೨೫. ಇತಿಹಾಸ ದರ್ಶನ, ಸಂಪುಟ ೨೧, ಇತಿಹಾಸ ಅಕಾಡೆಮಿಯ ಸಮ್ಮೇಳನದಲ್ಲಿ ಮಂಡಿತವಾದ ಸಂಪ್ರಬಂಧಗಳ ಸಂಪುಟ (ಸಂ) ಎಂ.ಜಿ.ನಾಗರಾಜ, ಪಿ.ವಿ.ಕೃಷ್ಣಮೂರ್ತಿ, ೨೦೦೬, ಪುಟ ೨೫೦

೨೬. ರಾಜಶೇಖರಪ್ಪ ಬಿ., ವಿಜಯನಗರದ ಅರಸರು ಕುರುಬ ರಾವುತ ವೀರನೊಬ್ಬನಿಗೆ ನೀಡಿದವೆನ್ನಲಾದ ಮೂರು ನಿರೂಪಗಳು, ವಿಜಯನಗರ ಅಧ್ಯಯನ, ಸಂಪುಟ ೧೨ (ಸಂ) ಆರ್.ಗೋಪಾಲ್. ಬಿ.ಎಂ.ಚಿಕ್ಕಮಾರೇಗೌಡ, ಟಿ.ಎಸ್.ಗಂಗಾಧರ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೦೭, ಪುಟ ೧೮೨

೨೭. ಬಿ.ಜಿ.ಬಿರಾದಾರ, ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ, ಪುಟ ೧೮೪

೨೮. ಎಫ್.ಟಿ.ಹಳ್ಳಿಕೇರಿ, ಹಾಲುಮತ ಮಹಾಸಭೆ: ಭಾಷಣಗಳು ಮತ್ತು ವರದಿಗಳು, ೨೦೧೦

ಅಧ್ಯಾಯ ೪

ಮೌಖಿಕ ಸಾಹಿತ್ಯ

೧. ಜನಪದ ಹಾಲುಮತ ಮಹಾಕಾವ್ಯ

೨. ಮಾಳಿಂಗರಾಯನ ಕಾವ್ಯ

೩. ಏಳೂರು ದೇವರ ಕಾಳಗ

೪. ಮೈಲಾರಲಿಂಗನ ಕಾವ್ಯಗಳು

೫. ರಟ್ಟಮತಶಾಸ್ತ್ರ

೬. ಡೊಳ್ಳಿನ ಪದಗಳು

೭. ಹಾಡುಗಳು ಮತ್ತು ಹೇಳಿಕೆಗಳು

ಅಧ್ಯಾಯ ೪

ಮೌಖಿಕ ಸಾಹಿತ್ಯ

೧. ಜನಪದ ಹಾಲುಮತ ಮಹಾಕಾವ್ಯ

ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ವೀರಣ್ಣ ದಂಡೆ ಅವರು ೨೦೦೦ದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಈ ಕೃತಿಯನ್ನು ಪ್ರಕಟಿಸಿದ್ದಾರೆ. ಈ ಕೃತಿಯು ೮೫೦ ಪುಟಗಳನ್ನು ಹೊಂದಿದೆ. ೭೫ ಗಂಟೆಗಳ ಕಾಲದ ಕಾವ್ಯವನ್ನು ಒಟ್ಟಾಗಿ ಕಟ್ಟಿಕೊಡುವಲ್ಲಿ ದಂಡೆಯವರು ಎದುರಿಸಿದ ತೊಂದರೆಗಳನ್ನು, ಅಡ್ಡಿ-ಆತಂಕಗಳನ್ನು, ಪ್ರಯಾಸವನ್ನು ಪ್ರಸ್ತಾವನೆಯಲ್ಲಿ ಸವಿವರವಾಗಿ ವಿವರಿಸಿದ್ದಾರೆ. ಒಬ್ಬ ಸಂಪಾದಕನು ಗಮನಿಸಬಹುದಾದ ಮುಖ್ಯ ವಿಚಾರಗಳು ತಪ್ಪು-ಒಪ್ಪುಗಳನ್ನು ಇಲ್ಲಿ ತಿಳಿಸಿದ್ದಾರೆ.

'ಜನಪದ ಹಾಲುಮತ ಮಹಾಕಾವ್ಯ' ಹಾಡುವಾಗ ಸಿದ್ದಪ್ಪ ಮೇಟಿ ಅವರಿಗೆ ೭೬ ವರ್ಷ ವಯಸ್ಸು. ೨೦ ವರ್ಷಗಳ ಹಿಂದೆ ಈ ಮಹಾಕಾವ್ಯವನ್ನು ಹಾಡುಗಾರ ಸಿದ್ದಪ್ಪ ಮೇಟಿ ಅವರನ್ನು ದಂಡೆ ಅವರ ಗುರುಗಳಾದ ಡಾ. ಬಿ.ಬಿ.ಹೆಂಡಿ ಅವರು ಶೋಧಿಸಿದ್ದರು. ಆಗ ಕನ್ನಡ ವಿಭಾಗದಲ್ಲಿ ಸಹಾಯಕ ಸಂಶೋಧಕರಾಗಿ ದುಡಿಯುತ್ತಿದ್ದ ದಂಡೆ ಅವರಿಗೆ ಈ ಕಾವ್ಯ ಸಂಗ್ರಹಿಸುವ ಅವಕಾಶ ದೊರೆತಿದ್ದಿತು. ಜಾನಪದ ಅಕಾಡಮಿಯ ಅಧ್ಯಕ್ಷರಾದ ಡಾ. ಎಚ್.ಜೆ.ಲಕ್ಕಪ್ಪಗೌಡರ ಆಸಕ್ತಿಯಿಂದ ೨೦ ವರ್ಷಗಳ ನಂತರ ಪುನಃ ದಂಡೆ ಅವರಿಗೆ ಅದೇ ಸಿದ್ದಪ್ಪ ಮೇಟಿಯವರಿಂದ ಆ ಸುದೀರ್ಘ ಕಾವ್ಯವನ್ನು ಮತ್ತೊಮ್ಮೆ ಸಂಗ್ರಹಿಸುವ ಅವಕಾಶ ದೊರೆಯಿತು. ಆ ಕಾರಣ ಈ ಕೃತಿಯನ್ನು ತಮ್ಮ ಗುರುಗಳಿಗೆ ಸಮರ್ಪಿಸಿದ್ದಾರೆ.

ಜನಪದ ಹಾಡುಗಾರ ಸಿದ್ದಪ್ಪ ಮೇಟಿ ಕಲಬುರ್ಗಿ ಜಿಲ್ಲೆಯ ಶಹಾಪುರ ತಾಲೂಕಿನ ಸೈದಾಪುರದವರು. ಕಾವ್ಯದ ಪ್ರಾರಂಭ ಭಾಗದಲ್ಲಿ ದಾಸರಂಗ ಮತ್ತು ಸಾಯಬಣ್ಣ ಎನ್ನುವ ಹೆಸರುಗಳನ್ನು ಗುರುತಿಸಬಹುದು. ಸಾಯಬಣ್ಣನು ದಾಸರಂಗ ಊರಿನವನಾಗಿದ್ದು, ಸೊಲ್ಲಾಪುರದ ಮಿಲ್ಲಿನಲ್ಲಿ ಕೆಲಸ ಮಾಡುತ್ತಿದ್ದನು. ಸಿದ್ದಪ್ಪನು ಸಹ ಅಲ್ಲಿಯೇ ಕೆಲಸ ಮಾಡುತ್ತಿದ್ದ. ಹೀಗೆ ಸಾಯಬಣ್ಣ ಮತ್ತು ಸಿದ್ದಪ್ಪನ ಪರಿಚಯವಾಯಿತು. 'ಜನಪದ ಹಾಲುಮತ ಮಹಾಕಾವ್ಯ'ದ ಉತ್ತಮ ಹಾಡುಗಾರನಾದ ಸಾಯಬಣ್ಣನು ಸಿದ್ದಪ್ಪನಿಗೆ ಅದನ್ನು ಹೇಳಿಕೊಡಲು ಪ್ರಾರಂಭಿಸಿದನು. ಹೀಗೆ ಸಿದ್ದಪ್ಪ ಮೇಟಿ ಅವರು ೧೯೪೪ರಿಂದ ಸ್ವತಂತ್ರವಾಗಿ ಹಾಡು ಹೇಳಲು ಪ್ರಾರಂಭಿಸಿದರು.

ಎಂಬತ್ತಾರು ಇಳಿವಯಸ್ಸಿನ ಸಿದ್ದಪ್ಪನವರ ಪ್ರತಿಭೆಗೆ ಜಾನಪದ ಅಕಾಡೆಮಿ ಪ್ರಶಸ್ತಿ ಮತ್ತು ರಾಜ್ಯೋತ್ಸವ ಪ್ರಶಸ್ತಿಗಳು ಬಂದಿವೆ.

ಕಾವ್ಯದ ಸ್ವರೂಪ

ಈ ಮಹಾಕಾವ್ಯವು ಛಂದಸ್ಸಿನ ದೃಷ್ಟಿಯಿಂದ ಅಂಶಗಣಾತ್ಮಕವಾಗಿದೆ. ವಿಷ್ಣುಗಣ ಪ್ರಧಾನವಾಗಿದ್ದು, ಬ್ರಹ್ಮಗಣವು ವಿಷ್ಣುಗಣವನ್ನು ಅನುಸರಿಸುತ್ತದೆ. ವಿರಳವಾಗಿ ರುದ್ರಗಣ ಬಂದು ಲಯದ ಏರಿಳಿತವನ್ನು ಸಾಧಿಸುತ್ತದೆ. ಆದ್ದರಿಂದ ಇದು ಶಿಷ್ಟಕಾವ್ಯಗಳಂತೆ ಇಂಥದೇ ಛಂದಸ್ಸಿಗೆ ಅಳವಟ್ಟಿದೆ ಎಂದು ಹೇಳಲು ಸಾಧ್ಯವಿಲ್ಲ. ರಗಳೆಯಂತೆ ಪ್ರತಿಸಾಲುಗಳು ಹಿಗ್ಗುತ್ತ ಕುಗ್ಗುತ್ತ ಸಾಗುತ್ತವೆ. ಕಾವ್ಯದಲ್ಲಿ ಸಂಧಿಗಳಿಲ್ಲ. ಅಧ್ಯಯನದ ಅನುಕೂಲಕ್ಕಾಗಿ ವೀರಣ್ಣ ದಂಡೆ ಅವರು ಹದಿನಾಲ್ಕು ಅಧ್ಯಯಗಳಾಗಿ ವಿಭಾಗಿಸಿ, ವಿಷಯ ಸ್ಪಷ್ಟತೆಗಾಗಿ ಪುನಃ ಉಪಶೀರ್ಷಿಕೆಯಲ್ಲಿ ವಿಭಾಗಿಸಿದ್ದಾರೆ.

ಈ ಮಹಾಕಾವ್ಯವು ಕೆಲವು ಚಾರಿತ್ರಿಕ ವ್ಯಕ್ತಿಗಳನ್ನು ಪರಿಚಯಿಸುತ್ತದೆ. ಬೀರಪ್ಪನೇ ಕಥೆಯ ಕೇಂದ್ರ ವ್ಯಕ್ತಿಯಾದರೂ ಕೆಲವು ಪಾತ್ರಗಳು ಪೂರಕವಾಗಿವೆ. ಉದಾಹರಣೆಗೆ ಮಾಳಿಂಗರಾಯ, ಮಾಯವ್ವ, ಅಮೋಘಸಿದ್ಧ, ಪಾಡುರಂಗ ಮೊದಲಾದವರು ಮಹಾಕಾವ್ಯದ ಶರೀರದಲ್ಲಿ ಸಾಮಾನ್ಯವಾಗಿ ಕೆಲವು ರಾಚನಿಕ ವಿನ್ಯಾಸಗಳನ್ನು ಗುರುತಿಸಬಹುದು. ಮುಖ್ಯವಾಗಿ ಸ್ತುತಿ, ಮಂಗಳ, ಪುನರಾವರ್ತನೆ, ರೂಪಾಂತರ ಹೆಣ್ಣನ್ನು ಗೆಲ್ಲುವದು, ನಾಯಕನ ಅಲೆದಾಟ ಮುಂತಾದ ಜನಪದ ಕಥೆಗಳು ಸೇರ್ಪಡೆಯಾಗಿವೆ.

ಕಥಾಸಾರ

ಮೊದಲ ಅಧ್ಯಾಯವು 'ಕೈಲಾಸದ ಹಾಡಿಕೆ'ಯಲ್ಲಿ ಐದು ಉಪಶೀರ್ಷಿಕೆಗಳನ್ನು ಹೊಂದಿದೆ. ಈ ಅಧ್ಯಾಯವು ಕೃಷಿ-ಕುರಿ-ಕಂಬಳಿ ಉತ್ಪತ್ತಿ, ಹಾಲುಮತದ ಪ್ರಾರಂಭ ಗಂಡು ಹೆಣ್ಣಿನ ಉತ್ಪತ್ತಿ ಮತ್ತು ಬೆಂಕಿಯ ಶೋಧ, ಗಂಡು ಹೆಣ್ಣಿನ ಮದುವೆ ಈ ಮುಂತಾದ ಪೌರಾಣಿಕ ಕಲ್ಪನೆಗಳನ್ನು ಒಳಗೊಂಡಿದೆ. ಮುದ್ದವ್ವ-ಮುದ್ದುಗೊಂಡ, ಶಿವಪಾರ್ವತಿಯರು ನಿರ್ಮಿಸಿದ ಪ್ರಥಮ ಗಂಡು ಹೆಣ್ಣು ಅವರ ಕೊನೆಯ ಮಗ ಪದುಮಗೊಂಡ ಭೂಲೋಕದ ಸ್ತ್ರಿ ಶಿವಲಿಂಗಮ್ಮಳನ್ನು ಪ್ರೀತಿಸಿ ಮದುವೆಯಾಗುತ್ತಾನೆ. ಈ ದಂಪತಿಗಳೇ ಮೊದಲ ಮಾನವ ದಂಪತಿಗಳೆನಿಸುತ್ತಾರೆ. ಬ್ರಹ್ಮ, ವಿಷ್ಣು ಮಹೇಶನೊಂದಿಗೆ ಶಾಂತಮುತ್ಯಾ ಹುಟ್ಟಿ ಕುರುಬ ಜನಾಂಗದ ಕೈಲಾಸದ ಪ್ರತಿನಿಧಿಯಾಗುತ್ತಾನೆ. ದೇವತೆಗಳಿಗಿಂತ ರಾಕ್ಷಸರೇ ಮೊದಲು ಹುಟ್ಟಿದರೆಂದು ಹಾಲುಮತ ಪುರಾಣ ಹೇಳುತ್ತದೆ. ಆ ರಾಕ್ಷಸರಲ್ಲಿ ಐವರನ್ನು ಕುರಿಗಳನ್ನಾಗಿಸಿ, ಒಬ್ಬನನ್ನು ಟಗರನ್ನಾಗಿಸುತ್ತಾನೆ. ಈ ಶಾಂತಮುತ್ಯಾ ಉಣ್ಣೆ ಕತ್ತರಿಸಿ ಕಂಬಳಿ ನೇಯುತ್ತಾನೆ. ಕಾರಣ ಕಂಬಳಿಯನ್ನು 'ಶಾಂತಮುತ್ಯಾನ ಕಂಬಳಿ' ಎಂದು ಕರೆಯುತ್ತಾರೆ ಎನ್ನುವ ಪ್ರತೀತಿ ಇದೆ.

ಶಾಂತಮುತ್ಯಾನ ಕುರಿಗಳನ್ನು ಬ್ರಹ್ಮ, ವಿಷ್ಣು, ಮಹೇಶ ಕಾಯ್ದು ನಂತರ ಪಾರ್ವತಿಯ ಸರದಿ ಬರುತ್ತದೆ. ಕೈಲಾಸದಲ್ಲಿ ಕುರಿ ಕಾಯ್ದು ನಂತರ ಅವುಗಳನ್ನು ಭೂಮಿಗೆ ಹೊಡೆದುಕೊಂಡು ಬರುತ್ತಾಳೆ. ಅಲ್ಲಿ ಕುರಿಕಾಯ್ದು

ಬೇಸರಗೊಂಡು ಒಂದು ಹುತ್ತಿನಲ್ಲಿ ಹೊಗಿಸುತ್ತಾಳೆ. ಪಾರ್ವತಿ ತನ್ನ ಮೊಲೆ ಹಾಲನ್ನು ಮಣ್ಣಿನಲ್ಲಿ ಕಲಿಸಿ ಮುದ್ದುಗೊಂಡ ಮುದ್ದವ್ವ ಎಂಬ ಎರಡು ಜೀವಗಳನ್ನು ಉತ್ಪತ್ತಿ ಮಾಡುತ್ತಾಳೆ. ಹೀಗೆ ಶಿವಪಾರ್ವತಿ ಯರಿಂದಲೇ ಹಾಲುಮತ ಜನಾಂಗದ ಮಾನವ ಸಂತತಿ ನಿರ್ಮಾಣವಾಗುತ್ತದೆ. ಅವರ ಕೊನೆಯ ಮಗನೇ ಪದುಮಗೊಂಡ ನೇಗಿಲು ಹೊಡೆಯುವಾಗ ಹುತ್ತ ಸೀಳಿ ಅನಂತ ಕುರಿಗಳು ಮೇಲೇಳುತ್ತವೆ.

ಶಾಂತಮುತ್ತ್ಯಾ ತಾನು ನೆಯ್ದ ಕಂಬಳಿಯನ್ನು ಶಿವಪಾರ್ವತಿಯರ ಮದುವೆಯಲ್ಲಿ ಆಯೇರಿ ಮಾಡುತ್ತಾನೆ. ಆ ಕಂಬಳಿ ಮುದ್ದವ್ವ ಮುದ್ದುಗೊಂಡರಿಗೆ ದೊರೆತು ಮಡ್ಡಪ್ಪನಲ್ಲಿ ಇರುತ್ತದೆ. ತಂದೆತಾಯಿಗಳು ಕುರಿಗಳನ್ನು ಕಾಯುತ್ತ ಮಡ್ಡಪ್ಪನನ್ನು ಕೂಸಿರುವಾಗ ಮರೆತು ಹೋಗುತ್ತಾರೆ. ಅವನನ್ನು ಕಾಡಾಕಳುಗಳು ಸಲಹುತ್ತವೆ. ಮಲ್ಲಪ್ಪನೆಂಬ ಗಾಣಿಗನೊಬ್ಬ ಮಡ್ಡಪ್ಪನಿಂದ ಆಕಳುಗಳ ಹಾಲು ಪಡೆದು ಶ್ರೀಮಂತನಾಗುತ್ತಾನೆ. ಮಗಳನ್ನು ಮಡ್ಡಪ್ಪನಿಗೆ ಕೊಟ್ಟು ಮದುವೆ ಮಾಡುತ್ತಾನೆ.

ಎರಡನೆಯ ಅಧ್ಯಾಯವು 'ಬೀರಪ್ಪನ ಪೂರ್ವಜರ ವೃತ್ತಾಂತ' ಎಂಬ ಶೀರ್ಷಿಕೆಯನ್ನು ಹೊಂದಿ ನಾಲ್ಕು ಉಪಶೀರ್ಷಿಕೆಗಳಲ್ಲಿ ವಿಭಾಗಿಸಲಾಗಿದೆ. ತಿಪರೇಸೂರ ಮತ್ತು ತಿಪ್ಪಾದೇವಿಗೆ ಏಳು ಜನ ಹೆಣ್ಣು ಮಕ್ಕಳು ತಮ್ಮ ತಮ್ಮ ವಾರಿಗೆಯ ಹೆಣ್ಣು ಮಕ್ಕಳೆಲ್ಲ ಮದುವೆಯಾದ್ದರಿಂದ ಸಹೋದರಿಯರು ತಂದೆಯನ್ನು ಕುರಿತು 'ನಮ್ಮ ತಂದೆ ನಮಗೆ ಗೊಡ್ಡು ಕೆಡವಿದ' ಎಂದು ಅವರಾಡಿದ ಮಾತುಗಳನ್ನು ಕೇಳಿಸಿಕೊಂಡು ವರಕ್ಕಾಗಿ ಹುಡುಕಾಟ ನಡೆಸುತ್ತಾನೆ. ಸಾಧ್ಯವಾಗದಿದ್ದಾಗ ಅವರನ್ನು ನೀರು ಪಾಲು ಮಾಡುತ್ತಾನೆ. ಆದರೆ ಕಡಿಹುಟ್ಟು ಕಮಳಾದೇವಿ ಈಜಿ ದಡ ಸೇರಿ ಬದುಕುಳಿಯುತ್ತಾಳೆ. ಮನೆಗೆ ಕೆಟ್ಟ ಹೆಸರು ತರದಂತೆ ಇರುವುದಾಗಿ ತಂದೆಗೆ ವಿನಂತಿಸಿಕೊಳ್ಳುತ್ತಾಳೆ. ಅವಳನ್ನು ಏಳು ಅಂತಸ್ತಿನ ಮಹಲಿನಲ್ಲಿ ಕಾವಲಿನಲ್ಲಿರುಸುತ್ತಾನೆ. ಪಾರ್ವತಿ, ಲಕ್ಷ್ಮಿ, ಸರಸ್ವತಿಯರು ನಾರದನಿಂದ ಈ ವಿಷಯ ತಿಳಿದು ಕಮಳಾದೇವಿಯ ಪಾತಿವ್ರತ್ಯ ಹಾಳು ಮಾಡಲು ಶಿವನಿಗೆ ಒತ್ತಾಯಿಸುತ್ತಾರೆ. ಬುಡಬುಡಕ್ಯಾ ವೇಷದಲ್ಲಿ ಬಂದ ಶಿವ ಕಮಳಾದೇವಿಯ ರೋಗವನ್ನು ಕಳೆಯುವದಕ್ಕಾಗಿ ಆಗ ಬಿತ್ತಿ ಆಗ ಬೆಳೆವ ಗಿಡದೊಂದಿಗೆ ಮದುವೆ ಮಾಡಿಸುತ್ತಾನೆ. ಕೋಲ್‌ಮಿಂಚಿನ ಸಮಯದಲ್ಲಿ ಕಮಲಾದೇವಿ ಗರ್ಭವತಿಯಾಗುತ್ತಾಳೆ. ಮಗು ಹುಟ್ಟಿದರೆ ತಿಪರೇಸೂರನಿಂದ ಆಪತ್ತನ್ನು ಎದುರಿಸಬೇಕಾಗುವುದೆಂದು ಸೇವಕಿಯರು ಗಾಭರಿಯಾಗುತ್ತಾರೆ. ಶಿವನು ಕದ್ದು ಮಾಡಿದ ಹಾದರವನ್ನು ಗೆದ್ದು ತರುವೆನೆಂದು ಪ್ರತಿಜ್ಞೆಗೈದು ಕೊರವಂಜಿ ವೇಷಧರಿಸಿ ಪಾರ್ವತಿ ಭೂಲೋಕಕ್ಕೆ ಬರುತ್ತಾಳೆ. ಜನಿಸಿದ ಕೂಸನ್ನು ಸೇವಕಿಯರು ಕೊರವಂಜಿ ಪುಟ್ಟಿಗೆ ಹಾಕುತ್ತಾರೆ. ಇದನ್ನು ಗಮನಿಸಿದ ಶಿವನು ಹದ್ದಾಗಿ ಬಂದು ಕೂಸನ್ನು ಎತ್ತಿಕೊಂಡು ಜಂಬೂದ್ವೀಪದ ಗಡ್ಡಿಯ ಕೊಳದ ಕಮಲದ ಹೂವಿನಲ್ಲಿ ಇಡುವನು. ಖಾಲಿಯಾದ ಬುಟ್ಟಿಯನ್ನು ನೋಡಿ ಪಾರ್ವತಿ ಬೆವೆಯುತ್ತಾಳೆ. ಅದೇ ಬೆವರಿನಲ್ಲಿ ಮೈಯ ಮಣ್ಣಿನಿಂದ ಗೊಂಬೆ ತಯಾರಿಸಿ ಅಮೋಘಸಿದ್ಧ ಎಂದು ಹೆಸರಿಟ್ಟರು.

ಕಾಳಿನಾರಾಯಣ ಶಿವಭಕ್ತ ಪ್ರತಿದಿನ ಖಾಸಬಾಗದ ಹೂ ಮತ್ತು ನಾಗರಬಾವಿ ನೀರಿನಿಂದ ಪೂಜಿಸುತ್ತಿದ್ದನು. ಶಿವನ ಈ ಪೂಜೆ ಸಾಕೆಂದು ಜಂಬೂದ್ವೀಪದ ನಡುಗಡ್ಡಿಯ ಬಗೀಚದ ಹೂ ಮತ್ತು ಸೀತಾಳ ಬಯಸುವನು. ಅವನಿಚ್ಛೆಯಂತೆ

ಜಂಬೂದ್ವೀಪದ ಗಡ್ಯಾಗೆ ಕಾಳಿನಾರ್‍ಯಾಣ ದೇವರ
ಕಾಳಿನಾರಾಣ ದೇವರೆ ಸೀತಾಳ ಬಿಂದಗಿ ಇಳುವ್ಯಾನ
ಸೀತಾಳ ಬಿಂದಗಿ ಇಳವ್ಯಾನೆ ಹ್ಯಾಮದ ಕಂಬಳಿ ಇಳುವ್ಯಾನ (ಪುಟ ೭೮)

ಪೂಜಿಸುವ ಸಂದರ್ಭದಲ್ಲಿ ಪಾರ್ವತಿ ಆರತಿ ಬೆಳಗಿದಳು. ಸೂರ್ಯ ಮೇಲೇರಿದಂತೆ ಶಿವನ ಬಲತೊಡೆಯ ಮೇಲಿಟ್ಟ ಕಮಲದ ಹೂವಿನ ಒಳಗಡೆ ಕೂಸು ಆಡುತ್ತಿದ್ದಿತು. ಅದು ಶಿವನ ಶಿಶುವಾದ್ದರಿಂದ ಅವನ ಪ್ರತಿರೂಪದಂತಿತ್ತು. ಶಿವನು ಆ ಶಿಶುವನ್ನು ಪಾರ್ವತಿಯ ಉಡಿಯಲ್ಲಿ ಹಾಕುತ್ತಾನೆ. ಜೋಪಾನ ಮಾಡಿದ ಕೂಸು ವಯಸ್ಕನಾಗಲು ಶಿವನು ಕಾಳಿನಾರಾಯಣನ ತಂಗಿ ಸೂರಮ್ಮದೇವಿಯೊಂದಿಗೆ ಮದುವೆ ಮಾಡಿಸುತ್ತಾನೆ. ಹೀಗೆ ಕಥೆಯು ದೇವಲೋಕದಿಂದ ಕೈಲಾಸದತ್ತ ತಿರುಗುತ್ತದೆ.

ಮೂರನೆಯ ಅಧ್ಯಾಯ ಕಾಳಿನಾರಾಯಣ ವೃತ್ತಾಂತ ಎಂಬ ಶೀರ್ಷಿಕೆ ಹೊಂದಿ ನಾಲ್ಕು ಉಪಶೀರ್ಷಿಕೆಯಲ್ಲಿ ವಿಭಾಗಗೊಂಡಿದೆ. ಎಳ್ಳಮವಾಸ್ಯೆಯ ಹಬ್ಬಕ್ಕಾಗಿ ತಂಗಿಯನ್ನು ಕರೆತಂದು ಅವಳೊಬ್ಬಳನ್ನೇ ಚೆರಗ ಚೆಲ್ಲಲು ಕಾಳಿನಾರಾಯಣ ಕಳಿಸುತ್ತಾನೆ. ತಂಗಿ ಸೂರಮ್ಮದೇವಿ ವ್ಯಥೆಯಿಂದ ಕಣ್ಣೀರು ಹಾಕುತ್ತಾ ಚರಗ ಚಲ್ಲುತ್ತಾಳೆ. ಮರುದಿನ ಕಾಳಿನಾರಾಯಣ ಪೂಜಿಸಲು ಗಿಡದಲ್ಲಿ ಹೂಗಳಿರುವುದಿಲ್ಲ. ಎಲ್ಲವೂ ಉದುರಿ ಬಿದ್ದಿರುತ್ತವೆ. ಗುಂಡದ ನೀರೆಲ್ಲ ಬತ್ತಿರುತ್ತವೆ. ಶಿವನು ಕಾಳಿನಾರಾಯಣನಿಗೆ ಅವನು ಪಾಪ ಮಾಡಿರುವುದಾಗಿಯೂ ಪಾಪ ಪರಿಹಾರಕ್ಕಾಗಿ ಕಾಶಿಗೆ ಹೋಗಬೇಕೆಂದು ತಿಳಿಸುತ್ತಾನೆ. ಕಾಳಿನಾರಾಯಣನ ಅನುಪಸ್ಥಿತಿಯಲ್ಲಿ ಭಾಳಭರಮನು ಶಿವನ ಪೂಜೆಗೆ ಒಪ್ಪುವನು. ಭಾಳಭರಮನು ಆಗ ಬಿತ್ತಿ ಆಗ ಬೆಳೆವ ಹೂಗಳನ್ನು ತರಲು ಜಂಬೂದ್ವೀಪಕ್ಕೆ ಶಿವನ ಮೂರು ಹರಳುಗಳ ಸಹಾಯದಿಂದ ಬರುವದು. ಅಲ್ಲಿ ಏಳು ಜನ ಜಲಕನ್ನೆಯರು ಭೇಟಿಯಾಗುತ್ತಾರೆ. ಅವರು ಬೇರೆ ಯಾರು ಆಗಿರದೆ ಅವನ ತಾಯಿ ಕಮಲಾದೇವಿ ಮತ್ತು ಆರು ಜನ ಸಹೋದರಿಯರಾಗಿದ್ದರು. ಅವರಿಂದ ಆಗ ಬಿತ್ತಿ ಆಗ ಬೆಳೆವ ಹೂವಿನ ಗಿಡಗಳ ಬೀಜಗಳನ್ನು ಪಡೆದು ಶಿವನನ್ನು ಪೂಜಿಸುವನು. ಒಂಬತ್ತು ತಿಂಗಳ ತರುವಾಯ ಕಾಳಿನಾರಾಯಣ ಹಿಂದಿರುಗಲು ಶಿವನ ಸೂಚನೆಯಂತೆ ಸೇವಕರು ಒಳಗೆ ಬಿಡುವುದಿಲ್ಲ. ಆಗ ಕಾಳಿನಾರಾಯಣ ಮುಂಜಾನೆ ಎದ್ದು ಬಂಜೆಯ ಮುಖ ನೋಡಬಾರದು ಎಂದು ಶಿವನಿಗೆ ಹೇಳುತ್ತಾನೆ. ಕಾರಣ ಶಿವ ಭರಮದೇವರಿಗೆ ಪೂಜಿಸುವದು ಬೇಡವೆಂದು ಆ ಕೆಲಸವನ್ನು ಕಾಳಿನಾರಾಯಣನಿಗೆ ಒಪ್ಪಿಸುತ್ತಾನೆ. ಪೂಜೆಗಾಗಿ ತಂದಿದ್ದ ಹೂ ಮತ್ತು ನೀರಿನಿಂದ ಬಾಳಭರಮನು ಕಾರಹುಣ್ಣಿಮೆಯಂದು ತನ್ನ ಮನೆಯ ಎತ್ತುಗಳನ್ನು ಪೂಜಿಸುತ್ತಾನೆ.

ನಾಲ್ಕನೆಯ ಅಧ್ಯಾಯವು 'ಬೀರಪ್ಪನ ಜನನ ವೃತ್ತಾಂತ' ಎಂಬ ಶೀರ್ಷಿಕೆಯನ್ನು ಹೊಂದಿ ಒಂಬತ್ತು ಉಪಶೀರ್ಷಿಕೆಯಲ್ಲಿ ಹರಡಿದೆ. ಭರಮದೇವರು 'ಬಂಜೆ' ಎನ್ನುವ ಅವಮಾನವನ್ನು ಸಹಿಸದಾಗಿ ಮನೆಯಲ್ಲಿ ಹೆಂಡತಿಗೆ ತಿಳಿಸುವನು. ಸೂರಮ್ಮದೇವಿ ಕಠಿಣ ವ್ರತ ಪಾಲಿಸಲು ಶಿವನು ತನ್ನ ಬೆವರನ್ನೇ ಬಟ್ಟಲು ತುಂಬಿ ಕೊಟ್ಟು ಗಂಡು ಮಗು ಜನಿಸುವದೆಂದೂ ಹುಟ್ಟಿದ ೧೩ ನೆಯ ದಿನಕ್ಕೆ ಕಾಡಿಗೆ ಸಾಗಿಸಬೇಕೆಂದು ತಿಳಿಸುತ್ತಾನೆ. ಗಂಡ ಹೆಂಡತಿಯರಿಬ್ಬರೂ ಶಿವನ ಬೆವರನ್ನು ಸೇವಿಸಲು ಸೂರಮ್ಮದೇವಿ ಗರ್ಭ ಧರಿಸುತ್ತಾಳೆ. ಈ ವಿಷಯವನ್ನು ತಿಳಿದು ಕಾಳಿನಾರಾಯಣ ಆತಂಕಕ್ಕೊಳಗಾಗುತ್ತಾನೆ. ಅದಕ್ಕಾಗಿ ತಂಗಿಯ ಕೂಸನ್ನು ಗರ್ಭದಲ್ಲೇ ಕೊಲ್ಲಲು ಬಯಸಿ ವಿಷದ ಬುತ್ತಿ ಮತ್ತು ಸೀರೆಯೊಂದಿಗೆ ತಂಗಿಯಲ್ಲಿಗೆ ಬರುತ್ತಾನೆ. ಹೊಟ್ಟೆಯಲ್ಲಿಯ ಮಗು ಮಾವನ ಕುತಂತ್ರದ ಸುಳಿವನ್ನು ತಾಯಿಗೆ ನೀಡುತ್ತದೆ. ಸೂರಮ್ಮದೇವಿ ಅಣ್ಣನ ಬುತ್ತಿಯನ್ನು ಮನೆಯ ಹಿತ್ತಲಲ್ಲಿ ಎಸೆಯುತ್ತಾಳೆ. ಗುರು ರೇವಣಸಿದ್ಧನು ನಗರೀಪಟ್ಟಣಕ್ಕೆ ಹೋಗಿ ಕಾಳಿನಾರಾಯಣನ ಎಮ್ಮೆಗಳನ್ನೆಲ್ಲ ಹೊಡೆದುಕೊಂಡು ಚಂದನಗಿರಿಗೆ ತರುತ್ತಾನೆ. ಅವುಗಳಿಗೆ ಹಿತ್ತಲಲ್ಲಿ ಎಸೆದ ವಿಷದ ಬುತ್ತಿಯನ್ನು ಎಮ್ಮೆಗಳಿಗೆ ತಿನ್ನಿಸುತ್ತಾನೆ. ನಾರಾಯಣ ಎಮ್ಮಿಗಳು ಸತ್ತ ವಿಷಯ ತಿಳಿದು ತನ್ನೂರಿಗೆ ಹೊರಡಲು ಅನುವಾಗುತ್ತಾನೆ. ಅಲ್ಲದೆ ತಂಗಿಯ ಬಾಣಂತನಕ್ಕಾಗಿ ಸೂಲಗಿತ್ತಿಯರನ್ನು ಕಳುಹಿಸಿ ಮಗುವನ್ನು ಕೊಲ್ಲಲು ಹಂಚಿಕೆಯನ್ನು ಹೂಡುತ್ತಾನೆ. ಮುಂಚಿತವಾಗಿ ಎಲ್ಲ ವಿಷಯ ತಿಳಿದ ಬೀರಪ್ಪ ಕೋಲ್ಮಿಂಚು ಹೊಡೆದಂತಾಗಿ ಗರ್ಭದಿಂದ ಹೊರಬಂದು ಒದೆ ಕೊಡುತ್ತಾನೆ. ಅವರೆಲ್ಲ ಗಾಬರಿಯಾಗಿ ಓಡಿಹೋಗುತ್ತಾರೆ. ಬೀರಪ್ಪ ಮಗುವಾಗಿ ತಾಯಿ ಮಗ್ಗುಲಲ್ಲಿ ಮಲಗುತ್ತಾನೆ. ವಿಷಯ ತಿಳಿದ ಕಾಳಿನಾರಾಯಣ ಕಣ್ಣಲ್ಲಿ ನೀರು ತಂದು ಜ್ಯೋತಿಷಿ ವೇಷಧರಿಸಿ ಚಂದನಗಿರಿಗೆ ಬಂದು ಕೂಸಿನ ಭವಿಷ್ಯ ಸರಿಯಾಗಿಲ್ಲವೆಂದೂ ಇದರಿಂದ ಕುಟುಂಬ ವರ್ಗದವರಿಗೆಲ್ಲ ಕಾಡಾಟಗಳಾಗುತ್ತವೆಂದು ತಿಳಿಸುತ್ತಾನೆ. ಅಣ್ಣ ಕಳುಹಿಸಿದ ಮಾಶಾಳ್ಯರು ಕೂಸನ್ನು ಕಾಡಿನಲ್ಲಿ ಬಿಟ್ಟು ಅಲ್ಲಿಯ ಆಲದ ಮರಕ್ಕೆ ಕಟ್ಟಿ ಊರಿಗೆ ಮರಳುತ್ತಾರೆ.

ಐದನೆಯ ಅಧ್ಯಾಯವು 'ಅಕ್ಕವ್ವ ಮಾಯವ್ವರ ವೃತ್ತಾಂತ' ಎಂಬ ಶೀರ್ಷಿಕೆಯನ್ನು ಹೊಂದಿದ್ದು ಐದು ಉಪಶೀರ್ಷಿಕೆಗಳನ್ನೊಳಗೊಂಡಿದೆ. ದೇವಗಿರಿಯ ಅರಸು ಗೌಡದೇವೀಂದ್ರರಾಯ ಮತ್ತು ಸುಬದ್ರಿಯರಿಗೆ ಏಳನೆಯ ಮಗಳಾಗಿ ಮಾಯವ್ವ ಜನಿಸುವಳು. ಕೆಟ್ಟ ಶಕುನದ ಫಲದಿಂದ ಹುಟ್ಟಿದ ಕಾರಣ ಹನ್ನೊಂದನೇ ದಿನಕ್ಕೆ ಹೊಳೆಯಲ್ಲಿ ಬಿಡುತ್ತಾರೆ. ದಿಬ್ಬಿಯ ದಿಬರಾಯ ಮತ್ತು ಅವನ ಏಳು ಜನ ಹೆಣ್ಣು ಮಕ್ಕಳು ಏಳು ಹಿಂಡು ಕುರಿಗಳನ್ನು ಕಾಯುತ್ತ ಬರುತ್ತಾರೆ. ಸಾಧುಗಳಿಗೆ ಸಿಕ್ಕ ಮಾಯವ್ವಳನ್ನು ದಿಬ್ಬರಾಯನಿಗೆ ಒಪ್ಪಿಸುತ್ತಾರೆ. ಆಗ ಅವನ ಏಳುನೂರು ಕುರಿಗಳು ಗರ್ಭಕಟ್ಟಿದವು. ಅವಳ ಕಾಲ್ಗುಣ ಒಳ್ಳೆಯದೆಂದು ಗಮನಿಸಿ ಆ ಕೂಸಿನ ಪಾಲನೆಯನ್ನು ದಿಬರಾಯ ಹೆಂಡತಿ ಶಂಬಾಯಿಗೆ ಒಪ್ಪಿಸುತ್ತಾನೆ. ಮಾಯವ್ವ ಬೆಳೆದು ದೊಡ್ಡವಳಾಗಿ ಕುರಿಕಾಯಲು ಹಟ ಹಿಡಿದು ಕಾಡಿನಲ್ಲಿ ಕುರಿಕಾಯುತ್ತ ಹೊರಡುತ್ತಾಳೆ. ಆಕೆಯ ಹೆಜ್ಜೆಗಳು ಒಂದು ಪಾದ ಕುಂಕುಮದ್ದಾದರೆ ಇನ್ನೊಂದು ಭಂಡಾರದ್ದಾಗಿರುತ್ತದೆ. ಕೈಲಾಸದಿಂದ ಆರು ಜನ ಅಕ್ಕಂದಿರು ತಂಗಿಯನ್ನು

ಹುಡುಕುತ್ತ ಬರುತ್ತಾರೆ. ದೊಡ್ಡವಳಾದ ಅಕ್ಕವ್ವ ತಂಗಿ ಮಾಯವ್ವಳೊಂದಿಗೆ ಉಳಿಯುತ್ತಾಳೆ. ಅಕ್ಕ ತಂಗಿಯರಿಬ್ಬರೂ ಕಾಡುದ್ದದ ಭೂಮಿಯಲ್ಲಿ ಕುರಿಕಾಯುವ ಸಮಯದಲ್ಲಿ ಕಂಚಿನಾಲದ ಮರದಿಂದ ಕೂಸಿನ ಅಳುವ ಧ್ವನಿ ಕೇಳಿ ಕೂಸು ತನಗೆ ಬೇಕು ತನಗೆ ಬೇಕು ಎಂದು ಜಗಳ ಪ್ರಾರಂಭವಾಗಲು ಎರಳ್ಳಿಗುಂಪಿ ರಾಯಣ್ಣಾ ನ್ಯಾಯ ಬಗೆಹರಿಸುತ್ತಾನೆ. ತೊಟ್ಟಿಲನ್ನು ಮಡಿಯಿಂದ ಮೂರು ಸುತ್ತು ಸುತ್ತಲು ಮಾಯವ್ವಳ ಎದಿಯ ಬದಿಗಳು ಚಿಗಿಯುತ್ತವೆ ಪೂರ್ವ ನಿರ್ಧಾರದಂತೆ ಕೂಸು ಮಾಯವ್ವಳಿಗೆ ಸೇರುತ್ತದೆ. ಅವಳು ಆ ಮಗುವಿಗೆ ಲಿಂಗ ಬೀರಣ್ಣನೆಂದು ಕರೆಯುತ್ತಾಳೆ.

ಆರನೆಯ ಅಧ್ಯಾಯವು 'ಬಾಲ ಬೀರಣ್ಣ ಲೀಲಾ ವೃತ್ತಾಂತ' ಎಂಬ ಶೀರ್ಷಿಕೆಯನ್ನು ಹೊಂದಿ ನಾಲ್ಕು ಉಪಶೀರ್ಷಿಕೆಗಳನ್ನು ಪಡೆದಿದೆ. ಚಂದನಗಿರಿಯಲ್ಲಿ ಮಾಯಮ್ಮನ ಸಂರಕ್ಷಣೆಯಲ್ಲಿ ಬಾಲಬೀರಣ್ಣ ಬೆಳೆಯ ತೊಡಗುತ್ತಾನೆ. ಬೆಳೆದಂತೆಲ್ಲಾ ಅವನ ತುಂಟಾಟಗಳು ಹೆಚ್ಚಾಗುತ್ತವೆ. ತಮ್ಮನಿಗಾಗಿ ಚಿಣೆದಾಂಡುಗಳನ್ನು ಮಾಡಿಸಿ ತರುತ್ತಾಳೆ. ಚೆಂಡಿನಾಟದಲ್ಲಿ ಬೀರಪ್ಪ ಹೊಡೆದ ಒಂಬತ್ತು ಲಗ್ಗಿಗಳು ಬೇರೆ ಬೇರೆ ಬೀಳಲು ಅವು ಮಠಗಳಾಗುತ್ತವೆ. ಸಿಡಿಯಾಣ, ಕ್ಯಾಣಗನೂರು, ಕರಸೂಣಗಿ, ಗೋಡಗೇರಿ, ಉಬರಜ, ಹೂನೂರು, ಅಲಕನೂರು, ಭಾರಾಮತಿ, ತೇರಾಮತಿ ಎಂಬ ಊರುಗಳಲ್ಲಿಯ ಮಠಗಳು ಬೀರಣ್ಣನ ವಾಸಸ್ಥಾನಗಳೆಂದು ಪ್ರಸಿದ್ಧವಾಗಿದೆ. ಚೆಂಡಿನಾಟದಲ್ಲಿ ಶೆಟ್ಟಿ ಸಾಹುಕಾರನ ಮಗ ಸಾಯುತ್ತಾನೆ. ಅದಕ್ಕಾಗಿ ಅಕ್ಕ ತಮ್ಮ ಚಂದನಗಿರಿ ಬಿಟ್ಟು ಬೆಳ್ಳಿಗಿರಿಗೆ ಬರುತ್ತಾರೆ. ಮಾಯವ್ವ ಜಕಿಣಿಯರ ಸಹಾಯದಿಂದ ಶಿವನ ಹತ್ತಿರದ ಬಿಲ್ಲನ್ನು ತರಿಸಿ ಕೊಡುತ್ತಾಳೆ. ಊರ ತರುಣಿಯರು ನೀರು ತುಂಬಿಕೊಂಡು ಬರುವಾಗ ಬೀರಣ್ಣ ಅವರ ಕೊಡಗಳಿಗೆ ಬಾಣ ಬಿಡುವನು. ಕೊಡಗಳು ತೂತು ಬಿದ್ದು ಮುಂದೆಲೆ ತೊಯ್ಯುವುದು. ತಂದೆ ತಾಯಿ ಇಲ್ಲದವ ಎಂದು ಬಯ್ಯುತ್ತಾರೆ. ಕೂಡಲೇ ಮೇಣದ ಬಿಲ್ಲು ಬಿಟ್ಟು ಎಲ್ಲ ತೂತುಗಳನ್ನು ಮುಚ್ಚುವನು. ಮನನೊಂದ ಬೀರಣ್ಣ ತನ್ನ ಪೂರ್ವ ವೃತ್ತಾಂತವನ್ನು ತಿಳಿಯುತ್ತಾನೆ.

ಏಳನೆಯ ಅಧ್ಯಾಯ 'ಬೀರಣ್ಣನ ಮದುವೆ ವೃತ್ತಾಂತ' ಎಂಬ ಶೀರ್ಷಿಕೆ ಹೊಂದಿ ಎಂಟು ಉಪಶೀರ್ಷಿಕೆ ಗಳನ್ನು ಪಡೆದಿದೆ. ಗುರು ರೇವಣಸಿದ್ಧರ ಕನಸಿನ ಹೇಳಿಕೆಯಂತೆ ಮಾಯವ್ವ ಅವನ ಪೂರ್ವ ವೃತ್ತಾಂತವನ್ನು ತಿಳಿಸುತ್ತಾಳೆ. ವಿಷಯ ತಿಳಿದ ಬೀರಣ್ಣ ಮಾವ ಕಾಳಿನಾರಾಯಣನ ನಗರೀಪಟ್ಟಣಕ್ಕೆ ಸೊಸೆ ಕನ್ನಿಕಾಮವ್ವಳನ್ನು ನೋಡಲು ಬರುತ್ತಾನೆ. ದನಗಾಯಿ ಹುಡಗರಿಂದ ಕನ್ನಿಕಾಮವ್ವಳನ್ನು ಮಾವ ಏಳಂತಸ್ತಿನ ಮಹಡಿ ಮೇಲೆ ಬಂಧಿಸಿಟ್ಟಿರುವುದಾಗಿ ತಿಳಿದುಕೊಳ್ಳುತ್ತಾನೆ. ಜೀರ ಸಂಗವ್ವಳ ಮನೆಯಲ್ಲಿ ವಜ್ಜರದಂಡಿ ನೇಯುತ್ತಾನೆ. ಅದನ್ನು ಕಂಡು ಕನ್ನಿಕಾಮವ್ವ ಮೂರ್ಛೆ ಹೋಗುವಳು. ವಜ್ಜರದಂಡಿ ನೇಯ್ದವರನ್ನು ಕಾಣಲು ತನ್ನ ಸೀರೆ ಮತ್ತು ಕುಪ್ಪಸ ಕಳುಹಿಸುತ್ತಾಳೆ. ಸೊಸೆ ಕಳಿಸಿದ ವಸ್ತ್ರಗಳನ್ನು ತೊಟ್ಟು ರಾಜಕುಮಾರಿಯರಲ್ಲಿಗೆ ಬಂದಾಗ ಅವನ ಕಾಲಿನ ಪದ್ಮಚಕ್ರ ಕಂಡು ಈತನೇ ತನ್ನ ಸೋದರ ಮಾವನೆಂದು ಗುರುತಿಸುತ್ತಾಳೆ. ಬೀರಪ್ಪ ಬೆಳ್ಳಿಗಿರಿಗೆ ಹಿಂದಿರುಗಿ ಅಕ್ಕ ಮಾಯವ್ವಳಿಂದ ಎತ್ತು ಮತ್ತು ಬಳೆಗಳನ್ನು ಪಡೆದು ನಗರೀಪಟ್ಟಣಕ್ಕೆ ವೇಷ ಮರೆಸಿ

ಬರುತ್ತಾನೆ. ಅಲ್ಲಿ ಅವನ ಕಾಲಲ್ಲಿಯ ಪದ್ಮ ಕಂಡು ಬೀರಪ್ಪನನ್ನು ಗುರುತಿಸುತ್ತಾಳೆ. ಅವಳಿಗೆ ಮದುವೆಯಾಗದ ಕಾರಣ

ಹೆಂತ ಪಾಪಿ ಮಗಳೇನ ಹೆಂತಾಕಿ ಹುಟ್ಯಾಳಂದಾನ
ಪುಣ್ಯದ ಬಳಿಗೋಳು ಹಾಕೇನ ಮುತ್ತೈದಿ ಬಳಿಗೋಳು ಹಾಕೇನೆ
ಮುತ್ತೈದು ಬಳಿಗೋಳು ಹಾಕೇನೆ ಲಗ್ನನಾಗಿಲ್ಲಂದಾನ
ಲಗ್ನನಾಗಿಲ್ಲಂದಾನ ಬಳಿಯೂ ಹಾಕುದಿಲ್ಲೇನ (ಪುಟ ೨೭೦)

ಬಳೆ ತೊಡಿಸುವುದಿಲ್ಲವೆಂದು ತಿಳಿಸಿ ಕೆಲವೇ ಗಂಟೆಗಳಲ್ಲಿ ಗಿಡವಾಗಿ ಬೆಳೆಯುವ ಬೀಜವನ್ನು ಕೊಡುತ್ತಾನೆ. ಅಕ್ಕನಿಂದ ಸೂತರ ತೇಜಿ ಪಡೆದು 'ಅಂತರಗಮನ' ಎಂದು ಹೇಳಿ ಆಕಾಶ ಮಾರ್ಗವಾಗಿ ನಗರೀ ಪಟ್ಟಣಕ್ಕೆ ಬಂದು ಸೊಸೆಯೊಂದಿಗೆ ಹಾರಿ ಹೋಗುತ್ತಾನೆ.

ಎಂಟನೆಯ ಅಧ್ಯಾಯವು 'ಲಿಂಗ ಬೀರಣ್ಣ ದೇವರ ವೃತ್ತಾಂತ' ಎಂಬ ಉಪಶೀರ್ಷಿಕೆಯನ್ನು ಹೊಂದಿ ಏಳು ಉಪಶೀರ್ಷಿಕೆಗಳನ್ನೊಳಗೊಂಡಿದೆ. ಕೂಸಾಗಿ ರೂಪಾಂತರಗೊಂಡ ಬೀರಪ್ಪನೊಂದಿಗೆ ಮಾಯವ್ವ ಮುಂಗೀ ಪಟ್ಟಣಕ್ಕೆ ಬರುತ್ತಾಳೆ. ಅಲ್ಲಿಯ ರಾಜಕುಮಾರಿಯ ಬೆನ್ನ ಬ್ಯಾತಾಳಬ್ಯಾನಿ ಕಳೆದು ವಾಯಿಗಂಗಾಳ, ಪಂಚಡಂಗಿ, ರುಮ್ಮಿ ಚೂರಿ, ಹೊನ್ನ ಕಠಾರಿ, ಕಲಿಕೆ, ಸಿರಪೇಟಗಳನ್ನು ಬಹುಮಾನವಾಗಿ ಸ್ವೀಕರಿಸಿ ಭೀಮಾನದಿಯ ಹುತ್ತದಲ್ಲಿಯ ನಾಗರ ಹೆಡೆಯನ್ನೇರಿ ನಿಲ್ಲುತ್ತಾನೆ. ಹೇಡಿಂಬ ಎಂಬ ಊರಿನ ರಾಕ್ಷಸನನ್ನು ಸಂಹಾರ ಮಾಡಿದ್ದಕ್ಕಾಗಿ ಆ ಊರನ್ನು ಸೇಡಂ ಎಂದು ಕರೆಯುತ್ತಾರೆ. ನಂತರ ಕಾಯಿಕೊಂಕಣ ನಾಡಿನಲ್ಲಿ ಬಗನಾಥನು ಮಾಯವ್ವಳ ಮಾನ ಅಪಹರಣ ಮಾಡಲು ಬಂದಾಗ ಬಗನಾಥನ ಶಿರವನ್ನು ಬೀರಪ್ಪ ಹರಿದೊಗೆಯುತ್ತಾನೆ. ಇದರಿಂದ ಕಾಯಿ ಕೊಂಕಣ ನಾಡಿಗೆ 'ಸಿರಿವಾಳ' ಎಂಬ ಹೆಸರು ಬರುವದು. ಬೀರಪ್ಪ ಶಿವಲಿಂಗನ ಅವತಾರ ತಾಳುವನು. ಮಾಯವ್ವ ಸುಜ್ಞಾನಿ ಅವತಾರ ತಾಳಿ ಸಿರಿವಾಳದಲ್ಲಿ ನೆಲೆಸುವರು. ಅಕ್ಕ-ತಮ್ಮ ಇಬ್ಬರೂ ನಂತರ ಕ್ಯಾಣಗನೂರಿಗೆ ಬಂದು ಕ್ಯಾಣೇಸೂರನನ್ನು ವಧಿಸುವನು. ಚಿಂಚಲಿಸೂರ ವನದೇವತೆ ಸ್ಥಳಕೊಡಲು ಒಪ್ಪದಿದ್ದಾಗ ಯುದ್ಧಕ್ಕೆ ಆಹ್ವಾನಿಸಿ ಹೊಡೆಯುತ್ತಾನೆ. ಪ್ರಾಣಬಿಟ್ಟು ಅಲ್ಲಿಯೇ ನೆಲಸುತ್ತಾಳೆ. ಮಾಯವ್ವನನ್ನು ಚಿಂಚಲ ಸೂರಿನಲ್ಲಿ ಬಿಟ್ಟು ಬೀರಪ್ಪ ಬೆಳ್ಳಿಗಿರಿಗೆ ಹಿಂದಿರುಗುವನು. ಬೀರಪ್ಪನ ನೆನಹಿನಂತೆ ಬೊಪ್ಪಣ್ಣನು ಚಂದನಗಿರಿಯಲ್ಲಿಂದ ಬೆಳ್ಳಿಗಿರಿಗೆ ಬಂದು ಕುರಿಕಾಯುವ ಕೆಲಸದಲ್ಲಿ ತೊಡಗುವನು. ಹನ್ನೆರಡು ವರ್ಷಗಳಾದರೂ ಕುರಿಗಳು ಹೆಚ್ಚಾಗಲಿಲ್ಲ. ಇದರಿಂದ ಚಿಂತೆಗೊಳಗಾದ ಬೀರಪ್ಪ ಅಕ್ಕನನ್ನು ಕರೆತರಲು ಬೊಪ್ಪಣ್ಣನನ್ನು ಕಳುಹಿಸುವನು. ಬೊಪ್ಪಣ್ಣನೊಂದಿಗೆ ಕನ್ನಿಕಾಮವ್ವ ಕಳುಹಿದ ಕಾಡಿಗೆ ಜೋಳದ ರೊಟ್ಟಿ ಮತ್ತು ಹುಣಸೇಕಾಯಿ ಖಾರದ ಬುತ್ತಿಯನ್ನು ನೋಡಿ ತಮ್ಮನಿಗೆ ಬಡತನ ಇದೆಯಂದು ನೊಂದು ತನ್ನೂರಲ್ಲೇ ಹಬ್ಬ ಮಾಡುತ್ತೇನೆಂದು ಅರವತ್ತೆರಡು ಅಡಿಗೆಮಾಡಿ ಬುತ್ತಿಕಟ್ಟಿ ಬೊಪ್ಪಣ್ಣನನ್ನು ಕಳುಹಿಸಿ ಕೊಡುತ್ತಾಳೆ. ಕ್ರೋಧಗೊಂಡ ಬೀರಪ್ಪ ಸ್ವತಃ ತಾನೇ ಚಿಂಚಲಸೂರಿಗೆ ಬಂದು 'ಕರೆಯಲಾಕ ಬಂದಿಲ್ಲೆ

ಕಾಡಲಾಕ ಬಂದಿನಿ' ಎಂದು ತನಗೆ ನಾಗರ ಗದ್ದಿಗೆ ಬೇಕೆಂದು ಹೇಳುತ್ತಾನೆ. ಮಾಯವ್ವ ಕಂಚಿನಾಲದ ಮರದ ನಾಗಪ್ಪನನ್ನು ನೆನೆಯುತ್ತಾಳೆ. ನಾಗಪ್ಪ ಹರಿದು ಬಂದು ಸುರಳಿ ಸುತ್ತಿ ಹೆಡೆ ಎತ್ತಿ ಕುಳಿತಿರಲು ಬೀರಪ್ಪ ನಾಗರ ಗದ್ದುಗೆ ಮೇಲೆ ಕುಳಿತುಕೊಳ್ಳುವನು. ಸ್ನಾನ ಮಾಡೆಂದರೆ ಎಂಜಲ ನೀರಿನಲ್ಲಿ ಸ್ನಾನ ಮಾಡುವುದಿಲ್ಲ ಎನ್ನುವನು. ಮಾಯವ್ವ ಗಂಗೆಯನ್ನು ಪ್ರಾರ್ಥಿಸಲು ಹರಿದು ಬಂದು ಬಿಂದಿಗೆ ಸೇರುವಳು. ನಂತರ ಸ್ನಾನ ಮಾಡುತ್ತಾನೆ. ಊಟಕ್ಕೆ ಕುಳಿತು ಮೀಸಲು ಹಾಲು ಬೇಕೆಂದು ಹಠ ಹಿಡಿಯುತ್ತಾನೆ. ಮಾಯವ್ವ ಪ್ರಾರ್ಥಿಸಲು ಕಾಮಧೇನು ಬಂದು ಹಾಲು ಕೊಡಲು ಊಟ ಮಾಡುತ್ತಾನೆ. ಕೊನೆಗೆ 'ಕಾಡಲು ಬಂದಿಲ್ಲ ಕರಿಯಲು ಬಂದಿದ್ದೇನೆ' ಎಂದು ಹೇಳುತ್ತಾನೆ. ಬೀರಪ್ಪನ ಇಚ್ಛೆಯಂತೆ ಬೆಳ್ಳಿಗಿರಿಗೆ ಬಂದ ಮಾಯವ್ವಳಿಗಾಗಿ ಸೀರೆ ತಂದಿರುತ್ತಾನೆ. ಅದು ಒಪ್ಪಿಗೆಯಾಗದಿದ್ದಾಗ ಮಾತಿಗೆ ಮಾತು ಬೆಳೆದು ಸೀರೆಯೇ ಬೇಡವೆಂದು ಹಬ್ಬ ಮಾಡುತ್ತಾರೆ. ಕೊನೆಗೆ ಮಾಯವ್ವ ಸೀರೆ ಉಟ್ಟು ನಂದಿಯೇರಿ ಚಿಂಚಲಸೂರಿಗೆ ತಲುಪುತ್ತಾಳೆ.

ಒಂಭತ್ತನೆಯ ಅಧ್ಯಾಯವು ಮಾಳಿಂಗರಾಯರ ಪೂರ್ವಜರ ವೃತ್ತಾಂತವನ್ನು ಹೊಂದಿ ಹದಿನಾಲ್ಕು ಉಪಶೀರ್ಷಿಕೆಯಲ್ಲಿ ಹರಡಿಕೊಂಡಿದೆ. ಗುರು ಗೋರಕನಾಥನಲ್ಲಿ ಏಳುನೂರು ಗೋವುಗಳಿದ್ದವು. ಮೂರು ವರ್ಷ ಸತತವಾಗಿ ಬರಗಾಲ ಬರಲು ಗೋವುಗಳ ಸಂರಕ್ಷಣೆಗಾಗಿ ನಾಲ್ಕು ದಿಕ್ಕುಗಳಿಗೆ ಸಹಾಯಕ್ಕಾಗಿ ಪತ್ರ ಕಳುಹಿಸುತ್ತಾನೆ. ಆದರೆ ಯಾರಿಂದಲೂ ಪ್ರತಿಕ್ರಿಯೆ ಬರಲಿಲ್ಲ. ಅಂಥ ಕಷ್ಟಕರ ಸಮಯದಲ್ಲಿ ಸ್ವಾಮಿರಾಯ ಆಕಳುಗಳನ್ನು ಸಲುಹ ತೊಡಗುತ್ತಾನೆ. ಅಕ್ಕ ಕಾನಾಬಾಯಿ ತಂಗಿ ಅಮೃತಬಾಯಿ ಇಬ್ಬರೇ ಇರುವ ಸಂದರ್ಭದಲ್ಲಿ ಶಿವ-ಪಾರ್ವತಿಯರು ಬರಲು ಆದರದಿಂದ ಸತ್ಕರಿಸುತ್ತಾರೆ. ಇವರಿಗೆ ಮಕ್ಕಳಿಲ್ಲದ್ದನ್ನು ಗಮನಿಸಿ ಎರಡು ಹರಳನ್ನು ಕೊಡುತ್ತಾರೆ. ಅವನ್ನು ದೇವರ ಜಗುಲಿಯ ಮೇಲಿಟ್ಟು ಗಂಡಂದಿರು ಬಂದ ತರುವಾಯ ನೋಡಲು ಕೂಸಾಗಿರುತ್ತವೆ. ಅವಕ್ಕೆ ಜಕ್ಕಪ್ಪ-ಮಾಳಪ್ಪ ಎಂದು ಕರೆಯುತ್ತಾರೆ. ಏಳು ವರ್ಷಗಳ ನಂತರ ಪುನಃ ಬರಗಾಲ ಕಾಡಲು ಬಾರಾಮತಿ ಅಡವಿಗೆ ಬಂದು ಅಲ್ಲಿ ಬಾರಾಮತಿ ಮತ್ತು ತೇರಾಮತಿ ಎಂಬ ಊರುಗಳನ್ನು ಸೃಷ್ಟಿಸುತ್ತಾರೆ. ಭವುಳಿನಾಡದ ಗೌಳೇರು ಬಾರಾಮತಿಯ ಅಡವಿಯಲ್ಲಿ ನೆಲೆಸುವರು. ಗೌಳಿಗರು ಹಾಲು ಮೊಸರಿನ ವ್ಯಾಪಾರದ ಭರದಲ್ಲಿ ತಮ್ಮ ಮನೆ ದೇವತೆ ಇಜೇರಿ ಮಲಕವ್ವನನ್ನು ಮರೆತ ಕಾರಣ ಏಳು ಕರುಗಳಿಗೆ ಉಟಗಿ ಬ್ಯಾನಿ ಹತ್ತಿತು. ಹಾಲು ಹಿಂಡಿದರೆ ರಕ್ತ ಹಿಂಡುತ್ತಿದ್ದವು. ಆಗ ಪಾರ್ವತಿ ಕೊರವಂಜಿ ವೇಷದಲ್ಲಿ ಬಂದು ಮನೆದೇವತೆ ಇಜೇರಿ ಮಲಕವ್ವನನ್ನು ಮರೆತ ಕಾರಣ ಆಕೆಗೆ ನರಬಲಿ ಪೂರೈಸಬೇಕೆಂದು ಭಂಡಾರ ಕೊಟ್ಟಳು. ಅದನ್ನು ಎಮ್ಮೆಗಳ ಮೇಲೆ ಚೆಲ್ಲಲು ಹಾಲು ಹಿಂಡತೊಡಗಿದವು. ಗಾಣಿಗೇರ ಮಲ್ಲಣ್ಣನನ್ನು ಬಲಿಕೊಡಲು ಮನೆದೇವತೆ ಸಂತೃಪ್ತಿಗೊಂಡಳು. ಇಜೇರಿ ಮಲಕವ್ವನ ಮುಂದೆ ಹಾಕಿದ ರಂಗದ ಒಂದು ಮೂಲೆ ಚಾಜ ಪಡೆದು ಹಿಂದಿರುಗಿ ಅವನೊಂದಿಗೆ ಮಲಕವ್ವ ಬರಲು ಅವರ ಆಕಳುಗಳಿಗೆ ಉಟಗಿ ಬ್ಯಾನಿ ಬಂದು ರಕ್ತಹಿಂಡತೊಡಗಿದವು. ಪಾರ್ವತಿಯ ಹೇಳಿಕೆಯಂತೆ ಎಳೆ ಮಗುವನ್ನು ಬಲಿಕೊಡಲು ಅದು ಜನಕ್ಕೆ ತಿಳಿದು ನೋಡಲಾಗಿ ಕೂಸಿನ ತಲೆಯ ಬದಲಾಗಿ ತಗರಿನ ತಲೆಯನ್ನು ಕಾಣುವರು. ಶಾಮರಾಯ

ಮತ್ತು ತುಕ್ಕಪ್ಪರಾಯ ತಮ್ಮ ಆಕಳುಗಳನ್ನು ಹೊಡೆದುಕೊಂಡು ಅಡವಿಗೆ ಬರುವರು. ಕಳಕೌಂಟಗಿ ಎಂಬ ಗ್ರಾಮದ ಬೇಡರು ಶ್ಯಾಮರಾಯ ಬಿಟ್ಟ ಬಾಣಗಳಿಂದ ಓಡಿ ಹೋಗುತ್ತಾರೆ. ತಿರುಗಿ ಬರುವಾಗ ಕಂಚಿನಾಲದ ಮರದಲ್ಲಿ ಒಬ್ಬ ಬೇಡನನ್ನು ಕುಳ್ಳಿರಿಸಿ ಅಣ್ಣ-ತಮ್ಮರಿಬ್ಬರೂ ಅಗಲಿದ ದಿನ ಸನ್ನೆ ಮಾಡಲು ತಿಳಿಸಿದರು. ತುಕ್ಕಪ್ಪರಾಯ ಒಬ್ಬನೇ ಅಡವಿಯಲ್ಲಿ ಇರುವುದನ್ನು ಕಂಡು ಬೇಡರು ಸುತ್ತುವರಿಯಲು ಅವರ ಕೈಯಿಂದ ಸಾಯುವುದಕ್ಕಿಂತ ತಾನೇ ಸಾಯುವುದು ಮೇಲೆಂದು ಭಾವಿಸಿ ಎದೆಯಲ್ಲಿ ಬಾಣ ಹೊಡೆದುಕೊಳ್ಳುವನು. ಗೂಳಿಗಳು ತುಕ್ಕಪ್ಪರಾಯನಿಗೆ ಬಾಲ ಬೀಸಿ ಗಾಳಿ ಹಾಕಿದವು. ಕೆಲವು ಆಕಳು ಈ ವಿಷಯ ತಿಳಿಸಲು ಶಾಮರಾಯನಲ್ಲಿಗೆ ಬಂದವು. ಘಾತವಾಯಿತೆಂದು ಶ್ಯಾಮರಾಯ ತುಕ್ಕಪ್ಪರಾಯನಿದ್ದಲ್ಲಿಗೆ ಬಂದು ದುಃಖಿದ ಕೊಳಲನ್ನು ಊದಲು ಕಿಲ್ಲಾರಿಗಳು ಕಳ್ಳಬೇಡರನ್ನು ಹೊಡೆದು ಓಡಿಸಿದವು. ತುಕ್ಕಪ್ಪರಾಯನ ಮಕ್ಕಳಾದ ಜಕ್ಕಪ್ಪ-ಮಾಳಪ್ಪರನ್ನು ಕರೆದು ಬೇಡರ ಮೇಲೆ ಸೇಡು ತೀರಿಸಿಕೊಳ್ಳಲು ತಿಳಿಸಿ ತುಕ್ಕಪ್ಪನ ಸಮಾಧಿ ಮಾಡಿದನು. ಗುರುಗೋರಕನಾಥ ಶಾಮರಾಯನಿಗೆ ವಿದ್ಯೆ ಕಲಿಸಿ ಮಾರ್ಗದರ್ಶನ ಮಾಡಿದನು. ಶಾಮರಾಯ ಡಿಲ್ಲಿ ಸುಲ್ತಾನನೊಂದಿಗೆ ಯುದ್ಧದಲ್ಲಿ ಗೆದ್ದು ಅರಸನಾದನು. ಮನೆ ಮತ್ತು ಮಕ್ಕಳನ್ನು ಮರೆತ ಶಾಮರಾಯನನ್ನು ಅವನ ಮಕ್ಕಳು ಶೋಧ ಮಾಡಿದರು. ನಂತರ ಶ್ಯಾಡಬಾಬಾನ ಗುಡ್ಡದಿಂದ ಜತ್ತು ನಾರಾಯಣ (ಹುಲಜಂತಿ) ಪುರದಲ್ಲಿ ವಾಸಿಸತೊಡಗಿದರು. ಬಾಕೂಬಾಯಿಯನ್ನು ಜಕ್ಕಪ್ಪನಿಗೂ ಶರಣಮ್ಮ ಮತ್ತು ಈರಮ್ಮರನ್ನು ಮಾಳಿಂಗರಾಯನಿಗೂ ತಂದು ಮದುವೆ ಮಾಡಿದರು.

ಹತ್ತನೆಯ ಅಧ್ಯಾಯ 'ಮಾಳಿಂಗರಾಯ ಬೀರಪ್ಪನ ಸೇವೆಯಲ್ಲಿ' ಎಂಬ ಶೀರ್ಷಿಕೆಯನ್ನು ಹೊಂದಿ ಹದಿನೆಂಟು ಉಪಶೀರ್ಷಿಕೆಯಲ್ಲಿ ವಿಸ್ತಾರ ಪಡೆದಿದೆ. ಬೀರಪ್ಪ ಕಾಡಗಿರಿಯ ಗೌಡನಲ್ಲಿ ಹನ್ನೆರಡು ವರ್ಷ ಕುರಿ ಕಾಯ್ದು ಅಲ್ಲಿ ಗೌಡನನ್ನು ಹಲ್ಲಿ ಮಾಡಿ ಗೋಡೆಗೆ ನಿಲ್ಲಿಸುವನು. ಅಲ್ಲಿಂದ ಗೌಡಗಿರಿಗೆ ಬಂದು ತಪಸ್ಸಿಗೆ ಕುಳಿತುಕೊಳ್ಳುವನು. ಅವನ ಘೋರ ತಪಸ್ಸಿಗೆ ಕಾರಣವನ್ನು ಕೇಳಲು ತನಗೆ ಸರಿಜೋಡಿಯಾದ ಶಿಷ್ಯನೊಬ್ಬ ಬೇಕೆಂದು ಕೇಳಿಕೊಂಡನು. ಶಿವನ ಆದೇಶದಂತೆ ಎರಳೆಯಾಗಿ ಡೋಣಜ ಕೆರೆಯ ಮೇಲೆ ಹೋದಾಗ ಮಾಳನನ್ನು ಬೆನ್ನು ಹತ್ತುವನು. ಮಾಳಪ್ಪನ ತಾಯಿ ಜತ್ತುನಾರಾಯಣಪುರ ಬಿಟ್ಟು ಜಲಿಮಾಯಿ ಕೆರೆಯ ದಂಡೆಯ ಮೇಲೆ ಬಂದು ಗುರುವಿನ ಕೈ ಹಿಡಿದುಕೊಂಡು ಮಾಳಪ್ಪ ಬರುತ್ತಾನೆ ಮಾಳಿಂಗರಾಯ ಬೀರಪ್ಪನಿಗೆ ಸಿಡಿಯಾಣದಲ್ಲಿ ಗಚ್ಚಿನ ಗುಡಿಯನ್ನು ಕಟ್ಟಿಸುವನು. ಆಗ ಬೀರಪ್ಪ ಗದ್ದುಗಿ ಏರುವನು.

ಕಾಡಬಾರದು ಕಾಡ್ಯಾನೆ ಬೇಡಬಾರದು ಬೇಡ್ಯಾನೆ
ಕರಗೊಳು ಕುಡಿದಲ್ಲಿ ಬಾರದ ಎಂಜಲ ಆಗಲಿಬಾರದ
ಏ ನಮ್ಮ ಗುರುವ ಬೀರಣ್ಣ ಹುಲಿಯ ಗಿಣ್ಣ ಬೇಡ್ಯಾನ
ಊಟಕ ಹುಲಿಗಿಣ್ಣ ಬೇಡ್ಯಾನ ಆಟಕ ಹುಲಿಮರಿಯೇನ (ಪುಟ ೪೧೦)

ಈ ರೀತಿಯಲ್ಲಿ ಬೀರಪ್ಪನಿಗಾಗಿ ಊಟಕ್ಕೆ ಹುಲಿಗಿಣ್ಣ ಆಟಕ್ಕೆ ಹುಲಿಮರಿ ತರಲು ಮಾಳಪ್ಪ ಗಂಗಿ ಮಾಳಮ್ಮನ ಹತ್ತಿರದಲ್ಲಿ ಆಗ ತಾನೇ ಹುಟ್ಟಿದ ಮರಿಗಳನ್ನು ಸರ್ಪವೊಂದರಿಂದ ಭಂಡಾರ ಎರಚಿ ರಕ್ಷಿಸುವನು. ವಿಷಯ ತಿಳಿದ ಹುಲಿ ಪ್ರತಿಯಾಗಿ ತನ್ನ ಮರಿಗಳನ್ನು ಮತ್ತು ಹಾಲನ್ನು ಕೊಟ್ಟಿತು. ಮಾಳಪ್ಪ ಅವುಗಳಿಂದ ಗುರು ಬೀರಪ್ಪನ ಪೂಜೆಗೈಯುವನು. ಆರತಿಯ ಬೆಳಕು ಕೈಲಾಸದಲ್ಲಿ ಬೀಳಲು ಪಾರ್ವತಿ ಮಾಳನನ್ನು ಪರೀಕ್ಷಿಸಲು ಶೀಲವಂತಿಯನ್ನು ಕಳುಹಿಸುತ್ತಾಳೆ. ಮಾರುವೇಷದಲ್ಲಿ ಬಂದ ಶೀಲವಂತಿಯನ್ನು ಪತ್ತೆ ಹಚ್ಚಿ ಆಕೆಯನ್ನು ಒಂಬತ್ತು ಮಠಗಳಿಗೆ ತಿರುಗಾಡಿಸುವನು. ತನ್ನನ್ನು ಕಾಪಾಡಲು ಗುರು ಬೀರಪ್ಪನ ಮೊರೆ ಹೊಕ್ಕಾಗ ತಾನೇ ಉಳಿದು ಬಂದು ಪೂಜೆ ಮಾಡಲು ತಿಳಿಸುತ್ತಿದ್ದ ಹನುಮಂತನ ಮೊರೆ ಹೋಗಲು ಅವನನ್ನು ರಕ್ಷಿಸುವನು. ಆಕೆಯು ನೀನೇ ಅಣ್ಣನೆಂದು ಶರಣಾಗುವಂತೆ ಮಾಡಿ ಸಿಡಿಯಾಣದಲ್ಲಿ ನೆಲೆಸುವಳು. ಮೈಯಲ್ಲಿ ಹುಣ್ಣುಗಳಿಂದ ತುಂಬಿದ ವೇಷಧರಿಸಿ ಬೀರಪ್ಪನ ಹತ್ತಿರ ಕುಳಿತನು. ವಾಸನೆ ಸಹಿಸಲು ಅಸಾಧ್ಯವಾಗಿ ಕೋಪದಿಂದ ಕೆಂಡವಾಗಲು ಮಾಳಪ್ಪ ಶಿವಪಾರ್ವತಿ ಇಬ್ಬರನ್ನೂ ಗುಡಿಗೆ ಹೊತ್ತು ತರುವನು. ದೇಹದ ಆಸೆ ಬಿಟ್ಟು ಚೆಲ್ಲಾಡಿ ಬೆನ್ನಲ್ಲಿ ಬೆಳಕು ತೋರುವನು. ಮಾಳಪ್ಪ ವರ್ಷಕೆ ಬರುವ ದೀಪಾವಳಿಗೆ ಬರಬೇಕೆಂದು ಬೇಡಿಕೊಳ್ಳಲು ಒಪ್ಪಿ ಭಾಷೆ ಕೊಟ್ಟನು. ಮಾಳಿಂಗರಾಯನು ಬೀರಪ್ಪನಿರುವ ಸಿಡಿಯಾಣವನ್ನು ತೊರೆದು ಹುಲಜಂತಿಗೆ ಬರುವಾಗ ಅಲ್ಲಿ ಹೆಂಡತಿ ಕಾನಾಬಾಯಿ ಶರಣಮ್ಮ ಮತ್ತು ತಾಯಿಯನ್ನು ಕಂಡು ಆಶೀರ್ವಾದ ಪಡೆದು ಶಿಷ್ಯನನ್ನು ಹುಡುಕುತ್ತ ಗುರು ಬೀರಪ್ಪ ಹುಲಜಂತಿ, ಬಿಜ್ಜಳಗುಂತಿ ಎಲ್ಲ ಕಡೆ ಹುಡುಕಲಾಗಿ ಕೊನೆಗೆ ಉಮದಿಯ ಊರ ಹಳ್ಳದಲ್ಲಿ ಮಾಳಪ್ಪನನ್ನು ಸೇರುವನು. 'ನಗುನಗುತ ಆಡಿದ ಮಾತು ಮನಸಿಗ ಹಿಡಿದಾನೆ' ಹೂ ಕಾಯಿ ಸೀತಾಳ ತರಲು ಮಾಳ ಮುಂದೆ ಸಾಗಿದನು. ಗುರು ಬೀರಣ್ಣ ತನ್ನ ಶಿಷ್ಯನನ್ನು ನಾನಾ ರೀತಿ ಕಾಡಿ ನೋಡುವನು. ಮಳೆ ಸುರಿಸಿ, ಹೊಳೆ ತುಂಬಿಸಿ ಅಗಡಿಯ ಬಾಗಿಲನ್ನು ಮುಚ್ಚಿಸಿದನು. ಎಲ್ಲವುಗಳನ್ನು ಪವಾಡ ರೀತಿಯಿಂದ ಪಾರಾಗಿ ಖಾಸಬಾಗದಲ್ಲಿ ಹೂ ಸಂಗ್ರಹಿಸಿಕೊಂಡು ನಾಗರಬಾವಿಯಿಂದ ನೀರನ್ನು ತರುವಾಗ ನಾಗನಿಗೆ ಕಣ್ಣು ಬರುವಂತೆ ಪವಾಡಗೈಯುತ್ತಾನೆ. ಆದರೆ ಅದು ಅವನನ್ನು ಕಡಿಯಲು ಮುಂದಾದಾಗ ಅದಕ್ಕೆ ನಾಲಿಗೆ ಎರಡಾಗಲಿ ಎಂದು ಶಾಪವಿತ್ತು ನಾಗರಪಂಚಮಿಯಂದು ಹೆಣ್ಣು ಮಕ್ಕಳು ಹಾಲು ಎರೆಯುತ್ತಾರೆ ಎಂದು ಹರಸಲು ಹಾವು ಮಾಳನಿಗೆ ಬಾವಿಗೆ ಹೋಗಲು ದಾರಿಮಾಡಿ ಕೊಟ್ಟಿತು. ಶಿಷ್ಯ ಬರುವ ವೇಳೆಗೆ ಬೀರಣ್ಣ ತನ್ನ ಗಚ್ಚಿನ ಗುಡಿಯನ್ನು ಬಿಟ್ಟು ಹುತ್ತದಲ್ಲಿ ಹಾವಾಗಿ ಕುಳಿತನು. ಶಿಷ್ಯ ಕೋಪಿಸಿಕೊಳ್ಳಲು ಬೀರಪ್ಪ ಪ್ರತ್ಯಕ್ಷನಾಗುವನು. ಅವನನ್ನು ಗದ್ದುಗೆ ಮೇಲೆ ಕೂಡಿಸಿ ಪೂಜೆ ಮುಗಿಸಿದನು. ಮಾಳಿಂಗರಾಯ ಬಿಜ್ಜಳಗುಂತಿ ಬಿಟ್ಟು ಜತ್ತುನಾರಾಯಣ ಪುರಕ್ಕೆ ಬಂದು ತನ್ನ ಮನೆಯ ಅಂಗಳದಲ್ಲಿ ನಿಂತನು. ಕೋರಿಯ ಹರಿಶ್ಚಂದ್ರನನ್ನು ಕರಿಯಲು ತಿಳಿಸಿ ತಾನು ಹೊರಳಿ ಹೋದನು. ಅಳುತ್ತ ತಂದೆಯ ಮನೆಗೆ ಬಂದ ಈರಮ್ಮಳಿಗೆ ಏಕೆ ಬಂದೆ ಎಂದು ತಂದೆ ಪ್ರಶ್ನಿಸಿ ಹಿಂದಕ್ಕೆ ಹೋಗೆಂದು ತಿಳಿಸಿದನು. ಅತ್ತಿಗೆಯರು ಬಂದು ಸೀರೆ ಕುಪ್ಪಸ ಮಾಡಿದರು. ಸೀಮೆ ದಂಡಿಗೆ ಬಂದು ಈರಮ್ಮ ಐಕ್ಯಳಾದಳು.

ಹನ್ನೊಂದನೆಯ ಅಧ್ಯಾಯವು 'ಡಂಕನಾಡ ದೈಗೊಂಡನ ವೃತ್ತಾಂತ' ಎಂಬ ಶೀರ್ಷಿಕೆಯನ್ನು ಹೊಂದಿದ್ದು ಏಳು ಉಪಶೀರ್ಷಿಕೆಯಲ್ಲಿ ವಿಭಾಗಿಸಲ್ಪಟ್ಟಿದೆ. ಆಗರ್ಭ ಶ್ರೀಮಂತನಾಗಿದ್ದ ಡಂಕನಾಡ ದೈಗೊಂಡ ಅತ್ಯಂತ ಬಡತನ ಸ್ಥಿತಿಗೆ ಬಂದನು. ದೈಗೊಂಡ ಬೀರಪ್ಪನ ಮಠಕ್ಕೆ ಬಂದು ಒಂಟಿಗಾಲ ಮೇಲೆ ನಿಂತು ಧ್ಯಾನ ಮಾಡುವುದನ್ನು ಮಾಳಿಂಗರಾಯ ನೋಡಿ ಅವನಿಗೆ ಬೀರಪ್ಪ ಬೇಡವೆಂದರೂ ಶ್ರೀಮಂತಿಕೆಯನ್ನು ದಯಪಾಲಿಸಿದನು. ಶ್ರೀಮಂತಿಕೆ ಸಿಕ್ಕ ಭರದಲ್ಲಿ ದೈಗೊಂಡ ಬೀರಪ್ಪ ಮತ್ತು ಮಾಳಿಂಗರಾಯರನ್ನು ಮರೆತು ತನ್ನ ಮನೆದೇವರಿಗೆ ಹರಕೆ ಮುಟ್ಟಿಸಲು ತೊಡಗಿದನು. ಮಾಳಿಂಗರಾಯ ಗುರುವನ್ನು ಎರಳೆಯ ರೂಪದಲ್ಲಿ ಎಕ್ಕಿಯ ಬನದಲ್ಲಿ ನಿಲ್ಲಿಸಿ ತಾನು ದೈಗೊಂಡನ ಮನೆಯ ಒಳಗೆ ಹೋಗುತ್ತಾನೆ. ದೈಗೊಂಡ ಮತ್ತು ಸೈನಿಕರು ಬೆನ್ನು ಹತ್ತುತ್ತಾರೆ. ದೈಗೊಂಡನಿಗೆ ಉಸಿರು ಕಟ್ಟಿದಂತಾಗುತ್ತದೆ. ಸೂಜಿ ಡಬ್ಬಣದಲ್ಲಿ ಚುಚ್ಚಿದ ಅನುಭವ ವಾಗುತ್ತದೆ. ಹೆಂಡತಿ ನೀಲಲೋಚನೆ ಇದಕ್ಕೆಲ್ಲ ಬೀರದೇವರ ಕಾರಣವೆಂದು ಕ್ಯಾಣಗನೂರು ಮಠಕ್ಕೆ ಬರುವುದಾಗಿ ಹರಕೆ ಹೊರುತ್ತಾಳೆ. ಮಾಳಿಂಗರಾಯ ಕ್ಯಾಣಗನೂರು ಮಠಕ್ಕೆ ಬಂದು ಮಠದ ಬಾಗಿಲುಗಳನ್ನು ತೆರೆದನು. ಎಮ್ಮೆಟ್ಟಿ ಎಮರಾಯ ಬುತ್ತಿ ತೆಗೆದುಕೊಂಡು ಹೊರಟಿದ್ದನು. ಮಾಳಪ್ಪ ಹಸಿವೆಯಾಗಿದೆಯಂದು ಬುತ್ತಿ ಬೇಡಿದರೂ ಕೊಡಲಿಲ್ಲ. ಬೀರಪ್ಪ ಬುತ್ತಿ ಬಿಚ್ಚಲು ಅದರಲ್ಲಿ ಹುಳುಗಳಾಗಿದ್ದವು. ಮಾಳಿಂಗರಾಯ ನಿಲ್ಲದ ಊಟ ತನಗೆ ಬೇಡವೆಂದು ಬೀರಪ್ಪ ಮುಂಡಗನೂರು ಮಠಕ್ಕೆ ಬಂದು ಮಾಳನನ್ನು ಪಲ್ಲಕ್ಕಿಯಲ್ಲಿ ಕರೆತಂದನು.

ಹನ್ನೆರಡನೆಯ ಅಧ್ಯಾಯವು 'ಅಮೋಘಸಿದ್ಧನ ವೃತ್ತಾಂತ'ವಾಗಿದ್ದು ಎಂಟು ಉಪಶೀರ್ಷಿಕೆಗಳನ್ನು ಹೊಂದಿದೆ. ಕೈಲಾಸದಲ್ಲಿ ಅಮೋಗಿಸಿದ್ಧನು ಶಿವನ ಪರಮ ಶಿಷ್ಯನಾಗಿ ಅವನ ಪೂಜೆ ಮಾಡುತ್ತಿರಲು ಅವನಿಗೆ ತಮ್ಮಂಥ ಗುರುಶಿಷ್ಯರು ಮೂರು ಲೋಕದಲ್ಲಿ ಇಲ್ಲ ಎಂಬ ಗರ್ವ ಮೂಡಿತು. ಶಿವನು ಅದಕ್ಕೆ ಮಾಳಿಂಗರಾಯನೆಂಬ ಶ್ರೇಷ್ಠ ಶಿಷ್ಯನ ವಿಚಾರ ತಿಳಿಸುತ್ತಾನೆ. ಮಾಳಿಂಗರಾಯನನ್ನು ನೋಡಬೇಕೆಂಬ ಹಠ ಹಿಡಿದು ಭೂಲೋಕದ ಹುಲಜಂತಿಗೆ ಬರುತ್ತಾನೆ. ಇದನ್ನು ಶಕ್ತಿಯಿಂದ ಅರಿತ ಮಾಳಿಂಗರಾಯನಿಗೆ ಮತ್ತು ಅಮೋಘಸಿದ್ಧರಲ್ಲಿ ಸ್ಪರ್ಧೆ ನಡೆದು ಕೊನೆಗೆ ಅಮೋಘಸಿದ್ಧ ತಾನು ಸೋತೆನೆಂದು ತನ್ನ ವಿದ್ಯೆಯನ್ನೆಲ್ಲ ಮಾಳನಿಗೆ ಒಪ್ಪಿಸಿದನು. ಅಮೋಘಸಿದ್ಧ ಮಾಳಿಂಗರಾಯರು ಜಕ್ಕರಾಯನಿಂದ ಐದೈದು ಕುರಿಗಳನ್ನು ಪಡೆಯಲು ಅವು ಸಾಯುತ್ತವೆ. ಮುಮ್ಮೆಟ್ಟಿಯ ಭೂತಾಳಸಿದ್ಧನಿಗೆ ತನ್ನ ಪರಿಸ್ಥಿತಿಯನ್ನು ತಿಳಿಸಿದನು. ಕುಂಬಾರ ಗುಂಡಯ್ಯನಿಗೆ ಮಕ್ಕಳಾಗದ ಸಂದರ್ಭದಲ್ಲಿ ಅವನಿಗೆ ಮಕ್ಕಳ ಫಲ ಕರುಣಿಸಿ ಆ ಮಗುವನ್ನು ಮುಮ್ಮೆಟ್ಟಿ ಗುಡ್ಡದಲ್ಲಿ ಬಿಡಬೇಕೆಂದು ಹೇಳಿದನು. ಅದರಂತೆ ಮಗು ಜನಿಸಲು ಅದಕ್ಕೆ ಮಳಸಿದ್ಧನೆಂದು ಹೆಸರಿಟ್ಟರು. ಆ ಮಗುವೇ ಅಮೋಘಸಿದ್ಧನ ಸಾಕು ಮಗನಾಗುವನು. ಅಗಸರ ನೀಲಮ್ಮ ಬಟ್ಟೆ ಒಗೆಯಲು ಹಳ್ಳಕ್ಕೆ ಹೋದಾಗ ಅವಳ ಮಗು ಬೆನ್ನತ್ತಿ ಹೋಗಿ ನೀರಿನಲ್ಲಿ ಮುಳುಗುತ್ತದೆ. ಆತಂಕಗೊಂಡ ತಾಯಿ ನಡೆದ ವೃತ್ತಾಂತವನ್ನು ಅಮೋಘಸಿದ್ಧನಿಗೆ ತಿಳಿಸಿದಳು. ಅಮೋಘಸಿದ್ಧನ ಹೇಳಿಕೆಯಂತೆ ಹಳ್ಳದ ದಡಕ್ಕೆ ಹೋಗಿ

ಕೂಗಲು ಮಗು ಓಡಿ ಬಂದಿತು. ನಡುವಟ್ಟಿ ಊರಿನಲ್ಲಿ ಆರು ತಿಂಗಳಿಗೊಮ್ಮೆ ಕೆರೆ ಒಡೆಯುತ್ತಿತ್ತು. ಅಮೋಘಸಿದ್ಧನು ಆ ಊರಿಗೆ ಬಂದು ಹೋದಂದಿನಿಂದ ಕೆರೆ ಒಡೆದಿರಲಿಲ್ಲ. ಆ ಕಾರಣ ಪದ್ಮಾವತಿ ಮುದುಕನಾದ ಮುಂಗ್ಯೆಗೆ ಜೋಳಿಗೆ ಹಾಕಿಕೊಂಡವನೊಂದಿಗೆ ಹಠ ಹಿಡಿದು ಮದುವೆ ಮಾಡಿಕೊಳ್ಳುತ್ತಾಳೆ. ನಂತರ ಅರಕೇರಿ ಎಂಬ ಊರಲ್ಲಿ ಪದ್ಮಾವತಿ ವಾಸವಾದಳು. ಅಮೋಘಸಿದ್ಧ ಸಾಧುವಾಗಿ ಮುಮ್ಮೆಟ್ಟಿ ಗುಡ್ಡದಲ್ಲಿ ಜೀವಿಸಲು ಪದ್ಮಾವತಿಗೆ ಮಕ್ಕಳಾಗಲಿಲ್ಲ. ಈ ಸಮಾಚಾರ ಕಲ್ಯಾಣದ ಕುಂಬಾರನಿಗೆ ತಿಳಿದು ಮಳಸಿದ್ಧಪ್ಪನನ್ನು ತಂದು ಅಮೋಘಸಿದ್ಧನಲ್ಲಿ ಬಿಟ್ಟನು. ಮಳಸಿದ್ಧಪ್ಪ ತಾಯಿಯೊಂದಿಗೆ ಉಳಿದನು. ತನಗೆ ತಂಗಿ ತಮ್ಮಂದಿರು ಇಲ್ಲವೆಂದು ತಂದೆಗೆ ತಿಳಿಸಲು ಐದು ಉತ್ತತ್ತಿಗಳನ್ನು ಮಂತ್ರಿಸಿ ಕೊಟ್ಟನು. ಅವುಗಳನ್ನು ತಾಯಿ ಪದ್ಮಾವತಿಗೆ ಕೊಡಲು ಜಗುಲಿಯ ಮೇಲಿಟ್ಟ ಉತ್ತತ್ತಿಗಳು ನಾಲ್ಕು ಗಂಡುಮಕ್ಕಳಾಗಿ ಒಂದು ಹೆಣ್ಣು ಮಗುವಾಗಿ ರೂಪ ಪಡೆದಿದ್ದವು. ನಾಲ್ಕು ಜನ ಗಂಡು ಮಕ್ಕಳು ತಂದೆಯಲ್ಲಿಗೆ ಹೋದರು. ಅವರನ್ನು ಆಶೀರ್ವದಿಸಿ ನಾಲ್ಕು ತೇಜಗಳನ್ನು ಕೊಟ್ಟು ಗೀಜಗನಹಳ್ಳಿಯ ರಾಜಕೀಯ ನೋಡಿಕೊಳ್ಳಲು ಕಳಿಸಿದನು. ಮಳಸಿದ್ಧಪ್ಪ ಮತ್ತು ತಮ್ಮಂದಿರಲ್ಲಿ ಆಸ್ತಿಯ ವಿಚಾರದಲ್ಲಿ ಮನಸ್ತಾಪ ಉಂಟಾಗಿ ಗಂಗಿನಾಡ ಸೊನ್ನಲಗಿರಿಗೆ ಬರುವನು. ಅಲ್ಲಿ ಸಿದ್ಧರಾಮನು ಕೆರೆಗೆ ಒಡ್ಡು ಹಾಕಿಸುವ ಸಮಯದಲ್ಲಿ ಮಳಸಿದ್ಧಪ್ಪನ ಪವಾಡಮಯ ಕೆಲಸದಿಂದ ಪ್ರಭಾವಿತನಾಗಿ ಅವನ ಪೂರ್ವ ವಿಚಾರಗಳನ್ನು ಕೇಳಿ ತಿಳಿಯುತ್ತಾನೆ.

ಹದಿಮೂರನೆಯ ಅಧ್ಯಾಯ 'ಪಾಂಡವರ ವೃತ್ತಾಂತ' ಎಂಬ ಶೀರ್ಷಿಕೆ ಪಡೆದು ಮೂರು ಉಪಶೀರ್ಷಿಕೆಯಲ್ಲಿ ವಿಭಾಗ ಹೊಂದಿದೆ. ಪಾಡುರಂಗ ಮಾಳಿಂಗರಾಯನಿಂದ ಲಿಂಗ ತರಬೇಕೆಂದು ಯೋಚನೆ ಮಾಡುತ್ತಾನೆ. ಇದನ್ನು ತಿಳಿದ ಮಾಳಿಂಗ ಗುರುವನ್ನು ನೆನೆದು ಹಾಲಹಳ್ಳದಲ್ಲಿ ಲಿಂಗವಾಗಿ ಪ್ರಾರ್ಥಿಸಿದನು. ಬೀರಪ್ಪನು ಒಪ್ಪಿ ನೀನು ಜೊತೆಗೆ ಬರಬಾರದು ಪಾಂಡುರಂಗನೊಬ್ಬನನ್ನು ಕಳುಹಿಸು ಎಂದು ತಿಳಿಸಿದನು. ಪಂಡರಪುರದಿಂದ ಮಾಳಪ್ಪ ಬಿಜ್ಜಳಗುಂತಿಗೆ ಬಂದನು. ಮಾಳನು ಪಾಂಡುರಂಗನಿಗೆ ಹಾಲಹಳ್ಳದಲ್ಲಿಯ ಲಿಂಗವನ್ನು ತೋರಿಸುತ್ತಾನೆ. ಆ ಲಿಂಗ ಭೂಮಿ ಮತ್ತು ಕೈಲಾಸಕ್ಕೆ ಏಕವಾಗಿ ನಿಂತು ಪಾಂಡುರಂಗ ಲಿಂಗಕ್ಕೆ ಹಾಕಿದಂತೆ ಅದು ಮುಂದೆ ಮುಂದೆ ನಡೆಯುತ್ತದೆ. ಹನ್ನೆರಡು ಹರದಾರಿ ಬೆನ್ನು ಹತ್ತಿದ ನಂತರ ಕರಿಯ ಕಲ್ಲಿನಮರಿಯಲ್ಲಿ ಲಿಂಗ ನಿಲ್ಲುತ್ತದೆ. ಪಾಂಡುರಂಗ ಎತ್ತಲು ಪ್ರಯತ್ನಿಸಿ ವಿಫಲನಾಗುವನು. ಲಿಂಗವಿಲ್ಲದೆ ಹೋದರೆ ಮಾಳಿಂಗನಿಗೆ ಏನು ಹೇಳುವುದು ಎಂದು ವಿಚಾರಿಸಿ ಅಲ್ಲಿಯೇ ಅನ್ನನೀರುಗಳಿಲ್ಲದೆ ಮೂರು ದಿನಗಳವರೆಗೆ ಪೂಜಿಸಲು ಪ್ರಾರಂಭಿಸುತ್ತಾನೆ. ಸಮೀಪದ ಧರಿಯಾ ಎಂಬ ಊರಿನಲ್ಲಿ ಕೊಡವಿಯ ನಂದಣ್ಣ ಧರಿಯಾ ಧೋಳಗೊಂಡ ಎಂಬ ಇಬ್ಬರು ಸಹೋದರರಿದ್ದರು. ಧೋಳಗೊಂಡ ಬಡವ ನಂದಣ್ಣ ಸಿರಿವಂತ. ಪಾಂಡುರಂಗನಿಗೆ ಶ್ರೀಮಂತ ಅಣ್ಣನ ಮನೆಯಲ್ಲಿ ಬಾರಕೋಲಿನಿಂದ ಬಾರಿಸಿದನು. ಮೈಯಲ್ಲಿ ರಕ್ತಸೋರಿತು. ಕುತ್ತಿಗೆಗೆ ಕೈ ಹಾಕಿ ಹೊರಗೆ ನೂಕಿದನು. ಬಡವನಾದ ಧರಿಯ ಧೋಳಗೊಂಡ ಕಂಬಳಿ ನೇಯ್ದು ಹೊಟ್ಟೆ ತುಂಬಿಸಿಕೊಳ್ಳುವವನಾದರೂ ಅವನನ್ನು ಸತ್ಕರಿಸಿದನು. ತನ್ನ ಭಾಗದ ಅಂಬಲಿಯನ್ನು ಪಾಂಡುರಂಗನಿಗೆ

ಕೊಟ್ಟನು. ಪಾಂಡುರಂಗನ ದೆಸೆಯಿಂದ ಧರಿಯ ಧೋಳಗೊಂಡ ಶ್ರೀಮಂತನಾದನು. ಕೊಡವಿಯ ನಂದಣ್ಣ ಬಡತನವನ್ನು ಅನುಭವಿಸಿದನು. ಪಾಂಡುರಂಗ ಕರಿಯಕಲ್ಲಿನ ವಾರಿಯಲ್ಲಿರುವ ಲಿಂಗವನ್ನು ಧೋಳ ಗೊಂಡನಿಗೆ ತೋರಿಸಿದನು.

ಹದಿನಾಲ್ಕನೆಯ ಅಧ್ಯಾಯವು 'ಇತರ ಶರಣರ ವೃತ್ತಾಂತಗಳು' ಎಂಬ ಶೀರ್ಷಿಕೆಯಾಗಿದ್ದು ಐದು ಉಪಶೀರ್ಷಿಕೆಗಳನ್ನು ಹೊಂದಿದೆ. ಕಾಡಮಗೇರಿ ಬಂಯ್ಯಾರದಲ್ಲಿ ವಾಸಿಸುವ ರೇವಣಸಿದ್ಧನಿಗೆ ಹಾರೂರ ಗುಂಡವ್ವ ಭಿಕ್ಷೆ ನೀಡದೆ ಕಳುಹಿಸುತ್ತಾಳೆ. ಕುರುಬರ ಸಿದ್ದವ್ವ ಭಿಕ್ಷೆ ನೀಡುತ್ತಾಳೆ. ನಂತರ ಅಗಸರ ಮಡಿವಾಳನ ಮನೆಗೆ ಬರಲು ಅವನು ನೀಡಿದ ಹವಳದ ಭಿಕ್ಷೆಯನ್ನು ನಿರಾಕರಿಸುತ್ತಾನೆ. ತನ್ನಲ್ಲಿರುವ ಹನ್ನೆರಡು ವರ್ಷದ ಕಂತಿ ಇಪ್ಪತ್ತು ವರ್ಷದ ಕಂತಿಗಳಿಗೆ ಕಟಗಿ, ಸುಣ್ಣ ನೀರು ಬೆಂಕಿ ಕಡ್ಡಿ, ಸಾಬೂನು ಕಲ್ಲು ಯಾವುದನ್ನು ಉಪಯೋಗಿಸದೆ ಗಂಜಿ ಮಾಡಬೇಕೆಂದು ರೇವಣಸಿದ್ಧ ಹೇಳುತ್ತಾನೆ. ಚಿಂತೆಗೊಳಗಾದ ಗಂಡನನ್ನು ನೀಲಮ್ಮ ಸಮಾಧಾನ ಪಡಿಸಿ ಜಂಬ್ಯಾದಿಂದ ಕುತ್ತಿಗೆಯನ್ನು ಹಾರಿಸಲು ತಿಳಿಸುತ್ತಾಳೆ. ಹೀಗೆ ರಕ್ತವನ್ನೇ ಅಳಿಮಾಡಿ ಅಂಗೈ ಬಂಡಿ ಮಾಡಿ ಮೆದುಳು ಸಾಬೂನು ಮಾಡಿ ತಲೆಯ ದೋಣಿಯನ್ನು ಪಾತ್ರ ಮಾಡಿ ಕಂತಿಗಳಿಗೆ ಗಂಜಿ ಹಾಕಬೇಕೆಂದಳು. ಮೊದಲು ಕೋಪಗೊಂಡ ಅಗಸ ನಂತರ ಹೆಂಡತಿ ಹೇಳಿದಂತೆ ಮಾಡುತ್ತಾನೆ. ಮರುದಿನ ಭಿಕ್ಷೆಗೆ ಬಂದ ರೇವಣಸಿದ್ಧನಿಗೆ ಗಂಜಿ ಮಾಡಿದ ಕಂತಿಗಳನ್ನು ಕೊಡಲು ಹೋದಾಗ, ದಂಪತಿಗಳ ಸಮೇತರಾಗಿ ನೀಡಿದರೆ ಮಾತ್ರ ತೆಗೆದುಕೊಳ್ಳುವುದಾಗಿ ತಿಳಿಸುತ್ತಾನೆ. ರೇವಣಸಿದ್ಧರ ಹೇಳಿಕೆಯಂತೆ ಮಡಿವಾಳನು ಹೆಂಡತಿಯನ್ನು ಕೂಗಲು ಮನೆಯ ಅಂಗಳದಿಂದ ಬರತ್ತಾನೆ. ಇಬ್ಬರೂ ಸೇರಿ ಭಿಕ್ಷೆ ನೀಡುವರು.

ಹಂಗರಗಿಯ ಹಾಯ್ ಲಿಂಗಮ್ಮಳನ್ನು ಯಕಚಿಂತಿಯ ದೇಸಾಯರ ಮನೆಗೆ ಕೊಟ್ಟಿದ್ದರು. ರಾತ್ರಿ ಮಲಗಿದಾಗ ನಡುರಾತ್ರಿಯಲ್ಲಿ ಹಯ್ಯಾಳದ ಗಜ್ಜಳಿಲಿಂಗ ಆಕೆಯ ಉಡಿಯಲ್ಲಿ ಬಿದ್ದು ಹೊತ್ತು ಹೊರಡುವ ಮುನ್ನ ಮೀಸಲು ಹಾಲು ತರಬೇಕೆಂದು ಹೇಳಿತು. ಅದರಂತೆ ಮೂರು ತಿಂಗಳವರೆಗೆ ಪ್ರತಿರಾತ್ರಿ ಲಿಂಗಕ್ಕೆ ಹಾಲೆರೆದು ಬರುತ್ತಿದ್ದಳು. ಊರ ಜನರು ಅನುಮಾನಿಸಲು ಮಾವ ದೇಸಾಯಿ ಮಗನೊಂದಿಗೆ ಮಧ್ಯರಾತ್ರಿ ಹಿಂಬಾಲಿಸುತ್ತಾನೆ. ಕೊಲ್ಲಬೇಕೆಂದವರು ಲಿಂಗಕ್ಕೆ ಹಾಲೆರೆಯುವುದನ್ನು ಕಂಡು ಕಾಲಿಗೆ ಬಿದ್ದು ಕ್ಷಮೆ ಕೇಳುತ್ತಾರೆ. ಮಲ್ಲಯ್ಯ ಮಣಿಮಲ್ಲಾಸುರರ ಸಂಹಾರಕ್ಕಾಗಿ ಕೈಲಾಸದಿಂದ ಭೂಮಿಗೆ ಬಂದು ಅಲ್ಲಿಗೇರಿಯಲ್ಲಿ ಬಳೆಯ ವ್ಯಾಪಾರ ಪ್ರಾರಂಭಿಸುತ್ತಾನೆ. ಗಂಗಿ ಮಾಳಮ್ಮ ಮಲ್ಲಯ್ಯನಿಗೆ ಮನಸೋತು ತನ್ನಲ್ಲಿರುವ ಬಂಢಾರದ ವಿಚಾರ ತಿಳಿಸಿ ಉಡಿಯಲ್ಲಿ ಬಂಢಾರವನ್ನು ಕಟ್ಟಿಕೊಂಡು ಮೈಲಾರಗುಡ್ಡಕ್ಕೆ ಹೋಗುತ್ತಾರೆ. ಅವಳ ನಾಲ್ಕು ಜನ ಅಣ್ಣಂದಿರು ತಾಯಿಯಿಂದ ವಿಷಯ ತಿಳಿದು ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಹೋಗುತ್ತಾರೆ. ಮದುವೆ ಪೂರ್ಣವಾಗದೆ ಮಾಳಮ್ಮ ಶಾಪ ಕೊಡುತ್ತಾಳೆ. ಅಂದಿನಿಂದ ಕೈಯಲ್ಲಿ ಕಟ್ಟಿಗೆ ಹಿಡಿದು ದೋಣಿಸೇವೆಯ ವಗ್ಗಯ್ಯಗಳಾಗುತ್ತಾರೆ.

ಅಂತ್ಯದಲ್ಲಿ 'ಸಿದ್ಧರಾಮನ ವೃತ್ತಾಂತ'ವನ್ನು ಎರಡು ಭಾಗಗಳಲ್ಲಿ ಅಭ್ಯಸಿಸಬಹುದು. ೧. ಮೂಕಮಗನ ಕೊಟ್ಟರೆ ಸಿದ್ಧರಾಮನಂದಾರ ೨. ಮೂಕ ಮಗನಿಗೆ ಮಾತು ಬರತಾವ ಎಂಬ ಭಾಗಗಳಿವೆ. ರೇವಣಸಿದ್ಧನ ಕರುಣೆಯಿಂದ ಮುದ್ದುಗೌಡ ಸುಗ್ಗವ್ವರಿಗೆ ಸಿದ್ಧರಾಮ ಜನಿಸುತ್ತಾನೆ. ಚಿಕ್ಕವನಿದ್ದಾಗ ಮಾತು ಬಾರದೆ ದನ ಕಾಯುವ ಸಂದರ್ಭದಲ್ಲಿ ಶಿವನಿಗಾಗಿ ಬುತ್ತಿಯನ್ನು ತರುವ ಸಂದರ್ಭದಲ್ಲಿ ಮೊದಲ ಬಾರಿಗೆ ಮಾತನಾಡುತ್ತಾನೆ. ಬುತ್ತಿ ತಂದು ಶಿವನನ್ನು ಹುಡುಕಲು ಶಿವ ಕಾಣದಾಗಲು ಶ್ರೀಶೈಲದ ಕಮರಿಯಲ್ಲಿ ಹಾರಲು ಸಿದ್ಧನಾಗುತ್ತಾನೆ. ಶಿವ ಪ್ರತ್ಯಕ್ಷವಾಗಿ ದರುಶನ ನೀಡುತ್ತಾನೆ. ಶಿವನೊಂದಿಗೆ ಸೊಲ್ಲಾಪುರಕ್ಕೆ ಬಂದು ಅಲ್ಲಿ ಗುಡಿ ಕೆರೆಗಳನ್ನು ಕಟ್ಟಿಸಿ ಅಲ್ಲಿಯೇ ವಾಸವಾಗುತ್ತಾನೆ.

ವಿಮರ್ಶೆ

'ಜನಪದ ಹಾಲುಮತ ಮಹಾಕಾವ್ಯ'ವು ಉಪಕಥೆಗಳ ಗುಚ್ಛವಾಗಿದೆ. ಅಲ್ಲಿ ಪುರಾಣಗಳ ಸೃಷ್ಟಿಯು ಹೇರಳವಾಗಿದೆ. ಈ ಕಾವ್ಯದಲ್ಲಿ ವೀರ, ಭಕ್ತಿ ಹಾಗೂ ಶೃಂಗಾರಗಳನ್ನು ಗುರುತಿಸಬಹುದು. ಬೀರಪ್ಪನನ್ನು ಅನುಸರಿಸಿ ಹೇಳುವುದಾದರೆ ವೀರಕಾವ್ಯವೆನಿಸುತ್ತದೆ. ಆಕಳುಗಳ ವೃತ್ತಾಂತ, ಹೈನುಗಾರಿಕೆ, ದನಗಾಹಿ, ಎಮ್ಮೆಗಳ ವೃತ್ತಾಂತ, ಉದ್ಯೋಗಸ್ಥರ ವಸ್ತು ಮೊದಲಾದವುಗಳ ವಿಷಯಗಳು ಗಮನಸೆಳೆಯುತ್ತವೆ. ಬೀರಪ್ಪ ಮಾಳಿಂಗರಾಯ ಮಾಯವ್ವರ ವಿವರಗಳನ್ನು ಮೇಲಿಂದ ಮೇಲೆ ಗುರುತಿಸಬಹುದು.

ಮೌಖಿಕವಾಗಿ ಜನರಿಂದ ಜನರಿಗೆ ಹರಿದು ಬಂದ ಕೆಲವು ಚಾರಿತ್ರಿಕ ಸಂಗತಿಗಳು ಪುರಾಣಗಳತ್ತ ತಿರುಗಿವೆ. ಕಾಲ್ಪನಿಕ ಘಟನೆಗಳಿಂದ ತುಂಬಿ ವಾಸ್ತವಿಕತೆಯಿಂದ ದೂರವಾದರೂ ಕೆಲವು ವಿಷಯಗಳು ಅಲ್ಲಲ್ಲಿ ಪಿರಾಮಿಡ್‌ಗಳಂತೆ ಸತ್ಯಾಂಶಗಳನ್ನು ಹೊಂದಿವೆ.

ಕಾವ್ಯದಲ್ಲಿ ಬಾಳಭರುಮ ಶಿವನ ಲೀಲಾ ಸದೃಶದಿಂದ ಜೀವ ಪಡೆದರೆ ಬೀರಪ್ಪ ಶಿವನ ಬೆವರಿನಿಂದ ಹುಟ್ಟುತ್ತಾನೆ. ಹೀಗೆ ಇಬ್ಬರ ಜನನಕ್ಕೆ ಶಿವನೇ ಕಾರಣನಾಗುತ್ತಾನೆ. ಬೀರಪ್ಪ ಹುಟ್ಟಿದ ೧೩ನೆಯ ದಿನಕ್ಕೆ ಅನಾಥನಾದರೆ ಸಾಕು ತಾಯಿ ಮಾಯವ್ವ ೧೧ನೆಯ ದಿನಕ್ಕೆ ಅನಾಥೆಯಾಗುತ್ತಾಳೆ. ಹೀಗೆ ಎರಡು ಅನಾಥ ಜೀವಗಳಿಂದ ಸಮಾಜ ಕಲ್ಯಾಣ ಉಂಟಾಗುತ್ತದೆ. ಕಾವ್ಯದಲ್ಲಿ ಬೀರಪ್ಪನೇ ಪ್ರಮುಖನಾಗುತ್ತಾನೆ. ದುಷ್ಟಶಕ್ತಿ, ದಬ್ಬಾಳಿಕೆಯನ್ನು ವಿರೋಧಿಸುವ ರೌದ್ರಾವತಾರಿ ಆಗಿ ಬೀರಪ್ಪ ಕಾವ್ಯದ ಕೇಂದ್ರ ಬಿಂದುವಾಗಿದ್ದಾನೆ. ತನ್ನ ಶಿಷ್ಯ ಮಾಳಿಂಗನಿಗೆ ಸಿಗದ ಬುತ್ತಿಯನ್ನು ತಾನೂ ನಿರಾಕರಿಸುವಲ್ಲಿ ಅವರ ಅನ್ಯೋನ್ಯತೆಯನ್ನು ಗುರುತಿಸಬಹುದು.

ಅಯೋನಿಜ ಮತ್ತು ಮೃತ್ಯುಂಜಯನಾದ ಬೀರಪ್ಪ ದೈವದ ಅನುಗ್ರಹದಿಂದ ಜನ್ಮ ಪಡೆದವನು. ಮಾಂತ್ರಿಕತೆಯ ಅಸಾಮಾನ್ಯ ಸ್ವಶಕ್ತಿ ಹೊಂದಿದ ಬೀರಪ್ಪ ನಾಯಕನಾಗಿ ಕಾವ್ಯದ ತುಂಬೆಲ್ಲ ಹರಡಿದ್ದಾನೆ.

ಕಳ್ಳಕೌಂಟಗಿ, ಉಂಬಳಿಠಾಣೆ, ಗೊಡಗೇರಿ, ಕ್ಯಾಣಗನೂರು, ಉಮರಜ, ಹೂನೂರು, ಅಲಕನೂರು, ಬಾರಾಮತಿ, ತೇರಾಮತಿ, ಅಣ್ಣಿಗೇರಿ, ಬೆಳ್ಳಿಗಿರಿ, ತಾಮಟಗೇರಿ, ಗೀಜಗನಹಳ್ಳಿ, ಸಿಡಿಯಾಣ ಮತ್ತು ಹುಲಜಂತಿ ಮೊದಲಾದವು ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ಪ್ರದೇಶಕ್ಕೆ ಸೇರಿದೆ. ಕನ್ನಡ ಮತ್ತು ಮರಾಠಿ ಎರಡೂ ಭಾಷೆಯಲ್ಲಿ ಈ ಕಾವ್ಯ ಪ್ರಚಲಿತದಲ್ಲಿದೆ. ಅಲೌಕಿಕ ಆವರಣದಲ್ಲಿ ಮಾಳಿಂಗರಾಯನ ಜನನವಾಗುತ್ತದೆ. ಸೌಮ್ಯ ಸ್ವಭಾವದ ಅಸಾಮಾನ್ಯ ಸಾಮರ್ಥ ಹೊಂದಿದ ಮಾಳಪ್ಪ ಪೀಡಿಸುವ ಗುಣಕ್ಕಿಂತ ಒಲಿಯುವ ಗುಣವನ್ನು ಹೊಂದಿದವನು. ಬೀರಪ್ಪ ಮತ್ತು ಮಾಳಿಂಗರಾಯರ ಅನ್ಯೋನ್ಯತೆಯನ್ನು ಶಿವನೇ ಅಮೋಘಸಿದ್ಧನ ಮುಂದೆ ಕೊಂಡಾಡುತ್ತಾನೆ.

ಇದು ಮುಖ್ಯವಾಗಿ ಭಕ್ತಿ ಕಾವ್ಯವಾಗಿದೆ. ಶಿವನನ್ನು ಪೂಜಿಸುವ ಕಾಳಿನಾರಾಯಣ, ಬೀರಪ್ಪನನ್ನು ಪೂಜಿಸುವ ಮಾಳಿಂಗರಾಯ, ಜಂಬುನಿಲದ ಗಡ್ಡೆಯ ಕಪ್ಪೆ ಕಲಕದ ಜಲ ಮತ್ತು ಫುಳ ಮುಟ್ಟಪುದ ಪುಷ್ಪಗಳಿಂದ ಪೂಜೆಗೊಳ್ಳುವ ಇಂಥ ಸನ್ನಿವೇಶಗಳಲ್ಲಿ ಭಕ್ತಿಯ ಎಳೆಯು ಕಾವ್ಯದುದ್ದಕ್ಕೂ ಹರಿದಿದೆ. ಬೀರಪ್ಪ ವೀರನು ಮಹಿಮಾಪುರುಷನು ಆದ ಉಗ್ರ ಸ್ವರೂಪಿ. ಶಿವನ ಮೊಮ್ಮಗನಾದ ಬೀರಪ್ಪ ಶಿವನ ಅವತಾರವನ್ನೇ ಪ್ರತಿಬಿಂಬಿಸುವ ನಾಯಕ.

ಸೂತ್ರದ ತೇಜಯನ್ನುಳಿದು ಎಲ್ಲ ವಾಹನಗಳು ಭೂಮಿಯ ಮೇಲೆ ಚಲಿಸುವಂಥವು. ಕುದುರೆ, ಗಾಡಿ ಮೊದಲಾದವು ಸಾಮಾನ್ಯ ವಾಹನಗಳು. ಕುರಿಕಾಯುವ, ದನಕಾಯುವ, ಒಕ್ಕಲುತನಗೈಯುವ ಪರಿಸರದಲ್ಲಿ ಕಥೆ ಹರಡಿಕೊಂಡಿದೆ. ಅತಿ ಹೆಚ್ಚು ಘಟನೆಗಳಲ್ಲಿ ಬೀರಪ್ಪ ಮಾಳಿಂಗರಾಯರ ಪಾತ್ರಗಳಲ್ಲಿ ಕಾಲ್ಪನಿಕತೆ ಇದ್ದರೂ ಅವರು ಚಾರಿತ್ರಿಕ ವ್ಯಕ್ತಿಗಳೆನಿಸುತ್ತಾರೆ.

ಉತ್ತರ ಕರ್ನಾಟಕದಲ್ಲಿ ದೊರೆಯುವ ಮೈಲಾರಲಿಂಗನ ಕಾವ್ಯ ಮತ್ತು ಹಾಲುಮತ ಪುರಾಣಗಳು ಸಂಪೂರ್ಣವಾಗಿ ಹಾಡಿನ ರೂಪದಲ್ಲಿದ್ದರೆ, ದಕ್ಷಿಣ ಕರ್ನಾಟಕದಲ್ಲಿ ದೊರೆಯುವ ಜನಪದ ಮಹಾಕಾವ್ಯಗಳ ಮಂಟೇಸ್ವಾಮಿ ಕಾವ್ಯ, ಜುಂಜಪ್ಪನ ಕಾವ್ಯ ಮತ್ತು ಮಲೇಮಹಾದೇಶ್ವರ ಕಾವ್ಯಗಳೆಲ್ಲ ಕಥೆ ಮಾಡುತ್ತವೆ. ಕುರುಬರ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಸಂಗತಿಗಳನ್ನು ತಿಳಿಸುವ ಕಾವ್ಯವಾಗಿವೆ. ಇದರ ಆಧಾರದಿಂದ ಇನ್ನಿತರೆ ಕಾವ್ಯ ಪುರಾಣಗಳು ರಚನೆಗೊಂಡಿವೆ ಎಂದು ಎಫ್.ಟಿ.ಹಳ್ಳಿಕೇರಿ ಅವರು ಅಭಿಪ್ರಾಯಪಟ್ಟಿದ್ದಾರೆ. ಜನಪದ ಹಾಲುಮತ ಮಹಾಕಾವ್ಯವು ಕುರುಬರ ಆರಂಭಿಕ ಕಾಲಘಟ್ಟದಲ್ಲಿ ರಚನೆಗೊಂಡು ವಿಸ್ತಾರಗೊಳ್ಳುತ್ತ ಬಂದಿದೆ. ಅಮೋಘಸಿದ್ಧನ ವೃತ್ತಾಂತವನ್ನು ಈ ಕಾವ್ಯ ಸಂಕ್ಷಿಪ್ತವಾಗಿ ವಿವರಿಸುತ್ತದೆ.

ರಸ್ತಾಪುರ ಭೀಮಕವಿಯ ಮೇಲೆ ಜನಪದ ಹಾಲುಮತ ಮಹಾಕಾವ್ಯ ಪ್ರಭಾವ ಬೀರಿದರೆ, ಹಾಲುಮತೋತ್ತೇಜಕ ಪುರಾಣದ ಪ್ರಭಾವ ಚೆನ್ನಬಸವಕವಿಯ ಹಾಲುಮತ ಪುರಾಣದ ಮೇಲಾಗಿದೆ. ಜನಪದ ಹಾಲುಮತ ಮಹಾಕಾವ್ಯವು ಹಿಂದೂ ಸಂಸ್ಕೃತಿಯ ಅನನ್ಯತೆಯನ್ನು ಪರಿಚಯಿಸುತ್ತದೆ.

ಕಾವ್ಯದಲ್ಲಿ ಸ್ತ್ರೀ ಪಾತ್ರಗಳು ಬೀರಪ್ಪನಿಗೆ ಪೂರಕವಾಗಿ ಬಂದಿವೆ. ಸೂರಮ್ಮದೇವಿ, ಕಮಳಾದೇವಿ, ಮಾಯವ್ವ ಇವರು ಪುರುಷ ಪಾತ್ರಗಳಿಗೆ ನೆರಳಾಗಿ ಅನೇಕ ತೊಂದರೆಗಳಿಗೆ ಸಿಕ್ಕು ಅಲ್ಲಲ್ಲಿ ಕರಗಿಬಿಡುತ್ತಾರೆ. ಈ ಮಹಾಕಾವ್ಯದಲ್ಲಿಯ ಪಾಂಡವರ ಪ್ರಸ್ತಾಪ ಹೊಸ ವಿಚಾರವಾಗಿದೆ. ಇಲ್ಲಿ ಶಾಂತಮುತ್ತಯ್ಯನು ಅಲ್ಪ ಸ್ವಲ್ಪ ಸನ್ನಿವೇಶಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಕೈಲಾಸದ ದೇವರೊಂದಿಗೆ ಜನಿಸಿ ಭೂಲೋಕದಲ್ಲಿ ಜೀವಿಸುತ್ತಾನೆ.

ಚಲನಶೀಲತೆಯೇ ಜೀವನದ ಮುಖ್ಯ ಪ್ರಕ್ರಿಯೆ. ಆದರೆ ತಿಪರೇಸೂರ ತನ್ನ ಏಳು ಮಂದಿ ಹೆಣ್ಣು ಮಕ್ಕಳನ್ನು ನದಿ ಪಾಲು ಮಾಡುವುದು ಜೀವನದ ಹಿಮ್ಮುಖ ಚಲನೆಯ ವೈರುಧ್ಯವನ್ನು ಬಿಂಬಿಸುತ್ತದೆ. ಹಬ್ಬ ಮಾಡುವುದಕ್ಕಾಗಿ ಮಾಯವ್ವ ಬೀರಪ್ಪನ ಮನೆಗೆ ಬರಲು ಅಲ್ಲಿ ಅವರಿಬ್ಬರಲ್ಲಿ ಜಗಳವಾಗುತ್ತದೆ. ಬೀರಪ್ಪ ಬಾಲ್ಯದಲ್ಲಿ ತನ್ನ ಆಟಿಕೆಗಳಿಗಾಗಿ ಅಕ್ಕ ಮಾಯವ್ವಳನ್ನು ಪೀಡಿಸುವ ಸಹಜ ಸಲುಗೆಯ ವಾಸ್ತವಿಕ ಚಿತ್ರಣಗಳು ಕಾವ್ಯದ ತುಂಬೆಲ್ಲ ಪಸರಿಸಿವೆ. ಕಾರಹುಣ್ಣಿಮೆ, ಎಳ್ಳಮವಾಸೆ, ಸಂಕ್ರಾಂತಿ, ನಾಗರ ಪಂಚಮಿ ಮುಂತಾದ ಹಿಂದುಗಳ ಹಬ್ಬಗಳು ಕಾವ್ಯದಲ್ಲಿ ಹಾಸುಹೊಕ್ಕಾಗಿವೆ. ವನದೇವತೆಗೆ ಕಾವ್ಯದಲ್ಲಿ ವಿಶೇಷ ಸ್ಥಾನ ಕಲ್ಪಿಸಲಾಗಿದೆ. ಅವಳನ್ನು ಅಲಕ್ಷಿಸಲು ಕಾಡಾಟಗಳು ಪ್ರಾರಂಭವಾಗುತ್ತವೆ. ಸಂತೃಪ್ತಿ ಪಡಿಸಲು ಸುಖ ಶಾಂತಿ ಸಮೃದ್ಧಿ ವೃದ್ಧಿಯಾಗುತ್ತವೆ.

ಒಟ್ಟಿನಲ್ಲಿ ಕುರುಬ ಸಮುದಾಯದ ಪ್ರಾಚೀನತೆ, ಪರಂಪರೆ, ಆರಾಧ್ಯ ದೈವಗಳು, ಉದ್ಯೋಗ, ಆಚರಣೆಗಳು, ಜಾತ್ರೆ-ಉತ್ಸವಗಳ ವೈಶಿಷ್ಟ್ಯತೆಗಳನ್ನು ವಿವರವಾಗಿ ತಿಳಿಸುವಲ್ಲಿ ಈ ಕಾವ್ಯ ಯಶಸ್ವಿಯಾಗಿದೆ.

೨. ಮಾಳಿಂಗರಾಯನ ಕಾವ್ಯ

ಕುರುಬರ ಸಾಂಸ್ಕೃತಿಕ ವೀರರಲ್ಲಿ ಮಾಳಿಂಗರಾಯನು ಒಬ್ಬ. ಚಾರಿತ್ರಿಕ ನಾಯಕನಾದ ಈತ ಬೀರಪ್ಪನ ಶಿಷ್ಯನಾಗಿದ್ದವನು. ಜತ್ತ ತಾಲೂಕಿನ ಹುಲಜಂತಿ ಈತನ ಮುಖ್ಯ ನೆಲೆ. ಮೌಖಿಕ ಪರಂಪರೆಯ ಆಕರಗಳಾದ ಕಾವ್ಯ ಪುರಾಣ ಡೊಳ್ಳಿನ ಹಾಡುಗಳಲ್ಲಿ ಮಾಳಿಂಗರಾಯನ ಜೀವನ ಮತ್ತು ಕಾರ್ಯ ಸಾಧನೆಗಳನ್ನು ಚಿತ್ರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮಾಳಿಂಗರಾಯನ ಭಕ್ತ ಪರಂಪರೆಯಲ್ಲಿ ಬಂದ ಹುಲಜಂತಿಯ ಅಡಿವೆಪ್ಪ ಮಾಳಪ್ಪ ಸೋಮತ್ತೆ ಒಡೆಯರು ಹಾಡಿದ ಮಾಳಿಂಗರಾಯನ ಕಾವ್ಯವೂ ಒಂದು. ಇದು ಮಾಳಿಂಗರಾಯನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ತಿಳಿಸುವ ಪ್ರಮುಖ ಮೌಖಿಕ ಆಕರ ಗ್ರಂಥವಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಂಗವು ೧೯೯೯ರಲ್ಲಿ ಈ ಕಾವ್ಯವನ್ನು ಪ್ರಕಟಿಸಿದೆ. ಬುಡಕಟ್ಟು ಅಧ್ಯಯನ ವಿಭಾಗದ ಸಾಂಸ್ಥಿಕ ಯೋಜನೆಯಡಿಯಲ್ಲಿ ಸಹ ಪ್ರಾಧ್ಯಾಪಕರಾದ ಡಾ ಗಂಗಾಧರ ದೈವಜ್ಞ ಅವರು ಈ ಕಾವ್ಯವನ್ನು ಸಂಪಾದಿಸಿದ್ದಾರೆ. ಹುಲಜಂತಿಯ ಅಡಿವೆಪ್ಪ ಮಾಳಪ್ಪ ಸೋಮತ್ತೆ ಒಡೆಯರು ಈ ಕಾವ್ಯವನ್ನು ಮೌಖಿಕ ರೂಪದಲ್ಲಿ ಈಗಲೂ ಹಾಡುತ್ತಾರೆ. ಪ್ರಸ್ತುತ ಸಂಪಾದಕರು ಅಡಿವೆಪ್ಪ ಅವರಿಂದ ಹಾಡಿಸಿ ಧ್ವನಿ ಮುದ್ರಣ ಮಾಡಿಕೊಂಡು ಅಚ್ಚುಕಟ್ಟಾಗಿ ಸಂಪಾದಿಸಿದ್ದಾರೆ.

ಕವಿ ಪರಿಚಯ

ಕವಿ ಅಡಿವೆಪ್ಪ ಮಾಳಪ್ಪ ಸೋಮತ್ತೆ ಒಡೆಯರ ಅವರು ಹುಲಜಂತಿಯಲ್ಲಿ ೭ನೇ ತರಗತಿವರೆಗೆ ಮರಾಠಿಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ಮೊದಲು ಮಾಳಿಂಗರಾಯ ಕಾವ್ಯವನ್ನು ಮರಾಠಿಯಲ್ಲಿ ಬರೆದರು. ನಂತರ ಅದನ್ನೇ ಆಧರಿಸಿ ಕನ್ನಡದಲ್ಲಿ ಕಾವ್ಯ ರೂಪ ಕೊಟ್ಟರು. ಅಡಿವೆಪ್ಪನವರ ವಿರಚಿತ ಕೃತಿ "ಸುಕ್ಷೇತ್ರ ಹುಲಜಂತಿ ಮಹಿಮಾಂತಕ ಮಹಾಲಿಂಗರಾಯರ ಹಾಲುಮತ ಪುರಾಣ" ಕೃತಿಯು ೧೯೯೩ರಲ್ಲಿ ಗ್ರಂಥಸ್ಥ ರೂಪ ಪಡೆಯಿತು. ಸೊಲ್ಲಾಪುರದ ಶ್ರೀ ಸದ್ಭಕ್ತ ಮಂಡಳಿ ಮತ್ತು ಶ್ರೀರಾಮ ಹನುಮಂತರಾಯ ಶೆಂಡಗೆ (ಪಾಟೀಲ) ಅವರಿಂದ ಪ್ರಕಾಶನಗೊಂಡಿದೆ. ಈ ಕೃತಿ ರಚನೆಗಾಗಿ ೨೦ ವರ್ಷಗಳಿಗಿಂತ ಹೆಚ್ಚಿನ ಅವಧಿಯನ್ನು ವಿನಿಯೋಗಿಸಿರುವುದನ್ನು ಮುನ್ನುಡಿಯಲ್ಲಿ ಉಲ್ಲೇಖಿಸಿದ್ದಾರೆ. ಪುನಃ ಅಡಿವೆಪ್ಪ ಒಡೆಯರ ಅವರು ತಮ್ಮ ೫೩ನೆಯ ವಯಸ್ಸಿನಲ್ಲಿ ಈ ಕಾವ್ಯವನ್ನು ಹಾಡಿದ್ದಾರೆ.

ಕಾವ್ಯದ ಸ್ವರೂಪ

ಕಾವ್ಯವು ಸಂಧಿಗಳಲ್ಲಿ ವಿಭಾಗಗೊಳ್ಳದೆ ಅನಿಯಮಿತ ಪಾದಗಳಲ್ಲಿ ವಿಸ್ತಾರವನ್ನು ಪಡೆದಿದೆ. ಆದಿ ಅಂತ್ಯ ಪ್ರಾಸದಿಂದ ಮುಕ್ತವಾಗಿದೆ. ಯಾವುದೇ ಛಂದೋಬಂಧಕ್ಕೆ ಒಳಪಟ್ಟಿಲ್ಲ. ೧೭೪ ಪುಟಗಳ ಹರವು ಹೊಂದಿದ ಈ ಕಾವ್ಯವು ಸ್ತುತಿಪದ್ಯ, ಮಾಳಿಂಗನ ಜೀವನ ವೃತ್ತಾಂತ, ಮಾಳಿಂಗರಾಯನ ಮೊಮ್ಮಗ ಬರಗಾಲಿಸಿದ್ಧನ ಪವಾಡಗಳು, ಕಂಬಳಿ ಉದ್ಯಮದ ಆಚರಣೆಗಳ ವಿವರಗಳನ್ನು ಒಳಗೊಂಡಿದೆ. ಅನುಬಂಧದಲ್ಲಿ ಅಡಿವೆಪ್ಪನವರೊಂದಿಗೆ ಸಂಪಾದಕರಾದ ಗಂಗಾಧರ ದೈವಜ್ಞ ಅವರು ನಡೆಸಿದ ಸಂದರ್ಶನ ವಿವರಗಳಿವೆ.

ಕೃತಿರೂಪಕ್ಕಿಂತ ಮೌಖಿಕವಾಗಿ ಹೆಚ್ಚಿನ ಜನಪ್ರಿಯತೆ ಪಡೆದ ಈ ಕಾವ್ಯವು ಮುಮ್ಮೇಳ ಹಿಮ್ಮೇಳಗಳಿಂದ ಮನಸ್ಸಿಗೆ ಮುದನೀಡುತ್ತದೆ. ಡೊಳ್ಳಿನ ಮೇಲೆ ಕೈ ಪೆಟ್ಟು ಹಾಕುತ್ತ ಮುಮ್ಮೇಳದವರು ಉತ್ಸಾಹದಿಂದ

ಶಿವನೇ ನಮ್ಮಯ ದೇವರ ಬಂದಾನ ಬನ್ನಿರೆ
ಸ್ವಾಮಿ ನಮ್ಮಯ ದೇವರ ಬಂದಾನ ಬನ್ನಿರೆ

ಎಂದು ಹಾಡುತ್ತ ಕಥೆಯನ್ನು ಎತ್ತರದ ಧ್ವನಿಯಲ್ಲಿ ಹಾಡುವ ಕಾವ್ಯವು ಕೇಳುಗರನ್ನು ಆಕರ್ಷಿಸುತ್ತದೆ. ಮೂರು ನಾಲ್ಕು ಮಾತ್ರೆಗಳ ಲಯ ಕಾವ್ಯದುದ್ದಕ್ಕೂ ಬಳಕೆಯಾಗಿದೆ. ತುಂಡಾದ ಪಂಕ್ತಿಗಳಿದ್ದರೂ ಸಂವಾದ ರೂಪದ ಅಭಿವ್ಯಕ್ತಿಗೆ ತೊಡಕಾಗಿಲ್ಲ. ಪ್ರತಿಪಾದವು ೩+೪ ಮಾತ್ರೆಯ ಗಣಗಳಿದ್ದು, ಕೊನೆಯ ಗಣ ವಿರಾಮದ ಕೊರತೆಯನ್ನು ತುಂಬಿಕೊಡುತ್ತದೆ. ಅದು ಹ್ರಸ್ವವಿದ್ದರೂ ದೀರ್ಘವಾಗಿ ಉಚ್ಚರಿಸಬೇಕಾಗುತ್ತದೆ. ಛಂದೋಗತಿಯಲ್ಲಿ ಏಕತಾನತೆಯನ್ನು ತಪ್ಪಿಸಿ ವೈವಿಧ್ಯದೊಂದಿಗೆ ಮಾಧುರ್ಯವನ್ನು ಅಳವಡಿಸಲಾಗಿದೆ. ಕಿತ್ತೂರು ಕರ್ನಾಟಕ ಪ್ರದೇಶ ಭಾಷೆಯಾದ ವ್ಯವಹಾರಿಕ ಶಿಷ್ಟ ಕನ್ನಡದಲ್ಲಿ ಕಾವ್ಯ ರೂಪ ಪಡೆದಿದೆ. ಉದಾಹರಣೆಗೆ

‘ಎಲ್ಲೋ ತೂರ್ಯಾನರೀ’ ‘ಉಣಿಸ್ಯಾನರೀ’ ‘ಎಪ್ಪಾ ಮಗನ’ ‘ಎಲ್ಲೋ ಮಗನ ಸೋಮರಾಯ’ ಗುರುತಿಸಬಹುದು. ವ್ಯಕ್ತಿನಾಮ-ಸ್ಥಳನಾಮಗಳು ಅನುಕರಣವಾಚಿ ಶಬ್ದಗಳನ್ನು ಹೊಂದಿವೆ. ‘ಭಕ್ತಿಗೆ ಎಂದ ಬರ್ತಿs ಯಾವ ಟಾಯಮಕ ಹೇಳಿ ಹೋಗ ತಮ್ಮ’ ಎಂಬ ಸಾಲಿನಲ್ಲಿ ಆಂಗ್ಲಪದ ಬಳಕೆಯಾದುದನ್ನು ಎಸ್.ಎಸ್.ಅಂಗಡಿ ಅವರು ಭಾಷಾ ಹಿನ್ನೆಲೆಯಲ್ಲಿ ಕಾವ್ಯವನ್ನು ಚರ್ಚಿಸಿದ್ದಾರೆ.[೧]

ಕಥಾಸಾರ

ಆನೆಗೊಂದಿ ಅರಸು ಮನೆತನದ ಕರಿಗೌಡನಿಗೆ ತುಕ್ಕಪ್ಪರಾಯ ಸೋಮರಾಯ ಎಂಬ ಇಬ್ಬರು ಮಕ್ಕಳು. ಮೊದಲನೆಯ ಮಗ ತುಕ್ಕಪ್ಪರಾಯನಿಗೆ ಅಮೃತಬಾಯಿಯನ್ನು, ಎರಡನೆಯ ಮಗ ಸೋಮರಾಯನಿಗೆ ಕನಕಾಬಾಯಿಯನ್ನು ಕೊಟ್ಟು ಮದುವೆ ಮಾಡುತ್ತಾರೆ. ಬಾರಾಮತಿಯಲ್ಲಿ ಸೋಮರಾಯ ತೇರಾಮತಿಯಲ್ಲಿ ತುಕ್ಕಪ್ಪರಾಯ ವಾಸವಾಗಿದ್ದರು. ಎರಡೂ ಪಟ್ಟಣಗಳ ಅರಸುದಾರಿಕೆಯನ್ನು ತುಕ್ಕಪ್ಪರಾಯನು, ಗೌಡಿಕೆಯನ್ನು ಸೋಮರಾಯನು ಒಪ್ಪಿಕೊಂಡಿದ್ದರು. ಅಣ್ಣತಮ್ಮಂದಿರು ೧೨ ವರ್ಷ ದಾಂಪತ್ಯ ಜೀವನ ನಡೆಸಿದರೂ ಅವರಿಗೆ ಮಕ್ಕಳ ಭಾಗ್ಯ ದೊರೆಯಲಿಲ್ಲ. ಸೋನಾಸಿದ್ಧರ ಹೇಳಿಕೆಯಂತೆ ತುಕ್ಕಪ್ಪರಾಯ ಹೆಂಡತಿಯೊಂದಿಗೆ ಬಿಲವಾಡದಲ್ಲಿ ತಪಸ್ಸನ್ನು ಮಾಡಲು ಭಕ್ತಿಗೆ ಮೆಚ್ಚಿ ಶಿವ-ಪಾರ್ವತಿಯರು ಕೊಟ್ಟ ಜಪಮಣಿ ಮತ್ತು ಮಾಣಿಕಮಣಿಯಿಂದ ಜಕ್ಕಪ್ಪ ಮತ್ತು ಮಾಳಿಂಗರಾಯ ಜನಿಸುತ್ತಾರೆ. ಮಾಳಪ್ಪನು ಬಸವಣ್ಣನ ಅವತಾರ ಎಂದು ಸೋನಾರಸಿದ್ಧರು ಹೇಳುತ್ತಾರೆ.

ಉಂಡಾಡಿ ಪದುಮಗೊಂಡ
ಎಂಬುವನೇ ಈ ಮಾಳಿಂಗರಾಯನ
ಮುಂದಿನ ಅವತಾರ
ಆದಿಕಾಲದಲ್ಲಿ ಬಸವಣ್ಣಾ

ಬಾಲಕ ಮಾಳಿಂಗರಾಯ ಎಲ್ಲ ಬಾಲಕರಂತೆ ಆಟವಾಡದೆ ಶಿವಸ್ಮರಣೆಯಲ್ಲಿ ಕಾಲ ಕಳೆಯುತ್ತಿದ್ದನು. ಮಾಳಿಂಗನ ಭಕ್ತಿಗೆ ಮೆಚ್ಚಿ ಆದಿಶೇಷ ತನ್ನ ಹೆಡೆಯಿಂದ ನೆರಳು ಕೊಡುವ ದೃಶ್ಯ ಕಂಡ ತಾಯಿಗೆ, ಮಗನು ಆದಿಶೇಷ ತನ್ನ ಮಿತ್ರನೆಂದು ಕೆಲವು ದಿನಗಳಲ್ಲಿ ತನ್ನ ಕೈಯಲ್ಲಿಯ ನಾಗಬೆತ್ತವಾಗಿ ಮಾಡಿಕೊಳ್ಳುತ್ತೇನೆಂದು ತಿಳಿಸುತ್ತಾನೆ. ಸತ್ತ ಮೀನುಗಳನ್ನು ನೀರಿನಲ್ಲಿ ಬಿಟ್ಟು ಆಟ ಆಡುವುದನ್ನು ಕಂಡ ಊರ ಜನರು, ಬಯ್ಯಲು ಅವುಗಳಿಗೆ ಪುನಃ ಜೀವ ತುಂಬಿ ನೀರಿಗೆ ಬಿಡುವನು. ಬರಗಾಲ ಬೀಳುವ ಮುನ್ಸೂಚನೆಯನ್ನು ಮಾಳಪ್ಪನಿಂದ ತಿಳಿದ ತುಕ್ಕಪ್ಪರಾಯ ಗೋವುಗಳ ರಕ್ಷಣೆಗಾಗಿ ನಾತೇಪೂತೇ ಕಡೆಗೆ ಹೊರಡುತ್ತಾರೆ. ಕೆಲದಿನಗಳ ನಂತರ ಕನೇರಿ ಅಲ್ಲಿಂದ ಹಿಪ್ಪಸಾರಂಗ ಗುಡ್ಡಕ್ಕೆ ಬರುತ್ತಾರೆ. ಅಲ್ಲಿ ನೀರು ಮೇವು ಸಮೃದ್ಧಿಯಾದ್ದರಿಂದ ಸೋನಾರಸಿದ್ಧರ ಸೇವೆ ಮಾಡುತ್ತ ಭೀಮಾನದಿಯ ದಡಕ್ಕೆ ಬಂದು ನಂತರ ಉಂಬರಜಂಬ ಹಟ್ಟಿಗೆ ಬರುತ್ತಾರೆ.

ಬೇಡನೊಬ್ಬ ಗೋವುಗಳನ್ನು ಕಳ್ಳತನ ಮಾಡಲು ಜಂಗಮ ವೇಷ ಧರಿಸಿ ಸೋಮರಾಯ ತುಕ್ಕಪ್ಪ ರಾಯರಲ್ಲಿಗೆ ಬರುತ್ತಾರೆ. ಸಹೋದರರ ಶೌರ್ಯವನ್ನು ಗುರುತಿಸಿದ ಬೇಡ ಕಳ್ಳತನ ಮಾಡಲು ಅವರ ಏಕಾಂತ ಸಮಯಕ್ಕಾಗಿ ಕಾಯುತ್ತಿರುತ್ತಾನೆ. ಬೇಡರಿಂದ ಆಕಳುಗಳನ್ನು ರಕ್ಷಿಸಲು ವಿಫಲನಾದ ತುಕ್ಕಪ್ಪರಾಯ ತನ್ನ ಬಾಣದಿಂದ ತಾನೇ ಹೊಡೆದುಕೊಂಡು ಬೀಳುತ್ತಾನೆ. ಶಿವನ ಸಲಗದ ಮೈಯಲ್ಲ ರಕ್ತಮಯವಾದುದನ್ನು ಕಂಡು ಕಣ್ಣವ್ವ ಅಳಲು ಸೋಮರಾಯ ಆಪತ್ತು ಸಂಭವಿಸಿದೆಯೆಂದು ಸಂಗಮನಾಥ ಮುರಿಗೆ ಬರುತ್ತಾನೆ. ಸಾಯುವಂಥ ಸಮಯದಲ್ಲೂ ತನ್ನ ಏಳ್ನೂರು ಗೋವುಗಳನ್ನು ನೋಡಿ ಸಾಯುತ್ತಾನೆ. ಕುಟುಂಬದವರ ಪ್ರಲಾಪದಿಂದ ಹೃದಯ ಕದಡುವ ಭಾವವು ಚಂದ್ರಮತಿ ಪ್ರಲಾಪದ ತಿರುಕೊಳವಿನಾಚಿ ಪ್ರಸಂಗವನ್ನು ನೆನಪಿಸುತ್ತದೆ.

ಕೇಳಿರಿ ಸರ್ವಜನಾ
ತುಕ್ಕಪ್ಪರಾಯನ ಕಥನಾ
ಉಂಬೈ ಠಾಣೆಕ ಹಟ್ಟಿ ಒಗೆದಾನಾಽ
ಬಾಣ ಹೊಡಿಕೊಂಡ ಬಿಟ್ಟೊ ತನ್ನ ಪ್ರಾಣಾಽ
ಅಳತಾನ ಸೋಮರಾಯ
ಕಣ್ಣೀರ ಸುರಸ್ಯಾನಾ
ಕಳಕೋತ ಕರಕೋತ

ಸೋನಾರಿಸಿದ್ಧರು ಬಾರಮತಿಯಲ್ಲಿ ಅಮೃತಬಾಯಿ ಪ್ರಾಣ ಬಿಟ್ಟಿರುವುದಾಗಿ ತಿಳಿಸುತ್ತಾರೆ. ತಂದೆಯ ವಚನದಂತೆ ಜಕ್ಕಪ್ಪ ಮಾಳಪ್ಪ ಬ್ಯಾಡರ ಬೆನ್ನು ಹತ್ತಿ ಗಜೇಂದ್ರಗಡ, ಅಮ್ಮಿನಗಡ, ಪಾನಾಳಗಡ ತಿರುಗುತ್ತಾ ಮಂಗ್ಯಾನಹಟ್ಟಿಯಲ್ಲಿ ಎಲ್ಲ ಬ್ಯಾಡರ ರುಂಡಗಳನ್ನು ಕಡಿದು ಸಾಲು ದವಣಿ ಕಟ್ಟಿ ತಂದೆಯ ಸಮಾಧಿಗೆ ತರುತ್ತಾರೆ. ಉಮ್ರಜದಲ್ಲಿರುವ ತಂದೆಯ ಗುಡಿಯ ಮುಂದೆ ತಗ್ಗಿನಲ್ಲಿ ಮುಚ್ಚಿ ಅದರ ಮೇಲೆ ಚಕ್ರಗಟ್ಟಿ ಕಟ್ಟುತ್ತಾರೆ. ಅದಕ್ಕೆ ರುದ್ರಗಟ್ಟಿ ಎಂದು ಹೆಸರಿಟ್ಟು ಮಾಳಿಂಗರಯ ಗುರು ಬೀರಯ್ಯನೊಂದಿಗೆ ಹೊರಡುತ್ತಾನೆ.

ಮಾಳಿಂಗರಾಯನ ಮೊದಲ ಪತ್ನಿ ಲಕ್ಷ್ಮೀ ಐಕ್ಯವಾದ ತರುವಾಯ ಈರವ್ವ ಶರಣೆಯನ್ನು ಮದುವೆ ಯಾಗುತ್ತಾನೆ. ಈರವ್ವ ತನ್ನ ಜಡೆಯಿಂದ ಉದುರಿದ ನಾಲ್ಕು ಮಲ್ಲಿಗಿ ಹೂಗಳನ್ನು ಸೇವಿಸಿ ಮಕ್ಕಳ ಭಾಗ್ಯ ಪಡೆಯುತ್ತಾಳೆ.

ನಾಲ್ಕು ಮಲ್ಲಿಗಿ ನಾಲ್ಕು ಮಂದಿ ಧರಮರ
ಹುಟ್ಟಿ ಬಂದಾರಮ್ಮೋಽಽ
ಕಣಮುತ್ತಾ ಸೋಮರಾಯ
ಹುಟ್ಟಿದರೊ ಧರಮೊಽ

ಮಾಳಿಂಗರಾಯನ ನಾಲ್ಕು ಮಕ್ಕಳಿಂದ ಬೆಳೆದ ಸಂತಲೆ ಹುಲಜಂತಿಯಲ್ಲಿದ್ದಾರೆ. ಮುದ್ದುಗೌಡ ಕೆಂಚಮಾಳಪ್ಪ ರೂಪಾಜಿ, ಕೆಜೇಣಕಪ್ಪ, ಗೌಡಪ್ಪ ಕೂರಲೆ, ಬೀರಮುತ್ಯಾ ಬ್ರಹ್ಮಚಾರಿ ಮುಂತಾದವರಿಂದ ವಂಶ ವೃಕ್ಷ ಬೆಳೆಯಿತು.

ವಿಮರ್ಶೆ

ಶೇಕಡಾ ೯೦ರಷ್ಟು ಕುರುಬರ ಗುರು ಒಡೆಯರ ಕುಟುಂಬಗಳು ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿವೆ. ಶೇಕಡಾ ೩೦ರಷ್ಟು ಕುಟುಂಬಗಳು ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ಭಾಗಗಳಲ್ಲಿ ವಾಸವಾಗಿದ್ದಾರೆ. ಕಾವ್ಯದಲ್ಲಿ ಅಮೋಘಸಿದ್ಧ, ಬರಗಾಲಸಿದ್ಧ, ಸೋನಾರಿಸಿದ್ಧ, ದಿಲ್ಲಿ ಬಾದಶಹ, ಅಮಲಸಿದ್ಧ, ಶಿವಗಿನಿಸಿದ್ಧ, ಗೋರಖನಾಥ ಮೊದಲಾದ ಚಾರಿತ್ರಿಕ ವ್ಯಕ್ತಿಗಳು ಬರುತ್ತಾರೆ. 'ವೀರಮಾಳಿಂಗ' ಎಂಬ ನಾಮವಿಶೇಷಣ ಹೊಂದುವಲ್ಲಿ ಇವರೆಲ್ಲರೂ ಪೂರಕ ವ್ಯಕ್ತಿಗಳಾಗಿದ್ದಾರೆ. ಕೆಲವು ಸಾರಿ ಶಿವನು ಸಹ ಯುದ್ಧದಲ್ಲಿ ಸೋಲುತ್ತಾನೆ.

ಸಿದ್ಧ, ವಾರಕರಿ, ಮಹಾನುಭಾವ, ನಾಥ, ವೈಷ್ಣವ, ಶೈವ, ಸಂತ ಮೊದಲಾದ ಮತ ಪಂಥಗಳು ಕಾವ್ಯದುದ್ದಕ್ಕೂ ಬೇರುಬಿಟ್ಟಿವೆ. ಈ ಕಾವ್ಯ ಕೆಲವು ಪ್ರಮುಖ ವಿಷಯಗಳನ್ನು ತಿಳಿಸುತ್ತದೆ. ೧೦ನೆಯ ಶತಮಾನದ ಸಿದ್ಧ ಸುಪ್ರದಾಯದ ನಂತರ ೧೨ನೆಯ ಶತಮಾನದಲ್ಲಿ ವಾರಕರಿ, ಮಹಾನುಭವ, ನಾಥ, ಶೈವ, ವೀರಶೈವ, ವೈಷ್ಣವ ಮತಗಳು ಅನುಕ್ರಮವಾಗಿ ಪ್ರಾಭಲ್ಯವನ್ನು ಪಡೆಯುತ್ತಾ ಬಂದಿವೆ. ರಾಮಾನುಜರ ಕಾಲದಲ್ಲಿ ಕಾಳಾಮುಖರು, ಶಂಕರಾಚಾರ್ಯರ ಕಾಲದಲ್ಲಿ ಕಾಪಾಲಿಕರ ಸಂಬಂಧಗಳನ್ನು ಚರಿತ್ರೆಯಿಂದ ತಿಳಿಯಬಹುದು. ಪಾಶುಪತ ಸಿದ್ಧಾಂತ ಅನುಸರಿಸುವ ನಾಲ್ಕು ಸುಪ್ರದಾಯ ಕುರಿತು ರಾಮಾನುಜರು ಬಣ್ಣಿಸಿದ್ದಾರೆ. ಅವು ಕಾಳಾಮುಖ, ಪಾಶುಪತ, ಶೈವ ಮತಗಳಾಗಿವೆ.

ಹರಿ ನುತ್ತು ಹರರಲ್ಲಿ ಯಾರು ಹೆಚ್ಚು ಎನ್ನುವ ವಾದದಲ್ಲಿ ಹರನೇ ದೊಡ್ಡವ ಎಂಬ ನಿರ್ಧಾರದಲ್ಲಿ ಶೈವ ಮತದ ಮೇಲ್ಮೆಯನ್ನು ಸಾಧಿಸಲಾಗಿದೆ. ತಳ ಸಮುದಾಯಗಳು ಅಲಕ್ಷದಿಂದ ಚಲಿಸುವ ದಾರಿಯಾಗಿದೆ. ಪಾಂಡುರಂಗ-ಮಾಳಪ್ಪರ ಸಂಬಂಧಗಳು ವೈಷ್ಣವ ಮತದತ್ತ ಆಕರ್ಷಿತರಾದ ಜನಸಾನ್ಯರಿಗೆ ವಿಠಲನಿಗಿಂತ ಶಿವನೇ ಶ್ರೇಷ್ಠ ಎಂದು ಸಾರುವುದಾಗಿದೆ. ಜ್ಞಾನದಾಹಕ್ಕಾಗಿ ಪಾಂಡುರಂಗ ಮಾಳಪ್ಪನಲ್ಲಿಗೆ ಬರುವದು, ಬೊಬ್ಬಲಿ ವನದಲ್ಲಿ ಮಾಳಪ್ಪನ ಭೇಟಿಯ ಕುರುಹಾಗಿ ನೆಲಸುವದು, ಹುಲಜಂತಿಯಲ್ಲಿ ಮಾಳಪ್ಪನ ಸಮಾಧಿ ಹತ್ತಿರ ವಿಠಲನ ದೇವಸ್ಥಾನ ಇರುವುದು, ಮಾಳಪ್ಪನ ಕಾರ್ಯ ವೈಖರಿಯಿಂದ ಹುಚ್ಚನಾದ ಪಾಂಡುರಂಗ, ಲಿಂಗಕ್ಕಾಗಿ ಮಾಳಪ್ಪನನ್ನು ಪೀಡಿಸುವ ಪಾಂಡುರಂಗ

> ಲಿಂಗ ನೀನು ಕೊಡಬೇಕು ಅಂದಾರಾ
> ಲಿಂಗ ಕೊಡದಿದ್ರೆ ನಾನು ಹೋಗೋದಿಲ್ಲ
> ಕೇಳಪ್ಪ ಆಂದಾರಾ

ಹೀಗೆ ಶೈವ ಮತ್ತು ವೈಷ್ಣವ ಧರ್ಮಗಳ ಮುಖಾಮುಖಿ ಪ್ರಸಂಗಗಳನ್ನು ಸೃಷ್ಟಿಸಿ ಕೊನೆಗೆ ಶೈವ ಮತದ ಮೇಲ್ಮೆಯನ್ನು ಸಾಧಿಸಲಾಗಿದೆ.

ಚಾರಿತ್ರಿಕ ಕ್ಷೇತ್ರಗಳಾದ ಬೊಬ್ಬಲಿವನ, ಸಿರಡೋಣ, ಬಾರಾಮತಿ, ತೇರಾಮತಿ, ಹುಲಜಂತಿ, ಹುನ್ನೂರು ನಾರಾಯಣಪುರ ವೊದಲಾದವು ಹಾಲುಮತದವರ ಪಾರಂಪರಿಕ ಧಾರ್ಮಿಕ ಸ್ಥಳಗಳಾಗಿವೆ. ಬೀರಪ್ಪನಿರುವಲ್ಲೆಲ್ಲ ಮಾಳಿಂಗನ ಪ್ರಸ್ತಾಪ ಇದ್ದೇ ಇರುತ್ತದೆ. ವಿಶೇಷವಾಗಿ ವಿಸ್ತಾರವಾದ ಮಾಳಿಂಗರಾಯನ ಕಾವ್ಯದಿಂದ ಜೀವನ ವೃತ್ತಾಂತ ತಿಳಿಯಬಹುದು. ಜನಪದ ಹಾಲುಮತ ಮಹಾಕಾವ್ಯದಲ್ಲಿ ಮಾಳಪ್ಪ ಬಂದಿದ್ದರೂ ನಾಥರು, ಸಿದ್ಧರು, ಪಾಂಡವರ ವಿವರಗಳು ಕಡಿಮೆ ಇವೆ.

ಮಾಳಪ್ಪನ ಪೂರ್ವಜರು ಜೋಡಿ ಜೋಡಿಯಾಗಿಯೇ ಹುಟ್ಟಿದ್ದಾರೆ. ಕರಿಗೌಡ-ಕೆಂಚಗೌಡ, ತುಕ್ಕಪ್ಪ-ಸ್ವಾಮಿರಾಯ, ಜಕ್ಕಪ್ಪ-ಮಾಳಪ್ಪ ಇಬ್ಬಿಬ್ಬರು ಗಂಡುಮಕ್ಕಳು ಜನಿಸುವ ಪರಿಕ್ರಮವನ್ನು ಈ ಕಾವ್ಯ ಹೇಳುತ್ತದೆ. ಆದರೆ ಮಾಳಿಂಗರಾಯನ ನಂತರದ ತಲೆಮಾರಿನಲ್ಲಿ ಬದಲಾವಣೆ ಇದೆ. ಮಾಳಿಂಗರಾಯನಿಗೆ ನಾಲ್ಕು ಜನ ನಂತರ ಅವರಿಗೆ ಏಳು ಜನ ಹೀಗೆ ಸಂಖ್ಯೆ ಹೆಚ್ಚುತ್ತಾ ವಂಶಾಭಿವೃದ್ಧಿ ಹಬ್ಬಿದೆ.

ಮಾಳಿಂಗರಾಯನ ಕಾಲದ ಬಗ್ಗೆ ಖಚಿತವಾದ ಮಾಹಿತಿ ಲಭ್ಯವಿಲ್ಲವಾದರೂ ೧೨-೧೩ನೆಯ ಶತಮಾನದಲ್ಲಿ ಜೀವಿಸಿರುವ ಸಾಧ್ಯತೆಗಳಿವೆ. ಮಾಳಪ್ಪನು ಬಸವಣ್ಣನ ಅವತಾರವೆಂದು ಜನಪದರು ದೈವತ್ವಕ್ಕೇರಿಸಿ ಹಾಡಿದ್ದಾರೆ. ಮಾಳಪ್ಪನ ಅಜ್ಜಂದಿರು ತಂದೆ ಗೋರಖನಾಥ ಮತ್ತು ಸೋನಾರಸಿದ್ಧರ ಜೊತೆ ಸಂಬಂಧವನ್ನಿಟ್ಟುಕೊಂಡಿದ್ದರು. ಮಾಳಪ್ಪ ಅಮೋಘಸಿದ್ಧನೊಂದಿಗೆ ಸಂಘರ್ಷ ಮಾಡಿದ್ದಾನೆ. ಗೋರಖನಾಥರಿಂದ ವಿದ್ಯೆ ಕಲಿಯುತ್ತಾನೆ. ತಮ್ಮ ಸಾಕುಪ್ರಾಣಿಗಳಿಗಾಗಿ ಬಾರಾಮತಿ ತೇರಾಮತಿ ತ್ಯಜಿಸಿ ಅಲೆಮಾರಿ ಜೀವನದಲ್ಲಿ ನಾತ, ಜೋಗಿ, ಸಿದ್ಧರ ಜೊತೆ ಸಂಬಂಧ ಬೆಳೆಸಿಕೊಂಡವರು. ಸ್ವಾಮಿರಾಯ ಮತ್ತು ತುಕ್ಕಪ್ಪರಾಯರಿಗೆ ಸೋನಾರಿಸಿದ್ಧ ಗಾರುಡಿಗ ವಿದ್ಯೆ ಕಲಿಸಿಕೊಡುತ್ತಾನೆ. ಸಂರಕ್ಷಣೆಗಾಗಿ ಗೋರಖನಾಥ ಆಯುಧಗಳನ್ನು ಕೊಡುತ್ತಾನೆ.

ಇಜೇರಿ ಮಲಕವ್ವನ ಭಕ್ತರಾದ ಇವರು ಪಾರಂಪರಿಕವಾಗಿ ಮಾತೃ ಆರಾಧಕರು. ತಮ್ಮ ಅಲೆಮಾರಿ ಜೀವನದಲ್ಲಿ ಈ ದೇವತೆಯನ್ನು ಬುಟ್ಟಿಯಲ್ಲಿ ಹಾಕಿಕೊಂಡು ಹೋಗುತ್ತಿದ್ದರು. ತಾವು ಎಲ್ಲಿ ವಾಸಿಸುತ್ತಿದ್ದರೊ ಅಲ್ಲಿ ತಮ್ಮ ದೈವಗಳನ್ನು ಪೂಜಿಸಿತ್ತಿದ್ದರು.

ಇಜೇರಿ ಮಲಕವ್ವನೆ ಮನೆಯ ದೇವರಿದ್ವಾಳೆ
ಗೋಪಾಳ ಬುಟ್ಟಿ ಒಳಗೇನ ಇಜೇರಿಯ ಮಲಕವ್ವನೆ
ಇಜೇರಿಯ ಮಲಕವ್ವನೆ ಗೋಪಾಳ ಬುಟ್ಟಿ ಒಳಗೇನ
ಭವುಳಿ ನಾಡಾದ ಗೌಳೇರು ತಲಿಮ್ಯಾಲ ಹೊರವುತಾರೇನ

ಈ ಮೇಲಿನ ಜನಪದ ಹಾಲುಮತ ಮಹಾಕಾವ್ಯದಿಂದ ಇಜೇರಿ ಮಲಕವ್ವನ ಪ್ರಾಮುಖ್ಯತೆಯನ್ನು ಗುರುತಿಸಬಹುದು. ಸ್ವಾಮಿರಾಯ ತುಕ್ಕಪ್ಪರಾಯ ಬೇಡ ಜನಾಂಗದೊಂದಿಗೆ ಸಂಘರ್ಷಕ್ಕಿಳಿದಿವೆ. ಸ್ವಾಮಿರಾಯ ದೆಹಲಿಯ ಸುಲ್ತಾನರನ್ನು ಸೋಲಿಸುತ್ತಾರೆ. ಆದರೆ ಅದು ದೆಹಲಿ ಆಗಿರದೆ, ಹುಲಜಂತಿ ಆಗಿರುವ ಸಾಧ್ಯತೆಯನ್ನು ಸುಲ್ತಾನರ ಆಡಳಿತ ಪ್ರದೇಶಕ್ಕೆ ಒಳಪಟ್ಟ ಬಾರಾಮತಿ ಮತ್ತು ತೇರಾಮತಿ ಪಡೆಯಲು ನಡೆಸಿದ ಹೋರಾಟವಾಗಿರಬಹುದೆಂದು ಡಾ. ರಹಮತ ತರೀಕೆರೆ ಅವರು ಅಭಿಪ್ರಾಯಪಟ್ಟಿದ್ದಾರೆ.[೨] ಶಿಷ್ಯನ ವೀರತನ, ಗುರುನಿಷ್ಠೆ, ಪ್ರೀತಿಯನ್ನು ಸಮಾಜಕ್ಕೆ ತೋರಿಸಲು ಗುರು ಆಗಾಗ ಕೆಲವು ಪಂಥಗಳನ್ನು ಪರೀಕ್ಷೆಗಳನ್ನು ಒಡ್ಡುತ್ತಾನೆ. ಕನಕದಾಸನಿಗೆ ಗುರು ವ್ಯಾಸರಾಯರು ಪರೀಕ್ಷೆಗಳನ್ನು ಸೃಷ್ಟಿಸಿದಂತೆ, ಬೀರಪ್ಪ ಮಾಳಿಂಗನಿಗೆ ಹುಲಿ ಹಾಲನ್ನು ತರಲು ಹುಳ ಮುಟ್ಟದ ಪುಷ್ಪ, ಕಪ್ಪೆ ಕಲಕದ ಜಲ ತರಲು ಹೇಳುತ್ತಾನೆ. ಆ ಸಂದರ್ಭದಲ್ಲಿ ಅನೇಕ ತೊಂದರೆಗಳನ್ನು, ಸಮಸ್ಯೆಗಳನ್ನು ತಾನೇ ಸೃಷ್ಟಿಸುತ್ತಾನೆ. ಅವನ್ನೆಲ್ಲ ದಾಟಿಬಂದಾಗ ತನ್ನ ಸಮಾನ ಗದ್ದುಗೆಯಲ್ಲಿ ಸ್ಥಾನ ಕೊಡುತ್ತಾನೆ. ಈ ಐತಿಹ್ಯದ ಪ್ರತೀಕವಾಗಿ ಸಿರಿಡೋಣದಲ್ಲಿ ಗುರುಶಿಷ್ಯರ ಗದ್ದುಗೆ ಇದೆ.

ಅಮೋಘಸಿದ್ಧ ತಾನೇ ಶ್ರೇಷ್ಠಭಕ್ತನೆಂಬ ಅಹಂಕಾರ ಮುರಿಯಲು ಬೀರಪ್ಪ ಶಿಷ್ಯ ಮಾಳಿಂಗನನ್ನು ಕಳುಹಿಸಿ ಸೋಲಿಸುತ್ತಾನೆ. ಸಿದ್ಧಾಟಿಕೆಗಳಿಂದ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲವೆಂದು ಬದುಕಿಗಾಗಿ ಜೀವನಕ್ಕಾಗಿ ಅಮೋಘಸಿದ್ಧ ಮಾಳಪ್ಪನಲ್ಲಿದ್ದ ಐದು ಕುರಿಗಳನ್ನು ಕೇಳಿ ಪಡೆಯುತ್ತಾನೆ. 'ಸಿದ್ಧ ಪಂಥ'ವು 'ನಾಥ ಪಂಥ'ದತ್ತ 'ಬಂಢಾರ ಸಂಸ್ಕೃತಿ' 'ವಿಭೂತಿ ಸಂಸ್ಕೃತಿ'ಯತ್ತ ಆಕರ್ಷಿತವಾಗಿರುವ ಎರಡು ಪಂಥಗಳಲ್ಲಿಯ ಮುಖಾಮುಖಿ ಪ್ರಕ್ರಿಯೆ ಗುರುತಿಸಬಹುದು. ಮಾಳಪ್ಪನನ್ನು 'ಭಂಡಾರದ ಒಡೆಯ' ಎಂದು ಕರೆಯುತ್ತಾರೆ. ಆಳುವ ಸಂಪ್ರದಾಯಗಳ ಕಪಿಮುಷ್ಠಿಯಿಂದ ಬಿಡುಗಡೆ ಪಡೆಯಲು ಸಣ್ಣಪುಟ್ಟ ಸಮುದಾಯಗಳು ತಮ್ಮ ಸಂಸ್ಕೃತಿ ಸಂಸ್ಕಾರಗಳ ರಕ್ಷಣೆಗಾಗಿ ತಮ್ಮ ಜನಾಂಗದ ನಾಯಕರನ್ನು ಮೇಲ್ವರ್ಗದರೊಂದಿಗೆ ಪ್ರತಿಸ್ಪರ್ಧೆಗಿಳಿಸುವ ಕ್ರಿಯೆಯಲ್ಲಿ ತೊಡಗಿದವು. ಪ್ರಬಲ ಸಮುದಾಯಗಳು ಪೌರಾಣಿಕ ವ್ಯಕ್ತಿಗಳನ್ನು ಚಾರಿತ್ರಿಕ ವ್ಯಕ್ತಿಗಳಾಗಿ ರೂಪಿಸಿದರೆ, ಇದಕ್ಕೆ ವಿರುದ್ಧವಾಗಿ ಉಪಸಮುದಾಯಗಳು ತಮ್ಮ ನಾಯಕರನ್ನು ಚರಿತ್ರೆಯಿಂದ ಪೌರಾಣಿಕತೆಯನ್ನು ಸೇರಿಸಿ ವಿಜೃಂಭಿಸುತ್ತಾರೆ. ಅವರನ್ನು ದೈವತ್ವಕ್ಕೇರಿಸಿ ಪೂಜಿಸುತ್ತಾರೆ. ಇದಕ್ಕೆ ಮಾಳಿಂಗರಾಯನ ಕಾವ್ಯವು ಹೊರತಾಗಿಲ್ಲ. ಮಾಳಿಂಗನನ್ನು ಬಸವಣ್ಣನ ಏಳನೆಯ ಅವತಾರ ಜಕ್ಕಪ್ಪನೆಂದು ಈ ಕಾವ್ಯ ನಿರೂಪಿಸಿದೆ.

ಪಶುಪಾಲನೆ ಮತ್ತು ಕೃಷಿಯನ್ನೇ ಜೀವನಾಧಾರವಾಗಿ ಹೊಂದಿ ತಮ್ಮ ಪ್ರಾಣಗಳಿಗಾಗಿ ಎಂಥ ತ್ಯಾಗಕ್ಕೂ ಸಿದ್ಧರಿದ್ದರು. ಅರಸುತನದ ಸವಿಯನ್ನು ಅನುಭವಿಸಿಯೂ ಕಷ್ಟಕ್ಕೆ ಹೆದರದೆ ಅಲೆಮಾರಿಯಾದರು. ಕಾವ್ಯದುದ್ದಕ್ಕೂ ಜಕ್ಕಪ್ಪ-ಮಾಳಪ್ಪ ಸೋಮರಾಯ ತುಕ್ಕಪ್ಪರಾಯ ಕಣ್ಣವ್ವ ಅಮೃತಮತಿ, ಸಿದ್ಧರು, ದೇವತೆಗಳು

ನಾನಾ ಪರೀಕ್ಷೆಗಳಿಗೆ ಒಳಪಟ್ಟು ಅವರಲ್ಲಿಯ ದೈವ ಶಕ್ತಿಯನ್ನು ಪ್ರಕಟಗೊಳಿಸುವುದೇ ಈ ಕಾವ್ಯದ ಮುಖ್ಯ ಉದ್ದೇಶವಾಗಿದೆ.

ಅನೇಕ ಸಾಹಸಗಳನ್ನು ಮಾಡುತ್ತ 'ವೀರ' ಎಂಬ ವಿಶೇಷಣ ಹೊಂದಿ ವೀರಮಾಳಿಂಗರಾಯನಾಗುತ್ತಾನೆ. ಪಾಂಡವ ಕೋಟೆಗೆ ಹೋಗುವ ಸಂದರ್ಭದಲ್ಲಿ ಬೀರಪ್ಪ ಚೇಳು ಸೃಷ್ಟಿಸಿ ವಿಷದ ಮಳೆ ಸುರಿಸುತ್ತಾನೆ. ಈ ಸಮಸ್ಯೆಗಳನ್ನು ನಿವಾರಿಸಿ ಮಾಳಪ್ಪ ಹುಳುಮುಟ್ಟದ ಪುಷ್ಪ ತೆಗೆದುಕೊಂಡು ಬಂಧಿಸಲ್ಪಟ್ಟ ಸಿದ್ಧರನ್ನು ಬಂಧಮುಕ್ತರನ್ನಾಗಿಸಿ ಗುರುವನ್ನು ಪೂಜಿಸುತ್ತಾನೆ.

ಪ್ರತಿವರ್ಷ ದೀಪಾವಳಿ ಅಮಾವಾಸ್ಯೆಯಂದು ಹುಲಜಂತಿಯಲ್ಲಿ ಮಾಳಿಂಗರಾಯನ ಉತ್ಸವ ನಡೆಯುತ್ತವೆ. ರಾತ್ರಿ ಹನ್ನೆರಡು ಗಂಟೆಗೆ ಶಿವ ಪಾರ್ವತಿಯರು ಮಾಳಿಂಗರಾಯನ ಸಮಾಧಿ ಸ್ಥಳಕ್ಕೆ ಬಂದು ಮಾಳಪ್ಪನಿಗೆ ಭೇಟಿಯಾಗಿ ಪಟಗಾ ಸುತ್ತಿ ಮುಂಡಾಸ ಕೊಟ್ಟು ಹೋಗುತ್ತಾರೆಂಬ ನಂಬಿಕೆ ಬಲವಾಗಿದೆ. ದೈವಿಕ ಆವರಣದ ಈ ಆಚರಣೆಯು ವೈಜ್ಞಾನಿಕ ನೆಲೆಯಲ್ಲಿ ವಿಚಾರಿಸಲು ಎಷ್ಟರಮಟ್ಟಿನ ನಂಬಿಕೆ ಪಡೆಯಲು ಸಾಧ್ಯ. ಸಾಕ್ಷಾಧಾರಗಳು ಕಂಡುಹಿಡಿಯಲು ಸಾಧ್ಯವಾಗದಿದ್ದರೆ ಬಹುಶಃ ಇಂಥ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ.

೩. ಏಳೂರು ದೇವರ ಕಾಳಗ

ಮೌಖಿಕ ಸಾಹಿತ್ಯದ ಈ ಕೃತಿ ೧೯೭೪ರಲ್ಲಿ ರಾಜಪ್ಪ ದಳವಾಯಿ ಅವರಿಂದ ಸಂಪಾದಿತವಾಗಿದೆ. ಅರವತ್ತೊಂದು ಪುಟದ ಈ ಕಾವ್ಯ ಲಾವಣಿ ರೂಪದಲ್ಲಿ ಜನಪದರಲ್ಲಿ ಪ್ರಾಮುಖ್ಯತೆ ಪಡೆಯಲು ಕಾರಣವಾಗಿದೆ.

ಇದು ಒಂದು ಕುಲಕ್ಕೆ, ಒಂದು ಜಾತಿಗೆ, ಒಂದು ಬಳ್ಳಿಗೆ ಸಂಬಂಧಿಸಿದ ಕಾವ್ಯವಾಗಿದೆ. ಈ ಘಟನೆ ಹದಿನಾರನೇ ಹದಿನೇಳನೆ ಶತಮಾನದಲ್ಲಿ ನಡೆದಿರಬಹುದು. ಕ್ರಿ.ಶ. ೧೬೩೮-೧೬೪೪ರ ಅವಧಿಯಲ್ಲಿ ನಡೆದಿರಬಹುದಾದ 'ಪಿರಿಯಾಪಟ್ಟಣದ ಕಾಳಗ'ಕ್ಕೆ ಹೆಚ್ಚು ಸಮೀಪವಿರುವ ಕಾವ್ಯವಾಗಿದೆ. ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ ಪರಿಸರದಲ್ಲಿ ಈ ಘಟನೆ ಸಂಭವಿಸಿದೆ. ಕಥಾ ಪ್ರದೇಶವನ್ನು ವಿವರಿಸುವ ಸವಿವರವಾದ ರೇಖಾನಕ್ಷೆಯನ್ನು ಕತೆಯಲ್ಲಿ ಕಾಣಬಹುದು. ಘಟನಾ ಸ್ಥಳಗಳಾದ ತಾಳಿಕಟ್ಟೆ ಆನವೇರಿ, ದುಮ್ಮಿ ಬನಹಟ್ಟಿ, ವಡನಾಡು, ಬ್ಯಾಲನೂರು ಮೊದಲಾದವರನ್ನು ಈ ಕಾವ್ಯದಲ್ಲಿ ಗುರುತಿಸಬಹುದು. ಕಾವ್ಯ ವಾಚನ ಮಾಡಿದ ತಾಳೀಕಟ್ಟೆ ಕಲ್ಲವ್ವ, ರಾಯಕ್ಕ, ಸತ್ಯವ್ವ, ಸಿದ್ದವ್ವ ಅವರು ಇಂದು ಯಾರೂ ಬದುಕುಳಿದಿಲ್ಲ.

ಘಟನೆ ನಡೆದಂದಿನಿಂದ ಇಲ್ಲಿಯವರೆಗೂ ಆ ಕುಲದ ಸಂಪ್ರದಾಯ ಆಚರಣೆಗಳು ರೂಢಿಯಲ್ಲಿವೆ. ತಾಳೀಕಟ್ಟೆ ಮತ್ತು ದುಮ್ಮಿಯಲ್ಲಿ ಹೆಣ್ಣು ತೆಗೆದುಕೊಳ್ಳುವುದಾಗಲಿ, ಕೊಡುವುದಾಗಲಿ ರೂಢಿಯಲ್ಲಿ ಉಳಿದಿಲ್ಲ. ದುಮ್ಮಿಯ ಜನಾಂಗಕ್ಕೆ ನವಣೆ ಹೊಲದಲ್ಲಿ ಕದನವಾದ ಕಾರಣ, ಅವರಿಗೆ ಒಂದು ನಿಷೇಧ ಧಾನ್ಯವಾಗಿದೆ.

ಇಂದಿಗೂ ಬ್ಯಾಲನ ಕುರುಬರಲ್ಲಿ ಹಿರಿಯ ಮಗ ಅಥವಾ ಮಗಳಿಗೆ ಹನುಮ, ಹನುಮಿ ಎಂದು ಹೆಸರಿಡುವ ಪದ್ಧತಿ ರೂಢಿಯಲ್ಲಿದೆ.

'ಏಳೂರು ದೇವರ ಕಾಳಗ'ದ ವ್ಯಕ್ತಿಗಳನ್ನು ಜನಸಾಮಾನ್ಯರು ಪುರಾಣಕ್ಕೇರಿಸಿ ಪೂಜಿಸಿ ಗೌರವಿಸುತ್ತಿದ್ದಾರೆ. ಈ ಕಾವ್ಯವು ಕೆಲವು ಐತಿಹ್ಯಗಳನ್ನು ಹೊಂದಿದೆ. ಇದನ್ನು ದೇವಸ್ಥಾನದಲ್ಲಿ ಮಾತ್ರ ಹಾಡಬೇಕು. ಏಳೂರಿನ ಯಾವ ದೇವರಾದರೂ ಈ ಹಾಡನ್ನು ಕೇಳುತ್ತಿದ್ದರೆ ತನ್ನ ತೂಗೋ ಮಂಚದಲ್ಲೇ ತೂಗಾಡುತ್ತಿರುತ್ತದೆ. ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಏಳೂರು ದೇವರ ಜಾತ್ರೆ ಪ್ರಸಿದ್ಧಿ ಪಡೆದಿವೆ. ಹಲವು ಬುಡಕಟ್ಟುಗಳ ಸೌಹಾರ್ದತೆಯ ಸಂಕೇತವಾಗಿಯೂ ಈ ಜಾತ್ರೆ ವಿಶಿಷ್ಟವಾಗಿದೆ.

ಇದು ಪ್ರಾದೇಶಿಕ ಆಶೋತ್ತರಗಳನ್ನು ಒಳಗೊಂಡ ಜನಪದ ವೀರಕಾವ್ಯವಾಗಿದೆ. ಕುರುಬರ ದೇವರುಗಳು, ಒಳಪಂಗಡ, ವ್ಯಕ್ತಿ ಸ್ಥಳ ಘಟನೆಗಳು ಜೀವಂತಿಕೆ ಪಡೆದು ಒಂದು ಜಾತಿಯ ಸಾಂಸ್ಕೃತಿಕ ವಿಚಾರಗಳನ್ನು ಈ ಕೃತಿ ತಿಳಿಸುತ್ತದೆ.

ಒಂದು ಕಾಲದ ನಿಜ ಸಂಗತಿಯನ್ನು ಜನಪದೀಯತೆಯನ್ನು ಪಡೆದು ಲಾವಣಿ ರೂಪದಲ್ಲಿ ನಿರ್ಮಿಸಿರುವ ವ್ಯಕ್ತಿಯ ಸಾಂಸ್ಕೃತಿಕ ಕ್ರಿಯಾಶೀಲತೆಯನ್ನು ಗುರುತಿಸಬಹುದು. ಸಾರ್ವತ್ರಿಕ ಸತ್ಯವಾಗಿ ಮಾರ್ಪಟ್ಟು ಒಂದು ಜನಾಂಗೀಯ ಸಮಸ್ಯೆ ಸಾಂಸ್ಕೃತಿಕ ವಿಚಾರಗಳನ್ನು ಬಿಂಬಿಸುವ ಶಕ್ತಿ ಪಡೆದಿವೆ. ಕಾವ್ಯದಲ್ಲಿಯ ಕಿರಿಯರ ವೀರತೆಗೆ ದಳವಾಯಿ ತಿಮ್ಮಣ್ಣ, ಮಲಗಳ್ಳಿ ತಿಮ್ಮಣ್ಣ, ಶಿವನೆ ನಿಂಗಣ್ಣ ಸಾಕ್ಷಿಯಾಗಿದ್ದಾರೆ.

ಇದು ಒಬ್ಬ ವೀರನ ಕತೆಯಾಗಿರದೆ, ಹಲವು ವೀರರ ಕಥೆಗಳು ಬರುತ್ತವೆ. ಜನಾಂಗೀಯ ಸಮಸ್ಯೆಯು ಒಂದು ಸಾರ್ವತ್ರಿಕ ಸತ್ಯವಾಗಿ ಮಾರ್ಪಟ್ಟ ರಚನಾತಂತ್ರದಿಂದ ಬದುಕಿನ ಕಾಳಜಿಗಳು ಸ್ಪಷ್ಟವಾಗುತ್ತವೆ. ಧಾರ್ಮಿಕ ಸಂಪ್ರದಾಯ ಆಚರಣೆಗಳಲ್ಲಿ ಇದಕ್ಕೆ ತನ್ನದೇ ಆದ ಪರಂಪರೆ ಇದೆ. ಈ ಕಾವ್ಯವು ಧಾರ್ಮಿಕ ಅಂಶಗಳೊಂದಿಗೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಅಂಶಗಳು ಸೇರಿವೆ. ಈ ಲಾವಣಿಯಿಂದ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಅರಿಯಬಹುದು.

ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಏಳೂರು ದೇವರ ಜಾತ್ರೆ ಬಹಳ ವಿಶೇಷವಾಗಿದೆ. ಈ ವೀರ ಕಥೆಯ ಲಾವಣಿಯನ್ನು ದೇವಸ್ಥಾನದಲ್ಲಿ ಮಾತ್ರ ಹಾಡುವ ಸಂಪ್ರದಾಯವಿದೆ. ಇದನ್ನು ಹಾಡಿದರೆ ಏಳೂರಿನ ಯಾವ ದೇವರಾದರೂ ತನ್ನ ತೂಗೋ ಮಂಚದಲ್ಲಿ ತೂಗಾಡುತ್ತಿರುತ್ತದೆ ಎಂಬ ನಂಬಿಕೆ ಇದೆ. ಭೈರವ, ಮೈಲಾರ ದೇವರುಗಳು ಕಪಾಲಿ ಪಂಥದೊಂದಿಗೆ ಹೊಂದಿರುವ ಸಂಬಂಧ, ಕುರುಬರ ಬೀರನೇ ಆದಿಚುಂಚನಗಿರಿಯ ಭೈರವನಾಗಿ ಬದಲಾದ ಮತ್ತು ಕುರುಬರ ಮಾಳವ್ವನನ್ನು ವಿವಾಹವಾಗುವ ಮೊದಲಾದವುಗಳ ಚರ್ಚೆಯನ್ನು ಹೊಂದಿದೆ. ೧೯೭೫ರಲ್ಲಿ ಆದಿಚುಂಚನಗಿರಿಯಲ್ಲಿ ನಾಥ ಪಂಥದ ಹಿಡಿತದಿಂದ ತಪ್ಪಿಸಿ ಒಕ್ಕಲಿಗರ ವಶವಾದುದನ್ನು ಗಮನಿಸಬಹುದು. ಲಿಂಗಾಯತರು, ದಲಿತರು, ಬೆಸ್ತರು,

ಒಕ್ಕಲಿಗರು, ಕುರುಬರು ಮೊದಲಾದ ಜಾತಿಗಳು ನಾಥಸಿದ್ಧ ಸಂಪ್ರದಾಯಗಳೊಂದಿಗೆ ಹೊಂದಿದ ಸಂಬಂಧವನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ.

ವೀರ ಪ್ರಧಾನವಾದ ಈ ಕಥನ ಗೀತೆ ಏಳೂರಿಗೆ ಸಂಬಂಧಿಸಿದ ದೇವರುಗಳ, ಕುರುಬರ ೨೮ ಒಳಪಂಗಡಗಳ ಚರ್ಚೆಯನ್ನು ಹೊಂದಿದೆ. ಜನಪದ ವೀರಕಾವ್ಯದ ಊರು, ವ್ಯಕ್ತಿ, ಘಟನೆಗಳು ಹೊಸತಾಗಿವೆ. ಈ ಕೃತಿಯು ಒಂದು ಜನಾಂಗದ ಸಾಂಸ್ಕೃತಿಕ ವಿಚಾರಗಳನ್ನು ಪ್ರತಿಬಿಂಬಿಸುವುದರೊಂದಿಗೆ ಎರಡು ಒಕ್ಕಲುಗಳ ನಡುವಿನ ಸಂಘರ್ಷವನ್ನು ಬಿಂಬಿಸುತ್ತದೆ. ಇದು ಒಕ್ಕಲಿಗಾಗಿ ದೇವತೆಗಳು ಕಾದಾಡಿದ ವೀರಕಥೆಯಾಗಿದೆ ಎಂಬ ಅನೇಕ ಹೊಸ ವಿಚಾರಗಳನ್ನು ಚಂದ್ರಪ್ಪ ಅಜ್ಜಂಪುರರು "ಕುರುಬರ ಕುರುಹುಗಳು" ಎಂಬ ಕೃತಿಯಲ್ಲಿ ಚರ್ಚೆಗೆ ಒಳಪಡಿಸಿದ್ದಾರೆ.[೯]

ಕೆಲವು ಪ್ರಮುಖ ವಿಷಯಗಳನ್ನು ಒಳಗೊಂಡ ಈ ಕಾವ್ಯದಲ್ಲಿ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಅಂಶಗಳಿವೆ. ಇಡೀ ಕಾವ್ಯ ಒಂದೇ ಕಥೆಯಾಗದೆ ಅನೇಕ ಕಥೆಗಳ ಗುಚ್ಛದಂತಿದೆ. ಧಾರ್ಮಿಕ ಆಚರಣೆಗಳಲ್ಲಿ ಸಂಪ್ರದಾಯಗಳಲ್ಲಿ ತನ್ನ ಪರಂಪರೆಯನ್ನು ಉಳಿಸಿಕೊಳ್ಳುವಲ್ಲಿ ಸೇತುವೆಯಾಗಿದೆ. ವೀರರ ತ್ಯಾಗ ಬಲಿದಾನದ ಸಂಕೇತವಾಗಿದೆ.

ಆನವೇರಿ ಸಿದ್ದಯ್ಯ ಮತ್ತು ಬ್ಯಾಲನ ಕುರುಬರ ನಡುವಿನ ಕದನದ ವಿವರಗಳನ್ನು ಇಲ್ಲಿ ಕಾಣಬಹುದು. ಹೊನ್ನೆಬಾಗಿ ದಿಬ್ಬದ ಪಂಚಾಯತಿಯಲ್ಲಿ ಮೋಸದಿಂದ ಹಿರಿಯಯ್ಯನ ತಲೆ ತಗೆಯಲಾಗುತ್ತದೆ. ಇದು ರಾಜಕೀಯದ ಒಳನೋಟವನ್ನು ಬಿಂಬಿಸುವ ವಿಚಾರವಾಗಿದೆ. ಎರಡು ಒಳಪಂಗಡಗಳ ಒಳಜಗಳದ ವಿವರ ಹೊಂದಿದೆ. ಒಟ್ಟಾರೆ ಬ್ಯಾಲನ ಕುರುಬರನ್ನು ತಾಳೀಕಟ್ಟೆಗೆ ಮರಳಿ ತರುವ ವಿಚಾರವು ಇಲ್ಲಿ ಪ್ರತಿಪಾದಿತ ಗೊಂಡಿದೆ.

ಹೀಗೆ ಹಾಲಮತದ ಸಂಸ್ಕೃತಿ ಅಧ್ಯಯನ ಕೈಕೊಳ್ಳಲು ಮೌಖಿಕ ಆಕರಗಳು ಬಹುಮುಖ್ಯವಾಗುತ್ತಿವೆ. ಪುರಾಣ ಕಾವ್ಯಗಳಲ್ಲಿ ಹಾಲುಮತ ಸಮುದಾಯದ ಸಾಂಸ್ಕೃತಿಕ ವೀರರಾದ ಬೀರಪ್ಪ ಮಾಳಿಂಗರಾಯ, ರೇವಣಸಿದ್ಧ ಇಟ್ಟಪ್ಪ ಮೊದಲಾದವರ ಕಥನಗಳು ನಿರೂಪಗೊಂಡಿವೆ. ಇನ್ನು ಡೊಳ್ಳಿನ ಹಾಡುಗಳಂತೂ ಹಾಲುಮತಸ್ಥರ ಸಮಗ್ರ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತವೆ. ಈ ಹಾಡುಗಳ ಸಂಗ್ರಹ ಕಾರ್ಯ ಸಮಗ್ರವಾಗಿ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ನಾಡಿನಾದ್ಯಂತ ಡೊಳ್ಳಿನ ಕಲಾವಿದರನ್ನು ಹಾಡುಗಾರರನ್ನು ಸಂಪರ್ಕಿಸಿ, ಮೌಖಿಕ ರೂಪದಲ್ಲಿರುವ ಹಾಡುಗಳನ್ನು ಸಂಗ್ರಹಿಸಿ, ಕ್ರಮಬದ್ಧವಾಗಿ ಜೋಡಿಸಿ ಪ್ರಕಟಿಸಬೇಕಾದ ಅಗತ್ಯವಿದೆ. ಈಗಾಗಲೇ ಎಂ.ಎಸ್.ಸುಂಕಾಪುರ, ಶಿವಾನಂದ ಗುಬ್ಬಣ್ಣನವರ, ಜಿ.ಬಿ.ಖಾಡೆ, ಬಸವಗೌಡ ಪಾಟೀಲ, ಬಸವರಾಜ ನೆಲ್ಲಿಸರ, ಕೆ. ವಿರೂಪಾಕ್ಷಗೌಡ ಮೊದಲಾದವರು ಡೊಳ್ಳಿನ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಹೀಗಿದ್ದೂ ಈ ಸಂಗ್ರಹ ಕಾರ್ಯ ವ್ಯಾಪಕವಾಗಿ ಕೈಕೊಳ್ಳಬೇಕಾಗಿದೆ.

ಹಾಗೆಯೇ 'ಕುರುಬರ ಹೇಳಿಕೆಗಳು' ಸಹಿತ ಮೌಖಿಕ ರೂಪದಲ್ಲಿವೆ. ರೇವಣಸಿದ್ಧ, ಸಿದ್ಧರಾಮೇಶ್ವರ, ಅಮೋಘಸಿದ್ದೇಶ್ವರ, ಬೀರಪ್ಪ ಮಾಳಿಂಗರಾಯ ಮೊದಲಾದ ದೈವಗಳು, ಪೂಜಾರಿಗಳು, ಭಕ್ತರು ನಿರ್ದಿಷ್ಟ ಸಂದರ್ಭದಲ್ಲಿ ಹೇಳಿಕೆಗಳನ್ನು ನುಡಿಯುತ್ತಾರೆ. ಈ ಹೇಳಿಕೆಗಳು ಸಮಾಜದ ಮೇಲೆ ದಟ್ಟವಾದ ಪ್ರಭಾವವನ್ನು ಬೀರುತ್ತವೆ. ಮೈಲಾರದಲ್ಲಿ ಹೇಳುವ ಹೇಳಿಕೆಯನ್ನು ಲಕ್ಷಾನುಗಟ್ಟಲೆ ನೆರೆದ ಜನಸಮೂಹ ತದೇಕ ಚಿತ್ತದಿಂದ ಕೇಳುತ್ತದೆ. ಆ ಹೇಳಿಕೆಯ ಮೇಲೆ ಆ ವರ್ಷದ ಮಳೆಬೆಳೆಯ ಸ್ಥಿತಿಗತಿಯನ್ನು ನಿರ್ಧರಿಸಲಾಗುತ್ತದೆ. ಇನ್ನು ಸರೂರಿನಲ್ಲಿ ಮರುಳಸಿದ್ಧನ ತೂಗುದ್ನದಲ್ಲಿ ನಡೆಯುವ ಹಬ್ಬಗಳಲ್ಲಿ ಒಡೆಯರು ಹೇಳಿಕೆಗಳನ್ನು ಹೇಳುತ್ತಾರೆ. ಇಂಥ ಎಲ್ಲ ಹೇಳಿಕೆಗಳನ್ನು ಸಮಗ್ರವಾಗಿ ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸಿದಾಗ ಹಾಲುಮತ ಸಂಸ್ಕೃತಿಯ ಮೇಲೆ ಹೊಸ ಬೆಳಕು ಚೆಲ್ಲುವ ಸಾಧ್ಯತೆಗಳಿವೆ. ಅಂಥ ಸಾಧ್ಯತೆಗಳತ್ತ ಯುವ ಸಂಶೋಧಕರು ಅವಶ್ಯ ಗಮನಹರಿಸಬೇಕಾಗಿದೆ.

೪. ಮೈಲಾರಲಿಂಗನ ಕಾವ್ಯಗಳು

ಕುರುಬ ಸಮುದಾಯದ ಆರಾಧ್ಯ ದೈವಗಳಲ್ಲಿ ಮೈಲಾರಲಿಂಗನಿಗೆ ಅಗ್ರಸ್ಥಾನ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿ ಆರಾಧನೆಗೊಳ್ಳುತ್ತಿರುವ ಈತನನ್ನು ಕುರಿತಂತೆ ಮೌಖಿಕ ರೂಪದಲ್ಲಿ ಕಾವ್ಯ, ಹಾಡು, ಕಥೆಗಳು ಆಯಾ ಭಾಷೆಗಳಲ್ಲಿ ಪ್ರಚಲಿತದಲ್ಲಿವೆ. ಕನ್ನಡದಲ್ಲಿಯೂ ಕಾವ್ಯ, ಪುರಾಣ, ಹಾಡು, ಕಥೆಗಳ ರೂಪದಲ್ಲಿ ಮೈಲಾರಲಿಂಗನ ಕಥೆಯನ್ನು ಹೆಣೆಯಲಾಗಿದೆ. ಅವು ಹೀಗಿವೆ.

೧. ಮೈಲಾರಲಿಂಗನ ಪದಗಳು (ಸಂ. ಡಾ. ಎಂ.ಬಿ.ನೇಗಿನಹಾಳ)

೧೯೮೨ರಲ್ಲಿ ಡಾ. ಎಂ. ಬಿ. ನೇಗಿನಹಾಳ ಅವರು 'ಮೈಲಾರಲಿಂಗನ ಪದಗಳು' ಎಂಬ ಲಘು ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಕೃತಿಯನ್ನು ತಮ್ಮ ಅಜ್ಜಿ ಬಾಲಮ್ಮನಿಗೆ ಸಮರ್ಪಿಸಿದ್ದಾರೆ.

ಮೌಖಿಕ ರೂಪದ ಮೈಲಾರಲಿಂಗನ ಪದಗಳು ವಿಭಿನ್ನ ರೀತಿಯಲ್ಲಿ ಸಂಯೋಜಿಸಲ್ಪಟ್ಟಿವೆ. 'ಮೈಲಾರಲಿಂಗನ ಪದಗಳು' ಏಳೆ ಪ್ರಕಾರದ ಛಂದಸ್ಸನ್ನು ಹೊಂದಿವೆ. ಅಂಶ ಗಣ ಪ್ರಧಾನವಾದ ಬ್ರಹ್ಮ, ವಿಷ್ಣು, ರುದ್ರ ಗಣಗಳು ಆಗಾಗ ಬದಲಾವಣೆ ಹೊಂದುತ್ತವೆ. ಪದಗಳು ೬ ಸಾಲಿನ ಪಲ್ಲವಿಯನ್ನು ಹೊಂದಿವೆ. ಏಳು ಸ್ವಾಮಿ ಬೆಳಗಾದವೊ, ಇಂದು ನಿಮ್ಮನಿಗೆ ಸ್ವಾಮಿ ಬಂದ, ಯಾರ್‍ಯಾರ ನೆನಿಯಲಿ, ಮೈಲಾರಲಿಂಗ ಎಂತಾ ಸ್ವಾಮಿ ನೋಡೋ, ನೋಡಬನ್ನಿರೇ ಮೈಲಾರಲಿಂಗನ, ಪಾಲಕಿ ತಂದೇವಯ್ಯಾ, ಮಲನಾಡ ಪರಸೀಯ ಕಳಸ್ಯಾನೋ, ಕುದುರೆದ್ದು ಕುಣಿಯುತಾವ, ಮೈಲಾರ ಧೀರರ ಕೈಯಾಗ ಉರಿಲಾರೆ, ರೊಟ್ಟಿ ಬುತ್ತಿ ಸವಿಯ ಒಲಿದರ ಬರುವನವ್ವಾ, ಕುರುಬರ ಮಾಳವ್ವ, ಸ್ವಾಮಿ ಗುಡದಯ್ಯಗೆ ಬೆಳುಗ್ಯಾಳಿ ಮುಂತಾದ ಶೀರ್ಷಿಕೆಗಳನ್ನು ಹೊಂದಿದ ಪದಗಳು ಇಲ್ಲಿವೆ. ಇವರ ಇನ್ನೊಂದು ಕಾವ್ಯ 'ಮೈಲಾರ ಲಿಂಗನ ಕಾವ್ಯ'ವು ೧೯೯೭ರಲ್ಲಿ 'ಮುತ್ತಿನಹಾರ ಮಾಲಿಕೆ'ಯಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಕಟಿಸಲ್ಪಟ್ಟಿದೆ. ಅದು ಏಳಯ್ಯ

ಬೆಳಗಾದವೊ, ಮೈಲಾರಲಿಂಗಪ್ಪ, ತಿರುಪತಿ ತಿಮ್ಮಪ್ಪ, ಬ್ಯಾಡೋ ಕುರುಬರ ಸಂಗ, ಮಾಳವ್ವ, ಸ್ವಾಮಿ ಗುಡದಯ್ಯಗೆ ಬೆಳುಗ್ಯಾಳೆ, ಕೋಮಾಲಿ ಪದ, ಮಂಗಳಾರತಿ ಮೊದಲಾದ ವಿಷಯಗಳ ಕಥಾಂಶಗಳನ್ನು ಹೊಂದಿದೆ.

ಡಾ. ಎಂ.ಬಿ.ನೇಗಿನಹಾಳರ 'ಮೈಲಾರಲಿಂಗನ ಪದಗಳು' ಎಂಬ ಕೃತಿಯು ಮೈಲಾರಲಿಂಗನ ಮಹಿಮೆ ಮತ್ತು ಪವಾಡಗಳನ್ನು ಬಣ್ಣಿಸುವ ಹಾಡುಗಳಾಗಿವೆ. 'ಒಲಿದರೆ ಬರುವನವ್ವಾ' ಎಂಬ ಪದವು

> ಕಂಬ್ಳಿ ಅಂಗಿ ಗೊರವರ ನೋಡು ಕಂಚಿನ ದೋಣಿ ವಗ್ಗರ ನೋಡು
> ಮಿಂಚುವಾಗಿ ಕಾಣಿಸತಾರ ಕಬ್ಬಿಣ, ಸರಪಣಿ ನುಗ್ಗು ಮಾಡುತಾರ
> ಒಲಿದರು ಬರುವನವ್ವ (ಪುಟ ೨೫)

ಗೊರವನು ಶಿವನ ಸೇವಕನಾಗಿ ದೋಣಿಸೇವೆ, ಸರಪಣಿಸೇವೆ ಮುಂತಾದ ಸೇವೆಗಳನ್ನು ಮೈಲಾರನಿಗೆ ಸಲ್ಲಿಸುವುದನ್ನು ವಿವರಿಸುತ್ತದೆ. 'ಒಲಿದರೆ ಬರುವನವ್ವಾ' ಎನ್ನುವ ನುಡಿಯು ಶೀರ್ಷಿಕೆಯ ಅಂತ್ಯದವರೆಗೆ ಪುನರಾವರ್ತನೆಗೊಳ್ಳುತ್ತ ಕತೆಯು ಮುಂದುವರಿಯುತ್ತದೆ. ಉದಾಹರಣೆಗೆ ಯೋಳಕೋಟೇಳ ಕೋಟಿ, ನೋಡ ಬನ್ನಿರಿ ಮೈಲಾರಲಿಂಗನ, ಮರ್ತ್ಯದೊಳಗ ಮೈಲಾರದೇವರ ಪಾಲಕಿ ತಂದೇವಯ್ಯ, ಬಂಡೆಲ್ಲ ಬಂಗಾರವೋ, ಕುದುರೆದ್ದು ಕುಣಿತಾವ ಹೋಗತಾನ ಕರಿಯ ಮುಂತಾದವು ಬೇರೆ ಬೇರೆ ಪದಗಳಲ್ಲಿ ಪುನರಾವರ್ತನೆಯಾಗಿ ಬಳಕೆಗೊಂಡಿವೆ.

ಗಂಗಿ ಮಾಳವ್ವಳೊಂದಿಗೆ ಲಗ್ನವಾದದ್ದು, ತುಪ್ಪದ ಮಾಳವ್ವ(ಕುರುಬರ ಮಾಳವ್ವ)ಳನ್ನು ಪ್ರೇಮಿಸಿದ್ದು ದೇವಸ್ಥಾನದ ಗೊರವ ಗೊರವಿಯರ ಹರಕೆಗಳು, ಜಾತ್ರೆಗಳು ಇಂಥ ಅನೇಕ ಧಾರ್ಮಿಕ, ಪೌರಾಣಿಕ ಸಂಗತಿಗಳನ್ನು ಈ ಕೃತಿಗಳು ಪರಿಚಯಿಸುತ್ತವೆ.

೨. ಮೈಲಾರಲಿಂಗನ ಕಾವ್ಯ (ಸಂ. ಶ್ರೀ ಚಕ್ಕರೆ ಶಿವಶಂಕರ)

೧೯೮೭ರಲ್ಲಿ ಶ್ರೀ ಚಕ್ಕರೆ ಶಿವಶಂಕರರು ಕರ್ನಾಟಕ ಜಾನಪದ ಟ್ರಸ್ಟ್‌ನಿಂದ ಸಂಪಾದಿಸಿ ಪ್ರಕಟಿಸಿದ್ದಾರೆ. ಕುರುಬ ಕುಲದ ಗೊರವರ ಕೆಂಚಮಲ್ಲಯ್ಯನು ತನ್ನ ೬೦ನೆಯ ವಯಸ್ಸಿನಲ್ಲಿ ಹಾಡಿದ್ದಾನೆ. ಈತನು ಬೆಂಗಳೂರಿನ ಚೆನ್ನಪಟ್ಟಣ ತಾಲೂಕಿನ ಕರಿಯಪ್ಪನ ದೊಡ್ಡಿ ಗ್ರಾಮದವನು. ಸುಮಾರು ಮೂವತ್ತಕ್ಕೂ ಹೆಚ್ಚು ಧಾರ್ಮಿಕ ಕಾವ್ಯಗಳನ್ನು ತನ್ನ ವಾದ್ಯಗಳಾದ ಕೊಳಲು ಡಮರುಗಳೊಂದಿಗೆ ಹಾಡಿದ್ದಾನೆ.

ಈ ಕಾವ್ಯವು ೨೫ ರೂಪದ ಧಾಟಿಗಳನ್ನು ಹೊಂದಿ ೧೯೫೦ ಸಾಲುಗಳಲ್ಲಿ ಕಥೆಯು ಹಂತಹಂತವಾಗಿ ಬೆಳೆದಿದೆ. ಹಿಮ್ಮೇಳದವರು ಪ್ರತಿಸಾಲಿನೊಂದಿಗೆ 'ಮೈಲಾರು ಮೈಲಾರು ಮಲ್ಲಣ್ಣ' ಎಂಬ ನುಡಿಯನ್ನು ಹಾಡುತ್ತಾರೆ. ಕಾವ್ಯವು ನಡುನಡುವೆ ವಚನ ರೂಪದ ಮುಂದು ವರಿಕೆಯ ಕಥಾಸಾರವನ್ನು ಹೊಂದಿದೆ.

ಗೊರವರ ಕೆಂಚಮಲ್ಲಯ್ಯನು ಹಾಡಿದ ಕಾವ್ಯದಲ್ಲಿ ಶಿವನನ್ನು ಸ್ತುತಿಸುತ್ತಾ ರುದ್ರಮುನಿ ಮತ್ತು ಅಲ್ಲಮಪ್ರಭುವಿನ ವಿಷಯವನ್ನು ಪ್ರಸ್ತಾಪಿಸಿದ್ದಾನೆ (ಪುಟ ೬೧). ತುಪ್ಪದ 'ಮಾಳಮ್ಮನ ವೃತ್ತಾಂತ'ದಲ್ಲಿ 'ಎಲುಗಯ್ಯ ನಿಮ್ಮ ಪಯಣ' ಎಂಬ ಪದವು ಮೈಲಾರಲಿಂಗನ ವಿಚಾರವನ್ನು ಪರಿಚಯಿಸುತ್ತದೆ.

ಮುಳುಮುಳು ಮಂಡೇಯ ಪಟ್ಟಣದೊಳಗಿರುವ
ಕುರುಬಾಲೆ ತರುವುದಕೆ ಹೋಗತೀನೋ ನಾರಾನುಸ್ವಾಮಿ
ಕುರುಬಾಲೆ ತರುವದಕೆ ಹೋಗತೀನೋ (ಪುಟ ೬೯೩)

ಹೀಗೆ ಮೈಲಾರಲಿಂಗನು ನಾರಾಯಣಸ್ವಾಮಿಗೆ ಹೇಳಲು 'ಬ್ಯಾಡ ಮೈಲಾರಲಿಂಗ ಕುರುಬರ ಸಂಗ ಬ್ಯಾಡ ಮೈಲಾರಲಿಂಗ' ಮಾಂಸ ತಿನ್ನುವ, ಕಂಬಳಿ ನೇಯುವ ಕೈ ಮೈ ಜಿಡ್ಡಾಗಿ ಉಟ್ಟಿರುವ ಸೀರೆ ಕೂಡಾ ಜಿಡ್ಡಾಗಿರುತ್ತದೆ. ಆದ ಕಾರಣ ಬೇಡ ಎಂದು ನಾರಾಣಸ್ವಾಮಿ ತಿಳಿ ಹೇಳುತ್ತಾನೆ.

ಕೈ ಜಿಡ್ಡು ಎಂಬೋದು ಕಸ್ತೂರಿಯಲ್ಲವೆ
ಮೈ ಜಿಡ್ಡು ಎಂಬೋದು ಮಾಣಿಕದಲ್ಲಿವೆ
ಅವಳುಟ್ಟಿರುವ ಸೀರೆ ಎಲ್ಲ ನಾರಾಯಣಸ್ವಾಮಿ
ಮರುಗ ಮಲ್ಲಿಗೆ ಕಾಣೋ (ಪುಟ ೭೨೫)

ಹೀಗೆ ಗೊರವಯ್ಯನಾಗಿ ಮಾಳಮ್ಮನನ್ನು ಬಿಡದೆ ಕಾಡಿಬೇಡಿ ಪಡೆಯುತ್ತಾನೆ. ಮೈಲಾರಲಿಂಗನ ಪತ್ನಿಯರ ಕುರಿತಾಗಿ ವಿಭಿನ್ನ ಹೇಳಿಕೆಗಳನ್ನು ಬೇರೆ ಬೇರೆ ಕಾವ್ಯದಲ್ಲಿ ಕಾಣಬಹುದು. ಮಾಳಮ್ಮ ಧರ್ಮಪತ್ನಿಯಾದರೆ ಕೋಮಾಲಿಯು ಕದ್ದು ತಂದ ಪತ್ನಿಯಾಗಿದುದನ್ನು ಈ ಕೃತಿ ಪರಿಚಯಿಸುತ್ತದೆ. ಇವರಿಬ್ಬರ ಕುರಿತು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಗೊರವರಲ್ಲಿ ಬೇರೆ ಬೇರೆ ಹೇಳಿಕೆಗಳಿವೆ.

೩. ಮೈಲಾರಲಿಂಗನ ಕಾವ್ಯ (ಸಂ. ಡಾ. ಮಂಜುನಾಥ ಬೇವಿನಕಟ್ಟಿ)

ಪ್ರಾಧ್ಯಾಪಕರಾದ ಮಂಜುನಾಥ ಬೇವಿನಕಟ್ಟಿ ಅವರು ೧೯೯೯ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ 'ಕರ್ನಾಟಕ ಜನಪದ ಕಾವ್ಯಮಾಲೆ ೧'ರಡಿಯಲ್ಲಿ ಈ ಕಾವ್ಯವನ್ನು ಪ್ರಕಟಿಸಿದ್ದಾರೆ. ಹಾಡಿದವರು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ದೇವಲಾಪುರದ ಒಗ್ಗರ ಹನುಮಂತಪ್ಪ. ಗೊರವ ವೃತ್ತಿಯನ್ನು ತಾನು ವಂಶಪಾರಂಪರ್ಯವಾಗಿ ಅನುಸರಿಸುವುದಾಗಿ ತಿಳಿಸಿದ್ದಾನೆ. ತಾವು ಕರಡಿಗೊರವರೆಂದೂ ಪೇಟದ ಗೊರವರ ಮತ್ತು ಕಾರಣಿಕ ಗೊರವರ ವಿಷಯವನ್ನು ಪ್ರಾಸ್ತಾಪಿಸಿದ್ದಾನೆ. ಅಲ್ಲದೆ ಗುರು ಗಣಾಚಾರಿಗಳ ಸಮ್ಮುಖದಲ್ಲಿ ದೀಕ್ಷೆ ಪಡಿಯುವ ವಿಧಿ-ವಿಧಾನಗಳನ್ನು ಮೈಲಾರಲಿಂಗನ ಪೂಜಾವಿಧಾನಗಳನ್ನು ಸಾಂಸ್ಕೃತಿಕ ಆಚಾರ ವಿಚಾರಗಳನ್ನು ಸಂಪಾದಕರೊಂದಿಗೆ ಹಂಚಿಕೊಂಡಿದ್ದಾನೆ.

ಈ ಕಾವ್ಯವು ಸುಮಾರು ೧೫೦ಕ್ಕೂ ಹೆಚ್ಚಿನ ರಾಗ ತಾಳಗಳನ್ನು ಹೊಂದಿದೆ. ಪ್ರಮುಖವಾಗಿ ಖಮಾಚ, ಭಿಮಾಪ್ಲಾಸ್ ರಾಗಗಳು, ಕೇರವ ದಾದರಾ ಕಮಲಿ ತಾಳಗಳು ಪ್ರಯೋಗಗೊಂಡಿವೆ. ಗ್ರಂಥದ ಕೊನೆಯ ಭಾಗದಲ್ಲಿ ಕಾರಣಿಕಗಳ ಸಂಗ್ರಹ, ಹಾಡುಗಾರ ಒಗ್ಗರ ಹನುಮಂತಪ್ಪನ ವೈಯಕ್ತಿಕ ಮಾಹಿತಿಯೊಂದಿಗೆ ಮೈಲಾರಲಿಂಗನ ವಿಚಾರಗಳನ್ನು ವಿವರಿಸಲಾಗಿದೆ. ಅಲ್ಲದೇ ಮೈಲಾರಲಿಂಗ ಆಚರಣೆಗಳು, ಜಾತ್ರೆಯ ವಿವರಗಳು, ಚರಿತ್ರೆಯ ಪುನರಾವರ್ತನೆ, ಅವನ ಅತಿಮಾನುಷ ದೈವೀಶಕ್ತಿ ಹೀಗೆ ಈ ಕಾವ್ಯವು ಬರಿ ಕಾವ್ಯವಾಗದೆ ಒಂದು ಸಾಂಸ್ಕೃತಿಕ ಅಧ್ಯಯನ ಯೋಗ್ಯ ಕೃತಿಯಾಗಿದೆ.

ಈ ಕೃತಿಯು ಐದು ಸಂಧಿಗಳಲ್ಲಿ ಮೈಲಾರಲಿಂಗನ ಮಹಿಮೆ, ಗಂಗಿ ಮಾಳಮ್ಮನ ಸಂಧಿ, ಕೋಮಾಲೆ ಸಂಧಿ, ಮಡಿವಾಳರ ಸಂಧಿ, ಕುರುಬರ ಸಂಧಿ ಮೊದಲಾದವುಗಳ ಕಥಾಂಶಗಳನ್ನು ಹೊಂದಿದೆ. ದಕ್ಷಿಣ ಒಳನಾಡಿನಲ್ಲಿ ಋಷಿಮುನಿಗಳು ಯಜ್ಞಮಾಡುವ ಸಂದರ್ಭದಲ್ಲಿ ಮಣಿಕಾಸುರ ಮಲ್ಲಾಸುರರೆಂಬ ಅಸುರರು ಯಜ್ಞವನ್ನು ಕೆಡಿಸಲು ಬರುತ್ತಾರೆ. ಅವರು ಶಿವನನ್ನು ಪ್ರಾರ್ಥಿಸಲು ಪ್ರತ್ಯಕ್ಷಗೊಂಡ ಶಿವ ರಾಕ್ಷಸರನ್ನು ಧ್ವಂಸಮಾಡಿ ಭೂಲೋಕದಲ್ಲಿ ಕರಿ ಕಂಬಳಿ, ಕೈಯಲ್ಲಿ ಡಮರುಗ, ಕರಿಟೊಪ್ಪಿಗೆ ಧರಿಸಿ ನೆಲೆ ನಿಲ್ಲುತ್ತಾನೆ. ಗೋಮುನಿಕರಣದಲ್ಲಿ ಧರ್ಮಕರ್ತನಾಗಿ ಜನಿಸಿದ ಮೈಲಾರಲಿಂಗ ಭಂಡಾರಕ್ಕೆ ಕಲಿರಾಯ ಆಗುತ್ತಾನೆ. ಭಕ್ತರ ಮನೆಗಳಿಗೆ ಕೋರಿ ಅಂಗಿ ತೊಟ್ಟು ತಿರುಗಾಡುತ್ತಾನೆ. 'ಗಂಗಿ ಮಾಳಮ್ಮನ ಸಂಧಿ'ಯಲ್ಲಿ

....

ಆss ಅಂಗೈ ಮ್ಯಾಗಳ ಲಿಂಗವ ಹೋಗಿ
ಗಂಗೆ ಸ್ಥಳಗೊಂದಾಡುತ್ತಿತ್ತು
ಎತ್ತಲೋದ್ಯ
ಆss ಎತ್ತಲೋದ ನಮ್ಮ ದೇವರು ಮೈಲಾರಲಿಂಗ
ನೆನದರೆ ಮನದೊಳಗದಿಯ ನನ್ನಿರೆss ||ಹಿ|| (ಪುಟ ೬೫)

ಕೈಯಲ್ಲಿ ಲಿಂಗ ಹಿಡಿದು ಜಪ ಮಾಡುವವರ ಲಿಂಗಗಳನ್ನು ಮಾಯ ಮಾಡುವದು, ಭಂಡಾರ ಚೀಲದಿಂದ ಜನಕಲ್ಯಾಣ, ಸಮಾಜ ಸೇವೆ, ರಾಣೆ ಬೆನ್ನೂರಿನ ಶೀಲವಂತಿಗೆ ಮಕ್ಕಳ ವರ ದಯಪಾಲಿಸಿದುದು- ಹೀಗೆ ಅನೇಕಾನೇಕ ಪವಾಡಗೈಯುತ್ತಾ ಮಹಿಮಾ ಪುರುಷನಾಗುತ್ತಾನೆ ಮೈಲಾರಲಿಂಗ.

ಈವರೆಗೆ ಅಧ್ಯಯನಕ್ಕೆ ಒಳಪಡಿಸಿರುವ ಮೂರು ಮೈಲಾರಲಿಂಗನ ಕಾವ್ಯಗಳಲ್ಲಿ ಅಲ್ಪ ಸ್ವಲ್ಪ ಭಿನ್ನತೆಯಿದ್ದರೂ ಒಂದೇ ಕಥಾಹಂದರವನ್ನು ಹೊಂದಿವೆ.

ವೀರಶೈವರು ಮತ್ತು ಜೈನರು ಕೆಳಜಾತಿ ಜನರನ್ನು ಮತಾಂತರಿಸುವಲ್ಲಿ ಯಾವಾಗಲೂ ಪೈಪೋಟಿ ಗಿಳಿದಿದ್ದರು. ಮೈಲಾರನ ಭಕ್ತರನ್ನು ಆಕರ್ಷಿಸಲು ಪ್ರಯತ್ನಿಸಿ ವಿಫಲರಾದರು. ಶೈವ ಪಂಥಗಳಲ್ಲಿ ಮೈಲಾರ

ಪಂಥ ಬಹಳ ಪ್ರಭಾವಶಾಲಿಯಾಗಿತ್ತು. ಇದನ್ನು ಎದುರಿಸುವುದು ವೀರಶೈವರಿಗೆ ಅಗತ್ಯವಾಗಿ ತಮ್ಮ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಕಲ್ಪಿತ ಕಥೆಗಳಿಂದ ಕ್ಷುದ್ರದೇವತೆಯೆಂದು ಸ್ಪಷ್ಟಪಡಿಸಿ ಹೀನ ಕುಲವೆಂದು ಅಲಕ್ಷಿಸಿರುವ ಸಾಧ್ಯತೆಗಳನ್ನು ಚಕ್ಕರೆ ಶಿವಶಂಕರರು ಗುರುತಿಸಿದ್ದಾರೆ.

ಗೊರವರನ್ನು ಪ್ರಧಾನ ಭಕ್ತ ಸಮುದಾಯವಾಗಿ ಹೊಂದಿದ ಮೈಲಾರಲಿಂಗ ಎಲ್ಲಾ ಜನಾಂಗಗಳಿಂದ ಪೂಜಿಸಲ್ಪಡುತ್ತಾನೆ. ವಿಶೇಷವಾಗಿ ಕುರುಬರ ನೆಚ್ಚಿನ ಆರಾಧ್ಯದೈವ ಕುರುಬ, ಒಕ್ಕಲಿಗ, ಬೇಡ, ಗೊಲ್ಲ ಮೊದಲಾದ ಜಗತ್ತಿನ ಆದಿಜನಾಂಗಗಳಲ್ಲಿ ಗೊರವರನ್ನು ಬಿಡುವ ಸಂಪ್ರದಾಯ ರೂಢಿಯಲ್ಲಿದೆ. 'ಗೊರವ' ಎಂಬ ಪದಕ್ಕೆ ಭಿಕ್ಷುಕ ತಿರುಕ ಎಂಬ ಹೀನಾರ್ಥಗಳಿವೆ. ಹೊಟ್ಟೆಪಾಡಿಗಾಗಿ ಇವರು ತಿರುಕರಾಗಿರದೆ ಜಂಗಮ ಸೇವೆಗಾಗಿ, ಧಾರ್ಮಿಕ ಆಚರಣೆಗಳ ಪಾಲನೆಗಾಗಿ ಈ ವೃತ್ತಿಯನ್ನು ಆರಿಸಿಕೊಂಡಿದ್ದಾರೆ. ಗೊರವರನ್ನು ತಿರುಕರು ಎನ್ನುವುದಕ್ಕಿಂತ ಗೌರವಕ್ಕೆ ಅರ್ಹರಾದವರೆಂದು ಅರ್ಥೈಸಬಹುದಾಗಿದೆ. ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಗೊರವರಲ್ಲಿ ವೇಷಭೂಷಣ, ಆಚಾರ-ವಿಚಾರಗಳಲ್ಲಿ ಅನೇಕ ಭಿನ್ನತೆಗಳಿವೆ. ಗೊರವರಲ್ಲಿ ಪ್ರಧಾನ ಹಾಡುಗಾರ ಡಮರುಗವನ್ನು ಬಾರಿಸಿಕೊಂಡು ಹಾಡಿದರೆ ಉಳಿದ ಇಬ್ಬರು ಚಟಕಿ ತಾಳ ದುಮಡಿ ಬಾರಿಸುತ್ತಾ ದನಿಗೂಡಿಸುತ್ತಾರೆ. ಭಿಕ್ಷಾಟನೆಯನ್ನೇ ವೃತ್ತಿಯಾಗಿ ಹೊಂದಿದ ಇವರು ಮೈಲಾರನ ಭಕ್ತನಾಗಿ ಜಾತ್ರೆಯಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ನಾಯಿಯಂತೆ ನಡೆಯುತ್ತಾ ಬೊಗಳುತ್ತಾರೆ, ಕಾಲಲ್ಲಿ ಗೂಟಗಳನ್ನು ಬಡಿದುಕೊಳ್ಳುತ್ತಾರೆ. ಆ ಗಾಯದಲ್ಲಿ ಮುಳ್ಳಿನ ಟೊಂಗೆಗಳನ್ನು ಹಾಯಿಸಿಕೊಳ್ಳುವದು ಅಂಗೈಯಲ್ಲಿ ಆರತಿ ಚುಚ್ಚಿಕೊಂಡು ದೇವರಿಗೆ ಬೆಳಗುವದು, ದೇವರೆದುರಿಗೆ ಕಬ್ಬಿಣ ಸರಪಳಿ ಹರಿಯುವುದು ಹೀಗೆ ತಮ್ಮ ಭಕ್ತಿಯ ಉತ್ಕಟತೆಯನ್ನು ಪ್ರದರ್ಶಿಸುತ್ತಾರೆ.

ಮೈಲಾರನ ವಾಹನ ಕುದುರೆಯಾದರೆ, ನಾಯಿಗಳು ಅವನ ಅನುಚರರು. ಹೆಗ್ಗಪ್ಪ ಹೆಗಡೆ ಎಂದು ಕರೆಯಲ್ಪಡುವವರು ಮಂತ್ರಿಗಳಾಗಿದ್ದಾರೆ. ಅವನ ಮೈ ಬಣ್ಣ ಹೊಂಬಣ್ಣ, ಭಂಡಾರ ಇವನ ವೈಶಿಷ್ಟ್ಯ. ಧ್ವಜವು ಹಳದಿ ಬಣ್ಣದ್ದಾಗಿದೆ. 'ಏಳುಕೋಟಿ' ಎಂಬ ಕೂಗು ಮೈಲಾರನ ಕ್ಷೇತ್ರದಲ್ಲಿ ಕೇಳಿಬರುತ್ತದೆ. ಭಂಡಾರವು ಮೈಲಾರನ ಪ್ರಸಾದವಾಗಿದೆ. ಭೈರವನ ಸೈನ್ಯ ಏಳುಕೋಟಿ ಗಣಗಳಿಂದ ಕೂಡಿರುವುದರಿಂದ ಏಳುಕೋಟಿ ಎಂಬ ಪದ ಬಳಕೆಯಾಗಿರಬಹುದು. ಅವನ ಮಹಿಮೆಯನ್ನು ಕೊಂಡಾಡಲು ಹಲವಾರು ಕಾವ್ಯಗಳು ಹುಟ್ಟಿಕೊಂಡವು. ಉದಾಹರಣೆಯಾಗಿ ಮಲ್ಲಾರಿ ಮಹಾತ್ಮೆ, ಮಾರ್ತಾಂಡ ವಿಜಯ, ಮಲ್ಹಾರ ಮಣಿಗಿರಿ ವಿಜಯ, ಜಯಾದ್ರಿ ಮಹಾತ್ಮೆ ಮುಂತಾದವುಗಳಾಗಿವೆ. ಇವುಗಳಲ್ಲಿ ಗ್ರಾಮದೇವತೆಯಾದ ಮೈಲಾರನು ಶಾಕ್ತಮತದ ಈಶ್ವರ ಅವತಾರನೆನಿಸಿದ್ದಾನೆ.

ದ್ರಾವಿಡ ಜನಪದದ ಪ್ರಮುಖ ವೈಶಿಷ್ಟ್ಯವೆಂದರೆ ಶಿವ ಮತ್ತು ರಂಗರನ್ನು ಸಮಾನಭಾವದಿಂದ ಪೂಜಿಸುವದು. ಹರಿಹರ ಇವರಿಗೆ ಒಂದೇ. ಇದನ್ನೇ ಮೈಲಾರದಲ್ಲೂ ಕಾಣಬಹುದು. ಬಾದಾಮಿ ಹತ್ತಿರದ ಹುಲ್ಲಪ್ಪನನ್ನು ಮೈಲಾರನೆಂದು ಭಾವಿಸಲಾಗಿದೆ. ಕರ್ನಾಟಕವೊಂದರಲ್ಲಿ ಮೈಲಾರನಿಗೆ ಸಂಬಂಧಿಸಿದ ಸುಮಾರು

೫೦೦ ಕ್ಷೇತ್ರಗಳಿರುವುದಾಗಿ ನೇಗಿನಹಾಳ ಅವರು ಅಭಿಪ್ರಾಯಪಟ್ಟಿದ್ದಾರೆ. ಒಂದು ಜನಾಂಗಕ್ಕೆ ಜಾತಿಗೆ ಅನ್ವಯಿಸದ ಮೈಲಾರನು ಸಂಸ್ಕೃತೀಕರಣಗೊಳ್ಳುವ ದೈವವಾಗಿದ್ದಾನೆ. ಅಂಬಿಗರು, ಬೆಸ್ತರು ಮಹಾರಾಷ್ಟ್ರದಲ್ಲಿ ಕೋಳಿ ಜನಾಂಗ ಪೂಜಾರಿಕೆ ವಹಿಸಿದ್ದರೆ, ದೇವರಗುಡ್ಡದಲ್ಲಿ ಬ್ರಾಹ್ಮಣ, ಪೌರೋಹಿತ್ಯ ಇದೆ. ವೀರಶೈವರು, ಬ್ರಾಹ್ಮಣರು ಮೈಲಾರನನ್ನು ತಮ್ಮ ಕುಲದೇವತೆಯಾಗಿ ಪೂಜಿಸಿದರೆ, ಮುಸಲ್ಮಾನರು ಮೈಲಾರನನ್ನು ಮಲ್ಲುಖಾನ್ ಅಜಮತ್‌ಖಾನ ಎಂಬ ಹೆಸರಿನಿಂದ ಪೂಜಿಸುತ್ತಾರೆ. ಆದ್ದರಿಂದ ಮೈಲಾರಲಿಂಗ ಭಿನ್ನ ಜನಾಂಗಗಳ ಪಂಗಡಗಳ ದೇವತೆಯಾಗಿದ್ದಾನೆ.

ವಿವಿಧ ಮತ ಪಂಗಡಗಳಿಂದ ಪೂಜೆಗೊಳ್ಳುವ ಮೈಲಾರನು ಸಮತೆ ಮತ್ತು ಭಾವೈಕ್ಯತೆಯ ಸಂಕೇತವಾಗಿದ್ದಾನೆ. ಕರ್ನಾಟಕ, ಮಹಾರಾಷ್ಟ್ರ, ಪುಣೆ, ಸಾತಾರ, ಗೋವಾ ಮೊದಲಾದ ಕ್ಷೇತ್ರಗಳಲ್ಲಿ ಮೈಲಾರಲಿಂಗನನ್ನು ವಿವಿಧ ನಾಮಗಳಿಂದ ಕರೆದು ಪೂಜಿಸಲಾಗುತ್ತದೆ. ನಾಡು, ಭಾಷೆ, ಭಿನ್ನತೆ ಕಡೆಗಣಿಸಿ ಮೈಲಾರನ ಭಕ್ತರು ಎಲ್ಲ ಕ್ಷೇತ್ರಗಳನ್ನು ಸಂದರ್ಶಿಸುತ್ತಾರೆ.

ಈ ಹಿನ್ನಲೆಯಲ್ಲಿ ಮೈಲಾರಲಿಂಗನನ್ನು ಕುರಿತು ಮೌಖಿಕ ರೂಪದಲ್ಲಿಯ ಹಾಡುಗಳು ಮತ್ತು ಕಾವ್ಯಗಳನ್ನು ಜನರು ಜಾತ್ರೆ-ಉತ್ಸವಗಳಲ್ಲಿ ಹಾಡಿ ಸಂತೋಷ ಪಡುತ್ತಾರೆ. ಮೈಲಾರಲಿಂಗನ ಚರಿತ್ರೆ, ಕ್ಷೇತ್ರ ದರ್ಶನ, ಆಚರಣೆ, ಸಂಪ್ರದಾಯಗಳನ್ನು ಹಾಡು, ಪದ ಹಾಗೂ ದೀರ್ಘವಾದ ಕಾವ್ಯಗಳ ಮೂಲಕ ಚಿತ್ರಿಸುವ ಪ್ರಯತ್ನ ಶ್ಲಾಘನೀಯವಾದುದು. ಹೀಗಾಗಿ ಮೈಲಾರಲಿಂಗನ ಪರಂಪರೆಯನ್ನು ತಿಳಿದುಕೊಳ್ಳುವವರಿಗೆ ಈ ಕೃತಿಗಳು ಬಹುಮುಖ್ಯ ಆಕರಗಳಾಗಿ ಸಹಾಯಕಾರಿಯಾಗುತ್ತವೆ.

೫. ರಟ್ಟಮತಶಾಸ್ತ್ರ

ಕನ್ನಡದ ನೆಲ-ಜಲ-ಜನ-ಮನಗಳ ಪ್ರತಿನಿಧಿಯಾಗಿ 'ರಟ್ಟಮತಶಾಸ್ತ್ರ'ವು ನಿಲ್ಲುತ್ತದೆ. ಮಳೆ-ಬೆಳೆ, ಸೂರ್ಯ-ಚಂದ್ರ, ನಕ್ಷತ್ರರಾಶಿ, ಫಲ, ಶಕುನ, ಜ್ಯೋತಿಷ್ಯ, ಫಲ-ಪುಷ್ಪ, ಪ್ರಾಣಿ-ಪಕ್ಷಿಗಳ ಬದುಕಿನ ಕ್ರಮದ ಆಗುಹೋಗುಗಳನ್ನು ವ್ಯಾಖ್ಯಾನಿಸುವ ಮತ್ತು ಜೀವನವನ್ನು ಸಂಕಷ್ಟಗಳಿಗೆ ಹೊಂದಿಸಿಕೊಳ್ಳಲು ನೆಲೆಗಳನ್ನು ಗುರುತಿಸಲು ಸಹಾಯಕವಾಗಿದೆ. ಪ್ರಾಕೃತಿಕ ಚಲನೆಗಳಿಗೆ ಮತ್ತು ಮಾನವನಿಗೆ ಇರುವ ಸಾಂಸ್ಕೃತಿಕ ಸಂಬಂಧಗಳನ್ನು ಇವು ಸೂಕ್ಷ್ಮವಾಗಿ ತಿಳಿಸುತ್ತವೆ.

'ರಟ್ಟಮತ' ಎಂದರೆ ಪಂಚಮಹಾಭೂತಗಳಾದ ನೀರು, ಬೆಂಕಿ, ಗಾಳಿ, ಭೂಮಿ ಮತ್ತು ಆಕಾಶ ಇವುಗಳ ಗುಟ್ಟನ್ನು ರಟ್ಟಾಗಿಸುವ ಮತ. ಒಂದು ರಹಸ್ಯವಾದ ವಿಷಯವನ್ನು ಭೇದಿಸಿ ತಿಳಿಯುವಂತೆ ಬಿಡಿ ಬಿಡಿಸಿ ಹೇಳುವ ಶಾಸ್ತ್ರವೇ 'ರಟ್ಟಮತಶಾಸ್ತ್ರ'. ಪ್ರಾಚೀನ ಕಾಲದಿಂದ ನಮ್ಮ ಪೂರ್ವಜರು ತಾವು ಕಂಡುಂಡ ಅನುಭವಗಳನ್ನು ಶಾಸ್ತ್ರಬದ್ಧವಾಗಿ ಹೇಳುತ್ತಾ ಬಂದಿರುವರು. ಕನ್ನಡದ ಸಾಮಾಜಿಕ, ರಾಜಕೀಯ, ಸಾಹಿತ್ಯಿಕ ಚರ್ಚೆಗೆ ಒಳಪಡಿಸಬಹುದಾದ ಗಂಭೀರ ವಿಷಯವನ್ನು ಈ ಶಾಸ್ತ್ರ ಹೊಂದಿದೆ.

'ರಟ್ಟಮತಶಾಸ್ತ್ರ' ಕುರಿತಾಗಿ ಹಲವಾರು ಹಸ್ತಪ್ರತಿಗಳು ಲಭ್ಯವಾಗಿವೆ. ಸದ್ಯ ಮೂವರು ವಿದ್ವಾಂಸರು ರಟ್ಟಮತಶಾಸ್ತ್ರವನ್ನು ಸಂಪಾದಿಸಿದ್ದಾರೆ. ಮೊದಲನೆಯದು ಶೇಷಯ್ಯಂಗಾರರ 'ರಟ್ಟಮತ', ಎರಡನೆಯದು ಬಸವಯ್ಯಶಾಸ್ತ್ರಿಗಳ '೬೦ ವರ್ಷಗಳ ಕುರುಬರ ರಟ್ಟಮತಶಾಸ್ತ್ರ', ಕೊನೆಯದು ಸಿದ್ದಣ್ಣ ಜಕಬಾಳರು ಸಂಪಾದಿಸಿದ 'ಕುರುಬರ ರಟ್ಟಮತಶಾಸ್ತ್ರ'. ಈ ಮೂರೂ ಕೃತಿಗಳು ಮಳೆ-ಬೆಳೆಗಳ ಭವಿಷ್ಯ ಮತ್ತು ವರ್ತಮಾನದ ಆಗು-ಹೋಗುಗಳನ್ನು ತಿಳಿಸುವ ಕೃತಿಗಳಾಗಿವೆ. ಸಂಪಾದಿಸಲ್ಪಟ್ಟ ಮೂರು ಕೃತಿಗಳ ವಿವರಗಳು ಹೀಗಿವೆ.

೧. ರಟ್ಟಮತ (ಸಂ. ಎಚ್.ಶೇಷಯ್ಯಂಗಾರ)

ಶೇಷಯ್ಯಂಗಾರರು ಮದ್ರಾಸ್ ಓರಿಯಂಟಲ್ ಲೈಬ್ರರಿಯಲ್ಲಿರುವ ಮೂರು ಪ್ರತಿಗಳನ್ನು, ಮೈಸೂರಿನ ಲೈಬ್ರರಿಯ ಒಂದು ಪ್ರತಿಯನ್ನು ಉತ್ತರ ಪ್ರದೇಶದ ಅರಾಜೈನ ಲೈಬ್ರರಿಯಲ್ಲಿರುವ ಒಂದು ಪ್ರತಿ- ಹೀಗೆ ಒಟ್ಟು ಐದು ಹಸ್ತಪ್ರತಿಗಳನ್ನು ಆಕರಗಳಾಗಿ ಸ್ವೀಕರಿಸಿ ರಟ್ಟಮತ ಕೃತಿಯನ್ನು ಪರಿಷ್ಕರಿಸಿದ್ದಾರೆ. ಗ್ರಂಥ ಸಂಪಾದನೆಯ ಪರಿಷ್ಕರಣ ಶ್ರಮವನ್ನು ಸ್ವತಃ ಸಂಪಾದಕರು ಪ್ರಸ್ತಾವನೆಯಲ್ಲಿ ತಿಳಿಸಿರುವರು.

ಈ ಗ್ರಂಥವು ಕವಿಯ ಸ್ವತಂತ್ರವಲ್ಲ. ಹಲವು ಸಂಸ್ಕೃತ ಸಂಹಿತೆಗಳ ಆಧಾರದಿಂದ ಇದನ್ನು ಬರೆದಿರುವುದಾಗಿ ಕವಿಯೇ ತಿಳಿಸಿದ್ದಾನೆ. ಗಾಣಾಚಾರ್ಯ ಸಂಹಿತೆ, ವರಾಹಮಿಹಿರ, ಧನಕೀರ್ತಿ ಸಂಹಿತೆ, ರತ್ನೋಜ್ವಲ ಸಂಹಿತೆ ಮೊದಲಾದವನ್ನು ಆಕರಗಳಾಗಿ ಬಳಸಿಕೊಂಡಿದ್ದಾನೆ. "ಅಭಯಾಂಬುಧಿಯು ನಿಜ ಸುತೆಗೆ ಚಂದ್ರಲೇಖೆಗೆ ಮೇಘಾಂಭರಮಂ ಪೇಲ್ವಾಪಂ" ಎಂದರೆ ತಂದೆ ಮಗಳಿಗೆ ವಿವರಿಸುವ ಹಾಗೆ ನಿರೂಪಿಸಲಾಗಿದೆ ಎಂದು ಕವಿ ತಿಳಿಸಿದ್ದಾನೆ. ಕೃತಿಯನ್ನು 'ಮೇಘಾಂಭರಮಂ' ಎಂದು ಕರೆದುದು ಮಳೆಯ ವಿಚಾರವನ್ನು ವಿವರಿಸುವ ಶಾಸ್ತ್ರವೆಂದು ಅರ್ಥೈಸಬಹುದು. ಕವಿ ತನ್ನನ್ನು ಸುಕವಿನಿಧಾನ ಕವಿಕಳಾಭರಣ ಎಂಬ ಬಿರುದುಗಳನ್ನು ಸಾರ್ಥಕಗೊಳಿಸಲು ಅಲ್ಪ ಪ್ರಮಾಣದ ಅಲಂಕಾರಗಳನ್ನು ಪ್ರಯೋಗಿಸಿದ್ದಾನೆ. ಕವಿಯು ಅನೇಕ ಕೃತಿಗಳನ್ನು ರಚಿಸಿರಬಹುದು. ಆದರೆ ಯಾವ ಕೃತಿಗಳು ಲಭ್ಯವಾಗಿಲ್ಲ.

ಈ ಕೃತಿಯು ೧೨ ಅಧ್ಯಾಯಗಳು ಕಂದ, ವೃತ್ತ ಮತ್ತು ಕೆಲವು ಕಡೆ ರಗಳೆ, ವಚನ, ಪಿರಿಯಕ್ಕರ ತ್ರಿಪದಿ ಗಳಲ್ಲಿ ನಿರೂಪಣೆಗೊಂಡಿವೆ. ಕವಿಯ ಕಾಲ ಕ್ರಿ.ಶ. ೧೨೦೦ ಎಂದು ಊಹಿಸಬಹುದು. ಕೃತಿಯ ಇಪ್ಪತ್ತೆರಡನೆಯ ಪದ್ಯದಲ್ಲಿ ಘಳಿಯರ್ವ, ಜಸವಯ್ಯ, ಕುಲತಿಲಕ, ಮಾಚಿಮಯ್ಯ ಎಂದು ತನ್ನನ್ನು ತಾನು ಕರೆದುಕೊಂಡಿದ್ದಾನೆ. ಕವಿಯು ತನ್ನನ್ನು ರಟ್ಟಿಗ, ರಟ್ಟಯ್ಯ, ರಟ್ಟವೆಡಂಗ ಎಂದು ಹೇಳಿಕೊಂಡಿರುವುದು ಬಿರುದುಗಳಾಗಿವೆ. ಮಾಚಿಮಯ್ಯ ಮೂಲ ಪುರುಷನು ಕಾಡಮರಸ ತಲಕಾಡಿನ ಗಂಗರಾಜನ ಆಶ್ರಯದಲ್ಲಿದ್ದನೆಂದು ಈತನು ಮೈಸೂರು ಸೀಮೆಯ ತಲಕಾಡಿನ ಹತ್ತಿರದ ಜಿನನಗರದ ಅರಸನಾಗಿದ್ದನೆಂದು ಕಂಡು ಬರುತ್ತದೆ.

'ರಟ್ಟಮತ'ಕ್ಕೆ 'ಮಳೆಯ ಕುರುಹು' ಅಥವಾ ವೃಷ್ಟಿಶಾಸ್ತ್ರ ಮೇಘಾಂಬರ ಮೇಘಮಾಲೆ ಎಂಬ ಪರ್ಯಾಯ ನಾಮಗಳನ್ನು ಕವಿಯು ಸೂಚಿಸಿದ್ದಾನೆ.

ಜೈನಮತೀಯನಾದ ಕವಿಯು ಗ್ರಂಥದ ಆರಂಭದಲ್ಲಿ ಜೈನಮತ ಸಂಪ್ರದಾಯದಂತೆ ಪ್ರಾರಂಭದಲ್ಲಿ ಸಾಧುಗಳನ್ನು ಜಿನಶಾಸನ ರಕ್ಷಕರಾದ ಯಕ್ಷಯಕ್ಷಿಯರನ್ನು ಸರಸ್ವತಿಯನ್ನು ನಂತರ ತನ್ನ ವಂಶದ ಚರಿತೆ ಹಾಗೂ ಗ್ರಂಥ ರಚನೆಯ ಕ್ರಮವನ್ನು ತಿಳಿಸಿದ್ದಾನೆ.

ಪ್ರಾರಂಭಿಕ ಅಧ್ಯಾಯದಲ್ಲಿ ದಶವಿಧ ಧಾತುಗಳ ಸ್ವರೂಪವನ್ನು ತಿಳಿಯುವುದಕ್ಕಿಂತ ಮೊದಲು ಮಳೆಯ ವಿಷಯವನ್ನು ಕೇಳಲು ಬಂದ ದೂತನ ಲಕ್ಷಣವನ್ನು ಜ್ಯೋತಿಷಿಯು ತಿಳಿಯಬೇಕೆಂದು ದೂತ ಲಕ್ಷಣವನ್ನು ಸುದೀರ್ಘವಾಗಿ ವಿವರಿಸಲಾಗಿದೆ.

ಎರಡನೆಯ ಅಧ್ಯಾಯವು ಸಂಜೆವೇಳೆ ಮಂಜು ಬೀಳುವುದು, ಹಾವು ಮರ ಏರುವುದು, ಸುಟ್ಟುರಿಗಾಳಿ ಮಹಾ ಮೇಘೋದಯ, ನವಿಲು ಕೂಗುವುದು, ಪಶ್ಚಿಮದಲ್ಲಿ ಕೊರಡು ಮೂಡುವದು, ಉಲ್ಕಾಪತನ, ಪಕ್ಷಿಗಳು ಹುಡಿಯಲ್ಲಿ ಹೊರಳುವದು, ಲವಣ-ಬೆಲ್ಲಗಳ ಬಾಂಡಗಳು ಒಡೆಯುವದು, ಕಸದಲ್ಲಿ ತಗುಣೆ, ನಾಯಿ ಅಳುವದು ಮೊದಲಾದ ಪ್ರಾಣಿ-ಪಕ್ಷಿ-ಕ್ರಿಮಿಕೀಟಗಳ ವರ್ತನೆಯನ್ನು ವೀಕ್ಷಿಸಿ ಅವುಗಳ ನಡವಳಿಕೆಯಲ್ಲಿಯ ಸೂಕ್ಷ್ಮ ಬದಲಾವಣೆ ಮತ್ತು ಮುಂಜಾನೆ ಪೂರ್ವದಿಕ್ಕಿನಲ್ಲಿ ಕಾಮನಬಿಲ್ಲು ಮೂಡುವದು ನೀರಿನ ರುಚಿ ಕೆಡುವದು, ಮೇಘಗಳ ಬಣ್ಣ, ಹುಟ್ಟುವ ದಿಕ್ಕುಗಳು, ಮತ್ತು ಸಂಚರಿಸುವ ಗತಿ, ಮೃಗ ಪಕ್ಷಿಗಳು ಊರ ಹತ್ತಿರ ಬಂದು ಕೂಗುವ ಧ್ವನಿ ವಿಕಾರ, ಬೆಕ್ಕು-ಮೊಲ-ಮುಳ್ಳುಹಂದಿ-ಎರಳೆ-ನರಿ-ಸಾರಂಗ ಮತ್ತು ಅನೇಕ ಮೃಗ ಜಾತಿಗಳು ನಲಿಯುವದು, ಇರುವೆಗಳು ತಮ್ಮ ಮೊಟ್ಟೆಗಳನ್ನು ದೇವಸ್ಥಾನಕ್ಕೆ ಒಯ್ಯುವದು, ಆನೆ ಪಕ್ಷಿ ಇವು ನೀರನ್ನು ಎರಚುವದು ಮೊದಲಾದ ಬದಲಾವಣೆಯಿಂದ ಮಳೆಯು ಬರುತ್ತದೆಂದು ಊಹಿಸಬಹುದು. ತೃತೀಯಾಧ್ಯಾಯವನ್ನು 'ಶಕುನತ್ರಯಾಧ್ಯಾಯ' ಎಂದು ಕರೆಯಲಾಗಿದೆ. ಮಳೆಯಶಕುನ ನೋಡತಕ್ಕವನು ಪಿಂಗಲಿ ಹಕ್ಕಿ, ಪೋದೆಗೆ ಹಕ್ಕಿ, ನಾಯಿಯನ್ನು ಪೂಜಿಸಿ ಸ್ವಲ್ಪ ದೂರದಲ್ಲಿ ನಿಂತು ಆ ಮೃಗಪಕ್ಷಿಗಳ ಸ್ಥಿತಿಗತಿಗಳನ್ನು ನಿರೀಕ್ಷಿಸುತ್ತಿರಬೇಕು. ಪೋದಗೆ ಹಕ್ಕಿಯ ಪಿಂಗಲಿ ಹಕ್ಕಿಯ ನಾದ ಧ್ವನಿವಿಕಾರ ಮತ್ತು ಚೇಷ್ಟೆ ಇವುಗಳಿಂದ ಮಳೆಯ ಸ್ವರೂಪವನ್ನು ತಿಳಿಯುವ ಕ್ರಮವನ್ನು ತಿಳಿಸಲಾಗಿದೆ.

ಇನ್ನು ನಾಲ್ಕನೆಯ ಅಧ್ಯಾಯದಲ್ಲಿ ಒಂದು ಪಲನೂಲು ಒಂದು ಮೊಳ ಬಟ್ಟೆ ಇವುಗಳಿಂದ ಬಾವುಟ ಮಾಡಿ ನೆಟ್ಟು (ವಾಯುಚಕ್ರ) ಅದರ ಸಹಾಯದಿಂದ ಯಾವ ತಿಂಗಳಲ್ಲಿ ಯಾವ ಯಾವ ದಿಕ್ಕಿನಿಂದ ಗಾಳಿ ಬೀಸಿದರೆ ಮಳೆ ಬರುವ ಮತ್ತು ಬಾರದಿರುವುದನ್ನು ತಿಳಿಯುವ ಕ್ರಮ ಹೇಳಿ, ಬಳಿಕ ಮಳೆಯ ಸ್ವರೂಪವನ್ನು ತಿಳಿಯಬೇಕೆಂದಿರುವನು. ಮಳೆಗಾಲವಾದ ಆಷಾಢಮಾಸದ ಪೂರ್ಣಿಮೆ ಕಳೆದು ಬರುವ ನವಮಿ ದಿನ ಊರ ಬಾಗಿಲಲ್ಲಿ ನಿಂತು ಊರೊಳಕ್ಕೆ ಪ್ರವೇಶಿಸುವ ಗೋವುಗಳ ಲಕ್ಷಣದಿಂದ ಮಳೆಯ ಸ್ವರೂಪ ತಿಳಿಯುವ ಕ್ರಮ, ಮರ ಫಲಪುಷ್ಪಾದಿಗಳ ನ್ಯೂನತಾಧಿಕ್ಯಗಳಿಂದ ಮಳೆ ಬೆಳಗಾಗುವದು, ಆಗದಿರುವದು, ನೆಲಲ ದಿಕ್ಕಿನಿಂದ ಹೆಚ್ಚು ಮಳೆ, ಮಧ್ಯಮ ಮಳೆ, ಮಳೆಯ ಅಭಾವವನ್ನು ಸೂಚಿಸಲಾಗಿದೆ. ಪಂಚಮಾಧ್ಯಾಯದಲ್ಲಿ ಭೂಮಿ ಆಕಾಶ ಮತ್ತು ಗ್ರಹಗಳಲ್ಲಿ ಏನಾದರು ವಿಕಾರಗಳು ಕಂಡುಬಂದರೆ ಅವುಗಳಿಂದಾಗುವ ಪರಿಣಾಮಗಳನ್ನು

ತಿಳಿಸಲಾಗಿದೆ. ರಾತ್ರಿಯ ವೇಳೆಯಲ್ಲಿ ಕಾಮನ ಬಿಲ್ಲು ಮೂಡುವುದು, ಧೂಮಕೇತು, ಬಾಲದ ಮೀನು ಕಂಡರೆ ರಾಜರಿಗೂ ಮತ್ತು ಮಂತ್ರಿ ಮೊದಲಾದವರಿಗೆ ಕೇಡಾಗುವುದು. ಅಕಾಲ ವೃಷ್ಠಿ ಏಳು ದಿನಗಳವರೆಗೆ ಸುರಿದರೆ ರಕ್ತದಂತೆ ಕೆಂಪಾದ ನೀರು ಸುರಿದರೆ, ಭೂಮಿಯಲ್ಲಿ ರಕ್ತದ ಹೊಳೆ ಹರಿಯುವುದು, ಆಲಿಕಲ್ಲು, ಬಿರುಗಾಳಿ, ಸಿಡಿಲು ಕೆಂಪು ವರ್ಣದ ಮಳೆಹನಿಯಾದರೆ ಬರ ಬೀಳುವುದು ಇನ್ನು ಅನೇಕ ಉದಾಹರಣೆಗಳಿಂದ ಈ ಅಧ್ಯಾಯ ಮುಕ್ತಾಯಗೊಂಡಿದೆ. ಆರನೆಯ ಅಧ್ಯಾಯವು ಮಳೆಯ ಪ್ರಥಮ ಲಕ್ಷಣದ ವಿವರವನ್ನು ಹೊಂದಿದೆ. ಮೇಘವು ಪ್ರಥಮ ಗರ್ಭ ಕಟ್ಟಿದ ದಿನ ವಿಶೇಷದಿಂದಾಗುವ ಫಲ, ಮಳೆಯ ಪ್ರಮಾಣವೆನಿಸಿದ ದ್ರೋಣದ ಲಕ್ಷಣ, ಮಿಂಚಿನ ಲಕ್ಷಣ, ಪ್ರತಿ ಸೂರ್ಯನ ಲಕ್ಷಣ, ಚೈತ್ರಾದಿ ಹನ್ನೆರಡು ತಿಂಗಳು ಹುಣ್ಣಿಮೆಯ ಫಲ ಸೂರ್ಯಮಾನದಿಂದ ವರ್ಷದಿನಗಳ ಪ್ರಮಾಣಭೇದ, ಸೂರ್ಯಗ್ರಹ ರಾಶಿಗಳ ಫಲ ಹಾಗೂ ವರ್ಷಾಧಿಪತಿ ಯಾರೆಂದು ತಿಳಿಯುವ ಕ್ರಮಗಳನ್ನು ನಿರೂಪಿಸಲಾಗಿದೆ.

ಏಳನೆಯ ಅಧ್ಯಾಯವು ಪ್ರಭವಾದಿ ೬೦ ವರ್ಷಗಳನ್ನು ಐದೈದು ವರ್ಷಗಳಿಗೊಂದು ಯುಗವೆಂದು ವಿಭಾಗಿಸಿ ಬಂದ ಹನ್ನೆರೆಡು ಪ್ರತಿ ಸಂವತ್ಸರ ಫಲಗಳನ್ನು ಹೇಳಿ, ಗ್ರಹಗಳ ಶತ್ರು-ಮಿತ್ರುತ್ವ ಹನ್ನೆರಡು ರಾಶಿಗಳಲ್ಲಿ ಪ್ರತಿಯೊಂದು ರಾಶಿಯ ಘಳಿಗೆಯ ಪ್ರಮಾಣ ಮೊದಲಾದ ವಿಚಾರಗಳನ್ನು ಹೊಂದಿದೆ.

ಎಂಟನೆಯ ಅಧ್ಯಾಯವು ಮುಗಿಲ ಮೋಡಗಳ ಮತ್ತು ಮಳೆಯ ಫಲಗಳ ಕುರಿತಾಗಿದೆ. ಒಂಭತ್ತನೆಯ ಅಧ್ಯಾಯವು ಮುಖ್ಯವಾಗಿ ಬೀಜ ಬಿತ್ತುವ ವಿಷಯವನ್ನು ವಿವರಿಸುತ್ತದೆ. ಹತ್ತನೆಯ ಅಧ್ಯಾಯವು ೨೮ ನಕ್ಷತ್ರಗಳನ್ನು ಏಳೇಳಕ್ಕೆ ಒಂದೊಂದು ಮಂಡಲದಂತೆ ವಿಭಾಗಿಸಿ ವಾಯು, ಅಗ್ನಿ, ವರುಣ, ಕುಶಿಕ, ಎಂಬ ನಾಲ್ಕು ಮಂಡಲಗಳಾಗಿ ವಿಭಾಗಿಸಿ ಆ ಮಂಡಲಗಳಲ್ಲಿ ತೋರುವ ಗ್ರಹಣಗಳಿಂದಾಗುವ ಶುಭಾಶುಭ ಫಲಾಪಲಗಳನ್ನು ಹೇಳಲಾಗಿದೆ. ಹನ್ನೊಂದನೆಯ ಅಧ್ಯಾಯವು ಮಳೆಯ ನೀರು ಬೀಳುವ ಕ್ರಮ, ಭೂಮಿಯಲ್ಲಿ ಬಾವಿಯನ್ನು ತೋಡಿದರೆ ನೀರು ಬರುವದು, ಬರದಿರುವುದು ಒಂದು ವೇಳೆ ನೀರು ಬರುವಂತಿದ್ದರೆ ಅದರ ಪ್ರಮಾಣವನ್ನು ಬಾವಿತೋಡುವಾಗ ಸಿಕ್ಕುವ ಕಲ್ಲು ಬಂಡೆಗಳನ್ನು ಮೃದುಮಾಡಿ ಒಡೆದು ತೆಗೆಯುವ ಕ್ರಮ ಕಲ್ಲು ಒಡೆಯುವ ತೋಡಿದ ಬಾವಿಯನ್ನು ಉತ್ತಮ ರೀತಿಯಲ್ಲಿ ಅಂದರೆ ನೀರು ಕೆಡದಂತೆ ಇರಲು ಮಾಡಬೇಕಾದ ಕ್ರಮ ಬಾವಿಯ ನೀರನ್ನು ಸಿಹಿ ಮಾಡುವ ಕ್ರಮ, ಬಾವಿಯನ್ನು ತೋಡುವ ದಿಕ್ಕಿನ ಫಲ, ಬಾವಿಯನ್ನು ತೋಡುವಾಗ ಹಾಗೂ ಮೊದಲು ನೀರಿನ ಜರಿ ಕಂಡಾಗ ಮಾಡಬೇಕಾದ ಪೂಜಾಕ್ರಮಗಳನ್ನು ವಿವರಿಸುತ್ತದೆ.

ಕೊನೆಯದಾಗಿ ಹನ್ನೆರಡನೆಯ ಅಧ್ಯಾಯ ಗ್ರಹ, ನಕ್ಷತ್ರಗಳ ಸ್ವರೂಪ, ಅಮವಾಸ್ಯೆ, ಹುಣ್ಣಿಮೆ, ಸಂಕ್ರಮಣ ಇವುಗಳ ವಿಶೇಷದಿಂದ ಬೆಲೆಗಳ ಹೆಚ್ಚು ಏರಿಕೆ ಇಳಿಕೆಗಳು, ನಕ್ಷತ್ರಗಳ ಗುಣಾಕಾರವನ್ನು, ರಾಶಿಗಳ ಗುಣಾಕಾರ, ಸಂಖ್ಯೆಗೆ ಸೇರಿಸಿ ಗ್ರಹಗಳ ಗುಣಾಕಾರ, ಸಂಖ್ಯೆಗೆ ಸೇರಿಸಿಕೊಳ್ಳುವ ರಾಶಿಗ್ರಹ ಗುಣಾಕಾರ ಗಳನ್ನು ಮತ್ತೆ ಹೇಳಿ ಸಂಕ್ರಾಂತಿ ಲಕ್ಷಣ ಫಲವನ್ನು ಹೇಳಿ, ಶನಿಯು ನಕ್ಷತ್ರಗಳಲ್ಲಿ ಚಲಿಸುವ ಫಲ,

ಗುರುವಿನ ಉದಯಾಸ್ತಮದಿಂದ ಆಗುವ ಫಲ, ನಕ್ಷತ್ರವನ್ನು ಶಕಟಾಕಾರವಾಗಿ ವಿಭಾಗಿಸಿ ಆ ಶಕಟದ ಶರೀರ, ಹೃದಯ, ಹೊಕ್ಕಳು, ಕಣ್ಣು ಇವುಗಳಲ್ಲಿ ಗುರುವು ನೆಲಸಿದ ಫಲ, ಮಳೆ-ಬೆಳೆ ಬೆಲೆಗಳಲ್ಲಾಗುವ ಹೆಚ್ಚು ಕುಂದುಗಳನ್ನು ವಿವರಿಸಿ ಅಂತ್ಯದಲ್ಲಿ "ಲೆಕ್ಕಕ್ಕಂ ರಟ್ಟ ಸಮಾಪ್ತಿ" ಎಂದು ಕೃತಿಯು ಮುಕ್ತಾಯಗೊಂಡಿದೆ. ಒಟ್ಟಿನಲ್ಲಿ ದೃಷ್ಟಿಯ ಫಲವನ್ನು ವಿವರಿಸುತ್ತದೆ.

೨. ೬೦ ವರ್ಷಗಳ ಕುರುಬರ ರಟ್ಟಮತಶಾಸ್ತ್ರ (ಸಂ. ವೇ. ಬಸವಯ್ಯಶಾಸ್ತ್ರಿ ಹಿರೇಮಠ)

ಜ್ಯೋತಿರ್ವಿದ್ಯಾವಿಭೂಷಣ ಸಾಹಿತ್ಯರತ್ನ ವೇ|| ಬಸವಯ್ಯಶಾಸ್ತ್ರಿಗಳು ಹಿರೇಮಠ ಅವರು '೬೦ ವರ್ಷಗಳ ಕುರುಬರ ರಟ್ಟಮತಶಾಸ್ತ್ರ' ಕೃತಿಯನ್ನು ೧೯೬೩ರಲ್ಲಿ ಶಾಬಾದಿಮಠ ಪ್ರಕಾಶನದಿಂದ ಪ್ರಕಟಿಸಿದ್ದಾರೆ.

ಕೃತಿಯ ಕರ್ತೃ ಮಾಚಿಮಯ್ಯನ ಪೂರ್ವಜರ ವೃತ್ತಾಂತ, ಇವನು ಗಂಗರಾಜ ಭೂತುಗನಲ್ಲಿ ಆಶ್ರಯ ದಾತನಾದ ವಿಚಾರ, ಜ್ಯೋತಿಷ್ಯಶಾಸ್ತ್ರದ ಪಾಂಡಿತ್ಯಕ್ಕಾಗಿ ಅನೇಕ ರಾಜರಿಂದ ಸನ್ಮಾನಿತನಾದದ್ದು, ಇವನು ರಟ್ಟವಂಶದವನಾದ್ದರಿಂದ ತನ್ನ ಕೃತಿಗೆ 'ರಟ್ಟಮತ' ಎಂಬ ಹೆಸರಿಟ್ಟಿರುವುದು ಹೀಗೆ ಮೊದಲಾದ ಕೃತಿಕಾರನ ಸವಿವರಗಳನ್ನು ತಿಳಿಸಿದ್ದಾನೆ.

೧೧೦ ಶೀರ್ಷಿಕೆಗಳ ವಸ್ತು ವಿಷಯಗಳು ಶ್ಲೋಕ ಮತ್ತು ವಚನಗಳಿಂದ ರಚನೆಗೊಂಡಿವೆ. ಕುಂತಳ ದೇಶಕ್ಕೆ ಸೇರಿದ ಗೊಂಡಯ್ಯನೆಂಬುವವನು '೬೦ ವರ್ಷಗಳ ರಟ್ಟಮತಶಾಸ್ತ್ರ' ಬರೆದನೆಂದು ತಿಳಿದುಬರುತ್ತದೆ. ಆದರೆ ಕುರುಬರ ರಟ್ಟಮತ ಶಾಸ್ತ್ರಕ್ಕೆ ಕವಿಯ ಉಲ್ಲೇಖವಿರದೆ ಈ ಹಾಲ ರಟ್ಟಮತಶಾಸ್ತ್ರಕಾರನು ಭವಿಷ್ಯವನ್ನು ಬರೆದಿರುವನು. ಅಲ್ಲದೆ ಪ್ರತಿ ಅಧ್ಯಾಯವು ಶ್ಲೋಕ ಮತ್ತು ವಚನಗಳನ್ನು ಹೊಂದಿ 'ಹಾಲುರಟ್ಟಮತ ಶಾಸ್ತ್ರ' ಎಂದು ಪ್ರಾರಂಭವಾಗುತ್ತದೆ.

ಚತುರ್ಯುಗ ಪ್ರಮಾಣ, ಪ್ರಜೋತ್ಪತ್ತಿ, ಧಾತು, ವಿಷ್ಣು, ವ್ಯಯ ಮೊದಲಾದ ೬೦ ಸಂವತ್ಸರಗಳ ಫಲವನ್ನು ನಂತರ ಮಿಂಚಿನ ಫಲ ಗಾಳಿ ಬೀಸುವ ದಿಕ್ಕಿನ ಫಲ, ನಕ್ಷತ್ರ ಧನಸ್ಸಿನ ಫಲ ಬರಗಾಲ ಪರಿಹಾರ ಉಪಾಯ, ಮಳೆ ಯೋಗ ತಿಳಿಯುವ ಉಪಾಯ, ಭೂಕಂಪನ ಫಲ, ಗ್ರಹಗಳು, ಆಳುವ ಭೂಮಿ, ಗ್ರಹಗಳ ಸ್ಥಿತಿಯಿಂದ ಮಳೆಯ ಯೋಗ, ಗ್ರಹಗಳ ಯುದ್ಧ ಫಲ, ನಾಯಿಯ ಶಕುನದಿಂದ ಮಳೆಯ ಲಕ್ಷಣ, ಕೋಗಿಲೆ ಶಕುನದಿಂದ ಮಳೆಯ ಲಕ್ಷಣ, ಪೋದಗೆ ಹಕ್ಕಿಯ ಶಕುನ, ವಾಯುಚಕ್ರದಿಂದ ಮಳೆ ತಿಳಿಯುವುದು ಬಿತ್ತಲು ಹೋಗುವಾಗ ಶಕುನಗಳು ಕೂರಿಗೆ ಪೂಜಾವಿಧಾನ, ಮಳೆಯಾಗುವುದನ್ನು ಸೂಚಿಸುವ ಕೆಲವು ಆಕಸ್ಮಿಕ ಶಕುನಗಳು, ದೂತಲಕ್ಷಣ, ರಾಹುಚಕ್ರ, ಬೀಜ ಬಿತ್ತುವ ನಕ್ಷತ್ರಗಳು, ಭೂಮಿಯಲ್ಲಿ ಜಲ ವಿಚಾರ, ಬಾವಿಯನ್ನು ತೋಡುವ ದಿಕ್ಕಿನ ಫಲ, ವರ್ಷಾಧಿಪತಿಗಳ ಫಲ ಇಂಥ ಹಲವಾರು ವಿಷಯಗಳ ಶಾಸ್ತ್ರವನ್ನು ಈ ಕೃತಿ ತಿಳಿಸುತ್ತದೆ. ಇದಕ್ಕೆ ಆಕರವಾಗಿ ಶೇಷಯ್ಯಂಗಾರರ ಕೃತಿಯಾದ್ದರಿಂದ ವಸ್ತು ವಿಷಯಗಳಲ್ಲಿ ಹೆಚ್ಚಿನ ಬದಲಾವಣೆಯಿಲ್ಲದೆ ಕೇವಲ ಶೀರ್ಷಿಕೆಗಳ ಸಂಖ್ಯೆಯಲ್ಲಿ ವ್ಯತ್ಯಾಸಗಳನ್ನು ನಾವು ಗುರುತಿಸಬಹುದು.

೩. ಕುರುಬರ ರಟ್ಟಮತಶಾಸ್ತ್ರ (ಸಂ. ಡಾ. ಸಿದ್ದಣ್ಣ ಜಕಬಾಳ)

ಸಿದ್ದಣ್ಣ ಜಕಬಾಳ ಅವರ 'ಕುರುಬರ ರಟ್ಟಮತಶಾಸ್ತ್ರ'ವು ವಿದ್ಯಾನಿಧಿ ಪ್ರಕಾಶನದಿಂದ ೨೦೦೪ರಲ್ಲಿ ಪ್ರಕಟಗೊಂಡಿದೆ. ನಲವತ್ತೇಳು ಶೀರ್ಷಿಕೆಗಳಲ್ಲಿ ವಿಭಾಗಿಸಲ್ಪಟ್ಟು ವಸ್ತು ವಿಷಯಗಳಲ್ಲಿ ಮೇಲಿನ ಕೃತಿಗಳಿಂದ ಭಿನ್ನವಾಗಿಲ್ಲ. ಪ್ರತಿ ಶೀರ್ಷಿಕೆಯ ಶ್ಲೋಕಗಳು ದ್ವಿಪಾದ ಮತ್ತು ವಚನ ಹೊಂದಿದ್ದು 'ಹಾಲರಟ್ಟಮತಶಾಸ್ತ್ರ' ಎಂದು ಪ್ರಾರಂಭವಾಗುತ್ತದೆ. ಶೇಷಯ್ಯಂಗಾರರ ಗ್ರಂಥದಲ್ಲಿ ಕುರುಬರ ಹಾಲ ಎಂಬ ಉಲ್ಲೇಖ ಸಿಗುವುದಿಲ್ಲ. ಇತರ ಎರಡು ಕೃತಿಗಳಲ್ಲಿ ಕುರುಬ ಎಂಬ ಪದದ ಪ್ರಸ್ತಾಪವನ್ನು ಕಾಣಬಹುದು. ಇದು ಈ ಕೃತಿಗೂ ಮತ್ತು ಹಾಲುಮತಕ್ಕೂ ಸಂಬಂಧ ಕಲ್ಪಿಸುವುದರಿಂದ ಸಿದ್ದಣ್ಣ ಜಕಬಾಳ ಅವರು ರಟ್ಟಮತಶಾಸ್ತ್ರವನ್ನು ರಚಿಸಿರುವರು ಕುರುಬರು ಎಂದು ಅಭಿಪ್ರಾಯ ಪಟ್ಟಿದ್ದಾರೆ.[೩]

ಈ ಕೃತಿಯು ಮುಖ್ಯವಾಗಿ ಮಳೆ-ಬೆಳೆ ವಿವರಣೆ ಮತ್ತು ಭವಿಷ್ಯವನ್ನು ತಿಳಿಸುತ್ತದೆ. ಮೊದಲ ಮಳೆ ಅಶ್ವಿನಿ ಮಳೆ ಸುರಿದರೆ ಹಸಿಗೂಸಿಗೆ ಬೆಣ್ಣೆಯಲ್ಲಿ ಭರಣಿ ಮಳೆಯಾದರೆ ಧಾನ್ಯಗಳ ಉತ್ಪತ್ತಿ ಹೆಚ್ಚಾಗಿ ಜನರೆಲ್ಲ ಸುಖದಿಂದಿರುವರು, ರೋಹಿಣಿ ಮಳೆಯಾದರೆ ಓಣಿಯೆಲ್ಲಾ ಜ್ವಾಳ ಎಂಬ ಗಾದೆಯು ಬೆಳೆಯ ವೈಭವವನ್ನು ಸಿರಿಯನ್ನು ವರ್ಣಿಸುತ್ತದೆ. ಈ ಮಳೆಯ ನಂತರ ಮೃಗಶಿರಾ, ಆರಿದ್ರಾ, ಪುನರ್ವಸು, ಪುಷ್ಯ, ಆಶ್ಲೇಷ ಇವುಗಳನ್ನು ಮುಂಗಾರು ಮಳೆಗಳೆಂದು ಮೇಘ, ಹುಬ್ಬಿ, ಉತ್ತರ, ಹಸ್ತ ಮತ್ತು ಚಿತ್ತಾ ಇವುಗಳನ್ನು ಹಿಂಗಾರು ಮಳೆಗಳೆಂದು ವಿಂಗಡಿಸಲಾಗಿದೆ. ಸೂರ್ಯ ಚಂದ್ರರಿಗೆ ಗುಡಿ ಕಣಕೆರೆ ಕಟ್ಟಿದ ಫಲ ಜೇಷ್ಠ ಶುದ್ಧಕಾರ ಹುಣ್ಣಿಮೆಯ ಫಲ ಯಾವ ಯಾವ ದಿಕ್ಕಿನಿಂದ ಗಾಳಿ ಬೀಸಿದರೆ ಮಳೆ ಬರುವದು ಅಥವಾ ಬರುವುದಿಲ್ಲ ಎಂಬ ವಿಷಯ ವಿವರ, ಮಳೆಯನ್ನು ನಿರ್ಣಯಿಸುವ ಸಪ್ತನಾಡಿಚಕ್ರ ವಿವರ, ಮಿಂಚಿನ, ಗುಡುಗಿನ ಕಾಮನ ಬಿಲ್ಲಿನ ಮೂಲ, ಮೇಘದ ಭೂಕಂಪನ, ಧೂಮಕೇತುವಿನ, ಸೂರ್ಯ ಚಂದ್ರರ ಗ್ರಹಣದ ಫಲಗಳನ್ನು ವಿವರಿಸುವ ಹಲ್ಲಿಯ ಹಾಲಕ್ಕಿಯ ಮುಂತಾದ ಶಕುನಗಳ ಫಲಾಫಲಗಳ ಮತ್ತು ಮಳೆಯು ಬರದಿದ್ದಾಗ ಮತ್ತು ಮಳೆಯು ಬರುವುದಕ್ಕೆ ಮಾಡುವ ಪೂಜಾ ವಿಧಾನಗಳನ್ನು ವಿವರಿಸುತ್ತದೆ.

ಕುರುಬರ ರಟ್ಟಮತಶಾಸ್ತ್ರ ಮತ್ತು ೬೦ ವರ್ಷಗಳ ಕುರುಬರ ರಟ್ಟಮತಶಾಸ್ತ್ರ ಎರಡೂ ಕೃತಿಗಳು ಗುರುಸ್ತುತಿಯಿಂದ ಪ್ರಾರಂಭವಾಗಿವೆ. ಅಧ್ಯಾಯಗಳ ವಿಂಗಡನೆಯಲ್ಲಿ ಏಕರೂಪತೆ ಇಲ್ಲ. ಕೃತಿಕಾರನು ರಟ್ಟಮತದಲ್ಲಿ ಇರಲಾರದ ದೇವ-ಮಾನವರ ದೇವ-ದೈತ್ಯರುಗಳ ಕಾಲಮಾನಗಳ ಪರಿಜ್ಞಾನವನ್ನು ವಿವರಿಸುತ್ತ ಬ್ರಹ್ಮ ಸಿದ್ಧಾಂತ, ಸೂರ್ಯ ಸಿದ್ಧಾಂತ ಮತ್ತು ಆರ್ಯಭಟ್ಟ ಸಿದ್ಧಾಂತಗಳೆಂಬ ಆದಿಯಾಮಗಳ ಸಿದ್ಧಾಂತಗಳನ್ನು ವಿವರಿಸುತ್ತ, ಯುಧಿಷ್ಠಿರ, ವಿಕ್ರಮ ಶಾಲಿವಾಹನ, ವಿಜಯಾಭಿನಂದನ ನಾಗಾರ್ಜುನ ಹಾಗೂ ಕಲ್ಕಿ ಭೂಪತಿಯ ಶಕೆಗಳ ವಿಷಯಗಳನ್ನು ವಿವರಿಸಿ ಕೃತಿಯ ಮುಂದಿನ ಭಾಗದಲ್ಲಿ ೬೦ ಸಂವತ್ಸರಗಳಲ್ಲಿ ಲಭಿಸುವ ಶುಭಾಶುಭಗಳ ಫಲಗಳ ವಿಚಾರಗಳನ್ನು ವಿಸ್ತಾರವಾಗಿ ವಿವರಿಸುತ್ತಾನೆ. ಪ್ರಭವ ಸಂವತ್ಸರದಿಂದ ವ್ಯಯನಾಮ ಸಂವತ್ಸರಗಳವರೆಗೆ ಬ್ರಹ್ಮವಿಂಶತಿ ಸರ್ವಜಿತುವಿನಿಂದ ಪರಾಭವದವರೆಗೆ ವಿಷ್ಣು ವಿಂಶತಿ

ಎಂದು ಪ್ಲವಂಗದಿಂದ ಕ್ಷಯನಾಮದವರೆಗೆ ರುದ್ರ ವಿಶಂತಿ ಎಂದು ವಿಂಗಡಿಸಿ ಬ್ರಹ್ಮ ವಿಂಶತಿಯ ಫಲ ಉತ್ತಮ, ವಿಷ್ಣು ವಿಶಂತಿ ಫಲ ಮಧ್ಯಮ, ರುದ್ರ ವಿಂಶತಿ ಫಲ ಕನಿಷ್ಟವೆಂದು ಹೇಳಿ ಪ್ರತಿಯೊಂದು ಸಂವತ್ಸರಗಳ ಫಲಾಫಲಗಳನ್ನು ವಿವರಿಸುತ್ತಾನೆ. ಈ ವಿಂಶತಿಗಳ ವಿಚಾರ ಶೇಷಯ್ಯಂಗಾರರ 'ರಟ್ಟಮತ'ದಲ್ಲಿ ಇಲ್ಲ. ಕೃತಿಯ ಅಂತ್ಯದಲ್ಲಿ ಚೈತ್ರಾದಿ ಹನ್ನೆರಡು ತಿಂಗಳುಗಳಲ್ಲಿ ಬರುವ ಅಮವಾಸ್ಯೆ ಮತ್ತು ಹುಣ್ಣಿಮೆಗಳಿಗೆ ಹೊಂದಿಕೊಂಡು ಬರುವ ಮಹಾನಕ್ಷತ್ರ ಮತ್ತು ನಿತ್ಯ ನಕ್ಷತ್ರಗಳ ಮೇಲಿಂದ ಆಯಾ ಮಳೆಗಳ ಶುಭಾಶುಭಗಳ ಫಲಗಳನ್ನು ವಿವರಿಸಿ ಈ ಅಮವಾಸ್ಯೆ ಹುಣ್ಣಿಮೆಗಳು ಆಯಾ ವಾರಗಳಲ್ಲಿ ಬಂದರೆ ಅದರ ಫಲಾಫಲಗಳೇನು ಎಂಬುದನ್ನು ಸಹ ವಿವರಿಸುತ್ತಾನೆ. ಹೀಗೆ ಸವಿವರಗಳೊಂದಿಗೆ ಆಯಾ ವರ್ಷದ ಸುಭೀಕ್ಷೆ ಮತ್ತು ದುರ್ಭಿಕ್ಷೆಗಳನ್ನು ಕವಿ ಈ ಕೃತಿಯ ಮೂಲಕ ವಿವರಿಸುತ್ತಾನೆ.

ಈ ಕೃತಿಯಲ್ಲಿ ರಟ್ಟಪ್ಪನೇ ಇಟ್ಟಪ್ಪನಾಗಿ ಬದಲಾವಣೆ ಹೊಂದಿರುವನು. ಸವದತ್ತಿ ತಾಲೂಕಿನ ಮಬನೂರಿನಲ್ಲಿ ಇಟ್ಟಪ್ಪದೇವರ ಪೂಜಾರಿಗಳು ಭಕ್ತರಿಗೆ ಮಳೆ ಬೆಳೆ ವಿಚಾರವಾಗಿ ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ 'ರಟ್ಟಮತ' ಎಂದರೆ ರಟ್ಟಪ್ಪ ಮತದಂತೆ ಅಂದರೆ ರಟ್ಟಪ್ಪನು ಹೇಳಿದಂತೆ ಎಂದಾಗಿ ಬರಬರುತ್ತಾ ಹಾಲುಮತದವರೇ ಇದನ್ನು ಹೇಳುವುದರಿಂದ 'ಹಾಲರಟ್ಟಮತದಂತೆ' ಎಂದಾಗಿರಬಹುದು ಎಂದು ಡಾ. ಸಿದ್ಧಣ್ಣ ಜಕಬಾಳರು ಅಭಿಪ್ರಾಯಪಟ್ಟಿರುವರು.[೪] ಚೆನ್ನಬಸವ ಕವಿ ವಿರಚಿತ ಹಾಲುಮತ ಪುರಾಣದ (೧೯೫೪) ಪ್ರಸ್ತಾವನೆಯಲ್ಲಿ ಗುರುರೇವಣಸಿದ್ಧರಿಂದ ವಾಕ್ ಸಿದ್ಧಿಯನ್ನು ಪಡೆದ ಶಾಂತಮುತ್ತಯ್ಯನು ಕುರುಬರ ರಟ್ಟಮತಶಾಸ್ತ್ರವೆಂಬ ಭವಿಷ್ಯಗ್ರಂಥ ಬರೆದ ವಿಚಾರವನ್ನು ದಾಖಲಿಸಿದ್ದಾರೆ.[೫] ಅಲ್ಲದೆ ಮೂಲ ರಟ್ಟಮತದ ಏಳನೆಯ ಅಧ್ಯಾಯದ ೧೧೨ನೆಯ ಪದ್ಯದಲ್ಲಿ ಮತ್ತು ಹನ್ನೆರಡನೆಯ ಅಧ್ಯಾಯದ ೧೫೦ನೆಯ ಪದ್ಯದಲ್ಲಿ 'ಸಿದ್ಧಾದೇಶಂ' ಎಂಬ ಹೇಳಿಕೆಯು ಶಾಂತಮುತ್ತಯ್ಯನ ಪ್ರಸ್ತಾಪಕ್ಕೆ ಪೂರಕವಾಗಿದೆ.

ರಟ್ಟಮತದ ಮಹತ್ವವನ್ನು ಡಾ. ವೀರೇಶ ಬಡಿಗೇರವರು "ಈ ಪಠ್ಯದ ಒಟ್ಟು ದ್ವಾದಶಾಧ್ಯಾಯಗಳಲ್ಲಿ ಮೂಡಿ ಬಂದಿರುವ ಮಳೆ-ಬೆಳೆ-ಭೂಮಿ, ರಾಶಿ, ನಕ್ಷತ್ರ ಜ್ಯೋತಿಷ್ಯ ಇತ್ಯಾದಿ ಸಂಗತಿಗಳನ್ನು ವಿಸ್ತಾರವಾಗಿ ಪರಿಚಯಿಸುವ ಮೂಲಕ ಅನ್ಯಜ್ಞಾನಶಿಸ್ತುಗಳ ಮೂಲಕ ಈ ಕೃತಿಯನ್ನು ಅಧ್ಯಯನ ಮಾಡುವತ್ತ ನಮ್ಮ ಗಮನ ಸೆಳೆಯುತ್ತಾರೆ. ಒಂದು ಸಮಾಜಮುಖಿ ಪಠ್ಯವನ್ನಾಗಿ ಸಮುದಾಯಿಕ ಕಳಕಳಿಯುಳ್ಳ ಒಂದು ಸಂಕಥನವನ್ನಾಗಿ ತಮ್ಮ ಪ್ರಸ್ತಾವನೆಯ ಮೂಲಕ ಈ ಕೃತಿಯನ್ನು ಅಭ್ಯಾಸಯೋಗ್ಯವಾಗಿಸಿದ್ದಾರೆ. ಕನ್ನಡದ ರಾಜಕೀಯ, ಸಾಮಾಜಿಕ ಮತ್ತು ಸಾಹಿತ್ಯಿಕವಾದ ಆವರಣದಲ್ಲಿಟ್ಟು ಕೃತಿ ಮತ್ತು ಕರ್ತೃವಿನ ಬಗ್ಗೆ ಬೆಳೆಸುವ ಇಲ್ಲಿನ ಚರ್ಚೆ ವ್ಯಾಪಕ ಶ್ರಮ ಅಧ್ಯಯನದ ಗಂಭೀರತೆಯನ್ನು ಕಣ್ಣಿಗೆ ಕಾಣಿಸುತ್ತದೆ."[೬]

ಹಾಲುಮತ ಸಂಸ್ಕೃತಿಯನ್ನು ಸಾರುವ ಡೊಳ್ಳಿನ ಪದ, ಹೇಳಿಕೆ, ರಟ್ಟಮತಶಾಸ್ತ್ರದ ರಚನೆ, ಕಂಬಳಿ ಗದ್ದುಗೆ ಮುಂತಾದವೆಲ್ಲವೂ ಒಂದು ಸಮುದಾಯದ ಪರಂಪರೆಯನ್ನು ಸಂಪ್ರದಾಯಗಳನ್ನು ಸಾದರ ಪಡಿಸುತ್ತವೆ. ಆದರೆ ಕುರುಬರು ಪ್ರಸ್ತುತ ದಿನಗಳಲ್ಲಿ ಕೀಳರಿಮೆ, ಅನಾಥಪ್ರಜ್ಞೆಯಲ್ಲಿ ತಮ್ಮ ಸ್ಥಾನಮಾನಗಳನ್ನು

ಕಾಯ್ದುಕೊಳ್ಳಲು ಹೋರಾಡಬೇಕಿದೆ. ಒಂದು ಜನಾಂಗದ ಪರ ವಿರೋಧ ನಿಲುವುಗಳಿಗೆ ಪಕ್ಕಾಗದೆ ಸತ್ಯದ ಸುಳಿವನ್ನು ಸಮಾಜಕ್ಕೆ ತಿಳಿಸಿ ನ್ಯಾಯ ಒದಗಿಸಿದವರಲ್ಲಿ ಶಂಬಾ ಜೋಷಿ, ವಿ.ಆರ್ ಹನುಮಂತಯ್ಯ ಮತ್ತು ಡಾ. ಎಂ.ಎಂ.ಕಲಬುರ್ಗಿಯವರು ಪ್ರಮುಖರಾಗುತ್ತಾರೆ.

ಒಟ್ಟಿನಲ್ಲಿ ರಟ್ಟಮತಶಾಸ್ತ್ರವು ಮಳೆ ಬೆಳೆ ಕುರಿತಾಗಿ ಅನೇಕ ಸಂಗತಿಗಳತ್ತ ಗಮನ ಸೆಳೆಯುತ್ತದೆ. ಈ ಶಾಸ್ತ್ರವನ್ನು ಕುರುಬರು ಹೇಳುತ್ತಿದ್ದುದರಿಂದ ಈ ಕೃತಿಗೆ ಕುರುಬರ ರಟ್ಟಮತಶಾಸ್ತ್ರ ಎಂದು ಕರೆಯುತ್ತಾರೆ. ಕೃಷಿಗೆ ಸಂಬಂಧಿಸಿದಂತೆ ಇಲ್ಲಿ ನಿರೂಪಣೆಗೊಂಡಿರುವ ವಿವರಗಳನ್ನು ನಮ್ಮ ಪೂರ್ವಜರು ಪ್ರಾಯೋಗಿಕವಾಗಿ ವೀಕ್ಷಿಸಿ ಸಂಗ್ರಹಿಸಿರಬಹುದು. ಈ ಹಿನ್ನೆಲೆಯಲ್ಲಿ ಮೂರು ಕೃತಿಗಳನ್ನು ತೌಲನಿಕವಾಗಿ ಅಧ್ಯಯನಕೊಳ್ಳಪಡಿಸುವ ಅಗತ್ಯವಿದೆ.

ಆಧುನೀಕರಣ ತಂತ್ರಜ್ಞಾನದ ಪ್ರಭಾವದಿಂದ ರೈತ ಸಮುದಾಯವು ಸಹ ಕೂರಿಗೆ ಕುಂಟಿ ಎತ್ತುಗಳನ್ನು ಕೃಷಿ ಕಾರ್ಯಕ್ಕೆ ಬಳಸುತ್ತಿಲ್ಲ. ಹೀಗಾಗಿ ರಟ್ಟಮತಶಾಸ್ತ್ರವನ್ನು ಓದುವ ಅದರಲ್ಲಿರುವ ವಿಷಯವನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡುತ್ತಿಲ್ಲ. ರೈತನಿಗೆ ಅವಶ್ಯವಾದ ಈ ಶಾಸ್ತ್ರ ಅವಜ್ಞೆಗೆ ಒಳಗಾಗಿದೆ. ಜನ ಇದರಲ್ಲಿ ನಂಬಿಕೆ ಕಳೆದುಕೊಳ್ಳುತ್ತಿರುವರು. ಇಂಥ ಅಮೂಲ್ಯ ಕೃತಿಗಳು ಅನುಭವ ಹಿನ್ನೆಲೆಯಿಂದ ರಚಿಸಲ್ಪಟ್ಟಿವೆ. ಅನುಭವಕ್ಕಿಂತ ಅಕ್ಷರ ದೊಡ್ಡದಾಗಲು ಸಾಧ್ಯವಿಲ್ಲ. ಅನುಭವಸ್ಥರ ಅನುಭವದಿಂದ ಹುಟ್ಟಿದುದೇ ಜನಪದ ಸಾಹಿತ್ಯ. ಅದನ್ನು ಉಳಿಸಿ ಸಂರಕ್ಷಿಸುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಇಂಥ ಸಾಂಸ್ಕೃತಿಕ ಅಧ್ಯಯನ ಇಂದು ಮಹತ್ವ ಪಡೆಯುತ್ತಿವೆ.

೬. ಡೊಳ್ಳಿನ ಪದಗಳು

ಭೂಮಿ ತಾಯಿಯ ಮೊದಲ ಸಂತಾನ ಜನಪದ. ಈ ಸಾಹಿತ್ಯದಲ್ಲಿ ಹಲವು ಮತ ಧರ್ಮಗಳ ರೀತಿ ರಿವಾಜುಗಳು ಸೇರಿ ಹೋಗಿವೆ. ಅವುಗಳಲ್ಲಿ ಹಾಲುಮತದ ಡೊಳ್ಳಿನ ಪದಗಳೂ ಒಂದಾಗಿವೆ.

ಕುರಿಯ ಮೇಲೆ ಕಣ್ಣಿರಲಪ್ಪ
ಡೊಳ್ಳಿನ ಮೇಲೆ ಒಂದು ಕೈಯಿರಲಿ

ಎಂಬ ಮೇಲಿನ ನುಡಿಯಲ್ಲಿ ಕುರುಬರ ಬದುಕು ಕುರಿಗಳ ಹಿಂದೆ ಇದ್ದು ಡೊಳ್ಳು ಅವರ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿನಿಧಿಸುತ್ತದೆ. ವೀರಶೈವರಿಗೆ ವೀರಗಾಸೆ ನೃತ್ಯ ಅವರ ಸ್ವತ್ತಾದಂತೆ ಡೊಳ್ಳು ಪದಗಳು ಕುರುಬರದ್ದೇ ಆಗಿದ್ದೂ, ಅವರಿಂದಲೇ ಹುಟ್ಟಿವೆ. ತುಂಬ ಪ್ರಾಚೀನವಾದ ಕುರುಬ ಜನಾಂಗದ ಉಗಮವನ್ನು ಶಂ.ಬಾ.ಜೋಶಿಯವರು ಕ್ರಿ.ಶ. ೩ನೆಯ ಶತಮಾನವೆಂದು ಊಹಿಸಿದ್ದಾರೆ.[೬] ಡೊಳ್ಳಿನ ಪದಗಳೂ ಸಹ ಅವರೊಂದಿಗೆ ಆ ಕಾಲದಲ್ಲೇ ಹುಟ್ಟಿಕೊಂಡಿರಬಹುದು "ತೋಳ ಬಂದಿತೋ ತೋಳ ಭಾಳ ಜೋಕೀಲೇ ಬೀರಣ್ಣಾ" ಎನ್ನುವಲ್ಲಿ ಅಡವಿಯ ಕುರಿಗಾರನ ಗಮನ ಯಾವತ್ತೂ ಕುರಿಗಳ ಮೇಲೆ ಇರಬೇಕಾಗಿತ್ತು. ನೇರ

ನಡೆ ನುಡಿಯ ಬಿಚ್ಚು ಮನಸ್ಸಿನ ಮುಗ್ಧ ಜನಾಂಗವು ಮನದ ಮಾತನ್ನು ಅಷ್ಟೇ ಸರಳವಾಗಿ ಹೇಳಿದ ಪದಗಳಲ್ಲಿ ಅವರ ಅನಾಥ ಪ್ರಜ್ಞೆ ಗುರುತಿಸಬಹುದಾಗಿದೆ.

ಅಲ್ಲ ಆದರ ಅಲ್ಲಂತ ಹೇಳಿರಿ | ತಗಲ ಇದ್ರೆ ತಗಿಯಿರಿ ಕಸರ
ತಪ್ಪು ಇದ್ದರೆ ತರುಬಿ ಕೇಳಿರಿ | ಆಗತೇವಿ ನಿಮ್ಮ ಸೇವಕರ
ಸಪ್ಪಳ ಹೆಚ್ಚಾಗಿ ರದ್ದ ಹಿಡಿದ ಕಿವಿ | ಎದ್ದ ಹೋಗತಾರ ಜನರೆಲ್ಲ
ಹುಂಬ ಕುರುಬರಂತ ಅನಿಸಿಕೊಳ್ಳುವದು | ನಮ್ಮ ಪಾಲಿಗಿದು ಬಿಟ್ಟಿಲ್ಲ
ಜ್ಞಾನವಂತರ ಸಂಗ ಮಾಡಿ ನಾವು | ಶ್ಯಾಣೇರಾಗಬೇಕರಿ ಮೊದಲ
ಆದದ್ದಾಗಿ ಹೋತ ಇನ್ನ ಮ್ಯಾಲೆ ಚಲೊ | ಹಾದಿ ಹಿಡಿಯಬೇಕ ನಾವೆಲ್ಲ[೮]

ಹೀಗೆ ಅನಾದಿ ಕಾಲದಿಂದ ನಡೆದ ಮೇಲ್ವರ್ಗದವರ ಅನಾದರ ಅಲಕ್ಷತನದಿಂದ ಮುಗ್ಧರಾದ ಕುರುಬರಲ್ಲಿ ಅನಾಥ ಪ್ರಜ್ಞೆ ಉಳಿದಿರಲಿಕ್ಕೆ ಸಾಕು. ಆದರೂ ಸಹ ಪ್ರಗತಿಯ ಕನಸನ್ನು ಬಿಡದೆ ಮುಂದುವರಿಯುವ ನಿರ್ಧಾರದ ಮಾತುಗಳು ಆತ್ಮನಿಂದೆ ಆತ್ಮಶೋಧಗಳು ಶರಣರ ಜೀವನವನ್ನು ಮತ್ತೆ ಮತ್ತೆ ನೆನಪಿಸುತ್ತವೆ.

ಗಂಡಸರ ಪದಗಳಾದ ಡೊಳ್ಳಿನ ಹಾಡುಗಳು ಗುರುವಿನ ಸ್ತುತಿ 'ಗುರುವೇ ನಮ್ಮಯ್ಯ ದೇವರ ಬಂದಾವ್ ಬನ್ನೀರೆ' ಎಂಬ ಪಲ್ಲವಿಯಿಂದ ಪ್ರಾರಂಭವಾಗುತ್ತದೆ. ಮುಮ್ಮೇಳನವನ್ನು ಇಬ್ಬರು ಪ್ರಾರಂಭಿಸಿದರೆ ಹಿಮ್ಮೇಳದವರು ಅವರನ್ನು ಅನುಸರಿಸಿ ಹಾಡುತ್ತಿರುತ್ತಾರೆ. ಪಲ್ಲವಿಯನ್ನು ಮಾತ್ರ ಮುಮ್ಮೇಳ ಮತ್ತು ಹಿಮ್ಮೇಳದವರು ಸೇರಿ ಒಟ್ಟಾಗಿ ಪ್ರಾರಂಭಿಸುತ್ತಾರೆ. ಕಂಚಿನ ಚಳ್ಳಂಗಿಗಳ ತಾಳಮೇಳದೊಂದಿಗೆ ಹಾಡುವವರು ತಮ್ಮ ಧ್ವನಿ ಸೇರಿಸಿ ಹಾಡುವ ಪದಗಳನ್ನು ಡೊಳ್ಳಿನ ಪದಗಳೆನ್ನುವರು. ಹಾಲುಮತ ಸಂಸ್ಕೃತಿಯ ಭಕ್ತಿ ಮತ್ತು ಆರಾಧನೆ ಕುರಿತ ಪದಗಳು ಡೊಳ್ಳಿನ ಪದಗಳು. ಅಲ್ಲದೆ ಹಾಲುಮತ ವಿಚಾರ, ಹಾಲುಮತದ ವಿವಿಧ ದೇವರು, ಮಹಾಪುರುಷರ ಜೀವನ ವೃತ್ತಾಂತ, ಕುರಿಗಳ ಹುಟ್ಟು ಮೊದಲಾದ ವಿಚಾರ ಕುರಿತಾದ ಪದಗಳು ಮಾರ್ಗಪದಗಳು. ಇವು ದೀರ್ಘವಾಗಿರುತ್ತವೆ. ಬೇರೆ ಬೇರೆ ವಿಷಯಗಳ ಕುರಿತು ಅಂದರೆ ನೈತಿಕ, ಚಾರಿತ್ರಿಕ, ರಾಮಾಯಣ ಮತ್ತು ಮಹಾಭಾರತ ವಿಷಯಗಳ ಪದಗಳನ್ನು ಮಾರ್ಗೇತರ ಡೊಳ್ಳಿನ ಪದ ಎನ್ನುವರು. ಡೊಳ್ಳಿನ ಪದಗಳಲ್ಲಿ ಹರಕೆಯ ಪದಗಳು, ಲಾವಣಿ ಪದಗಳು, ಹರದೇಶಿ ನಾಗೇಶಿ ಪದಗಳು, ಸವಾಲು -ಜವಾಬು ಪದಗಳು ರ್‍ಯಾಣಗಳು ಹೀಗೆ ವಿಭಿನ್ನ ಶೈಲಿಯ ಡೊಳ್ಳಿನ ಪದಗಳಿವೆ.

ಹರಕೆಯ ಪದಗಳು ಕೃತಜ್ಞತೆ ಮತ್ತು ಸಮರ್ಪಣಾ ಭಾವ ಹೊಂದಿರುತ್ತವೆ. ರಾತ್ರಿಯಿಡೀ ಡೊಳ್ಳಿನ ಪದ ಹಾಡುತ್ತಾ ಜಾಗರಣೆ ಮಾಡಿ ಮರುದಿನ ಮುಂಜಾನೆ ದೇವರನ್ನು ಭಕ್ತರು ಬೀಳ್ಕೊಡುತ್ತಾರೆ.

ಆಳು ಮಕ್ಕಳು ಉಂಡ ಮನ್ಯಾಗ ಹಾಲ ಕಾವಲಿ ಹರಿಯಲೆ
ಅಪ್ಪ ಪೂಜಾರಿ ಉಂಡ ಮನ್ಯಾಗ ತುಪ್ಪದ ಕಾವಲಿ ಹರಿಯಲೆ

ನಮ್ಮ ದೇವರು ಉಂಡ ಮನ್ಯಾಗ ಹೊನ್ನದ ರಾಶಿ ಅಳೆಯುವೆ

ಕರಿಕಂಬಳಿ ಧರೆಮರೋ ಹಿಂಗಂತ ಹರಕಿ ಕೊಟ್ಟಾರ

ಎಂಬ ಪದವೂ ಆಳ ಮಕ್ಕಳ ಪೂಜಾರಿಯ ಮೇಲಿನ ಪ್ರೀತಿಯನ್ನು ಆತ್ಮಿಯತೆಯನ್ನು ಅಭಿವ್ಯಕ್ತಿಗೊಳಿಸುವ ರೀತಿ ಹೃದಯಸ್ಪರ್ಶಿಯಾಗಿದೆ. ಲಾವಣಿ ಪದಗಳು, ಡೊಳ್ಳಿನ ಹಾಡುಗಳಲ್ಲಿ ಸೇರಿಹೋಗಿವೆ. ಕೆಲವು ಪದಗಳು ಚರಿತ್ರೆಯನ್ನು ವಿವರಿಸುತ್ತವೆ. ಸಂಗೊಳ್ಳಿ ರಾಯಣ್ಣ, ಅಮೋಘಸಿದ್ಧ ಮುಂತಾದವರ ಜೀವನ ವೃತ್ತಾಂತ ಹೋರಾಟಗಳನ್ನು ತಿಳಿಸುತ್ತವೆ. ವಿಷಯವಸ್ತು ರಚನೆ ಸ್ವರೂಪಗಳ ದೃಷ್ಟಿಯಿಂದ ಡೊಳ್ಳಿನ ಹಾಡುಗಳು ಸಾಂಸ್ಕೃತಿಕ ಹಿನ್ನೆಲೆಯನ್ನು ಪಡೆದಿವೆ. ಇವು ಮನರಂಜನೆಗಿಂತ ಶ್ರದ್ಧೆಯನ್ನು ಹೆಚ್ಚಾಗಿ ಹೊಂದಿವೆ.

ಸಮಾಜವು ಬಿಂಬವಾದರೆ ಸಾಹಿತ್ಯ ಪ್ರತಿಬಿಂಬ. ಸಮಾಜ ಬದಲಾದಂತೆ ಸಾಹಿತ್ಯವೂ ಬದಲಾಗಿ ಹೊಸ ಹೊಸ ತಂತ್ರಗಳಿಂದ ಆಕರ್ಷಣೆ ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ. ಕಾಲಮಾನಕ್ಕೆ ತಕ್ಕಂತೆ ಡೊಳ್ಳಿನ ಪದಗಳಲ್ಲಿ ಹೊಸ ಹೊಸ ಪ್ರಕಾರಗಳು ಹುಟ್ಟಿಕೊಂಡರೂ ತತ್ವಗಳು ಮಾತ್ರ ಒಂದೇ ಆಗಿವೆ. ಡೊಳ್ಳಿನ ಹಾಡುಗಳಲ್ಲಿಯ ಈ ಹೊಸತನದಿಂದ ಕೃತಕತೆ ಹೆಚ್ಚಾಗಿ ದೇಸೀಯ ಮೂಲ ನೆಲೆಯಿಂದ ದೂರವಾಗುವ ಅಪಾಯವು ಕೂಡಾ ಬೆನ್ನ ಹಿಂದೇ ಇದೆ.

‘ಸ್ವಾಮೀ ನಮ್ಮಯ ದೇವರss ಬಂದಾರ ಬನ್ನೀರೆ

ದೇವೀ ನಮ್ಮಯ ದೇವರss ಬಂದಾರ ಬನ್ನೀರೆ

ಗುರುವೇ ನಮ್ಮಯ ದೇವರss ಬಂದಾರ ಬನ್ನೀರೆ

ಶಿವನೇ ನಮ್ಮಯ ದೇವರss ಬಂದಾರ ಬನ್ನೀರೆ’

ಎಂಬ ಪಲ್ಲವಿಯ ಆರಂಭವು ಒಂದು ನಿಶ್ಚಿತ ವ್ಯವಸ್ಥೆಗೆ ಒಳಪಟ್ಟಿರುವಂತೆ ಅಂತ್ಯವೂ ಒಂದು ಕ್ರಮವನ್ನು ಹೊಂದಿದೆ. ಹಾಡು ನಿಲ್ಲಿಸುವ ಸಂದರ್ಭದಲ್ಲಿ

ಹೀಂಗ ಹಾಡುತ ಹ್ಯಾದರ ಗುರುವ ಯಾಳೆಗೋಳು ಬಾಳ ಆದಾವ

ಯಾಳೆಗೋಳೂ ಬಾಳ ಆದಾವ ಗುರುವ, ಆಳಿಗಿ ಸೋಲ ಬಿದ್ದಾವ

ಎಂಬ ಸೂಚನೆಯಂತೆ ಹಾಡು ನಿಲ್ಲಿಸಲು ನಿರ್ದೇಶನ ಕೊಡುತ್ತಾರೆ.

ಆಗ

‘ಇಲ್ಲಿಗೊಂದ ಸಂದೂ ಗುರುವೆ, ಸಂದೀಗೇಳು ಪದ ಮುಂದೇಳೋ

ದೇವರ ಬಂದಾವ ಬನ್ನೀರೆ’

ಹೀಗೆ ರಾತ್ರಿಯಿಡೀ ಭಾವಾವೇಷದಿಂದ ಹಾಡನ್ನು ಮುಕ್ತಾಯಗೊಳಿಸುತ್ತಾರೆ. ಡೊಳ್ಳು ಒಂದು ವಿಶಿಷ್ಟ ಬಗೆಯ ವಾದ್ಯ. ಕಟ್ಟಿಗೆಯ ಎರಡು ವೃತ್ತಗಳಿಗೆ ಚರ್ಮಬಿಗಿದು ತಯಾರಿಸುತ್ತಾರೆ. ಕೈ ಪೆಟ್ಟು ಮತ್ತು ಬೆರಳುಗಳಿಂದ ಧ್ವನಿ ಹೊರಡಿಸುತ್ತಾರೆ.

ವ್ಯಷ್ಠಿನೆಲೆಯಲ್ಲಿ ಪ್ರಾರಂಭವಾದ ಡೊಳ್ಳಿನ ಪದಗಳು ಸಮಷ್ಠಿ ನೆಲೆಯಲ್ಲಿ ಜನಪ್ರಿಯವಾಗಿವೆ. ಅಜ್ಞಾತದಲ್ಲಿದ್ದ ಡೊಳ್ಳಿನ ಪದಗಳೂ ಪಾಶ್ಚಾತ್ಯರ ಪ್ರೇರಣೆಯಿಂದ ೬೦ ವರ್ಷಗಳಿಂದ ಸಂಗ್ರಹಕಾರ್ಯ ನಡೆದಿದೆ. ಡೊಳ್ಳಿನ ಹಾಡುಗಳನ್ನು ೧. ಪುರಾಣದ ಹಾಡುಗಳು ೨. ಪವಾಡದ ಹಾಡು ೩. ವಿಡಂಬನ -ನೀತಿ ಹಾಡು ೪. ಧರ್ಮದ ಹಾಡು ೫. ಚುಟುಕುಗಳು ಎಂದು ಅರ್ಜುನ ಗೊಳಸಂಗಿ ಅವರು ವಿಭಾಗಿಸಿದ್ದಾರೆ.[೯] ಮಹಾದೇವ ಕಣವಿಯವರು ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಘಟನಾತ್ಮಕ ಎಂದು ವರ್ಗೀಕರಿಸಿದ್ದಾರೆ.[೧೦]

ಸುಮಾರು ೧೯೬೬ರಿಂದ ಸಂಗ್ರಹಕಾರ್ಯ ನಡೆದರೂ ೧೯೫೩ರಲ್ಲಿ ಆರ್.ಎಸ್.ಪಂಚಮುಖಿ ಅವರ ೧೯೫೫ರಲ್ಲಿ ಎಂ.ಜೀವನ ಅವರ 'ಜಾನಪದ ಗೀತೆಗಳು', ೧೯೫೯ರಲ್ಲಿ ಅ.ಸಿ.ಹಂಜಗಿಮಠ ಅವರ 'ಡೊಳ್ಳಿನ ಪದಗಳು', ೧೯೫೦ರಲ್ಲಿ ಹಾಲೇಶ ಎಂ.ಮೇಟಿ ಅವರ 'ಡೊಳ್ಳಿನ ಹಾಡುಗಳು', ೧೯೫೯ರಲ್ಲಿ ಯಲ್ಲನಗೌಡ ಫಕೀರಗೌಡ ಅತ್ತಿಕೊಳ್ಳ ಅವರ 'ಕುರುಬರ ಡೊಳ್ಳಿನ ಪದ', ೧೯೬೦ರಲ್ಲಿ ರಾಮಚಂದ್ರರಾಯರ 'ಹಳ್ಳಿಯ ಹಾಡುಗಳು', ೧೯೭೨ರಲ್ಲಿ ನಿಂಗಣ್ಣ ಸಣ್ಣಕ್ಕಿ ಮತ್ತು ಶಿವಲಿಂಗಪ್ಪ ಭಾವಿಕಟ್ಟಿ ಅವರ 'ಜಾನಪದದಲ್ಲಿ ಅಂಕಲಗಿಯ ಆಡವೀಶ', ೧೯೭೨ರಲ್ಲಿ ಕಲ್ಲೇಶ ಇಟಗಿ ಹಾಗೂ ಪಾಟೀಲ ಕರವೀರನಗೌಡ ಅವರ 'ಜಾನಪದ ಸಾಹಿತ್ಯ', ೧೯೭೩ರಲ್ಲಿ ಜಿ.ಬಿ.ಖಾಡೆ ಅವರ 'ಕಾಡು ಹೂಗಳು', ೧೯೭೮ರಲ್ಲಿ ನಿಂಗಣ್ಣ ಸಣ್ಣಕ್ಕಿ ಅವರ 'ಗಂಡಸರ ಜನಪದ ಹಾಡುಗಳು', ೧೯೭೯ರಲ್ಲಿ ವಿರೂಪಾಕ್ಷಗೌಡ ಮತ್ತು ಗುರುಮೂರ್ತಿ ಪೆಂಡಕೂರರ 'ಜಾನಪದ ಸಂಚಯ', ೧೯೭೯ರಲ್ಲಿ ಎ.ಜಿ.ನೀಲಗಾರ ಅವರ 'ಜಾನಪದ ಜೇನು' ಹೀಗೆ ಆಸಕ್ತ ವಿದ್ವಾಂಸರು ಸಾಹಿತಿಗಳು ಡೊಳ್ಳಿನ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.[೧೧] ಸ್ವತಂತ್ರವಾಗಿ ಡೊಳ್ಳಿನ ಪದಗಳನ್ನು ಹೊಂದಿದ ಕೃತಿಗಳ ಅವಲೋಕನ ಹೀಗಿದೆ.

ಕಾಡು ಹೂಗಳು -ಜಿ.ಬಿ.ಖಾಡೆ

ಜಿ.ಬಿ. ಖಾಡೆ ಅವರ 'ಕಾಡು ಹೂಗಳು' ಕೃತಿಯು ೧೯೭೩ರಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟಗೊಂಡಿದೆ. ಹಳ್ಳಿಯ ಪರಿಸರದಲ್ಲಿ ಹುಟ್ಟಿ ಬೆಳೆದ ಖಾಡೆ ಅವರು ಬಿಜಾಪುರ ಜಿಲ್ಲೆಯ ಜನಪದ ಗೀತೆಗಳನ್ನು ಸಂಗ್ರಹಿಸಿದ್ದಾರೆ. ಈ ಕೃತಿಯು ಬೀಸುವ ಕಲ್ಲಿನ ಪದ, ಹಂತಿಯ ಹಾಡು, ಕೋಲಿನ ಪದ ಕೊನೆಯ ಭಾಗದಲ್ಲಿ ಡೊಳ್ಳಿನ ಪದಗಳು ಎಂಬ ನಾಲ್ಕು ಭಾಗಗಳನ್ನು ಹೊಂದಿದೆ. ಡೊಳ್ಳಿನ ಪದಗಳು ಕೃತಿಯ ಅರ್ಧದಷ್ಟು ವ್ಯಾಪ್ತಿಯನ್ನು ಪಡೆದಿವೆ. ಇವರು ಪ್ರಾರಂಭದಲ್ಲಿ ಹಾಡುಗಾರರ ಕಾಲ, ವಯಸ್ಸು ಹೆಸರುಗಳನ್ನು ದಾಖಲಿಸಿದ್ದಾರೆ. ಕತೆಯು ೭೯ ಸಂಧಿಗಳನ್ನು ಹೊಂದಿದೆ. ಪುಂಡ ಭೂತಾಳ, ಸಿದ್ಧದೇವರು, ಹುಲಿಯ ಫಜೀತಿ, ಗುರುವಿನ ಪದ, ಮಂಗಳಾರತಿ ಪದ ಎಂಬ ಪದಗಳಿವೆ. ಕುರುಬ ಕುಲದ

ದೈವಗಳ ಕುರಿತು ಪೌರಾಣಿಕ ಹಿನ್ನೆಲೆಯ ಕಥೆಗಳು ಹಾಗೂ ನೈತಿಕ ತಾತ್ವಿಕ ಕಥೆಗಳನ್ನು ಸಂಗ್ರಹಿಸಿದ್ದಾರೆ. ಬಿಜಾಪುರ ಜಿಲ್ಲೆಯ ಜಾತ್ರೆ, ಉತ್ಸವ, ಸಮಾರಾಧನೆಗಳಲ್ಲಿ ರೇವಣಸಿದ್ಧ, ಬಿಳಿಯಾನಿಸಿದ್ಧ ಮೊದಲಾದವರ ಕುರಿತು ಡೊಳ್ಳಿನ ಪದಗಳನ್ನು ಹಾಡುತ್ತಾರೆ.

ಜೀವನ ಜೋಕಾಲಿ -ಡಾ. ಎಮ್.ಎಸ್.ಸುಂಕಾಪುರ

ಎಮ್.ಎಸ್.ಸುಂಕಾಪುರ ಅವರು ವೈಜ್ಞಾನಿಕವಾಗಿ ಸಂಪಾದಿಸಿದ ಈ ಸಂಕಲನವು ೧೯೭೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡಿದೆ. 'ಜೀವನ ಜೋಕಾಲಿ' ಮಾಲೆಯ ೭ನೆಯ ಸಂಪುಟದಲ್ಲಿ ಡೊಳ್ಳಿನ ಹಾಡುಗಳನ್ನು ಸಂಪಾದಿಸಲಾಗಿದೆ. ಗಣಸ್ತುತಿ, ಗುರುಸ್ತುತಿ, ಮತಸ್ತುತಿ, ಪುರಾಣಸ್ತುತಿ, ಶರಣಸ್ತುತಿ, ನೀತಿಸ್ತುತಿ ಎಂಬ ೬ ಭಾಗಗಳಲ್ಲಿ ಒಟ್ಟು ೫೩ ಪದಗಳನ್ನು ಹೊಂದಿವೆ. ಕುರುಬರ ಪ್ರಾಚೀನತೆ, ಜೀವನ ನಿರ್ವಹಣೆ, ವೃತ್ತಿ ದೈವಗಳ ಆರಾಧನೆ, ಕುರುಬ ಕುಲದ ಒಳಪಂಗಡಗಳು, ವೀರಶೈವದ ಪ್ರಭಾವಕ್ಕೆ ಒಳಗಾದ ಶೈವರು, ಹತ್ತಿಕಂಕಣ ಮತ್ತು ಉಣ್ಣೆಕಂಕಣ, ಬೀರಪ್ಪನ ಜೀವನ ವೃತ್ತಾಂತ, ಮೈಲಾರನ ಮಹಿಮೆ ಪವಾಡಗಳು, ಡೊಳ್ಳಿನ ವಿಶೇಷತೆ, ಡೊಳಿನ ಹಾಡುಗಳ ಲಕ್ಷಣ, ಡೊಳ್ಳಿನ ಹಾಡುಗಳ ರಚನೆಯಲ್ಲಿ ವೀರಶೈವರ ಪಾತ್ರ ಮೊದಲಾದ ಮಹತ್ವದ ವಿಷಯಗಳನ್ನು ಚರ್ಚಿಸಿದ್ದಾರೆ.

ಡೊಳ್ಳಿನ ಹಾಡು -ಎನ್.ಬಸವರಾಜ್

ಕೃತಿಯ ೧೯೭೭ರಲ್ಲಿ ಮೈಸೂರು ಯಕ್ಷ ಪ್ರಕಾಶನದಿಂದ ಪ್ರಕಟಗೊಂಡಿದೆ. ಈ ಕೃತಿಯನ್ನು ಜನಪದ ಕೋಗಿಲೆ, ಜನಪದ ಸಾಹಿತ್ಯರತ್ನ ಶ್ರೀ ಕೆ.ಆರ್.ಲಿಂಗಪ್ಪನವರಿಗೆ ಅರ್ಪಿಸಿದ್ದಾರೆ. ಒಟ್ಟು ೨೮ ಪದಗಳನ್ನು ಹೊಂದಿದೆ. ಶರಣರ ಹಾಲುಮತ ದೈವಗಳು, ಪುರಾಣ, ಪುರುಷರ, ನೀತಿಪದ, ಒಗಟಿನ ಪದ, ಅನುಭವ ತತ್ವ, ಸಮಾಜದ ಲೌಕಿಕ ವಿಷಯ ಮುಂತಾದವನ್ನು ಚರ್ಚಿಸಿದ್ದಾರೆ. ಹಾಡುಗಾರನ ಊರು, ಜನಾಂಗ, ವಯಸ್ಸು ಮತ್ತು ಹಾಡುಗಳನ್ನು ಸಂಗ್ರಹಿಸಿದ ದಿನಾಂಕವನ್ನು ದಾಖಲಿಸಿದ್ದಾರೆ.

ದೀರ್ಘವಾದ ಮುನ್ನುಡಿಯನ್ನು ಜೀ.ಶಂ.ಪರಮಶಿವಯ್ಯ ಬರೆದು ಹಾಲುಮತದ ಮಹತ್ವದ ವಿಷಯಗಳನ್ನು ಚರ್ಚಿಸಿದ್ದಾರೆ. ಇವರೂ ಸಹ ಡಾ. ಎಮ್.ಎಸ್.ಸುಂಕಾಪುರ ಅವರಂತೆ ಮಂಟೇಸ್ವಾಮಿ ಕಾವ್ಯದಲ್ಲಿ ಕುರುಬಗೌಡರ ಪ್ರಸ್ತಾಪ, ಮೈಲಾರಲಿಂಗನ ಕಥೆಯಲ್ಲಿ ಕುರುಬರ ಪಾತ್ರವನ್ನು ಕುರಿತು ಚರ್ಚಿಸಿದ್ದಾರೆ. ಕುರುಬರ ಆಚಾರ ವಿಚಾರ, ಕುಲಗುರು ಒಡೆಯರು, ಡೊಳ್ಳಿನ ಸಂಪೂರ್ಣ ಮಾಹಿತಿ, ಕುರುಬರ ಮೇಳ ಮೊದಲಾದ ವಿಷಯಗಳ ಮಾಹಿತಿ ತಿಳಿಯಲು ಸಹಕಾರಿಯಾಗಿವೆ.

ನಂಬಿಯಕ್ಕನ ಚರಿತೆ, ಕೂರ್ಮಾವತಾರ, ಬೇಡರ ಕಣ್ಣಪ್ಪ, ಹುಟ್ಟಿದ್ದು ಕರೆ, ಅನುಭವ ತತ್ವ, ಉಂಟೇನು ನಿನ್ನನ್ನು ಬಿಟ್ಟು ಬರುವ ಮನೆ ಬೇರೈತೆ ಎನ್ನುವ ಬೇರೆ ಬೇರೆ ವಿಷಯಗಳ ಹಾಡುಗಳಿವೆ. ಬಿಡಿ ಹಾಡುಗಳಲ್ಲಿ ಗಣಸ್ತುತಿ, ದೇವಿಸ್ತುತಿ, ಬೀರೇದೇವರ ಸ್ತುತಿ, ಕಂಬಳಿಯ ವೈಶಿಷ್ಟ್ಯ-ಮಹತ್ವ, ಖಡೆ-ಹಾಡು, ಒಗಟಿನ ಹಾಡು,

ನೀತಿ ಪ್ರಧಾನ, ತತ್ವ ಪ್ರಧಾನ ಹಾಡುಗಳು ಮುಖ್ಯವಾಗಿವೆ. ಗ್ರಾಮ್ಯ ಭಾಷೆಯ ಆಡುನುಡಿ ಶೈಲಿ ನಿರರ್ಗಳವಾಗಿ ಹರಿದು ಆಕರ್ಷಣೀಯವಾಗಿದೆ. ಈ ಹಾಡುಗಳು ವಿಷ್ಣುದಾಸರ, ಶಿವಶರಣರ ಹಾಡುಗಳಿಂದ ಪ್ರಭಾವಿತವಾಗಿವೆ. ಆಗಾಗ ಬರುವ ಸಂವಾದ ಸಂಭಾಷಣೆಗಳು ಆಸಕ್ತಿಯನ್ನು ಹೆಚ್ಚಿಸುತ್ತವೆ.

ದೇವರ ಬಂದಾವ್ ಬನ್ನೀರೇ (ಭಾಗ ೧ ಮತ್ತು ೨) -ಡಾ. ಶಿವಾನಂದ ಗುಬ್ಬಣ್ಣನವರ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಶಿವಾನಂದ ಗುಬ್ಬಣ್ಣನವರು ೧೯೭೯ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ 'ದೇವಽಽರ್ ಬಂದಾವ್ ಬನ್ನೀಽಽರೇ ಭಾಗ-೧' ಕೃತಿಯನ್ನು ಪ್ರಕಟಿಸಿದ್ದಾರೆ. ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಧಾರವಾಡ ಜಿಲ್ಲೆಯ ಕುಂದಗೊಳ ತಾಲೂಕಿನ ಹಿರೇನರ್ತಿ ಮತ್ತು ಬೆನಕನಹಳ್ಳಿಯಿಂದ ಡೊಳ್ಳಿನ ಹಾಡುಗಳನ್ನು ಸಂಗ್ರಹಿಸಿದ್ದಾರೆ. ೩೮ ಪುಟಗಳ ಪ್ರಸ್ತಾವನೆಯಿಂದ ಹಾಡುಗಳ ಸಂಕ್ಷಿಪ್ತ ಕಥಾಸಾರ ಹೊಂದಿದೆ. ಈ ಕೃತಿಯಲ್ಲಿ ೧೯ ಹಾಡುಗಳಿವೆ. ಹಾಡುಗಾರರ ವೃತ್ತಿ, ವಯಸ್ಸು, ಹೆಸರು, ಜಾತಿ, ಊರು ಮೊದಲಾದ ವಿವರಗಳನ್ನು ದಾಖಲಿಸಲಾಗಿದೆ. ಜನಪದ ಗೀತೆಗಳ ಸಂಗ್ರಹ, ಪ್ರಕಟಣೆ ಪಾಶ್ಚಾತ್ಯ ರಾಷ್ಟ್ರದ ಪರಂಪರೆಯ ಅರಿವು ಮೊದಲಾದ ವಿಷಯಗಳನ್ನು ಚರ್ಚಿಸಿದ್ದಾರೆ. ಡೊಳ್ಳಿನ ಹಾಡುಗಳು ಬೆಳೆದು ಬಂದ ಪರಂಪರೆಯನ್ನು ಹಾಡುಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಕುರುಬ ಜನಾಂಗದ ಆಚಾರ-ವಿಚಾರ, ಕುರುಬರ ಪಂಗಡಗಳು, ಬೀರಲಿಂಗನ ವೃತ್ತಾಂತ ಡೊಳ್ಳಿನ ಹುಟ್ಟು ಮೊದಲಾದ ವಿಷಯಗಳನ್ನು ಚರ್ಚಿಸಲಾಗಿದೆ.

ಈ ಕೃತಿಯು ಪೌರಾಣಿಕ ಕಥೆಗಳಾದ ಭೀಮಾರ್ಜುನರ ಗರ್ವಭಂಗ, ಪತಿಭಕ್ತೆ ಅನಲಾದೇವಿ, ಪತಿಪರಾಯಣೆ ಪದ್ಮಾದೇವಿ, ಭಕ್ತ ಪ್ರಹ್ಲಾದ, ಏಳುಕೊಳ್ಳದ ಎಲ್ಲಮ್ಮ ಮುಂತಾದವು ಹೆಚ್ಚಿನ ಸಂಖ್ಯೆಯಲ್ಲಿವೆ. ಶಿವಶರಣರ ಕಥೆಗಳಾದ ವೀರಗೊಲ್ಲಾಳ, ಶಿವಶರಣೆ ನಿಂಬೆಕ್ಕ, ತಿರುನೀಲಕಂಠ, ಕೋಳೂರು ಕೊಡಗೂಸು ಮುಂತಾದವರ ವೃತ್ತಾಂತಗಳ ಕಥೆಗಳನ್ನು ಹೊಂದಿವೆ.

ಗುಬ್ಬಣ್ಣನವರ ಇನ್ನೊಂದು ಕೃತಿ 'ದೇವರ್ ಬಂದಾವ್ ಬನ್ನೀರೆ ಭಾಗ -೨' ೧೯೮೦ರಲ್ಲಿ ಒಕ್ಕಲ ಮಕ್ಕಳ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಪೌರಾಣಿಕ, ನೈತಿಕ, ಚಾರಿತ್ರಿಕ ಮತ್ತು ಘಟನಾತ್ಮಕ ಎಂಬ ವಿಭಾಗಗಳಲ್ಲಿ ಗಿರಿಜಾ ಕಲ್ಯಾಣ, ಚಿಲ್ಲಾಳ, ಮಹಾಸತಿ ಅನಸೂಯೆ, ಅಕ್ಕನಾಗಮ್ಮ, ಪಿಂಡಾಂಡ ಪ್ರಕೃತಿ, ಪಾಪ -ಪುಣ್ಯ, ಹಾಲುಮತ ಹಿರಿಮೆ, ಶ್ರೀ ಗುರು ಸಿದ್ಧಾರೂಢ, ತಾಯಿ ಕರುಳು ಮುಂತಾದ ೧೩ ಹಾಡುಗಳಿವೆ. ಇವುಗಳನ್ನು ಧಾರವಾಡ ಜಿಲ್ಲೆಯ ಕುಂದಗೋಳು ತಾಲೂಕಿನ ಹಿರೇನರ್ತಿ ಗ್ರಾಮದ ಕುರುಬರಿಂದ ಸಂಗ್ರಹಿಸಿದ್ದಾರೆ. ಹಾಡುಗಾರರ ಸಂಪೂರ್ಣ ಮಾಹಿತಿಯೊಂದಿಗೆ ಸಂಕ್ಷಿಪ್ತ ಕಥಾಸಾರ ನೀಡಿದ್ದಾರೆ. ಭಾಗ-೧ ಮತ್ತು ಭಾಗ-೨ ಕೃತಿಗಳ ೩೨ ಹಾಡುಗಳು ದ್ವಿಪದಿ, ತ್ರಿಪದಿ, ಚೌಪದಿ ಸಾಂಗತ್ಯಗಳಲ್ಲಿ ರಚನೆಗೊಂಡಿವೆ.

ನಡಿಯುಪ್ಪ ನಮ್ಮ ನಾಡಿಗೆ - ಕೆ.ವಿರೂಪಾಕ್ಷಗೌಡ ಮತ್ತು ಮೇಟಿ ಕೊಟ್ರಪ್ಪ

೧೯೮೧ರಲ್ಲಿ ಪ್ರಕಟಗೊಂಡ ಈ ಕೃತಿಯು ೪೮ ಹಾಡುಗಳನ್ನು ಹೊಂದಿದೆ. ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಸಂಡೂರು, ಹೊಸಪೇಟೆ, ಕೊಪ್ಪಳ, ಯಲಬುರ್ಗಾ ಮತ್ತು ಗದಗ ಜಿಲ್ಲೆಯ ಡಂಬಳ ಪ್ರದೇಶದ ಹತ್ತು ಜನ ಹಾಡುಗಾರರಿಂದ ಸಂಗ್ರಹಿಸಿದ್ದಾರೆ. ಹಾಲುಮತದ ದೈವಗಳಿಗೆ ಸಂಬಂಧಿಸಿದ ಹಾಡುಗಳು ಕುತೂಹಲಕಾರಿಯಾಗಿವೆ. ಈರಗಾರರ ವೇಷಭೂಷಣ, ಭರಮಣ್ಣ, ಬೀರದೇವರು ಮೊದಲಾದ ಹಾಡುಗಳು ಹೊಸ ವಿಷಯವನ್ನು ಹೊಂದಿವೆ. ಮಳೆರಾಯ, ಕೊಟ್ರಯ್ಯ, ಹಡಗಲಿ ಹಾಲಸ್ವಾಮಿ, ಸಿಂದೋಗಿ ಮರಳಣ್ಣ, ಸಿಂದೋಗಿ ಶಿವ ಮೊದಲಾದ ಹಾಡುಗಳು ಈ ಪ್ರದೇಶದ ವೈಶಿಷ್ಟ್ಯವನ್ನು ತಿಳಿಸುತ್ತವೆ. ಗುರೂ ಚನ್ನಬಸಪ್ಪ ಅವರು ಮುನ್ನುಡಿ ಬರೆದಿದ್ದಾರೆ. ಸಂಪಾದಕರು 'ನಮ್ಮ ನುಡಿ' ಯಲ್ಲಿ ಡೊಳ್ಳಿನ ಹಾಡುವ ರೀತಿ, ಸಂಪ್ರದಾಯ, ಪರಂಪರೆ ಹೀಗೆ ಮುಖ್ಯ ವಿಷಯಗಳನ್ನು ತಿಳಿಸಿದ್ದಾರೆ.

ದೇವರಿಗೆ ಶರಣೆನ್ನುವನೇ -ಕಮಲಾ ಹೆಮ್ಮಿಗೆ

ಕಮಲಾ ಹೆಮ್ಮಿಗೆ ಅವರು ಕುರುಬ ಜನಾಂಗದ ಆಚಾರ, ವಿಚಾರ ರೂಢಿ ಸಂಪ್ರದಾಯ, ಗುರುಪರಂಪರೆ ಮೊದಲಾದ ವಿಷಯಗಳನ್ನೊಳಗೊಂಡ ೩೬ ಡೊಳ್ಳಿನ ಪದಗಳನ್ನು ಈ ಸಂಪುಟದಲ್ಲಿ ಅಳವಡಿಸಿದ್ದಾರೆ. ಜೊತೆಗೆ ಹಾಡಿದ ಕಲಾವಿದರನ್ನು ಪರಿಚಯಿಸಿದ್ದಾರೆ. ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದ ಹಾಡುಗಳು ಅಧಿಕವಾಗಿವೆ. ಸಂಗೊಳ್ಳಿರಾಯಣ್ಣ, ಅಮೋಘಸಿದ್ಧ, ಕೊಣ್ಣೂರು ಕರಿಯಪ್ಪ ಮೊದಲಾದವರ ಜೀವನ ಸಾಧನೆಯ ಹಾಡುಗಳು ಇಲ್ಲಿ ಪ್ರಮುಖವಾಗಿವೆ.

ಡೊಳ್ಳಿನ ಪದಗಳು -ಶಿವಲಿಂಗ ಕಂಬಾರ

೨೦೦೬ರಲ್ಲಿ ಪ್ರಕಟಗೊಂಡ ಈ ಕೃತಿಯು ೪೬ ಹಾಡುಗಳನ್ನು ಹೊಂದಿದೆ. ಬೆಳಗಾವಿಯ ಚಿಕ್ಕೋಡಿ ತಾಲೂಕಿನ ಕಬ್ಬೂರು ಗ್ರಾಮದ ಶಿವಲಿಂಗ ಕಂಬಾರರು ಇತ್ತೀಚಿನ ಸಂಗ್ರಹಕಾರರಾಗಿದ್ದಾರೆ. ಹಾಡುಗಳ ಮೇಲೆ ಹಾಲುಮತದ ಪ್ರಭಾವ ದಟ್ಟವಾಗಿದೆ. ವಚನಕಾರರಂತೆ ಹಾಡುಗಳ ಕೊನೆಯಲ್ಲಿ ಕವಿ ತನ್ನ ಹೆಸರಿನ ಅಂಕಿತನಾಮವನ್ನು ಬಳಸಿದ್ದಾರೆ. ಈ ಕೃತಿಯು ಶಿವಪದ್ಮ, ಶಿವಸಿದ್ಧಬೀರ, ವೀರಗೊಲ್ಲಾಳ, ಮಾಳಿಂಗರಾಯ, ರೇವಣಸಿದ್ಧ ಮೊದಲಾದವರ ಚರಿತ್ರೆಯನ್ನು ತಿಳಿಸುತ್ತದೆ.

ಅಂಶಗುಣಾತ್ಮಕವಾದ ಸರಳ ರಚನೆ, ಅಪ್ಪಟ ಜನಪದ ಶೈಲಿಯ ಆಡುಮಾತಿನ ಬಳಕೆ, ವಿಭಿನ್ನ ಲಯ, ನಾದದ ಗಾಂಭೀರ್ಯ, ಕೈಪೆಟ್ಟು ಮೊದಲಾದ ಡೊಳ್ಳಿನ ಪದಗಳು ಸಂಸ್ಕೃತಿಯ ಕಥನಕವನಗಳಾಗಿವೆ. ಡೊಳ್ಳಿನ ಹಾಡುಗಳ ವಿಷಯ, ರಚನೆ, ಸ್ವರೂಪಗಳ ದೃಷ್ಟಿಯಿಂದ ಸಾಂಸ್ಕೃತಿಕ ಹಿನ್ನೆಲೆ ಪಡೆದಿವೆ.

ಡೊಳ್ಳಿನ ಪದಗಳು ಹಾಡುವ ತಂಡಗಳು ಮುಖ್ಯವಾಗಿ ಬೀದರ, ಗುಲಬರ್ಗ, ಬಳ್ಳಾರಿ, ಕೊಪ್ಪಳ, ಧಾರವಾಡ, ಬಿಜಾಪುರ, ಬೆಳಗಾವಿಯಲ್ಲಿವೆ. ಇವರು ಡೊಳ್ಳಿನ ಪದಗಳಲ್ಲಿ ಸಾಂಸ್ಕೃತಿಕ ಸತ್ವವನ್ನೂ ನಿಷ್ಠೆಯಿಂದ ಪಾಲಿಸಿ ಉಳಿಸಿ ಬೆಳೆಸಿದ್ದಾರೆ.

ಡೊಳ್ಳಿನ ಹಾಡುಗಳಲ್ಲಿ ಸತ್ವ, ಭಾಷೆಯ ಸಹಜತೆ, ಸಂಸ್ಕೃತಿಯ ಪರಂಪರೆಯನ್ನು ಕಾಣಬಹುದು. ಪ್ರತಿ ಹಾಡಿನ ಪ್ರಾರಂಭದಲ್ಲಿ ಸ್ತುತಿ ಪದ್ಯವಿದ್ದು ಬ್ರಹ್ಮನನ್ನು (ಬ್ರಹ್ಮದೊಡ್ಡಾಂವ್.....) ಸ್ಮರಿಸುತ್ತಾರೆ. ಹೀಗೆ ಡೊಳ್ಳಿನ ಹಾಡುಗಳಲ್ಲಿ ಕುರುಬರ ಸಂಸ್ಕೃತಿಯ ಆಚಾರ -ವಿಚಾರ, ಪೌರಾಣಿಕ ಕಥೆಗಳು, ಚರಿತ್ರೆಯ ವೀರಹೋರಾಟಗಾರರು, ನೀತಿಬೋಧೆ ಮೊದಲಾದ ಮಹತ್ವಪೂರ್ಣ ಮಾಹಿತಿಯನ್ನು ಒದಗಿಸುತ್ತವೆ. ಮೌಖಿಕ ಪರಂಪರೆಯಿಂದ ಶಿಷ್ಟ ಸಾಹಿತ್ಯದತ್ತ ತಿರುಗಿ ಸಂಗ್ರಹಕಾರ್ಯ ನಡೆದುದು ಒಂದು ಮೈಲುಗಲ್ಲಾಗಿದೆ. ಇಂಥ ಕೆಲಸಗಳನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ನಿರೀಕ್ಷಿಸಬೇಕಾಗಿದೆ.

ಈಗ ಪ್ರಕಟವಾದ ಡೊಳ್ಳಿನ ಹಾಡುಗಳ ಸಂಪುಟಗಳನ್ನು ಅವಲೋಕಿಸಿದರೆ ಆಗಬೇಕಾದ ಕಾರ್ಯ ಇನ್ನೂ ಬಹಳ ಇದೆ ಎಂಬುದು ಗಮನಕ್ಕೆ ಬರುತ್ತದೆ. ನಾಡಿನಲ್ಲಿರುವ ಡೊಳ್ಳಿನ ಹಾಡುಗಾರರನ್ನು ಸಂಪರ್ಕಿಸಿ ಹಾಡುಗಳನ್ನು ಸಂಗ್ರಹಿಸಿ ಸಂಪುಟ ರೂಪದಲ್ಲಿ ಪ್ರಕಟಿಸುವ ಅಗತ್ಯವಿದೆ. ಅಂದಾಜು ಐದು ಸಾವಿರ ಪುಟಗಳ ವ್ಯಾಪ್ತಿಯಲ್ಲಿ ೧೦ ಸಂಪುಟಗಳಾಗುವಷ್ಟು ಡೊಳ್ಳಿನ ಹಾಡುಗಳು ಮೌಖಿಕ ರೂಪದಲ್ಲಿವೆ. ಹಿರಿಯ ಕಲಾವಿದರಿಂದ ಇಂಥ ಹಾಡುಗಳನ್ನು ನಾಶವಾಗುವ ಮೊದಲೇ ಅವುಗಳನ್ನು ಸಂಗ್ರಹಿಸಿ ಪ್ರಕಟಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸರಕಾರ, ವಿಶ್ವವಿದ್ಯಾಲಯಗಳು ಹಾಗೂ ವಿದ್ವಾಂಸರು, ಕಾಲಬದ್ಧ ಯೋಜನೆಗಳನ್ನು ಹಾಕಿಕೊಂಡು ಸಂಗ್ರಹಿಸಿ ಪ್ರಕಟಿಸಬೇಕಾಗಿದೆ. ಡೊಳ್ಳಿನ ಹಾಡುಗಳ ಸ್ವರೂಪ, ವಸ್ತು, ವಿಷಯಗಳು ಕುರುಬರ ಸಾಂಸ್ಕೃತಿಕ ಸಂಗತಿಗಳ ಅಧ್ಯಯನಕ್ಕೆ ಪ್ರಮುಖ ಆಕರಗಳಾಗಬಲ್ಲವು.

೭. ಹಾಡುಗಳು ಮತ್ತು ಹೇಳಿಕೆಗಳು

೧. ಹಾಡುಗಳು

ಜನಪದ ಸಾಹಿತ್ಯದಲ್ಲಿ ಅನೇಕ ಜನಾಂಗಗಳ ಆಚಾರ ವಿಚಾರಗಳು ಮೌಖಿಕ ರೂಪದಲ್ಲಿ ವಿಪುಲವಾಗಿವೆ. ಜನಸಾಮಾನ್ಯರು ತಮ್ಮ ಜೀವನದ ಏಳು ಬೀಳುಗಳನ್ನು ನಗುತ್ತಲೇ ಎದುರಿಸುವುದನ್ನು ನಿಸರ್ಗವೇ ಅವರಿಗೆ ಕಲಿಸಿರುತ್ತದೆ. ಹೀಗೆ ಪ್ರಕೃತಿಯೊಂದಿಗೆ ನಿಕಟ ಸಂಪರ್ಕ ಹೊಂದಿದ ಜನಾಂಗವು ತಮ್ಮ ಆಚಾರ, ವಿಚಾರ ರೂಢಿ ಸಂಪ್ರದಾಯಗಳನ್ನು ಅಲ್ಲದೆ ಶ್ರಮದ ಸಂದರ್ಭಗಳಲ್ಲಿ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದರು. ಅಂಥ ಅನೇಕ ಹಾಡುಗಳಲ್ಲಿ ಸ್ತ್ರೀಯರ ಮತ್ತು ಪುರುಷರ ಪಾತ್ರ ಪ್ರಧಾನವಾಗಿರುತ್ತದೆ. ಸ್ತುತಿಪದಗಳು, ಆಚರಣೆಯ ಪದಗಳು, ಸಂಬಂಧ ಗೀತೆಗಳು, ಮಳೆ -ಬೆಳೆ ಬಿತ್ತನೆ ಕಾಯಕದ ಹಾಡು, ಪೌರಾಣಿಕ ಹಾಡು, ಕಥನ ಗೀತೆಗಳು, ಲಾವಣಿ, ಪಾಡ್ದನ, ಮದುವೆ ಹಾಡು, ವಸಗೆಯ ಪದಗಳು, ಪ್ರಣಯದ ಗೀತೆಗಳು, ಹಾಸ್ಯ ಪದಗಳು ಹೀಗೆ ವಿವಿಧ ಪ್ರಕಾರದ ಹಾಡುಗಳನ್ನು ಹಾಡುತ್ತಾ ತಮ್ಮ ಅತಿ ಶ್ರಮದ ಕೆಲಸಗಳನ್ನು ಮಾಡಿ ಮುಗಿಸುತ್ತಿದ್ದರು. ಇಂದಿನ ಆಧುನಿಕತೆಯ ಯಾಂತ್ರಿಕ ಜೀವನದಲ್ಲಿ ರುಬ್ಬುವ, ಕುಟ್ಟುವ, ಬೀಸುವ, ಕಳೆ ಕೀಳುವ, ಬೆಣ್ಣೆ ಕಟೆಯುವ ಇಂಥ ಅನೇಕ ಕೆಲಸಗಳಿಗಾಗಿ ಯಂತ್ರಗಳನ್ನು ಅವಲಂಬಿಸಬೇಕಾಗಿದೆ. ಜಾಗತೀಕರಣದ ಭರದಲ್ಲಿ ಯಾಂತ್ರಿಕ ಪರಿಸ್ಥಿತಿಯಿಂದ ಪರಂಪರೆ, ಸಂಪ್ರದಾಯ, ಸಂಸ್ಕೃತಿ ಮುಂತಾದವನ್ನು ಪರಿಚಯಿಸುವ ಪದಗಳು ಕಣ್ಮರೆಯಾಗಿ ಜನರಿಂದ ದೂರವಾಗುತ್ತಿವೆ. ಆದ ಕಾರಣ ಇಂಥ ಹಾಡುಗಳನ್ನು ಹಿರಿಯ ತಲೆಮಾರಿನವರಿಂದ

ಸಂಗ್ರಹಿಸುವ ಕಾರ್ಯ ಜರೂರಾಗಿ ಆಗಬೇಕಿದೆ. ಈ ಹಿನ್ನೆಲೆಯಲ್ಲಿ ಕುರುಬ ಸಮುದಾಯದ ಸಂಪ್ರದಾಯ ಆಚರಣೆ ಸಂದರ್ಭದಲ್ಲಿ ಹಾಡು ಕಥೆಗಳನ್ನು ಹೇಳುವ ರೂಢಿಯಿತ್ತು. ಈ ರೂಢಿ ಕಾರಣವಾಗಿ ಕೆಲವು ಕುರುಬರ ಹಾಡುಗಳ ಸಂಗ್ರಹಗಳು ಪ್ರಕಟವಾಗಿವೆ. ಅವುಗಳ ವಿಶಿಷ್ಟತೆಯನ್ನು ಈಗ ಅವಲೋಕಿಸಬಹುದು.

ಕುರುಬರ ಮದುವೆಯ ಪದಗಳು - ಎಸ್.ಜಿ.ಸಿದ್ದರಾಮಯ್ಯ ಮತ್ತು ಕೆ.ಆರ್.ಸಂಧ್ಯಾರೆಡ್ಡಿ

ಹಾಲುಮತ ಸಂಸ್ಕೃತಿ, ಸಂಪ್ರದಾಯ, ಸಂಸ್ಕಾರಗಳನ್ನು ಪರಿಚಯಿಸುವ ಹಾಡುಗಳನ್ನು "ಸುವರ್ಣ ಜನಪದ ಕಾವ್ಯ"ದ ಮೂರನೆಯ ಭಾಗದ 'ಮದುವೆಯ ಮತ್ತು ಒಸಗೆಯ ಹಾಡುಗಳು' ಎಂಬ ಶೀರ್ಷಿಕೆಯಲ್ಲಿ 'ಕುರುಬರ ಮದುವೆಯ ಪದಗಳು' ಎಂಬ ಉಪಶೀರ್ಷಿಕೆಯಡಿ ೧೬ ಪದಗಳನ್ನು ಎಸ್.ಜಿ.ಸಿದ್ಧರಾಮಯ್ಯ ಮತ್ತು ಕೆ.ಆರ್.ಸಂಧ್ಯಾರೆಡ್ಡಿ ಅವರು ಸಂಗ್ರಹಿಸಿದ್ದಾರೆ. ಅರಿಷಿಣ ಕುಟ್ಟುವಾಗ, ಹಸೆ ಹಚ್ಚುವದು, ಸಾಸುವೆ ತೊಳೆಯೋದು, ಗಂಗೆ ತರುವಾಗ, ನೀರೊಯ್ಯುವಾಗ, ನೀರು ಮಿಂದಾದ ಮೇಲೆ ಓಕುಳಿಯಾಡುವ, ಅರಿಷಿಣ ಎಣ್ಣೆ ಕೊಡುವಾಗ, ಬಿಡದಿ ಕೊಟ್ಟಿದ್ದ-ಗಂಡನ್ನು ಕರೆದುಕೊಂಡು ಬರುವಾಗ, ಬೀಗರನ್ನು ಕರೆಯುವ, ಮಹೂರ್ತ ಮಾಡುವಾಗ, ಆರಣೆ ತರೋದು, ಬಾಸಿಂಗದ ಹಾಡು, ಹೆಣ್ಣು ಕಳಿಸೋದು, ಕಸೆ ಬಿಚ್ಚೋದು, ಬಾಲೆ ನೆರೆದಾಗ ಮೊದಲಾದ ಪದಗಳು ಮಹತ್ವದ ಮಾಹಿತಿಗಳನ್ನು ಒದಗಿಸುತ್ತವೆ.

ಸಂಭ್ರಮದ ನೈಜ ವಾತಾವರಣದ 'ಅರಿಷಿಣ, ಕುಟ್ಟುವ' ಪದಗಳಲ್ಲಿ ಗರತಿಯರು, ವಾರಗಿತ್ತಿಯರು ಎಲ್ಲ ಬಂಧುಬಾಂಧವರು, ಒಂದೆಡೆ ಸೇರಿ ಅರಸಗೌಡನ ಮಗನ ಮದುವೆಗಾಗಿ ಸೆರಗ ಕಟ್ಟಿಕೊಂಡು ಅರಿಷಿಣ ಮತ್ತು ಸೀಗೆಕಾಯಿಯನ್ನು ಒನಕೆಯಿಂದ ಒರಳಲ್ಲಿ ಕುಟ್ಟುತ್ತಾ ಈ ಪದ ಹೇಳುತ್ತಾರೆ.

ವಾರೋಗಿತ್ತೀರು ನ್ಯಾರನ್ನಗರತೇರು
ಬಾಗಿ ಬಗಲ ಸೆರಗ ಮಲಕಟ್ಟು ಕಟ್ಟಿಗಂಡು
ತೂಗಿ ಬಿಟ್ಟರು ಜಂತದೊನಿಕೇಯ
ಅರುಸುಣ ಸೀಗೇಕಾಯಿ ಸರಸನಾಡುತ ಬಂದು
ಅರಸಗೌಡಾರ ಮಗನೀಗೆ
ಅರಸಗೌಡರ ಮಗನ ಕಲ್ಯಾಣಕ್ಕೆ
ಸರಸ ನಾಡ್ಯಾವಲ್ಲೆ ಒರುಳಾಗೆ (ಪುಟ ೧೫೨)

'ಹಸೆ ಹಚ್ಚುವ ಪದ'ವು ಮದುವೆಯ ಹೆಣ್ಣಿಗೆ ಮತ್ತು ಗಂಡಿಗೆ ಅರಿಷಿಣ ಹಚ್ಚುವದನ್ನು ವರ್ಣಿಸುತ್ತದೆ. ಅರಿಷಿಣ ಹಚ್ಚಿದ ಮೇಲೆ ಮುತ್ತೈದೆಯರು ಸೇರಕ್ಕಿಯನ್ನು ಇಟ್ಟು ಆರತಿ ಬೆಳಗುತ್ತಾರೆ.

ಅಂಡಕ್ಕಿ ದುಂಡಕ್ಕಿ ದುಂಡುರಾಜದಕ್ಕಿ
ಕುಂದೂರು ಗದ್ದೆ ಗೊನಿಬಾಳೆ ನೆಲ್ಲಕ್ಕಿ
ಕಂದಯ್ಯಗೂದಾರೆ ತಿರಿಸಾಸುವೆ (ಪುಟ ೧೫೮)

ಹೆಂಗಳೆಯರೆಲ್ಲ ಐರಣಿ (ಮಣ್ಣುಗಡಿಗೆ) ತಂದು ಅವುಗಳನ್ನು ಪೂಜಿಸಿ ಗಂಗೆ (ನೀರು) ಯನ್ನು ತರುತ್ತಾರೆ. ಅದಕ್ಕೆ ಗಂಗಮ್ಮನ ಪೂಜೆ ಎನ್ನುವರು. ಆ ವಿವರಗಳನ್ನು ಗಂಗೆ ತರುವಾಗ ಪದ ಹೀಗೆ ಹೇಳುತ್ತದೆ.

ವನ್ನೆಯಂತ ಬಾವಿ ಎಣ್ಣೆಯಂತ ನೀರು
ಸಣ್ಣಮಲ್ಲಿಗೆ ಕಲುಕಟ್ಟುಮ ಬಾವ್ಯಾಗೆ
ಒಡಗಾಯಿನೊಡೆದು ಕರುದಾಗೆ ಗಂಗಮ್ಮನ
ಗಂಗಮ್ಮ ಬಾನಮ್ಮ ಅರಣೀಗೆ (ಪುಟ ೧೬೦)

ಹೀಗೆ ಗಂಗೆಯಿಂದ (ಹೊಳೆ) ತಂದ ನೀರನ್ನು ಅರಿಷಿಣ ಹಚ್ಚಿದ 'ಮದುಮಕ್ಕಳಿಗೆ' ಸ್ನಾನ ಮಾಡಿಸಲು ಬಳಸುತ್ತಾರೆ. ಇದನ್ನು ಮದುಮಕ್ಕಳು ಮಾಡುವದು ಎಂತಲೂ ಕರೆಯುತ್ತಾರೆ. ಈ ವೃತ್ತಾಂತವನ್ನು 'ನೀರೊಯ್ಯುವಾಗ' ಎಂಬ ಪದದಲ್ಲಿ

ಕಂದಮ್ಮಗ್ಗಣಿ ಮಿಂದು ಬಾಗುಲಗ್ಯೆದಾಳೆ
ಸಂದೇಗೆ ತಂದ ಮದವೀನ ||ಎತ್ತಿ||
ಸಂದೇಗೆ ತಂದ ಮದವೀನ ಸೀರೆಯ
ತಂದುಕೂಡಿ ನೀರಮಿಂದ ಮಗಳೀಗೆ (ಪುಟ ೧೬೩)

ಸ್ನಾನ ಮಾಡಿಸಿದ ಮದುಮಕ್ಕಳಿಗೆ ಹೊಸಬಟ್ಟೆಗಳನ್ನು ಉಡಿಸಿ ಶೃಂಗರಿಸುತ್ತಾರೆ. 'ಅರಿಷಿಣ ಎಣ್ಣೆ ಕೊಡುವಾಗ' ಎಂಬ ಪದವು ಹಾಲುಮತದ ಕುಲಗುರು ರೇವಣಸಿದ್ಧ, ಕಲ್ಯಾಣದ ಪ್ರಸ್ತಾಪ, ಆ ಜನಾಂಗದ ಪ್ರಾಚೀನತೆ, ಸಂಸ್ಕೃತಿಯನ್ನು ಮತ್ತು ಎಲ್ಲ ಪುರಾಣಗಳೊಂದಿಗೆ ಹಾಲುಮತದ ತಳಕನ್ನು ಜ್ಞಾಪಿಸುತ್ತದೆ.

ಅಸುರುನೆ ಮರುದಾವೆ ಅಸುರಂಗಿ ಮರುದಾವೆ
ಅಸುಮಗ ರೇವಣ್ಣ ಪಡೆದಂತ ಅಲುಮತ ನೋರ
ದೆಸಕಿಟ್ಟು ಬೀದ್ಯಾಗೆ ನಡದಾವೆ (ಪುಟ ೧೬೬)

ಬೀಗರನ್ನು ಎದುರುಗೊಳ್ಳುವ 'ಸ್ವಾಗತಕೋರುವ ಕುರಿತಾಗಿ' 'ಬೀಗರನ್ನು ಕರೆಯುವುದಕ್ಕೆ ಹೋಗುವಾಗ' ಎಂಬ ಪದ ಪ್ರಸ್ತಾಪಿಸುತ್ತದೆ.

ಬೀಗರಿಗೆ ಶರಣು ಬಿಂಕರಿಗೆ ಶರಣು
ಬೀಗ ಬೀಗರಿಗೆ ಶರಣು ಶರಣು ಏರಿ ಬಂದ
ಆನೆ ವಾನಕ್ಕೆ ಶರಣು ಶರಣು (ಪುಟ ೧೬೯)

'ಮಹೂರ್ತ ಮಾಡುವಾಗ' ಪದವು ತಾಳಿ ಕಟ್ಟುವ ಪ್ರಸಂಗವನ್ನು ವಿವರಿಸುತ್ತದೆ. ಮದುಮಕ್ಕಳನ್ನು ಕಲ್ಯಾಣ ಮಂಟಪಕ್ಕೆ ಸೋದರ ಮಾವ ಕರೆದುಕೊಂಡು ಬರುವ ಸಂಪ್ರದಾಯವಿದೆ.

ದಾರೆಯ ಪೊತ್ತಿಗೆ ಯಾರ‍್ಯಾರು ಬರುತಾರೆ
ದಾರದ ಕೊರಳಯಿರಿಯಣ್ಣ ಸ್ವಾದರ ಮಾವ
ದಾರೇಯಪೊತ್ತೀಗೆ ಬರಬೇಕು (ಪುಟ ೧೭೫)

ಅರಣೆ ತರೋದು, ಬಾಸಿಂಗ ಬಿಡುವದು ಮೊದಲಾದ ಕಾರ್ಯಕ್ರಮದ ನಂತರ ಮದುಮಕ್ಕಳನ್ನು ಗಂಡನ ಮನೆಗೆ ಕಳಿಸುವ ಸಂದರ್ಭವನ್ನು 'ಹೆಣ್ಣ ಕಳಿಸೋದು' ಪದ ವರ್ಣಿಸುತ್ತದೆ.

ಆರು ಕರಿಯ ಜಾಡಿ ಆರು ಬಿಳಿಯ ಜಾಡಿ
ಆರೆಂಟು ಜಾ ಅರಿವಿಲಾಸಿ ನಡುವು ಜಾಕ್ಕು
ರೇವಣ್ಣರು ಕುಂತವರೆ ಗನಗುರುವು
ಮುದ್ನನೆ ಗಂಬಳಿಯ ತಿದ್ದಿಗದಿಗ್ಹಾಸಿ
ಮೊಗ್ಗ ತಂದಿಡಿರಿ ಅಪ್ರೆಡಬಲಕೆ ಕಲ್ಯಾಣದೊಳಗೆ
ಗೆದ್ದ ಬಂದಂತ ಗುರುವೀಗೆ
ಕುರುಬರ ಹೆಣ್ಣೀಗೆ ಲಿಂಗವ ದರಿಸ್ಯಾರೆ
ತಿಂದುಂಬೋದು ನೆಲ್ಲಿ ತೊರಿಸ್ಯಾರೆ। ಗೋವಿನ
ಗಂಜ್ಳ ಕುಡಿಸ್ಯಾರೆ ಒಡಲೀಗೆ। ಬೇವಿನ
ಕಡ್ಯಾಗೆ ನಾಲಿಗೆ ಸುಡಿಸ್ಯಾರೆ। ಸಂಗೇನೋರ
ಬದ್ರಿಗೆ ಲಿಂಗ ದರಿಸ್ಯಾರೆ (ಪುಟ ೧೭೯)

ಎರಡು ಪದಗಳೂ ಕುರುಬರ ಆಚಾರ -ವಿಚಾರಗಳ ಪರಂಪರೆಯನ್ನು ಪ್ರತಿನಿಧಿಸುತ್ತವೆ. ಒಡೆಯರು ಸಂಪ್ರದಾಯದಂತೆ ಮದುವೆ ಸಮಯದಲ್ಲಿ ವಧುವರರನ್ನು ರೇವಣಸಿದ್ಧ, ಶಾಂತಮುತ್ತಯ್ಯ ಮತ್ತು ಕಲ್ಯಾಣದ ಹೆಸರಿನಿಂದ ಹರಸುತ್ತಾರೆ. ಇದನ್ನು ವಿ.ಆರ್.ಹನುಮಂತಯ್ಯನವರು ತಮ್ಮ 'ಭಾರತದ ಕುರುಬರ ಚರಿತ್ರೆ' ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ.[೨] ಕುರುಬ ಜಾತಿಯ ಮಹಿಳೆಯನ್ನು ಒಡೆಯರು ಮದುವೆ ಮಾಡಿಕೊಂಡರೆ ಕೆಲವು ಆಚಾರಗಳನ್ನು, ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅದರ ಸವಿವರಗಳನ್ನು ಈ ಮೇಲಿನ ಪದ ಒದಗಿಸಿಕೊಡುತ್ತದೆ. ಕುರುಬ ಜಾತಿಯ ಮಹಿಳೆಯು ಲಿಂಗವನ್ನು ಧರಿಸಬೇಕು. ಮಾಂಸಾಹಾರವನ್ನು ಬಿಡಬೇಕು. ಅವರು ತವರು ಮನೆಗೆ ಬಂದಾಗ ಮಡಿಹುಡಿಯಿಂದ ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳಬೇಕು. ಮದುವೆಯ ಸಂದರ್ಭದಲ್ಲಿ ದೀಕ್ಷೆ ಕೊಡುವಾಗ ಬೇವಿನಕಡ್ಡಿಯಿಂದ ನಾಲಿಗೆ ಸುಡಿಸುತ್ತಾರೆ. ಗೋಮೂತ್ರವನ್ನು ಕುಡಿಯಬೇಕು. ಆಗ ಅವಳು ಒಡೆಯರ ಮನೆತನದ 'ಒಡೇರಮ್ಮ' ಆಗುತ್ತಾಳೆ.

ಪ್ರೀತಿಯಿಂದ ಸಾಕಿದ ಮಗಳನ್ನು ಗಂಡನ ಮನೆಗೆ ಕಳುಹಿಸುವ ಬಂಧುಬಾಂಧವರ ದುಃಖವಂತೂ ಹೇಳತೀರದು. ಆ ಪ್ರಸಂಗವನ್ನು 'ಹೆಣ್ಣು ಕಳಿಸುವದು' ಪದ ವಿವರಿಸುತ್ತದೆ.

ಎಣ್ಣೀಯ ಕಂಬೀಗೆ ಕೆಂಬಿರಿವೆ ಮುತ್ತಿರಿದಂಗೆ
ಸಣ್ಣವುಳ ಪಾರ್ವತಿಯ ಬಳಗಾವೆ
ಸಣ್ಣವುಳ ಪಾರ್ವತಿಯ ಬಳಗಾದ ಕಣ್ಣೀರು
ಸೋನೆ ಮಳೆಯಾಗಿ ಸುರುದಾವೆ (ಪುಟ ೧೮೩)

ಬಿಡದೆ ಸುರಿಯುವ 'ಸೋನೆ ಮಳೆ'ಗೆ ದುಃಖವನ್ನು ಹೋಲಿಸಿದ್ದಾರೆ. 'ಬಾಲೆ ಮೈನೆರೆದಾಗ' ಪದವು ಹೆಣ್ಣುಮಗು ಪ್ರೌಢಾವಸ್ಥೆಗೆ ಬಂದಾಗ ಅಲ್ಲಿಯ ವಾತಾವರಣ, ಕುಟುಂಬ ವರ್ಗದವರ ಸಂಭ್ರಮ ಸಡಗರ ಮತ್ತು ಅವಳ ಉಟೋಪಚಾರ, ಅಲಂಕಾರ ಎಲ್ಲ ವಿಷಯಗಳನ್ನೂ ಈ ಪದ ವರ್ಣಿಸುತ್ತದೆ.

ಅಚ್ಚ ಎಳ್ಳಿಗೆ ತಕ್ಕ ಅಚ್ಚನ ಬೆಲ್ಲ ತನ್ನಿ
ಪಟ್ಟೆ ಕಂಬದ ರಗುರಾಮರ ನೆನೆಯುತ
ಕುಟ್ಟಮ್ಮ ಎಳ್ಳು ಚಿಗಳೀಯ (ಪುಟ ೧೮೮)

ಇಂಥ ಆಚರಣೆಗಳು ಹಳ್ಳಿಯಲ್ಲಿ ಮಾತ್ರ ಉಳಿದು ಜಾಗತೀಕರಣ ನೆಪದಲ್ಲಿ ಆಧುನಿಕತೆ ಜೀವನಕ್ಕೆ ಒಗ್ಗಿಕೊಂಡು ಸಂಸ್ಕೃತಿಯು ಕಣ್ಮರೆಯಾಗುತ್ತಿವೆ. ಇಂಥ ಸಂಸ್ಕೃತಿಯು ಕೇವಲ ಕೆಲವೇ ದಿನಗಳಲ್ಲಿ ಪಠ್ಯಕ್ಕೆ ಮಾತ್ರ ಸೀಮಿತವಾಗುವ ಕಾಲ ಹತ್ತಿರದಲ್ಲಿದೆ. ನಂತರದ ತಲೆಮಾರಿನವರು ಇಂಥ ಆಚಾರ ವಿಚಾರಗಳನ್ನು ಚಿತ್ರಗಳಲ್ಲಿ ಮಾತ್ರ ಕಾಣಬೇಕಾಗಬಹುದು. ಅಲ್ಲದೆ ಹಳ್ಳಿಯ ಕೆಲಸದ ಉಪಕರಣಗಳು ಪ್ರದರ್ಶನಕ್ಕಾಗಿ ವಸ್ತುಸಂಗ್ರಹಾಲಯದಲ್ಲಿ ಮಾತ್ರ ಉಳಿಯಬಹುದು.

೨. ಕುರುಬರ ವಾಲಗಗಳು

'ಕುರುಬರ ವಾಲಗಗಳು' ಎಂಬ ಶೀರ್ಷಿಕೆಯಲ್ಲಿ ೧೬ ತ್ರಿಪದಿಗಳನ್ನು ಹುಲಕುಂದದ ಭೀಮಕವಿ ರಚನೆ ಮಾಡಿದ್ದಾನೆ. ಈ ಪದಗಳು ಗೊಲ್ಲಾಳನ ಜನನ, ಬಾಲ್ಯ, ಶಿವಭಕ್ತಿ ಮೊದಲಾದ ವಿವರಗಳನ್ನು ಹೊಂದಿದೆ. ಗೊಲ್ಲಾಳನ ಕುರಿತಾಗಿ ಮೌಖಿಕ ಮತ್ತು ಲಿಖಿತ ರೂಪದಲ್ಲಿ ಹಾಡು ಕಥೆಗಳಿವೆ. ಭೀಮಕವಿಯು ಸಂಕ್ಷೇಪದಲ್ಲಿ ಗೊಲ್ಲಾಳನ ಜೀವನ ವೃತ್ತಾಂತವನ್ನು ಇಲ್ಲಿ ತಿಳಿಸಿದ್ದಾನೆ.

ಬಾಲಕ ಗೊಲ್ಲಾಳನು ಕುರಿ ಮೇಯಿಸುತ್ತಾ ಕಾಡಿನಲ್ಲಿ ಅಲೆಯುತ್ತಾ ಶಿವಧ್ಯಾನದಲ್ಲಿ ಮಗ್ನನಾಗಿರುತ್ತಿದ್ದ. ಶ್ರೀಶೈಲಕ್ಕೆ ಹೊರಟ ಜಂಗಮನನ್ನು ಕಂಡಾಗ ತನಗೊಂದು ಲಿಂಗ ತಂದು ಕೊಡಲು ಕೇಳಿಕೊಳ್ಳುತ್ತಾನೆ. ಆದರೆ ಜಂಗಮ ಮರೆತು ಬರಲು ಅವನ ಸಮಾಧಾನಕ್ಕಾಗಿ ಕುರಿಯ ಹಿಕ್ಕೆಯನ್ನು ಲಿಂಗವೆಂದು ಕೊಡುತ್ತಾನೆ. ಕಪಟವರಿಯದ ಮುಗ್ಧ ಗೊಲ್ಲಾಳನಿಗೆ ಎಲ್ಲಿಲ್ಲದ ಸಂತೋಷ ಸಂಭ್ರಮ ಸಡಗರ.

ಮರೆತ ಬಂದೈನಾರೀ ಕುರೀ ಹಿಕ್ಕಿ ಕೊಟ್ಟ
ಗಿರಿಲಿಂಗ ಅಂತ ಹೇಳಿದನ
ಹಿರಿ ಹಿರಿ ಹಿಗ್ಗಿದ ಬೀರಣ್ಣ (೮)

ಕುರಿಹಿಕ್ಕೆಯನ್ನೇ ಲಿಂಗವೆಂದು ಅದಕ್ಕೆ ಕುರಿಹಾಲಿನ ಅಭಿಷೇಕ ಮಾಡುತ್ತಾ ಧ್ಯಾನಾಸಕ್ತನಾಗಿರಲು ಕುರಿಗಳನ್ನು ತೋಳ ತಿನ್ನತೊಡಗಿತು. ಕುರಿಹಿಂಡಿನೊಂದಿಗೆ ಸಮಯಕ್ಕೆ ಸರಿಯಾಗಿ ಮನೆಗೆ ಬಂದ ಗೊಲ್ಲಾಳನನ್ನು ಹುಡುಕುತ್ತಾ ತಂದೆ ಬರಲು ಅಲ್ಲಿ ಗೊಲ್ಲಾಳನು ಹಿಕ್ಕೆಗೆ ಪೂಜಿಸುವದನ್ನು ಕಂಡು ಕೋಪಗೊಂಡು ಕುರಿಹಿಕ್ಕೆಯನ್ನು ಕಾಲಿನಿಂದ ಒದೆಯುತ್ತಾನೆ. ಪೂಜಾಮಗ್ನಕ್ಕೆ ಭಂಗ ಬಂದು ಕೋಪಗೊಂಡ ಗೊಲ್ಲಾಳ ಕೊಡಲಿಯಿಂದ ತಂದೆಯ ತಲೆಯನ್ನು ಕಡಿಯುತ್ತಾನೆ. ಇವನ ಅಚಲ ಭಕ್ತಿಗೆ ಮೆಚ್ಚಿದ ಶಿವನು ಪ್ರತಕ್ಷನಾಗಿ ತಂದೆಯನ್ನು ಮತ್ತು ಕುರಿಗಳನ್ನು ಬದುಕಿಸುತ್ತಾನೆ.

ಚೆಲ್ಲವರಿದ ಕುರಿ ಎಲ್ಲ ಬಂದವು
ಶಿವಲಿಂಗಕ್ಕೆ ಮಾಡ್ಯಾವ ಶರಣ।
ತೂರಿಬಿಟ್ಟ ಕರದವು ಹಾಲನ್ನ॥ (೧೫)

ಹೀಗೆ ಗೊಲ್ಲಾಳನ ಕತೆಯು ಮುಕ್ತಾಯವಾಗುತ್ತದೆ. ಇಂಥ ಹಾಲುಮತದ ಶರಣ ಗೊಲ್ಲಾಳನ ಹಾಡುಗಳನ್ನು ಡಾ. ಚೆನ್ನಕ್ಕ ಪಾವಟೆ ಅವರು 'ಹುಲಕುಂದದ ಭೀಮಕವಿಯ ಸಾಹಿತ್ಯ' ಎಂಬ ಕೃತಿಯಲ್ಲಿ ಸಂಪಾದಿಸಿದ್ದಾರೆ.

೩. ಮಂಗಳಾರತಿ ಪದಗಳು

ಹಾಲುಮತದಲ್ಲಿ ಅಮೋಘಸಿದ್ಧ, ರೇವಣಸಿದ್ಧ, ಮೈಲಾರಲಿಂಗ ಬೀರಪ್ಪ ಇಟ್ಟಪ್ಪ ಮಾಳಿಂಗರಾಯ, ಗೊಲ್ಲಾಳ ಮೊದಲಾದವರು ಜನಸಾಮಾನ್ಯರಲ್ಲಿ ಲಿಖಿತ ಮತ್ತು ಮೌಖಿಕ ಪರಂಪರೆಯಲ್ಲಿ ಪೌರಾಣಿಕ ಚಾರಿತ್ರಿಕ ದೇವರುಗಳಾಗಿ ಭಕ್ತಿಗೆ ಪೂಜೆಗೆ ಸ್ಥಾನ ಪಡೆದುಕೊಂಡಿದ್ದಾರೆ.

'ರೇವಣಸಿದ್ಧೇಶ್ವರನ ಮಂಗಳಾರತಿ ಪದಗಳು' ಎಂಬ ಶೀರ್ಷಿಕೆಯ ಪದಗಳನ್ನು 'ತಗರ ಪವಾಡ' ಕಾವ್ಯದ ಅಂತ್ಯದಲ್ಲಿ ಸಂಪಾದಕರು (ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಡಾ. ಎಫ್.ಟಿ.ಹಳ್ಳಿಕೇರಿ) ಸಂಗ್ರಹಿಸಿದ್ದಾರೆ.[೧೬] ಈ ಪದಗಳಲ್ಲಿ ಎರಡು ಭಾಗಗಳಿವೆ.

ಮೊದಲ ಭಾಗ ರೇವಣಸಿದ್ಧರ ವರ್ಣನೆಯನ್ನು ಹೊಂದಿದೆ. ಐದು ಸಾಲಿನ ಏಳು ಪದಗಳಲ್ಲಿ ರೇವಣಸಿದ್ಧರು ಮಾಯೆಯನ್ನು ಕೊಂದು, ಕೊಡ ವಿಷವನ್ನು ಕುಡಿದು, ಕಲ್ಯಾಣಪುರದ ಜನರಿಗೆ ಉಪಕಾರ ಮಾಡಿದ ಕರಿಯ ಕಂತೆಯನ್ನು ಹೊದ್ದು ಕಪ್ಪರ ಹಿಡದು, ಕೊರಳಲ್ಲಿ ರುದ್ರಾಕ್ಷಿ ಧರಿಸಿದ, ಭೂಮಿಯ ಮೇಲಿನ ರಾಕ್ಷಸರನ್ನು ಸಂಹಾರ ಮಾಡಿದ ವರ್ಣನೆಯನ್ನು ಹೊಂದಿದೆ. ಈ ಅವತಾರಿ ಪುರುಷ ರೇವಣಸಿದ್ಧರಿಗೆ ಜಯವಾಗಲಿ, ಮಂಗಲವಾಗಲಿ ಶುಭವಾಗಲಿ ಎಂಬ ಹಾರೈಕೆಯನ್ನು ಹೊಂದಿದೆ.

ಕರಿಯ ಕಂತೆ ಪೊದ್ದು ಕಪ್ಪರವ ಹಿಡಿದವಗೆ
ಕೊರಳ ರುದ್ರಾಕ್ಷಿ ಸರವ ಧರಿಸಿದವಗೆ
ಈ ಧರೆಯೊಳಗೆ ಹಿರಿಯನಿಗೆ ದೈತ್ಯ ಸಂಹಾರನಿಗೆ

ಪರಮ ಆನಂದ ಪಾವನ ಮೂರ್ತಿಗೆ

ಜಯಮಂಗಳಂ ನಿತ್ಯ ಶುಭ ಮಂಗಳಂ ||೩||

ಹುತ್ತದ ಮೇಲೆ ಬೆಳೆದ ಮುತ್ತುಗದ ಗಿಡವನ್ನು ಕಡಿದ, ಮಕ್ಕಳಿಲ್ಲದ ಬಂಜೆಯರಿಗೆ ಮಕ್ಕಳ ವರವ ಕೊಟ್ಟ ಪ್ರತಿ ಸೋಮವಾರ ಸಿದ್ದೇಶ್ವರನಿಗೆ ಒಲಿಯುವ ರೇವಣಸಿದ್ಧರಿಗೆ ಜಯವಾಗಲಿ, ಮಂಗಳವಾಗಲಿ ಎಂದು ಪದ ಮುಕ್ತಾಯವಾಗುತ್ತದೆ.

ಎರಡನೆಯ ಭಾಗದ ೪ ಪದಗಳು ದ್ವಿಪದಿಯಲ್ಲಿವೆ. ಶಿವನ ಸ್ತುತಿಯೊಂದಿಗೆ ಮಂಗಳಾರತಿ ಬೆಳಗುವ ಪದವು ಬೆಳೆಯುತ್ತದೆ. ನಂದಿಯನ್ನು ವಾಹನವನ್ನಾಗಿ ಹೊಂದಿದ, ಕಪ್ಪಾದ ಕೊರಳನ್ನು ಹೊಂದಿದ ಶಿಷ್ಟ ರಕ್ಷಕ ದುಷ್ಟ ಶಿಕ್ಷಕನಾದ ಶಿವನಿಗೆ ಮಂಗಳಾರತಿ ಬೆಳಗುವ ತಾತ್ಪರ್ಯ ಹೊಂದಿದೆ.

ಕುರುಬರ ಕುಲಗುರುವಾದ ರೇವಣಸಿದ್ಧರ ಪವಾಡಮಯ ಜೀವನವನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುವದು ಈ ಮಂಗಳಾರತಿ ಪದಗಳ ಆಶಯವಾಗಿದೆ. ಇಂಥ ಮಂಗಳಾರತಿ ಪದಗಳು ಈ ಕುಲದ ದೈವಗಳಾದ ಬೀರಪ್ಪ, ಮಾಳಿಂಗರಾಯ, ಮೈಲಾರಲಿಂಗ, ಕರಿಸಿದ್ದೇಶ್ವರ, ಇಟ್ಟಪ್ಪ ಮುಂತಾದವರನ್ನು ಕುರಿತು ಹಾಡುವ ಪದ್ಧತಿ ಇಂದಿಗೂ ಇದೆ. ಈ ಹಿನ್ನೆಲೆಯಲ್ಲಿ ಇಂಥ ಎಲ್ಲ ಪದಗಳನ್ನು ಸಂಗ್ರಹಿಸಿ ಪ್ರಕಟಿಸುವದು ಅವಶ್ಯವಾಗಿದೆ.

೨. ಹೇಳಿಕೆಗಳು

ಪ್ರಕೃತಿಯೊಂದಿಗೆ ನಿಕಟ ಸಂಪರ್ಕ ಹೊಂದಿದ ಕುರುಬ ಜನಾಂಗಕ್ಕೆ ಕಾಡು, ಮೇಡು ಅಲೆಯುತ್ತಾ ನಿಸರ್ಗದ ರೌದ್ರ ಮತ್ತು ಸೌಮ್ಯ ವರ್ತನೆಗಳನ್ನು ಎದುರಿಸಿ ಬದುಕಿಗೆ ಭವಿಷ್ಯದಲ್ಲಿ ಭರವಸೆ ಮೂಡಿಸುವ ಅನಿವಾರ್ಯತೆ ಇತ್ತು. ಅದಕ್ಕಾಗಿಯೇ ಹೇಳಿಕೆಗಳು ಹುಟ್ಟಿರಬಹುದು. 'ಜನವಾಣಿ ಬೇರು ಕವಿವಾಣಿ ಹೂವು' ಎಂಬ ಗಾದೆಯಲ್ಲಿ ಜನಸಾಮಾನ್ಯರ ಅನುಭವದ ಆಳ ಅರಿವಾಗದೆ ಇರದು. ಅವರ ನಂಬಿಕೆಯೇ ಅನುಭವವಾಗಿ 'ಕುರಿತೋ ದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂಬಂತೆ ಒಗಟಿನ ರೂಪದ ಹೇಳಿಕೆಗಳು ಅನಾದಿ ಕಾಲದಿಂದ ಬಳಕೆಯಲ್ಲಿವೆ.

ಸಕಾಲಕ್ಕೆ ಮಳೆ ಬೆಳೆ ಬರದೆ ಇದ್ದರೆ ಊರಿನ ಕೆಳವರ್ಗದ ಜನರು ತಲೆಯ ಮೇಲೆ ಹಂಚನ್ನು ಬೋರಲು ಮಾಡಿ ಅದರ ಮೇಲೆ ಕೆಸರಿನ ಮುದ್ದೆ ಮಾಡಿಟ್ಟು ಅದರಲ್ಲಿ ಕಪ್ಪೆ ಮತ್ತು ಕರ್ಕಿಯನ್ನು ಇಟ್ಟು ಮನೆ ಮನೆಗೆ ಹೋಗಿ ಅದರ ಮೇಲೆ ನೀರು ಹಾಕಿಸಿಕೊಂಡು

....

ನೆತ್ತಿ ಎರಿಯಾಕ ನೀರಿಲ್ಲ ನೀರಿಲ್ಲ

ಕರೆಕಂಬಳಿ ಗುರುಸಿದ್ಧ ಗುರುಸಿದ್ಧ

ಕಂಬಳಿ ಬೀಸೋ ಸುರಿಮಳಿಯೇ ಸುರಿಮಳಿಯೇ

ಸುಣ್ಣ ಕೊಡತಿನಿ ಸುರಿಮಳಿಯೇ ಸುರಿಮಳಿಯೇ

ಬಣ್ಣ ಕೊಡತಿನಿ ಬಾರಲೆ ಮಳಿಯೇ ಮಳೆಯೇ

ಎಂದು ಮಳೆರಾಯನನ್ನು ಕರೆಯುತ್ತಾ ಭಿಕ್ಷೆ ಬೇಡುತ್ತಾರೆ.

ಮಳೆ -ಬೆಳೆಗೆ ಸಂಬಂಧಿಸಿದ ಹೇಳಿಕೆಗಳನ್ನು ಸಾಮಾನ್ಯವಾಗಿ ಕುರುಬ ಜನಾಂಗದವರು ಮಾಡುವದರಿಂದ 'ಕುರುಬರ ಹೇಳ್ಕೆ' ಎಂದು ಕರೆಯುತ್ತಾರೆ. ಹೇಳಿಕೆಗಳನ್ನು ಒಡೆಯರು ಗೊರವಯ್ಯನವರು ಅಲ್ಲದೆ ಕ್ವಚಿತ್ತಾಗಿ ಬೇರೆ ಜನಾಂಗದವರು ಸಹ ಮಾಡುತ್ತಾರೆ. ಇತರ ಜನಾಂಗದವರು ಮಾಡುವ ಹೇಳಿಕೆಗಳು ಮಳೆ-ಬೆಳೆ-ಭೂಮಿ ನಿಸರ್ಗವನ್ನು ಕುರಿತಾಗಿರದೆ ವಯಕ್ತಿಕ ಜೀವನ, ರೋಗ ರುಜಿನ ದೇವರು ದೆವ್ವಗಳ ಕಾಟವನ್ನು ಕುರಿತಾಗಿರುತ್ತವೆ.

ರಟ್ಟಮತಶಾಸ್ತ್ರಕ್ಕೆ ಮತ್ತು ಹೇಳಿಕೆ ಹೇಳುವುದಕ್ಕೆ ವ್ಯತ್ಯಾಸವನ್ನು ಡಾ. ಎಸ್.ಎಫ್.ಜಕಬಾಳ ಅವರು ಹೀಗೆ ಹೇಳುತ್ತಾರೆ. "ರಟ್ಟಮತಶಾಸ್ತ್ರ ಮೊದಲು ಬರೆದವನು ಕುಂತಳ ದೇಶದ ಗೊಂಡಯ್ಯನೆಂಬುವನು. ಇದು ಮಳೆ- ಬೆಳೆ ಕುರಿತಾದ ಶಾಸ್ತ್ರ. ಪಂಚಭೂತಗಳ ತಿಳುವಳಿಕೆಯುಳ್ಳ ರೈತರು, ಕುರಿಗಾರರು, ಪೂಜಾರಿಗಳು ಇಟ್ಟಪ್ಪನ ಭಕ್ತರು ಮುಂಗಾರು ಬೆಳೆ ಇರುವ ಸಮಯದಲ್ಲಿ ಮಾತ್ರ ಈ ಶಾಸ್ತ್ರ ಹೇಳುತ್ತಾರೆ."[೨೨]

ಕುರುಬರು ರೇವಣಸಿದ್ಧನನ್ನು ಕುಲಗುರುವೆಂದು ಒಪ್ಪಿ ಪರಂಪರಾಗತವಾಗಿ ಬೀರಪ್ಪ, ಮೈಲಾರಲಿಂಗ, ಅಮೋಘಸಿದ್ಧ, ಮಾಳಿಂಗರಾಯ ಕರಿಸಿದ್ಧ, ಗೊಲ್ಲಾಳ, ಮೊದಲಾದ ದೇವರನ್ನು ಪೂಜಿಸುತ್ತಿದ್ದಾರೆ. ಹಾಲುಮತದ ದೈವಗಳ ಪುಣ್ಯಕ್ಷೇತ್ರಗಳಾದ ಸರೂರು, ಕಡೋಲಿ, ಅರಕೇರಿ, ಹುಲಜಂತಿ, ಮೈಲಾರ ಮೊದಲಾದ ಕಡೆ ಜಾತ್ರೆ-ಉತ್ಸವಗಳು ನಡೆಯುತ್ತವೆ. ಮುಖ್ಯವಾಗಿ ದೀಪಾವಳಿ ಪಾಡ್ಯ, ಯುಗಾದಿ, ಮಹಾನವಮಿ, ಬಾದಾಮಿ ಅಮವಾಸ್ಯೆಗಳಂದು ಸಂಪ್ರದಾಯದಂತೆ ಜಾತ್ರೆ -ಉತ್ಸವಗಳನ್ನು ಪರಂಪರೆಗಳಿಗನುಗುಣವಾಗಿ ಡೊಳ್ಳಿನಿಂದ ಪ್ರಾರಂಭಿಸುತ್ತಾರೆ. ಡೊಳ್ಳಿನ ಬಡಿತದಿಂದ ತಾದಾತ್ಮ್ಯ ಹೊಂದಿದ ಪೂಜಾರಿ ಭಾವಾವೇಶಕ್ಕೆ ಒಳಗಾಗಿ ತನ್ನ ಅನುಭವದ ಆಳದಿಂದ ಹೊರಟ ಮಾತನ್ನು ಹೇಳುತ್ತಾನೆ. ಹೀಗೆ ಹೇಳಿಕೆ ಮಾಡಲು ಅವನು ಮಾನಸಿಕವಾಗಿ ತಯಾರಿಯಾಗಿರಬೇಕಾಗುತ್ತದೆ. ಅದಕ್ಕಾಗಿ ಸುಮಾರು ೩-೯ ದಿನಗಳವರೆಗೆ ಉಪವಾಸ ಇರಬೇಕಾಗುತ್ತದೆ. ಈವರೆಗೆ ಹೇಳಿಕೆಗಳನ್ನು ಕುರಿತಂತೆ ಎಂ.ಎಂ. ಪಡಶೆಟ್ಟಿ ಅವರು 'ಹೇಳಿಕೀ ಮಾಡ್ಯಾರ ಒಡೆಯರು' ಎಂಬ ಕೃತಿಯನ್ನು ರಚನೆ ಮಾಡಿದ್ದಾರೆ.

ಹೇಳಕೀ ಮಾಡ್ಯಾರ ಒಡೆಯರು - ಎಂ.ಎಂ.ಪಡಶೆಟ್ಟಿ

೧೯೮೮ ಅಕ್ಟೋಬರ್ ೨೭-೨೮ ರಂದು ದಾಂಡೇಲಿಯಲ್ಲಿ ನಡೆದ ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ಅಧ್ಯಾಪಕರ ಪ್ರಥಮ ಸಂಕೀರ್ಣ ಗೋಷ್ಠಿಯ ಶಿಬಿರದಲ್ಲಿ ಡಾ. ಎಂ.ಎಂ.ಪಡಶೆಟ್ಟಿ ಅವರು 'ಮಳೆ-ಬೆಳೆ ಕುರಿತಾದ ಕುರುಬರ ಹೇಳಿಕೆಗಳು' ಎಂಬ ಪ್ರಬಂಧ ಮಂಡಿಸಿದ್ದರು. ಅದರ ಫಲವೇ ಈ ೫೮ ಪುಟಗಳ ಲಘುಕೃತಿ ೧೯೯೩ರಲ್ಲಿ ರೂಪ ತಳೆಯಲು ಕಾರಣವಾಯಿತು.

ಈ ಕೃತಿಯು ಕುರುಬ ಜನಾಂಗದ ಒಡೆಯರು ಹೇಳಿದ ಸುಮಾರು ೨೦೫ ರಷ್ಟು ಹೇಳಿಕೆಗಳನ್ನು ಅಲ್ಲದೆ ಜನಾಂಗದ ಆಚಾರ ವಿಚಾರ ನಂಬಿಕೆ ಮತ್ತು ರಾಜಕೀಯ ಸ್ಥಿತ್ಯಂತರ ಮೊದಲಾದ ವಿಷಯಗಳ ಪರಿಚಯ ಹೊಂದಿದೆ. ಉದಾಹರಣೆಗೆ,

೧. ಬಡವನ ಕುರುಪಿಗೆ ಬಂಗಾರ ಅಣಸ ಹಾಕೀನಿ

-ಇಲ್ಲಿ ರೈತನಿಗೆ ಸಂತಸ ಹೆಚ್ಚಾಗುವ, ದುಡಿಮೆ ಕೂಲಿ ಹೆಚ್ಚಾಗುವ ಸಂಕೇತ ಬಳಸಲಾಗಿದೆ.

೨. ಬಾಜಾರದಾಗಿನ ಸೊಲಗಿ ಪಾತಾಳಕ್ಕ ತುಳಿಯುವುದರಾಗ ಆಕಾಶಕ್ಕೆ ಜಿಗಿತು.

-ಬೆಲೆ ಏರಿಕೆಯಿಂದ ರೈತನ ಕಷ್ಟಕಾಲ ಸುರುವಾಯಿತು ಎಂಬ ಅರ್ಥ ಹೊಂದಿದೆ.

೩. ಬಿಜಾಪುರ ಅಗಸಿ ಮ್ಯಾಲ ಹಂಗ ಕುಂತು

ಕಲಬುರ್ಗಿ ಅರಸಿ ಮ್ಯಾಲ ಕಾಗಿ ಕುಂತು
ಹಂಗಿನ ಬಾಯಂದು ಹವಳ ಬಿತ್ತು
ಕಾಗಿ ಬಾಯಂದು ರಗುತ ಬಿತ್ತು

-ರಾಜಕೀಯ ಏಳುಬೀಳುಗಳು ಈ ಹೇಳಿಕೆಯಲ್ಲಿವೆ. ನಿಜಾಮನ ಆಡಳಿತ ಕೊನೆಗೊಂಡು ಆತನ ಆಡಳಿತ ಪ್ರದೇಶ ಸ್ವತಂತ್ರ ಪಡೆಯಿತು ಎಂಬ ಗೂಡಾರ್ಥವಿದೆ.

೪. ಎಲೇ ಅರಿಕೇರಿ ಅರಮನಿ ಬೇವೂರ ಗುರುಮನಿ ಮಾಯಿ ಮಕಣಾಪುರ ಸಿಂಹಾಸನ ಗದ್ದಿ ಎಲೇ ತಂಗಿ ರಥ ತಯಾರಾಯ್ತು ಬಸವನ ಚಿಕ್ಕ ದಸಗೀರಿ ಹರಿದೀನಿ

-ರೈತನಿಗೆ ಒಳ್ಳೆ ಕಾಲ ಬಂದಿತು ಎಂಬ ಮಾತಿನ ಅರ್ಥವನ್ನು ಮಾಡಬಹುದು.

೫. ಅಪ್ಪಾ ಅಂದ ಎಷ್ಟು ನೋಡಿದ್ರು ಧರ್ಮ ಉಳಿಲಿಲ್ಲ. ಬಾರದು ಬಪ್ಪದು ಬಪ್ಪದು ತಪ್ಪದು.

-ಲಂಚ ಭ್ರಷ್ಟಾಚಾರದಿಂದ, ದ್ವೇಷದಿಂದ ಆಗುವ ಅಪಾಯವನ್ನು ಕೇಡನ್ನು ಅರ್ಥೈಸಬಹುದಾಗಿದೆ.

೬. ಅನಿಗಡತರ ಮೋಡ ಒಂಟಿಗಡತರ ಹುಲ್ಲು ಆಡಮರಿ ಕುಡಿಯಲಿಕ್ಕೆ ನೀರಿಲ್ಲ. ಮಳೆ ಬೆಳೆಯಿಲ್ಲದ ರೈತ ಮತ್ತು ಪ್ರಾಣಿಗಳು ಸಂಕಷ್ಟಕ್ಕೆ ಗುರಿಯಾಗುತ್ತವೆ. ಇಲ್ಲಿ ಆಡು ಆನೆಗಳು ಉಪಮಾನ ಉಪಮೇಯಗಳಾಗಿ ಶ್ಲೇಷಾರ್ಥವನ್ನು ಹೊಂದಿವೆ.

ಅಂತ್ಯದ ಅನುಭವದಲ್ಲಿ ಮಳೆರಾಜನ ಹಾಡು, ಮಳೀಹಾಡು ಗೋನಾಳ ಮುತ್ತ್ಯಾ ಕಂಬಳಿ ಬೀಸಿ ಮಳೆ ತರುವ ಕತೆ, ಹಳ್ಳಿಯ ರೈತರ ಅನುಭವದ ಮುಂದೆ ಶಿವಪಾರ್ವತಿಯರು ಸೋಲನ್ನು ಒಪ್ಪುವ 'ಶಿವ ಪಾರ್ವತಿಯರ ಸೋಲು' ಎನ್ನುವ ಕತೆ, ನಾಡಿನ ಗೌಡನ ನಂಬಿಕೆ ಮತ್ತು ಪ್ರಾಮಾಣಿಕತೆಯ ವಿಷಯಗಳನ್ನು ಹೊಂದಿದೆ. ಈ

ಹೇಳಿಕೆಗಳು ಎರಡರಿಂದ ನಾಲ್ಕು ವಾಕ್ಯದಲ್ಲಿವೆ. ಅಲ್ಲಲ್ಲಿ ಒಂದೊಂದು ವಾಕ್ಯದ ಹೇಳಿಕೆಗಳು ಇವೆ. ಸರಳವಾದ ಗ್ರಾಮ್ಯಭಾಷೆಯಲ್ಲಿ ಹೇಳಲಾಗಿದೆ.

ಅಲ್ಲದೆ ಡಾ. ಮಂಜುನಾಥ ಬೇವಿನಕಟ್ಟಿ ಅವರು 'ಮೈಲಾರಲಿಂಗ ಕಾವ್ಯ' ಕೃತಿಯ ಅಂತ್ಯದಲ್ಲಿ ಹೇಳಿಕೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಮೈಲಾರಲಿಂಗನ ಪರಂಪರೆ ಮತ್ತು ಆಚರಣೆಗಳನ್ನು ಪರಿಚಯಿಸುವ ಈ ಕೃತಿಯು ೧೯೯೯ ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡಿದೆ. ಕಾವ್ಯದ ಅಂತ್ಯದ ಅನುಬಂಧದಲ್ಲಿ 'ಮೈಲಾರ ಲಿಂಗನ ಕಾರ್ಣೀಕಗಳು' ಎಂಬ ಶೀರ್ಷಿಕೆಯಲ್ಲಿ ಸುಮಾರು ೧೦೦ ಹೇಳಿಕೆಗಳನ್ನು ಉಲ್ಲೇಖಿಸಲಾಗಿದೆ. ಈ ಹೇಳಿಕೆಗಳು ಒಂದು ವಾಕ್ಯದಿಂದ ಕೂಡಿವೆ. ಉದಾಹರಣೆಗೆ

೧. ಮುತ್ತಿನ ರಾಶಿ ದುಂಡಾತಲೇ ಪರಾಕ್

-ಮಳೆ -ಬೆಳೆ ಹೆಚ್ಚಾಗಿ ರೈತರು ಸಂತಸದಿಂದಿರುವ ಒಳ್ಳೆ ಕಾಲ ಬರುವುದನ್ನು ಸೂಚಿಸುತ್ತದೆ.

೨. ಅಂಬಲಿ ಹಳಸಿತಲೆ ಪರಾಕ್

-ರೈತನಿಗೆ ಕೆಟ್ಟ ದಿನಗಳು ಬರುತ್ತವೆ ಎಂಬ ಸೂಚನೆಯಿದೆ.

೩. ಸಮನಿಧಿ ಸಂಪಲೇ ಪರಾಕ್

-ಸಮೃದ್ಧಿಯ ಕಾಲ ಬರುತ್ತದೆ. ರೈತನು ಸುಖವಾಗಿ ಇರುತ್ತಾನೆ.

೪. ಸಂಕಷ್ಟ ನಿವಾರಣೆಯಲೇ ಪರಾಕ್

-ಸುದಿನಗಳು ಬಂದು ಕಷ್ಟ ದೂರವಾಗಿ ರೈತ ಸುಖವಾಗಿ ಬದುಕು ಸಾಗಿಸುವನು.

೫. ಮಳೆ ಬೆಳೆ ಸಂಪಲೇ ಬಹು ಪರಾಕ್

-ಸಕಾಲಕ್ಕೆ ಮಳೆಯು ಬಂದು ಫಸಲು ಹೆಚ್ಚಾಗಿ ರೈತನು ಸಂತೋಷದಿಂದ ಬದುಕುವುದನ್ನು ತಿಳಿಸುತ್ತದೆ.

ಕುರುಬರ ಹೇಳಿಕೆ ಕುರಿತು ಕೆಲವರಿಗೆ ಗೌರವವಿದ್ದರೆ ಕೆಲವರಿಗೆ ತಿರಸ್ಕಾರವೂ ಇದೆ. ದ್ವಂದ್ವಾರ್ಥ ಹೊಂದಿದ ಕಾರಣ ಬೇಕಾದ ಹಾಗೆ ಅರ್ಥೈಸುವ ಸಾಧ್ಯತೆ ಇದೆ. ಇದರಿಂದ ಹೇಳಿಕೆಗಳು ಸುಳ್ಳಾಗಲೂಬಹುದು. ಆಗ ಅವರನ್ನು ವ್ಯಂಗ್ಯಮಾಡಿ ತಿರಸ್ಕರಿಸುತ್ತಾರೆ. ಅಂಥ ಕೆಲವು ಉದಾಹರಣೆಗಳು ಹೀಗಿವೆ.

೧. ಕುರುಬರ ಹೇಳ್ಕಿ ಕೇಳಿ ಕುಲಾಕೆಡ್ಸಿಕೊಂಡ್ರು

೨. ಹಾರ್ಕಿ ಸುದ್ದಿ ಕೇಳಿ ಹೇಳ್ಕಿ ಮಾಡಾಂವ

೩. ಕುರುಬರ ಹೇಳ್ಕಿ ಕೇಳಿ ಹಾಳಾದ್ರು

ಅನುಭವ ಮತ್ತು ನಂಬಿಕೆಗಳ ಹಿನ್ನೆಲೆಯಿಂದ ಹೇಳಿಕೆಗಳನ್ನು ಹೇಳುತ್ತಾರೆ. ಇಂಥ ಹಲವು ಅನುಭವ, ನಂಬಿಕೆಗಳ ಪಟ್ಟಿಯನ್ನು ಎಂ.ಎಂ. ಪಡಶೆಟ್ಟಿ ಅವರು ತಮ್ಮ ಸಂಕಲನದಲ್ಲಿ ಕೊಟ್ಟಿದ್ದಾರೆ.

ನಿಸರ್ಗದಲ್ಲಿ ಆಕಾಶದಲ್ಲಾಗುವ ಬದಲಾವಣೆ, ಪ್ರಾಣಿ ಪಕ್ಷಿಗಳ ವರ್ತನೆಯಲ್ಲಿ ಬದಲಾವಣೆ, ಕಪ್ಪೆ ಎಡವಿದರೆ, ವಟಗುಟ್ಟಿದರೆ, ಇರುವೆಗಳು ಮೊಟ್ಟೆಗಳೊಂದಿಗೆ ಹೊರಬಿದ್ದರೆ, ಹದ್ದು ಆಕಾಶಕ್ಕೆ ಹಾರಿ ಅಲ್ಲಿಯೇ ಆಡುತ್ತಿದ್ದರೆ, ಹಕ್ಕಿಗಳು ಗಿಡಗಂಟೆಗಳ ಆಸರೆಗೆ ಮನೆ ಮಾಡಿಕೊಂಡಿದ್ದರೆ ಮಿಡತೆ ಮಳೆ ಹುಳುಗಳು ಎದ್ದು ಆಡಿದರೆ, ಮುಸ್ಸಂಜೆಯಲ್ಲಿ ಗೂಬೆ ಕೂಗಿದರೆ, ಕೋಳಿ ಮರಗಳು ಗಾಳಿಗೆ ಎದುರಾಗಿ ಪುಕ್ಕವೆತ್ತಿ ನಿಂತುಕೊಂಡರೆ, ಗಾಳಿಯ ವಿರುದ್ಧ ದಿಕ್ಕಿನಿಂದ ಮೋಡಗಳು ಚಲಿಸಿದರೆ, ಕುರಿಗಳು ಒಂದಕ್ಕೊಂದು ಮುದ್ದೆಯಾಗಿ ಹೊಂದಿನಿಂತರೆ ಕಲಬುರ್ಗಿ ಮಿಂಚಿದರೆ ಮೊದಲಾದ ಅನುಭವಗಳೂ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಹೊಂದಿರುತ್ತವೆ.

ಅನೇಕ ನಂಬಿಕೆಗಳು ಗ್ರಾಮಸ್ಥರಲ್ಲಿ ಹೇರಳವಾಗಿವೆ. ಅವು ಕಾರಹುಣ್ಣಿಮೆ ದಿನ ಮಳೆ ಬಂದು ಎತ್ತಿನ ಕೋಡ ತೋಯಿಸಿದರೆ ಕೇಡು, ಚಂದ್ರನಿಗೆ ಕಣ ಕಟ್ಟಿದರೆ ಮಳೆ ಬರುವುದಿಲ್ಲ. ತೊಗಲಗೊಂಬಿ ಆಟ ಆಡಿದರೆ ಮಳೆ ಬರುತ್ತದೆ. ಹೆಣ್ಣು ಮಕ್ಕಳು ಆಣಿಕಲ್ಲ ಆಡಿದ್ರ ಮಳಿ ಬರುವುದಿಲ್ಲ. ಉಗಾದಿ ದಿನ ಮಳೆ ಬಂದರೆ ಶುಭ, ಮಾವಿನಕಾಯಿ ಹೆಚ್ಚಾದರ ಮಳೆಗಾಲ, ಭಾರತ ಹುಣ್ಣಿಮೆಗೆ ಮೋಡಗಳು ಕಾಣಿಸಿದರೆ ಮಳೆ ಹೆಚ್ಚು. ಆರಿದ್ರಮಳೆ ಗುಡುಗಿದರೆ ಮುಂದಿನ ಮಳೆ ಬರುವುದಿಲ್ಲ, ಜೋಕುಮಾರನ ತಲೆವಡೆದ ದಿನ ಮಳೆ ಬರುತ್ತದೆ, ಇಂಥ ನಂಬಿಕೆಗಳನ್ನು ರೈತರು ವಂಶಪಾರಂಪರ್ಯವಾಗಿ ಪಾಲಿಸುತ್ತಾ ಬಂದಿರುವರು.

ಈ ಹೇಳಿಕೆಗಳು ಪಾಂಡಿತ್ಯ ಪ್ರದರ್ಶನಕ್ಕಾಗಲಿ, ಚಮತ್ಕಾರಕ್ಕಾಗಲಿ ಹುಟ್ಟಿಕೊಂಡಿಲ್ಲ. ತಮ್ಮದೇ ಆದ ನೈಸರ್ಗಿಕ ಅನುಭವ ಹೊಂದಿವೆ. ಹೇಳಿಕೆಗಳು 'ಸದ್ದು ಸದ್ದಲೇ ಪರಾಕ್' ಎಂದು ಪ್ರಾರಂಭಗೊಂಡು ಮುಂದುವರಿಯುತ್ತವೆ. ಇವಕ್ಕೆ ಬಾಹ್ಯದ ಕೃತಕತೆಯ ಸೋಂಕು ತಗುಲಲು ಸಾಧ್ಯವಿಲ್ಲ. ಒಂದು ಸೀಮಿತ ಚೌಕಟ್ಟಿನಲ್ಲಿ ಮಾತ್ರ ಹುಟ್ಟಿಕೊಂಡಿರುತ್ತವೆ.

ಹೇಳಿಕೆಗಳಲ್ಲಿ ಒಂದಿಲ್ಲೊಂದು ರೀತಿಯ ಆಹ್ವಾನದ ಹೇಳಿಕೆಗಳ ಸತ್ಯಾಸತ್ಯತೆಯ ದೃಢೀಕರಣದ ಕಂಟಕ ಪ್ರಾಪ್ತಿ ಮತ್ತು ಅದರ ನಿವಾರಣೆಯ ಕುರಿತಾದ ಮಾತುಗಳು ಪದೇ ಪದೇ ಪುನರುಕ್ತಿಗೊಳ್ಳುತ್ತವೆ. ಇದನ್ನೇ ಶೈಲಿ ಎಂದು ಕರೆಯಬಹುದು.

ಹೇಳಿಕೆ ಮಾಡುವ ವ್ಯಕ್ತಿ ಒಂದೊಂದು ಹೇಳಿಕೆ ಹೇಳುವಾಗಲೂ ಒಂದೊಂದು ದಿಕ್ಕಿಗೆ ಮುಖಮಾಡಿರುತ್ತಾನೆ. ದಿಕ್ಕಿಗನುಗುಣವಾಗಿ ಹೇಳಿಕೆಗಳು ಬೇರೆ ಬೇರೆ ಅರ್ಥಗಳನ್ನು ಪಡೆದಿರುತ್ತವೆ. ಇವು ಹಳ್ಳಿಯ ಜನರ ಅರ್ಥವ್ಯವಸ್ಥೆಯನ್ನು ರೂಪಿಸುವ ಮತ್ತು ನಿಯಂತ್ರಿಸುವ ಕೆಲಸ ಮಾಡುತ್ತವೆ. ವ್ಯವಸಾಯಕ್ಕೆ ಸಂಬಂಧಿಸಿದ ಯಾವುದೇ ಕೆಲಸಗಳನ್ನು ರೈತರ ಹೇಳಿಕೆಯಂತೆ ಮಾಡುತ್ತಾರೆ.

ಗ್ರಾಮೀಣ ಪರಿಸರದ ವಸ್ತು-ಘಟನೆಗಳ ವಾಡಿಕೆಯ ಮಾತುಗಳು ಸಾಂಕೇತಿಕ ಅರ್ಥ ಪಡೆದಿರುತ್ತವೆ. ಒಂದು ವರ್ಷದ ಭವಿಷ್ಯ ವಾಣಿಯನ್ನು ಬೆಡಗಿನ ಮಾತು ಒಗಟಿನ ರೂಪದಲ್ಲಿದ್ದು ಸುಲಭವಾಗಿ ಎಲ್ಲರಿಗೂ ಅರ್ಥವಾಗದು ಅರ್ಥೈಸಲು ಸ್ವಲ್ಪಮಟ್ಟಿನ ಜ್ಞಾನದ ಆವಶ್ಯಕತೆ ಇದೆ ಎಂದು ಪ್ರಭು ಖಾನಾಪುರೆ ಅವರು ಅಭಿಪ್ರಾಯಪಡುತ್ತಾರೆ.

ಜನಪದ ಸಾಹಿತ್ಯದಲ್ಲಿ ಹೇಳಿಕೆಗಳು ವಿಶಿಷ್ಟಸ್ಥಾನ ಪಡೆದು ಸಂಸ್ಕೃತಿಯನ್ನು ಹಿಡಿದಿಟ್ಟುಕೊಂಡಿವೆ. ಮೌಖಿಕ ರೂಪದಲ್ಲಿರುವ ಕುರುಬರ ಹೇಳಿಕೆಗಳನ್ನು ಕ್ರಮಬದ್ಧವಾಗಿ ಸಂಗ್ರಹಿಸಿ ಪ್ರಕಟಿಸುವ ಅವಶ್ಯವಿದೆ. ಆಗ ಮಾತ್ರ ಈ ಹೇಳಿಕೆಗಳ ಅರ್ಥ ಸ್ವರೂಪ ಮತ್ತು ವ್ಯಾಪ್ತಿ ಕುರಿತು ಅಧ್ಯಯನ ಮಾಡಲು ಸಾಧ್ಯವಾಗುತ್ತದೆ.

ಕೊನೆಟಿಪ್ಪಣಿ

೧. ಎಸ್.ಎಸ್.ಅಂಗಡಿ, ಕುರುಬ ಸಮುದಾಯದ ಭಾಷೆ, ಪುಟ ೨೧೬

೨. ರಹಮತ್ ತರೀಕೆರೆ, ಜನಪದ ಹಾಲುಮತ ಮಹಾಕಾವ್ಯ ಸಾಂಸ್ಕೃತಿಕ ಮುಖಾಮುಖಿ

೩. ಸಿದ್ಧಣ್ಣ ಜಕಬಾಳ, (ಸಂ) ಕುರುಬರ ರಟ್ಟಮತ ಶಾಸ್ತ್ರದ ಮುನ್ನುಡಿಯಿಂದ

೪. ಅದೇ

೫. ಚೆನ್ನಬಸವ ಕವಿಯ ಹಾಲುಮತ ಪುರಾಣ, ಪುಟ ೧೨

೬. ಹಸ್ತಪ್ರತಿ ಅಧ್ಯಯನ ೨, ಪುಟ ೭೬

೭. ಶಂಬಾ ಜೋಶಿ, ಕರ್ನಾಟ ಸಂಸ್ಕೃತಿ ಪೂರ್ವ ಪೀಠಿಕೆ, ಸಂಪುಟ ೩

೮. Flok songs of Karnataka, pp. 26

೯. ಅರ್ಜುನ ಗೊಳಸಂಗಿ, ಡೊಳ್ಳಿನ ಪದಗಳು, ಪುಟ ೧೪

೧೦. ನುಡಿ ನಮನ, ಎಚ್.ಬಿ.ಕಟಿಗೆಣ್ಣನವರ ಅಭಿನಂದನ ಗ್ರಂಥ, ಪುಟ ೧೩೬

೧೧. ಹೆಚ್ಚಿನ ಮಾಹಿತಿಗಾಗಿ ಎಫ್.ಟಿ.ಹಳ್ಳಿಕೇರಿ ಅವರ ಡೊಳ್ಳಿನ ಹಾಡುಗಳು ಎಂಬ ಲೇಖನವನ್ನು ನೋಡಿ, ನುಡಿನಮನ, ಪುಟ ೧೧೦

೧೨. ವಿ.ಆರ್.ಹನುಮಂತಯ್ಯ, ಭಾರತ ದೇಶದ ಕುರುಬರ ಚರಿತ್ರೆ, ಪುಟ ೮೮

೧೩. ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಎಫ್.ಟಿ.ಹಳ್ಳಿಕೇರಿ, ತಗರ ಪವಾಡ, ಪುಟ ೧೨೪

೧೪. ಎಫ್.ಟಿ.ಹಳ್ಳಿಕೇರಿ, (ಸಂ) ಹಸ್ತಪ್ರತಿ ವ್ಯಾಸಂಗ ೮, ಪುಟ ೧೩೫

೧೫. ಚಂದ್ರಪ್ಪ ಅಜ್ಜಂಪುರ, ಕುರುಬರ ಕುರುಹುಗಳು, ಪುಟ ೧೯೧

ಅಧ್ಯಾಯ ೫

ಆಧುನಿಕ ಸಾಹಿತ್ಯ

೧. ಕುರುಬರ ಇತಿಹಾಸ

೨. ಕುರುಬರ ರಾಜಕೀಯ ಇತಿಹಾಸ

೩. ಗುರುಪರಂಪರೆ

೪. ದೈವಗಳು

೫. ಉಪಪಂಗಡಗಳು

೬. ಆಚರಣೆ-ಸಂಪ್ರದಾಯ-ಕಲೆಗಳು

೭. ಸಂಸ್ಮರಣ ಮತ್ತು ಅಭಿನಂದನ ಸಂಪುಟಗಳು

೮. ಸಂಕೀರ್ಣ ಕೃತಿಗಳು

೯. ನಿಯತಕಾಲಿಕೆಗಳು

ಅಧ್ಯಾಯ ೫

ಆಧುನಿಕ ಸಾಹಿತ್ಯ

ಬ್ರಿಟಿಷರ ಆಗಮನದಿಂದಾಗಿ ಭಾರತದಲ್ಲಿ ಸಮುದಾಯಗಳ ಕುರಿತು ಅಧ್ಯಯನಗಳು ಆರಂಭವಾದವು. ದಕ್ಷಿಣ ಭಾರತದ ವಿವಿಧ ಸಮುದಾಯಗಳ ಬಗೆಗೆ ಎಡ್ಗರ ಥರ್ಸ್ಟನ್ ಅವರು Caste and Tribes of Southern India ಹೆಸರಿನ ಏಳು ಸಂಪುಟಗಳನ್ನು ೧೯೦೯ರಲ್ಲಿ ಹೊರತಂದರು. ಈ ಸಂಪುಟಗಳ ಮೂಲಕ ದಕ್ಷಿಣ ಭಾರತದ ವಿವಿಧ ಜಾತಿ ಜನಾಂಗಗಳ ಹಿನ್ನಲೆ, ಇತಿಹಾಸ, ಧರ್ಮ ಆರ್ಥಿಕ ಸಾಮಾಜಿಕ ಮೊದಲಾದ ಸಾಂಸ್ಕೃತಿಕ ವಿಚಾರಗಳು ತಿಳಿದುಬಂದುವು. ಈ ಸಂಪುಟಗಳ ಪ್ರೇರಣೆಯಿಂದ ಆಯಾ ರಾಜ್ಯಗಳಲ್ಲಿ ಜಾತಿ ಜನಾಂಗಗಳ ಸರ್ವೇಕ್ಷಣೆಯೊಂದಿಗೆ ಅಧ್ಯಯನಗಳು ಆರಂಭವಾದವು. ಈ ಹಿನ್ನೆಲೆಯಲ್ಲಿ ಹಾಲುಮತ ಸಮುದಾಯವನ್ನು ಕುರಿತಂತೆ ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಅಧ್ಯಯನ ಕೈಕೊಂಡಿದ್ದರ ಬಗೆಗೆ ನಮಗೆ ವಿವಿಧ ಆಕರಗಳಿಂದ ದೃಢಪಡಿಸುತ್ತಾರೆ.

ಹೀಗಾಗಿ ಕಳೆದ ಒಂದು ಶತಮಾನದ ಅವಧಿಯಲ್ಲಿ ಹಾಲುಮತ ಸಂಸ್ಕೃತಿ ಸಮಾಜ ಸಾಹಿತ್ಯವನ್ನು ಕುರಿತಂತೆ ಬಂದ ಅಧ್ಯಯನಗಳನ್ನು

೧. ಕುರುಬರ ಇತಿಹಾಸ ೨. ರಾಜಕೀಯ ೩. ಗುರು ಪರಂಪರೆ ೪. ದೈವಗಳು, ೫. ಉಪಪಂಗಡಗಳು ೬. ಆಚರಣೆ-ಸಂಪ್ರದಾಯ-ಕಲೆಗಳು ೭. ಸಂಸ್ಮರಣ-ಅಭಿನಂದನ ಗ್ರಂಥಗಳು ೮. ಸಂಕೀರ್ಣ ಕೃತಿಗಳು ೯. ನಿಯತಕಾಲಿಕೆಗಳು. ಹೀಗೆ ಅಧ್ಯಯನದ ಅನುಕೂಲಕ್ಕಾಗಿ ಈವರೆಗೆ ಬಂದ ಹಾಲುಮತ ಆಕರಗಳನ್ನು ವರ್ಗೀಕರಿಸಲಾಗಿದೆ.

೧. ಕುರುಬರ ಇತಿಹಾಸ

ಕುರುಬ ಸಮುದಾಯದ ಇತಿಹಾಸವನ್ನು ನಿರೂಪಿಸುವಂಥ ಕೃತಿಗಳು ಕಳೆದ ಶತಮಾನದ ಎರಡನೆಯ ದಶಕದಿಂದ ರಚನೆಗೊಳ್ಳುತ್ತ ಬಂದಿವೆ. ಈ ಕೃತಿಗಳಲ್ಲಿ ಮುಖ್ಯವಾಗಿ ಕುರುಬರ ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಭೌಗೋಳಿಕ ಸಾಹಿತ್ಯಿಕ ಜಾನಪದ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ದಾಖಲಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಿ.ಆರ್. ಹನುಮಂತಯ್ಯನವರು ೧೯೨೭ರಲ್ಲಿ ರಚಿಸಿದ ಕುರುಬರ

ಚರಿತ್ರೆ ಗ್ರಂಥವು ಮೊದಲನೆಯದಾಗಿದೆ. ನಂತರದಲ್ಲಿ ಹಾಲುಮತದ ಚರಿತ್ರೆ (೧೯೪೯ ಯಲ್ಲನಗೌಡ ಫ. ಅತ್ತಿಕೊಳ್ಳ) ಭಾರತ ದೇಶದ ಕುರುಬರ ಚರಿತ್ರೆ (೧೯೫೮, ವಿ.ಆರ್.ಹನುಮಂತಯ್ಯ), ಹಾಲುಮತ ದರ್ಶನ (೧೯೬೦), ಕರ್ನಾಟಕ ಸಂಸ್ಕೃತಿ ಪೂರ್ವ ಪೀಠಿಕೆ (೧೯೯೭ ಶಂಬಾ ಜೋಷಿ), ಕರ್ನಾಟಕ ಕುರುಬರು (೧೯೯೩ ಶಿವಾನಂದ ಗುಬ್ಬಣ್ಣನವರ), ಕುರುಬರ ಹೆಜ್ಜೆಗಳು (೨೦೦೬ ಚಂದ್ರಕಾಂತ ಬಿಜ್ಜರಗಿ) ಕುರುಬರ ಇತಿಹಾಸವನ್ನು ನಿರೂಪಿಸುವ ಮಹತ್ವದ ಕೃತಿಗಳಾಗಿವೆ. ಈ ಕೃತಿಗಳ ಸ್ವರೂಪ ಮತ್ತು ವಿಶೇಷತೆಯನ್ನು ಈಗ ಅವಲೋಕಿಸಬಹುದು.

೧. ಕುರುಬರ ಚರಿತ್ರೆ - ವಿ.ಆರ್.ಹನುಮಂತಯ್ಯ (೧೯೨೬)

ವಿ.ಆರ್. ಹನುಮಂತಯ್ಯನವರು ೧೯೨೬ರಲ್ಲಿ 'ಕುರುಬರ ಚರಿತ್ರೆ' ಎಂಬ ೧೮೬ ಪುಟಗಳ ಮೊದಲ ಚಾರಿತ್ರಿಕ ಕೃತಿಯನ್ನು ನೀಡಿದ್ದಾರೆ. ೧೯ನೆಯ ಶತಮಾನದ ಉತ್ತರಭಾಗದಲ್ಲಿ ಜನಿಸಿ ಪ್ರಾಥಮಿಕ ಶಾಲಾಶಿಕ್ಷಕರಾಗಿ ಒಂದು ವಿಶ್ವವಿದ್ಯಾಲಯ ಮಾಡಬೇಕಾದ ಕೆಲಸವನ್ನು ವಿನಮ್ರವಾಗಿ ವ್ಯವಸ್ಥಿತವಾಗಿ ಮಾಡಿ ಮುಗಿಸಿದ್ದಾರೆ.

ಈ ಕೃತಿಯ ಉಪೋದ್ಘಾತದಲ್ಲಿ ತಮ್ಮ ಉದ್ದೇಶ ಮತ್ತು ಪರಿಶ್ರಮವನ್ನು ಹೀಗೆ ತಿಳಿಸಿದ್ದಾರೆ. "ಈ ಪಂಗಡಗಳ ದ್ವೇಷಾಸೂಯಗಳು ನಾಶವಾಗಬೇಕಾದರೆ ಕುರುಬರು ಎಂದರೆ ಎಲ್ಲರೂ ಒಂದೇ ಬುಡಕಟ್ಟಿನವರೆಂಬುವ ಮಹತ್ತಾದ ಮತಾಭಿಮಾನ ಮತ್ತು ಸ್ವಾಭಿಮಾನಗಳುಂಟಾಗಬೇಕು. ಇಂಥಾ ಅಸಮಾನವಾದ ಮತಾಭಿಮಾನ ಸ್ವಜನಾಭಿಮಾನಗಳಿಂದಲೇ ಒಂದು ಪಂಗಡವು ಮುಂದುವರಿಯ ಬೇಕಾಗಿರುವುದು. ಹೀಗೆಯೇ ಒಂದು ದೇಶವು ಅಭಿವೃದ್ಧಿಗೆ ಬರಬೇಕಾದರೂ ಜನರಲ್ಲಿ ಮೊದಲು ಸ್ವಜನಾಭಿಮಾನ, ಸ್ವಧರ್ಮಾಭಿಮಾನ, ಆ ಮೇಲೆ ಸ್ವದೇಶಾಭಿಮಾನಗಳೆಂಬೀ ಅಭಿಮಾನಗಳಂಕುರಿಸ ಬೇಕಾಗಿರುವುದು. ಇಂಥ ಅಭಿಮಾನಗಳೂ, ರಾಜಭಕ್ತಿಯೂ ಮತ್ತು ದೈವಭಕ್ತಿಯೂ ನಮ್ಮ ಸಮಾಜದಲ್ಲಂಕುರಿಸಬೇಕೆಂಬ ಸದಭಿಃಪ್ರಾಯದಿಂದಲೇ ಸುಮಾರು ಏಳೆಂಟು ವರ್ಷಗಳಿಂದಲೂ ಅನೇಕ ಕಷ್ಟನಷ್ಟಗಳಿಗೂ ಪರಿಹಾಸ್ಯಗಳಿಗೂ ಒಳಗಾಗಿ ನಿಷ್ಪಕ್ಷಪಾತಿಗಳಾದ ಅನೇಕ ಚರಿತ್ರೆಕಾರರಿಂದಲೂ ವಿದ್ವಾಂಸರು(Professors)ಗಳಿಂದಲೂ ಬರೆಯಲ್ಪಟ್ಟ ಈ ಗ್ರಂಥದ ಟಿಪ್ಪಣೆ(Footnotes)ಗಳಲ್ಲಿ ವಿವರಿಸಲ್ಪಟಿರುವ ಅಮೂಲ್ಯವಾದ ಗ್ರಂಥಗಳನ್ನು ಸಂಗ್ರಹಿಸಿ ತದ್ಗ್ರಂಥಾಧಾರಗಳಿಂದ ನಾನೀ ಕುರುಬರ ಚರಿತ್ರೆ ಎಂಬ ಪುಸ್ತಕವನ್ನು ಬರೆದಿರುವೆನು."[೧]

ಕೃತಿಯ ಆರಂಭದಲ್ಲಿ ದೇಶಭಾಷಾರಿತ್ಯ ಕುರುಬರನ್ನು ಕರೆಯುವ ಹೆಸರುಗಳನ್ನು ಕೆಲವು ಛಾಯಾಚಿತ್ರಗಳ ಸಹಿತ ವಿವರಗಳನ್ನು ಕಾಣಬಹುದು. ಒಟ್ಟು ಒಂಭತ್ತು ಅಧ್ಯಾಯನಗಳಲ್ಲಿ ಕುರುಬರ ಚರಿತ್ರೆ ವಿಸ್ತಾರವನ್ನು ಪಡೆದಿದೆ.

ಮೊದಲನೆಯ ಪ್ರಕರಣವು 'ಭರತ ಖಂಡದ ಸಂಕ್ಷಿಪ್ತ ಇತಿಹಾಸ' ಎಂಬ ಶೀರ್ಷಿಕೆ ಹೊಂದಿದೆ. ಇದು ಗಿರಿನದಿಗಳ ವರ್ಣನೆ, ಮೂಲ ನಿವಾಸಿಗಳು, ದ್ರಾವಿಡರು, ಅನಾರ್ಯರು, ಆರ್ಯರ ಮೊದಲಾದ ವಿಷಯಗಳನ್ನು

ವಿವರಿಸುತ್ತದೆ. ಎರಡನೆಯ ಪ್ರಕರಣವು 'ಪ್ರಾಚೀನ ಕುರುಬರು' ಎಂಬ ಶೀರ್ಷಿಕೆಯನ್ನು ಹೊಂದಿದೆ. ಇದು ಪ್ರಾಚೀನ ಕುರುಬರ ಸಂಕ್ಷಿಪ್ತ ಚರಿತ್ರೆ ಕುರುಬರೆಂಬ ಹೆಸರು ಬರಲು ಕಾರಣಗಳು, ಕುರುಬರಲ್ಲಿಯ ಎರಡು ದೊಡ್ಡ ಪಂಗಡಗಳು, ಕುರುಬರನ್ನು ದೇಶಭಾಷಾರಿತ್ಯಾ ನಾಲ್ಕು ಭಾಗಗಳಾಗಿ ವಿಂಗಡಿಸಿ ಅನೇಕ ವಿಷಯಗಳನ್ನು ತಿಳಿಸಲಾಗಿದೆ.

ಮೂರನೆಯ ಪ್ರಕರಣವು ಕರ್ನಾಟಕ ಕುರುಬರ ಒಳಪಂಗಡಗಳು, ಆಚಾರ, ವಿಚಾರಗಳು, ಕಂಬಳಿ ಕುರುಬರು, ಕನಕಯ್ಯನ ಜಾತಿಯವರು, ಪ್ರಥಮ ಶೂದ್ರರು, ಇಂದ್ರ ಶೂದ್ರರು, ಅಂಡೇ ಕುರುಬರು, ಒಡೆಯರು, ದಾಸಯ್ಯಗಳು, ವಾರದ ಕುರುಬರು, ಮತಾಚಾರ, ಆಹಾರ, ಉಡಿಗೆ ತೊಡಿಗೆಗಳು, ವೃತ್ತಿ, ಜನನ-ವಿವಾಹ-ಮರಣ, ಗುರುಮತಗಳು, ಕುಲದೇವರುಗಳು, ಮೈಲಾರಲಿಂಗನ ಕುಲದ ಕಟ್ಟುಗಳ ಕುರುಬರಲ್ಲಿಯ ಅಲ ಬೆಡಗುಗಳು ಹೀಗೆ ಭಿನ್ನ ನೆಲೆಯಲ್ಲಿ ವಿಷಯಗಳನ್ನು ವಿಮರ್ಶೆಗೆ ಒಳಪಡಿಸುತ್ತದೆ. ನಾಲ್ಕನೆಯ ಪ್ರಕರಣವು, ಆಂಧ್ರ (ತೆಲುಗು) ಕುರುಬರ ವಿವರಗಳನ್ನು ಹೊಂದಿದೆ. ಗೊಲ್ಲವಾಡು, ಕುರುಪ್ಪು, ಯಾದವುಲು ಕುರುಮ ಎಂಬ ಹೆಸರುಗಳಿಂದ ಆಂಧ್ರದಲ್ಲಿ ಕರೆಯುವ ವಿವರಗಳನ್ನು ಕುರುಬರ ಆಚಾರವಿಚಾರ ಸಂಪ್ರದಾಯಗಳ ವಿಷಯಗಳನ್ನು ಕ್ರೋಢಿಕರಿಸಲಾಗಿದೆ.

ಐದನೆಯ ಪ್ರಕರಣವು ದ್ರಾವಿಡ ಕುರುಬರ ಪರಿಚಯವನ್ನು ಒದಗಿಸುತ್ತದೆ. ಆರನೆಯ ಪ್ರಕರಣವು 'ಮಹಾರಾಷ್ಟ್ರ ಕುರುಬರು (Dhanagars) ಮತ್ತು ಅವರ ಒಳಪಂಗಡಗಳು' ಎಂಬ ಶೀರ್ಷಿಕೆಯನ್ನು ಹೊಂದಿದೆ. ಧನಗಾರ ಪದದ ನಿಷ್ಪತ್ತಿ, ಅರ್ಥ, ಧನಗಾರರ ಒಳಪಂಗಡಗಳು, ಕ್ಷೇತ್ರಾಧಾರಿತ, ಹೆಸರುಗಳು, ಧನಗಾರರಲ್ಲಿರುವ ೧೧೭ ಗೋತ್ರಗಳು, ಮದುವೆ, ಜನನ, ಮತಕಟ್ಟಳೆ, ಗವಳಿ, ಹಟ್ಕಾರ್ ಮೊದಲಾದವನ್ನು ಚರ್ಚೆಗೆ ಒಳಪಡಿಸಲಾಗಿದೆ.

ಏಳನೆಯ ಪ್ರಕರಣವು 'ಕುರುಬರಲ್ಲಿ ರಾಜ್ಯಸ್ಥಾಪನೆ ಮಾಡಿದ ರಾಜವಂಶಗಳನ್ನು ಪರಿಚಯಿಸುತ್ತದೆ. ಪಲ್ಲವರು, ಕದಂಬರು, ದೇವಗಿರಿ ಯಾದವರು, ವಿಜಯನಗರ ಅರಸರು, ವಿಜಯನಗರ ಅರಸರ ವಂಶವೃಕ್ಷದ ರೇಖಾಚಿತ್ರ (ಪುಟ ೧೨) ವಿಜಯನಗರದ ಮೊದಲನೆಯ ವಂಶದ ಅರಸರ ಆಳ್ವಿಕೆಯ ಕಾಲದ ವಿವರ, ಬಳ್ಳಾರಿ ಪಾಳೆಯಗಾರರು, ಕುರುಗೋಡು, ಇಂದೋರ್ ಹೋಳ್ಕರ್ ಮಹಾರಾಜರು ಮುಂತಾದ ಅರಸರ ಚರಿತ್ರೆಯನ್ನು ಈ ಅಧ್ಯಾಯವು ಪರಿಚಯಿಸುತ್ತದೆ.

ಎಂಟನೆಯ ಪ್ರಕರಣವು ಕುರುಬ ಸಮಾಜದಲ್ಲಿ ಆಗಿಹೋದ ಮಹನೀಯರ ಜೀವನ ಚರಿತ್ರೆಗಳನ್ನು ಪರಿಚಯಿಸುತ್ತದೆ. ಕನಕದಾಸ, ಕಾಳಿದಾಸ, ದೇವಿ ಅಹಲ್ಯಾಬಾಯಿ, ಸಿದ್ಧಪ್ಪಯ್ಯ ಒಡೆಯರ ಜೀವನ ಚರಿತ್ರೆ ಮುಂತಾದವನ್ನು ಹೊಂದಿದೆ. ಒಂಭತ್ತನೆಯ ಪ್ರಕರಣವು ಹುಲ್ಲೂರಿನಲ್ಲಿ ನಡೆದ ಹಾಲುಮತ (ಕುರುಬರ) ಎರಡನೆಯ ಧಾರ್ಮಿಕ ಮಹಾಸಭೆಯನ್ನು ಕುರಿತಾದ ವಿವರಗಳನ್ನು ಹೊಂದಿದೆ.

ಒಟ್ಟಾರೆ ಹಾಲುಮತದ ಚರಿತ್ರೆಯನ್ನು ನಿರ್ದಿಷ್ಟವಾದ ಅಂಕಿ ಅಂಶಗಳು ಒಳಪಂಗಡಗಳು ಆಚಾರ ವಿಚಾರಗಳು ಮೊದಲಾದವುಗಳ ತಲಸ್ಪರ್ಶಿ ವಿವರಗಳನ್ನು ಒದಗಿಸುವ ಆದ್ಯಕೃತಿಯಾಗಿದೆ.

ಹೀಗೆ ಕುರುಬ ಸಮುದಾಯದ ಪ್ರಾಚೀನ ಇತಿಹಾಸ ಉಪಪಂಗಡಗಳು, ಸಂಪ್ರದಾಯಗಳು, ಭಾರತದ ವಿವಿಧ ರಾಜ್ಯಗಳಲ್ಲಿರುವ ಕುರುಬರ ವಿಶೇಷತೆಗಳನ್ನು ಆಧಾರ ಸಹಿತ ಚರ್ಚಿಸಿರುವುದು ಹನುಮಂತಯ್ಯನವರ ಆಳವಾದ ಅಧ್ಯಯನಕ್ಕೆ ನಿದರ್ಶನವಾಗಿದೆ. ಕುರುಬ ಸಮುದಾಯವನ್ನು ಸಮಗ್ರವಾಗಿ ಪರಿಚಯಿಸಿದ ಮೊದಲ ಗ್ರಂಥವೆಂಬ ಹೆಗ್ಗಳಿಕೆಗೆ ಈ ಕೃತಿ ಪಾತ್ರವಾಗಿದೆ.

ಈ ಕೃತಿಯನ್ನು ಸುಧಾಕರ ಅವರು ಸಂಪಾದನೆ ಮಾಡಿ ಪ್ರಕಟಿಸಿದ್ದಾರೆ. ಕೃತಿಯುದ್ದಕ್ಕೂ ಹನುಮಂತಯ್ಯನವರ ಅಭಿಪ್ರಾಯಗಳಿಗೆ ಸುಧಾಕರ ಅವರು ಅಡಿಟಿಪ್ಪಣಿಗಳ ರೂಪದಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ಹೀಗಾಗಿ ಸುಧಾಕರ ಅವರ ಸಂಪಾದಿತ ಹನುಮಂತಯ್ಯನವರ ಕುರುಬರ ಚರಿತ್ರೆ ಕೃತಿಯನ್ನು ಓದುವಾಗ ಒಂದು ರೀತಿಯ ಗೊಂದಲ ಕಂಡು ಬರುತ್ತದೆ. ಆದ್ದರಿಂದ ಹನಮಂತಯ್ಯನವರ ಕೃತಿಯ ಮೂಲ ಸ್ವರೂಪವನ್ನು ಯಥಾವತ್ತಾಗಿ ಪ್ರಕಟಿಸಿದ್ದರೆ ಓದುಗರಿಗೆ ಅನುಕೂಲವಾಗುತ್ತಿತ್ತು.

೨. ಹಾಲುಮತದ ಚರಿತ್ರೆ- ಯಲ್ಲನಗೌಡ. ಫ. ಅತ್ತಿಕೊಳ್ಳ ಧಾರವಾಡ (೧೯೪೯)

೧೯೪೯ರಲ್ಲಿ ಯಲ್ಲನಗೌಡ. ಫ.ಅತ್ತಿಕೊಳ್ಳ ಅವರು 'ಹಾಲುಮತ ಚರಿತ್ರೆ' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ೫೨ ಪುಟಗಳ ಈ ಲಘುಕೃತಿಯು ೧೨ ಅಧ್ಯಾಯಗಳಲ್ಲಿ ವಿಭಾಗಿಸಲ್ಪಟ್ಟಿದೆ.

ಮುನ್ನುಡಿಯಲ್ಲಿ ರಾಜವಿಲಾಸಿ ಎಂಬ ಅಂಕಿತನಾಮದ ಲೇಖಕರು ತೂಕಬದ್ಧವಾಗಿ "......ನನಗೆ ತಿಳಿದ ಮಟ್ಟಿಗೆ ಹಾಲುಮತದಲ್ಲಿ ಇಂತಹ ಸವಿಸ್ತಾರ ವಿಷಯವನ್ನೊಳಗೊಂಡ ಗ್ರಂಥವು ಕನ್ನಡದಲ್ಲಿ ಇದೇ ಮೊದಲನೆಯದೆಂದು ಹೇಳಲು ಕೊಂಚ ಸಾಹಸದ ಮಾತಾದರೂ ಹಾಗೆ ಹೇಳದೆ ವಿಧಿಯಿಲ್ಲ. ಗ್ರಂಥಕರ್ತರು ಈ ಚಿಕ್ಕ ಹೊತ್ತಿಗೆಯಲ್ಲಿ ಹಾಲುಮತದ ಚರಿತ್ರೆಯನ್ನೇ ಸಂಕ್ಷೇಪವಾಗಿ ಬರೆದು ಸಮಾಜಕ್ಕೆ ಮಹದುಪಕಾರ ಮಾಡಿದ್ದಾರೆ"[೨] ಎಂದು ತಿಳಿಸಿದ್ದಾರೆ. ಲೇಖಕ ಯಲ್ಲನಗೌಡ. ಫ. ಅತ್ತಿಕೊಳ್ಳ ಅವರು ಆತ್ಮನಿವೇದನೆಯಲ್ಲಿ "......೪-೫ ವರುಷಗಳಿಂದ ನಮ್ಮ ಸಮಾಜದ ಹಿರಿಯರು, ಪ್ರಮುಖರು ವಿದ್ವಾಂಸರು ಇವರಿಂದ ಹಳ್ಳಿಯ ಜನಪದ ಸಾಹಿತ್ಯ, ಹೆಣ್ಣು ಮಕ್ಕಳ ಹಾಡುಗಳಿಂದ ಸಾಕಷ್ಟು ವಿಷಯವನ್ನು ಸಂಗ್ರಹಿಸಿದ್ದಲ್ಲದೆ ಕೆಲವು ಧರ್ಮಗ್ರಂಥಗಳ ನೆರವನ್ನು ಪಡೆದು ಈ ಹೊತ್ತಿಗೆಯನ್ನು ಸಿದ್ಧಪಡಿಸಿದೆ" ಎಂದು ಹೇಳುವುದರ ಮೂಲಕ ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ.[೩]

ಗದ್ಯರೂಪದ ಈ ಕೃತಿಯು ಹಾಲುಮತ ಸಂಸ್ಕೃತಿಯ ಚಾರಿತ್ರಿಕ ವಿಷಯಗಳನ್ನು ತಿಳಿಸುವ ಪ್ರಮುಖ ಕೃತಿಯಾಗಿದೆ. ಹಾಲುಮತದ ಪೂರ್ಣ ಪ್ರಮಾಣದ ವಿಷಯ ಸಂಗ್ರಹವನ್ನು ಹೊಂದಿದ್ದಲ್ಲದೆ ವಿಷಯ ಸ್ಪಷ್ಟತೆಗಾಗಿ ಅನೇಕ ಕಾವ್ಯ ಪುರಾಣಗಳನ್ನು ಬಳಸಿಕೊಳ್ಳಲಾಗಿದೆ.

ಪ್ರಾರಂಭದಲ್ಲಿ ಶಿವಲೀಲೆಯಿಂದ ಜಗತ್ತು ಹುಟ್ಟಿದ್ದನ್ನು ಗುರುತಿಸಲಾಗಿದೆ. ನಂತರ ಶಿವಪಾರ್ವತಿಯರಿಂದಾಗಿ ಮುದ್ದವ್ವ ಮುದ್ದಪ್ಪರಿಂದ ಹಾಲುಮತ ಉತ್ಪತ್ತಿ ಮೂರನೆಯ ಅಧ್ಯಾಯವು ಕೈಲಾಸದ ದೇವಸಭೆಯಲ್ಲಿ ಭೃಂಗಿ ಪ್ರಸಂಗ ಮತ್ತು ಪಾರ್ವತಿಯು ಶಾಪದಿಂದ ಕುರಿಗಳ ಉಗಮದ ವಿವರಗಳನ್ನು ಹೊಂದಿದೆ. ನಾಲ್ಕನೆಯ ಅಧ್ಯಾಯ ರೇವಣಸಿದ್ಧರ ಆಶೀರ್ವಾದದಿಂದ ಸಗ್ಗಲದೇವಿ ಮತ್ತು ಮುದ್ದುಗೊಂಡರಿಗೆ ಸಿದ್ಧರಾಮ ಜನಿಸುತ್ತಾನೆ. ಅವನು ಬಾಲ್ಯದಲ್ಲಿಯೇ ಶಿವಭಕ್ತನಾಗಿದ್ದು ಶಿವನನ್ನು ಹುಡುಕುತ್ತ, ಶ್ರೀಶೈಲಕ್ಕೆ ಬಂದು ಶಿವನು ಕಾಣದಾಗಲು ನಿರಾಸೆಯಿಂದ ಕೊಳದಲ್ಲಿ ಬಿದ್ದು ಪ್ರಾಣಕಳೆಯಲು ಯತ್ನಿಸುತ್ತಿರಲು ಶಿವನು ಪ್ರತ್ಯಕ್ಷ ಹೊಂದಿ "....ಇಂದಿನಿಂದ ನೀನು ಸಿದ್ಧರಾಮನಲ್ಲ ಮರುಳಸಿದ್ಧ" ಎಂದು ಕರೆದು ಸಿದ್ಧಮಂಕನಿಗೆ ತಪಶ್ಚರ್ಯ ಮಾಡಿ ಆತ್ಮ ಸಂಯಮ ಪಡೆಯಲು ಸೂಚಿಸಿ ಹನ್ನೆರಡು ಸೂಜಿ, ಹನ್ನೆರಡು ಡಬ್ಬಣ, ಹನ್ನೆರಡು ಗುಲಗಂಜಿ, ಹನ್ನೆರಡು ಅಡಿಕೆಯ ಬೆಟ್ಟಗಳನ್ನು ಕೊಟ್ಟು ಅವುಗಳನ್ನು ಒಂದಕ್ಕೊಂದು ಹಚ್ಚಿ ಭೂಮಿಯನ್ನು ತೂಗು, ಒಂದು ಗುಲಗಂಜಿ ಹೆಚ್ಚು ಇದ್ದ ಕ್ಷೇತ್ರದಲ್ಲಿ ತಪಸ್ಸನ್ನು ಆಚರಿಸಲು ತಿಳಿಸಿ ಸಹಾಯಕ್ಕಾಗಿ ಕಾಲಭೈರನನ್ನು ನೇಮಿಸಿ ಮಾಯವಾಗುವನು. ಶಿವಾಜ್ಞೆಯಂತೆ ತೂಗುತ್ತಾ ಪೂರ್ವದಿಕ್ಕಿಗೆ ಬಂದು ಸೂಜಿಯ ಮೇಲೆ ತಲೆಯೂರಿ ಕಾಲು ಮೇಲೆ ಮಾಡಿ ತಪಸ್ಸಿಗೆ ತೊಡಗಿದ ವಿವರಗಳು ಇಲ್ಲಿವೆ. ಮುದ್ದವ್ವ ಮುದ್ದಪ್ಪರ ಆರನೆಯ ಮಗ ಶಿವಪದ್ಮನು ಹೊಲ ಊಳುವ ಸಮಯದಲ್ಲಿ ಪಾರ್ವತಿ ಹೊಗಿಸಿದ ಕುರಿಗಳು ಗವಿಯ ಬಾಯಿಂದ ಹೊರಬಂದು ಗಾಬರಿಗೊಳ್ಳುತ್ತಾನೆ. ಶಿವನು ಪ್ರತ್ಯಕ್ಷಗೊಂಡು ಕುರಿಕಾಯುತ್ತಾ ಇರಲು ತಿಳಿಸಿ ಪದ್ಮಗೊಂಡನಿಗೆ ಕುರಿಹಾಲಿನಿಂದ ಗಿಣ್ಣವನ್ನು ಮಾಡಲು ಕಲಿಸಿದನು, ರಾಕ್ಷಸಿಯ ಮಗಳಾದ ಚೆನ್ನವ್ವನನ್ನು ರೇವಣಸಿದ್ಧರ ಸಮ್ಮುಖದಲ್ಲಿ ಮದುವೆ ಮಾಡಿಕೊಳ್ಳುವನು.

ಕಂಬಳಿ ತಯಾರಿಕೆಯ ಬಗ್ಗೆ ರಸ್ತಾಪುರ ಭೀಮಕವಿಯ ಹಾಲುಮತ್ತೋತ್ತೇಜಕ ಪುರಾಣದಿಂದ ಭಿನ್ನವಾದ ಅಭಿಪ್ರಾಯ ಈ ಕೃತಿಯಲ್ಲಿದೆ. ಭೀಮಕವಿಯು ಕೈಲಾಸದಿಂದ ಕಂಬಳಿ ಉಗಮ ತಿಳಿಸಿದರೆ ಅತ್ತಿಕೊಳ್ಳ ಅವರು ಚಾರಿತ್ರಿಕ ಅಂಶಗಳಲ್ಲಿ ಹುಡುಕಲು ಯತ್ನಿಸಿರುವರು. ರೇವಣಸಿದ್ಧರು "... ತನ್ನ ಕೆಂಜೆಡೆಯಿಂದ ಬೆವರಿನ ಹನಿಯನ್ನು ನೆಲಕ್ಕೆ ಕೆಡೆಯಲು ಆ ಕ್ಷಣವೆ ಕುಂಬಾರನು ಹುಟ್ಟಿ ಕೈ ಮುಗಿದು ನಿಂತನು. ಆಗ ರೇವಣಸಿದ್ಧರು ತನ್ನ ತ್ರಿಶೂಲದ ಸ್ವಲ್ಪ ಕಂಬಿಯನ್ನು ಮುರಿದು ಅದನ್ನು ಕತ್ತರಿಯನ್ನಾಗಿ ಮಾಡು ಎಂದು ಹೇಳಲು ಆ ಬೈಲಗಂಬಾರನು ದೇವರ ಅಪ್ಪಣೆಯಂತೆ ಕತ್ತರಿ ಮಾಡಿಕೊಡಲು ಅವನು ಪದ್ಮಗೊಂಡನನ್ನು ಕರೆದು ಕುರಿಗಳಿಂದ ಉಣ್ಣೆಯನ್ನು ಹೇಗೆ ಬೇರೆ ಮಾಡಬೇಕೆಂಬುದನ್ನು ತೋರಿಸಿದನು. ತನ್ನ ನಾಗಬೆತ್ತವನ್ನು ಸೀಳಿ ಅದನ್ನು ಮಣಿಸಿ ಅದಕ್ಕೆ ಒಂದು ಬಳ್ಳಿಯನ್ನು ಕಟ್ಟಿ ಬಿಲ್ಲನ್ನಾಗಿ ಮಾಡಿ ಚೆನ್ನವ್ವನನ್ನು ಕರೆದು ಉಣ್ಣೆಯನ್ನು ಹೇಗೆ ಬಿಚ್ಚಬೇಕೆಂದು ತೋರಿಸಿದನು. ಮತ್ತು ಗದುರವಾಗಿ ಹಂಜಿಯನ್ನು ಮಾಡಿ ನೂಲಲು ಕಲಿಸಿ, ಚಿಲ್ಲ ಬೀಜದ ಸರಿಯನ್ನು ಮಾಡಿ ಅದಕ್ಕೆ ಹಚ್ಚಿ ತನ್ನ ಗಡಿಗಣ್ಣಿನಿಂದ ಉಂಕೆಯನ್ನು ಮಾಡಿ ಎಕ್ಕೆಯ ಗಿಡದ ಬಳಿಯಲ್ಲಿ ಮಗ್ಗವನ್ನು ಹೂಡಿ ನೇಯುವ ಕ್ರಮವನ್ನು ಪದ್ಮಗೊಂಡನಿಗೆ ತೋರಿಸುತ್ತಾ ಒಂದು

ಕಿರಿಯ ಜಾಡಿಯನ್ನು ನೇಯ್ದ ಅತಿ ಪ್ರೀತಿಯಿಂದ ತನ್ನ ಮಸ್ತಕದಲ್ಲಿ ಧರಿಸಿದನು(ಪುಟ ೨೬). ಚೆನ್ನಮ್ಮ ಮತ್ತು ಪದ್ಮಗೊಂಡ ೧೨ ವರ್ಷದ ಬಳಿಕ ಮೊದಲ ಊರಾದ ತಿಮ್ಮಾಪುರಕ್ಕೆ ಬಂದು ಮೊದಲ ಹೆಂಡತಿ ಸಿದ್ದಮ್ಮಳೊಂದಿಗೆ ಸುಖದಿಂದ ಜೀವಿಸತೊಡಗಿದನು. ಸಿದ್ದಮ್ಮಳ ೪೦ ಮಕ್ಕಳು ಹತ್ತಿ ಕಂಕಣದವರಾದರೆ, ಚೆನ್ನಮ್ಮಳ ೪೦ ಮಕ್ಕಳು ಉಣ್ಣೆ ಕಂಕಣದವರಾದರು. ಪದ್ಮಗೊಂಡನ ಮಕ್ಕಳು ಕುರಿಗಾರರಾಗಿ ಮರುಳಸಿದ್ಧ ತಪಸ್ಸು ಮಾಡುವ ಸರೂರಿನ ತೂಗುಡ್ಡದ ಸುತ್ತಲೂ ತಮ್ಮ ಹಟ್ಟಿಯನ್ನು ಹಾಕಿ ಸುಖದಿಂದ ಜೀವಿಸತೊಡಗಿದರು. ಕಾಲಾಂತರದಲ್ಲಿ ಬಿಜ್ಜಳನು ಮಂತ್ರಿ ಪರಿವಾರದೊಂದಿಗೆ ಬೇಟೆಯಾಡುತ್ತ ತೂಗುಡ್ಡಕ್ಕೆ ಬರಲು ಬಾಯಾರಿಕೆಯಿಂದ ಬಳಲಿದ ಕಾರಣ ಪದ್ಮಗೊಂಡನ ಮನೆಗೆ ಬರುತ್ತಾರೆ. ಅಲ್ಲಿ ಅವರಿಗೆ ದೊರೆತ ಆದರಾಥಿತ್ಯಕ್ಕೆ ಸಂತೋಷಗೊಂಡು ಬಿಜ್ಜಳನು ಅವರನ್ನು ಕಲ್ಯಾಣಕ್ಕೆ ಬರಮಾಡಿಕೊಳ್ಳುತ್ತಾನೆ. ಕಲ್ಯಾಣದಲ್ಲಿ ಪ್ರಕೃತಿ ವಿಕೋಪದಿಂದ ಕುರುಬರ ಕುರಿಗಳು ಸಾಯಲು ಅವುಗಳನ್ನು ಒಂದೆಡೆ ರಾಶಿ ಹಾಕಿ ಸುಡುತ್ತಾರೆ. ಸುಟ್ಟ ಕೆಟ್ಟ ವಾಸನೆ ಊರಿನಲ್ಲೆಲ್ಲಾ ಹಬ್ಬಲು ಊರ ಜನರು ಅವರನ್ನು ಊರಿನಿಂದ ಹೊರಹಾಕುತ್ತಾರೆ. ಪುನಃ ತಮ್ಮ ಮೊದಲ ಸ್ಥಾನವಾದ ತೂಗುಡ್ಡಕ್ಕೆ ಬಂದು ನೆಲೆಸುತ್ತಾರೆ.

ಮರುಳಸಿದ್ಧನ ತಪಸ್ಸಿಗೆ ಒಲಿದ ಶಿವನು ಕಲ್ಯಾಣ ಪಟ್ಟಣದಿಂದ ಹೊರಹಾಕಲ್ಪಟ್ಟ ಕುರುಬರು ಪುನಃ ಕಲ್ಯಾಣ ಪ್ರವೇಶ ಮಾಡಲು ಅನುಮತಿ ನೀಡಿ ಅವನನ್ನು ಹಾಲುಮತಕ್ಕೆ ಒಡೆಯನನ್ನಾಗಿ ನೇಮಿಸಿ ತಾನು ನೇಯ್ದ ಕಂಬಳಿಯನ್ನು ಹೊದಿಸಿ ವಿಭೂತಿಯನ್ನು ತನ್ನ ಹಸ್ತದಿಂದ ಹಚ್ಚಿ ಲಕ್ಷ ಪವಾಡ ಮಾಡಲು ಕಲ್ಯಾಣ ಪಟ್ಟಣಕ್ಕೆ ಹೋಗಲು ಸೂಚಿಸುತ್ತಾನೆ. ಆಶೀರ್ವಾದ ಪಡೆದ ಮರುಳಸಿದ್ಧ ಕಲ್ಯಾಣದಲ್ಲಿ ಸತ್ತ ಗೂಳಿಯನ್ನು ಮತ್ತು ಟಗರನ್ನು ಬದುಕಿಸುತ್ತಾನೆ. ಜೋಗಿಯನ್ನು ಇರಿಯಲು ಹೋದ ತಗರಿನ ಕೊಂಬನ್ನು ಜೋಗಿ ಹಿಡಿಯಲು ಅದರ ಕೊಂಬು ಜೋಗಿಯ ಕೈಯಲ್ಲೇ ಉಳಿಯುತ್ತದೆ. ಕಾರಣ ಸಿದ್ಧಮಂಕನು ಅವರನ್ನು 'ಟಗರಿನ ಜೋಗಿ'ಯಾಗಿ ಪ್ರಸಿದ್ಧಿ ಪಡೆಯುವಂತೆ ಹರಸುತ್ತಾನೆ. ಸಿದ್ಧಮಂಕನಿಂದಾಗಿ ಕುರುಬರು ಮೊದಲಿನಂತೆ ಕಲ್ಯಾಣ ಪಟ್ಟಣದಲ್ಲಿ ಹಾಲು ಮೊಸರು ಮಾರುತ್ತ ಸುಖವಾಗಿ ಜೀವಿಸತೊಡಗುತ್ತಾರೆ. ಏಕೋರಾಮ ತಂದೆ ಪಂಡಿತಾರಾಧ್ಯರಿಂದ ಪಂಚಕಲಶ ಹೂಡಿಸಿ ಸಿದ್ಧರಾಮನು ಗುರುದೀಕ್ಷೆ ಪಡೆದು ಶಿವನಿಂದ ಇಷ್ಟಲಿಂಗ ಪಡೆದು ಹಾಲುಮತಕ್ಕೆ ಗುರುವಾಗಿ ನೇಮಿಸಿದನು. ಹನ್ನೆರಡನೆಯ ಅಧ್ಯಾಯ ಹಾಲುಮತದ ದೇವತೆಗಳನ್ನು ಕುರಿತಾಗಿದೆ. ವಿಷ್ಣು ವೀರಭದ್ರನ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಸರಸ್ವತಿಯ ಪುತ್ರನಾಗಿ ಜನಿಸಿ ಬೀರಲಿಂಗನೆಂದು ನಾಮಾಂಕಿತಗೊಳ್ಳುತ್ತಾನೆ. ವಿಷ್ಣುವಿನ ಕುತಂತ್ರದಿಂದ ಕಾಡುಪಾಲಾದ ಬೀರಲಿಂಗನನ್ನು ಮಾಯಮ್ಮ ಸಾಕುತ್ತಾಳೆ. ಕಶ್ಯಪಗೋತ್ರದ ರಾಕ್ಷಸ ಕೋಸಾಸುರನನ್ನು ಕೊಂದು ಕುರುಬರನ್ನು ರಕ್ಷಣೆಮಾಡಿದ ಕಾರಣ ಬೀರಲಿಂಗನನ್ನು ಪೂಜಿಸಿ ಆ ಕ್ಷೇತ್ರಕ್ಕೆ ಕೋಣಗನೂರು ಎಂದು ಕರೆದರು. ಅಡವಿ ವಾಸಿಯಾದ ವೀರಭದ್ರ ರೂಪಿ ಬೀರೇಶ್ವರನು ಊರಲ್ಲಿರದೆ ಕಾಡಿನಲ್ಲಿ ಬನ್ನಿಮರದ ಕೆಳಗೆ ಇರುತ್ತಾನೆ. ಕೃತಿಯ ಆಚಾರ ವಿಚಾರ ಎಂಬ ಕೊನೆಯ ಭಾಗದಲ್ಲಿ ವಿದ್ಯೆ ಇಷ್ಟಲಿಂಗ ಧಾರಣೆ, ಸಮಾಜ ಬಾಂಧವರಲ್ಲಿ ಸ್ವಾಭಿಮಾನ,

ಮಾಂಸಾಹಾರ ನಿಷೇಧ, ರೇವಣಸಿದ್ಧನ ಸ್ಮರಣೆ ಮಾಡುವುದು, ಕನ್ಯಾ ತೆರವು, ತೆಗೆದುಕೊಳ್ಳದಿರುವುದು ಇತ್ಯಾದಿ ನಿಯಮಗಳನ್ನು ಸೂಚಿಸಿರುವುದು ಲೇಖಕರ ಸಮಾಜ ಪ್ರೀತಿಗೆ ಕಳಕಳಿಗೆ ನಿದರ್ಶನವಾಗಿದೆ.

ಒಟ್ಟಿನಲ್ಲಿ ಹಾಲುಮತದ ಪ್ರಾಚೀನತೆಯನ್ನು ಲಭ್ಯಪುರಾಣಗಳ ಆಧಾರದಿಂದ ಅತ್ತಿಕೊಳ್ಳ ಅವರು ಈ ಕೃತಿಯ ಮೂಲಕ ಗುರುತಿಸಿದ್ದಾರೆ. ಮೇಲಾಗಿ ಕುರುಬರ ಗುರುಪರಂಪರೆಯಲ್ಲಿ ಸಿದ್ಧರಾಮ, ಸಿದ್ಧಮಂಕ, ಮಂಕೊಡೆಯರ ಬಗೆಗೆ ಅನೇಕ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಸಿದ್ಧಮಂಕ ಚರಿತೆಯನ್ನು ಅತ್ತಿಕೊಳ್ಳ ಅವರು ತಮ್ಮ ಈ ಕೃತಿಯ ರಚನೆಗೆ ಹೆಚ್ಚಾಗಿ ಬಳಸಿಕೊಂಡಿದ್ದಾರೆ. ಆ ಮೂಲಕ ಸಿದ್ಧರಾಮ ಪರಂಪರೆಯ ಚರಿತ್ರೆಯನ್ನು ಹೇಳಲು ಯತ್ನಿಸಲಾಗಿದೆ.

ಹೀಗೆ ಜನಸಾಮಾನ್ಯರನ್ನು ಗಮನದಲ್ಲಿಟ್ಟುಕೊಂಡು ಹಾಲುಮತದ ಚರಿತ್ರೆಯನ್ನು ನಿರೂಪಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆಂದು ಹೇಳಬಹುದು.

೩. ಭಾರತ ದೇಶದ ಕುರುಬರ ಚರಿತ್ರೆ - ವಿ.ಆರ್.ಹನುಮಂತಯ್ಯ (೧೯೫೪)

ವಿ.ಆರ್.ಹನುಮಂತಯ್ಯನವರ ಸತತ ಚಿಂತನೆ ಶ್ರಮ ಮತ್ತು ಸಂಶೋಧನೆಯ ಫಲವಾಗಿ ೧೯೨೬ರ ಕರ್ನಾಟಕ ಕುರುಬರ ಚರಿತ್ರೆಯ ವಿಸ್ತತ ಮತ್ತು ಪರಿಷ್ಕೃತ ಕೃತಿಯಾಗಿ ಸುಮಾರು ೩೨ ವರ್ಷಗಳ ನಂತರ ಅಂದರೆ ೧೯೫೪ರಲ್ಲಿ 'ಭಾರತ ದೇಶದ ಕುರುಬರ ಚರಿತ್ರೆ' ಪ್ರಕಟಗೊಂಡಿದೆ. ಈ ಕೃತಿಯು ೩೨೪ ಪುಟಗಳನ್ನು ಹೊಂದಿದೆ. ಮುನ್ನುಡಿಯನ್ನು 'ಸಂಸ್ಕೃತ ರತ್ನ', 'ಕವಿಭೂಷಣ'ರೆಂದು ಪ್ರಸಿದ್ಧರಾದ ವಿದ್ವಾಂಸ ಎಮ್.ಸಿ. ಕೃಷ್ಣಸ್ವಾಮಿ ಅಯ್ಯಂಗಾರ ಬರೆದು, ಕೃತಿಯ ವೈಶಿಷ್ಟ್ಯಗಳನ್ನು ತುಂಬ ವಸ್ತುನಿಷ್ಠವಾಗಿ ತಿಳಿಸಿದ್ದಾರೆ.

The Author Sri V.R. Hanumathaiah though as old 80 by now, is to full of verve, vigour and enthusiam as to bring out a second, improved and exhaustive edition of his work."The History of the shepherds of India called out from various authentic sources in a handbook to about 350 pages, which I have been able to persue from beginning to end. I am of opionon that is a book intended for all the youngsters and the old. It may prove very usefull to all students, especially of both sexes. The book is one well fit to be kept in all the libraries of the state... it may be also usefull for every furture research scholar in history who has to go through at with achronologically and scientifically critical eye".[೪]

ನಾಲ್ಕು ಭಾಗಗಳಲ್ಲಿ ಈ ಕೃತಿ ವಿಸ್ತೃತಗೊಂಡಿದೆ. ಮೊದಲನೆಯ ಭಾಗವು ೬ ಪ್ರಕರಣಗಳಲ್ಲಿ ವಿಭಾಗಿಸಲ್ಪಟ್ಟಿದೆ. ಕುರುಬರ ಮೂಲ ಚರಿತ್ರೆಯನ್ನು ಚರ್ಚಿಸುತ್ತ ಅಂದಿನ ಆರ್ಯರೇ ಇಂದಿನ ಕುರುಬರು

ಎನ್ನುವುದಕ್ಕೆ ವೇದಶಾಸ್ತ್ರಗಳ ಸಾಕ್ಷಾಧಾರಗಳನ್ನು ಒದಗಿಸುತ್ತ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಪಶುಗಳ ಹೆಸರಿನಿಂದಲೇ ಪ್ರಪಂಚ, ಪ್ರಾಚೀನ ಪಶುಪಾಲಕರು, ಆರ್ಯರಿಗೆ ದೇವನೊಬ್ಬನೇ ಜಾತಿ ಒಂದೇ, ಕುರುಬರ ಪಶುಪಾಲನ ವೃತ್ತಿ, ಆರ್ಯ ಜಾತಿಯಿಂದಲೇ ಅನೇಕ ಜಾತಿಮತಗಳುಂಟಾದುದು, ಕುರುಬರು ವ್ಯವಸಾಯ ವೃತ್ತಿಯನ್ನವಲಂಬಿಸಿ ಬೇರ್ಪಟ್ಟುದು ಇತ್ಯಾದಿ ವಿಷಯಗಳು ಬಹುಶಿಸ್ತೀಯ ನೆಲೆಯಲ್ಲಿ ವೇದಗಳ ಹಿನ್ನೆಲೆಯಿಂದ ಕೂಡಿವೆ. ಇದಕ್ಕೆ ಅನೇಕ ಪೂರಕ ಆಕರಗಳನ್ನು ಸಂಗ್ರಹಿಸಿ ವಿಶ್ಲೇಷಿಸಿದ್ದಾರೆ.

ಎರಡನೆಯ ಭಾಗವು ಕರ್ನಾಟಕದ ಕುರುಬರು ಎಂಬ ಉಪಶೀರ್ಷಿಕೆ ಹೊಂದಿದೆ. ಕುರುಬರ ಒಳಪಂಗಡಗಳು ಮತ್ತು ಅವರ ಸಂಪ್ರದಾಯಗಳು ಭಾರತದ ಇತರೆ ರಾಜ್ಯಗಳಲ್ಲಿರುವ ಕುರುಬರನ್ನು ಅಂಕಿಸಂಖ್ಯೆಗಳ ಸಹಿತ ಪರಿಚಯಿಸಲಾಗಿದೆ. ಹಂಡೇ ಕುರುಬರಲ್ಲಿ ಸಿದ್ಧರು, ಕುರುಬ ಒಡೆಯರ ಮತಾಚಾರ ಆಹಾರ-ಉಡಿಗೆ-ತೊಡಿಗೆಗಳು, ಕುರುಬರ ದೇವರುಗಳು ವಿವಾಹ ಸಂದರ್ಭದಲ್ಲಿ ಗುರುಹಿರಿಯರು (ಒಡೆಯರು) ವಧೂವರರನ್ನು ಉದ್ದೇಶಿಸಿ ವಚನಗಳಿಂದ ಆಶೀರ್ವದಿಸುವುದು (ಪುಟ ೮೯) 'ಗುರು ರೇವಣ್ಣ ಕಟ್ಟಿದ ಕಲ್ಯಾಣ ಸ್ಥಿರವಾಗಲಿ' ಎಂದು ಮಧುವಿನ ಪರವಾಗಿ 'ಸರೂರು ಶಾಂತಮುತ್ತಯ್ಯ ನಮ್ಮ ಗುರು ರೇವಣ್ಣ ಕಟ್ಟಿದ ಕಲ್ಯಾಣ ಸ್ಥಿರ ಪಟ್ಟವಾಗಲೀ' ಎಂದು ವರನ ಪರವಾಗಿ ಹೇಳುವುದನ್ನು ಮೊದಲ ಬಾರಿಗೆ ದಾಖಲಿಸಿದ್ದಾರೆ. ವಿದ್ಯೆಯ ಮಹಿಮೆ, ಹಣದ ಪ್ರಭಾವ, ಅಹಿಂಸಾವಾದ, ಬೀರದೇವರ ದೊಡ್ಡ ಜಾತ್ರೆಯಲ್ಲಿ ತಲೆಯ ಮೇಲೆ ತೆಂಗಿನ ಕಾಯಿಯನ್ನು ಒಡೆಯುವ ಸಂಪ್ರದಾಯವನ್ನು ಒಂದೆಡೆ ದಾಖಲಿಸಿದ್ದಾರೆ. ವಿದ್ಯೆಯ ಮಹಿಮೆ, ಹಣದ ಪ್ರಭಾವ, ಅಹಿಂಸಾವಾದ, ಬೀರದೇವರ ದೊಡ್ಡ ಜಾತ್ರೆಯಲ್ಲಿ ತಲೆಯ ಮೇಲೆ ತೆಂಗಿನ ಕಾಯಿಯನ್ನು ಒಡೆಯುವ ಸಂಪ್ರದಯವನ್ನು ಒಂದೆಡೆ ದಾಖಲಿಸಿದ್ದಾರೆ. ಜೊತೆಗೆ ಆ ಸಂಪ್ರದಾಯದ ವೀಕ್ಷಣೆಗೆ ಅಂದಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪ, ಅರ್ಥಸಚಿವ ಶ್ರೀ ಟಿ.ಮರಿಯಪ್ಪ, ರೆವಿನ್ಯೂ ಸಚಿವ ಶ್ರೀ ಯಲ್ಲನಗೌಡ ಪಾಟೀಲ ಇವರು ಪಾಲ್ಗೊಂಡಿರುವ ಕೆಲವು ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ. ಈ ಆಚರಣೆಯು ಬೆಂಗಳೂರು ಕೋಲಾರ ಮೊದಲಾದ ಕೆಲವು ಪ್ರದೇಶಗಳಲ್ಲಿ ಈಗಲೂ ರೂಢಿಯಲ್ಲಿದೆ. ಕುರುಬರ ಒಳಪಂಗಡಗಳಾದ ನೊಣಬರು, ಮತ್ತುಕುಡವಕ್ಕಲಿಗರು, ತೆಲಗು ದೇಶದ ಗೊಲ್ಲರು ಯಾದವರು ಕುರುಪರು, ಕುರುಮರು, ಗಂಗರು, ಭೋಜಗೊಲ್ಲರು, ದ್ರಾವಿಡ (ತಮಿಳು) ಕುರುಬರು, ಧನಗಾರರು, ಗಡರಿಯ, ಗಡ್ಡಿ ಅಹೀರರು, ಭರವಾಡರು ಇತ್ಯಾದಿ ಹೆಸರುಗಳಿಂದ ಭಾರತ ದೇಶದ ಎಲ್ಲ ಭಾಗಗಳಲ್ಲಿ ವಿಸ್ತರಿಸಿರುವ ಜನಸಾಂದ್ರತೆಯ ಪ್ರದೇಶಗಳನ್ನು, ಕುರುಬರನ್ನು ಅಂಕಿಸಂಖ್ಯೆಗಳೊಂದಿಗೆ ಪರಿಚಯಿಸಿದ್ದುದು ವಿಶೇಷ.

ಮೂರನೆಯ ಭಾಗದಲ್ಲಿ ನಮ್ಮ ದಕ್ಷಿಣ ಭಾರತ ಮತ್ತು ಉತ್ತರ ಭಾರತ ದೇಶದ ಕುರುಬ ರಾಜಮನೆತನ ದವರ ಚರಿತ್ರೆಗಳನ್ನು ಸಂಕ್ಷಿಪ್ತ ಸಾಕ್ಷಾಧಾರಗಳಿಂದ ಪರಿಚಯಿಸಲಾಗಿದೆ. ವಿಜಯನಗರ ಸಾಮ್ರಾಜ್ಯವು ಹಾಲುಮತದ ಹಕ್ಕಬುಕ್ಕರಿಂದ ವಿದ್ಯಾರಣ್ಯರ ಸಮ್ಮುಖದಲ್ಲಿ ಸ್ಥಾಪಿತವಾದುದು, ಅವರ ಪ್ರಮುಖ

ರಾಜರುಗಳು, ಕೆಳದಿ ಬಿದನೂರು ಕದಂಬ, ಪಲ್ಲವ ಅರಸರ ಚರಿತ್ರೆ, ಕೃಷ್ಣಗಿರಿ ಮತ್ತು ಜಿಂಜೀರಾಯರು ಕಟ್ಟಿಸಿದ ಕಲ್ಲಿನಕೋಟೆ, ಹೆಗ್ಗಡೆದೇವನಕೋಟೆ, ಬಾರಕೂರು ರಾಜ್ಯಸ್ಥಾಪಕನಾದ ನಂದನಂದನರಾಯನ ಚರಿತ್ರೆ, ಮಧ್ಯ ಭಾರತದ ರಾಜವಂಶಗಳು, ಇಂದೋರ್ ಹೋಳ್ಕರ್ ಮಹಾರಾಜರು, ಬರೋಡಾ ಸಂಸ್ಥಾನ, ಮಾಂಡು ಮತ್ತು ಮಗಧ ಸಂಸ್ಥಾನ, ರಾಜ ಪುರಾಣದ ರಾಜವಂಶಗಳು, ಒಂದು ನೂರು ರಾಜವಂಶಗಳ ಮೂಲ, ಪುರುಷ ಬಪ್ಪಾರಾವಳ, ಮೇಷಪಾಲಕರಾದ ಚವ್ಹಾಣರು ದೇಶ ಪಾಲಕರಾದುದು ಇತ್ಯಾದಿ ರಾಜವಂಶಗಳ ಸಂಪೂರ್ಣ ಮಾಹಿತಿಯೊಂದಿಗೆ ವಿವರಿಸಿದ್ದಾರೆ. ವಿಷಯ ಸ್ಪಷ್ಟತೆಗಾಗಿ ಕೆಲವು ಹಳೆಯ ರಾಜರುಗಳ ಛಾಯಾಚಿತ್ರಗಳನ್ನು ಸಂಗ್ರಹಿಸಿ ಕೊಟ್ಟಿರುವುದು ಇಲ್ಲಿ ವಿಶೇಷವಾಗಿದೆ.

ನಾಲ್ಕನೆಯ ಭಾಗವು ಹಾಲುಮತದ ಮಹನೀಯರ ಚರಿತ್ರೆಯನ್ನು ಹೊಂದಿದೆ. ಕನಕದಾಸ, ಶಿವಾಜಿ ಹುಲಜಂತಿ, ಮಾಳಿಂಗರಾಯ, ಸಂಗೊಳ್ಳಿರಾಯಣ್ಣ, ಹೊಯ್ಸಳ ಜಿಂಜೀರಾಣಿ, ಇಂದೋರಿನ ಅಹಲ್ಯಾಬಾಯಿ ಹೋಳ್ಕರ, ದುರ್ಗಾವತೀದೇವಿ ಚಂದೇಲ್ ಮುಂತಾದ ಸಾಧಕರ ಚರಿತ್ರೆಯನ್ನು ಒಳಗೊಂಡಿದೆ.

ಹೀಗೆ ಈ ಕೃತಿಯು ಹತ್ತು ಹಲವು ಹೊಸ ವಿಷಯಗಳನ್ನು ಪ್ರಥಮಬಾರಿಗೆ ತಿಳಿಸುವಲ್ಲಿ ಯಶಸ್ವಿಯಾಗಿದೆ. ಈ ಕೃತಿಗೆ ಇಂದೋರ ಸಂಸ್ಥಾನದ ಯಶವಂತರಾದ ಹೋಳ್ಕರ ಮಹಾರಾಜರು ಆ ಕಾಲದಲ್ಲಿ ೫೦೦ ರೂಪಾಯಿಗಳನ್ನು ಬಹುಮಾನ ರೂಪದಲ್ಲಿ ಹನುಮಂತಯ್ಯನವರಿಗೆ ನೀಡಿ ಸನ್ಮಾನಿಸಿದುದನ್ನು ಭೋಜರಾಜ ಕಾಳಿದಾಸ ಚರಿತ್ರೆ ಗ್ರಂಥ(ಪುಟ ೫)ದಲ್ಲಿ ದಾಖಲಿಸಲಾಗಿದೆ.

ಈ ಎರಡೂ ಕೃತಿಗಳಲ್ಲದೆ ಭೋಜರಾಜ ಕಾಳಿದಾಸ ಚರಿತ್ರೆ, ವಿಜಯನಗರ ಸಾಮ್ರಾಜ್ಯ ಚರಿತ್ರೆ, ಆನೆಗೊಂದಿ ಸಂಸ್ಥಾನ ಚರಿತ್ರೆಯಂಥ ಕೃತಿಗಳನ್ನು ಹನುಮಂತಯ್ಯನವರು ರಚಿಸಿದ್ದಾರೆ. ಹೀಗಾಗಿ ಇವರನ್ನು "ಹಾಲುಮತ ಅಧ್ಯಯನದ ಪಿತಾಮಹ" ಎಂದು ವಿದ್ವಾಂಸರಾದ ಡಾ ಎಫ್.ಟಿ. ಹಳ್ಳಿಕೇರಿ ಅವರು ಗುರುತಿಸಿರುವುದೂ ಔಚಿತ್ಯಪೂರ್ಣವಾಗಿದೆ.[*]

೪. ಹಾಲುಮತ ದರ್ಶನ - ಶಂಬಾ ಜೋಶಿ (೧೯೬೦)

ಕನ್ನಡ ಸಂಸ್ಕೃತಿ ಸಂಶೋಧನೆಯಲ್ಲಿ ಶಂಬಾ ಅವರದು ಬಹು ದೊಡ್ಡ ಹೆಸರು. ಕನ್ನಡ ಭಾಷೆ ನೆಲ ಜಲ, ಜನ ಸಂಸ್ಕೃತಿಯ ಮೂಲನೆಲೆಗಳನ್ನು ಹುಡುಕುವ ಪ್ರಯತ್ನವನ್ನು ತಮ್ಮ ಕೃತಿಗಳ ಮೂಲಕ ನಿರಂತರವಾಗಿ ಕೈಕೊಂಡಿದ್ದರು. ಆ ಪ್ರಯತ್ನದ ಫಲವಾಗಿ ಕಣ್ಮರೆಯಾದ ಕನ್ನಡ, ಕನ್ನಡದ ನೆಲೆ, ಹಾಲುಮತ ದರ್ಶನ ಕರ್ನಾಟ ಸಂಸ್ಕೃತಿಯ ಪೂರ್ವ ಪೀಠಿಕೆ, ಕಂನುಡಿಯ ಹುಟ್ಟು ಹೀಗೆ ಅನೇಕ ಕೃತಿಗಳನ್ನು ರಚನೆ ಮಾಡಿದ್ದಾರೆ. ಆ ಮೂಲಕ ಕನ್ನಡ ನಾಡು, ನುಡಿಯ ಪ್ರಾಚೀನತೆಯ ಪಳಯುಳಿಕೆಗಳನ್ನು ವಿವಿಧ ಆಕರ ಸಾಮಗ್ರಿಗಳ ನೆರವಿನಿಂದ ಗುರುತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಹಾಲುಮತ ದರ್ಶನ ಹಾಗೂ ಕರ್ನಾಟ ಸಂಸ್ಕೃತಿಯ ಪೂರ್ವ ಪೀಠಿಕೆ ಗ್ರಂಥಗಳು, ಹಾಲುಮತ ಸಮುದಾಯದ ಪ್ರಾಚೀನತೆ, ಪರಂಪರೆ, ಆಚಾರ-

ವಿಚಾರ ಹಬ್ಬ ಹರಿದಿನಗಳು, ಉದ್ಯೋಗ ಸಮುದಾಯದ ನೆಲೆ ಮೊದಲಾದ ವಿಚಾರಗಳನ್ನು ಅರಿತುಕೊಳ್ಳಲು ಬಹುಮುಖ್ಯ ಆಕರ ಗ್ರಂಥಗಳಾಗಿವೆ. ಈಗ ಈ ಎರಡು ಕೃತಿಗಳ ವಿಶೇಷತೆಗಳನ್ನು ಕುರಿತು ವಿಶ್ಲೇಷಿಸ ಲಾಗುವುದು.

ಭಾಷೆ, ಜನಾಂಗ, ಮಾತುಗಳ ನೆಲೆಯಲ್ಲಿ ಬೇರೆ ಬೇರೆ ಜನ ಜನಾಂಗಗಳ ವಾಸ್ತವ್ಯ ಆ ಪ್ರದೇಶಗಳ ಜನಾಂಗವಾಚಿ ಶಬ್ದದ ಹೆಸರು ಜನಜೀವನ-ಸಂಸ್ಕೃತಿ ಸಾಮಾಜಿಕ-ತಾತ್ವಿಕ ಅನುಸಂಧಾನ, ಸಂಸ್ಕೃತಿಯ ಮುಖ್ಯ ಪ್ರವಾಹಗಳು, ವಿಧಾನ ಸಾಮಾಗ್ರಿಗಳಲ್ಲಿ ಭಾಷೆಯ ಮಹತ್ವ, ಕಣ್ಮರೆಯಾದ ಕನ್ನಡದ ವ್ಯಾಪ್ತಿ, ಒಂದೇ ಭಾಷಿಕರ ಒಳಪಂಗಡಗಳು, ವೀರ ಹಟ್ಟಿಕಾರ ಮತ್ತು ಧನಗಾರರ ಮೂಲ, ಸ್ಥಳನಾಮ ಮತ್ತು ವ್ಯಕ್ತಿನಾಮದಿಂದ ಸಂಸ್ಕೃತಿ ಸಂಬಂಧದ ವಿಚಾರ, ಎಲ್ಲಮ್ಮ ದೇವತೆಯ ಅರ್ಥ-ವಾಸ-ಉಗಮ, ನೀರು ಹಾಲುಗಳ ಮೂಲ ಅರ್ಥ ವಿವರ ಋಗ್ವೇದದಲ್ಲಿ ನಾರಾಯಣನ ಪಾತ್ರ ಮೊದಲಾದ ವಿಷಯಗಳನ್ನು ಸ್ಥೂಲವಾಗಿ ಚರ್ಚಿಸಲಾಗಿದೆ.

"ಹಾಲುಮತ ಸಂಸ್ಕೃತಿಯೊಂದಿಗೆ ಭಾಷೆಯ ಜನಜೀವನ-ಸಂಸ್ಕೃತಿ-ಸಂಪ್ರದಾಯಗಳ ಅಭ್ಯಾಸದಿಂದ, ಕಥೆ ಪುರಾಣದಲ್ಲಿಯ ಸಂಗತಿಯಿಂದ ಮರೆತು ಹೋದ ಪದಪ್ರಯೋಗಗಳನ್ನು ಗುರುತಿಸಿ ಅರ್ಥವಾಗದ ಅನೇಕ ಸಂಗತಿಗಳು ಅರ್ಥಪೂರ್ಣವಾಗಿ ತೋರುವ ಪ್ರಸಂಗಗಳನ್ನು ಇಲ್ಲಿ ತಂದಿರಿಸಲಾಗಿದೆ. ಇದು ಹಾಲು, ಇದು ನೀರು ಎಂದು ಸೂಚಿಸುವ ಶಬ್ದಗಳು ಸಾಕಷ್ಟಿವೆ. ಹಾಲು ನೀರು ತತ್ವಗಳನ್ನು ಅವಲಂಬಿಸಿ ಸಂಪ್ರದಾಯಗಳು ಬೆಳೆದು ಬಂದಿವೆ. ಈ ಸಂಪ್ರದಾಯಗಳಲ್ಲಿ ಏಕದೇಶೀಯ ವಾದವು ಯಾವುವು? ಅನ್ಯ ದೇಶೀಯವಾದವು ಯಾವುವು? ಭಾರತೀಯ ಸಂಸ್ಕೃತಿಯಲ್ಲಿ ಎರಡು ಮುಖ್ಯ ಸಂಪ್ರದಾಯಗಳಾಗಿರುವ ಶೈವ ವೈಷ್ಣವ ಸಂಪ್ರದಾಯಗಳಲ್ಲಿ ಅಡಕವಾದ ಅರ್ಥವೇನು? ಶೈವ-ವೈಷ್ಣವ ಸಂಪ್ರದಾಯಗಳು, ಮತವಾಚಿಯಾಗಿರುವುದಾದರೂ ಆರ್ಯದ್ರಾವಿಡವೆಂಬ ಜನಾಂಗವಾಚಿ ಸಂಸ್ಕೃತಿಗೆ ಏನಾದರೂ ಸಂಬಂಧವಿದೆಯೇ? ಈ ಎಲ್ಲ ಪ್ರಶ್ನೆಗಳಿಗೆ ಒಂದು ಸೂತ್ರಬದ್ಧವಾದ ಉತ್ತರವನ್ನು ಕಂಡು ಹಿಡಿಯುವ ಪ್ರಯತ್ನವು ಹಾಲುಮತದರ್ಶನದಲ್ಲಿದೆ"[೬] ಎಂಬ ಅಭಿಪ್ರಾಯವನ್ನು ಸಂಪಾದಕ ನೆಗಳೂರು ರಂಗನಾಥರು ಮುನ್ನುಡಿಯಲ್ಲಿ ತಿಳಿಸಿದ್ದಾರೆ.

"ಹಾಲುಮತ ದರ್ಶನವು" ಶೈವ ಮೀಮಾಂಸೆಯನ್ನು ಕುರಿತು ಆಳವಾದ ಚರ್ಚೆಗೆ ಹೊರಡುತ್ತದೆ. ಶೈವ ಪರಂಪರೆಯ ಬೇರುಗಳು ಹಲವು ವಿನ್ಯಾಸಗಳಲ್ಲಿ ಹರಡಿಕೊಂಡಿರುವ ಕೆಲಸವನ್ನು ಈ ಕೃತಿಯು ಬಯಲು ಮಾಡುತ್ತದೆ. ವೇದ, ಉಪನಿಷತ್ತು, ಬ್ರಾಹ್ಮಣ, ಪುರಾಣ ಕಾವ್ಯ, ಅಲಿಖಿತ ಪರಂಪರೆಗಳು, ವಿಸ್ಮೃತಿಗೊಂಡ ನೆಲೆಗಳು ಹೀಗೆ ಹಲವಾರು ದೃಷ್ಟಿಕೋನದಲ್ಲಿ ಈ ವಸ್ತು ಜಗತ್ತನ್ನು ನೋಡಲಾಗಿದೆ. ಶೈವ ವೃಷ್ಣವ ಪರಂಪರೆಯನ್ನು ವೇದೋಪನಿಷತ್ತುಗಳಿಂದ ಪ್ರಾರಂಭಮಾಡಿ ವರ್ತಮಾನದವರೆಗೂ ನೆಲೆ ನಿಂತು ನೋಡಿದ್ದಾರೆ" ಎಂಬ ಅಭಿಪ್ರಾಯವನ್ನು ಮಲ್ಲೇಪುರಂ ಜಿ.ವೆಂಕಟೇಶ ಅವರು ತಿಳಿಸಿದ್ದಾರೆ.[೭]

ಶಂಬಾ ಅವರು ಸಂಸ್ಕೃತಿ ಅಧ್ಯಯನವನ್ನು ಸತ್ಯದ ವೈಚಾರಿಕ ನೆಲೆಯಲ್ಲಿ ನಡೆಸಿದರು. ಜನಾಂಗೀಯ ಅಧ್ಯಯನ ನೆಲಗಳಿಗೆ ಪೂರ್ವ ಪೀಠಿಕೆಯಾಗಿ ಶಂಬಾ ಅವರು ತಿಳಿಸುವಂತೆ "ಜನಾಂಗವೆಂಬುದು ಜಾತಿ ಧರ್ಮಗಳಿಂದ ಭಿನ್ನವಾದುದು. ಜನಾಂಗವೆಂದರೆ ಸಾಮಾನ್ಯವಾಗಿ ತೀರ ಆರಂಭ ಕಾಲದಲ್ಲಿ ಒಟ್ಟಿಗೆ ಇದ್ದು ಬೆಳೆದು ಬಂದ ಮನುಷ್ಯ ಸಮಾಜ." ಅನೇಕ ದೃಷ್ಟಿಗಳಿಂದ ಹಟ್ಟಿಕಾರ ಜನಾಂಗವೇ ಅಖಿಲ ಭಾರತೀಯ ಜನಾಂಗವೆಂಬುದನ್ನು ಸ್ಪಷ್ಟಪಡಿಸಿದರು.[೮]

೫. ಕರ್ನಾಟ ಸಂಸ್ಕೃತಿ ಪೂರ್ವ ಪೀಠಿಕೆ ಭಾಗ ೨ - ಶಂಬಾಜೋಶಿ (೧೯೬೭)

'ಹಾಲುಮತ ದರ್ಶನ' ಪ್ರಕಟವಾದ ಏಳು ವರ್ಷಗಳ ತರುವಾಯ ಕರ್ಣಾಟ ಸಂಸ್ಕೃತಿ ಪೂರ್ವ ಪೀಠಿಕೆ ಪ್ರಕಟವಾಯಿತು. ಈ ಕೃತಿಯ ಮಹತ್ವವನ್ನು ಮಲ್ಲೇಪುರಂ ಜಿ.ವೆಂಕಟೇಶ ಅವರು ಪ್ರಸ್ತಾವನೆಯಲ್ಲಿ ಹೀಗೆ ಗುರುತಿಸಿದ್ದಾರೆ. "ಇದು ಮುಖ್ಯವಾಗಿ ಕರ್ನಾಟಕ ಸಂಸ್ಕೃತಿಯ ಅಂತಃಸತ್ವದ ಬೇರುಗಳನ್ನು ಕುರಿತು ಮೂಲಗಾಮಿಯಾಗಿ ಚರ್ಚಿಸುತ್ತದೆ. ಶಂಬಾ ಅವರು ಕರ್ನಾಟ-ಕಂನಾಡ-ಕಂನಡದ ನೆಲೆಗಳನ್ನು ಕುರಿತು ಚರ್ಚಿಸದೆ ಅವುಗಳ ಹಿಂದಿರುವ 'ತಾತ್ವಿಕ ದರ್ಶನ'ವನ್ನು ರೂಪಿಸಲು ಯತ್ನಿಸಿದ್ದಾರೆ. ಪ್ರಾರಂಭದಲ್ಲಿ ಶಂಬಾ ಅವರು "ಕಂನುಡಿಯು ಮೈದಾಳಿದ ಸ್ಥಳ ಕಾಲದ ಅಂದಾಜಿನೊಡನೆ ಈ ಜನದ ಸಂಸ್ಕೃತಿಯ ಆಕಾರ ಪಡೆದ ಹಿನ್ನೆಲೆಯನ್ನು ಕಂಡುಹಿಡಿಯುವದು ಈ ಪ್ರಬಂಧದ ಮುಖ್ಯ ಉದ್ದೇಶ"ವೆಂದು ಹೇಳಿದ್ದಾರೆ. ಈ ಮಾತು ತುಂಬಾ ಮುಖ್ಯವಾದುದು. ಕರ್ನಾಟಕ ಸಂಸ್ಕೃತಿಯ 'ಹಿನ್ನೆಲೆ' ತಿಳಿಯುವ ಹಂಬಲ ಹೊಂದಿದ ಅವರು ಆರಿಸಿಕೊಂಡಿರುವ ಮಾರ್ಗ ವಿಶ್ಲೇಷಣಾತ್ಮಕವಾಗಿದ್ದು ದುರ್ಗಮವಾಗಿದೆ. ಏಕೆಂದರೆ ಅವರ ವಿಚಾರಗಳಲ್ಲಿ ಎರಡು ಬಗೆಯ ಸಂಗತಿಗಳು ಒಟ್ಟಾಗಿ ಸೇರಿಕೊಂಡಿವೆ. ಮೊದಲನೆಯದು ಭಾಷಿಕ ಆಕೃತಿ ಎರಡನೆಯದು ಸಾಂಸ್ಕೃತಿಕ ಆಕೃತಿ. ಈ ಎರಡೂ ಆಕೃತಿಗಳಲ್ಲಿ ಕರ್ನಾಟಕ ಸಂಸ್ಕೃತಿ ಪೂರ್ವ ಪೀಠಿಕೆಯಲ್ಲಿ ರೂಪುಗೊಳ್ಳುತ್ತವೆ.[೯]

'ಹಟ್ಟಿಕಾರ' ಎಂಬ ಪರಿಕಲ್ಪನೆಯಲ್ಲಿ ಪ್ರಾಚೀನ ಸಂಸ್ಕೃತಿಯನ್ನು ನಮ್ಮ ಮುಂದೆ ತಂದು ನಿಲ್ಲಿಸಲು ಸಮರ್ಥವೆಂಬ ವಿಚಾರವನ್ನು ಹಲವು ಬಗೆಗಳಿಂದ ಶೋಧಿಸುತ್ತ ಶಂಬಾ ಹೊರಟರು. ವೇದದಲ್ಲಿ ಬರುವ ಪತ್ತಿಃ ಎಂಬ ಪದವು ಮೂಲತಃ 'ಪಟ್ಟಿ'ಯಿಂದ ಬಂದದ್ದು, ಪಟ್ಟು>ಹಟ್ಟಿ, ಪಟ್ಟಿಕಾರರು, ಹಟ್ಟಿಕಾರರು, ಈ ಸಾಮ್ಯತೆ ಆ ಜನಾಂಗದ ಒಕ್ಕಲು ನೆಲೆಯನ್ನು ತಿಳಿಯಲು ನೆರವಾಗುವ ಪರಿಯನ್ನು ತಿಳಿಸಿಕೊಟ್ಟರು.[೧೦] ಮಾತ್ರವಲ್ಲ ಆ ದಿಕ್ಕಿನಲ್ಲಿ ಶಂಬಾ ಮೊದಲ ಬಾರಿಗೆ ಮುನ್ನಡೆದರು. ಸ್ಥೂಲವಾಗಿ ಹಟ್ಟಿಕಾರರು, ವೇದಪೂರ್ವ ಜನಾಂಗವೆಂಬುದನ್ನು ಶಂಬಾರ ಅಧ್ಯಯನಗಳ ಆಧಾರದಿಂದ ಹೇಳಬಹುದಾಗಿದೆ. ದಕ್ಷಿಣ ಭಾರತದ ಜನವಸತಿ ಪ್ರದೇಶಗಳು ಊರು, ಬೀಡು-ಬಾಡು-ಬಾಳು, ಪಾಡಿಪಟ್ಟಿ ಎಂಬಂತಹ ಕಂದಮಿಳ ರೂಪಗಳಿಂದ ಕೂಡಿವೆ. ಕೂಡು>ಗೂಡು ಮಾನವ ವ್ಯಕ್ತಿಯು ಇರುವ ಸ್ಥಳಗಳನ್ನು ಸೂಚಿಸುವ ಪ್ರತಿಮಾತ್ಮಕ ಪದ (ನಂತರ ಗೂಡು>ಗುಡಿ). ಗೂಡಿನಲ್ಲಿ ವಾಸಿಸುವವರು ಕುಡಿಯರು, ಒಕ್ಕಲಿಗರು. ಕುಡು-ಕುಡ ಕೂಟವು ಪರ್ವತವಾಚಿ, ಅಂಕುಡೊಂಕಾದ ತಗ್ಗು ಮಿಟ್ಟೆಯ ಪರ್ವತ ಪ್ರದೇಶದಲ್ಲಿ ಮೊದಲು ವಾಸಿಸುತ್ತಿದ್ದ ಕಂನಾಡ ಮೂಲಿಗರನ್ನು

ಅರಿಕೆ ತಂದುಕೊಡುವ ಪ್ರದೇಶವಾಚಿಯೂ ಆಗಿದೆ. ಪತ್ತಿಜನಯದು ವರ್ತುಸ ಆರ್ಯೇತರಿಗೆ ಸಂಸ್ಕೃತಿಕ್ಕಿಂತ ಭಿನ್ನವಾದ ಭಾಷೆ ಕಂದಮಿಳ ಎಂಬ ತೀರ್ಮಾನಕ್ಕೆ ಶಂಬಾ ಬರುತ್ತಾರೆ.

ಆಚರಣಾ ಮೂಲದ ನೆಲೆಗಳೆಲ್ಲ 'ಹಟ್ಟಿಹಬ್ಬ'ದ ದ ಕುರಿತು ಶಂಬಾ ಹೀಗೆ ಹೇಳಿದ್ದಾರೆ. "ದೀಪಾವಳಿ ಜಾನಪದ ಪರಿಭಾಷೆಯಲ್ಲಿ ಹಟ್ಟಿಯ ಹಬ್ಬವೆಂಬ ಹೆಸರು. ಹಟ್ಟಿಯೆಂದರೆ ದನಕರುಗಳ ಬೀಡು. ಹಟ್ಟಿಕಾರನೆಂದರೆ ಜೀವದನಗಳ ಸಾಕಿ ಬದುಕುವವನು. ಆದುದರಿಂದ ಹಟ್ಟಿಯ ಹಬ್ಬವೆಂದರೆ ಹಟ್ಟಿಕಾರರ ಹಬ್ಬ ದನಕರುಗಳ ಹಬ್ಬ. ಹಟ್ಟಿಯ ಹಬ್ಬದಲ್ಲಿ ಗೋಪೂಜೆಯಷ್ಟೇ ಅಲ್ಲ; ಕುರಿಗಳ ಪೂಜೆಯೂ ನಡೆಯುವದು. ರೈತರು ಎತ್ತುಗಳನ್ನು ಸಿಂಗರಿಸಿ ಊರಲ್ಲಿ ಮೆರೆಸುವುದುಂಟು. ಈ ಹಬ್ಬದಲ್ಲಿ ದನಕರುಗಳ ಪೂಜೆ ನಡೆಯದ ಮನೆಯೇ ದೊರೆಯದು. ಇದು ಮೊಟ್ಟ ಮೊದಲ ದನಗಾರರ ಹಬ್ಬ. ದನವು ದನಗಾರರಿಂದ ಮೇಟಿ ಒಕ್ಕಲರ ಕೈಯಿಂದ ಜಾರಿ ವರ್ತಕರಲ್ಲಿ ಸೇರುತ್ತಲೇ 'ಹಟ್ಟಿಹಬ್ಬ' ದೀವಳಿಗೆಯಾಯಿತು. ಅದಕ್ಕೆ ಈಗಿನ ಸ್ವರೂಪವೇ ಪ್ರಾಪ್ತವಾಯಿತು.

ನಮ್ಮ ಅನೇಕ ಆಚರಣೆಯ ಹಿಂದೆ ಸಂಸ್ಕೃತಿಯು ಉಳಿಸಿಕೊಂಡಿರುವ ಹಲವಾರು ಅವಶೇಷಗಳಿವೆ. ಮದುವೆಯ ದಿನ ಕುರಿ ಉಣ್ಣೆಯ ದಾರವನ್ನು ಕಂಕಣವನ್ನಾಗಿ ಕಟ್ಟಿಕೊಳ್ಳುವುದು, ಹುಡುಗಿ ಮೈನೆರೆದಾಗ ಹಸಿರು ಗುಡ್ಡು ಹಾಕುವದು ಮೊದಲಾದವನ್ನು ಆಚರಣಾ ಮೂಲದ ನೆಲೆಗಳಲ್ಲಿ ತಾಳೆಯಾಗಿ ನೋಡುವದಕ್ಕೆ ಸಾಧ್ಯತೆಗಳಿವೆ.

ಪ್ರಾಚೀನ ಕಾಲದಲ್ಲಿ ಕನ್ನಡದ ಮೂಲಸ್ಥಾನ ನರ್ಮದಾ ನದಿಯ ತೀರ ಪ್ರಾಂತವೇ ಆಗಿರಬೇಕು. ಕುರುಬರು ಮಲೆಯರು ಮದ್ಯಪ್ರಾಂತದಲ್ಲಿ ಈಗಲೂ ವಾಸವಾಗಿದ್ದಾರೆ. ಕರ್ನಾಟಕದಿಂದ ಬಂದವರು ಈ ಸ್ಥಳಕ್ಕೆ ನರ್ಮದಾ ನದಿಯನ್ನು ದಾಟಿ ಬಂದರಂತೆ. ನಡುವೆ ಗೋದಾವರಿ ಇವರಿಗೆ ಸಿಗಲಿಲ್ಲ. ಆದ್ದರಿಂದ ಗೋದಾವರಿಯ ಉತ್ತರಕ್ಕೆ ಕರ್ನಾಟಕ ಇದೆ. ಕುರುಬರು ಹೊಲೆಯರು, ಗೊಲ್ಲರು, ವರ್ಡ್ಹಾಡ, ನಾಗಪೂರದ ನಿವಾಸಿಗಳು, ಇವರ ಇಂದಿನ ಭಾಷಾ ಬಳಕೆ ಬಿಜಾಪುರದ ಕನ್ನಡವನ್ನು ಹೋಲುತ್ತದೆ. ಕನ್ನಡದ ಕುರುಬರು ಮರಾಠಿಯಲ್ಲಿ ಕುಣಬಿಗಳಾಗಿದ್ದಾರೆ. ಮರಾಠರ ಕುಲದೇವತೆಗಳು, ಪುಂಡಾರಿ, ಕಂಡಾರಿ ಮತ್ತು ಮಲ್ಲಾರಿಗಳು, ಈ ದೈವಗಳನ್ನು ಕನ್ನಡಿಗರು ಮೊದಲು ಪೂಜಿಸುತ್ತಿದ್ದರು. ಪುಂಡರನಾಡು>ಪುನ್ನಾಡು>ಪುನ್ನಾಟ ಇವುಗಳಿಗೆ ಪ್ರಾಚೀನ ಪುನ್ನಾಟ ದೇಶವು ಈ ಜನಾಂಗದ ಕೊನೆಯ ಅವಶೇಷ, ಕಂಡರಿಗೆ ಹಗೆಯಾದವನು ಕಂಡಾರಿ>ಖಂಡೇರಾಯ>ಖಂಡೋಬ ವಿಂಧ್ಯದ ದಕ್ಷಿಣಕ್ಕೆ ಇವರು ಬಂದ ಕಾಲದಲ್ಲಿದ್ದಿರಬೇಕು. ಇವರೇ ಕನ್ನಡಿಗರಿಗೆ ಮೂಲ. ಮಲೆಯರಿಗೆ ವೈರಿ ಮಲ್ಲಾರಿ.

ಒಟ್ಟಾರೆ ಶಂಬಾ ಅವರು ಈ ಎರಡು ಕೃತಿಗಳ ಮೂಲಕ ಕನ್ನಡ ಸಂಸ್ಕೃತಿಯನ್ನು ಕುರಿತು ಆಲೋಚಿಸುವ ಹಾಗೂ ಶೋಧಿಸುವ ನೆಲೆಗಳು ಮಹತ್ವದವುಗಳಾಗಿವೆ. ಸ್ಥೂಲವಾಗಿ ನರ್ಮದಾ-ಗೋದಾವರಿ ನಡುವಿನ

ಭಾಗವು ಕನ್ನಡಿಗರಿಂದ ತುಂಬಿತ್ತು, ಅವರ ಜೀವನ ರೀತಿ, ಆರಾಧನೆ, ಆಚರಣೆಗಳೂ ವಿಶಿಷ್ಟವಾಗಿದ್ದವು. ಇವುಗಳನ್ನು ಗ್ರಹಿಸಲು ಇಂದಿನ ಬುಡಕಟ್ಟು ಮತ್ತು ಆಚರಣೆಗಳ ಅಧ್ಯಯನ ಹೆಚ್ಚು ಉಪಯೋಗವಾಗುತ್ತದೆ. ಪತ್ತೀಜನ, ಪಟ್ಟಿಜನ, ಕುರುಬ, ಧನಗಾರ, ಜಾಡ, ತುರುವ, ಕುರುಂಬ, ಅಂಡೆ ಕುರುಬ ಈ ಬಗೆಯ ಜನಾಂಗದ ಮೂಲಾಧ್ಯಯನ ಆಗಬೇಕಾಗಿದೆ. ಶಂಬಾ ಅವರು ವೈದಿಕ ಸಂಸ್ಕೃತಿಯ ಬೇರುಗಳನ್ನು ಹುಡುಕುವ ಬದಲು ಅದಕ್ಕೂ ಆಚೆ ಕಂದಮಿಳ ಸಂಸ್ಕೃತಿಯಲ್ಲಿ ಕನ್ನಡ ಸಂಸ್ಕೃತಿಯ ಎಳೆಗಳನ್ನು ಹುಡುಕಲು ಯತ್ನಿಸಿದರು. ಸಂಸ್ಕೃತಿ ವ್ಯಾಸಂಗವನ್ನೇ ಮುಖ್ಯ ಉದ್ದೇಶವಾಗಿ ಹೊಂದಿದ ಶಂಬಾ ಅವರನ್ನು "ಒಬ್ಬ ಚಿಂತನಶೀಲ ಸಂಸ್ಕೃತಿ ಸಂಶೋಧಕ" ಎಂದು ಹೇಳಬಹುದು. ವರ್ತಮಾನದ ಆಭಾಸಗಳನ್ನು ಭೂತಕಾಲದಲ್ಲಿ ಹುಡುಕುವ ಮಾರ್ಗ ಅವರದ್ದಾಗಿದೆ. ಅವರ ಚಿಂತನಶೀಲತೆ ಕೇವಲ ಹೊರತೋರಿಕೆಯದ್ದಾಗಿರದೆ ನಮ್ಮ ಸುತ್ತಮುತ್ತಲಿನ ಜೀವನವನ್ನು ಪ್ರಧಾನ ಆಧಾರವಾಗಿ ಇಟ್ಟುಕೊಂಡಿದೆ.

೬. ಕರ್ನಾಟಕದ ಕುರುಬರು- ಡಾ. ಶಿವಾನಂದ ಗುಬ್ಬಣ್ಣನವರ (೧೯೯೩)

'ಕರ್ನಾಟಕದ ಕುರುಬರು' ಕೃತಿಯು ೧೯೯೩ರಲ್ಲಿ ಧಾರವಾಡದ ಅಕ್ಷಯ ಪ್ರಕಾಶನದಿಂದ ಪ್ರಕಟಗೊಂಡಿದೆ. ಕುರುಬರ ಚಾರಿತ್ರಿಕ ಹಿನ್ನೆಲೆ, ಸಮಾಜ, ಮತ, ವೃತ್ತಿ, ಕಲೆ, ಸಾಹಿತ್ಯ ರಾಜಕೀಯ ಎಂಬ ೬ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗಿದೆ. ಉತ್ತರ ಕರ್ನಾಟಕದ ಕುರುಬರ ಸಾಂಸ್ಕೃತಿಕ ಪರಂಪರೆಗೆ ಹೆಚ್ಚಿನ ಗಮನ ನೀಡಿದ್ದಾರೆ.

ಮೊದಲ ಅಧ್ಯಾಯನವು 'ಕುರುಬರು' ಎಂಬ ಶೀರ್ಷಿಕೆ ಹೊಂದಿದೆ. ಅವರ ಚಾರಿತ್ರಿಕ ಹಿನ್ನೆಲೆ, ಪ್ರಾರಂಭಿಕ ಜನಜೀವನ ಮೊದಲಾದ ವಿವರಗಳೊಂದಿಗೆ ಅವರನ್ನು ಆರ್ಯಮೂಲ ಮತ್ತು ದ್ರಾವಿಡ ಮೂಲದ ಕುರುಬರೆಂದು ವಿಂಗಡಿಸಲಾಗಿದೆ. ಈ ವಿಂಗಡನೆಗೆ ಪಾಶ್ಚಾತ್ಯ ವಿದ್ವಾಂಸರಾದ ರಿಸ್ಲೆ ಹಟ್ಸನ್, ಗಸ್ಟೋವ ಜಪರ್ಟ ಮತ್ತು ಇಲಿಯಟ್ ಅವರ ಅಭಿಪ್ರಾಯಗಳನ್ನು ಪೂರಕವಾಗಿ ವಿಶ್ಲೇಷಿಸಿದ್ದಾರೆ. ಕುರುಬರು ಭಾರತದ ಪೂರ್ವ ಜನಸಂಖ್ಯೆಯ ಮಹತ್ವದ ಮೂಲಗಳಲ್ಲಿ ಒಬ್ಬರು ಎಂದು ಗುರುತಿಸಿರುವುದು ಸಮಂಜಸವಾಗಿ ತೋರುತ್ತದೆ. ೧೯ನೆಯ ಶತಮಾನದ ರಸ್ತಾಪುರ ಭೀಮಕವಿಯು ಹಾಲುಮತೋತ್ತೇಜಕ ಪುರಾಣಕ್ಕೆ ಆಗ್ನೇಯ ಪುರಾಣ ಆಕರವಾಗಿದ್ದು, ಕೌರಭ ಋಷಿಯ ತಪಸ್ಸಿನ ಫಲವಾಗಿ ಕುರುಬ ಮತವು ಹುಟ್ಟಿದುದನ್ನು ಸ್ಥೂಲವಾಗಿ ಚರ್ಚಿಸಲಾಗಿದೆ.

ಕುರುಬರು ಭಾರತದಾದ್ಯಂತ ಹರಡಿಕೊಂಡಿದ್ದು ನರ್ಮದಾ ನದಿಯ ಉತ್ತರಭಾಗ, ಮಲಬಾರ, ಮಹಾರಾಷ್ಟ್ರ, ಕರ್ನಾಟಕ ಮುಂತಾದ ಸ್ಥಳಗಳಲ್ಲಿ ವಾಸಿಸುವ ಕುರುಬರು ವಿವಿಧ ಹೆಸರುಗಳಿಂದ ಕರೆಯಲ್ಪಡ ತೊಡಗಿದರು. ಇದಕ್ಕೆ ಚಾರಿತ್ರಿಕ ದಾಖಲೆಗಳನ್ನು ನೀಡಲಾಗಿದೆ. ೧೯೭೧ರ ಜನಸಂಖ್ಯಾ ವರದಿಗನುಗುಣವಾಗಿ ಕರ್ನಾಟಕದ ಕುರುಬರು ೯.೭೭% ರಷ್ಟಿರುತ್ತಾರೆ. ಅಲೆಮಾರಿ ಜೀವನದ ಕೃಷಿಕರ ಊಟ, ಉಡಿಗೆ, ತೊಡುಗೆ, ಭಾಷೆ ಮೊದಲಾದ ವಿಷಯುಗಳ ಸಂಪೂರ್ಣ ಮಾಹಿತಿ ಸಂಗ್ರಹಿಸಲಾಗಿದೆ.

ಪಾಶ್ಚಾತ್ಯರ ಜಾಗತೀಕರಣದ ಫಲವಾಗಿ ಪ್ರಸ್ತುತ ದಿನಗಳಲ್ಲಿ ಕುರಿ ಸಾಕುತ್ತಾ ಕಾಡುಮೇಡ ಅಲೆಯುವವರ ಬದಲಾಗಿ ನಗರ ಪ್ರದೇಶಗಳಲ್ಲಿ ವಾಸವಾಗಿ ಶೈಕ್ಷಣಿಕ ಸೌಲಭ್ಯಗಳನ್ನು ಪಡೆಯುವುದನ್ನು ಇಲ್ಲಿ ಗುರುತಿಸಲಾಗಿದೆ.

ಎರಡನಯೆ ಅಧ್ಯಾಯವು ಸಮಾಜ ಕುರಿತಾಗಿದೆ. ಹಾಲುಮತ ಸಮಾಜದ ತಗರ ಪವಾಡ, ಶಾಂತ ವಿಜಯ, ಸಿದ್ಧರಾಮ ಸಾಂಗತ್ಯ , ಕುರುಬರ ಚರಿತ್ರೆ, ಹಾಲುಮತ ಪುರಾಣ, ರೇಣುಕ ಕಾವ್ಯ, ರುದ್ರ ಭಾರತ ಮುಂತಾದ ಕಾವ್ಯ ಪುರಾಣಗಳ ಹಿನ್ನೆಲೆಯಿಂದ ಹಾಲುಮತದ ಮೂಲ ಪರಂಪರೆಯನ್ನು ಗುರುತಿಸಲಾಗಿದೆ.

ಒಂದೇ ಸಂಸ್ಕೃತಿ ಹೊಂದಿದ ಕುರುಬರ ಉಪಜಾತಿಗಳ ನಡುವಿನ ವೈಮನಸ್ಸು, ಭಿನ್ನತೆ ತೊಡೆದು ಹಾಕಲು ಸಮಾಜದ ಧುರೀಣರು ಪ್ರಯತ್ನಿಸಿ ವಿಫಲರಾಗಿದ್ದಾರೆ. ಅಸಂಖ್ಯಾತ ಹಾಲುಮತ ಜಾತಿಗಳನ್ನು ರೇವಣಸಿದ್ಧರು ೪ ಸೇರು ಭತ್ತದ ಧಾನ್ಯಗಳನ್ನು ಗೋತ್ರಗಳನ್ನಾಗಿ ಮಾಡಿ ಅವುಗಳಿಗೆ ಕ್ಷುಲ್ಲಕ ವಸ್ತುಗಳ ಹೆಸರನ್ನು ಪ್ರಾಣಿ ಸೂಚಕ ಚಿನ್ಹೆಗಳನ್ನಿಟ್ಟು ಕರೆದರು. ನಿರ್ಧಿಷ್ಟ ಸ್ಥಳಕ್ಕೆ ನಿರ್ಬಂಧಿತ ಹಾಗೂ ಚದುರಿ ಹೋದ ಕುರುಬರ ಕುಲಗಳನ್ನು ನಂಜುಂಡಸ್ವಾಮಿ ಮತ್ತು ಅಯ್ಯರ ಅವರು ೧೧೧ ಕುಲಗಳ ಪಟ್ಟಿ ತಯಾರಿಸಿದ್ದಾರೆ. ನಂತರ ೩೩ ಗೋತ್ರಗಳನ್ನು ಹನುಮಂತಯ್ಯನವರು ಸೇರಿಸಿದ್ದಾರೆ. ಈ ಕುಲಗಳು ವೈವಾಹಿಕ ಸಂಬಂಧ ಸ್ಥಾಪನೆಗೆ ನೆರವಾಗುತ್ತವೆ. ಮದುವೆಯ ಗಂಡು ಹೆಣ್ಣುಗಳ ಆಯ್ಕೆ, ಹಾಗೂ ಮದುವೆಯ ನಿಯಮಗಳನ್ನು ನಿಯಂತ್ರಿಸುವಲ್ಲಿ ಕುಲಗಳ ಮಹತ್ವವನ್ನು (ಪುಟ ೧೭) ಗುರುತಿಸಲಾಗಿದೆ. ಪ್ರತಿ ಕುಲ ಅನೇಕ ವಂಶಗಳಾಗಿ ವಿಭಾಗಿಸಲ್ಪಟ್ಟಿವೆ. ಒಂದೇ ವಂಶದವರು ಒಂದೇ ಸ್ಥಳ ಹಳ್ಳಿಯಲ್ಲಿ ವಾಸಿಸುತ್ತಿದ್ದು, ವಂಶಜರಲ್ಲದವರು ಚದುರಿ ಹೋಗಿದ್ದಾರೆ. ಬಂಧುತ್ವ, ಸಂಘಟನೆ, ಕೌಟುಂಬಿಕ ಜನಜೀವನ, ಜನನ, ಮೈನೆರೆ, ಮದುವೆ ಮತ್ತು ಮರಣಗಳ ಸಂದರ್ಭದ ಆಚರಣೆ ಸಂಪ್ರದಾಯಗಳನ್ನು ಸಂಗ್ರಹಿಸಿ ವಿವರಿಸಿದುದು ಈ ಅಧ್ಯಾಯದ ವಿಶೇಷತೆಯಾಗಿದೆ.

ಸಾಮಾಜಿಕ ಸ್ಥಾನಮಾನದಲ್ಲಿ ಕುರುಬರು ಲಿಂಗಾಯಿತರೊಂದಿಗೆ ಸಮೀಕರಿಸಿಕೊಳ್ಳುತ್ತಾರೆ. ಒಡೆಯರ ಅನುಪಸ್ಥಿತಿಯಲ್ಲಿ ಲಿಂಗಾಯತ ಅಯ್ಯನವರು ಕಾರ್ಯಕ್ರಮ ನಡೆಸುತ್ತಾರೆ. ಸಮಾಜ ಸಂಘಟನೆಯಲ್ಲಿ ನಾಯಕರ, ರಾಜಕಾರಣಿಗಳ ಮುಖಂಡರ ಸಾಹಿತಿಗಳ ಕೊಡುಗೆಯನ್ನು ಸವಿಸ್ತಾರವಾಗಿ ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕುರುಬರ ಮತದ ಬಗೆಗೆ ವಿವರಗಳಿವೆ. ಹಾಲುಮತದ ಉಗಮವನ್ನು ಮತತತ್ವ ಪ್ರತಿಪಾದನೆಗಿಂತ ಪೌರಾಣಿಕ ನೆಲೆಗಳಲ್ಲಿ ಗುರುತಿಸಲಾಗಿದೆ. ಹಾಲುಮತದ ಅಧಿದೇವತೆಗಳಾದ ರೇವಣಸಿದ್ಧ ಬೀರೇಶ್ವರ, ಮಾಳಿಂಗರಾಯ, ಮೈಲಾರಲಿಂಗ, ಮೊದಲಾದವರ ಚರಿತ್ರೆಯನ್ನು ಪೌರಾಣಿಕ ನೆಲೆಯಲ್ಲಿ ಸಂಗ್ರಹಿಸಲಾಗಿದೆ. ಕುರುಬರ ಇವರು ಇತರ ದೇವತೆಗಳಾದ ಇಟ್ಟಪ್ಪ, ಈರಚಿಕ್ಕಪ್ಪ, ಕಲ್ಲುಕಂಬದಪ್ಪ, ಬೂದಲಪ್ಪ, ಸೆಟ್ಟಿಪಲ್ಲೆಪ್ಪ, ಮಾದಪ್ಪ, ಕುರುಕುರೆಪ್ಪ ಗಂಡು ದೇವತೆಗಳಾದರೆ, ಎಲ್ಲಮ್ಮ,

ಲಕ್ಷ್ಮೀದೇವಿ, ಮಾಯಮ್ಮ, ದುರುಗಮ್ಮ ಮುಂತಾದ ಹೆಣ್ಣು ದೇವತೆಗಳ ಹಿನ್ನೆಲೆ, ಆರಾಧನೆ, ಜಾತ್ರೆ ಉತ್ಸವದ ವಿವರಗಳು ಕುತೂಹಲಕಾರಿಯಾಗಿವೆ.

ಕುರುಬರ ಗುರು ಪರಂಪರೆಯ ಬಗೆಗೆ ಲೇಖಕರು ಅನೇಕ ವಿವರಗಳನ್ನು ಕ್ರೋಢಿಕರಿಸಿದ್ದಾರೆ. ರೇವಣಸಿದ್ಧ ಶಾಂತಮುತ್ತಯ್ಯ, ಅವರ ಪರಂಪರೆಯಲ್ಲಿ ಬರುವ ಒಡೆಯರ ಆಚಾರ ವಿಚಾರ ಸಂಪ್ರದಾಯಗಳನ್ನು ಕ್ಷೇತ್ರಾಧಾರಿತ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಜೊತೆಗೆ ಕನಕದಾಸರ ಪೂರ್ವೇತಿಹಾಸದೊಂದಿಗೆ ಕನಕಗುರು ಪೀಠದ ಸ್ಥಾಪನೆಯ (೧೯೯೨) ಸಂದರ್ಭವನ್ನು ವಿವರಿಸಿದ್ದಾರೆ.

ಭಾರತೀಯ ಹಬ್ಬ, ಮನೆದೇವರಹಬ್ಬ, ಹಿರಿಯರ ಹಬ್ಬ ಎಂಬ ೩ ವಿಧಗಳ ಹಬ್ಬಗಳನ್ನು ಕುರುಬರು ಆಚರಿಸುತ್ತಾರೆ. ಮನೆದೇವರ ಹಬ್ಬಗಳಲ್ಲಿ ಜೋಗಿದರ್ಶನ ಹಬ್ಬ, ದೇವರಹಬ್ಬ, ಏಳುಕೊಳ್ಳದ ಎಲ್ಲಮ್ಮನ ಹಬ್ಬ, ರೇಣುಕಾದೇವಿ ಹಬ್ಬ ಇತ್ಯಾದಿ ಹಬ್ಬಗಳ ವೈಶಿಷ್ಟ್ಯತೆಗಳನ್ನು ಗುರುತಿಸಲಾಗಿದೆ. ಕುರುಬರು ತಮ್ಮ ಅಧಿದೇವತೆಗಳ ಹೆಸರಿನಲ್ಲಿ ಗುಡಿಗುಂಡಾರಗಳನ್ನು ಕಟ್ಟಿಸಿ ವರ್ಷಕ್ಕೊಮ್ಮೆ ಜಾತ್ರೆ ನೆರವೇರಿಸಿ ತಮ್ಮ ಭಕ್ತಿ ಭಾವಗಳನ್ನು ಪ್ರಕಟಿಸಿ ಕೃತಾರ್ಥರಾಗುತ್ತಾರೆ. ಸರೂರ ರೇವಣಸಿದ್ಧೇಶ್ವರ, ಕೋಣನೂರು ಕರಿಸಿದ್ದೇಶ್ವರ, ಹುಲಜಂತಿ ಮಾಳಿಂಗರಾಯ, ಮೈಲಾರದ ಮೈಲಾರಲಿಂಗ, ಜಿಂಚಲಿ ಮಾಯವ್ವನ ಜಾತ್ರೆಗಳ ಸಾಂಸ್ಕೃತಿಕ ಅನನ್ಯತೆಯನ್ನು ಇಲ್ಲಿ ಗುರುತಿಸಿದ್ದಾರೆ. ಭೂತ ದೆವ್ವಗಳನ್ನು ನಂಬುವ ಕುರುಬರು ಹಾನಿಕಾರಕ ಮತ್ತು ತುಂಟ ಎಂಬ ಎರಡು ವಿಧಗಳಲ್ಲಿ ಲೇಖಕರು ವಿಂಗಡಿಸಿದ್ದಾರೆ.

ನಾಲ್ಕನೆಯ ಅಧ್ಯಾಯವು ವೃತ್ತಿ ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಕುರುಬರು ಸಾಮಾನ್ಯವಾಗಿ ತಮ್ಮ ಪರಂಪರಾಗತವಾದ ಕುರಿಸಾಕಣೆ ಮತ್ತು ಕಂಬಳಿ ನೇಯ್ಗೆ ವೃತ್ತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಕುರಿಗಳ ಹುಟ್ಟಿನ ಕುರಿತಾಗಿ ಮೂರು ಪೌರಾಣಿಕ ಕಥೆಗಳನ್ನು ಉಲ್ಲೇಖಿಸಿದ್ದಾರೆ. ಕಂಬಳಿ ವೃತ್ತಿಯು ಕ್ರಿ.ಶ.ಪೂ. ೩೦೦೦ರಷ್ಟು ಹಿಂದೆಯೇ ಇತ್ತೆಂದು ದಾಖಲೆಗಳಿಂದ ದೃಢಪಡಿಸಿದ್ದಾರೆ. ಕುರಿ ತಳಿಗಳಲ್ಲಿ ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ. ಭಾರತಿಯ ತಳಿಗಳ ಗುಣಮಟ್ಟ ಹಾಗೂ ಸಂಖ್ಯಾಭಿವೃದ್ಧಿಗಾಗಿ ಸ್ವಕೀಯ ತಳೀಕರಣ, ಪರಕೀಯ ತಳೀಕರಣ ಮತ್ತು ಅಂತಸ್ತುಗೊಳಿಸಿಕೆ ಎಂಬ ಮೂರು ವಿಧಾನಗಳ ತಳೀಕರಣವನ್ನು ಅನುಸರಿಸಲಾಗುತ್ತದೆ. ಕುರಿಗಳ ಗರ್ಭಧಾರಣೆ, ಸಂತಾನೋತ್ಪತ್ತಿ ರೋಗಗಳು ಮೊದಲಾದ ಅತಿಮುಖ್ಯ ವಿಷಯಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಕುರಿದೊಡ್ಡಿ, ಕುರಿಸಾಕಣೆ, ಉದ್ಯೋಗ ಉಣ್ಣೆ ಪ್ರಥಃಕರಣ ಪ್ರಯೋಗಶಾಲೆ, ರಗ್ಗು ಕಂಬಳಿ, ಜಮಖಾನೆಗಳ ತಯಾರಿಕಾ ವಿಧಾನ, ಕುರಿ ಫಾರ್ಮುಗಳು, ದೊಡ್ಡ ಪ್ರಮಾಣದ ಕುರಿ ಪೋಷಣೆ, ಫಾರ್ಮ ಸುತ್ತಟ್ಟಿ ಹಾಗೂ ಗುತ್ತಲ ಕುರಿ ತಳಿಕೇಂದ್ರ, ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿ ಇತ್ಯಾದಿ ವಿಷಯಗಳನ್ನು ದಾಖಲಿಸಿದ್ದಾರೆ. ಕಂಬಳಿ ತಯಾರಿಕಾ ವಿಧಾನ ಅವುಗಳಲ್ಲಿ ಹುರಿಗಂಬಳಿ ನೂಲು, ಉಜ್ಜುಗಂಬಳಿ ನೂಲು, ಸಣ್ಣ ಕಂಬಳಿ ಎಂದು ವಿಂಗಡಿಸಲಾಗಿದೆ. ಅಂಬಲಿ ತಯಾರಿಕೆ, ಹಾಸು ಹೊಯ್ಯುವದು, ಮಗ್ಗಕ್ಕೆ ಏರಿಸುವದು, ಇತ್ಯಾದಿ ಕ್ರಮಗಳಿಂದ ಕಂಬಳಿ

ನೇಯುತ್ತಾರೆ. ಗದ್ದುಗೆ ದಾವಳಿ, ಕುರಿಯ ಕಂತೆಗಳ ಪ್ರಾಚೀನತೆಯನ್ನು ಗುರುತಿಸಲಾಗಿದೆ. ಕಂಬಳಿ ತಯಾರಿಕೆಗಾಗಿ ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಫ್ರಾನ್ಸಿನ ಜೋಸೆಫ ಜಾಕ್ವೆರ್ಡ ಎಂಬುವನು ಮೊದಲ ಯಂತ್ರ ಮಗ್ಗಗಳನ್ನು ಕಂಡುಹಿಡಿದನು. ವಿದ್ಯುತ್ ಮಗ್ಗಗಳು ಉಣ್ಣೆ ಕಾರಖಾನೆ, ಉಣ್ಣೆ ಕೈ ಮಗ್ಗ ನೇಕಾರರ ಸಹಕಾರಿ ಸಂಘ (೧೯೫೬) ಮುಂತಾದ ವಿಷಯಗಳ ಸಮಗ್ರ ಪರಿಚಯವನ್ನು ಈ ಅಧ್ಯಾಯ ಹೊಂದಿದೆ.

ಐದನೆಯ ಅಧ್ಯಾಯವು ಕಲೆ ಮತ್ತು ಸಾಹಿತ್ಯ ಕುರಿತಾಗಿದೆ. ಡೊಳ್ಳಿನ ಹಾಡುಗಳ ಸೃಷ್ಟಿಕರ್ತರು ಕುರುಬರು. ಡೊಳ್ಳಿನ ಉಗಮವನ್ನು ಎರಡು ಪೌರಾಣಿಕ ಕಥೆಗಳಲ್ಲಿ ವಿವರಿಸಲಾಗಿದೆ. ಡೊಳ್ಳು ತಯಾರಿಕಾ ಕ್ರಮ, ಹಾಡನ್ನು ಹಾಡುವ ಕ್ರಮ, ಡೊಳ್ಳಿನ ಹಾಡುಗಳಲ್ಲಿ ಸಾಹಿತ್ಯಿಕ ಅಂಶಗಳನ್ನು ಗುರುತಿಸಿ ಅವುಗಳಲ್ಲಿ ಚಾರಿತ್ರಿಕ, ಪೌರಾಣಿಕ ನೀತಿ ಪದಗಳಾಗಿ ವಿಂಗಡಿಸಲಾಗಿದೆ. ಡೊಳ್ಳಿನ ಹಾಡುಗಳ ಕುರಿತಾಗಿ ಶಿವಾನಂದ ಗುಬ್ಬಣ್ಣನವರ ಅವರು ಸಾಕಷ್ಟು ಕೆಲಸ ಮಾಡಿದ್ದಾರೆ. ದೇವರ್ ಬಂದಾನೆ ಬನ್ನೀರೇ ಭಾಗ-೧ ಮತ್ತು ೨ ಅಲ್ಲದೆ ಇತರ ಕೃತಿಗಳನ್ನು ಸಂಪದಿಸಿದ್ದಾರೆ. ಡೊಳ್ಳಿನ ಹಾಡುಗಾರರ (ಕಲಾವಿದರ) ಸಂಪೂರ್ಣ ಮಾಹಿತಿಯನ್ನು ದಾಖಲಿಸ ಲಾಗಿದೆ.

ಆರನೆಯ ಅಧ್ಯಾಯ 'ರಾಜಕೀಯ' ಎಂಬ ಶೀರ್ಷಿಕೆಯನ್ನು ಹೊಂದಿದೆ. ಕುರುಬರ ಗತ ವೈಭವದ ಚರಿತ್ರೆ, ಪ್ರಚಲಿತ ರಾಜಕಾರಣ, ಕನಕ ಗುರುಪೀಠ ಸ್ಥಾಪನೆ, ಸಮಾಜ ಸಾಧಕರ ಪರಿಚಯ ಅಂತ್ಯದಲ್ಲಿ ಹಾಲುಮತದ ಈಚೀನ ಒಲವು ಸಲಹೆಗಳನ್ನು ಲೇಖಕರು ಸೂಚಿಸಿದ್ದಾರೆ.

ಒಟ್ಟಿನಲ್ಲಿ ಸಂಸ್ಕೃತಿ ಸಂಪ್ರದಾಯ, ರಾಜಕೀಯ, ಉದ್ಯೋಗ, ಸಾಹಿತ್ಯ, ಧಾರ್ಮಿಕ ಹೀಗೆ ಹಲವಾರು ದೃಷ್ಟಿಕೋನಗಳಿಂದ ಕುರುಬ ಸಮಾಜದ ಚರಿತ್ರೆಗೆ ಸಮಗ್ರತೆಯನ್ನು ತಂದುಕೊಡುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಲಿಖಿತ ಮತ್ತು ಮೌಖಿಕ ಆಕರಗಳ ನೆರವಿನಿಂದ ಈ ಕೃತಿಗಳನ್ನು ಕ್ರಮಬದ್ಧವಾಗಿ ರಚನೆಮಾಡಲಾಗಿದೆ. ಪ್ರಸ್ತುತ ಸಂದರ್ಭದ ಕುರುಬ ಸಮಾಜದ ಸಂಘಟನೆ, ವೃತ್ತಿ, ಶಿಕ್ಷಣ, ರಾಜಕಾರಣ, ಧಾರ್ಮಿಕ ಸಂಗತಿಗಳನ್ನು ತಿಳಿದುಕೊಳ್ಳಲು ಈ ಕೃತಿ ಕೈಪಿಡಿಯಂತೆ ನೆರವಾಗುತ್ತದೆ.

ಕುರುಬರ ಹೆಜ್ಜೆಗಳು: ಒಂದು ಅಧ್ಯಯನ - ಚಂದ್ರಕಾಂತ ಬಿಜ್ಜರಗಿ (೨೦೦೬)

ಚಂದ್ರಕಾಂತ ಬಿಜ್ಜರಗಿ ಅವರು ೨೦೦೬ರಲ್ಲಿ ಕುರುಬರ ಹೆಜ್ಜೆಗಳು ಎಂಬ ಕೃತಿಯನ್ನು ಬಿಜಾಪುರದ ಶೈಲಚಂದ್ರ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಈ ಕೃತಿಯು ೪೪೪ ಪುಟಗಳನ್ನು ಹೊಂದಿದ್ದು ೯ ಅಧ್ಯಾಯಗಳಲ್ಲಿ ವಿಭಾಗಿಸಲ್ಪಟ್ಟಿದೆ.

ಲೇಖಕರು ಯಾವುದೇ ವಿಶ್ವವಿದ್ಯಾಲಯದ ಮೆಟ್ಟಿಲನ್ನು ಏರದೆ ಕೇವಲ ಅಧ್ಯಯನ-ಬರವಣಿಗೆಯನ್ನು ಪ್ರವೃತ್ತಿಯನ್ನಾಗಿ ಬೆಳಸಿಕೊಂಡವರು. ಹಾಲುಮತದ ಚರಿತ್ರೆ-ಪರಂಪರೆ-ಸಂಸ್ಕೃತಿಗೆ ಸಂಬಂಧಿಸಿದ ಹಲವಾರು

ಕೃತಿಗಳನ್ನು ರಚಿಸಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಪ್ರಮುಖವಾದ ಕೊಡುಗೆಯನ್ನು ನೀಡುತ್ತಿದ್ದಾರೆ. ಶಿವಶರಣೆ ಅಹಲ್ಯಾಬಾಯಿ ಹೋಳ್ಕರ, ಕುರುಬರ ಕುಲಗುರು ರೇವಣಸಿದ್ಧ, ಕುರುಬ ದರ್ಪಣ (ವಾರ ಪತ್ರಿಕೆ) ಹೀಗೆ ಅನೇಕ ಹಾಲುಮತದ ಕೃತಿಗಳನ್ನು ರಚಿಸಿರುವರು. ಈವರೆಗೆ ಪ್ರಕಟಗೊಂಡ ಕೃತಿಗಳನ್ನು ತಮ್ಮ ಅಧ್ಯಯನಕ್ಕೆ ಬಳಸಿಕೊಂಡು ಈ ಕೃತಿಯನ್ನು ರಚಿಸಿದ್ದಾರೆ. ಹಾಲುಮತದ ಮೂಲ, ಬೆಡಗು, ಗೋತ್ರ, ರಾಜವಂಶಗಳು ಆದಿದೇವತೆಗಳು ಮತ್ತು ಮತದ ಉನ್ನತಿಗಾಗಿ ಅನುಸರಿಸಬೇಕಾದ ಸೂಚನೆಗಳು -ಹೀಗೆ ಹತ್ತು ಹಲವಾರು ವಿಷಯಗಳ ಬಗೆಗಿನ ತಲಸ್ಪರ್ಶಿ ಅಧ್ಯಯನ ಇಲ್ಲಿದೆ. ಹಾಲುಮತ ಧಾರ್ಮಿಕ ಕ್ಷೇತ್ರಗಳ ಕೆಲವು ಛಾಯಾಚಿತ್ರ ಗಳನ್ನು ಪೂರಕವಾಗಿ ಅಳವಡಿಸಲಾಗಿದೆ. ಕುರುಬ ಸಮುದಾಯದ ಮಹಾವೃಕ್ಷದ ಕವಲುಗಳು ಎಲ್ಲೆಲ್ಲಿ ಹರಡಿವೆ ಎಂಬ ಉದ್ದೇಶವನ್ನು ಚರ್ಚಿಸುವಲ್ಲಿ ಬಿಜ್ಜರಗಿ ಅವರು ಸಫಲರಾಗಿದ್ದಾರೆ.

ಹಂಪಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ.ಹೆಚ್. ಜೆ. ಲಕ್ಕಪ್ಪಗೌಡರು ಈ ಕೃತಿಯ ಅನನ್ಯತೆಯನ್ನು ಕುರಿತು ಹೀಗೆ ಹೇಳಿದ್ದಾರೆ "....ಕುರುಬ ಜನಾಂಗದ ಅಂತರ್ನಿಹಿತ ಸತ್ಯ, ಸಾಮರ್ಥ್ಯಗಳಿಗೆ ಕನ್ನಡಿ ಹಿಡಿಯುವಲ್ಲಿ ಅವರ ಪೌರಾಣಿಕ, ಚಾರಿತ್ರಿಕ, ಸಾಮಾಜಿಕ ವ್ಯಕ್ತಿತ್ವಗಳ ಹಿರಿಮೆ ಗರಿಮೆಗಳನ್ನು ಆಧಾರ ಭೂತವಾಗಿ ಪ್ರತಿಪಾದಿಸುವ ಮೂಲಕ ಅವರ ಬದುಕಿಗೆ ಒಂದು ನೆಲೆಗಟ್ಟನ್ನು ರೂಪಿಸುವಲ್ಲಿ ಚೆದುರಿ ಚೆಲ್ಲಿಹೋದ ಜನಾಂಗದ ಒಳಸೆಲೆಗಳನ್ನು ಸಾವಧಾನಶೀಲತೆಯಿಂದ ಗಂಭೀರ ಕಲೆಗಾರಿಕೆಯಿಂದ ಪರಿಣಾಮಕಾರಿಯಾಗಿ ಕಟ್ಟಿಕೊಡುವ ಮೂಲಕ ಸಮರ್ಥ ಅಸ್ಮಿತೆಯನ್ನು ಈ ಜನಾಂಗಕ್ಕೆ ತಂದುಕೊಡುವಲ್ಲಿ ಲೇಖಕರಾದ ಶ್ರೀ ಚಂದ್ರಕಾಂತ ಬಿಜ್ಜರಗಿ ಅವರು ಈ ಕೃತಿಯ ಮೂಲಕ ಬಹುದೊಡ್ಡ ಸಾಧನೆಯನ್ನು ಮಾಡಿದ್ದಾರೆ. ವೃತ್ತಿ ನಿರತ ಚರಿತ್ರಕಾರರಲ್ಲದ ಸಂಪ್ರದಾಯಕ ಅರ್ಥದ ಇತಿಹಾಸ ಸಂಸ್ಕೃತಿಗಳ ಅಧ್ಯಾಪಕರಲ್ಲದ ವಿದ್ವತ್ ವಲಯದ ಪ್ರಶಂಸಾ ಡಂಗುರಕ್ಕೆ ಕುಣಿಯದ ಜನಾಂಗದ ಇತಿಹಾಸದ ಗಂಟುಗಳನ್ನು ಬಿಡಿಸುವ ಸತ್ಯದ ದಾರಿಯನ್ನು ಸಾಕ್ಷಾತ್ಕರಿಸಿಕೊಳ್ಳುವ ವೈಯಕ್ತಿಕ ಆಸಕ್ತಿ ಅಧ್ಯಯನ ವೈಚಾರಿಕತೆಗಳ ಫಲವಾಗಿ ಇಂಥದೊಂದು ವಿಶಿಷ್ಟವಾದ ಸತ್ಯಪೂರ್ಣವಾದ ಮತ್ತು ಗಂಭೀರವಾದ ಆಲೋಚನೆಗೆ ಹಚ್ಚುವ ಗ್ರಂಥವನ್ನು ಕನ್ನಡಕ್ಕೆ ಕೊಡುಗೆಯಾಗಿ ನೀಡಿದ್ದಾರೆ."[೧೧]

ಪ್ರಸ್ತುತ ಕಾಲದಲ್ಲಿ ಪ್ರಸಿದ್ಧಿ ಪಡೆದ ಮಹಾಪುರುಷರ ಜಾತಿಮೂಲದ ಬಗ್ಗೆ ತೌಲನಿಕ ಅಧ್ಯಯನ ಕೈ ಕೊಳ್ಳಲಾಗಿದೆ. ಇದರ ಜೊತೆಗೆ ಕುರುಬ ಮೂಲದ ಅರಸು ಮನೆತನಗಳ ಬಗ್ಗೆ ಶಾಸನಾಧಾರ ಹಾಗೂ ಸಮಕಾಲೀನ ವಿವರಗಳನ್ನಾಧರಿಸಿ ನೈಜ ಹಾಗೂ ತೃಪ್ತಿಕರ ವಾದಗಳನ್ನು ಮಂಡಿಸಲಾಗಿದೆ.

ಕುರುಬ ಸಮಾಜದ ಇಂದಿನ ನಾಯಕರ ಪಾತ್ರಗಳು, ಕುರುಬ ಸಮಾಜದ ಸ್ವಾತಂತ್ರ್ಯಪೂರ್ವದ ಆಧುನಿಕ ನಾಯಕರ ಕೊಡುಗೆಗಳು, ಇನ್ನಿತರ ಸಮಾಜದೊಂದಿಗೆ ಸರಿಸಮಾನರಾಗಿ ಬಾಳಲು ಅನುಸರಿಸಬೇಕಾದ ಕ್ರಮಗಳು, ಕುರುಬ ಸಮಾಜವು ಇನ್ನು ಮುಂದೆ ಇಡಬೇಕಾದ ಹೆಜ್ಜೆಗಳು, ಸಮಾಜದ ಉನ್ನತಿಗಾಗಿ ಅಡೆತಡೆ ಒಡ್ಡುವ ಸಮಾಜದಲ್ಲಿನ ನ್ಯೂನತೆಗಳು ಮೊದಲಾದವುಗಳ ಬಗ್ಗೆ ಚರ್ಚೆ ಮಾಡಲಾಗಿದೆ. ಆರಂಭದಲ್ಲಿ

ಅಲೆಮಾರಿಗಳಾಗಿದ್ದ ಕುರುಬರು ಅನೇಕ ಗುಂಪುಗಳಾಗಿ ಗಂಗಾ ಯಮುನಾ ನದಿಗಳನ್ನು ದಾಟಿ ಅಫ್ಘಾನಿಸ್ತಾನ ಮತ್ತು ಜನವಸತಿಗಳು ಇಂದಿಗೂ ಸಾಕಷ್ಟು ಹರಡಿವೆ. ಮುಂದೆ ಇವರು ಏಷಿಯಾ ಪ್ರದೇಶಗಳಲ್ಲಿಯೂ ವಲಸೆ ಹೋಗಿರುವುದು ಕಂಡುಬರುತ್ತದೆ. ಚೀನಾದ ಶಾಂಘೈನ ವಾಣಿಜ್ಯ ಸಮುಚ್ಚಯದಲ್ಲಿ ಪ್ರತಿವರ್ಷ ಫೆಬ್ರುವರಿ ತಿಂಗಳಲ್ಲಿ ಜಾತ್ರೆ ಆಚರಿಸಲಾಗುತ್ತದೆ. ಆ ಜಾತ್ರೆಯಲ್ಲಿ ಆಡಿನ ಬೃಹತ್ ಪ್ರತಿಕೃತಿಯನ್ನು ನಿಲ್ಲಿಸಲಾಗಿರುತ್ತದೆ. ಆದ ಕಾರಣ ಚೀನಾಕ್ಕೆ ಕುರುಬರು ವಲಸೆ ಹೋಗಿ ಅಲ್ಲಿಯೇ ವಸಾಹತುಗಳನ್ನು ಸ್ಥಾಪಿಸಿದರೆಂದು ತಿಳಿದುಬರುತ್ತದೆ. ಋಗ್ವೇದದಲ್ಲಿ ಹೇಳಿರುವಂತೆ ಗಂಗಾ ಯಮುನಾ ನದಿಯ ಬಯಲಿನಲ್ಲಿದ್ದ ಅಗಸ್ತ್ಯ, ಗೌತಮ, ದೂರ್ವಾಸ ಮುಂತಾದ ಋಷಿಗಳು ವಾಸವಾಗಿದ್ದು ಕ್ರಮೇಣ ಅಲ್ಲಿಂದ ಕಣ್ಮರೆಯಾದರು. ಅವರಲ್ಲಿ ಅಗಸ್ತ್ಯ ದಕ್ಷಿಣ ಭಾರತಕ್ಕೆ ಬರುವಾಗ ೧೮ ಕುಲ(ಗೋತ್ರ)ದ ಕುರುಬ ಕುಟುಂಬಗಳನ್ನು ತನ್ನ ಜೊತೆಗೆ ತಂದನೆಂಬ ಉಲ್ಲೇಖ ಹೊಂದಿದೆ.

'ಕುರುಬ' ಎಂಬ ಪದಕ್ಕೆ ತಮಿಳು ಭಾಷೆಯಲ್ಲಿ ಮತ್ತು ದ್ರಾವಿಡ ಮೂಲದಲ್ಲಿ ಅರ್ಥವನ್ನು ವಿವರಿಸಲಾಗಿದೆ. ಬ್ರಹ್ಮ, ಶಿವ-ಶಂಕರ-ಲಿಂಗ, ಶ್ರೀರಾಮ, ಶ್ರೀಕೃಷ್ಣ, ಮಾರುತಿ, ಬೀರಪ್ಪ, ವೀರಪ್ಪ, ಮೈಲಾರ ಮಲ್ಲಯ್ಯ, ವೀರಭದ್ರ, ವಿರೂಪಾಕ್ಷ, ಶ್ರೀಶೈಲ ಮಲ್ಲಿಕಾರ್ಜುನ, ಪಾಂಡುರಂಗ ವಿಠ್ಠಲ, ತಿರುಪತಿ ವೆಂಕಟೇಶ, ಬನಶಂಕರಿ, ಹುಲಜಂತಿ ಮಾಳಿಂಗರಾಯ, ಬಾಬಾ (ಸಿದ್ಧ) ಮೊದಲಾದ ದೇವರುಗಳನ್ನು ಕುರುಬ ದೇವರುಗಳೆಂದು ಸಾಕ್ಷಾಧಾರಗಳ ಮೂಲಕ ಸ್ಪಷ್ಟಪಡಿಸಲಾಗಿದೆ.

ವೇದ, ಶಾಸ್ತ್ರ, ರಾಮಾಯಣ, ಮಹಾಭಾರತಗಳಿಂದ ಪ್ರಾಚೀನ ಕೃತಿಗಳ ಸಾಕ್ಷಾಧಾರಗಳಿಂದ ಕುಲಗೋತ್ರ ಬೆಡಗುಗಳನ್ನು ಚರ್ಚಿಸಲಾಗಿದೆ. ಕರ್ನಾಟಕ ಆಂದ್ರಪ್ರದೇಶ, ಅಸ್ಸಾಂ, ಗುಜರಾತ, ಬಿಹಾರ, ಹರಿಯಾಣ, ದಿಲ್ಲಿ, ಚಂಡಿಗಡ, ಹಿಮಾಚಲ ಪ್ರದೇಶ, ಜಮ್ಮು ಕಾಶ್ಮೀರ, ಮಧ್ಯಪ್ರದೇಶ, ಪಂಜಾಬ, ತಮಿಳುನಾಡು ಮತ್ತು ಪಾಂಡಿಚೇರಿ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಮೇಘಾಲಯ, ಓರಿಸ್ಸಾ, ಅರುಣಾಚಲ ಪ್ರದೇಶ, ತ್ರಿಪುರಾ, ಉತ್ತರ ಪ್ರದೇಶ, ಗೋವಾ, ದಮನ್-ದೀವ್, ಕೇರಳ, ರಾಜಸ್ಥಾನ ಇತ್ಯಾದಿ ರಾಜ್ಯಗಳಲ್ಲಿಯ ಕುರುಬರ ಪರ್ಯಾಯ ನಾಮಗಳನ್ನು ವಿವಿಧ ಆಕರಗಳಿಂದ ಸಂಗ್ರಹಿಸಲಾಗಿದೆ.

ಹಿಂದಿ, ಪಂಜಾಬಿ, ಉರ್ದು, ಕಾಶ್ಮೀರಿ, ಸಿಂಧಿ, ಮರಾಠಿ, ಗುಜರಾತಿ, ಅಸ್ಸಾಮಿ, ಬಂಗಾಳಿ, ಓರಿಯಾ, ತೆಲುಗು, ತಮಿಳು, ಮಲೆಯಾಳಂ, ಕನ್ನಡ, ಸಂಸ್ಕೃತ, ಕುರ್ಕ, ಒರಾವೋನ್ ಇತ್ಯಾದಿ ಭಾಷೆಗಳಲ್ಲಿ ಕುರುಬರನ್ನು ಹೆಸರಿಸಲ್ಪಡುವುದನ್ನು ವಿಶ್ಲೇಷಿಸಲಾಗಿದೆ. ಉಣ್ಣೆಕಂಕಣ, ಹತ್ತಿಕಂಕಣಗಳ ಉಗಮವನ್ನು ಐದು ಪೌರಾಣಿಕ ಕಥೆಗಳಲ್ಲಿ ಹಾಗೂ ಡೊಳ್ಳಿನ ಹಾಡುಗಳಲ್ಲಿ ಕಂಡುಹಿಡಿಯಲು ಲೇಖಕರು ಪ್ರಯತ್ನಿಸಿದ್ದಾರೆ.

ಕುರುಬರಿಂದ ಕವಲೊಡೆದ ಜಾತಿಗಳಾದ ಆದಿಬಣಜಿಗ, ಜೈನ, ಕ್ಷತ್ರಿಯ, ಹಂಡೆ (ವಜೀರ) ಕುರುಬ, ಮರಾಠ, ರೆಡ್ಡಿ, ಇತ್ಯಾದಿಗಳೊಂದಿಗೆ ಕೆಲವು ಪ್ರಮುಖ ಒಳಪಂಗಡಗಳನ್ನು ಚರ್ಚಿಸಲಾಗಿದೆ. ಗೋತ್ರ

ಗಳಲ್ಲಿಯೂ ಭಿನ್ನತೆಯನ್ನು ದಿಕ್ಕಿಗನುಗುಣವಾಗಿ ವಿವರಿಸಿದ್ದಾರೆ(ಪುಟ ೨೨೧). ಒಕ್ಕಲಿಗರು ಮತ್ತು ಅವರ ಒಳಪಂಗಡಗಳು, ಗಂಗಡಿಕಾರ ಒಕ್ಕಲಿಗರ ಬೆಡಗುಗಳು ಮೊದಲಾದ ವಿಷಯಗಳ ಸಮಗ್ರ ವಿಷಯಗಳನ್ನು ದಾಖಲಿಸಲಾಗಿದೆ.

ಬಸವಣ್ಣ, ಶಿವಾಜಿ, ರೇವಣಸಿದ್ಧ, ಅಮೋಘಸಿದ್ಧ ಇತ್ಯಾದಿ ಐತಿಹಾಸಿಕ ಪ್ರಮುಖ ವ್ಯಕ್ತಿಗಳು ಕುರುಬ ಕುಲದವರು ಎಂಬುದಕ್ಕೆ ಸಾಕಷ್ಟು ದಾಖಲೆಗಳ ಸಹಿತ ಸ್ಪಷ್ಟಪಡಿಸಿರುವರು. ಪ್ರಮುಖ ರಾಜಮನೆತನಗಳಾದ ಕೌರವ, ಪಾಂಡವ, ನಂದ, ಮೌರ್ಯ, ಶಾತವಾಹನ, ಪಲ್ಲವ, ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ನೊಳಂಬ, ಹೊಯ್ಸಳ, ಸೇವುಣ (ದೇವಗಿರಿ) ಯಾದವ, ಕಲಚೂರಿ, ಇಂದೂರಿನ ಹೋಳ್ಕರ, ಹೆಗ್ಗಡೆದೇವನ ಕೋಟೆ ಅರಸು, ಜಿಂಜಿ ಮತ್ತು ಕೃಷ್ಣಗಿರಿಯ ರಾಜರು, ವಿಜಯನಗರದ ಅರಸರು, ಸುರಪುರದ ನಾಯಕರು, ಬೂದಿಹಾಳು ಪಾಳೆಯಗಾರರು, ಕೊಲ್ಲಾಪುರದ ಶಿಲಾಹಾರರು, ಚಾವುಂಡರಾಯ ಮುಂತಾದ ರಾಜರುಗಳು ಹಾಲುಮತದವರೆಂಬ ಅಭಿಪ್ರಾಯಗಳನ್ನು ಸುಮಾರು ೮೩ ಆಕರಗಳಿಂದ ಸ್ಪಷ್ಟಪಡಿಸಿದ್ದಾರೆ.

ಜನಸಂಖ್ಯೆ ಶೀಲ-ಮಡಿ-ಮೈಲಿಗೆ ಡೊಳ್ಳು ವಾದ್ಯದ ಮಹತ್ವ ರಾಜಕೀಯದಲ್ಲಿ ಸಮಾಜದ ಪಾತ್ರ, ದೇವರ ಹೆಸರಿನಲ್ಲಿ ನಡೆಯುವ ಮೂಢನಂಬಿಕೆ ಮೊದಲಾದ ವಿಷಯಗಳನ್ನು ವಿಮರ್ಶಿಸಿ ಅವುಗಳ ಸುಧಾರಣೆಗಾಗಿ ತಕ್ಕ ಸಲಹೆಗಳನ್ನು ಕೃತಿಯ ಕೊನೆಯಲ್ಲಿ ಸಂಕ್ಷಿಪ್ತವಾಗಿ ಸೂಚಿಸಿದ್ದಾರೆ.

ಒಟ್ಟಿನಲ್ಲಿ ಕುರುಬ ಸಮುದಾಯದ ಪರಂಪರೆ, ಚರಿತ್ರೆ, ಸಂಸ್ಕೃತಿ, ಗತವೈಭವ, ಪ್ರಸ್ತುತ ಸ್ಥಿತಿಗತಿ ಮತ್ತು ಅವುಗಳಿಗೆ ಕಾರಣಗಳು, ಭವಿಷ್ಯದಲ್ಲಿ ಕುರುಬ ಜನಾಂಗದ ಅಭಿವೃದ್ಧಿಗಾಗಿ ತೆಗೆದುಕೊಳ್ಳುವ ನಿರ್ಧಾರಗಳು ಹೀಗೆ ಅನೇಕ ಸಂಗತಿಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಕುರುಬ ಸಮುದಾಯದ ಸಂಶೋಧನೆಯನ್ನು ಪ್ರವೃತ್ತಿಯನ್ನಾಗಿ ಮಾಡಿಕೊಂಡ ಚಂದ್ರಕಾಂತ ಬಿಜ್ಜರಗಿ ಅವರು ಈವರೆಗಿನ ಆಕರಗಳನ್ನು ಬಳಸಿಕೊಂಡು ಅನೇಕ ವಿಷಯಗಳನ್ನು ಕ್ಷೇತ್ರಕಾರ್ಯದ ಮೂಲಕ ಪರಿಶೀಲಿಸಿ ಆ ಮೂಲಕ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಹೀಗಾಗಿ 'ಕುರುಬರ ಚರಿತ್ರೆ'ಗೆ ಸಮಗ್ರತೆ ಪ್ರಾಪ್ತವಾಗಿದೆಯೆಂದೇ ಹೇಳಬೇಕು.

ಹೀಗೆ ಕುರುಬ ಸಮುದಾಯದ ಇತಿಹಾಸಕ್ಕೆ ಸಂಬಂಧಿಸಿದಂತೆ ವಿ.ಆರ್.ಹನುಮಂತಯ್ಯ, ಯಲ್ಲನಗೌಡ ಅತ್ತಿಕೊಳ್ಳ, ಶಂಬಾ ಜೋಶಿ, ಶಿವಾನಂದ ಗುಬ್ಬಣ್ಣವರ ಹಾಗೂ ಚಂದ್ರಕಾಂತ ಬಿಜ್ಜರಗಿ ಅವರು ತಮ್ಮದೇ ಆದ ವೈಚಾರಿಕ ನೆಲೆಯಲ್ಲಿ ಲಭ್ಯವಾದ ಆಕರಗಳನ್ನು ಬಳಸಿಕೊಂಡು ಕೃತಿಗಳನ್ನು ರಚಿಸಿದ್ದಾರೆ. ವಿ.ಆರ್. ಹನುಮಂತಯ್ಯನವರು ಕುರುಬರ ಚರಿತ್ರೆಯನ್ನು ರಚಿಸುವ ಮೂಲಕ ಭಾರತದ ವಿವಿಧ ಭಾಗಗಳಲ್ಲಿ ನೆಲೆಸಿರುವ ಕುರುಬರ ಪ್ರಾಚೀನತೆ, ಆಚಾರ ವಿಚಾರ, ಸಂಸ್ಕೃತಿ, ಕಲೆ, ಸಾಧನೆಗಳನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಶಂಬಾ ಜೋಶಿಯವರು ಕುರುಬರ ಪ್ರಾಚೀನತೆಯನ್ನು ಗುರುತಿಸುವುದರ ಮೂಲಕ ಕರ್ನಾಟಕ ಸಂಸ್ಕೃತಿಯ

ಬೇರುಗಳನ್ನು ಹುಡುಕುವ ನಿಟ್ಟಿನಲ್ಲಿ ವ್ಯಾಪಕ ಚರ್ಚೆ ಮಾಡಿದ್ದಾರೆ. ಹೀಗಾಗಿ ಶಂಬಾ ಅವರ ಬರವಣಿಗೆಗೆ ಸಮಷ್ಟಿನೆಲೆ ಪ್ರಾಪ್ತವಾಗಿದೆಯೆಂದು ಹೇಳಬೇಕಾಗುತ್ತದೆ. ಇನ್ನು ಶಿವಾನಂದ ಗುಬ್ಬಣ್ಣವರ ಅವರು ಕರ್ನಾಟದ ಕುರುಬರ ಸ್ಥೂಲಚಿತ್ರಣವನ್ನು ಅಂಕಿಅಂಶಗಳ ಆಧಾರದೊಂದಿಗೆ ಕೊಟ್ಟಿದ್ದಾರೆ. ಚಂದ್ರಕಾಂತ ಬಿಜ್ಜರಗಿ ಅವರು ಕುರುಬರ ಹೆಜ್ಜೆಗಳನ್ನು ಗುರುತಿಸುತ್ತ, ಸಮುದಾಯದ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ನಿರ್ಧಾರಗಳನ್ನು ಸೂಚಿಸಿದ್ದಾರೆ. ಈ ನಿಟ್ಟಿನಲ್ಲಿ ಈ ಎಲ್ಲ ಕೃತಿಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಬೇಕಾದ ಅಗತ್ಯವಿದೆ.

೨. ಕುರುಬರ ರಾಜಕೀಯ ಇತಿಹಾಸ

ಹಾಲುಮತದ ಶ್ರೀಮಂತ ಚರಿತ್ರೆಯನ್ನು ರಾಜವೈಭವವನ್ನು, ಮರೆತು ಹೋದ ಚರಿತ್ರೆಯನ್ನು ಕಟ್ಟಿಕೊಡಲು ಹಲವಾರು ಮಹನೀಯರು ಶ್ರಮಿಸಿದ್ದಾರೆ. ಅಲಕ್ಷತನ, ಕೀಳರಿಮೆಯಿಂದ ಛಿದ್ರ ಛಿದ್ರವಾದ ಜನಾಂಗದ ಪೂರ್ವದ ಇತಿಹಾಸವನ್ನು ರಚನೆಮಾಡಿ ಸ್ವಾಭಿಮಾನದ ಬದುಕನ್ನು ಬಾಳಲು ಕರೆನೀಡಿದ್ದಾರೆ. ಇತಿಹಾಸ ತಿಳಿಯದೆ ಹೋದರೆ ವರ್ತಮಾನವನ್ನು ಕಟ್ಟಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಹಲವಾರು ರಾಜವಂಶದವರು ಬಾಳಿದುದನ್ನು ಮೊದಲ ಬಾರಿಗೆ ಪ್ರಾಥಮಿಕ ಶಾಲಾ ಶಿಕ್ಷಕ ವಿ.ಆರ್.ಹನುಮಂತಯ್ಯವರ 'ಕರ್ನಾಟಕದ ಕುರುಬರು' ಎಂಬ ಕೃತಿಯಲ್ಲಿ ಪರಿಚಯಿಸಲಾಗಿದೆ. ತದನಂತರ ಎಚ್.ಎಂ.ಆರ್.ಗೌಡ, ಶಿವಾನಂದ ಗುಬ್ಬಣ್ಣನವರ, ವಿ.ರಾಜಶೇಖರ, ಎಚ್.ಜೆ.ಲಕ್ಕಪ್ಪಗೌಡ, ಶಿವಪ್ಪ ನೀಲರಗಿ, ಬಿ.ಬಿ.ಪಾಟೀಲ, ಒಡೆಯರ್ ಡಿ.ಹೆಗ್ಗಡೆ ಮೊದಲಾದ ವಿದ್ವಾಂಸರ ಕೃತಿಗಳು, ಲೇಖನಗಳು ಕುರುಬರ ಚರಿತ್ರೆಯನ್ನು ತಿಳಿಸುವಲ್ಲಿ ಸಹಕಾರಿ ಯಾಗಿವೆ.

ಡಾ. ಹೆಚ್.ಜೆ.ಲಕ್ಕಪ್ಪಗೌಡ ಅವರ 'ಕುರುಬ ಜನಾಂಗದ ಐತಿಹಾಸಿಕ ಹಿನ್ನೆಲೆ' (ಪಾವನ ೧೯೯೨ ಪುಟ ೧೫) ಲೇಖನ ದಕ್ಷಿಣ ದೇಶದಲ್ಲಿ ಸಿಕ್ಕುವ ಪ್ರಾಚೀನ ನಾಣ್ಯಗಳೆಂದರೆ ಕುರುಬರವೇ ಎಂಬ ಗುಸ್ತವ ಓಪರ್ಟನ ಹೇಳಿಕೆಯಿಂದ ಕುರುಬರ ಪ್ರಾಚೀನತೆಯನ್ನು ಸ್ಪಷ್ಟಪಡಿಸಲಾಗಿದೆ. ಕದಂಬರು, ಪಲ್ಲವರು, ಜಿಂಜಿ ಮತ್ತು ಕೃಷ್ಣಗಿರಿಯ ರಾಜರು, ಹೆಗ್ಗಡದೇವನಕೋಟೆಯ ದೇವಗಿರಿಯ ಯಾದವರು, ಮಧ್ಯಭಾರತದ ಇಂದೋರಿನ ಹೋಳ್ಕರ್, ಬರೋಡದ ಗಾಯಕವಾಡರು, ಮಾಂಡು ಮತ್ತು ಮಗಧ ಶಿವಾಜಿ ರಾಷ್ಟ್ರಕೂಟ ಮೊದಲಾದವರ ಚಾರಿತ್ರಿಕ ಸಂಗತಿಗಳಿಂದ ಹಾಲುಮತದ ಐತಿಹಾಸಿಕ ಮಹತ್ವವನ್ನು ವಿವರಿಸಲಾಗಿದೆ.

ಬಿ.ಬಿ. ಪಾಟೀಲರ 'ಕುರುಬ ಜನಾಂಗದ ಇತಿಹಾಸ ಕೆಲ ಚಿಂತನೆಗಳು' (ಪಾವನ, ೧೯೯೨, ಪುಟ ೫೦) ಎಂಬ ಲೇಖನವು ಕುಟುಂಬ ಎಂಬ ಪದದಿಂದ ಕುರುಬ ಪದದ ನಿಷ್ಪತ್ತಿ, ಜನಾಂಗಗಳ ಮೂಲ ಕುರುಬರ ಟಿಸಿಲುಗಳು, ವೃತ್ತಿ, ಪ್ರಭೇದ ಒಕ್ಕಲಿಗರು ಸಾದರು ಧಾರ್ಮಿಕ ಆಚರಣೆ, ವಿಭಜನೆ, ಲಾಕುಳ ಶೈವ ಪಂಥದ ಗೊರವರು, ಮೊದಲಾದ ಸಂಗತಿಗಳನ್ನು ಚರ್ಚಿಸುತ್ತದೆ.

ಎಚ್.ಎಮ್.ಆರ್.ಗೌಡ ಅವರ 'ದಕ್ಷಿಣ ಭಾರತದಲ್ಲಿ ಕುರುಂಬರು' (ಹಾಲತೊರೆ ಪುಟ ೧೨೩) ಲೇಖನದಲ್ಲಿ ಗುಜರಾತ್, ಮಹಾರಾಷ್ಟ್ರ, ಮಧ್ಯಪ್ರದೇಶ, ಒರಿಸ್ಸಾ, ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು, ಕೇರಳ ಮುಂತಾದ ಪ್ರದೇಶಗಳ ಕುರುಬರ ಇತಿಹಾಸವನ್ನು ನಿಖರವಾದ ಆಕರಗಳಿಂದ ರಚಿಸಲಾಗಿದೆ. ಗಡ್ಡಿ, ಪಾಲರು, ಧನಗರರು, ಬರವಾಡ, ಗಡೇರಿಯಾ, ಭಗೇಲರು, ಮುಂತಾದ ಹೆಸರುಗಳು, ಕುರುಬರನ್ನು ದಕ್ಷಿಣ ಭಾರತದಲ್ಲಿ ಗೊಂಡರು, ಹಟಕಾರ, ಖಿಲಾರಿ, ಹಾಲುಮತ, ರಾಜಗೊಂಡ, ಹೆಗ್ಗಡೆ, ಒಡೆಯರು, ಯಾದವರು, ಹಂಡೆ ಕುರುಬರು ಈ ಹೆಸರುಗಳಿಂದ ಕರೆಯುತ್ತಿರುವುದನ್ನು ಗುರುತಿಸಲಾಗಿದೆ. ಜಿಂಜಿಯ ಪಾಳೆಯಗಾರರು ಮತ್ತು ಸಂಸ್ಕೃತಿ, ಪಲ್ಲವರು ಮತ್ತು ಸಂಸ್ಕೃತಿ, ಕಲಾ ಸಂಪತ್ತು, ಕ್ರಿ.ಶ. ೧೦ರಿಂದ ೧೩ನೆಯ ಶತಮಾನದವರೆಗಿನ ಪಲ್ಲವರು, ವಿಜಯನಗರ ಸಾಮ್ರಾಜ್ಯ (೧೩೩೬-೧೫೬೫) ಇಂದೋರಿನ ಹೊಳ್ಕರ ರಾಜಮನೆತನ ಇತ್ಯಾದಿ ರಾಜವಂಶಗಳ ಆಡಳಿತವನ್ನು ಈ ಲೇಖನದಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ.

ಶಿವಪ್ಪ ನೀರಲಗಿ ಅವರ 'ಕುರುಬರೇ ವಿಜಯನಗರದ ಸಂಸ್ಥಾಪಕರು' (ಹಾಲತೊರೆ ಪುಟ ೧೩೧) ಲೇಖನವು ಹೊಯ್ಸಳರ ವೀರ ಸೇನಾನಿ ಸಂಗಮನ ಐದು ಜನ ಮಕ್ಕಳ ಮೊದಲ ಮಗ ಹರಿಹರ (೧೩೩೬-೧೩೪೨) ಮೂರನೆಯ ಬುಕ್ಕರಾಯ (೧೩೫೫-೧೩೭೭) ನಾಲ್ಕನೆಯ ಮಾರಪ್ಪೊಡೆಯರ್, ಮುದ್ದಪ್ಪೊಡೆಯರ್ ಇತ್ಯಾದಿ ರಾಜರ ವಿವರಗಳೊಂದಿಗೆ ಒಡೆಯರ್-ಹೆಗ್ಗಡೆ ಪದಗಳ ಸಂಬಂಧ, ವಿದ್ಯಾರಣ್ಯರ ಜೀವನ, ಬುಕ್ಕರಾಯನ ಪರಮತ ಸಹಿಷ್ಣತೆ, ಎರಡನೆಯ ಹರಿಹರ, ಪ್ರೌಢದೇವರಾಯ, ಮೊದಲಾದ ಅರಸರ ಬಗೆಗೆ ಲೇಖಕರು ಶಾಸನಗಳ ಹಿನ್ನೆಲೆಯಿಂದ ಚರ್ಚಿಸಿ ಪೂರಕವಾಗಿ ದಾಖಲೆಗಳನ್ನು ಒದಗಿಸಿದ್ದಾರೆ. ನಿಕೋಲೋ ಕೌಂಟಿಯ ವರ್ಣನೆ, ರಜಾಕನ ವರ್ಣನೆ, ಪ್ರೌಢದೇವರಾಯನ ಸಾಹಿತ್ಯಯುಗ, ೧೪೮೬ರಲ್ಲಿ ವಿಜಯನಗರದ ಸಂಗಮ ವಂಶ ಅಸ್ತಂಗತವಾದ ಸಂಗತಿಗಳನ್ನು ಸಾಕ್ಷಾಧಾರಗಳ ಮೂಲಕ ವಿವರಿಸಲಾಗಿದೆ.

ಕುರುಬರ ಚರಿತ್ರೆಯ ಲೇಖನಗಳೊಂದಿಗೆ ಒಡೆಯರ ಹೆಗ್ಗಡೆಯವರ ಎರಡು ಕೃತಿಗಳನ್ನು ಆಕರಗಳಾಗಿ ನಾವಿಲ್ಲಿ ಅಭ್ಯಸಿಸಬಹುದಾಗಿದೆ. 'ಹಾಲುಮತ ಕುರುಬ ಜನಾಂಗದ ಇತಿಹಾಸ' (೨೦೦೫) ಕೃತಿಯ ಆರು ಅಧ್ಯಾಯಗಳನ್ನು ಹೊಂದಿದ್ದು ೨೦೦೫ರಲ್ಲಿ ಪ್ರಕಟಗೊಂಡಿದೆ. ಮೊದಲ ಅಧ್ಯಾಯವು 'ಹಾಲುಮತ ಕುರುಬ ಜನಾಂಗ : ಹುಟ್ಟು ವಿಕಾಸ ಮತ್ತು ಬೆಳವಣಿಗೆ' ಎಂಬ ಶೀರ್ಷಿಕೆಯನ್ನು ಹೊಂದಿದೆ. ಕುರುಬರ ಸಾಂಸ್ಕೃತಿಕ ಪ್ರಾಚೀನತೆ ಕುರುಬ ಜನಾಂಗದ ಮೂಲ ಭಾಷಿಕ ವ್ಯಾಖ್ಯಾನ ಹಾಲುಮತ ಸಂಸ್ಕೃತಿ ವಿವರ, ಭಾರತದ ಮೂಲ ನಿವಾಸಿಗಳು ಕುರುಬರು, ಭಾಷೆ ನೆರವಿನಿಂದ ಕುರುಬರನ್ನು ಗುರುತಿಸುವ ಪ್ರಯತ್ನ ಇಲ್ಲಿದೆ. ಕ್ಷತ್ರಿಯರು ಪಲ್ಲವರು, ತಮಿಳು ಕುರುಬರು ಜೇನು ಕುರುಬರು ಮತ್ತು ಕಾಡು ಕುರುಬರ ಬಗೆಗೆ ಹೇಳುತ್ತ ಕಾಡು ಕುರುಬರ ಮದುವೆ ಪದಗಳು, ಹೊಸಗೆ ಪದಗಳನ್ನು ಸಂಗ್ರಹಿಸಲಾಗಿದೆ.

ಎರಡನೆಯ ಅಧ್ಯಾಯವು 'ಕುರುಬ ಜನಾಂಗದ ಧಾರ್ಮಿಕ ಸಾಮಾಜಿಕ ಬದುಕು' ಎಂಬ ತಲೆಬರಹ ಹೊಂದಿದೆ. ಕುರುಬ ಜನಾಂಗದ ಧಾರ್ಮಿಕ ಜೀವನ, ಮೈಲಾರಲಿಂಗನ ಪೌರಾಣಿಕ ನೆಲೆಯ ವಿವರಗಳು,

ಮಣಿಚೂಲ ಪರ್ವತದ ರಾಕ್ಷಸನ ಸಂಹಾರ, ಗೊರವರಾದ ಶಿವನ ಭಕ್ತವರ್ಗ, ಮೊದಲಾದವುಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಪೂಜಾರರು, ಈರರು, ದಾಸಯ್ಯಗಳು, ಚೌಡಿಕೆಯವರು, ಒಡೆಯರು, ಬೀರೇಶ್ವರ, ಬೀರಭದ್ರ ವೀರಭದ್ರನಾಗಿ ಬದಲಾದದ್ದು, ಬೀರದೇವರ ೨೨ ದೇವಸ್ಥಾನಗಳಿರುವ ಊರುಗಳು (ಪುಟ ೬೭) ಕುರುಬ ಜನಾಂಗದ ಸಾಮಾಜಿಕ ಜೀವನ, ವರ್ಗೀಕರಣ, ಕುಲಗಳು, ಗೋತ್ರಗಳು ಮೊದಲಾದವನ್ನು ಪರಿಚಯಿಸಲಾಗಿದೆ. ಕುರುಬ ಜನಾಂಗದ ವಿವಾಹ, ಶೋಭನ.ಶಾಸ್ತ್ರಗಳು ಕುರುಬರಲ್ಲಿಯ ವಿಧವಾ ವಿವಾಹ, ಆಹಾರ ಪದ್ಧತಿ, ವಸ್ತ್ರ ವಿನ್ಯಾಸ, ವೃತ್ತಿ, ಜನನ, ಮರಣ, ಮಹಾರಾಷ್ಟ್ರದ ಧನಗಾರರು, ಸಾಮಾಜಿಕ ಸಂಪ್ರದಾಯಗಳು, ಮಹಿಳೆಯರ ಸ್ಥಾನಮಾನ ಮುಂತಾದ ವಿಷಯಗಳ ತಲಸ್ಪರ್ಶಿ ವಿವರಗಳನ್ನು ಹೊಂದಿದೆ.

ಕುರುಬ ಜನಾಂಗದಿಂದ ಏರ್ಪಟ್ಟ ಹೊರಹರಿವು, ಭರತಖಂಡದ ಆರ್‍ಯೀಕರಣ, ಹಾಲುಮತ ಸಮುದಾಯದ ವಿವರಗಳ ಪಟ್ಟಿ(ಪುಟ ೧೧೨), ಹಾಲುಮತ ಪರಿವರ್ತನ ಕ್ರಿಯೆ, ಹಾಲುಮತ ಸಮುದಾಯದ ಮೇಲ್ಮುಖ ಮತ್ತು ಕೆಳಮುಖವಾಗುವ ವಿಘಟನಾ ಕ್ರಿಯೆ, ಇಂಥ ಹಲವಾರು ಹೊಸ ವಿಷಯಗಳನ್ನು ಅಧ್ಯಾಯ ಮೂರರಲ್ಲಿ ಗುರುತಿಸಬಹುದು. ಅಧ್ಯಾಯ ನಾಲ್ಕರಲ್ಲಿ 'ಭಾರತಿಯ ಜನಜೀವನಕ್ಕೆ ಕುರುಬ ಜನಾಂಗದ ಕೊಡುಗೆ' ಎಂಬ ವಿಷಯವನ್ನು ಚರ್ಚಿಸಲಾಗಿದೆ. ಕುರುಬ ಜನಾಂಗದ ರಾಜಕೀಯ, ಇತಿಹಾಸ, ಧಾರ್ಮಿಕ ಸಾಮಾಜಿಕ ಜೀವನ ಸಾಹಿತ್ಯ ಮತ್ತು ಸಾಂಸ್ಕೃತಿಕ ಕೊಡುಗೆ, ಡೊಳ್ಳು ಕುಣಿತ, ಪೌರಾಣಿಕ ಹಿನ್ನೆಲೆಯ ಡೊಳ್ಳಿನ ಉಗಮ ಮೊದಲಾದ ವಿವರಗಳನ್ನು ಹೊಂದಿದೆ. ಐದನೆಯ ಅಧ್ಯಾಯವು ಕುರುಬ ಜನಾಂಗದ ಸಮಕಾಲೀನ ಆರ್ಥಿಕ ಸ್ಥಿತಿಗತಿ ಆರ್ಥಿಕ ಬೆಳವಣಿಗೆ ಶಿಕ್ಷಣ ಮತ್ತು ಉದ್ಯೋಗದ ಸಮಸ್ಯೆಗಳು ಮಹಿಳಾ ಶಕ್ತಿ ಸಂವರ್ಧನೆ, ಜನಾಂಗದ ಅಭಿವೃದ್ಧಿಯಲ್ಲಿ ಕರ್ನಾಟಕ ಪ್ರದೇಶದ ಕುರುಬ ಸಂಘದ ಪಾತ್ರ, ಕಾಗಿನೆಲೆ ಕನಕಪೀಠದ ಕುರಿತು ಅಭಿಪ್ರಾಯ, ರಾಜಕೀಯ ನಾಯಕರ ಕರ್ತವ್ಯಗಳು ಮೊದಲಾದ ವಿಷಯಗಳ ವಿವರಗಳೊಂದಿಗೆ ಹಾಲುಮತದ ಸಮಗ್ರ ಪ್ರಗತಿಗಾಗಿ ಸಲಹೆ ಸೂಚನೆಗಳನ್ನು ತಿಳಿಸಲಾಗಿದೆ.

ಸಾಕ್ಷಾಧಾರಗಳ ಸಹಿತ ಕುರುಬ ಸಮಾಜದ ಸಮಗ್ರ ವಿವರಗಳನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಶಂಬಾ ಅಧ್ಯಾಯನಗಳಲ್ಲಿ ವ್ಯಕ್ತವಾಗಿರುವ ಊಹೆ, ಪ್ರಮಾಣ, ವಿಚಾರಗಳನ್ನು ಬಳಸಿಕೊಂಡು ಕುರುಬ ಜನಾಂಗದ ಚರಿತ್ರೆಯನ್ನು ಇಲ್ಲಿ ಪುನರ್ ರಚಿಸಲಾಗಿದೆ. ಜನಾಂಗೀಯ ಅಧ್ಯಯನ ಭವಿಷ್ಯಕ್ಕೊಂದು ಅಭಿವೃದ್ಧಿ ಪಥ ದೊರಕಿಸಿಕೊಡುವ ಉದ್ದೇಶ ಹೊಂದಿದೆ. ಅಭಿವೃದ್ಧಿ ಕುರಿತಂತೆ ಹೊಸ ಸಂವೇದನೆಗಳು ವಿಚಾರಗಳನ್ನು ಮೂಡಿಸುವಲ್ಲಿ ಈ ಕೃತಿ ದಿಕ್ಸೂಚಿಯಾಗಿದೆ.

ಪ್ರೊ. ಒಡೆಯರ್ ಡಿ. ಹೆಗ್ಗಡೆಯವರ ಇನ್ನೊಂದು ಕೃತಿ 'ಕುರುಬ ಜನಾಂಗದ ರಾಜವಂಶಗಳು' ಎಂಬ ೬೪ ಪುಟಗಳ ಲಘು ಕೃತಿಯು ೨೦೦೫ರಲ್ಲಿ ಪ್ರಕಟಗೊಂಡಿದೆ. ಲೇಖಕರು ಹಾಲುಮತದ ಚಾರಿತ್ರಿಕ, ಪೌರಾಣಿಕ, ರಾಜಕೀಯ, ಐತಿಹಾಸಿಕ ಹೀಗೆ ವಿಭಿನ್ನ ದೃಷ್ಟಿಕೋನದ ವಿಷಯಗಳನ್ನು ವಿಶೇಷ ರೀತಿಯಲ್ಲಿ ಚರ್ಚೆಗೆ ಒಳಪಡಿಸಿದ್ದಾರೆ.

ಶಾತವಾಹನರು, ಪಲ್ಲವರು, ಕದಂಬರು, ರಾಷ್ಟ್ರಕೂಟರು, ರಟ್ಟರು, ಚಾಲುಕ್ಯರು ಮೊದಲಾದ ಪ್ರಾಚೀನ ಭಾರತದ ಕುರುಬ ಜನಾಂಗದ ರಾಜವಂಶಗಳ ವಿವರಗಳನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ದೇವಗಿರಿಯ ಹೊಯ್ಸಳರು, ಸಂಗಮವಂಶ(ಕರ್ನಾಟಕ ಸಾಮ್ರಾಜ್ಯ), ಹೊಳ್ಕರರು, ಗಾಯಕವಾಡರು, ಇತ್ಯಾದಿ ಮಧ್ಯಕಾಲೀನ ಭಾರತದ ಕುರುಬ ಮೂಲದ ರಾಜವಂಶಗಳಾದ ಮೈಸೂರಿನ ಒಡೆಯರು ಮೊದಲಾದ ವಿಷಯಗಳನ್ನು ವಿದ್ವಾಂಸರು ಸಾಕ್ಷಾಧಾರಗಳೊಂದಿಗೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಚರಿತ್ರೆಯ ವಿಷಯಗಳ ಮಂಡನೆಗೆ ಪೂರಕ ಮಾಹಿತಿಗಾಗಿ ಮೇಲಿಂದ ಮೇಲೆ ವಿದ್ವಾಂಸರ ಹೇಳಿಕೆಗಳನ್ನು ತಮ್ಮ ಕೃತಿಯಲ್ಲಿ ಬಳಸಿ ಸಾಕ್ಷಾಧಾರಗಳ ಸಹಿತ ಸ್ಪಷ್ಟಪಡಿಸಿರುವುದನ್ನು ಗುರುತಿಸಬಹುದು.

ಹೀಗೆ ಕುರುಬರ ಅರಸುಮನೆತನ, ರಾಜವಂಶಸ್ಥರು, ಅವರ ಭೌಗೋಳಿಕ ವ್ಯಾಪ್ತಿ, ಆಡಳಿತಕ್ರಮ, ಸಾಧನೆಗಳನ್ನು ಪರಿಚಯಿಸುವ ಈ ಕಿರುಕೃತಿಗಳು ಹಾಗೂ ಲೇಖನಗಳು ಕುರುಬರ ರಾಜಕೀಯ ಚರಿತ್ರೆಯನ್ನು ತಿಳಿದುಕೊಳ್ಳಲು ನೆರವಾಗುತ್ತವೆ. ಆದರೆ ಪರಿಪೂರ್ಣವಾದ ಕುರುಬರ ರಾಜಕೀಯ ಇತಿಹಾಸವನ್ನು ರಚನೆ ಮಾಡುವ ಅಗತ್ಯತೆಯನ್ನು ಈ ಆಕರಗಳು ನಮಗೆ ಸೂಚನೆಯನ್ನು ನೀಡುತ್ತವೆ. ಅಂಥ ಇತಿಹಾಸದ ಕೃತಿಗಳು ಈಗ ರಚನೆಯಾಗಬೇಕಾಗಿದೆ.

೩. ಗುರುಪರಂಪರೆ

ಯಾವುದೇ ಸಮುದಾಯ ತನ್ನ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ನೆರವೇರಿಸಿಕೊಳ್ಳಲು ಗುರುವರ್ಗವನ್ನು ಹೊಂದಿರುವುದನ್ನು ಕಾಣಬಹುದು. ನಾಮಕರಣ, ಮದುವೆ, ಮರಣಗಳಂಥ ಧಾರ್ಮಿಕ ಚಟುವಟಿಕೆಗಳು ಗುರುಗಳು ನೇತೃತ್ವದಲ್ಲಿ ನಡೆದುಕೊಂಡು ಬರುತ್ತವೆ. ಇದಕ್ಕೆ ಹಾಲುಮತ ಸಮುದಾಯವು ಹೊರತಾಗಿಲ್ಲ, ಈ ಸಮುದಾಯ ತನ್ನ ಸಾಮಾಜಿಕ ಧಾರ್ಮಿಕ ವಿಧಿಗಳನ್ನು ಪೂರೈಸುವುದಕ್ಕಾಗಿ 'ಒಡೆಯರು' ಎಂಬ ಗುರುವರ್ಗವನ್ನು ಹೊಂದಿದೆ. ಗುರುವಿನವರು, ಅಯ್ಯನವರು, ಮಠದವರು ಎಂದು ಪರ್ಯಾಯವಾಗಿ ಕರೆಸಿಕೊಳ್ಳುವ ಇವರ ಹಿನ್ನೆಲೆ ಅತ್ಯಂತ ಪ್ರಾಚೀನವಾದುದು.

ರೇವಣಸಿದ್ಧ, ಶಾಂತಮುತ್ತಯ್ಯ, ಸಿದ್ಧರಾಮ, ಸಿದ್ಧಮಂಕ (ಮರುಳಸಿದ್ಧ) ಅಮೋಘಸಿದ್ಧ ಮೊದಲಾದವರು ಕುರುಬರ ಗುರು ಪರಂಪರೆಯಲ್ಲಿ ಅಗ್ರಗಣ್ಯರು. ಈ ಪರಂಪರೆಯವರನ್ನು 'ಒಡೆಯರು' ಎಂಬ ಹೆಸರಿನಿಂದ ಈಗಲೂ ಕರೆಯುತ್ತಾರೆ. ಈ ಗುರು ಪರಂಪರೆಯ ಬಗೆಗೆ ನಡೆದ ಅಧ್ಯಯನಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ಅವಲೋಕನ ಇಲ್ಲಿ ಮಾಡಲಾಗಿದೆ.

ಶಾಂತಮುತ್ತಯ್ಯ

ಕುರುಬರ ಗುರು ಪರಂಪರೆಯಲ್ಲಿ ಶಾಂತಮುತ್ತಯ್ಯನಿಗೆ ಅಗ್ರಸ್ಥಾನ. ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕು ಸರೂರು ಗ್ರಾಮ ಈತನ ಮೂಲ ನೆಲೆ. ಈ ಗ್ರಾಮದಿಂದ ಒಂದು ಕಿ.ಮೀ. ಅಂತರದಲ್ಲಿ ಊರ ಹೊರಗೆ ಈತನ ಹೆಸರಿನ ಗದ್ದುಗೆಯಿದೆ. ಪ್ರತಿವರ್ಷ ಜಾತ್ರೆ, ಉತ್ಸವ ವೈಭವದಿಂದ ಜರುಗುತ್ತವೆ.

ಶಾಂತಮುತ್ತಯ್ಯನ ಸಂಪ್ರದಾಯದ ಒಡೆಯರನ್ನು 'ಶಾಂತೊಡೆಯರು' ಎಂದು ಕರೆಯುತ್ತಾರೆ. ಈಗಲೂ ಈ ಸಂಪ್ರದಾಯದ ಗುರುಗಳಾದ ಈ ಶಾಂತೊಡೆಯರು ರೇವಣಸಿದ್ಧೇಶ್ವರ ಮಠದ ಪೀಠಾಧಿಪತಿಗಳಾಗಿ ಕಾರ್ಯನಿರ್ವಹಿಸುತ್ತಾರೆ.

'ತಗರ ಪವಾಡ' ಶಾಂತಮುತ್ತಯ್ಯನ ಚರಿತ್ರೆಯನ್ನು ದೀರ್ಘವಾಗಿ ಹೇಳುವ ಕೃತಿಯಾಗಿದೆ. ಸಿರವಾಳ, ತುರುವೆಕೆರೆ ಶಾಸನಗಳಲ್ಲಿ ಈತನ ಪವಾಡಮಯ ಕಥೆಗಳು ನೆಲಸಿವೆಯಾದರೂ ಅನೇಕ ಚಾರಿತ್ರಿಕ ಸಂಗತಿಗಳು ದಾಖಲೆಯಾಗಿವೆ. ಈ ಎಲ್ಲ ಆಕರಗಳನ್ನು ಬಳಸಿಕೊಂಡು ಎಂ.ಎಂ. ಕಲಬುರ್ಗಿ ಅವರು 'ಕುರುಬರ ಗುರು ಶಾಂತಮುತ್ತಯ್ಯ' (ಮಾರ್ಗ ೪, ೨೦೦೪) ಎಂಬ ಸಂಶೋಧನಾತ್ಮಕ ಲೇಖನವನ್ನು ಪ್ರಕಟಿಸಿದ್ದಾರೆ.

ವಿ.ಆರ್. ಹನುಮಂತಯ್ಯನವರ ಕುರುಬರ ಚರಿತ್ರೆಯಲ್ಲಿ ವಧುವರರಿಗೆ ಹೇಳುವ ಆಶೀರ್ವಚನ ರೂಪದ ಪಠ್ಯ ಅಧ್ಯಯನ ಯೋಗ್ಯವಾಗಿದೆ ಎಂದು ಭಾವಿಸಿ, ಎಂ.ಎಂ. ಕಲಬುರ್ಗಿ ಅವರು ಶಾಂತಮುತ್ತಯ್ಯನ ಇತಿವೃತ್ತವನ್ನು ವಿವಿಧ ಆಕರಗಳ ನೆರವಿನಿಂದ ರೂಪಿಸಲು ಇಲ್ಲಿ ಪ್ರಯತ್ನಿಸಿದ್ದಾರೆ. ತಗರ ಪವಾಡದಲ್ಲಿ ನಿರೂಪಗೊಂಡ ಶಾಂತಮುತ್ತಯ್ಯನ ಕಥಾನಕವನ್ನು ಹೇಳುತ್ತಾ ಕೊನೆಗೆ "ಈ ಕೃತಿಯ ಶಾಂತಮುತ್ತಯ್ಯನೆಂದರೆ ಸರೂರ ಶಾಂತಮುತ್ತಯ್ಯ, ರೇವಣಸಿದ್ಧನು ಶಾಂತಯ್ಯನ ಗುರುವೆಂಬ ಸೂಚನೆ ಈ ಕೃತಿಯಲ್ಲಿದ್ದು ಇದು ಕವಿಯ ತಪ್ಪು ತಿಳುವಳಿಕೆ ಎಂದು ತೋರುತ್ತದೆ. ಇಂಥ ಹೇಳಿಕೆಗಳು ಇದಕ್ಕೆ ವಿರುದ್ಧವಾದ ಹೇಳಿಕೆಗಳು ಇಷ್ಟೇ ಏಕೆ ಇವರು ತಂದೆ ಮಕ್ಕಳೋ ಗುರುಶಿಷ್ಯರೋ ಎಂಬ ಸಂದೇಹಗಳು ಅಲ್ಲಲ್ಲಿ ಕೇಳಿಬರುತ್ತಿದೆ. ಶಾಸನಗಳ ಪ್ರಕಾರ ಶಾಂತಮುತ್ತಯ್ಯನ ಶಿಷ್ಯ ರೇವಣಸಿದ್ಧನೆಂದು ತಿಳಿದು ಬರುತ್ತದೆ. ಹೀಗಿದ್ದೂ ರೇವಣಸಿದ್ಧನು ಶಿಷ್ಯನೋ ಮಗನೋ ಎಂಬ ಸಂದೇಹ ಉಳಿದುಕೊಳ್ಳುತ್ತದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. ಅದೇನೆ ಇರಲಿ ಶಾಂತಮುತ್ತಯ್ಯ ಕುರಿತು ಅನೇಕ ಹೊಸ ಸಂಗತಿಗಳು ಕ್ರಮಬದ್ಧವಾಗಿ ಇಲ್ಲಿ ಹೇಳಲಾಗಿದೆ. ಶಾಂತಮುತ್ತಯ್ಯನ ಹೆಚ್ಚಿನ ಅಧ್ಯಯನ ಕೈಗೊಳ್ಳಲು ಕೆಲವು ಸುಳಿವುಗಳನ್ನು ಸಹ ಇಲ್ಲಿ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ರಾಜಶ್ರೀ ಪಾಟೀಲ ಅವರು "ಸರೂರು ಶಾಂತಮುತ್ತಯ್ಯ: ಒಂದು ಅಧ್ಯಯನ" ಎಂಬ ಸಂಪ್ರಬಂಧವನ್ನು ೨೦೦೮ರಲ್ಲಿ ಎಂ.ಫಿಲ್ ಪದವಿಗಾಗಿ ಸಿದ್ಧಪಡಿಸಿದ್ದಾರೆ. ಈ ಪ್ರಬಂಧವು ಐದು ಅಧ್ಯಾಯಗಳ ವಿಸ್ತಾರವನ್ನು ಪಡೆದಿದ್ದು ಶಾಂತಮುತ್ತಯ್ಯನ ಸಮಗ್ರ ಪರಿಚಯವನ್ನು ಮಾಡಿಕೊಡುತ್ತದೆ. ಮೊದಲ ಅಧ್ಯಾಯ ಉದ್ದೇಶ, ವ್ಯಾಪ್ತಿ ಸ್ವರೂಪಗಳ ವಿವರಗಳಿವೆ. ಎರಡನೆಯ ಅಧ್ಯಾಯನದಲ್ಲಿ ಶಾಂತಮುತ್ತಯ್ಯನು ೧೧ನೆಯ ಶತಮಾನದ ಕೊನೆಯಿಂದ ೧೨ನೆಯ ಶತಮಾನದ ಅಂತ್ಯದ ದಶಕದವರೆಗೆ ಬಾಳಿರಬಹುದೆಂದು ಊಹಿಸಲಾಗಿದೆ. ಸರೂರಿನ ಸ್ಥಳನಾಮದ ಬಗೆಗೆ ಚರ್ಚಿಸಲಾಗಿದೆ. ಶಾಂತಮುತ್ತಯ್ಯನ ತಂದೆ-ತಾಯಿ, ಬಾಲ್ಯ, ಯೌವ್ವನ, ಮದುವೆ, ಲಿಂಗದೀಕ್ಷೆ ಗುರು ಪರಂಪರೆಯ ವಿವರ, ರೇವಣಸಿದ್ಧರ ಇತಿವೃತ್ತ ವಿಚಾರ ಶಾಂತಮುತ್ತಯ್ಯನ ನೆಲೆಗಳಾದ ಸರೂರು ಬಸವಕಲ್ಯಾಣ ಶಿರವಾಳ ಕ್ಷೇತ್ರಗಳನ್ನು ಪರಿಚಯಿಸಲಾಗಿದೆ.

ಮೂರನೆಯ ಅಧ್ಯಾಯವು ಹಾಲುಮತ ಕಾವ್ಯಪುರಾಣಗಳಾದ ತಗರ ಪವಾಡ, ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ, ಚೆನ್ನಬಸವ ಕವಿಯ ಹಾಲುಮತ ಪುರಾಣ, ವೀರಣ್ಣ ದಂಡೆ ಅವರ ಸಂಪಾದಿತ ಜನಪದ ಹಾಲುಮತ ಮಹಾಕಾವ್ಯ ಇತ್ಯಾದಿಗಳಲ್ಲಿ ನಿರೂಪಗೊಂಡ ಶಾಂತಮುತ್ತಯ್ಯನ ಇತಿವೃತ್ತವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅಲ್ಲದೆ 'ಶ್ರೀ ಗುರು ಶಾಂತವಿಜಯ' ಎಂಬ ಪೌರಾಣಿಕ ನಾಟಕವನ್ನು ವಿಮರ್ಶೆಗೆ ಒಳಪಡಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ಹಾಲುಮತದ ಆಚರಣೆಗಳಾದ ಮದುವೆ, ಶವಸಂಸ್ಕಾರ, ಉತ್ಸವ, ಜಾತ್ರೆ ದೇವತಾರಾಧನೆ, ಕಂಥಾಧಾರಣ ಸೇವೆ, ಉಣ್ಣೆ ಸಂಗ್ರಹ, ಕಂಥೆ ನೇಯ್ಗೆ ವಿಧಾನ, ಒಡೆಯರ ಹೇಳಿಕೆಗಳು, ಸರೂರಿನ ಸಂಪ್ರದಾಯಗಳು ಮೊದಲಾದವನ್ನು ತಲಸ್ಪರ್ಶಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಐದನೆಯ ಅಧ್ಯಾಯವು ಕುರುಬರ ಗುರು ವರ್ಗ, ಕುರುಬ ಸಂಸ್ಕೃತಿಯಲ್ಲಿನ ಬದಲಾವಣೆ (ಸಂಸ್ಕೃತೀಕರಣ) ತಾಂತ್ರಿಕ ಪಂಥದ ನಾಯಕನಾಗಿ ಶಾಂತಮುತ್ತಯ್ಯ, ಶಾಂತೊಡೆಯರ ಪ್ರಸ್ತಾಪ ಹೀಗೆ ವಿವಿಧ ವಿಷಯಗಳ ಸ್ಥೂಲ ಪರಿಚಯ ಮಾಡಿಕೊಡುತ್ತದೆ. ಕೃತಿಯ ಅಂತ್ಯದಲ್ಲಿ ಶಿರವಾಳ ಶಾಸನ, ತುರುವೆಕೆರೆ ಶಾಸನಗಳ ಪಠ್ಯ ಮತ್ತು ಕುರುಬ ದೈವಗಳು, ಮಠಗಳ ವಿಶೇಷ ಛಾಯಾಚಿತ್ರಗಳನ್ನು ಪೂರಕವಾಗಿ ಕೊಡಲಾಗಿದೆ. ಹೀಗೆ ಶಾಂತಮುತ್ತಯ್ಯನ ಸಮಗ್ರ ಚರಿತ್ರೆಯನ್ನು ನಿರೂಪಿಸುವ ಸಂಪ್ರಬಂಧ ಇದಾಗಿದೆ.

ಶಿಕ್ಷಕ ಉಮೇಶ. ಹ.ಹೊಸ್ಕೇರಿ ಅವರು ೨೦೦೮ರಲ್ಲಿ 'ಶಾಂತಮುತ್ತಯ್ಯ ಮತ್ತು ಸಿದ್ಧರ ಪವಾಡಗಳು' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ೩೭ ಪುಟಗಳ ಈ ಕೃತಿಗೆ ಹಾಲುಮತದ ಕಾವ್ಯ ಪುರಾಣಗಳು, ಚಾರಿತ್ರಿಕ ಕೃತಿಗಳೂ ಆಕರಗಳಾಗಿವೆ.

ಪಂಚ ಪೀಠಗಳ ಉತ್ಪತ್ತಿ, ಕೊಲ್ಲಿಪಾಕಿಯ ಲಿಂಗೋದ್ಭವದಿಂದ ರೇವಣಸಿದ್ಧರ ಜನನ, ಶಾಂತಮುತ್ತಯ್ಯನಿಗೆ ಮೂರಡಿಯ ಕಂತೆಯ ಒಡೆಯರು ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆಯುವ ವರ, ಕಲ್ಲಿನ ಕೆರೆಯಲ್ಲಿ ಶಾಂತಮುತ್ತಯ್ಯನ ಶಿವಧ್ಯಾನ, ಕೊಲ್ಲಾಪುರಕ್ಕೆ ಹೋಗುವಾಗ ಹಾದಿಯ ಕುಟಿಲಸಿದ್ಧರನ್ನು ನರಿಕುರಿಗಳನ್ನಾಗಿಸುವ, ರಾಕ್ಷಸ ಮುಂಡಾಸುರನ ಸಂಹಾರ ಹೀಗೆ ರೇವಣಸಿದ್ಧರ ಪವಾಡಗಳನ್ನು ವಿವರಿಸಲಾಗಿದೆ. ಶಾಂತಮುತ್ತಯ್ಯನ ಧ್ಯಾನಸ್ಥಾನವಾದ ಕಲ್ಲಿನ ಕೆರೆಗೆ ಸರೂರು ಎಂದು ಕರೆಯಲು ಕಾರಣ, ಕಲ್ಯಾಣದಲ್ಲಿ ಶಾಂತಮುತ್ತಯ್ಯನ ತಗರ ಪವಾಡ, ಮರುಳಸಿದ್ಧರ ತಪಸ್ಸು ಶಿವಪದ್ಮನಿಂದ ಕಲ್ಯಾಣಕ್ಕೆ ವರ್ಗಾವಣೆ, ಮರುಳಸಿದ್ಧರಿಗೆ ಶಿವಪಾರ್ವತಿ ದರ್ಶನ, ಕಲ್ಯಾಣದಿಂದ ಹೊರಹಾಕಲ್ಪಟ್ಟ ಕುರುಬರು ಪುನಃ ಪ್ರವೇಶ ಪಡೆಯಲು ಶಿವನಿಂದ ಒಪ್ಪಿಗೆ, ಏಳು ದಿನಸಿನ ಕಂಟಿಯ ಮೇಲೆ ನಿಂತು ಹೇಳಿಕೆ ಹೇಳುವ ವರ (ಪುಟ ೧೮) ೬೩ ಮಂದಿ ಶರಣರ ಎದುರಿನಲ್ಲಿ ಗೂಳಿ ಮತ್ತು ಟಗರಿನ ಪವಾಡ, ಶಿವಪದ್ಮನ ವಂಶಜರು ಕಟ್ಟಿಸಿರುವ ಏಳು ಕಳಸದ ಗುಡಿ, ಜಾಡಿಯ ಮೇಲೆ ಕುಳಿತು ಸಿದ್ಧಯ್ಯನವರು ಕೃಷ್ಣಾನದಿ ದಾಟುವ ಪವಾಡ, ಅಂಬಿಗನಿಂದ ಕಳಸ ಸ್ಥಾಪನೆ (ಪುಟ ೩೦) ಸರೂರಿನಲ್ಲಿ ಶಿವರಾತ್ರಿಯ ಅಮವಾಸ್ಯೆಯಂದು ಸಿದ್ಧರ ಜಡೆಗೆ ಎಣ್ಣೆ ಇಂಗಿಸುವ

ಸ್ಥಳದ ಮಹಿಮೆ, ಸಿದ್ಧರ ಪವಾಡ, ಗುರುಮಠದವರ ಕಾರ್ಯಗಳು, ಹನ್ನೆರಡು ಸ್ಥಳಗಳಲ್ಲಿ ಗುರುಮಠಗಳ ಸ್ಥಾಪನೆ, ಜಾತ್ರೆ-ಉತ್ಸವ ಮತಬಾಂಧವರ ಅಭಿವೃದ್ಧಿಗಾಗಿ ಸೂಚನೆಗಳು ಮತ್ತು ಪರಿಹಾರೋಪಾಯಗಳು ಮೊದಲಾದ ವಿವರಗಳನ್ನು ನೀಡಲಾಗಿದೆ. ಕೆಲವು ಶಬ್ದದೋಷ, ವಾಕ್ಯ ದೋಷ, ಪದ ಪುನರಾವರ್ತನೆ ಹೀಗೆ ಹಲವಾರು ದೋಷಗಳ ಮಧ್ಯೆಯೂ ಸರೂರು ಕ್ಷೇತ್ರದ ಸಂಪೂರ್ಣ ಮಾಹಿತಿಯನ್ನು ಈ ಚಿಕ್ಕ ಹೊತ್ತಿಗೆ ಪೂರೈಸುತ್ತದೆ.

ರೇವಣಸಿದ್ಧ ಪರಂಪರೆ

ರೇವಣಸಿದ್ಧ ಕುರುಬ ಹಾಗೂ ಲಿಂಗಾಯಿತ ಸಮಾಜಗಳೆರಡಕ್ಕೂ ಪೂಜ್ಯನೀಯ ವ್ಯಕ್ತಿಯಾಗಿದ್ದಾನೆ. ಈತನ ಬಗೆಗೆ ಲಿಖಿತ ಮತ್ತು ಮೌಖಿಕ ರೂಪದ ಆಕರಗಳು ಅಪಾರ ಪ್ರಮಾಣದಲ್ಲಿ ದೊರೆಯುತ್ತವೆ. ಹೀಗಿದ್ದೂ ಈವರೆಗೆ ಈತನ ಇತಿವೃತ್ತ ವಿಚಾರವನ್ನು ಬಿಡಿಬಿಡಿಯಾಗಿ ಲೇಖನಗಳ ರೂಪದಲ್ಲಿ ಅನೇಕ ವಿಷಯಗಳನ್ನು ಚರ್ಚಿಸುತ್ತ ಬಂದಿರುವುದನ್ನು ನೋಡಬಹುದು. ಸುಧಾಕರ, ಎಂ.ಎಂ. ಕಲಬುರ್ಗಿ, ಎಸ್. ಜಿ.ಸಿದ್ಧರಾಮಯ್ಯ, ಎಫ್.ಟಿ. ಹಳ್ಳಿಕೇರಿ ಮೊದಲಾದವರು ರೇವಣಸಿದ್ಧನ ಇತಿವೃತ್ತವನ್ನು ಬೇರೆ ಬೇರೆ ಆಯಾಮಗಳಲ್ಲಿ ಚರ್ಚಿಸಿದ್ದಾರೆ.

ಪ್ರೊ. ಸುಧಾಕರ ಅವರ 'ರೇವಣಸಿದ್ದೇಶ್ವರ' (ಹಾಲತೊರೆ ೨೦೦೩) ಎಂಬ ಲೇಖನವು ಪದ್ಮಣ್ಣನ ನಾಲ್ಕನೆಯ ಮಗ ಶಾಂತಮುತ್ತಯ್ಯ. ಅವನ ಮಗ ರೇವಣಸಿದ್ಧ ಎಂಬ ಭಿನ್ನ ಅಭಿಪ್ರಾಯ ಹೊಂದಿದೆ. ರೇವಣಸಿದ್ಧರನ್ನು ಸಿದ್ದೇಶ್ವರ, ಕರಿಸಿದ್ದೇಶ್ವರ, ಕಾಡಸಿದ್ಧೇಶ್ವರ, ಚನ್ನಮಲ್ಲೇಶ, ಸಿದ್ಧರ ಮಲ್ಲಯ್ಯ, ದೊಡ್ಡಯ್ಯ, ಭೀಮೇಶ್ವರ, ಡಿಳ್ಳಿಯಪ್ಪ ಎಂದು ಹಲವಾರು ನಾಮಗಳಿಂದ ಕರೆಯಲ್ಪಡುವುದಾಗಿ ತಿಳಿಸಿದ್ದಾರೆ.[೧೨] ಕರಿಸಿದ್ದೇಶ್ವರ ಎಂಬ ಹೆಸರು ಬೀರಪ್ಪನದಾಗಿದೆ. ಲೇಖಕರ ಹೇಳಿಕೆಯಂತೆ ರೇವಣಸಿದ್ಧ ಮತ್ತು ಬೀರಪ್ಪ ಅಭಿನ್ನರಾಗುತ್ತಾರೆ. ಇದು ಗೊಂದಲಕ್ಕೆ ಎಡೆ ಮಾಡುತ್ತದೆ. ಹಲವಾರು ಶಾಸನಗಳನ್ನು ಆಕರಗಳಾಗಿ ಬಳಸಿಕೊಂಡು ರೇವಣಸಿದ್ಧರು ಬಸವಣ್ಣ ಅಲ್ಲಮರ ಸಮಕಾಲೀನರೆಂದು ಸ್ಪಷ್ಟಪಡಿಸಿದ್ದಾರೆ. ರೇವಣಸಿದ್ಧರ ಸಾಮಾಜಿಕ ಕಳಕಳಿ, ರೇವಣಸಿದ್ಧರು ಚಾಲ್ತಿಗೆ ತಂದ ಮದುವೆಯ ಆಶೀರ್ವಚನ, ರೇವಣಸಿದ್ಧರ ೨೩ ಮುಖ್ಯ ನೆಲೆಗಳ ವಿವರಗಳಿವೆ. ಅಲ್ಲದೆ ಪ್ರಮುಖ ಗುರುಮಠಗಳ ಮಾಹಿತಿ ನೀಡಿರುವದು ಈ ಲೇಖನದ ವಿಶೇಷತೆಯಾಗಿದೆ.

ಡಾ. ಎಂ.ಎಂ.ಕಲಬುರ್ಗಿ ಅವರ 'ರೇವಣಸಿದ್ಧ' (ಮಾರ್ಗ-೪, ೨೦೦೪) ಸಂಪ್ರಬಂಧ ಚಾರಿತ್ರಿಕ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಇವನು ಚಾಲುಕ್ಯ ವಿಕ್ರಮಾದಿತ್ಯ (೧೦೭೬-೧೧೨೬) ಮೂರನೆಯ ಸೋಮೇಶ್ವರ, ತೈಲಪ ಕಲಚುರಿ ಬಿಜ್ಜಳನವರೆಗೆ ಬಾಳಿದ ವಿವರಗಳನ್ನು ಶಾಸನ ಮತ್ತು ಕಾವ್ಯಗಳಿಂದ ಸ್ಪಷ್ಟಪಡಿಸಿದ್ದಾರೆ. ರೇವಣಸಿದ್ಧ ಜೀವಂತವಾಗಿರುವಾಗಲೇ (೧೧೨೭ ಕಕ್ಕೇರಿ ಶಾಸನ) ಅವನ ಸಿದ್ಧ ಸಂಪ್ರದಾಯವು ಲಾಕುಳಶೈವದಲ್ಲಿ ಆರಂಭಿಸಿದ್ದಿತೆಂದು ಹೇಳಬಹುದಾಗಿದೆ. ಇದರ ಮುಂದುವರಿಕೆಯಾಗಿ ಎಂ.ಎಂ.ಕಲಬುರ್ಗಿ ಅವರ

'ರೇವಣಸಿದ್ಧ: ಚರಿತ್ರೆಯ ಎರಡು ಸಂಪ್ರದಾಯಗಳು' (ಲಿಂಗಾಯತ ೩-೧೨) ಎಂಬ ಲೇಖನವು ಐತಿಹ್ಯೀಕರಣ ಕ್ರಿಯೆಯ ಹಿಂದಿನ ಭಕ್ತ ಮನಸ್ಸು, ಪುರಾಣೀಕರಣ ಕ್ರಿಯೆಯ ಹಿಂದಿನ ಆಚಾರ್ಯ ಮನಸ್ಸುಗಳ ಕೆಲಸ, ಎರಡೂ ಕವಲುಗಳಲ್ಲಿ ಬೆಳೆದ ರೇವಣಸಿದ್ಧರ ಚರಿತ್ರೆಯ ಕುರಿತು ಹೀಗೆ ಅಭಿಪ್ರಾಯಪಟ್ಟಿದ್ದಾರೆ. "ರೇವಣಸಿದ್ಧ, ಸಿದ್ಧರಾಮ ಮೂಲತಃ ಜಾತಿಯಿಂದ ಕುರುಬರು. ಪಂಥದಿಂದ ಸಿದ್ಧರು. ಇವರಲ್ಲಿ ದೀಕ್ಷೆಹೊಂದಿ ಸಿದ್ಧರಾಮ ಶರಣಧರ್ಮವನ್ನು ಸೇರಿದನು. ಈ ಹೊತ್ತಿಗೆ ವಯೋವೃದ್ಧನಾಗಿದ್ದ ಕಾರಣ ರೇವಣಸಿದ್ಧನನ್ನು ಅವನ ಸಿದ್ಧ ಪಂಥೀಯರು ಭಕ್ತಿ ಪ್ರಜ್ಞೆಯಿಂದ ಶುದ್ಧಶೈವರು ಆಚಾರ್ಯ ಪ್ರಜ್ಞೆಯಿಂದ ಚಿತ್ರಿಸುವ ಪ್ರಯತ್ನ ನಡೆಸಿದರು. ಸಿದ್ಧ ಮತ್ತು ಆಚಾರ್ಯ ಸಂಪ್ರದಾಯದ ರೇವಣಸಿದ್ಧ ಭಕ್ತ ಪ್ರಜ್ಞೆಯಲ್ಲಿ ಮಲ್ಲಣ್ಣ ಕವಿಯ ರೇವಣಸಿದ್ಧ ಕಾವ್ಯವನ್ನು ಚರ್ಚೆಗೆ ಒಳಪಡಿಸಿ ತೌಲನಿಕವಾಗಿ ಹರಿಹರ ಕವಿಯ ಕೊಲ್ಲಿಪಾಕದ ಲಿಂಗೋದ್ಭವ, ಅಗಸ್ತ್ಯದರ್ಶನ ಮೊದಲಾದ ಪ್ರಸಂಗಗಳನ್ನು ಮಲ್ಲಣ್ಣ ಕವಿಯ ಕಾಣದ ವಿಷಯವನ್ನು ಚರ್ಚೆಗೆ ಒಳಪಡಿಸಿದ್ದಾರೆ. ಇವರ ಇನ್ನೊಂದು ಲೇಖನ (ಸಿದ್ಧರಾಮ ಶಿವಯೋಗಿಯಾದ ರೇವಣಸಿದ್ಧನನ್ನು ಶಿವಾಚಾರ್ಯ ಮಾಡಿದರು) ಅನೇಕ ಮಹತ್ವದ ಹೊಳಹುಗಳನ್ನು ಹೊರಹಾಕುತ್ತದೆ. ಸಿದ್ಧಮಂಕ ಚರಿತೆಗೆ ಸೊಲ್ಲಾಪುರದ ಸಿದ್ಧರಾಮ ಚರಿತೆಯಂದೂ ತಗರ ಪವಾಡ ಕೃತಿಗೆ ರೇವಣಸಿದ್ಧ ಪುರಾಣವೆಂದೂ ಲಿಪಿಕಾರರು ಕರೆದುದು ಇವರಿಬ್ಬರ ಕುರುಬ ಜಾತಿಯನ್ನು ದೃಢಪಡಿಸುತ್ತದೆ. ಇದಲ್ಲದೆ ಚಿಕ್ಕನಾಯಕನಹಳ್ಳಿಯಲ್ಲಿರುವ ಸಿದ್ಧರಾಮನ ಶಿಷ್ಯ ಸಿದ್ಧಮಂಕನ ಮಠಕ್ಕೆ ಲಿಂಗಾಯತರು, ರೇವಣಸಿದ್ಧೇಶ್ವರ ಮಠಕ್ಕೆ ಕುರುಬರೂ ಪೂಜಾರಿಗಳಾಗಿದ್ದಾರೆ. ಇದಕ್ಕೆ ಸಿದ್ಧರಾಮನೂ ಕೊನೆಯಲ್ಲಿ ನಾಥಪಂಥ ಮತ್ತು ಕುರುಬಜಾತಿ ತ್ಯಜಿಸಿ ಲಿಂಗಾಯತನಾದುದು, ರೇವಣಸಿದ್ಧನು ಕೊನೆಯವರೆಗೂ ನಾಥಪಂಥೀಯ ಕುರುಬನಾಗಿಯೇ ಉಳಿದುದು ಕಾರಣವಾಗಿರಬಹುದು ಎಂಬುದು ಲೇಖಕರ ಅಭಿಪ್ರಾಯವಾಗಿದೆ.

ಎಸ್.ಜಿ.ಸಿದ್ಧರಾಮಯ್ಯ ಅವರ 'ಜನಪದ ಕವಿಕಂಡ ರೇವಣಸಿದ್ಧ' (ಗುರುವಂದನ ೨೦೦೭) ಲೇಖನವು ಕುರುಬರಿಗೂ ಮತ್ತು ಬಣಜಿಗರಿಗೂ ನಡೆದ ಮೇಲು-ಕೀಳಿನ ಸಂಘರ್ಷದಲ್ಲಿ ರೇವಣಸಿದ್ಧರು ಕುರುಬರ ಪರವಹಿಸಿ ಹೋರಾಡುವ ಮತ್ತು ಕುರುಬರು ತಮ್ಮ ಗುರುವೆಂದು ಸ್ವೀಕರಿಸುವ ವಿಚಾರಗಳನ್ನು ಜಾನಪದ ಹಾಡಿನ ಮೂಲಕ ವಿವರಿಸುತ್ತದೆ. ರೇವಣಸಿದ್ಧ ಬಣಜಿಗರ ವಿರುದ್ಧ ಸಿಟ್ಟಿನಿಂದ ತೀವ್ರವಾದ ತಪಸ್ಸಿಗೆ ತೊಡಗಲು ಪಾದದಿಂದ ನೆತ್ತಿಯವರೆಗೆ ಪ್ರಕೃತಿಯ ಸಮಸ್ತ ಜೀವರಾಶಿ ಬೆಳೆಯುವುದನ್ನು ಲೇಖಕರು ಹೀಗೆ ಗುರುತಿಸಿದ್ದಾರೆ. "ಸಾಮಾಜಿಕ ಸ್ಥಾನಮಾನ ಹಕ್ಕಿಗಾಗಿ ನಡೆಸಿದ ಹೋರಾಟದ ಸಂದರ್ಭದಲ್ಲಿ ಸಾಧನೆಯ ಕ್ರಿಯಾರೂಪವಾಗಿ ಬಂದಿರುವ ಈ ಒಂದು ವರ್ಣನೆ ಒಂದು ಪ್ರತಿಮಾಧ್ವನಿಯಿಂದ ಕೂಡಿದೆ."[೧೩] (ಪುಟ ೧೮೩) ಕಾಳಗವನ್ನು ಗೆದ್ದ ರೇವಣ್ಣ ಪಲ್ಲಕ್ಕಿ ಏರಿ ಕಲ್ಯಾಣ ಪಟ್ಟಣದೊಳಗೆ ಕುರುಬರ ಗುರುತನ ಪಡೆಯುವ ಶಾಸನವಾಗಿ ಕೆತ್ತಿಸುವ ಕುರಿತು ಜನಪದ ಅಭಿವ್ಯಕ್ತಿಯಲ್ಲಿ ಹೀಗೆ ಹರಿದಿದೆ.

ಕಲ್ಯಾಣ ಪಟ್ಟಣದೊಳಗೆ ಅಲ್ಲೇನ ಚೋಜಿಗ

ಅಲ್ಲಿ ನಮ್ಮ ಗುರುವೀಗೆ ಗುರುತಾನ | ಆದವೆಂದು

ಕಲ್ಲೀಗೆ ಸಾಸಾಣ ವೊಡುದಾವು

ಅಲ್ಲದೆ ತಮ್ಮ ಗುರುವಿಗಾಗಿ ಮಠ ಕಟ್ಟಿಸುವ ಭಕ್ತರ ಮನೆಗೆ ಆಗಮಿಸಿ ಅವರಿಗೆ ಆಶೀರ್ವದಿಸಿ ಕಂತೆಸೇವೆ ಮುಗಿಸಿಕೊಂಡು ಆಗ ತೆಗೆದ ಬಾವಿಯಲ್ಲಿ ಬಂದ ನೀರಿನಿಂದ ಶಿವಪೂಜೆ ಸಲ್ಲಿಸುವ ಕಲ್ಯಾಣದ ಪ್ರಸ್ತಾಪ, ಬಿಜ್ಜಳನ ಪ್ರಸ್ತಾಪ, ಒಡೆಯರು ಮತ್ತು ಒಡೇರಮ್ಮ ಮುಂತಾದ ವಿಷಯಗಳನ್ನು ವಿವಿಧ ನೆಲೆಯಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

ಡಾ. ಎಫ್.ಟಿ.ಹಳ್ಳಿಕೇರಿ ಅವರ 'ರೇವಣಸಿದ್ಧ ಪರಂಪರೆಯ ಹಾಲುಮತ ಮಠಗಳು' (ಇತಿಹಾಸ ದರ್ಶನ ಸಂಪುಟ ೨೦-೨೦೦೫) ಎಂಬ ಲೇಖನವು ಹಾಲುಮತ ಗುರುಪರಂಪರೆಯ ಒಂದು ಕವಲನ್ನು ಚರ್ಚಿಸುತ್ತದೆ. ಕುರುಬರು ಮತ್ತು ಲಿಂಗಾಯತರು ಎರಡೂ ಮತದವರೂ ಆರಾಧ್ಯದೈವವೆಂದು ಪೂಜಿಸುವ ರೇವಣಸಿದ್ಧರ ವಿಚಾರವನ್ನು ವ್ಯಾಪಕ ಕ್ಷೇತ್ರಕಾರ್‍ಯದ ಮೂಲಕ ಮೌಖಿಕ ಮತ್ತು ಲಿಖಿತ ದಾಖಲೆಗಳನ್ನು ಸಂಗ್ರಹಿಸಿ ಹಲವಾರು ವಿಷಯಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ರೇವಣಸಿದ್ಧ ಶಾಂತಮುತ್ತಯ್ಯ ಮತ್ತು ಅಮೋಘಸಿದ್ಧರ ಸಂಪ್ರದಾಯಗಳನ್ನು ಹಾಲುಮತ ಗುರುಪರಂಪರೆಯ ಮಠಗಳ ಭೌಗೋಳಿಕ ವ್ಯಾಪ್ತಿ ಮಠಗಳು ಜಿಲ್ಲೆ ಮತ್ತು ತಾಲೂಕುಗಳ ಪಟ್ಟಿ ಛಾಯಾಚಿತ್ರಗಳ ಪೂರಕ ಮಾಹಿತಿಯೊಂದಿಗೆ ಚರ್ಚಿಸಲಾಗಿದೆ. ಒಡೆಯರ ಹೇಳಿಕೆಗಳು, ಒಡೆಯರ ಸಂಪ್ರದಾಯಗಳು, ಸಮಾಜದ ಹಿತಕ್ಕಾಗಿ ತೊಡಗಿಸಿಕೊಂಡ ಒಡೆಯರ ವಿವರಗಳು, ಮಠ ಮಠಾಧಿಪತಿಗಳ ಇಂದಿನ ಸ್ಥಿತಿಗತಿ, ಸಮಸ್ಯೆಗಳು ಮತ್ತು ಪರಿಹಾರೋಪಾಯಗಳನ್ನು ಹೇಳಿರುವುದು ಔಚಿತ್ಯಪೂರ್ಣವಾಗಿದೆ.

ಎಫ್.ಟಿ. ಹಳ್ಳಿಕೇರಿ ಅವರ ಇನ್ನೊಂದು ಲೇಖನ 'ಅಲಿಖಿತ ಆಕರಗಳಲ್ಲಿ ರೇವಣಸಿದ್ಧ' (ಇತಿಹಾಸ ದರ್ಶನ ಸಂಪುಟ, ೨೫-೨೦೦೫) ಎಂಬ ಸಂಪ್ರಬಂಧದಲ್ಲಿ ಲೇಖಕರ ವ್ಯಾಪಕ ಕ್ಷೇತ್ರಕಾರ್ಯದಿಂದ ಮೌಖಿಕ ಕಥೆ, ಹಾಡು, ಪದ, ಡೊಳ್ಳಿನ ಹಾಡು, ಜಾನಪದ ಹಾಡು, ಟಗರ ಜೋಗಿಗಳ ಕಥೆ ಮುಂತಾದ ಅಲಿಖಿತ ಆಕರಗಳಲ್ಲಿಯ ರೇವಣಸಿದ್ಧನನ್ನು ಗುರುತಿಸಲಾಗಿದೆ. ಜನಪದ ಪದಗಳಲ್ಲಿ ರೇವಣಸಿದ್ಧರ ಸಮಾಜ ಸೇವೆ, ಕಲ್ಯಾಣಕ್ಕೆ ಬಂದದ್ದು, ಕೆರೆ ಕಟ್ಟಿಸಿದ್ದು, ಕುರುಬರು ಕರಿಯ ಕಂಥೆಯನ್ನು ಅರ್ಪಿಸುವ ಹೀಗೆ ಅನೇಕ ಘಟನೆಗಳನ್ನು ಲಕ್ಷ್ಮಜ್ಜಿಯ ಹಾಡಿನಿಂದ ಹೆಕ್ಕಿ ತೆಗೆದಿದ್ದಾರೆ. ಹಾಲುಮತ ಸಂಸ್ಕೃತಿ, ಸಂಸ್ಕಾರಗಳ ಪ್ರಚಾರದಲ್ಲಿ ಟಗರ ಜೋಗಿಗಳ ಪಾತ್ರವನ್ನು ಗುರುತಿಸಲಾಗಿದೆ. ಹಬ್ಬ ಹರಿದಿನಗಳಲ್ಲಿ ನಡೆಯುವ ಆಚರಣೆಗಳಾದ ಕಂಥಾಧಾರಣ ಸೇವೆ, ತೋಪು ಜಾತ್ರೆ, ಪಲ್ಲಕ್ಕಿ ಮೆರವಣಿಗೆ ಮುಂತಾದವುಗಳನ್ನು ಸವಿಸ್ತಾರವಾಗಿ ಪರಿಚಯಿಸಲಾಗಿದೆ. ೧೨ ವರ್ಷಗಳಿಗೊಮ್ಮೆ ನಡೆಯುವ ತೋಪು ಜಾತ್ರೆಯು ಕುರುಬ ಸಮುದಾಯದ ಪರಂಪರೆಯನ್ನು

ಸಾಂಕೇತಿಕವಾಗಿ ಆಚರಿಸುವ ಹಬ್ಬವಾಗಿದೆ. ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರು ಹಾಲುಮತ ಪುರಾಣದ (೧೯೧೦) ಪದ್ಯದಲ್ಲಿ ಬರುವ ಜನ್ಮಾಂತರದ ಕಥೆಯನ್ನು ಲೇಖಕರು ಸಂಗ್ರಹಿಸಿದ್ದಾರೆ.

ರಕ್ಕಸಿ ಪ್ರಾಣವ ಬಿಡುವ ಸಮಯದೊಳು

ಒಕ್ಕಣಿಸಿದಳು ವಾಕ್ಯದಲಿ

ಗಕ್ಕನೇ ಕುರಿಯ ಹಿಂಡಿಗೆ ನಾನು ತೋಳವಾಗಿ

ಶಿಕ್ಷೆ ಮಾಡದೆ ಬಿಡೆನೆನುತ

ರಾಕ್ಷಸಿಯೇ ಒಡೆಯರ ಮೈಯಲ್ಲಿ ಬಂದು ಪೂಜಾ ಸಮಯದಲ್ಲಿ ಕುರಿಗಳನ್ನು ತಿನ್ನುವ ಸಂಪ್ರದಾಯ ಈಗಲೂ ಆಚರಣೆಯಲ್ಲಿರುವ ಚಾರಿತ್ರಿಕ ಘಟನೆಯೊಂದನ್ನು ಈ ಲೇಖನ ವಿವರಿಸುತ್ತದೆ.

ಹೀಗೆ ರೇವಣಸಿದ್ಧನ ಇತಿವೃತ್ತ ವಿಚಾರ, ಭೌಗೋಳಿಕ ನೆಲೆ, ಅಲಿಖಿತ ಆಕರಗಳಲ್ಲಿ ಮೂಡಿ ಬಂದ ರೇವಣಸಿದ್ಧನ ಚಿತ್ರಣ ಈತನ ಮುಂದುವರಿಕೆಯಾಗಿ ಶಾಂತೊಡೆಯರ ಸಂಪ್ರದಾಯದ ಮಠಗಳು, ಮಠಗಳ ಮಠಾಧಿಪತಿ(ಒಡೆಯರು)ಗಳ ಇಂದಿನ ಸ್ಥಿತಿಗತಿ ಮುಂದಿನ ಭವಿಷ್ಯದ ಬಗ್ಗೆ ವಿದ್ವಾಂಸರು ಚರ್ಚಿಸಿರುವುದು ಗಮನಾರ್ಹವಾಗಿದೆ. ವಿಶೇಷವಾಗಿ ಕುರುಬರ ಕುಲಗುರು ರೇವಣಸಿದ್ಧನೇ ೧೪-೧೫ನೇಯ ಶತಮಾನದ ಹೊತ್ತಿಗೆ ರೇಣುಕಾಚಾರ್ಯನನ್ನಾಗಿ ಮಾಡಿರುವುದನ್ನು ಡಾ.ಎಂ.ಎಂ. ಕಲಬುರ್ಗಿ ಹಾಗೂ ಡಾ. ಎಫ್.ಟಿ. ಹಳ್ಳಿಕೇರಿ ಅವರು ಸಕಾರಣವಾಗಿ ತಮ್ಮ ಲೇಖನಗಳಲ್ಲಿ ಗುರುತಿಸಿದ್ದಾರೆ.

ಶ್ರೀ ರೇವಣಸಿದ್ಧೇಶ್ವರ ಮತ್ತು ಬೀರೇಶ್ವರರು - ಪ್ರೊ. ಒಡೆಯರ್ ಡಿ. ಹೆಗ್ಗಡೆ (೨೦೦೫)

ಪ್ರೊ. ಒಡೆಯರ್ ಡಿ. ಹೆಗ್ಗಡೆ ಅವರು ಈ ಕೃತಿಯನ್ನು ೨೦೦೫ರಲ್ಲಿ ಪ್ರಕಟಿಸಿದ್ದಾರೆ. ೯೬ ಪುಟಗಳ ಕೃತಿಯು ರೇವಣಸಿದ್ಧ ಮತ್ತು ಬೀರೇಶ್ವರರ ಸಮಗ್ರ ಪರಿಚಯ ಮಾಡಿಕೊಡುತ್ತದೆ. ಮುಖ್ಯವಾಗಿ ದಕ್ಷಿಣ ಕರ್ನಾಟಕದ ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿಯೂ ಬೀರಪ್ಪನ ದೇವಾಲಯ ಅಲ್ಲಿ ನಡೆಯುವ ಜಾತ್ರೆ ಉತ್ಸವ ಆಚರಣೆ ಹಾಗೂ ಸಂಪ್ರದಾಯಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

ರೇವಣಸಿದ್ಧ ಮತ್ತು ಬೀರಪ್ಪ ಇಬ್ಬರು ಧಾರ್ಮಿಕ ಪುರುಷರ ಪರಿಚಯವನ್ನು ಈ ಕೃತಿ ಕಟ್ಟಿಕೊಡುತ್ತದೆ. ಪ್ರಸ್ತುತ ರೇವಣಸಿದ್ಧರ ಅಧ್ಯಯನವನ್ನು ಕೈಕೊಂಡ ಕಾರಣ ಮೊದಲ ಆದಿ ಭಾಗವನ್ನು ಇಲ್ಲಿ ಅಧ್ಯಯನಕ್ಕೊಳ ಪಡಿಸಲಾಗಿದೆ. ಲೇಖಕರು ಹಲವಾರು ಕೃತಿಗಳನ್ನು ಆಕರಗಳಾಗಿ ಬಳಸಿ ಕ್ಷೇತ್ರಕಾರ್ಯದಿಂದ ಮಾಹಿತಿ ಸಂಗ್ರಹಿಸಿದ್ದಾರೆ. ರೇವಣಸಿದ್ಧರ ಜೀವಿತ ಕಾಲವನ್ನು ೧೦೧೦-೧೧೧೭ ಎಂದು ತಿಳಿಸಿದ್ದಾರೆ. ಆದರೆ ಕಲಬುರ್ಗಿ ಅವರು ೧೧೨೭-೧೨೦೮ ಎಂದು ಊಹಿಸಿದ್ದಾರೆ. ಇಲ್ಲಿ ೧೧೦ ವರ್ಷಗಳ ವ್ಯತ್ಯಾಸವು ಕಂಡುಬರುತ್ತದೆ. ಹೀಗಾಗಿ ರೇವಣಸಿದ್ಧನ ಕಾಲದ ಬಗ್ಗೆ ಸ್ಪಷ್ಟ ನಿಲುವನ್ನು ತಳಿಯಬೇಕಾಗಿದೆ.

ಹೀಗೆ ನಾಥಸಿದ್ಧರಾಗಿ ನಂತರ ಶೈವಸಿದ್ಧರಾದ ವಿಷಯಗಳನ್ನು ವಿವರಿಸಲಾಗಿದೆ. ಕೊಲ್ಲಿಪಾಕಿಯ ಸಂಸ್ಕಾರಕ್ರಿಯೆ, ಹುಟ್ಟಿನ ಬಗೆಗೆ ವೈದಿಕ ವ್ಯಾಖ್ಯಾನ, ವೇದಶಾಸ್ತ್ರ, ಯೋಗವಿದ್ಯೆ ಕಲಿಯುವ, ಶಿವಯೋಗಿಯಾದ, ದೀನದಲಿತರ ಬಂಧುವಾದ, ಶೈವ ಧರ್ಮ ಪ್ರಚಾರಕರಾಗಿ, ಕುರುಬ ಜನಾಂಗದ ಪ್ರಥಮ ಜಗದ್ಗುರುವಾಗಿ ರೇವಣಸಿದ್ಧನ ಮಹತ್ವವನ್ನು ಈ ಕೃತಿ ತಿಳಿಸುತ್ತದೆ.

ಕುರುಬರ ಕುಲಗುರು ರೇವಣಸಿದ್ಧ-ಚಂದ್ರಕಾಂತ ಬಿಜ್ಜರಗಿ (೨೦೦೯)

ಚಂದ್ರಕಾಂತ ಬಿಜ್ಜರಗಿ ಅವರು ೨೦೦೯ರಲ್ಲಿ ಬಿಜಾಪುರದ ಶೈಲಚಂದ್ರ ಪ್ರಕಾಶನದಿಂದ ಈ ಕೃತಿಯನ್ನು ಪ್ರಕಟಿಸಿದ್ದಾರೆ. ೪೫೦ ಪುಟಗಳ ಕೃತಿಯಲ್ಲಿ ರೇವಣಸಿದ್ಧರ ಸ್ಥೂಲ ಪರಿಚಯವನ್ನು ೧೭ ವಿಭಾಗಗಳಲ್ಲಿ ಅಳವಡಿಸಲಾಗಿದೆ. ಕೇವಲ ಪ್ರವೃತ್ತಿಯ ಬೆನ್ನು ಹತ್ತಿ ಸತ್ಯವನ್ನು ಶೋಧಿಸುವಂಥ ದೊಡ್ಡ ಕೆಲಸವನ್ನು ಬಿಜ್ಜರಗಿ ಅವರು ಮಾಡಿದ್ದಾರೆ. ಸಂಶೋಧನಾತ್ಮಕ ನೆಲೆಯಲ್ಲಿ ತಲಸ್ಪರ್ಶಿ ಅಧ್ಯಯನವನ್ನು ಲೇಖಕರು ಕೈಕೊಂಡಿದ್ದಾರೆ. ಸಿದ್ಧಪರಂಪರೆ, ರೇವಣ ಪದದ ಪ್ರಾಚೀನತೆ, ಪವಾಡಗಳು, ಲಿಂಗೋದ್ಭವ, ಕುಲ ಮತ್ತು ಮೂಲಸ್ಥಾನ, ಜೀವಿತ ಕಾಲ, ಪತ್ನಿಯರು, ರೇಣುಕ ಮತ್ತು ಅಗಸ್ತ್ಯರ ಸಂಬಂಧ, ವಿಭೀಷಣ ವಿಷಯ, 'ಸಿದ್ಧಾಂತ ಶಿಖಾಮಣಿ' ಕೃತಿಯ ಕರ್ತೃ-ಕಾಲ-ಪಂಚಾಚಾರ್ಯರ ಪರಿಕಲ್ಪನೆ, ವೀರಶೈವ ಮತ್ತು ಜಂಗಮ ಪದಗಳ ಪ್ರಾಚೀನತೆ, ಸಾಮಾಜಿಕ ಕಳಕಳಿ ಮೊದಲಾದ ವಿಷಯಗಳು ವಿಶ್ಲೇಷಣೆಗೆ ಒಳಪಟ್ಟಿವೆ.

ಹಲವಾರು ಪ್ರದೇಶಗಳ ವ್ಯಾಪಕ ಕ್ಷೇತ್ರಕಾರ್ಯ ಕೈಕೊಂಡು ಹಳ್ಳ-ಕೊಳ್ಳ, ಗುಡ್ಡ-ಬೆಟ್ಟ, ಮಳೆ-ಗಾಳಿ, ಚಳಿ-ಬಿಸಿಲನ್ನು ಲೆಕ್ಕಿಸದೆ ಅನೇಕ ವಿಷಯಗಳನ್ನು ಸಂಗ್ರಹಿಸಿದ್ದಾರೆ. ಶಾಸನ ಗ್ಯಾಸೆಟಿಯರ್ ಹಾಗೂ ಪ್ರಕಟಿತ ಸಾಹಿತ್ಯವನ್ನು ಉಪಯೋಗಿಸಿ ಮಹತ್ವವಾದ ವಿಷಯಗಳನ್ನು ನಿರೂಪಿಸಿದ್ದಾರೆ. ಕೊನೆಯಲ್ಲಿ ವಿಶೇಷವಾದ ಛಾಯಾಚಿತ್ರಗಳನ್ನು ಕೃತಿಯ ಅಂತ್ಯದಲ್ಲಿ ಅಳವಡಿಸಿ ಚರ್ಚಿಸಿದ್ದಾರೆ.

ಆದಿರೇಣುಕ, ರೇಣುಕ, ರೇಣುಕಾಚಾರ್ಯ, ರೇವಣಾರಾಧ್ಯ ಮೊದಲಾದ ಹೆಸರುಗಳಿಂದ ಕರೆಯಲ್ಪಡುವ ರೇವಣಸಿದ್ಧರು ಕ್ರಿ.ಶ.ಪೂ. ೨೦೦೦ರಂದು ಜೀವಿಸಿರುವ ಕಲ್ಪಿತ ಕಥೆಯನ್ನು ಹೆಣೆಯಲಾಗಿದ್ದಿತು. ಈ ತಪ್ಪಾದ ಐತಿಹ್ಯಗಳಿಂದ ಸತ್ಯಸಂಗತಿಗಳನ್ನು ಈ ಕೃತಿಯ ಮೂಲಕ ಹೊರಗೆಡಹಿದ್ದಾರೆ.

ಸಿದ್ಧಪರಂಪರೆಯಲ್ಲಿ ನವಕೋಟಿಸಿದ್ಧ, ನಾಥಸಿದ್ಧರು, ಅವಧೂತಸಿದ್ಧ, ಲಕುಲೀಶ (ಪಾಶುಪತ) ಕಾಳಾಮುಖ, ಶಕ್ತಿಪೀಠಗಳ ವಿವರಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ರೇವಣಸಿದ್ಧ ಪದ ಪ್ರಾಚೀನತೆಯ ವಿಮರ್ಶೆಯಲ್ಲಿ ಲೇಖಕರು ಹೀಗೆ ಸ್ಪಷ್ಟಪಡಿಸಿದ್ದಾರೆ. 'ರೇವಣ' ಎನ್ನುವ ವ್ಯಕ್ತಿ ಸಿದ್ಧನಾಗಲಿ ಇಲ್ಲವೇ ಯಾವುದೇ ಪಂಥದ ಪ್ರಮುಖ ವ್ಯಕ್ತಿಯಾಗಲಿ ಇಲ್ಲ, ಇವರಲ್ಲಿ ಹೆಚ್ಚಿನವರು ರಾಜಕೀಯ ವ್ಯಕ್ತಿಗಳೇ ಆಗಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ೧೭ನೆಯ ಶತಮಾನದ ಪೂರ್ವದಲ್ಲಿಯೇ " 'ರೇವಣ' ಎನ್ನುವ ನಾಮವು ಜನಮಾನಸರಲ್ಲಿ ಸಾಕಷ್ಟು ಪ್ರಚಾರದಲ್ಲಿತ್ತು. ರೇವಣ ಇಲ್ಲವೆ ರೇವಣಸಿದ್ಧರ ಪ್ರಸಿದ್ಧಿಯ ಪೂರ್ವದಲ್ಲಿ ಆ ಹೆಸರು ರಾಜಕೀಯ

ಮತ್ತು ವ್ಯಾಪಾರಿ ಪ್ರಮುಖ ವ್ಯಕ್ತಿಗಳಲ್ಲಿದೆಯೇ ಹೊರತು ಧಾರ್ಮಿಕ ಪುರುಷರಿಗಲ್ಲ. ಇದರಿಂದ ಕ್ರಿ.ಶ.ಪೂ. ಇರುವರೆಂದು ನಂಬಲಾಗಿರುವ ಆದಿರೇಣುಕ ಅಥವಾ ರೇಣುಕ ಎಂಬ ಧಾರ್ಮಿಕ ಪುರುಷನ ಅಸ್ತಿತ್ವ ಅಸಂಭವ" (ಪುಟ ೩೮). ಲಿಂಗೋದ್ಭವ, ಹರಿಹರ, ಶಿವಯೋಗಿ, ಶಿವಾಚಾರ್ಯರ ಉಲ್ಲೇಖ, ಲಿಂಗದ ಹಿನ್ನೆಲೆ, ಯೋನಿಜ, ಅಯೋನಿಜ, ಕೊಲ್ಲಿಪಾಕಿ ಸೋಮನಾಥ ಕುರುಬರ ಕುಲ ಗುರುವಾದ ರೇವಣಸಿದ್ಧನ ಪ್ರಭಾವ ಪ್ರಸಿದ್ಧಿಯನ್ನು ಬಳಸಿಕೊಂಡ ಜಂಗಮರು (ಪಂಚಾಚಾರ್ಯರು) ಅವನ ಕಾಲಮಾನವನ್ನು ನಾಲ್ಕು ಯುಗಗಳ (೪೩ ಲಕ್ಷ ವರ್ಷ) ಹಿಂದಕ್ಕೆ ಒಯ್ಯುವ, ಸಿರವಾಳ ಶಾಸನದ (೧೧೮೭) ಉಲ್ಲೇಖದಿಂದ ರೇವಣಸಿದ್ಧರ ಮೂಲ ಸ್ಥಳ ಸರೂರು" ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

ಹಲವಾರು ವಿದ್ವಾಂಸರ ಹೇಳಿಕೆಗಳನ್ನು ಪೂರಕ ಮಾಹಿತಿಗಾಗಿ ಉಲ್ಲೇಖಿಸಿ ರೇವಣಸಿದ್ಧರ ಜೀವಿತ ಕಾಲವನ್ನು ಕ್ರಿ.ಶ. ೧೯೦-೧೯೫ರಿಂದ ೧೧೯೪-೧೨೦೭ ಎಂದು ಸ್ಪಷ್ಟಪಡಿಸಲಾಗಿದೆ (ಪುಟ. ೧೫೪) ಮಕ್ಕಳ ವಿಚಾರವಾಗಿ ಚೋಳ ಕುವರಿ ಸೌಂದರಿಯಿಂದ ರುದ್ರಮುನಿ, ಶ್ರೀಪತಿ ಪಂಡಿತರ ಪುತ್ರಿ ಸೋಮಲೆಯಿಂದ ಕೋಟಿ ಪಲ್ಲಾರಾಧ್ಯ ಮತ್ತು ವೇಶ್ಯೆ ಮಾಯಿಯಲ್ಲಿ ರೇವಕ್ಕ ಎಂಬ ಒಟ್ಟು ಮೂರು ಮಕ್ಕಳನ್ನು ಹೊಂದಿರುವದು ಸ್ಪಷ್ಟವಾಗುತ್ತದೆ. ಪತ್ನಿಯರ ಕುರಿತಾಗಿ ಪಂಚಬ್ರಹ್ಮೋದಯ ಭಾಷ್ಯದಲ್ಲಿ ರೇವಣಸಿದ್ಧನಿಗೆ 'ಶತೈಕ ಸ್ತ್ರೀರತಃ' ಎಂಬ ವರ್ಣನೆಯಿಂದ ಅಸಂಖ್ಯಾತ ಉಪಪತ್ನಿಯರನ್ನು ಹೊಂದಿದ್ದುದನ್ನು ಗುರುತಿಸಬಹುದು.

ಅಗಸ್ತ್ಯನನ್ನು ಚರ್ಚೆಗೆ ಒಳಪಡಿಸಿ ಹರಿಹರ, ಪಂಚಲಿಂಗಗಳನ್ನು ಚರಿತ್ರೆಕಾರರನ್ನು ಉದಾಹರಿಸಿ ಸ್ಪಷ್ಟಪಡಿಸಿದ್ದಾರೆ. ೧೫ನೆಯ ಶತಮಾನದಲ್ಲಿ ರಚನೆಗೊಂಡ 'ಸಿದ್ಧಾಂತ ಶಿಖಾಮಣಿ' (ರೇಣುಕಾಗಸ್ತ್ಯ ಸಂವಾದ) ಗ್ರಂಥ ೧೨ನೆಯ ಶತಮಾನದಲ್ಲಿ ಅಗಸ್ತ್ಯನೆಂಬ ಕಾಳಾಮುಖ ಮತಿಯನ್ನು ಕುರಿತಾದ ವಿಭೀಷಣ ಚರ್ಚೆಯಲ್ಲಿ ಭಯಂಕರವಾದ ಕಣ್ಣುಳ್ಳ ವಿರೂಪಾಕ್ಷನೇ ವಿಭೀಷಣ ಎಂದು ತೀರ್ಮಾನಿಸಲಾಗಿದೆ.

'ಸಿದ್ಧಾಂತ ಶಿಖಾಮಣಿ' ಕೃತಿಯ ಕರ್ತೃ, ಕಾಲ, ಪಂಚಾಚಾರ್ಯ ಪರಿಕಲ್ಪನೆಯ ಎರಡು ಬಗೆಗಳ ವಿವರ, ಒಂದು ಜಾತಿಗೆ ಮತಾಂತರ ಮಾಡುವ ದೀಕ್ಷೆಯಾದರೆ ಇನ್ನೊಂದು ಅನುಗ್ರಹ ದೀಕ್ಷೆ(ಮಂತ್ರ ದೀಕ್ಷೆ)ಯ ವಿವರ, ಬಾಳೆಹಳ್ಳಿ ರೇವಣಸಿದ್ಧರ ಪೀಠ, ಮರುಳಾರಾಧ್ಯ, ಪಂಡಿತಾರಾಧ್ಯ ಏಕೋರಾಮರಾಧ್ಯ, ಕಾಶಿ ವಿಶ್ವನಾಥ ಪೀಠ ಮೊದಲಾದ ವಿಚಾರಗಳನ್ನು ಚರ್ಚಿಸಿದ್ದಾರೆ. ವೀರಶೈವ ಮತ್ತು ಜಂಗಮ ಪದದ ವಿಚಾರಗಳನ್ನು ವಿಮರ್ಶೆಗೆ ಒಳಪಡಿಸಲಾಗಿದೆ. ವೀರಶೈವ ಮತ್ತು ಜಂಗಮ ಪದಗಳ ಪ್ರಾಚೀನತೆ, ಸಾಮಾಜಿಕ ಕಳಕಳಿ ಹೊಂದಿದ ರೇವಣಸಿದ್ಧ, ಗಾಣಿಗರ ಉದ್ಧಾರ, ಸೂಳೆ ಮಾಯಮ್ಮಳಿಗೆ ಬಾಳುಕೊಟ್ಟ ರೇವಣಸಿದ್ಧರ ಲೋಕಸೇವೆ ಮುಂತಾದ ವಿಷಯಗಳನ್ನು ವಸ್ತುನಿಷ್ಠವಾಗಿ ವಿಮರ್ಶೆಗೆ ಒಳಪಡಿಸಿ ರೇವಣಸಿದ್ಧರ ಚರಿತ್ರೆಗೆ ಪುರಾಣಕ್ಕೆ ಐತಿಹ್ಯಗಳಿಗೆ ಒಂದು ಸ್ಪಷ್ಟವಾದ ಚೌಕಟ್ಟು ಕಟ್ಟಿಕೊಟ್ಟಿದ್ದಾರೆ. ಹೀಗಾಗಿ ರೇವಣಸಿದ್ಧರ ಬಗೆಗೆ ಸಮಗ್ರ ಮಾಹಿತಿಯನ್ನೊಳಗೊಂಡ ಕೃತಿ ಇದಾಗಿದೆ.

ಸಿದ್ಧರಾಮ ಪರಂಪರೆ

ಸಿದ್ಧರಾಮನು ಸಹ ರೇವಣಸಿದ್ಧರಂತೆ ಹಾಲುಮತ ಮತ್ತು ಲಿಂಗಾಯತ ಪರಂಪರೆಗಳೆರಡರಲ್ಲೂ ಪೂಜಿಸಲ್ಪಡುವ ವ್ಯಕ್ತಿಯಾಗಿದ್ದಾನೆ. ಮೂಲತಃ ಕುರುಬ ಕುಲದಲ್ಲಿ ಜನಿಸಿ ಶಿವಭಕ್ತನಾಗಿ ಸಮಾಜಸೇವೆ ಸಲ್ಲಿಸಿ ಚೆನ್ನಬಸವಣ್ಣನಿಂದ ಲಿಂಗದೀಕ್ಷಿತನಾದುದನ್ನು ವಿದ್ವಾಂಸರಾದ ಎಂ.ಎಂ.ಕಲಬುರ್ಗಿ ಅವರು ಗುರುತಿಸಿದ್ದಾರೆ. ಅಲ್ಲದೆ ಡಿ.ಎಲ್.ನರಸಿಂಹಾಚಾರ್, ವೈ.ಸಿ.ಭಾನುಮತಿ, ಸಿ.ಕೆ.ಪರಶುರಾಮಯ್ಯ, ಎಫ್.ಟಿ. ಹಳ್ಳಿಕೇರಿ, ಮಲ್ಲಿಕಾರ್ಜುನ, ಶಂಕರ ಶಿ.ಕಂಬಾರ ಮೊದಲಾದ ವಿದ್ವಾಂಸರು ಸಿದ್ಧರಾಮನನ್ನು ವಿವಿಧ ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸಿದ್ದಾರೆ.

ಮಲ್ಲಿಕಾರ್ಜುನ ವಿರಚಿತ 'ವೀರಶೈವ ಪಂಚಾಚಾರ್ಯ ಚರಿತ್ರೆ' ಎಂಬ ಕೃತಿಯ ೬೪ನೆಯ ಅಧ್ಯಾಯದಲ್ಲಿ 'ಶ್ರೀ ರೇವಣಸಿದ್ಧರು ಕುರುಬರ ಗುರು' ಎಂಬ ಶೀರ್ಷಿಕೆಯಲ್ಲಿದ್ದರೆ, ೬೫ನೆಯ ಅಧ್ಯಾಯವು 'ಸೊನ್ನಲಾಪುರದ ಸಿದ್ಧರಾಮೇಶ್ವರ ದೇವರ ಚರಿತ್ರೆ' ಎಂಬ ವಿಷಯವನ್ನು ಹೊಂದಿದೆ.

ರೇವಣಸಿದ್ಧರ ಚರಿತ್ರೆಯನ್ನು ೫ ಸಂಧಿಗಳಲ್ಲಿ ವಿಸ್ತರಿಸಲಾಗಿದೆ. ಪೌರಾಣಿಕ ಆವರಣವಿದ್ದರೂ ಚಾರಿತ್ರಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ರೇವಣಸಿದ್ಧರು ಆದಿಗೊಂಡನಿಂದ ಐದು ಮೊಳ ಭೂಮಿ ಪಡೆದು ಗುಹೆ ನಿರ್ಮಿಸಿ ಅದರಲ್ಲಿ ಕುರಿಗಳನ್ನು ಹೊಗಿಸಿ ಮುತ್ತುಗದ ಮರವನ್ನು ನೆಡುವ ಹೊಸ ವಿಷಯವನ್ನು ಗುರುತಿಸಬಹುದು (ಸಂಧಿ ೨, ಪುಟ ೩೪೭). ಇನ್ನುಳಿದ ಕಥೆಯು ಇತರ ಕಾವ್ಯ ಪುರಾಣಗಳಂತೆ ಸಾಮಾನ್ಯ ಕಥೆಯನ್ನು ಹೊಂದಿದೆ.

'ವೀರಶೈವ ಪಂಚಾಚಾರ್ಯ ಚರಿತ್ರೆ' ಕೃತಿಯ ೬೫ನೆಯ ಅಧ್ಯಾಯದಲ್ಲಿ ಸಿದ್ಧಮಂಕನ ಪ್ರಸ್ತಾಪದಲ್ಲಿ ಸೊನ್ನಲಾಪುರದ 'ಸಿದ್ಧರಾಮೇಶ್ವರ ದೇವರ ಚರಿತ್ರೆ' ಎಂಬ ಶೀರ್ಷಿಕೆಯನ್ನು ಹೊಂದಿದೆ. ಸರೂರ (ಸರವರ) ಸಿದ್ಧಮಂಕನ ವಿಪರೀತ ತಪಸ್ಸು, ರೇವಣಸಿದ್ಧರ ಪವಾಡಗಳು, ರೇವಣಸಿದ್ಧರ ಆಶೀರ್ವಾದದಿಂದ ಸಿದ್ಧರಾಮನ ಜನನ, ಬಾಲ್ಯ, ಬರಡು ಕಪಿಲೆಯ ಬಸಿರಲ್ಲಿ ಬಸವ ಬರುವ ಪ್ರಸ್ತಾಪ, ಕೊಲ್ಲಿಪಾಕಿಯಲ್ಲಿ ರೇವಣಸಿದ್ಧರ ಜನನ, ಮರುಳಮಂಕನ ಉಗ್ರ ತಪಸ್ಸಿನಿಂದ ಶಿವಪ್ರತ್ಯಕ್ಷನಾಗಿ ಹೆಗ್ಗೊಂಡನಿಗೆ ಕಂಬಳಿ ತಯಾರಿಸಲು ಕಲಿಸುವ, ಅವನ ಸಹಾಯಕ್ಕೆ ತಳವಾರ ಮತ್ತು ಊಳಿಗದವಳಾದ ರಾಕ್ಷಸಿಯ ಮಗಳನ್ನು ನೇಮಿಸುವ, ಹಾಲುಬೆಣ್ಣೆ ಮಾರಿಕೊಂಡು ಜೀವಿಸುವ ಹೆಗ್ಗಗೌಡನ ಪ್ರಸ್ತಾಪ, ಚೆಂದಗೊಂಡ ಮತ್ತು ಸಿದ್ಧಮ್ಮರು ಮಂಕನು ತಪಸ್ಸು ಮಾಡುವ ಸ್ಥಳದಲ್ಲಿ ವಾಸವಾಗುವ, ಸಿದ್ಧಮಂಕನ ತಪಸ್ಸನ್ನು ವೀಕ್ಷಿಸಲು ಶರಣರೆಲ್ಲರೂ ಸೇರುವ, ಅಲ್ಲಮ ಪ್ರಭುವಿನಿಂದ ಸಿದ್ಧರಾಮನ ಅಹಂಕಾರ ಇಳಿಸುವ, ಮಂಕಯ್ಯನು ತನ್ನ ಗುರುವಾದ ಸಿದ್ಧರಾಮನಿಗೆ ಮತ್ತು ರೇವಣರಿಗೆ ಬೇಡಿಕೊಂಡ ಪ್ರಕಾರ ಸಿದ್ಧರಾಮನು ತನ್ನ ಸೀಮೆಯಲ್ಲಿ ಇರಬೇಕೆಂದು ಲಿಂಗಮುದ್ರೆಯೊತ್ತಿ, ಶಾಸನ ಬರೆದ, ಮಂಕನು ತಪಸ್ಸು ಮಾಡಿದ ಸ್ಥಳವನ್ನು ಮಾರಿ ಕಾವಲು ಕಾಯುವ ಹೆಗ್ಗೊಂಡನು ಬುಕ್ಕಗೊಂಡನೆಂಬ ಹೆಸರಿನಿಂದ ಕುರುಗೋಡಿನ ಮಾದಗೌಡನಲ್ಲಿ ಜನಿಸುವ, ಚಿಕ್ಕಯ್ಯ ಮತ್ತು ಶಾಂತಯ್ಯ

ಎಂಬ ಕುಮಾರರಿಗೆ ಹಾಲುಮತದ ಗುರುಪಟ್ಟವನ್ನು ಕಟ್ಟುವ ಮೊದಲಾದ ವಿಷಯಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಡಿ.ಎಲ್.ನರಸಿಂಹಾಚಾರ್ಯರ 'ಸಿದ್ಧರಾಮ ಚರಿತೆಯ ಸಂಗ್ರಹ' ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರ 'ಹಾಲುಮತ ಪುರಾಣ', ಮರುಳಸಿದ್ಧನ ಪರ್ಯಾಯ ನಾಮಗಳ ಕಾರಣ, ಪದ್ಮಣ್ಣನ ಮೊದಲ ಹೆಂಡತಿ ಸಿದ್ಧಮ್ಮಳ ಹತ್ತಿ ಕಂಕಣದ ೪೨ ಮಕ್ಕಳು, ಎರಡನೆಯ ಹೆಂಡತಿ ಚೆನ್ನಮ್ಮಳ ೪೨ ಉಣ್ಣೆ ಕಂಕಣದ ಮಕ್ಕಳು ಮುಂತಾದ ವಿಷಯಗಳನ್ನು ಚರ್ಚಿಸಿದ್ದಾರೆ. ಮರುಳಸಿದ್ಧ ಮತ್ತು ಸಿದ್ಧರಾಮ ಅಭಿನ್ನರೆಂಬ ಅಭಿಪ್ರಾಯವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ (ಪುಟ ೩೬೯) ಅಲ್ಲದೆ ವೀರಶೈವರ ಮೂಲ ಆಚಾರ್ಯ ಮರುಳಸಿದ್ಧರು ಮಂಕುಸಿದ್ಧರಾಗಿರುವ ಸಾಧ್ಯತೆಗಳನ್ನು ಪ್ರಸ್ತಾಪಿಸಿ, ಕೃತಿ ನಿರ್ಮಾಣ ಮಾಡಿದವನು ಗುರುಶಾಂತ ಎಂಬ ಅಭಿಪ್ರಾಯ ಸೂಚಿಸಿದ್ದಾರೆ.

'ಹಾಲುಮತದ ಸಿದ್ಧರಾಮ' ಎಂಬ ಕೃತಿಯನ್ನು ಶಂಕರ ಶಿ. ಕುಂಬಾರರು ೨೦೦೬ರಲ್ಲಿ ವಿದ್ಯಾನಿಧಿ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ೧೩೦ ಪುಟಗಳ ಕೃತಿಯು ಸಿದ್ಧರಾಮನನ್ನು ಪೌರಾಣಿಕ ವ್ಯಕ್ತಿಯಾಗಿ ಪರಿಚಯಿಸುತ್ತದೆ. ಅತ್ಯಲ್ಪ ಪ್ರಮಾಣದಲ್ಲಿ ಚಾರಿತ್ರಿಕ ವಿಷಯಗಳನ್ನು ಗ್ರಹಿಸಬಹುದಾಗಿದೆ. ರೇವಣಸಿದ್ಧರ ಆಶೀರ್ವಾದದಿಂದ ಸಿದ್ಧರಾಮನ ಜನನ, ಬಾಲ್ಯ, ಸಿದ್ಧರಾಮನಿಗೆ ಶ್ರೀಶೈಲದಲ್ಲಿ ಶಿವದರ್ಶನ, ಹಾವಿನಹಾಳದ ಕಲ್ಲಯ್ಯ, ಬೊಮ್ಮಯ್ಯ, ಮಹಾಲಿಂಗರಾಯನ ಮೊಮ್ಮಗ, ಬರಿಗಾಲಸಿದ್ಧ, ಚೆನ್ನಬಸವಣ್ಣ, ಬಸವಣ್ಣ, ನೀಲಲೋಚನೆ, ಅಮುಗಿದೇವಯ್ಯ ಮುಂತಾದ ಶರಣರೊಂದಿಗೆ ಮತ್ತು ಶಿವನೊಂದಿಗೆ ಸಿದ್ಧರಾಮನ ಒಡನಾಟ ಮೊದಲಾದ ವಿಷಯಗಳನ್ನು ವಿವರಿಸಲಾಗಿದೆ.

ಸಮಾಜ ಕಲ್ಯಾಣ ಕಾರ್ಯಗಳಾದ ಕೆರೆಕಟ್ಟಿಸುವ, ದೇವಾಲಯ ನಿರ್ಮಾಣ, ಜೀವಹೋದ ವ್ಯಕ್ತಿಗೆ ಜೀವದಾನ, ಬರಗಾಲದಲ್ಲಿ ಮಳೆ ತರಿಸುವ ಮೊದಲಾದ ಕೆಲಸಗಳಿಂದ ಜನರ ಕಷ್ಟಗಳನ್ನು ದೂರ ಮಾಡುವ ವಿವರಗಳನ್ನು ಇಲ್ಲಿ ಗುರುತಿಸಬಹುದು. ಸಿದ್ಧರಾಮನನ್ನು ಹಾಲುಮತ ಸಾಂಸ್ಕೃತಿಕ ನಾಯಕನನ್ನಾಗಿ ಗುರುತಿಸಿ ನಂತರ ವೀರಶೈವದತ್ತ ವಾಲಿದುದನ್ನು ಲೇಖಕರು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ವಿಷಯ ಸ್ಪಷ್ಟತೆಗಾಗಿ ಹಲವಾರು ವಿದ್ವಾಂಸರ ಅಭಿಪ್ರಾಯಗಳನ್ನು ಪೂರಕವಾಗಿ ಉಲ್ಲೇಖಿಸಿದ್ದಾರೆ. ಕೃತಿಯು ಚಾರಿತ್ರಿಕವಾಗಿ ಹೆಚ್ಚಿನ ಮಾಹಿತಿ ಒದಗಿಸುವುದಿಲ್ಲ. ಒಟ್ಟಿನಲ್ಲಿ ಈ ಕೃತಿಯಲ್ಲಿ ಸಿದ್ಧರಾಮನನ್ನು ಹಾಲುಮತ ಪೌರಾಣಿಕ ನಾಯಕನನ್ನಾಗಿ ಚಿತ್ರಿಸಲಾಗಿದೆ.

ಡಾ. ಎಂ.ಎಂ.ಕಲಬುರ್ಗಿ ಅವರ "ಸಿದ್ಧರಾಮ ಶಿವಯೋಗಿಯಾದ ರೇವಣಸಿದ್ಧನನ್ನು ಶಿವಾಚಾರ್ಯ ಮಾಡಿದರು" ಎಂಬ ಸಂಪ್ರಬಂಧ(ಲಿಂಗಾಯತ ೧-೪)ದಲ್ಲಿ ವಿಕಾರಿಸಿದ್ಧ ಮತ್ತು ಶಿವಸಿದ್ಧ ಎಂಬ ಎರಡು ನಾಥ ಪಂಥಗಳ ಪ್ರಕಾರಗಳಿದ್ದು ಶಿವಸಿದ್ಧವು ಒಂದೇ ಬಗೆಯಾದರೆ, ವಿಕಾರಿಸಿದ್ಧ ಅನೇಕ ಬಗೆಯಲ್ಲಿರುವುದನ್ನು ಚರ್ಚಿಸಲಾಗಿದೆ. ನಿಜನಾಮದ ರಾಮಯ್ಯ ಮತ್ತು ರೇವಣಾರು 'ಸಿದ್ಧ' ಪದವನ್ನು ಮುಂದೆ ಅಂಟಿಸಿಕೊಂಡು

ರೇವಣಸಿದ್ಧನಾದ, ಹಿಂದೆ ಅಂಟಿಸಿಕೊಂಡು ಸಿದ್ಧರಾಮನಾದ, ಜಾಮಗಾವ, ಮಂತ್ರವಾಡಿ, ಕೋಳಿಸಾಲೆ, ಸಂಗೂರು, ಚಡಚಣ ಮೊದಲಾದ ಶಾಸನಗಳಲ್ಲಿಯ 'ನಾಥ' ಪದಗಳ ಮತ್ತು ರಾಘವಾಂಕನ ಸಿದ್ಧರಾಮ ಚಾರಿತ್ರ್ಯದಲ್ಲಿಯ 'ಸಿದ್ಧರಾಮನಾಥಂ ಮನುಜನಲ್ಲಂ ಕಾರಣರುದ್ರನು' ಮೊದಲಾದ ಉಲ್ಲೇಖಗಳ ಹಿನ್ನೆಲೆಯಿಂದ ಅವನು ನಾಥ ಸಂಪ್ರದಾಯದವನೆಂದು ದೃಢಪಡಿಸಿದ್ದಾರೆ. ಅವನ ತ್ರಿವಿಧಗಳ ಮುದ್ರಿಕೆ 'ಯೋಗಿನಾಥ' ಮತ್ತು 'ಕಪಿಲಸಿದ್ಧ ಮಲ್ಲಿನಾಥ' ಎಂಬಲ್ಲಿಯ ನಾಥ ಪದವು ಪರಂಪರೆಯನ್ನು ಗುರುತಿಸುವುದಕ್ಕೆ ಪೂರಕವಾದ, ನಾಥ ಪಂಥದವರ ಕೌಟುಂಬಿಕ ಮತ್ತು ಧಾರ್ಮಿಕತೆಯಲ್ಲಿಯ ದ್ವಂದ್ವದ ಬದುಕು, ಸೊಲ್ಲಾಪುರದ ಸಿದ್ಧರಾಮನ ಮಠದ ಅರ್ಚಕರು ಕೆಲವು ವರ್ಷಗಳ ಹಿಂದೆ ಹಂಡೆಕುರುಬರಾಗಿದ್ದು, ಕುರುಬ ಸಮಾಜದ ರೇವಣಸಿದ್ಧರ ಮಠಗಳ ಮೊದಲಾದ ಸಾಕ್ಷ್ಯಾಧಾರಗಳಿಂದ ಸಿದ್ಧರಾಮ ಮತ್ತು ರೇವಣಸಿದ್ಧರು ಕುರುಬ ಜನಾಂಗದವರೆಂದು ದೃಢಪಡಿಸಿದ್ದಾರೆ.

ಕುರುಬ ಸಂಸ್ಕೃತಿಯನ್ನು ಅನಾವರಣಗೊಳಿಸುವ 'ಸಿದ್ಧಮಂಕ ಚರಿತೆ' ಮತ್ತು 'ತಗರ ಪವಾಡ'ಗಳು ರೇವಣಸಿದ್ಧ ಮತ್ತು ಸಿದ್ಧರಾಮರನ್ನು ಕುರುಬ ಜನಾಂಗದವರೆಂದು ಸ್ಪಷ್ಟಪಡಿಸುತ್ತವೆ. ಬಸವ ಚಳುವಳಿಯ ಪ್ರಭಾವಕ್ಕೆ ಒಳಗಾದ ಸಿದ್ಧರಾಮ ಸೊಲ್ಲಾಪುರದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾಲಯ ನಿರ್ಮಾಣ, ಅಷ್ಟಷಷ್ಟ ತೀರ್ಥಕೆರೆ ನಿರ್ಮಾಣದ ತರುವಾಯ ಕಲ್ಯಾಣದಲ್ಲಿ ಚೆನ್ನಬಸವಣ್ಣನಿಂದ ಲಿಂಗದೀಕ್ಷೆ ಪಡೆದು ಬಸವ ಸ್ತೋತ್ರ ತ್ರಿವಿಧಿ ರಚಿಸಿದ, ೧೨ನೆಯ ಶತಮಾನದಲ್ಲಿ ನಾಥ ಸಂಪ್ರದಾಯದ 'ಯೋಗಿ' ಶರಣ ಸಂಪ್ರದಾಯದ ಶಿವಯೋಗಿಯಾದ ವಿವರಗಳನ್ನು ವಿಶ್ಲೇಷಿಸಲಾಗಿದೆ. ಶರಣ ಸಂಪ್ರದಾಯದ ತರುವಾಯ ಧಾರ್ಮಿಕ ಸ್ಥಿತ್ಯಂತರಗಳಲ್ಲಿ ಕೃತಕ ಚತುರಾರ್ಯ ಪೀಠಕಲ್ಪನೆಯ ಹುಟ್ಟು, ಶುದ್ಧಶೈವರು ನಾಥ ಪರಂಪರೆಯಲ್ಲಿಯ ರೇವಣಸಿದ್ಧನನ್ನು ಶಿವಾಚಾರ್ಯನೆಂದು ಪ್ರಚಾರ ಮಾಡಿ ಚತುರಾರ್ಯ ಚೌಕಟ್ಟಿನಲ್ಲಿ ಅವನನ್ನು ಎಳೆದುಕೊಂಡ ೧೨ನೆಯ ಶತಮಾನದ ಸಿದ್ಧರಾಮನು ತಾನಾಗಿಯೇ ಶಿವಯೋಗಿಯಾಗಿದ್ದರೆ ೪೦೦ ವರ್ಷಗಳ ಬಳಿಕ ೧೬ನೆಯ ಶತಮಾನದಲ್ಲಿ ರೇವಣಸಿದ್ಧನನ್ನು ಶಿವಾಚಾರ್ಯರನ್ನಾಗಿಸಿದ ವಿವರಗಳನ್ನು ಚರ್ಚಿಸಲಾಗಿದೆ. ೧೩ನೆಯ ಶತಮಾನದ ಹರಿಹರ ಮತ್ತು ರಾಘವಾಂಕರ ತರುವಾಯ ಸುಮಾರು ೩೦೦ ವರ್ಷ ಯಾವ ಕಾವ್ಯದಲ್ಲಿಯೂ ಕಾಣಿಸದೆ ಒಮ್ಮಲೇ ಆಚಾರ್ಯನಂತೆ ಚಿತ್ರಣಗೊಂಡ ವೀರಶೈವಾಮೃತ ಮಹಾಪುರಾಣ (೧೫೩೦) ಗುರುರಾಜ ಚಾರಿತ್ರ(೧೬೦೦), ಚತುರಾಚಾರ್ಯ ಪುರಾಣ(೧೯೯೮), ಈ ಕೃತಿಗಳಲ್ಲಿ ರೇವಣಾಚಾರ್ಯನನ್ನಾಗಿ ಚಿತ್ರಿಸಲಾಗಿದೆ. ಅಲ್ಲದೆ ಚೆನ್ನಬಸವ ಪುರಾಣ (೧೫೮೪) ಶರಣ ಲೀಲಾಮೃತ (೧೭೫೦) ಮುಂತಾದವುಗಳಲ್ಲಿ ಅವನ ಮಗ ರುದ್ರಮುನಿಯನ್ನು ಕಲ್ಯಾಣದ ಕೊನೆಯ ದಿನಗಳಲ್ಲಿ ಶರಣನೊಂದಿಗೆ ಸಹಕರಿಸಿದವನೆಂಬಂಥ ಅನೇಕ ಸಂಗತಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

'ಹಾಲುಮತ ಕುರಿತು ಒಂದು ವಿಶಿಷ್ಟ ಕೃತಿ: ಸಿದ್ಧಮಂತ ಚರಿತೆ' ಎಂಬ ಸಂಪ್ರಬಂಧವನ್ನು ಎಫ್.ಟಿ. ಹಳ್ಳಿಕೇರಿ ಅವರು ಪ್ರಕಟಿಸಿದ್ದಾರೆ. ಸಿದ್ಧಮಂಕನ ಚರಿತ್ರೆಯನ್ನು ಸ್ಪಷ್ಟಪಡಿಸಲು ಡಿ.ಎಲ್.ನರಸಿಂಹಾಚಾರ್,

ಎಂ.ಎಂ.ಕಲಬುರ್ಗಿ ಅವರ ಉಲ್ಲೇಖಗಳನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. ಸಿದ್ಧಮಂಕ ಚರಿತೆಯ ಕರ್ತೃವಿನ ಗೊಂದಲ, ಸಿದ್ಧಮಂಕನ ಇತಿವೃತ್ತ ವಿಚಾರ, ಸರೂರ ಪರಿಸರ, ಕಂಬಳಿ ಕಂಥೆ, ಕೃತಿ ಸ್ವರೂಪ ಕೃತಿ ವಿಮರ್ಶೆ ಮೊದಲಾದ ಮುಖ್ಯವಾದ ವಿಷಯಗಳನ್ನು ಚರ್ಚಿಸಿ ಆ ಕೃತಿಯ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸಲಾಗಿದೆ.

'ಸಿದ್ಧರಾಮ ಪರಂಪರೆಯ ಹಾಲುಮತ ಮಠಗಳು' ಎಂಬ ಎಫ್.ಟಿ.ಹಳ್ಳಿಕೇರಿ ಅವರ ಮತ್ತೊಂದು ಲೇಖನವು (ಇತಿಹಾಸದರ್ಶನ ೨೩) ಪ್ರಕಟಗೊಂಡಿದೆ. ಸಾಂಸ್ಕೃತಿಕ ನಾಯಕನಾದ ಸಿದ್ಧರಾಮನ ಧಾರ್ಮಿಕ, ಸಾಮಾಜಿಕ ಲೋಕೋಪಕಾರ ಕಾರ್ಯಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಮೂಲತಃ ಕುರುಬನಾದ ಸಿದ್ಧರಾಮ ತನ್ನ ಅಪರ ವಯಸ್ಸಿನಲ್ಲಿ ಲಿಂಗಾಯಿತ ಧರ್ಮವನ್ನು ಅನುಸರಿಸಿದ, ಅವನ ಹೆಸರಿನ ಊರುಗಳಿರುವ ಸಿದ್ಧರಾಮನ ಪರ್ಯಾಯ ನಾಮಗಳ, ೧೨೦೮ ಮತ್ತು ೧೨೧೦ ರ ಶಾಸನಗಳಲ್ಲಿಯ ಮಂಕಯ್ಯನ ಪ್ರಸ್ತಾಪ, ಸರೂರ ಸಾಂಸ್ಕೃತಿಕ ಆಚರಣೆಗಳಾದ ದೀಪಾವಳಿ ಮತ್ತು ಶಿವರಾತ್ರಿ ಉತ್ಸವಗಳು, ಹೇಳಿಕೆಗಳು, ೧೪೪೦ರ ತಾಮ್ರಶಾಸನದಲ್ಲಿಯ ವಿಜಯನಗರದ ದೊರೆಗಳ ಸಮ್ಮುಖದಲ್ಲಿ ಕುರುಬರಿಗೆ ಗುರುಗಳಾರು ಎಂಬ ವಾದ ಮೊದಲಾದ ವಿಷಯಗಳು ಇಲ್ಲಿ ಚರ್ಚಿತವಾಗಿವೆ.

ಮಠ ದೇವಾಲಯಗಳ ಭೌಗೋಳಿಕ ವ್ಯಾಪ್ತಿಯಲ್ಲಿಯ ಚರ್ಚೆಯಲ್ಲಿ ಮುದ್ದೇಬಿಹಾಳ ತಾಲೂಕಿನ ಸರೂರ, ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಮತ್ತು ಸೊಲ್ಲಾಪುರ, ತುಮಕೂರು ಜಿಲ್ಲೆಯ ಹೊನ್ನವಳ್ಳಿ, ವಡೆಹುಡಿ, ಚಿಕ್ಕನಾಯಕನಹಳ್ಳಿ, ಯಳನಾಡು, ಗೋಡೆಕೆರೆ, ಬೆಳಗುಂಬ, ಸಿದ್ಧರಾಮದೇವರಹಳ್ಳಿ, ಮೂಗನಾಯಕನ ಕೋಟೆ, ಶೆಲಯ್ಯಗ ಪಾಳ್ಯ, ಹಾಸನ ಜಿಲ್ಲೆಯ ಬಾಣಾವರ, ಮಹಾರಾಷ್ಟ್ರದ ಸೊಲ್ಲಾಪುರ ಪರಿಸರದಲ್ಲಿಯ ಒಂಭತ್ತು ಮಠ, ಹೀಗೆ ಹತ್ತಕ್ಕೂ ಹೆಚ್ಚು ಗ್ರಾಮಗಳಲ್ಲಿಯ ಸಿದ್ಧರಾಮ ಪರಂಪರೆಯ ಮಠ ಹಾಗೂ ದೇವಾಲಯಗಳ ಸಮಗ್ರ ವಿವರಗಳನ್ನು ನೀಡಿರುವುದು ಈ ಲೇಖನದ ವೈಶಿಷ್ಟ್ಯ.

ಜಾತ್ರೆ, ಉತ್ಸವ ಹಾಗು ಆಚರಣೆ ಸಿದ್ಧರಾಮ ದೀಕ್ಷೆ ಪಡೆದ ನಂತರ ದಕ್ಷಿಣ ಕರ್ನಾಟಕದತ್ತ ಲೋಕಸಂಚಾರದಲ್ಲಿ ಅಜ್ಜಂಪುರದ ಬಳಿ ಮೂರು ದಿನಗಳ ಕಾಲ ತಪಸ್ಸು ಮಾಡಿ ಆ ಸ್ಥಳವೇ ಸೊಲ್ಲಾಪುರವಾಗಿ ಪ್ರಸಿದ್ಧಿ ಪಡೆದ ವಿಷಯವನ್ನು ದಾಖಲಿಸಲಾಗಿದೆ. ಸಿದ್ಧರಾಮನ ನಿಷ್ಠಾವಂತ ಭಕ್ತನಾದ ಹರಿಯಪ್ಪನ ಪ್ರಸ್ತಾಪ ಯಳನಾಡು ಸಿದ್ಧರಾಮೇಶ್ವರ, ಕಲ್ಯಾಣ ಕ್ರಾಂತಿಯ ನಂತರ ಸಿದ್ಧರಾಮ ಆಂಧ್ರ ಪ್ರದೇಶದ ಪಡನುಗೊಂಡೆ ಯಲ್ಲಿ ವಾಸವಾದ ಭಕ್ತ ಹರಿಯಪ್ಪನೊಂದಿಗೆ ಯಳನಾಡು ಪ್ರಾಂತಕ್ಕೆ ಬಂದದ್ದು, ತಿಪಟೂರು ತಾಲೂಕಿನ ಹೊನ್ನವಳ್ಳಿಯ ೨೫೦ ವರ್ಷಗಳ ಪ್ರಾಚೀನತೆಯ ವಡೆಹುಡಿ ಸಿದ್ಧರಾಮೇಶ್ವರ ಮಠದ ಪರಂಪರೆ, ಬಾಣಾವರ ಪರಿಸರದ ಹದಿನೆಂಟು ಗ್ರಾಮದ ಕುರುಬರ ಮಠದ ಭಕ್ತಾದಿಗಳು, ಕಾರ್ತಿಕ ಮಾಸದ ಉತ್ಸವ, ತುಮಕೂರು ಜಿಲ್ಲೆಯಲ್ಲಿಯ ರೇವಣಸಿದ್ಧೇಶ್ವರ, ಸಿದ್ಧೇಶ್ವರ, ಸಿದ್ಧರಾಮೇಶ್ವರ, ಮೂರು ಮಠಗಳ ಮುಖ್ಯಸ್ಥರ ಸೌಹಾರ್ದತೆ ಮೊದಲಾದ ವಿಷಯಗಳನ್ನು ವಿವರಿಸಲಾಗಿದೆ. ಸರೂರು ಚಿಕ್ಕನಾಯಕನಹಳ್ಳಿ, ಬಾಣಾವರ, ಹೊನ್ನವಳ್ಳಿಗಳಲ್ಲಿ,

ಸಿದ್ಧರಾಮೇಶ್ವರ, ಮಠಗಳಿಗೆ ಮಂಕೊಡೆಯರು ಪೀಠಾಧಿಪತಿಗಳಾದ ಉಪಜೀವನಕ್ಕಾಗಿ ಬೇರೆ ಬೇರೆ ವೃತ್ತಿಯಲ್ಲಿ ತೊಡಗಿಕೊಂಡ ಕಾರಣ ಭಕ್ತ ಮತ್ತು ಗುರುಗಳ ಮಧ್ಯೆ ಉಂಟಾದ ಶಿಥಿಲತೆ ಹೀಗೆ ಮಠಾಧಿಪತಿ ಮತ್ತು ಅವರ ಸ್ಥಿತಿಗಳನ್ನು ಚರ್ಚೆಗೆ ಒಳಪಡಿಸಿ ಅಂತ್ಯದಲ್ಲಿ ಸಿದ್ಧಮಂಕೊಡೆಯರ ಕುರಿತಾಗಿ ಸೂಚನೆಗಳನ್ನು ನೀಡಿದ್ದಾರೆ. ಒಟ್ಟಿನಲ್ಲಿ ಸಿದ್ಧರಾಮನ ಇತಿವೃತ್ತ ಆತನ ಶಿಷ್ಯ ಪರಂಪರೆ, ಸಿದ್ಧರಾಮ ಪರಂಪರೆಯ ಹಾಲುಮತದ ಮಠಗಳ ಭೌಗೋಳಿಕ ವ್ಯಾಪ್ತಿ, ಜಾತ್ರೆ-ಉತ್ಸವ ಮತ್ತು ಸಾಂಸ್ಕೃತಿಕ ಆಚರಣೆಗಳ ಬಗೆಗಿನ ವಿವರಗಳು ಕುತೂಹಲಕಾರಿಯಾಗಿವೆ.

'ಸಿದ್ಧಮಂಕ ಚರಿತೆ' ಕುರುಬರ ಗುರು ಪರಂಪರೆಯನ್ನು ತಿಳಿಸುವ ಕೃತಿ (ಹಸ್ತಪ್ರತಿ ಅಧ್ಯಯನ ೪-೧) ಎಂಬ ಸಿ.ಕೆ.ಪರಶುರಾಮಯ್ಯನವರ ಸಂಪ್ರಬಂಧವೂ ಸಿದ್ಧಮಂಕ ಚರಿತೆಯ ಅವಲೋಕನವನ್ನು ಒಳಗೊಂಡಿದೆ. ಸ್ವತಃ ಕಂಬಳಿ ನೇಯ್ಗೆಯ ಮನೆತನದಿಂದ ಬಂದ ಸಿ.ಕೆ.ಪರಶುರಾಮಯ್ಯನವರ ರೋಮಾಂಚಕಾರಿ ಅನುಭವಗಳು, ಸಿದ್ಧಮಂಕ ಚರಿತೆಯ ಸಂಕ್ಷಿಪ್ತ ಕಥಾಸಾರ, ವಿಮರ್ಶೆ, ಕಂಥೆಯನ್ನು ತಯಾರಿಸುವ ನಿಯಮಗಳು, ಕುರುಬರ ಪರಂಪರೆಯಲ್ಲಿ ಒಡೇರಮ್ಮನವರ ವಿಶೇಷತೆ, ಮದುವೆಯಾಗುವ ಕುರುಬ ಮಹಿಳೆಯನ್ನು ಒಡೇರಮ್ಮಳನ್ನಾಗಿ ಮಾಡುವ ವಿಧಿವಿಧಾನಗಳು, ತುಮಕೂರಿನ ಶಿವರಾತ್ರಿ ಉತ್ಸವದ ವರ್ಣನೆ, ಗ್ರಂಥಸಂಪಾದಕನ ಜವಾಬ್ದಾರಿ ಮೊದಲಾದ ವಿಷಯಗಳನ್ನು ವಿವರಿಸಲಾಗಿದೆ.

ಅಮೋಘಸಿದ್ಧ ಪರಂಪರೆ

ಕುರುಬರ ಗುರುಪರಂಪರೆಯಲ್ಲಿ ಅಮೋಘಸಿದ್ಧ ಪರಂಪರೆಯೂ ಪ್ರಮುಖವಾದುದು. ಬಿಜಾಪುರ ತಾಲೂಕಿನ ಅರಕೇರಿ ಈತನ ಪ್ರಮುಖ ನೆಲೆ. ಈತನ ಗುರು ಸೋಮೇಶ್ವರ. ಈತನ ಸಂತತಿ ಸಾವಿರಕ್ಕೂ ಮೇಲ್ಪಟ್ಟದೆಂದೂ ಹೇಳಲಾಗುತ್ತದೆ. ಕರ್ನಾಟಕ ಹಾಗೂ ಮಹಾರಾಷ್ಟ್ರದ ಅನೇಕ ಕಡೆ ಈ ಪರಂಪರೆಯ ಮಠ ದೇವಾಲಯ ಹಾಗೂ ಗದ್ದುಗೆಗಳಿವೆ. ಈ ಪರಂಪರೆಯ ನೂರಾರು ಒಡೆಯರು, ಸಾವಿರಾರು ಭಕ್ತರು ಪ್ರತಿ ಊರಿನಲ್ಲಿ ನಮಗೆ ಸಿಗುತ್ತಾರೆ. ಇಂಥ ವಿಸ್ತಾರವಾದ ಪರಂಪರೆಯನ್ನು ಹೊಂದಿದ ಅಮೋಘಸಿದ್ಧನ ಕುರಿತು ಲಿಖಿತ ಆಕರಗಳಿಗಿಂತ ಮೌಖಿಕ ರೂಪದಲ್ಲಿಯೇ ಹಾಡು, ಕಥೆ, ಕಾವ್ಯಗಳನ್ನು ಕಲಾವಿದರು ಹಾಡುತ್ತಾರೆ. ಹೀಗಾಗಿ ಈ ಅಮೋಘಸಿದ್ಧ ಮತ್ತು ಆತನ ಪರಿವಾರ ಪರಂಪರೆ, ಜಾತ್ರೆ-ಉತ್ಸವ, ಸಂಪ್ರದಾಯಗಳ ದಾಖಲೀಕರಣ, ಅಧ್ಯಯನ ಕಾರ್ಯವು ಕ್ರಮಬದ್ಧವಾಗಿ ಮತ್ತು ಸಮಗ್ರವಾಗಿ ಈವರೆಗೆ ನಡೆದಿಲ್ಲ. ಹೀಗಿದ್ದೂ ಆ ಪರಂಪರೆಯವರಾದ ಶ್ರೀ ಮುದಗೊಂಡ ಧೋಂಡೆಪ್ಪ ಒಡೆಯರ ಅವರು ೧೯೯೭ರಲ್ಲಿ 'ಸಿದ್ಧಸಿರಿ' ಎಂಬ ಗದ್ಯಗ್ರಂಥದ ಮೂಲಕ ಅಮೋಘಸಿದ್ಧನ ಚರಿತ್ರೆಯನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ೧೩೫ ಉಪಶೀರ್ಷಿಕೆಯಲ್ಲಿ ಅಮೋಘಸಿದ್ಧ ಮತ್ತು ಆತನ ಸಂತತಿಯವರ ಸಾಮಾಜಿಕ ಸೇವೆ, ಮೆರೆದ ಪವಾಡಗಳು, ಕಾರ್ಯ ಪ್ರವೃತ್ತಿ ಮೊದಲಾದವನ್ನು ಈ ಕೃತಿಯಲ್ಲಿ ಗುರುತಿಸಲಾಗಿದೆ.

ಪತ್ಯದ ಆರಂಭ ಹಾಗೂ ಅಲ್ಲಲ್ಲಿ ವಿಷಯ ನಿರೂಪಣೆಗೆ ಪೂರಕ ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ. ಸೃಷ್ಟಿಯ ಉತ್ಪತ್ತಿ, ದೇವದೈತ್ಯರ ಉತ್ಪತ್ತಿ, ರೋಮೇಶನಿಂದ ಸೋತ ನಾರದ, ಹೂವಿನ ಬದಲು ರುಂಡವನ್ನು ಅರ್ಪಿಸಿದ ಅಡಕೇಶ್ವರ, ಅಮೋಘಸಿದ್ಧನ ಬಾಲ್ಯ, ಪಾರ್ವತಿಯಿಂದ ಅಮೋಘಸಿದ್ಧನ ಪರೀಕ್ಷೆ, ಕುರುಡ ಸರ್ಪಕ್ಕೆ ದೃಷ್ಟಿದಾನ, ಕಪ್ಪೆ ಮುಟ್ಟಲಾರದ ಸಿತಾಳ ಮತ್ತು ಹುಳ ಮುಟ್ಟಲಾರದ ಹೂವು ತರುವ, ಕೈಲಾಸದಿಂದ ಅಮೋಘಸಿದ್ಧ, ಶ್ರೀಶೈಲದಲ್ಲಿಯ ಕಂಬಳಿಮಠ, ತಯಾರಾದ ಹಗ್ಗ ಕೋಲುಗಳಿಲ್ಲದ ಅಮೋಘಸಿದ್ಧರ ಡೇರೆ, ಹರಣದ ಕೆರೆಯಲ್ಲಿ ಪಾಂಡವರಥ ಐಕ್ಯವಾದ, ಬಡವ ನಾಗರಾಯ ಶ್ರೀಮಂತನಾದದ್ದು, ಮುದುಕ ಅಮೋಘಸಿದ್ಧ ಹೆಣ್ಣು ನೋಡಲು ಹೋದ, ಅಮೋಘಸಿದ್ಧನಿಂದ ನಾಗರಾಯನ ಸಂಕಟ ನಿವಾರಣೆ, ನೇಮದ ಬೆತ್ತದ ಜೊತೆಗೆ ಪದ್ಮಾವತಿಯ ಲಗ್ನ, ಮಹಾಸಿದ್ಧನ ಜನನ, ಮಹಾಸಿದ್ಧನು ಅಮೋಘಸಿದ್ಧನ ಸ್ವಾಧೀನನಾದ, ರಾಮಯ್ಯನ ಮಗನಿಗೆ ಲಿಂಗಕಟ್ಟಿದ ಬಿಳಿಯಾನಿಸಿದ್ಧ, ಕಳ್ಳ ಕವಠೆ, ಮಹಾಸಿದ್ಧನಿಂದ ಭಂಡಾರ ಕವಡೆಯಾದ ಮಾಸಕೋಟೆಯಲ್ಲಿ ಮಹಾಸಿದ್ಧನ ಮದುವೆ, ನಾಲ್ವರು ಧರ್ಮರ ಲಗ್ನ(ಮಹಾಸಿದ್ಧ, ಬಿಳಿಯಾನಿಸಿದ್ಧ, ಔಧುಸಿದ್ಧ, ಸೋಮಣ್ಣಮುತ್ತ್ಯಾ), ಬಿಜಾಪುರ ಪಟ್ಟಣದಲ್ಲಿ ಬಿಳಿಯಾನಿಸಿದ್ಧರ ಭಂಡಾರದ ಮಹಿಮೆ, ಏಳು ಮಠಗಳ ಒಡೆಯನಾದ ಮಹಾಸಿದ್ಧ, ರೆಬಕವ್ವನ ಮದುವೆ ಚರ್ಚೆ, ಬಿಳಿಯಾನಿಸಿದ್ಧನಿಂದ ಅಲ್ಲಮಗಿರಿಯ ರಾಜನ ಉದ್ಧಾರ, ಅಮೋಘಸಿದ್ಧ ಮತ್ತು ಮಂಗರಾಯನ ಅಗಲುವಿಕೆ, ಮಂಗರಾಯ ಹನ್ನೆರಡು ಸಾವಿರ ಜನರಿಗೆ ಜೊಗಸೆ ಅಕ್ಕಿಯಲ್ಲಿ ಊಟ ಮಾಡಿಸಿದ, ಆರುತಿ ಮಾಡಿದ ರೆಬಕವ್ವಳಿಗೆ ಆಸ್ತಿ ಮತ್ತು ಗೌಡಕಿ ದೊರೆತ ಬಿಳಿಯಾನಿಸಿದ್ಧರು ಕರಜಗಿಯಲ್ಲಿ ಕೊಂದ ಗೂಳಿಯನ್ನು ಜೀವಂತಪಡಿಸಿದ, ಮಲಕಾರಿಸಿದ್ಧನ ಜನನ, ಮಲಕಾರಿಸಿದ್ಧನ ಬಂಢಾರದ ಪವಾಡ, ಆನೆಗೊಂದಿ ಅರಸನಿಂದ ದಂಡಕ್ಕೆ ಪ್ರತಿದಂಡ ವಸೂಲಿ ಮಾಡಿದ ಸುರಪುರ ಅರಸನೊಂದಿಗೆ ಯುದ್ಧಮಾಡಿದ, ಕಂಬಳಿ ಬೀಸಿ ಮಳೆ ತರಿಸಿದ, ಜಿನೇಸಾಬನ ದರ್ಗಾದಲ್ಲಿ ಆಶ್ರಯ ಪಡೆದ ವಿವರಗಳನ್ನು ಕಥನರೂಪದಲ್ಲಿ ನಿರೂಪಿಸಲಾಗಿದೆ. ಗುಬ್ಬೆವ್ವಳ ಜೀವಂತ ಸಮಾಧಿ, ಜೈನಾಪುರ ಐನಾಪುರವಾದ, ಆಚೆಗಾಂವಕೆ ಹೋದ ಶೀಲಿಸಿದ್ಧ, ಉಮದಿಯಾದ ನಾರಾಯಣಪುರ, ಐನಾಪುರ ಕೆರೆಯಿಂದ ಕರಸಿದ್ಧನ ಉದ್ಭವ, ಸುಸಲಾದಿಯಲ್ಲಿ ಮಠಸ್ಥಾಪನೆ, ಬಾದಶಹನಿಂದ ಳಳ ಹಳ್ಳಿಯ ಗೌಡಕಿ ಮತ್ತು ಜಮೀನು ಪಡೆದ ಮಳೆಗಾಲಸಿದ್ಧ, ಗೇನಸಿದ್ಧನ ಮದುವೆ ರೆಬಕವ್ವಳ ಆಸ್ತಿ ತಿರುಗಿ ಪಡೆದ ಮೊದಲಾದ ವಿಷಯಗಳನ್ನು ಸವಿಸ್ತಾರವಾಗಿ ವಿಸ್ತರಿಸಲಾಗಿದೆ.

ಹೀಗೆ ಈ ಕೃತಿಯು ಪೌರಾಣಿಕ ಮತ್ತು ಚಾರಿತ್ರಿಕ ಅಂಶಗಳಿಂದ ಹೆಣೆದುಕೊಂಡಿದೆ. ಜೈನಾಪುರ, ಐನಾಪುರ, ಆಚೆಗಾವ, ನಿಂಬರ್ಗಿ, ಆನೆಗೊಂದಿ, ಸುರಪುರ, ಉಮದಿ ಮೊದಲಾದ ಹೆಸರುಗಳ ಉಲ್ಲೇಖವು ಅಮೋಘಸಿದ್ಧನ ಸಂತತಿಯವರ ಚರಿತ್ರೆಯನ್ನು ತಿಳಿಯುವಲ್ಲಿ ಮಹತ್ವದ ಸ್ಥಳಗಳಾಗಿವೆ. ಇವನು ಶರಣ ಕಾಲದ ಅಮುಗಿದೇವಯ್ಯನೆಂಬ ನಿರ್ಧಾರವು ಸ್ವಲ್ಪ ಸಡಿಲಗೊಂಡು ಇನ್ನೂ ಮುಂದಿನ ೧೫-೧೬ನೇ ಶತಮಾನದಲ್ಲಿ ಬಾಳಿರುವ ಸೂಚನೆಗಳು ಕಂಡುಬರುತ್ತಿವೆ. ಮದಗೊಂಡ, ದೊಂಡಪ್ಪ ಒಡೆಯರ ಅವರು

ಈ ಕೃತಿ ರಚನೆಯ ಮೂಲಕ ಅಮೋಘಸಿದ್ಧನ ಚರಿತ್ರೆಯನ್ನು ಸ್ವಲ್ಪಮಟ್ಟಿಗೆ ನೀಗಿಸಿದ್ದಾರೆ. ಚಾರಿತ್ರಿಕ ಸಂಗತಿಗಳಿಗಿಂತ ಹೆಚ್ಚಾಗಿ ಈ ಕೃತಿಯ ಕುರಿತು ಚೆನ್ನಪ್ಪಕಟ್ಟಿ ಅವರು ತಮ್ಮ ಪಿಎಚ್.ಡಿ. ಮಹಾ ಪ್ರಬಂಧದಲ್ಲಿ ಹೀಗೆ ಅಭಿಪ್ರಾಯಪಟ್ಟಿದ್ದಾರೆ. "ಒಡೆಯರ ಕುರಿತು ನೇರವಾಗಿ ಮಾತನಾಡುವ ಒಂದೇ ಒಂದು ಪಠ್ಯವೆಂದರೆ ಮುದಗೊಂಡ ಮಾರಾಯರು ರಚಿಸಿದ 'ಸಿದ್ಧಿಸಿರಿ' ಎಂಬ ಪುರಾಣೀಕೃತ ಗದ್ಯಕೃತಿ. ಪುರಾಣೀಕೃತಗೊಂಡ ಈ ಪಂಗಡವನ್ನು ನೆಲದ ಆಚೆಗೆ ಎಳೆದು ತರುವ ಕೆಲಸವನ್ನು ಅದರ ಕುರಿತಾದ ಐತಿಹ್ಯಗಳು ಮಾಡಿವೆ".

ಒಟ್ಟಿನಲ್ಲಿ ಅಮೋಘಸಿದ್ಧ ಮತ್ತು ಆತನ ಸಂತತಿಯವರ ಭೌಗೋಳಿಕ ಪರಿಸರ, ಇತಿವೃತ್ತ ವಿಚಾರ, ಸಂಪ್ರದಾಯಗಳು ಹಾಗೂ ಮೆರೆದ ಪವಾಡಗಳನ್ನು ತಿಳಿದುಕೊಳ್ಳುವಲ್ಲಿ ಸಿದ್ಧಸಿರಿ ಬಹುಮುಖ್ಯವಾದ ಆಕರಗ್ರಂಥ ಇದಾಗಿದೆ. ಈ ಕೃತಿಯ ನೆರವಿನಿಂದ ಅಮೋಘಸಿದ್ಧ ಪರಂಪರೆಯವರ ಶಿಷ್ಯ, ಪ್ರಶಿಷ್ಯರು, ಅವರ ನೆಲೆಗಳು, ಕ್ಷೇತ್ರಗಳ ಕುರಿತು ವಿಸ್ತೃತವಾದ ಅಧ್ಯಯನ ಮಾಡಲು ಅವಕಾಶಗಳಿವೆ.

ಈವರೆಗೆ ಸಂಶೋಧನಾತ್ಮಕ ನೆಲೆಯಿಂದ ಅಮೋಘಸಿದ್ಧ ಪರಂಪರೆಯ ಬಗೆಗೆ ಸಮಗ್ರವಾದ ಅಧ್ಯಯನ ನಡೆದಿರಲಿಲ್ಲ. ಅಂಥ ಕೊರತೆಯನ್ನು ಪ್ರೊ. ಚೆನ್ನಪ್ಪ ಕಟ್ಟಿ ಅವರು "ಅಮೋಘಸಿದ್ಧ ಪರಂಪರೆ: ಒಂದು ಅಧ್ಯಯನ" ಎಂಬ ಮಹಾಪ್ರಬಂಧದ ಮೂಲಕ ತುಂಬಿಕೊಟ್ಟಿದ್ದಾರೆ. ಪಿಎಚ್.ಡಿ. ಪದವಿಗಾಗಿ ೨೦೧೦ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧವಿದು.

ಆರು ಅಧ್ಯಾಯಗಳಲ್ಲಿ ವಿಸ್ತೃತಗೊಂಡ ಈ ಮಹಾಪ್ರಬಂಧದಲ್ಲಿ ಅಮೋಘಸಿದ್ಧನ ಕಾಲ, ದೇಶ, ಪಂಥ ಪ್ರಭಾವ, ಪರಿವಾರ, ಜಾತ್ರೆ, ಉತ್ಸವ, ನಂಬಿಕೆ, ಆಚರಣೆಗಳು, ಸಾಹಿತ್ಯದ ಉಗಾಳಿಕೆ, ಹರಕೆ, ಹೇಳಿಕೆ, ಹೀಗೆ ಅನೇಕ ವಿಷಯಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿದೆ.

ಮೊದಲ ಅಧ್ಯಾಯವು 'ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಆಕರ' ಎಂಬ ಶೀರ್ಷಿಕೆ ಹೊಂದಿದೆ. ಅಮೋಘಸಿದ್ಧ ಪರಂಪರೆಯ ನಿಷ್ಪನ್ನಕ್ಕೆ ಕಾರಣವಾಗಿರುವ ಇಲ್ಲಿನ ಭೌಗೋಳಿಕ ಪರಿಸರ ಹಾಗೂ ಪರಂಪರೆಯಲ್ಲಿ ಚಲಾವಣೆಯಲ್ಲಿದ್ದ ಹಲವಾರು ಪಂಥಗಳ ಕುರಿತು ಚರ್ಚಿಸಲಾಗಿದೆ. ಸೂಫಿ ಪಂಥಗಳೊಂದಿಗೆ ನಡೆಸಿದ ಅನುಸಂಧಾನ, ಶಾಂತೊಡೆಯರ, ಪರಂಪರೆಯ ಸಮಕಾಲೀನ ಸನ್ನಿವೇಶಗಳ ಚರಿತ್ರೆಯ ಚೌಕಟ್ಟಿನಲ್ಲಿ ತಳೆಯುವ ಪಲ್ಲಟಗಳು(ರೂಪಾಂತರ), ಅಪಾರ ವಂಶದ ಬಳ್ಳಿ ಹೊಂದಿದ ಅಮೋಘಸಿದ್ಧನ ಪುಣ್ಯದ ಮತ್ತು ವರವಿನ ಮಕ್ಕಳ ಚರ್ಚೆ, ಹದಿನಾರನೆಯ ಶತಮಾನದಲ್ಲಿ ಪ್ರಾರಂಭವಾಗುವ ಅಮೋಘ ಪರಂಪರೆ, ಉತ್ಸವ, ಜಾತ್ರೆ, ನಂಬಿಕೆ ಇತ್ಯಾದಿಗಳನ್ನ ಲಿಖಿತ ಮತ್ತು ಮೌಖಿಕ ಆಕರಗಳಿಂದ ವಿಶ್ಲೇಷಣೆಗೆ ಒಳಪಡಿಸ ಲಾಗಿದೆ. ಅಮೋಘಸಿದ್ಧ ಮತ್ತು ಅಮುಗಿದೇವಯ್ಯ ಭಿನ್ನರು ಎಂಬ ವಿಷಯವನ್ನು ಮೊದಲ ಬಾರಿಗೆ ಇಲ್ಲಿ ಚರ್ಚಿಸಲಾಗಿದೆ.

'ಕಾಲ, ದೇಶ, ಪಂಥ, ಪ್ರಭಾವ' ಎನ್ನುವ ಎರಡನೆಯ ಅಧ್ಯಾಯದಲ್ಲಿ ಪುರಾಣೀಕೃತ ಅಮೋಘಸಿದ್ಧನನ್ನು ಚಾರಿತ್ರಿಕ ಚೌಕಟ್ಟಿನಲ್ಲಿ ನಿಲ್ಲಿಸಲು ಯತ್ನಿಸಲಾಗಿದೆ. ಮುರ್ತುಜಾ ಖಾದರಿ ಮತ್ತು ಅಬ್ದುಲ್ ರಜಾಕ್,

ಖಾದರಿಯ ಸೂಫಿ ಸಂತರೊಂದಿಗೆ ಸಂಘರ್ಷದ ಕಥನವನ್ನು ಚಾರಿತ್ರಿಕ ಅಂಶಗಳೊಂದಿಗೆ ತಳಕು ಹಾಕಿ ನೋಡುವ ಪ್ರಯತ್ನ ಮಾಡಲಾಗಿದೆ. ಹನ್ನೆರಡನೆಯ ಶತಮಾನದ ಶರಣರ ವೀರಶೈವ ಮತ್ತು ಹದಿನಾರನೆಯ ಶತಮಾನದ ಲಿಂಗಾಯಿತ ಸಂಸ್ಥೀಕರಣ ಸಂದರ್ಭ ಅಮೋಘಸಿದ್ಧನ ಮೇಲೆ ಬೌದ್ಧ ಸಿದ್ಧ, ಶೈವಸಿದ್ಧ, ನಾಥಪಂಥಗಳ ಪ್ರಭಾವ ಹೇಗೆ ಬೀರಿದೆ ಎಂಬುದನ್ನು ಸೋದಾಹರಣವಾಗಿ ಹೇಳಲಾಗಿದೆ.

ಮೂರನೆಯ ಅಧ್ಯಾಯದಲ್ಲಿ 'ವಿಜಾಪುರದ ಪರಿಸರದ ಪಂಗಡಗಳು ಹಾಗೂ ಅಮೋಘಸಿದ್ಧನ ಪರಿವಾರ' ಎಂಬ ಶೀರ್ಷಿಕೆಯು ಬಿಜಾಪುರ ಪರಿಸರದಲ್ಲಿ ರೂಪ ತಳೆದ ಮೂರು ಪಂಗಡಗಳ ತೌಲನಿಕ ಅಧ್ಯಯನ ಶಾಂತೊಡೆಯರು ಮತ್ತು ಮಂಕೊಡೆಯರು ಹನ್ನೆರಡನೆಯ ಶತಮಾನದಲ್ಲಿ ರೂಪಗೊಂಡರೆ ಅಮೋಗಿ ಒಡೆಯರು ಶರಣ ಚಳವಳಿ ತನ್ನ ಕಾವು ಕಳೆದುಕೊಂಡು ಸಾಂಸ್ಥೀಕರಣಗೊಳ್ಳುವ ಸಂದರ್ಭದಲ್ಲಿ ರೂಪಗೊಂಡಿದೆ. ಮೊದಲ ಪಂಥ ಇಷ್ಟಲಿಂಗ ಮತ್ತು ವಿಭೂತಿ ಸ್ವೀಕರಿಸಿದರೆ, ಎರಡನೆಯ ಪಂಥ ಕಂಬಳಿ ಮತ್ತು ಬಂಡಾರವನ್ನು ಉಳಿಸಿಕೊಂಡ ವಿಷಯವನ್ನು ತಿಳಿಸುತ್ತದೆ. ಅಮೋಘಸಿದ್ಧನ ಗುರು ಕಪಾಲಿಪಂಥ ಸೋಮಲಿಂಗ, ಅಮೋಘಸಿದ್ಧನ ಮದುವೆ (ಪದ್ಮಾವತಿಯೊಂದಿಗೆ) ಮೂರು ಪುಣ್ಯದ ಮಕ್ಕಳು (ಶಿಶುಮಕ್ಕಳು) ನಾಲ್ಕು ವರವಿನ (ಸ್ವಂತ) ಸಂತತಿ, ಪಶುಪಾಲಕರಾದ ಅಮೋಗಿ ಒಡೆಯರ ಸ್ತ್ರೀ ವಿರೋಧಿ ನಿಲುವು, ಎರಡನೆಯ ವರುವಿನ ಮಗ ಬಿಳಿಯಾನಿಸಿದ್ಧ ಮತ್ತು ಅವನ ಹೆಂಡತಿ ಕೊಂತೆವ್ವಳ ಪ್ರಸ್ತಾಪ, ಬಟ್ಟಲ ವಡೆಯರು ಎಂದು ಕರೆಯಲ್ಪಡುವ ಬಿಂದು ಪರಂಪರೆಯ ಸಿದ್ಧರ, ಮೊದಲ ಮೂರು ಪರಂಪರೆಯ ಪಂಥಗಳೊಂದಿಗೆ ಭೂತಾಳಿಸಿದ್ಧ, ಶಾವರಸಿದ್ಧ ಎಂಬ ಇಬ್ಬರು ಸಿದ್ಧರ ಕುರಿತ ವಿವರಗಳು ವಿಸ್ತೃತವಾದ ಅಧ್ಯಯನಕ್ಕೆ ಸೂಚನೆಯನ್ನು ನೀಡುವಂತಿವೆ.

'ಜಾತ್ರೆ ಉತ್ಸವ ನಂಬಿಕೆ ಆಚರಣೆಗಳು' ಎಂಬ ನಾಲ್ಕನೆಯ ಅಧ್ಯಾಯವು ಅಮೋಘಸಿದ್ಧ ಒಡೆಯರ ಪರಂಪರೆ, ಸಂಸ್ಕೃತಿಯನ್ನು ಸಂಶೋಧಕರೂ ಹೀಗೆ ಗುರುತಿಸಿದ್ದಾರೆ. "ಅಮೋಘಸಿದ್ಧ ಅರಕೇರಿಯನ್ನು ತನ್ನ ಅರಿವಿನ ಮನೆಯನ್ನಾಗಿಸಿಕೊಂಡರೆ ಅವರ ವರುವಿನ (ಸ್ವಂತ) ಮಕ್ಕಳು ಭೀವರಗಿಯನ್ನು ಗುರುಮನೆಯನ್ನಾಗಿಸಿ ಕೊಂಡರು. ಭೀವರಗಿಯನ್ನು ಕೇಂದ್ರಮಾಡಿಕೊಂಡು ಬೆಳಗಾಂವ, ಕೋಲಾಪುರ, ಸಾಂಗಲಿ, ಸೋಲಾಪುರ, ಗುಲಬರ್ಗಾ ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ತಮ್ಮ ಮಕ್ಕಳು ಮೊಮ್ಮಕ್ಕಳನ್ನು ಕಳುಹಿಸಿ ಅಲ್ಲಲ್ಲ ತಮ್ಮ ಗುರುತ್ವವನ್ನು ಸ್ಥಾಪಿಸಿಕೊಂಡರು.... ಅರಕೇರಿ ಅರಮನಿ, ಭೀವರಗಿ ಗುರುಮನಿ ಮಾಯ ಮಕಣಾಪುರ, ಸಿಂಹಾಸನ (ಶಿವಸ್ಥಾನ) ಗದ್ದುಗಿ, ಕಲ್ಲೂರು ಕಡಿಮಠ ಎಂಬ ಘೋಷವಾಕ್ಯ ಇವರ ಭೌಗೋಳಿಕ ವ್ಯಾಪ್ತಿಯನ್ನು ಸೂಚಿಸುವಂಥದ್ದಾಗಿದೆ." ಕೌಲುಕಟ್ಟುವ, ಕುಂಭ ಕೂಡ್ರಿಸುವ, ಜಕ್ಕೇರಿ ಹಂಗೊಡ ಮೊದಲಾದವು ಒಡೆಯರ ಆಚರಣೆ ಲೋಕವನ್ನು ಅನಾವರಣಗೊಳಿಸುತ್ತವೆ.

'ಒಡೆಯರ ಸಾಹಿತ್ಯ' ಉಗಾಳಿಕೆ, ಹರಕೆ ಮತ್ತು ಹೇಳಿಕೆ ಎನ್ನುವ ಐದನೆಯ ಅಧ್ಯಾಯವು ಒಡೆಯರ ಸಾಹಿತ್ಯದಲ್ಲಿ ಮೂರು ವರ್ಗೀಕರಣವನ್ನು ಮಾಡಿ ಅವುಗಳಲ್ಲಿ ವ್ಯತ್ಯಾಸಗಳನ್ನು ಸಾಮ್ಯತೆಗಳನ್ನು ಗುರುತಿಸುತ್ತದೆ. ಹೇಳಿಕೆಗಳು ಸಾವಿರಾರು ಭಕ್ತರ ಸಮ್ಮುಖದಲ್ಲಿ ಬಳಕೆಯಾದರೆ ಉಗಾಳಿಕೆಗಳು ತಮ್ಮ

ಪರಂಪರೆಯ ಸಿದ್ಧರನ್ನು ಒಂದು ಕ್ರಮದಲ್ಲಿ ನೆನಪಿನಲ್ಲಿಟ್ಟುಕೊಂಡು ಪರಂಪರೆಯ ಸಾಹಿತ್ಯವನ್ನು ಪ್ರಕಟಿಸುವಲ್ಲಿ ಸಹಕಾರಿಯಾಗಿವೆ. ಹರಕೆಗಳು ಕೌಟುಂಬಿಕ ನೆಲೆಯಲ್ಲಿ ಭಕ್ತರ ಸರ್ವ ಸಮೃದ್ಧಿಯನ್ನು ಬಯಸುತ್ತವೆ.

ಅಮೋಘಸಿದ್ಧನ ಚರಿತ್ರೆಯಲ್ಲಿ ಪಾರ್ಸಿ ಮತ್ತು ಮೋಡಿ ಲಿಪಿಯ ಹಿನ್ನೆಲೆಯಲ್ಲಿ ಶಿವನ ಅವತಾರವೆಂದು ನಂಬಿದ ಗುರು ಕಪಾಲಿ ಪಂಥದ ಸೋಮಲಿಂಗನು ನಂತರದಲ್ಲಿ ಸೂಫಿ ಪ್ರಭಾವಕ್ಕೆ ಒಳಗಾದುದನ್ನು, ಶಿಷ್ಯ ವರ್ಗ ಪಂಥವು ನಂತರದಲ್ಲಿ ಪುತ್ರವರ್ಗ ಪಂಥವಾಗಿ ಬೆಳೆದು ನಿಂತ ವೈರುಧ್ಯವನ್ನು, ಭಿನ್ನರಾದ ಅಮುಗಿದೇವ ಮತ್ತು ಅಮೋಘಸಿದ್ಧರ ಚರ್ಚೆ ಮೊದಲಾದ ಮಹತ್ವದ ವಿಷಯಗಳನ್ನು ಫಲಿತಗಳೂ ಹಾಗೂ ಸಾಧ್ಯತೆಗಳು ಎಂಬ ಆರನೆಯ ಅಧ್ಯಾಯವು ವಿಶ್ಲೇಷಣೆಗೆ ಒಳಪಡಿಸಿದೆ.

ಅಮೋಘಸಿದ್ಧನ ಕುರಿತು ಲೇಖನ ರೂಪದಲ್ಲಿಯೂ ಕೆಲವು ವಿದ್ವಾಂಸರು ಚರ್ಚೆ ಮಾಡಿದ್ದಾರೆ. ಎಂ.ಎಂ. ಪಡಶೆಟ್ಟಿ ಅವರು 'ಸಿದ್ಧಪರಂಪರೆಯಲ್ಲಿ ಅಮೋಘಸಿದ್ಧ' (ಹಾಲಕೆನೆ ೨೦೦೨) ಹಾಗೂ ಎಫ್.ಟಿ. ಹಳ್ಳಿಕೇರಿ ಅವರ ಅಮೋಘಸಿದ್ಧ ಪರಂಪರೆಯ ಹಾಲುಮತ ಮಠಗಳು (ಇತಿಹಾಸ ದರ್ಶನ, ೨೧, ೨೦೦೯) ಎಂಬ ಎರಡು ಲೇಖನಗಳು ಬಹುಮುಖ್ಯವಾಗಿವೆ. ಎಂ.ಎಂ.ಪಡಶೆಟ್ಟಿ ಅವರು, 'ಸಿದ್ಧ ಪರಂಪರೆಯ ಅಮೋಘಸಿದ್ಧ' ಲೇಖನದಲ್ಲಿ ಅರಕೇರಿ, ಜಾಲಗೇರಿ, ಸಿದ್ದಾಪುರ ಈ ಮೂರು ಸ್ಥಳ ಒಂದಾಗುವ ಮುಮ್ಮಟಗಿರಿಯ ಸ್ಥಳ ನಾಮದ ಚರ್ಚೆ, ಅಮೋಘಸಿದ್ಧನ ವಂಶವೃಕ್ಷ, ವಡೇರಮ್ಮ, ಸಿದ್ಧರ ಹೋಮದ ಕಂಬಳಿ, ನೇಮದ ಬೆತ್ತ, ಭಂಡಾರ ಭರಣಿ, ಶಿರಕಮಲ, ಸುಖದ ಕೊಳಲು, ದುಃಖದ ಕೊಳಲು ಮುಂತಾದ ವಸ್ತುಗಳ ಪ್ರಾಮುಖ್ಯತೆ ಅಷ್ಟದಶಸಿದ್ಧಿ, ಚೌರಾಸಿಸಿದ್ಧ, ನವಕೋಟಿಸಿದ್ಧರ ಇಚ್ಛಾಮಂತ್ರದಿಂದ ಕ್ರಿಯಾಸಿದ್ಧಿ ಪಡೆಯುವ, ಸಿದ್ಧ ಪರಂಪರೆಯಲ್ಲಿಯ ಗುರೂಪದೇಶದ ಮಹತ್ವದ ವಿಚಾರಗಳ ಕಡೆಗೆ ಗಮನ ಹರಿಸಿದ್ದಾರೆ.

ಎಫ್.ಟಿ.ಹಳ್ಳಿಕೇರಿ ಅವರು ಅಮೋಘಸಿದ್ಧ ಪರಂಪರೆಯ ಮಠಗಳ ಬಗೆಗೆ ಚರ್ಚಿಸುತ್ತಾ ಹಾಲುಮತ ವಡೆಯರ ಮೂರು ಸಂಪ್ರದಾಯ, ಅವುಗಳಿಗೆ ಸಂಬಂಧಿಸಿದ ಮಠಗಳ ಭೌಗೋಳಿಕ ವ್ಯಾಪ್ತಿ, ಅಮೋಘಸಿದ್ಧನ ಇತಿವೃತ್ತ ವಿಚಾರ, ಮಠಾಧಿಪತಿಗಳ ಆಚರಣೆ ಮತ್ತು ನಂಬಿಕೆ, ಸಾಮಾಜಿಕ ಮತ್ತು ಶೈಕ್ಷಣಿಕ ಸೇವೆ, ವಡೆಯರ ಸಂಪ್ರದಾಯಗಳಲ್ಲಿಯ ಭಿನ್ನತೆ ಮತ್ತು ಸಾಮ್ಯತೆ, ಮಠಾಧಿಪತಿಗಳ ಇಂದಿನ ಸ್ಥಿತಿಗತಿ, ಮುಂದಿನ ಭವಿಷ್ಯ ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಹುಲ್ಲೂರಿನ ಪ್ರಾಚೀನ ಮಠದ ಚರ್ಚೆ, ವಡೆಯರ ವೇಷ ಭೂಷಣ, ವಡೆಯರ ಪತ್ನಿಯರ (ಗುರುತಾಯಿ) ವೈಶಿಷ್ಟ್ಯತೆ, ಕಂಬಳಿ, ಹೇಳಿಕೆ, ಹರಕೆ ತೀರಿಸುವ, ಅಮೋಘಸಿದ್ಧ ಮತ್ತು ರೇವಣಸಿದ್ಧ ವಡೆಯರಲ್ಲಿ ಗುರುಗಳಾಗುವ ವಿಷಯದಲ್ಲಿ ಮನಸ್ತಾಪಗೊಂಡ ವಿಷಯವನ್ನು ಆಧಾರ ಸಹಿತ ಚರ್ಚಿಸಿದ್ದಾರೆ. ಹೀಗೆ ಅಮೋಘಸಿದ್ಧನ ಸ್ಥೂಲವಾದ ಪರಂಪರೆಯನ್ನು ಈ ಲೇಖನವು ಪರಿಚಯಿ ಸುತ್ತದೆ.

ಇಂಥ ಕೃತಿ ಹಾಗೂ ಲೇಖನಗಳನ್ನು ಅವಲೋಕಿಸಿದಾಗ ಅಮೋಘಸಿದ್ಧ ಪರಂಪರೆಯ ಬಗೆಗೆ ನಡೆದಿರುವ ಅಧ್ಯಯನಗಳು ತುಂಬ ಕಡಿಮೆ. ಮೌಖಿಕ ಸಂಪ್ರದಾಯದಲ್ಲಿರುವ ಹಾಡು ಕಥೆಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಿದಾಗ ಅಮೋಘಸಿದ್ಧನ ಬಗೆಗೆ ಇನ್ನೂ ಹೆಚ್ಚಿನ ಮಾಹಿತಿಗಳು ಲಭ್ಯವಾಗುತ್ತವೆ.

೪. ದೈವಗಳು

ಕುರುಬರು ಧಾರ್ಮಿಕ ವಿಷಯದಲ್ಲಿ ತುಂಬ ನಿಷ್ಠೆಯುಳ್ಳವರು. ಆಚರಣೆ, ಪೂಜೆ, ಪುನಸ್ಕಾರ, ಜಾತ್ರೆ ಉತ್ಸವಗಳನ್ನು ನಿಗದಿತ ಸಮಯಕ್ಕೆ ನಡೆಸಿಕೊಂಡು ಬರುವರು. ಹೀಗಾಗಿ ಕುರುಬರು ಅನೇಕ ದೈವಗಳನ್ನು ಹೊಂದಿದವರಾಗಿದ್ದಾರೆ. ಬೀರಪ್ಪ, ಮಾಳಪ್ಪ, ಮೈಲಾರ, ಇಟ್ಟಪ್ಪ, ಸಿದ್ಧಪ್ಪ, ಮಾಯವ್ವ ಇತ್ಯಾದಿ ದೈವಗಳನ್ನು ಪರಂಪರಾಗತವಾಗಿ ಪೂಜಿಸಿಕೊಂಡು ಆರಾಧಿಸಿಕೊಂಡು ಬರುತ್ತಿದ್ದಾರೆ. ಬೀರಪ್ಪ ದೈವಗಳಲ್ಲಿ 'ಬೀರಪ್ಪ' ಕುರುಬ ಸಮಾಜಕ್ಕೆ ಅಗ್ರಗಣ್ಯನಾಗಿದ್ದಾನೆ. ಪ್ರತಿಯೊಂದು ಗ್ರಾಮದಲ್ಲಿಯೂ ಬೀರಪ್ಪನ ಗದ್ದುಗೆ ಹಾಗೂ ದೇವಾಲಯಗಳಿರುವುದನ್ನು ನಾವು ಈಗಲೂ ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಬೀರಪ್ಪನ ಕುರಿತು ಈವರೆಗೆ ನಡೆದ ಅಧ್ಯಯನಗಳನ್ನು ಈಗ ಅವಲೋಕಿಸಬಹುದು.

ಬೀರೇಶ್ವರನ ಚರಿತ್ರೆ - ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ (೧೯೫೮)

ಮತೋದ್ಧಾರವನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡು ೧೯೫೮ರಲ್ಲಿ ಬಂಕಾಪುರದ ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರು ತಮ್ಮ ಇಳಿವಯಸ್ಸಿನಲ್ಲಿ (೭೬) ಬೀರೇಶ್ವರ ಚರಿತೆಯನ್ನು ರಚಿಸಿದ್ದಾರೆ. ೪೦ ಪುಟಗಳ ಈ ಕೃತಿಯು ಬೀರೇಶ್ವರರ ಸಂಕ್ಷಿಪ್ತ ಚರಿತ್ರೆಯೊಂದಿಗೆ ಸಂಪೂರ್ಣ ಮಾಹಿತಿ ಹೊಂದಿದೆ. ಕಥಾಹಂದರದಲ್ಲಿ ಅಲ್ಪಸ್ವಲ್ಪ ಬದಲಾವಣೆಗೊಂಡರೂ ಮೂಲ ಕಥೆಗೆ ಧಕ್ಕೆ ಬರುವುದಿಲ್ಲ. ಬಿಲ್ಲಾಸುರನ ಜನನ, ವೀರೇಶ್ವರನ ಜನನ, ಬಿಲ್ಲಾಸುರನ ಮರಣ, ಹಾಲುಮತ ಕುರುಬರ ಉತ್ಪತ್ತಿ, ಬೀರೇಶ್ವರನ ಜನನ, ಐದು ಮಂದಿ ದೇವಗನ್ನೆಯರಿಂದ ಐದು ಹೆಣ್ಣುಮಕ್ಕಳ ಜನನ, ಅಕ್ಕ ಮಾಯವ್ವನಿಗೆ ಬೀರೇಶನು ದೊರೆತುದು, ಸುರನಾರಿಯು ಕುರಿಯಾಗಿ ಬೀರೇಶನಿಂದ ಶಾಪವಿಮೋಚನೆ, ಅನೇಕ ಪವಾಡಗಳನ್ನು ಮಾಡುತ್ತಾ ಬೆಳಗುತ್ತಿಗೆ ಹೋದುದು ಬೀರೇಶ್ವರನ ವಿವಾಹ, ಬೀರೇಶನು ಹಾಲುಮತದ ಕುರುಬರ ಉತ್ಪತ್ತಿಯ ಕಥೆ (ಶಿವನಿಂದ ನಿರೂಪಿಸಲ್ಪಟ್ಟ ಕಥೆಯಲ್ಲಿ ಬೀರೇಶನ ಶಿಷ್ಯ ಮಾಳಿಂಗನಿಗೆ ಕಥೆ ಹೇಳುವುದು), ವೀರಗೊಲ್ಲಾಳನ ಚರಿತ್ರೆ, ಶಿಷ್ಯ ಮಾಳಿಂಗರಾಯನ ಪವಾಡಗಳು, ಅಂತ್ಯದಲ್ಲಿ ಕೌರುಬ ಋಷಿಯಿಂದ ಕುರುಬರ ಗೋತ್ರ ಸಂಹಿತೆ, ಇತಿಹಾಸ ಮಂಜರಿ ಮೊದಲಾದವುಗಳ ಶ್ಲೋಕಗಳನ್ನು ಉಲ್ಲೇಖಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ(ಪುಟ ೨೮).

ಕೊಣ್ಣೂರು ಶ್ರೀ ಕರಿಸಿದ್ದೇಶ್ವರ ದೇವಸ್ಥಾನ - ಶ್ರೀರಾಮ ಇಟ್ಟಣ್ಣವರ (೧೯೯೫)

ಶ್ರೀರಾಮ ಇಟ್ಟಣ್ಣವರ ಅವರು ೧೯೯೫ರಲ್ಲಿ 'ಕೊಣ್ಣೂರು ಶ್ರೀ ಕರಿಸಿದ್ದೇಶ್ವರ ದೇವಸ್ಥಾನ' ಎಂಬ ಜನಸಾಮಾನ್ಯರ ಮೌಖಿಕ ರೂಪದಲ್ಲಿರುವ ವಿವರಗಳನ್ನು ಗ್ರಂಥ ರೂಪದಲ್ಲಿ ಪ್ರಕಟಿಸಿದ್ದಾರೆ. ಯಾವುದೇ ವ್ಯಕ್ತಿ, ಸಮಾಜ, ಸಾಹಿತ್ಯಗಳ ಹಿಂದೆ ಸಂಸ್ಕಾರಗಳ ಪಾತ್ರ ದೊಡ್ಡದು. ತಮ್ಮ ಹುಟ್ಟೂರಾದ ಕೊಣ್ಣೂರಿನ ಸಂಸ್ಕೃತಿ ಸಂಸ್ಕಾರಗಳು ಈ ಕೃತಿಯಲ್ಲಿ ಮೇಳೈಸಿವೆ. ಇದು ಎಂಟು ವಿಭಾಗಗಳನ್ನು ಹೊಂದಿದ್ದು ೭೨ ಪುಟಗಳ ವಿಸ್ತಾರವನ್ನು ಪಡೆದಿದೆ. ಕೃತಿಯ ಅಂತ್ಯದಲ್ಲಿಯ ಛಾಯಾಚಿತ್ರಗಳು ಸಾಹಿತ್ಯಾಸಕ್ತರಿಗೆ ವಿಪುಲವಾದ ಮಾಹಿತಿಗಳನ್ನು ಒದಗಿಸಿಕೊಡುತ್ತವೆ. ದೇವಾಲಯಗಳನ್ನು ಜಾನಪದ ಅಭ್ಯಾಸದ ಹಿನ್ನೆಲೆಯಲ್ಲಿ ಗಮನಿಸಿ

ಅವುಗಳ ಸ್ವರೂಪ, ಸ್ಥಳೀಯರ ನಂಬಿಕೆ, ಆಚರಣೆ, ಕಲೆ, ಸಾಹಿತ್ಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಲೇಖಕರು ಕೃತಿಯ ವಿಷಯವ್ಯಾಪ್ತಿ ಮತ್ತು ಉದ್ದೇಶಗಳ ಕುರಿತಾಗಿ ಹೀಗೆ ಹೇಳಿದ್ದಾರೆ. "...ಕರಿಸಿದ್ದೇಶ್ವರನಿಗೆ ಸಂಬಂಧಿಸಿದ ಇಲ್ಲಿಯ ಪೌರಾಣಿಕ ವಿಷಯ ಅನ್ಯ ಪುರಾಣಗಳನ್ನು ತೌಲನಿಕವಾಗಿ ಅಭ್ಯಸಿಸಲು ಪ್ರೇರೇಪಿಸುತ್ತದೆಂದು ಆಶಿಸಲಾಗಿದೆ. ಈ ಬಗೆಯ ಅಭ್ಯಾಸವನ್ನು ಮುಂದೆ ಕೈಕೊಳ್ಳುವವರಿಗೆ ಇಲ್ಲಿ ನಿರೂಪಿಸಲಾಗಿದೆ. ಆದರೆ ಇವರ ಜೀವನ ವಿಧಾನ, ಸಂಸ್ಕಾರ ಮುಂತಾಗಿ ಮತೀಯ ವಿಷಯಗಳನ್ನಿಲ್ಲಿ ಚರ್ಚಿಸಿಲ್ಲ. ಗ್ರಂಥದ ಉದ್ದೇಶವನ್ನು ಲಕ್ಷದಲ್ಲಿರಿಸಿಕೊಂಡು ಕರಿಸಿದ್ಧೇಶ್ವರ ದೇವಸ್ಥಾನಕ್ಕೆ ಮಾತ್ರ ಸಂಬಂಧಪಟ್ಟಂತೆ ಇಲ್ಲಿಯ ಪೂಜಾರಿಗಳ ಭಕ್ತರ ವಿಷಯಗಳನ್ನು ಹೇಳಲಾಗಿದೆ"[೧೯]

ಕೋಣನೂರು>ಕೊಣ್ಣೂರಾಗಿ ಬದಲಾಗಿದೆ. ಕರಿಸಿದ್ದೇಶ್ವರನು ಕೋಣಾಸುರನನ್ನು ಕೊಂದ ಕಾರಣ ಸ್ಥಳವನ್ನು ಕೊಣ್ಣೂರು ಎಂದು ಕರೆಯಲಾಗಿದೆ. ಬಿಜಾಪುರದಿಂದ ೬೦ ಕಿ.ಮೀ. ದೂರದಲ್ಲಿದ್ದು ಹಾಲುಮತ ಆರಾಧ್ಯ ದೈವವಾಗಿ ಪೂಜಿಸಲ್ಪಡುತ್ತಿದೆ. ಬೀರಪ್ಪನನ್ನೇ ಕರಿಸಿದ್ದೇಶ್ವರ ಎಂದು ಕರೆಯುವದು ರೂಢಿಯಲ್ಲಿದೆ. ಪೌರಾಣಿಕ ಹಿನ್ನೆಲೆಯಲ್ಲಿ ಬೀರಪ್ಪನ ಹುಟ್ಟು, ಬಾಲ್ಯ, ಯವ್ವನ ಪವಾಡಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಕರಿಸಿದ್ದೇಶ್ವರ ದೇವಾಲಯದ ರಚನಾಕ್ರಮ, ಕೋಣಾಸುರ ವಧಿಸಲ್ಪಟ್ಟ ಸ್ಥಳದ ಮಾಲಗಂಬ(ಪುಟ ೧೭), ಕರಿಸಿದ್ದೇಶ್ವರನ ನಿಜ ಶಿಷ್ಯರ ಪರೀಕ್ಷೆಯಲ್ಲಿ ಜಯಗಳಿಸಿದ ಮಾಳಿಂಗರಾಯ, ಪೂಜಾ ವಿಧಾನಗಳು, ಪೂಜಾರಿಗಳ ವಂಶಾವಳಿಯ ಪಟ್ಟಿ, ಅವರ ಜೀವನಾಕ್ರಮ ಭಿಕ್ಷೆಯಲ್ಲಿಯ ವಿಧಗಳು (ಪುಟ ೨೭) ಮತ್ತು ಅವರು ಅನುಸರಿಸುವ ಕ್ರಮ, ಪಲ್ಲಕ್ಕಿ ಸೇವೆ, ಜಾತ್ರೆ ಉತ್ಸವಗಳ ವಿವರಗಳು ಅಧ್ಯಯನಕಾರರಿಗೆ ಆಸಕ್ತಿಯನ್ನು ಮೂಡಿಸುತ್ತವೆ. ಕೊಣ್ಣೂರ ಕರಿಸಿದ್ದೇಶ್ವರ ಕುರಿತ ಜಾನಪದ ಹಾಡು (ಪುಟ ೪೯) ಡೊಳ್ಳಿನ ಹಾಡು, ಹರಕೆಯ ಹಾಡು, ಮಂಗಳಾರತಿ ಹಾಡುಗಳನ್ನು ಕೊನೆಯಲ್ಲಿ ಕೊಡಲಾಗಿದೆ. ಒಟ್ಟಿನಲ್ಲಿ ಬೀರಪ್ಪನ ಪ್ರಮುಖ ನೆಲೆಗಳಲ್ಲಿ ಒಂದಾದ ಕೊಣ್ಣೂರು ಕ್ಷೇತ್ರವನ್ನು ಸಮಗ್ರವಾಗಿ ಪರಿಚಯಿಸಿರುವುದು ಈ ಕೃತಿಯ ಉದ್ದೇಶವಾಗಿದೆ.

ಬೀರದೇವರ ಸಂಪ್ರದಾಯ ಮತ್ತು ಆಚರಣೆಗಳು - ದೊಡ್ಡಣ್ಣ ಗದ್ದನಕೇರಿ (೨೦೦೨)

ಅರವತ್ತೆರಡು ಪುಟಗಳ ಈ ಲಘು ಕೃತಿಯು ೨೦೦೨ರಲ್ಲಿ ಪ್ರಕಟಿಸಲ್ಪಟ್ಟು ಹತ್ತು ಭಾಗಗಳಲ್ಲಿ ವಿಷಯ ವಿಸ್ತಾರವನ್ನು ಪಡೆದಿದೆ. ಮುನ್ನುಡಿಯನ್ನು ಪ್ರೊ. ಚೆನ್ನಪ್ಪ ಕಟ್ಟಿ ಬರೆದರೆ ಬೆನ್ನುಡಿಯನ್ನು ಡಾ. ವೀರೇಶ ಬಡಿಗೇರ ಅವರು ಬರೆದು ಕೃತಿ ಮೌಲ್ಯವನ್ನು ಹೆಚ್ಚಿಸಿದ್ದಾರೆ. 'ಎನ್ನ ಗುಡಿಯೊಳಗಿನ ಮಾತು' ಭಾಗದಲ್ಲಿ ಲೇಖಕರು ಕ್ಷೇತ್ರಕಾರ್ಯದಲ್ಲಿ ಅನುಭವಿಸಿದ ಕಷ್ಟನಷ್ಟಗಳ, ಸಾಂಸ್ಕೃತಿಕ ಕಳಕಳಿ ಹಾಗೂ ಶ್ರಮವನ್ನು ಗುರುತಿಸಬಹುದಾಗಿದೆ. ಮುನ್ನುಡಿಯಲ್ಲಿ ಪ್ರೊ. ಚೆನ್ನಪ್ಪ ಕಟ್ಟಿ ಅವರು ಮುಳುಗಡೆ ಪ್ರದೇಶದ ಜನಮಾನ್ಯರು ತಮ್ಮ ವ್ಯಾಪ್ತಿ ಪ್ರದೇಶದ ಗುಡಿ, ಊರು, ಶಾಲೆ, ಮನೆ ಮಠ ದೈವ ಹೀಗೆ ಹಲವಾರು ವಿಷಯಗಳಿಂದ ಭಾವನಾತ್ಮಕ ನೆಲೆಯಲ್ಲಿ ಒಡನಾಟ, ಸಾಂಸ್ಕೃತಿಕ ಸಂಬಂಧಗಳು ಸರಕಾರದ ಅನುದಾನ ಪರಿಹಾರಗಳಿಂದ

ಪ್ರತ್ಯೇಕವಾಗಿ ಉಳಿದುಬಿಡುತ್ತದೆ. ಆ ನಷ್ಟ ಭರಿಸುವಲ್ಲಿ ಸರಕಾರದ ಸವಲತ್ತುಗಳು ವಿಫಲತೆಯನ್ನು ಹೊಂದುವ ಹೃದಯಸ್ಪರ್ಶಿ ವಿಚಾರಗಳನ್ನು ಚರ್ಚಿಸಿದ್ದಾರೆ.

'ಅಳಿಯುವ ಮುನ್ನ ಉಳಿಯುವ ಕಾರ್ಯ'ಕ್ಕೆ ಕೈ ಹಾಕಿದ ಶ್ರೇಯಸ್ಸು ದೊಡ್ಡಣ್ಣ ಗದ್ದನಕೇರಿ ಅವರದಾಗಿದೆ. ಪುರಾತನ ಬೀರಪ್ಪನ ದೇವಾಲಯಗಳು ಹಾಲುಮತದ ಚರಿತ್ರೆಯನ್ನು ಕಟ್ಟಿಕೊಟ್ಟರೆ ಬೀರಪ್ಪ ಜನಸಾಮಾನ್ಯರ ಆರಾಧ್ಯದೈವವಾಗಿ ಪೂಜ್ಯನೀಯನಾಗುತ್ತಾನೆ. ಇಂಥ ಅಪೂರ್ವವಾದ ದಾಖಲೆಗಳನ್ನು ಗುಲಬರ್ಗಾ, ಬಿಜಾಪುರ, ಬೆಳಗಾಂವ, ರಾಯಚೂರು, ಬಾಗಲಕೋಟೆ ಜಿಲ್ಲೆಗಳಲ್ಲಿ ಸಂಗ್ರಹಿಸಿದ್ದಾರೆ. ಬೀರದೇವರ ಸಂಪ್ರದಾಯ ಮತ್ತು ಆಚರಣೆಗಳು ಎಲ್ಲೆಡೆ ಒಂದೇ ರೀತಿಯಾಗಿಲ್ಲ. ಕೆಲವು ಕಡೆ ವಿಶಿಷ್ಟತೆಯನ್ನು ಕಾಯ್ದುಕೊಂಡಿವೆ. ಇನ್ನು ಕೆಲವೆಡೆ ಸಾರ್ವತ್ರಿಕ ಆಚರಣೆಗಳನ್ನು ಹೊಂದಿವೆ. ಪ್ರಾದೇಶಿಕವಾಗಿ ಭಿನ್ನತೆ ಹೊಂದಿದ ಆಚರಣೆಗಳನ್ನು ತೌಲನಿಕವಾಗಿ ವಿವರಿಸಲಾಗಿದೆ.

ಲೇಖಕರು ತಮ್ಮ ಕ್ಷೇತ್ರವ್ಯಾಪ್ತಿಯನ್ನು ತಿಳಿಸುತ್ತಾ ಹೀಗೆ ಹೇಳಿದ್ದಾರೆ, 'ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನ ಮುರನಾಳ, ಶಿರಗುಪ್ಪ, ತಳಗಿಹಾಳ, ಆಲೂರು, ಗೋವಿಂದಕೊಪ್ಪ, ಬೀಳಗಿ ತಾಲೂಕಿನ ಬೀರಕಬ್ಬಿ, ಬೂದಿಹಾಳ, ಎಸ್.ಎ.ಕಂದಗಲ್ಲ, ಹೆರೆಕಲ್ಲ, ಯಳ್ಳಿಗತ್ತಿ, ಕಮದಾಳ, ಹರದಾಳ, ವಿಜಾಪುರ ಜಿಲ್ಲೆಯ ವಿಜಾಪುರ ತಾಲೂಕಿನ ಕಣಬೂರು, ಸುಕಗುಂಡಿ, ಜೈನಾಪೂರ, ಮುದ್ದೆಬಿಹಾಳ ತಾಲೂಕಿನ ಬಿಜ್ಜೂರ, ಅಮರಗೋಳ, ಟಕ್ಕಳ ಘಾಳಪೂಜಿ, ಸಿದ್ಧಾಪೂರ, ಜಂಜಿರಗಡ್ಡ, ಬೆಳಗಾಂವ ಜಿಲ್ಲೆಯ ಅಥಣಿ ತಾಲೂಕಿನ ಶಿರಹಟ್ಟಿ, ಬಡವಾಳ, ರಾಯಚೂರ ಜಿಲ್ಲೆಯ ಲಿಂಗಸುಗೂರು ತಾಲೂಕಿನ ಪಲಗಲಿದಿನ್ನಿ ಉಪನಾಳ ಹೀಗೆ ಅಂದಾಜು ೨೫ ಬೀರದೇವರ ದೇವಸ್ಥಾನಗಳು ಕೃಷ್ಣ ಹಾಗೂ ಘಟಪ್ರಭೆಯ ಎಡಬಲ ದವಡೆಗಳಲ್ಲಿ ಮುಳುಗುವ ಹಾಗೂ ಮುಳುಗಲಿರುವ ದೇವಸ್ಥಾನಗಳ ಸಂಪ್ರದಾಯ ಆಚರಣೆಗಳನ್ನು ಈ ಕೃತಿಯ ಮೂಲಕ ದಾಖಲಿಸಲಾಗಿದೆ.'[೫]

ಲೇಖಕರು ತಾವು ಸಂಗ್ರಹಿಸಿರುವ ದಾಖಲೆಗಳಿಗೆ ಪೂರಕವಾಗಿ ಬೀರದೇವರ ಜನನ ಮತ್ತು ಲೀಲೆಗಳನ್ನು ವಿವಿಧ ಆಕರಗಳ ನೆರವಿನಿಂದ ಆರಂಭದಲ್ಲಿ ವಿವರಿಸಿದ್ದಾರೆ. ಆ ಮೂಲಕ ಬೀರದೇವರ ಸಮಗ್ರ ಪರಿಚಯವನ್ನು ವಿವರಿಸುವ ಕೃತಿ ಇದಾಗಿದೆ.

ಒಟ್ಟಿನಲ್ಲಿ ಕೃಷ್ಣಾನದಿ ಮುಳುಗಡೆಯಿಂದಾಗಿ ಇದು ಕಣ್ಣಿಗೆ ಕಾಣದ, ಕಾಲಗರ್ಭದಲ್ಲಿ ಹುದುಗಿಹೋದ ಬೀರದೇವರ ಸಂಪ್ರದಾಯ ಆಚರಣೆ ಹಾಗೂ ಗುಡಿ ಗದ್ದುಗೆಗಳಂಥ ಅವಶೇಷಗಳನ್ನು ದಾಖಲಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವ, ನೆನಪಿಸುವ ಕಾರ್ಯವನ್ನು ಮಾಡಿದ ಗದ್ದನಕೇರಿ ಅವರು ಅಭಿನಂದನಾರ್ಹರು.

ಭಗವಾನ್ ಬೀರೇಶ್ವರ-ಬೋನಾ ಬಸವರಾಜ (೨೦೦೪)

ಬಾಗಲಕೋಟೆಯ ಬೋನಾ ಬಸವರಾಜ ಅವರು ೨೦೦೪ರಲ್ಲಿ ಗದುಗಿನ ವಿದ್ಯಾನಿಧಿ ಪ್ರಕಾಶನದಿಂದ

ಈ ಕೃತಿಯನ್ನು ಪ್ರಕಟಿಸಿದ್ದಾರೆ. ಸಾಹಿತ್ಯಾಸಕ್ತರಾದ ಇವರು ಹಾಲುಮತ ಸಮಾಜಕ್ಕಾಗಿ ಸಾಕಷ್ಟು ಕೆಲಸ ಮಾಡಿದವರು. ಇಳಿವಯಸ್ಸಿನ ಬಸವರಾಜ ಬೋನಾ (೮೦ವರ್ಷ) ಅವರ ಆಸಕ್ತಿಯು ತರುಣ ಪೀಳಿಗೆಗೆ ಮಾದರಿಯಾಗಿದೆ.

ಕೃತಿ ರಚನಾ ಸಂದರ್ಭದಲ್ಲಿ ಹಲವಾರು ಆಕರಗಳಿಂದ ವಿದ್ವಾಂಸರ ಹೇಳಿಕೆಗಳಿಂದ ಕ್ಷೇತ್ರಕಾರ್ಯಗಳಿಂದ ಜನಪದದಿಂದ (ಡೊಳ್ಳಿನ ಪದ) ಮಾಹಿತಿ ಸಂಗ್ರಹಿಸಿ ಪೌರಾಣಿಕ ನೆಲೆಯನ್ನು ವ್ಯಕ್ತಿನಾಮ ಮತ್ತು ಸ್ಥಳನಾಮಗಳಲ್ಲಿಯ ಭಿನ್ನತೆಯನ್ನು ಗುರುತಿಸಿ ಕೃತಿಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸಿ ಸ್ವಂತಿಕೆ ಉಳಿಸಲು ಯತ್ನಿಸಿರುವುದನ್ನು ಗುರುತಿಸಬಹುದು. ಬೀರಪ್ಪ ಮತ್ತು ರೇವಣಸಿದ್ಧರ ಕಾಲದ ವ್ಯತ್ಯಾಸವನ್ನು ವಿದ್ವಾಂಸರ ಹೇಳಿಕೆಗಳಿಂದ ಸ್ಪಷ್ಟಪಡಿಸಿರುವರು. ಪ್ರಾಚೀನ ಕಾಲದಿಂದ ಪ್ರಸ್ತುತ ದಿನಗಳಲ್ಲಿಯವರೆಗೆ ಮತದ ಅನಾದರ ಅಲಕ್ಷ್ಯಗಳನ್ನು ಗುರುತಿಸಿ ಮತಬಾಂಧವರೆಲ್ಲ ತಮ್ಮ ಕರ್ತವ್ಯ, ಸಮಯಪ್ರಜ್ಞೆ, ಆಚಾರ ವಿಚಾರಗಳನ್ನು ಚರ್ಚಿಸಿ ಎಚ್ಚರಿಸಿಕೊಳ್ಳಲು ಹೀಗೆ ಕರೆನೀಡಿದ್ದಾರೆ. “...ಆಗ ಮಧುರನು ಪಂಡಿತರುಂ ವಿವಿಧ ಕಳಾ ಮಂಡಿತರುಂ ಕೇಳ್ವಕಾವ್ಯಮಿದೆನ್ನುದು ಭಲಾ? ಕಂಡವರಿಗೊರೆಯ ಗೊರವರ ಡುಂಡುಚಿಯೆ ಬೀದಿವರಿಯಲ್ ಬೀರನ ಕಥೆಯೆ? ಎಂದು ಬೀರೇಶ್ವರ ಸಂಪ್ರದಾಯವನ್ನು ಮೂದಲಿಸುತ್ತಾನೆ. ಬೀರೇಶ್ವರರ ಬಗೆಗಿದ್ದ ತನ್ನ ತುಚ್ಛೀಕರಣವನ್ನು ಗ್ರಂಥಸ್ಥಗೊಳಿಸಿದ್ದಾನೆಂದರೆ ನಾವು ಬೇರೆಯವರ ಕಣ್ಣಲ್ಲಿ ಎಷ್ಟೊಂದು ಕೀಳಾಗಿ ಕಂಡಿದ್ದೇವೆ.... ನಾವು ಕುರುಬರೆಂದು ಹೇಳಿಕೊಳ್ಳಲು ಹಿಂಜರಿಯುವ ಕುರುಬರಿದ್ದಾರೆಂದರೆ ಎಂತಹ ನಾಚಿಕೆಗೇಡು. ನಮಗೆ ಶಿಕ್ಷಣವಿಲ್ಲ, ಸಂಸ್ಕಾರವಿಲ್ಲ ನಮ್ಮತನವಿಲ್ಲ. ಶಿಸ್ತು ಹಾಗೂ ಸಂಘಟನೆ ಇಲ್ಲ. ಸ್ವಾಭಿಮಾನ ಸ್ವಂತಿಕೆಯಲ್ಲಿ ಒಟ್ಟಾರೆ ಬೀರಪ್ರಜ್ಞೆಯಿಲ್ಲ(ಪುಟ xi).

ಬೀರೇಶ್ವರರನ ವೃತ್ತಾಂತದೊಂದಿಗೆ ಇತರ ವಿಷಯಗಳು ಸರಳ ಭಾಷೆಯಲ್ಲಿ ನಿರೂಪಣೆಗೊಂಡಿದ್ದು ಅನೇಕ ವಿಚಾರಗಳು ಭಿನ್ನ ನಿಲುವುಗಳಲ್ಲಿ ಚರ್ಚಿಸಲ್ಪಟ್ಟು ಓದುಗರ ಆಸಕ್ತಿಯನ್ನು ಹೆಚ್ಚಿಸುತ್ತವೆ. ಕೃತಿಯ ಕಥಾಪ್ರಸಂಗಗಳು ವಾಸ್ತವ ಜೀವನದೊಂದಿಗೆ ಸಮೀಕರಣಗೊಂಡು ಕಥಾವ್ಯಕ್ತಿಗಳು ನಮ್ಮಲ್ಲಿರುವಂತೆ ಸಾಮಾನ್ಯರಾಗಿದ್ದಾರೆ(ಪುಟ ೧೬). ಕಥೆಯು ಸಂಶೋಧನಾತ್ಮಕ ಮತ್ತು ಭಾವನಾತ್ಮಕ ನೆಲೆಗಳಲ್ಲಿ ತಳುಕುಹಾಕಿಕೊಂಡಿದೆ(ಪುಟ ೯೧). ಬೀರಪ್ಪನ ವೃತ್ತಾಂತದ ಸಂದರ್ಭದ ಹಳೆಯ ವಿಚಾರಗಳು ಹೊಸ ರೀತಿಯಲ್ಲಿ ನಿರೂಪಣೆಗೊಂಡಿವೆ(ಪುಟ ೮೨). ಇಲ್ಲಿನ ಅನೇಕ ವಿಷಯಗಳು ಮತ್ತೆ ಮತ್ತೆ ಚಿಂತನೆಗೆ ತೊಡಗಿಸುತ್ತವೆ.

ಶ್ರೀ ರೇವಣಸಿದ್ದೇಶ್ವರ ಮತ್ತು ಬೀರೇಶ್ವರರು - ಪ್ರೊ. ಒಡೆಯರ್ ಡಿ. ಹೆಗ್ಗಡೆ (೨೦೦೫)

ಪ್ರೊ. ಒಡೆಯರ್ ಡಿ. ಹೆಗ್ಗಡೆ ಅವರು ದಕ್ಷಿಣ ಭಾರತದ ಆದಿ ದೈವಗಳಾದ ರೇವಣಸಿದ್ಧ ಮತ್ತು ಬೀರೇಶ್ವರರನ್ನು ಪರಿಚಯಿಸುವ ‘ಶ್ರೀ ರೇವಣಸಿದ್ದೇಶ್ವರ ಮತ್ತು ಶ್ರೀ ಬೀರೇಶ್ವರರು’ ಎಂಬ ಕೃತಿಯನ್ನು ೨೦೦೫ರಲ್ಲಿ ಪ್ರಕಟಿಸಿದ್ದಾರೆ. ಲೇಖಕರು ಹಲವಾರು ಮೂಲಗಳಿಂದ ಆಕರಗಳನ್ನು ಬಳಸಿ, ಕ್ಷೇತ್ರಕಾರ್ಯದಿಂದ

ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಮೊದಲ ಭಾಗವು ರೇವಣಸಿದ್ಧರನ್ನು ಪರಿಚಯಿಸಿದರೆ ಎರಡನೆಯ ಭಾಗವು ಬೀರೇಶನನ್ನು ಪರಿಚಯಿಸುತ್ತದೆ. ಪ್ರಸ್ತುತ ಬೀರೇಶ್ವರ ಅಧ್ಯಯನವಾದ್ದರಿಂದ ಎರಡನೆಯ ಭಾಗವನ್ನು ಮಾತ್ರ ಇಲ್ಲಿ ಅವಲೋಕಿಸಲಾಗಿದೆ.

ಬೀರಭದ್ರನು ೧೨ನೆಯ ಶತಮಾನದ ನಂತರ ವೀರಭದ್ರನಾದ ಬುಡಕಟ್ಟು ಜನಪದ ಅಥವಾ ವೀರ ಪರಂಪರೆಯ ದೇವತೆಯಾದ, ಪೂಜಿಸುವ ವಾರಗಳು, ಬೀರದೇವರ ಗುಡಿಗಳಿರುವ ಊರುಗಳು, ಪೌರಾಣಿಕ ನೆಲೆಯಲ್ಲಿಯ ಜನನ, ಜಾತ್ರೆಯ ಸಮಯದಲ್ಲಿ ಮಾಡುವಂತಹ ಪೂಜಾಕ್ರಿಯೆ, ಪೂಜಾ ವಿಧಾನಗಳು, ಬೀರದೇವರ ದೇವಸ್ಥಾನದ ನಿರ್ಮಾಣ, ಅಂತ್ಯದಲ್ಲಿ ಮಾಹಿತಿದಾರರ ಪಟ್ಟಿಯನ್ನು ನೀಡಲಾಗಿದೆ.

ಒಟ್ಟಿನಲ್ಲಿ ಸಂಕ್ಷಿಪ್ತತೆಯಲ್ಲಿ ಸಮಗ್ರತೆಯನ್ನು ಹೊಂದಿದ್ದು ಆಚಾರ-ವಿಚಾರ, ಪೌರಾಣಿಕ, ಚಾರಿತ್ರಿಕ ಕಾಲ್ಪನಿಕ ಚಿತ್ರಗಳಿಗೆ ಮೂರ್ತರೂಪ ಒದಗಿಸಿ ಸರಿಯಾದ ಸಾಕ್ಷಾಧಾರಗಳಿಂದ ಸ್ಪಷ್ಟಪಡಿಸಿದ ಶ್ರೇಯಸ್ಸು ಈ ಕೃತಿಯದ್ದಾಗಿದೆ. ದಕ್ಷಿಣ ಕರ್ನಾಟಕ ಅದರಲ್ಲಿಯೂ ಮಂಡ್ಯ, ಮೈಸೂರು ಜಿಲ್ಲೆಯ ಬೀರಪ್ಪನ ದೇವಾಲಯಗಳಲ್ಲಿ ನಡೆಯುವ ಜಾತ್ರೆ-ಉತ್ಸವ ಆಚರಣೆಗಳ ಅವಲೋಕನವು ಈ ಕೃತಿಯ ಮೂಲಕ ನಡೆದಿದೆ. ಅಲ್ಲದೇ ದಕ್ಷಿಣ ಕರ್ನಾಟಕದಲ್ಲಿರುವ ಬೀರದೇವರ ದೇವಸ್ಥಾನಗಳ ವಿವರಗಳುಸಂಶೋಧಕರಿಗೆ ಸಹಾಯಕಾರಿಯಾಗುತ್ತದೆ.

ಬೀರಪ್ಪದೇವನ ಉಪಾಸಕರ ಮಾದರಿಗಳು ಮತ್ತು ಕ್ಷೇತ್ರಗಳು - ಪ್ರೊ. ಜ್ಯೋತಿ ಹೊಸೂರು (೨೦೦೭)

ಪ್ರೊ. ಜ್ಯೋತಿ ಹೊಸೂರ ಅವರು ೨೦೦೭ರಲ್ಲಿ 'ಬೀರಪ್ಪದೇವನ ಉಪಾಸಕರ ಮಾದರಿಗಳು ಮತ್ತು ಕ್ಷೇತ್ರಗಳು' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಗೋಲ್ಗೆರಿಯ ಗೊಲ್ಲಾಳ, ಹುಲಜಂತಿಯ ಮಾಳಪ್ಪ, ಪಟ್ಟಣ ಕಡೋಲಿಯ ಇಟ್ಟಪ್ಪ ಹೆಸರಿನ ಮೂವರು ಮಹಾಪುರುಷರ ಪರಿಚಯ ಮತ್ತು ಅವರ ಕ್ಷೇತ್ರಗಳ ಮಾಹಿತಿಗಳನ್ನು ಇಲ್ಲಿ ಚರ್ಚಿಸಲಾಗಿದೆ. ಹಾಲುಮತದ ಈ ಮಹಾಪುರುಷರು ಬೀರಪ್ಪನೊಂದಿಗೆ ಹೊಂದಿದ ಸಂಬಂಧಗಳ ಎಳೆಗಳನ್ನು ವಿಮರ್ಶಿಸಲಾಗಿದೆ. ಬೀರಪ್ಪ ಮತ್ತು ಇಟ್ಟಪ್ಪ ಅಭಿನ್ನರೆಂಬ ವಾದವನ್ನು ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ. "ಇತ್ತಿತ್ತಲಾಗಿ ಪಟ್ಟಣಕಡೋಲಿಯ ಇಟ್ಟಪ್ಪ ದೇವನು ವಿಠಲ-ಬಿರೋಬಾ" ಎಂಬುದಾಗಿ ಸಂಬೋಧನೆಗೊಳ್ಳಲಾರಂಭಿಸಿದ್ದಾನೆ. ಆ ಕ್ಷೇತ್ರವು ಈಗ 'ವಿಠಲ ಬಿರೋಬಾ' ಕ್ಷೇತ್ರವೆಂದೇ ಹೆಸರಾಗಿದೆ. ಒಂದರ್ಥದಲ್ಲಿ ಈ ಇಟ್ಟಪ್ಪದೇವ ಬೀರಪ್ಪದೇವನೇ ಆಗಿದ್ದಾನೆ. (ಪುಟ ೧೪) ಆದರೆ ಕೆಲವು ವಿದ್ವಾಂಸರು 'ಇಟ್ಟಪ್ಪ ಮತ್ತು ಬೀರಪ್ಪ ಸಮಕಾಲೀನರು' ಎಂಬ ಹೇಳಿಕೆಯಿಂದ ಕೊಂಚ ಗೊಂದಲ ಉಂಟಾಗುತ್ತದೆ.[೧೬]

ಗೋಲ್ಗೆರಿಯ ಗೊಲ್ಲಾಳನು ೧೨ನೆಯ ಶತಮಾನದಲ್ಲಿ ಬಾಳಿದ ಶರಣನಾಗಿದ್ದು 'ವೀರ ಬೀರೇಶ್ವರ' ಎಂಬ ಅಂಕಿತದಿಂದ ರಚಿಸಿದ ವಚನ (ಆರಾಧ್ಯ ದೇವರ ಹೆಸರನ್ನು ಅಂಕಿತವಾಗಿ ಬಳಸುವ ಪರಿಪಾಠದಂತೆ)

ವಿವರಗಳಿಂದ ದೃಢ ಪಡಿಸಲಾಗಿದೆ. ಹುಟ್ಟೂರಿ(ಢವಳಾರ)ನಲ್ಲಿಯ ಬಾಲ್ಯ-ಯೌವ್ವನ ಮತ್ತು ಶಿವಭಕ್ತನಾಗಿ ಬದಲಾದ ವಿಷಯಗಳನ್ನು ಗುರುತಿಸಬಹುದು.

ಲೇಖಕರು ನೀಡಿದ ಹುಲಜಂತಿಯ ಮಾಳಪ್ಪನ ಪವಾಡಗಳು ಹಾಲುಮತದ ಪುರಾಣಗಳ ಪಟ್ಟಿಯು ಆಸಕ್ತ ಅಧ್ಯಯನಕಾರರಿಗೆ ಮಾರ್ಗಸೂಚಿಯಾಗಿವೆ. ಪಟ್ಟಣ ಕಡೋಲಿಯ ಇಟ್ಟಪ್ಪನ ಕುರಿತಾಗಿ ಸ್ಥಳ-ಆಚಾರ-ವಿಚಾರಗಳ ಹಲವಾರು ಸುಳುಹುಗಳನ್ನು ನೀಡಿದ್ದಾರೆ. ಅವನ ಕುರಿತಾಗಿ ಸಮಗ್ರ ಅಧ್ಯಯನದ ಅವಶ್ಯಕತೆ ಇದೆ.

ಲೇಖನಗಳು

ಬೀರಪ್ಪನ ಕುರಿತು ಮೇಲೆ ಅವಲೋಕಿಸಿದ ಕೃತಿಗಳನ್ನಲ್ಲದೆ ಅನೇಕ ವಿದ್ವಾಂಸರು ಬಿಡಿ ಬಿಡಿ ರೂಪದ ಲೇಖನಗಳನ್ನು ಪ್ರಕಟಿಸಿದ್ದಾರೆ. ಬಿ.ಸಿ. ಜವಳಿ ಅವರ ಬೀರದೇವರು (ಜಾನಪದ ಸಾಹಿತ್ಯ ದರ್ಶನ ಭಾಗ ೯, ೧೯೮೮), ವೀರಣ್ಣದಂಡೆಯವರ ಹಾಲುಮತ ಪುರಾಣದ ಬೀರಪ್ಪ (ಕನ್ನಡ ಅಧ್ಯಯನ ೨೦೦೦) ವಿ.ಎಸ್. ಮಾಳಿ ಅವರ ಬಾಗೇನಾಡಿನ ಅಲಕನೂರಿನ ಕರಿಸಿದ್ದೇಶ್ವರ (ಹಾಲಕೆನೆ ೨೦೦೨) ಕೆ.ಎಮ್.ಮೈತ್ರಿ ಅವರ ಬೀರಪ್ಪನ ಸುತ್ತಮುತ್ತು (ಕಾಯಕಯೋಗಿ ಸಂಸ್ಮರಣ ಗ್ರಂಥ ೨೦೦೨) ಎಫ್.ಟಿ.ಹಳ್ಳಿಕೇರಿ ಹಾಗೂ ಚಂದ್ರಪ್ಪ ಅವರ ಬೀರದೇವರ ತೋಪು ಜಾತ್ರೆಯ ಆಚರಣೆಗಳು (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೨೦೦೮) ಮುಂತಾದ ಲೇಖನಗಳನ್ನು ಗಮನಿಸಬಹುದು.

ಈ ಲೇಖನಗಳನ್ನು ಅವಲೋಕಿಸಿದಾಗ ಬೀರಪ್ಪನ ಇತಿವೃತ್ತ ವಿಚಾರ, ಆತನ ನೆಲೆಯಾದ ಅಲಕನೂರು, ಹಾಲುಮತ ಪುರಾಣಗಳಲ್ಲಿ ಉಲ್ಲೇಖವಾದ ಬೀರಪ್ಪನ ಕಥೆ, ಜನಪದ ಗೀತೆಗಳಲ್ಲಿ ಬೀರಪ್ಪನನ್ನು ಕುರಿತು ಸ್ಮರಣೆ, ಸಾಗೂ ಬೀರಪ್ಪದೇವನ ಆಚರಣೆಗಳಲ್ಲಿ ತೋಪು ಜಾತ್ರೆಯ ವಿವರಗಳನ್ನು ನಾವು ಗಮನಿಸ ಬಹುದಾಗಿದೆ. ವಿಶೇಷವಾಗಿ ದಕ್ಷಿಣ ಕರ್ನಾಟಕದ ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರು ಜಿಲ್ಲೆಯಲ್ಲಿ ಬೀರಪ್ಪನ ತೋಪು ಜಾತ್ರೆ ಈಗಲೂ ನಡೆಯುತ್ತದೆ. ತೋಪು ಜಾತ್ರೆಯ ಕುರಿತು ಲೇಖಕರು ಹೇಳುವಂತೆ "ಬೀರದೇವರ ಸಾಂಸ್ಕೃತಿಕ ಆಚರಣೆಗಳಲ್ಲಿ ತೋಪು ಜಾತ್ರೆ ಬಹಳ ಮುಖ್ಯವಾದದ್ದು. ಇದು ಹಾಲುಮತ ಧರ್ಮದ ಹಲವು ಪಾರಂಪರಿಕ ಚಿಹ್ನೆಗಳನ್ನು ತನ್ನ ಅಂತರಂಗದಲ್ಲಿ ಗುಪ್ತವಾಗಿ ಅಡಗಿಸಿಕೊಂಡು ಬಹಳ ಸೂಕ್ಷ್ಮನೆಲೆಯಲ್ಲಿ ಅನಾವರಣಗೊಳಿಸುತ್ತವೆ. ಈ ಜಾತ್ರೆ ದಕ್ಷಿಣ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಕಂಡು ಬರುತ್ತದೆ" ಏಳು ದಿನಗಳ ಕಾಲ ನಡೆಯುವ ಈ ಜಾತ್ರೆಯಲ್ಲಿಯ ಆಚರಣಾ ಪ್ರಕ್ರಿಯೆಗಳು ಕೆಳಗಿನಂತಿವೆ. ಆರಂಭದ ದಿನದ ಬೆಳಿಗ್ಗೆ ಧ್ವಜಾರೋಹಣ, ಮಧ್ಯಾಹ್ನ ಶ್ರೀ ಗುರು ರೇವಣಸಿದ್ಧೇಶ್ವರ ಗೂಡಿಕಟ್ಟು, ದೇವರುಗಳು ಹಾಗೂ ಗ್ರಾಮದೇವರುಗಳನ್ನು ಆಗಮನ ಮಾಡಿಕೊಳ್ಳುವುದು, ಎರಡನೆಯ ದಿನ ಬೆಳಿಗ್ಗೆ ಗಂಗೆ ಪೂಜೆ ಮತ್ತು ನವಗ್ರಹ ಪೂಜೆ, ಮಧ್ಯಾಹ್ನ ದೈವಕ್ಕೆ ಮೀಸಲು ಮತ್ತು ಗುರುಕಾಣಿಕೆ ಒಪ್ಪಿಸುವ ಕಾರ್ಯ ಆರಂಭವಾಗುತ್ತದೆ. ಹಾಗೂ ಈ ಕಾರ್ಯಮುಕ್ತಾಯಗೊಳ್ಳುವುದು ಮೂರನೆಯ ದಿನದ

ಸಾಯಂಕಾಲಕ್ಕೆ ನಾಲ್ಕನೆಯ ದಿನ ಹೊಳೆ ಪೂಜೆ ಮತ್ತು ಪಟ್ಟ ಕಟ್ಟುವದು ಐದನೆಯ ದಿನ ಧಾರ್ಮಿಕ ಸಭೆ ಆರನೆಯ ದಿನ ಕೆಂಡಾರ್ಚನೆ ಹಾಗೂ ಕಾಚೀ ಬೀರನ ಸೇವೆ, ಕೊನೆಯ ದಿನ ಮಂಗಳಾರತಿ ಮತ್ತು ಜಾತ್ರೆಗೆ ಬಂದ ದೇವರುಗಳನ್ನು ಸ್ವಸ್ಥಾನಗಳಿಗೆ ವಿಜಯಂಗೈಯ್ಯುವುದು.[೮] ಹೀಗೆ ಇಲ್ಲಿನ ಕೃತಿ ಹಾಗೂ ಲೇಖನಗಳ ಅವಲೋಕನದಿಂದ ಬೀರಪ್ಪನ ಚಾರಿತ್ರಿಕ ಹಾಗೂ ಧಾರ್ಮಿಕ ವಿಷಯಗಳು ಸ್ಪಷ್ಟವಾಗುತ್ತವೆ. ಹೀಗಿದ್ದೂ ಬೀರಪ್ಪನ ಸಂಪ್ರದಾಯದ ಬಗೆಗೆ ಸಮಗ್ರ ಅಧ್ಯಯನದ ಅವಶ್ಯಕತೆಯನ್ನು ಇಲ್ಲಿ ಹೇಳಲೇಬೇಕು.

ಮಾಳಿಂಗರಾಯ

ಮಾಳಿಂಗರಾಯ ಒಬ್ಬ ಚಾರಿತ್ರಿಕ ವ್ಯಕ್ತಿ, ಮಹಾಭಕ್ತ, ಶೂರ ಸತ್ಯ ಶರಣ, ಆತನ ಭಕ್ತರು, ಅನುಯಾಯಿಗಳು ಅವನನ್ನು ಪೌರಾಣಿಕ ವ್ಯಕ್ತಿಯಂತೆ ಚಿತ್ರಿಸಿದ್ದು ಕಂಡು ಬರುತ್ತದೆ. ಬಸವಣ್ಣನ ಏಳನೆಯ ಅವತಾರವೆಂದು ನಂಬಲಾದ ಮಾಳಿಂಗರಾಯ ಹಾಲುಮತ ದೈವಗಳೊಲ್ಲೊಬ್ಬ. ಗುರು ಬೀರಪ್ಪನಿಗೂ ಶಿಷ್ಯ ಮಾಳಿಂಗ ರಾಯನಿಗೂ ಚಾರಿತ್ರಿಕವಾಗಿ ಬಹಳ ಅಂತರ ಉಂಟಾಗುತ್ತದೆ. ಆದರೆ ಜನಪದರು ಅವರಿಬ್ಬರಲ್ಲಿ ಗುರುಶಿಷ್ಯರ ಸಂಬಂಧದ ಕುರಿತು ಡೊಳ್ಳು ಹಾಡುಗಳನ್ನು ಹಾಡುತ್ತಾರೆ. ಇದರ ಹಿಂದಿನ ಉದ್ದೇಶ, ಕಾರಣಗಳು ಹೊಸ ದಿಕ್ಕಿನಲ್ಲಿ ಆಲೋಚನೆಗೆ ತೊಡಗಿಸುತ್ತವೆ. ಮಾಳಿಂಗರಾಯನನ್ನು ಕುರಿತಂತೆ ಮೌಖಿಕ ರೂಪದಲ್ಲಿ ಹಾಡು , ಕಥೆ, ಐತಿಹ್ಯಗಳು ಅಧಿಕ ಪ್ರಮಾಣದಲ್ಲಿವೆ. ಆದರೂ ಈತನ ಇತಿವೃತ್ತ ವಿಚಾರ, ಆರಾಧನೆ, ಸಂಪ್ರದಾಯಗಳ ಕುರಿತು ಅಧ್ಯಯನ ನಡೆದಿರುವದು ತುಂಬಾ ಕಡಿಮೆ.

ಈವರೆಗೆ ಪ್ರಕಟಗೊಂಡ ಲಿಖಿತ ಆಕರಗಳಲ್ಲಿ ಜಿ.ಎಸ್.ವಡಗಾವಿಯವರ 'ಮಾಳಿಂಗರಾಯ' (ಜಾನಪದ ಸಾಹಿತ್ಯ ದರ್ಶನ ಭಾಗ ೯, ೧೯೮೯) ಲೇಖನವು ಭಿನ್ನ ವಿಷಯಗಳನ್ನು ಪರಿಚಯಿಸುತ್ತದೆ. ತುಕಪ್ಪರಾಯನಿಗೆ ಬೀರಪ್ಪನ ಆಶೀರ್ವಾದದಿಂದ ಮಾಳಿಂಗರಾಯ ಜನಿಸುವ ಮತ್ತು ಬೀರಪ್ಪನು ತನ್ನ ಶಿಷ್ಯನಿಗಾಗಿ ಹನ್ನೆರಡು ವರ್ಷ ತಪಸ್ಸು ಮಾಡಿ 'ಸವಿಯಲಾರದ ಶಿಷ್ಯ ಮಗನನ್ನು' ಶಿವನ ವರದಿಂದ ಪಡೆಯುವ, 'ಹುಲಜಂತಿ ನಾಮ ನಿಷ್ಪತ್ತಿ', 'ರಾಯ'ಪದವು ಮಾಳಿಂಗ ವಂಶಜರೊಂದಿಗೆ ಸೇರಲು ಕಾರಣ ಹೀಗೆ ಹಲವಾರು ಹೊಸ ವಿಚಾರಗಳನ್ನು ಚರ್ಚಿಸಲಾಗಿದೆ. ಮಾಳಿಂಗರಾಯನ ಪವಾಡಗಳು, ಅರಕೇರಿ ಅಮೋಘಸಿದ್ಧನ ಹೆಂಡತಿ ಪದ್ಮಾವತಿ ಮತ್ತು ಮಾಳಿಂಗರಾಯರ ಹೆಂಡತಿ ಈರವ್ವ ಚಿಗದೊಡ್ಡಪ್ಪನ ಮಕ್ಕಳೆಂಬ ಹೊಸ ಸಂಗತಿಗಳನ್ನು ತಿಳಿಯುವುದು. ಜ್ಯೋತಿ ಹೂಸೂರರ 'ಹುಲಜಂತಿ ಮಾಳಿಂಗರಾಯ : ಚಾರಿತ್ರಿಕ ಅಂಶಗಳು' (ಹಾಲತೊರೆ, ೨೦೦೩) ಎಂಬ ಲೇಖನವು ಮಾಳಿಂಗರಾಯನನ್ನು ಜಾನಪದೀಯ ಹಿನ್ನೆಲೆಯಲ್ಲಿ ಪರಿಚಯಿಸುತ್ತದೆ. ಅಲ್ಲದೆ ಅವನನ್ನು ೧೫ನೆಯ ಶತಮಾನ ಚಾರಿತ್ರಿಕ ವ್ಯಕ್ತಿ ಎಂಬ ವಿಚಾರವನ್ನು ಉಲ್ಲೇಖಿಸಲಾಗಿದೆ. ಚಂದ್ರಪ್ಪ ಸೊಬಟಿಯವರ 'ಮಾಳಿಂಗರಾಯ' (ಹಾಲುಮತ ವ್ಯಾಸಂಗ ೧, ೨೦೦೯) ಲೇಖನವು ಮಾಳಪ್ಪನ ಪೂರ್ವಜರ ಬದುಕಿನ ಆಯಾಮಗಳು, ತುಕ್ಕಪ್ಪರಾಯ ಮತ್ತು ಸ್ವಾಮಿರಾಯರ ಸಂಘರ್ಷಗಳು, ಮಾಳಪ್ಪನ ಹುಟ್ಟು ಬೆಳವಣಿಗೆ, ಮಾಳಪ್ಪನ ಸಂಘರ್ಷ, ಅಮೋಘಸಿದ್ಧನೊಂದಿಗೆ ಸಂಘರ್ಷ, ಮಾಳಪ್ಪ ಬೀರಪ್ಪರ ಪೂಜಾರಿ

ಪಟ್ಟಕಟ್ಟುವಿಕೆ, ಪಟ್ಟದ ಆಯ್ಕೆಯ ವಿಧಾನ ಮತ್ತು ಶಿಷ್ಯತ್ವದ ನಿರಾಕರಣೆ, ಬಂಡವಾಳಶಾಹಿ ಅಭಿವ್ಯಕ್ತಿಯಾಗಿ ಮಾಳಪ್ಪ ಹೀಗೆ ಚರಿತ್ರೆಯಲ್ಲಿ ವರ್ತಮಾನವನ್ನು ಹುಡುಕುವ ಹೊಸ ವಿಷಯಗಳನ್ನು ವಿಮರ್ಶಿಸುತ್ತದೆ. ಹಾಲುಮತದ ಸಂಸ್ಕೃತಿಯಲ್ಲಿ ಮಾಳಿಂಗರಾಯರ ಪಾತ್ರ ಮೊದಲಾದವನ್ನು ಗುರುತಿಸಲಾಗಿದೆ.

ಈ ಮೇಲಿನ ಲೇಖನಗಳನ್ನು ಗಮನಿಸಲಾಗಿ ಗುರುವಿಗಾಗಿ ಶಿಷ್ಯ, ಎಂಥ ತ್ಯಾಗಕ್ಕೂ ಸಿದ್ಧನಾದರೆ ಶಿಷ್ಯನಿಗಾಗಿ ಗುರು ಅನೇಕ ಪವಾಡಗಳ ಮೂಲಕ ಅವನನ್ನು ದೈವತ್ವಕ್ಕೇರಿಸಿ ತಮ್ಮ ಸಮನಾದ ಸ್ಥಾನ ನೀಡುವ ಹುಲಿಯನ್ನು ಪಳಗಿಸುವ ಮೂಲಕ ದುಷ್ಟ ಶಿಕ್ಷಣ ಶಿಷ್ಟ ರಕ್ಷಕನಾಗುವ ಹುಲಿಯು ವೇದವನ್ನು ಓದುವಲ್ಲಿ ಕ್ರೌರ್ಯವು ವಿವೇಕದಲ್ಲಿ ಬದಲಾಗುವುದನ್ನು ಸಂಕೇತಿಕವಾಗಿ ಮೌಖಿಕ ರೂಪದ ಡೊಳ್ಳು ಪದಗಳು ಮತ್ತು ಶಿಷ್ಟ ಸಾಹಿತ್ಯಗಳು ತಿಳಿಸುತ್ತವೆ.

ಮಾಳಿಂಗರಾಯನ ಕುರಿತಾಗಿ ಲೇಖನಗಳಲ್ಲದೆ ಕೆಲವು ಕೃತಿಗಳು ಪ್ರಕಟಗೊಂಡಿವೆ. ಗುಲಬರ್ಗಾ ವಿಭಾಗದ ಶ್ರೀಕಾಗಿನೆಲೆ ಕನಕ ಗುರುಪೀಠವು ೨೦೦೮ರಲ್ಲಿ 'ವಿಶ್ವಪಥ ಹಾಲುಮತ'ದ ಭಂಡಾರ ಮಾಲಿಕೆಯಡಿಯಲ್ಲಿ ಮಲ್ಲಿಕಾ ಘಂಟಿಯವರ ಪ್ರಧಾನ ಸಂಪಾದಕತ್ವದಲ್ಲಿ ಹಾಲುಮತದ ಮಹನೀಯರ ಮತ್ತು ದೈವಗಳನ್ನು ಸಮಾಜ ಬಾಂಧವರಿಗೆ ಪರಿಚಯಿಸುವ ಉದ್ದೇಶದಿಂದ ಕಿರು ಗ್ರಂಥಗಳನ್ನು ಪ್ರಕಟಿಸಲಾಗಿದೆ. ಬೊಮ್ಮ ಗೊಂಡೇಶ್ವರ, ಕನಕದಾಸ, ಕಾಳಿದಾಸ, ಸಜ್ಜಲಗುಡ್ಡದ ಶರಣಮ್ಮ, ಇಟಗಿ ಭೀಮವ್ವ, ಮಾಳಿಂಗರಾಯರ ಜೀವನ ಸಾಧನೆಗಳನ್ನು ಈ ಕೃತಿಗಳು ಪರಿಚಯಿಸುತ್ತವೆ. ದಿವ್ಯಮೂರ್ತಿ ಮಾಳಿಂಗರಾಯ ಎಂಬ ಕೃತಿಯನ್ನು ಡಾ. ಶಿವಾಜಿ ಕಾಂಬಳೆ ರಚಿಸಿದ್ದಾರೆ. ಬಾನಬುತ್ತಿಯ ಪ್ರಸ್ತಾಪ, ಶಿಷ್ಯನನ್ನು ನಾನಾ ತೊಂದರೆಗಳ ಮೂಲಕ ಪರೀಕ್ಷಿಸುವ ಏಳುತಲೆಗುರು ಸೋನಾರಿಸಿದ್ಧ, ಕಾಲಭೈರವ ನಾಥ, ಗೌಡ ಬಂಗಾಲ, ಜೋಗಿ ಎಂದು ಕರೆಯಲಾಗುವ ಮಾಳಿಂಗನ ಗುರು ಸೋನಾರಿಸಿದ್ಧ ಬಂಗಾಳದಿಂದ ಮಹಾರಾಷ್ಟ್ರಕ್ಕೆ ಬಂದ ಗೋರಖನಾಥ, ಸ್ತ್ರೀ ದೇವತಾರಾಧಕರಾಗುವ, ಕಾಲಜ್ಞಾನಿ ಮಾಳಿಂಗನು ಮಳೆ ತರಿಸುವ, ಬಾಲ್ಯದಲ್ಲಿ ಮಾಳಿಂಗನಿಗೆ ನೆರಳಾಗುವಂತೆ ಆದಿಶೇಷ ತನ್ನ ಹೆಡೆಯೆತ್ತಿ ಹಿಡಿಯುವ, ಹಾವಿನಿಂದ ತನ್ನ ಕೈಯನಾಗಬೆತ್ತವನ್ನಾಗಿಸುವ, ಕೈಲಾಸದ ಅಜಾನುವೃಕ್ಷದಿಂದ ಗುರು ಬೀರಪ್ಪನನ್ನು ಪೂಜಿಸುವ ಕರಿಸಿದ್ಧ, ದೇವಸ್ಥಾನಕ್ಕೆ ಕಳಸವಿಲ್ಲದ ಕಾರಣ, ಶೀಲವಂತೆಯ ಅಹಂಕಾರ ನಿರಸನ, ಹೆಂಡತಿಯರಾದ ಲಕ್ಷ್ಮೀಬಾಯಿ ಮತ್ತು ಈರವ್ವ, ಅವನ ವಂಶಾಭಿವೃದ್ಧಿ ಮೊದಲಾದ ವಿಷಯಗಳನ್ನು ಚರ್ಚಿಸಲಾಗಿದೆ.

ಇಲ್ಲಿ ಭೂಲೋಕ ಮತ್ತು ಕೈಲಾಸಗಳಲ್ಲಿನ ಅಂತರ ಕಡಿಮೆಯಾಗಿದೆ. ಶಿವನಿಗಿಂತ ವಿಠ್ಠಲ ಕಡಿಮೆ ಎಂಬುದನ್ನು, ಪಾಂಡುರಂಗ ಬೀರಪ್ಪನ ಶಿಷ್ಯನಾಗಿ ಸುಮಾರು ಹನ್ನೆರಡು ವರ್ಷಗಳವರೆಗೆ ಸೇವೆ ಮಾಡುವ ಮೋಡಿ, ಮಾಟ, ಕೈಚಳಕದಂಥ ವಿದ್ಯೆಗಳ ಗೋರಖ ವಿದ್ಯೆಯನ್ನು ಸೋನಾರಿಸಿದ್ಧರು ಹೇಳಿಕೊಡುವ ನಾಥರೊಂದಿಗೆ ಹೊಂದಿದ ಸಂಬಂಧ ಮೊದಲಾದ ವಿಷಯಗಳು ಭೂತದ ಸ್ಥಿತ್ಯಂತರಗಳಲ್ಲಿ ವರ್ತಮಾನವನ್ನು ಅರ್ಥೈಸುವ, ಓದುಗರನ್ನು ಹೊಸ ದಿಕ್ಕಿನತ್ತ ವಿಚಾರಿಸಲು ತೊಡಗಿಸುವ ಮಾಳಿಂಗರಾಯನ ಅಧ್ಯಯನ

ಪ್ರಯೋಜನಕಾರಿಯಾಗಿದೆ. ಬೀರಪ್ಪನ ಪರಂಪರೆಯಂತೆ ಮಾಳಿಂಗರಾಯನ ಬಗೆಗೂ ಸಮಗ್ರವಾದ ಅಧ್ಯಯನ ನಡೆಯಬೇಕಾಗಿದೆ.

೫. ಉಪಪಂಗಡಗಳು

ಕರ್ನಾಟಕದ ವಿವಿಧ ಸಮುದಾಯಗಳ ಉಪಪಂಗಡಗಳ ದಾಖಲೀಕರಣ ಕಾರ್ಯಕ್ಕೆ ಮೊದಲು ನಾಂದಿ ಹಾಡಿದವರು ಪಾಶ್ಚಾತ್ಯ ವಿದ್ವಾಂಸರು. ಥರ್ಸ್ಟನ್, ಬುಕನನ್, ಎಂಥೋವನ್ ಮೊದಲಾದವರು ತಮ್ಮ ಪ್ರವಾಸ ಕಥನ, ದಿನಚರಿ, ಕೋಶ ಹಾಗೂ ಗೆಝೆಟಿಯರ್‌ಗಳಲ್ಲಿ ಉಪಪಂಗಡಗಳ ಬಗೆಗೆ ಅನೇಕ ವಿವರಗಳನ್ನು ಕಲೆಹಾಕಿದ್ದಾರೆ. ಇತ್ತೀಚೆಗೆ ಎಂ.ಎಂ.ಕಲಬುರ್ಗಿ ಅವರು 'ಲಿಂಗಾಯಿತ' ಗ್ರಂಥದ ಮೂಲಕ ಲಿಂಗಾಯತ ಸಮುದಾಯದ ಮೂವತ್ತೈದು ಉಪಪಂಗಡಗಳ ದಾಖಲೀಕರಣವನ್ನು ಹಲವು ವಿದ್ವಾಂಸರ ನೆರವಿನಿಂದ ಕೈಕೊಂಡಿದ್ದಾರೆ. ಲಿಂಗಾಯಿತ ಸಮಾಜದ ಉಪಪಂಗಡಗಳ ಇತಿಹಾಸ, ವಿನ್ಯಾಸ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಕೌಟುಂಬಿಕ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ತಿಳಿಸುವ ಸಂಶೋಧನಾತ್ಮಕ ಸಂಪ್ರಬಂಧ ಗಳು ಇಲ್ಲಿವೆ. ಬಹುಶಃ ಸಮುದಾಯವೊಂದರ ಉಪಪಂಗಡಗಳ ಸಮಗ್ರ ದಾಖಲೀಕರಣ ಕಾರ್ಯ ಒಂದೆಡೆ ಪ್ರಥಮ ಬಾರಿಗೆ ನಡೆದುದು ಈ ಸಂಪುಟದ ಮೂಲಕ ಎಂದು ಹೇಳಬಹುದು.

ಈ ಹಿನ್ನೆಲೆಯಲ್ಲಿ ಕುರುಬ ಸಮುದಾಯದ ಉಪಪಂಗಡಗಳ ಕುರಿತು ಎಂಥೋವನ್, ಥರ್ಸ್ಟನ್, ಸೊಂಥೈಮರ್, ವೆಂಕಟರಂಗೋ ಕಟ್ಟಿ, ಹಯವದನರಾವ್, ಎಚ್.ವಿ.ನಂಜುಂಡಯ್ಯ, ಎಲ್.ಕೆ.ಅನಂತಕೃಷ್ಣ ಅಯ್ಯರ್, ವಿ.ಆರ್.ಹನುಮಂತಯ್ಯ, ಶ್ಯಾಮಸಿಂಗ ಶಶಿ, ಶಿವಾನಂದ ಗುಬ್ಬಣ್ಣನವರ ಮೊದಲಾದ ವಿದ್ವಾಂಸರು ಅನುಷಂಗಿಕವಾಗಿ ಚರ್ಚಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಹಾಲುಮತ ಅಧ್ಯಯನ ಪೀಠವು ೨೦೦೯ರಲ್ಲಿ ಚಳ್ಳಕೆರೆಯಲ್ಲಿ ಹಾಲುಮತ ಸಂಸ್ಕೃತಿ ಸಮ್ಮೇಳನಗಳನ್ನು ಏರ್ಪಡಿಸಿತ್ತು. ಆ ಸಮ್ಮೇಳನದಲ್ಲಿ ಕುರುಬರ ಉಪಪಂಗಡಗಳ ಬಗೆಗೆ ಸಂಪ್ರಬಂಧಗಳು ವಿವಿಧ ವಿದ್ವಾಂಸರಿಂದ ಮಂಡಿಸಲ್ಪಟ್ಟಿದ್ದವು. ಅಲ್ಲಿ ಮಂಡಿತವಾದ ಸಂಪ್ರಬಂಧಗಳನ್ನು 'ಹಾಲುಮತ ವ್ಯಾಸಂಗ ಸಂಪುಟ ೨' ಹೆಸರಿನಲ್ಲಿ ಎಫ್.ಟಿ.ಹಳ್ಳಿಕೇರಿ ಅವರು ವ್ಯವಸ್ಥಿತ ಕ್ರಮದಲ್ಲಿ ಸಂಪಾದಿಸಿದ್ದಾರೆ.

ಕಾಡುಕುರುಬರು, ಅಲೆಮಾರಿ ಕುರುಬರು, ಹತ್ತಿಕಂಕಣ ಉಣ್ಣೆ ಕಂಕಣ ಕುರುಬರು, ಒಡೆಯರು, ಹಂಡೆ ಕುರುಬರು, ಧನಗರ ಗವಳಿಗರು, ಹೆಗ್ಗಡೆಯವರು, ಗೊಂಡ ಕುರುಬರು, ಕುಡುವೊಕ್ಕಲಿಗರು, ಕುಂಚಟಿಗರು, ಗೊಲ್ಲರು, ನೊಣಬರು, ಕ್ರೈಸ್ತ ಕುರುಬರು, ಸಾದಕುರುಬರು, ದಾಸಕುರುಬರು ಮತ್ತು ಝುಂಡೆ ಕುರುಬರು ಹೀಗೆ ಹದಿನೇಳು ಉಪಪಂಗಡಗಳು ಕುರುಬರ ಸಮುದಾಯದಲ್ಲಿವೆ. ಮೂಲ, ವ್ಯಾಪ್ತಿ, ಆಚರಣೆ, ಸಂಪ್ರದಾಯ, ಸಾಮಾಜಿಕ, ಧಾರ್ಮಿಕ, ಕೌಟುಂಬಿಕ, ಆರ್ಥಿಕ ಮೊದಲಾದ ವಿವರಗಳನ್ನು ಈ ಸಂಪ್ರಬಂಧಗಳು ಒಳಗೊಂಡಿವೆ. ಜನಪದ ವಿದ್ವಾಂಸರಾದ ಡಾ. ತೀ.ನಂ.ಶಂಕರನಾರಾಯಣ ಅವರು ಸಂಪುಟದ ವಿಶೇಷತೆಯನ್ನು ಗುರುತಿಸುತ್ತಾ "ಇವುಗಳನ್ನು ಅಧ್ಯಯನ ಮಾಡಿದರೆ ಕುರುಬರ ಉಪಜಾತಿಗಳ ಒಂದು ಸ್ಥೂಲವಾದ ಚಿತ್ರ

ದೊರಕುತ್ತದೆ. ಇವುಗಳು ಒಂದು ರೀತಿಯಲ್ಲಿ ಆರಂಭಿಕ ಸಮೀಕ್ಷೆ ರೂಪದಲ್ಲಿದ್ದು ಮುಂದಿನ ಅಧ್ಯಯನಗಳಿಗೆ ಒಳ್ಳೆಯ ತಳಹದಿ ಹಾಕಿತು ಎಂದು ಹೇಳಬಹುದು. ಈ ಸಂಪ್ರಬಂಧಗಳು ಕುರುಬರ ಸಂಪ್ರದಾಯಕ ಜೀವನ ಕ್ರಮಗಳನ್ನು ದಾಖಲು ಮಾಡಿವೆ. ... ಜಾಗತೀಕರಣದ ಇಂದಿನ ದಿನಗಳಲ್ಲಿ ಕುರುಬ ಸಮುದಾಯ ಅದರಲ್ಲಿನ ಉಪಜಾತಿಗಳು ಮತ್ತು ಬೆಡಗುಗಳು ಯಾವ ರೀತಿ ಮುಂದುವರಿಯಬೇಕು ಎಂಬುದರ ಬಗ್ಗೆಯೂ ಅಧ್ಯಯನಗಳು ನಡೆಯಬೇಕಾಗಿದೆ"[೧೮] ಎಂದಿದ್ದಾರೆ. ಹೀಗಾಗಿ ಈ ಸಂಪುಟವು ಕುರುಬ ಸಮುದಾಯದ ಉಪಪಂಗಡಗಳ ಅಧ್ಯಯನಕ್ಕೆ ಬಹುಮುಖ್ಯ ಆಕರವಾಗಿದೆ. ಉಪಪಂಗಡಗಳ ಕುರಿತು ಈವರೆಗೆ ಬಂದ ಅಧ್ಯಯನಗಳ ಅವಲೋಕನ ಇಲ್ಲಿದೆ.

೧. ಹಂಡೆ ಕುರುಬರು

ಕರ್ನಾಟಕದ ಪ್ರಸಿದ್ಧ ಪಾಳೆಯಗಾರರಾಗಿದ್ದ ಹಂಡೆ ಮನೆತನದವರು ಮೂಲತಃ ಕುರುಬ ಸಮುದಾಯಕ್ಕೆ ಸೇರಿದವರು. ಬಳ್ಳಾರಿ, ಬಂಕಾಪುರ, ಅನಂತಪುರಗಳನ್ನು ಮುಖ್ಯ ಕೇಂದ್ರಗಳನ್ನಾಗಿ ಮಾಡಿಕೊಂಡು ರಾಜ್ಯವಾಳಿದ ಹಂಡೆ ಕುರುಬರ ಬಗೆಗೆ ವಿ.ಆರ್.ಹನುಮಂತಯ್ಯ, ಶಂಬಾ ಜೋಶಿ, ಶಿವಾನಂದ ಗುಬ್ಬಣ್ಣನವರ, ಬಿ.ರಾಜಶೇಖರಪ್ಪ, ಚೆನ್ನಕ್ಕ ಪಾವಟೆ ಮೊದಲಾದ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ, ಆದರೂ ಹಂಡೆ ಕುರುಬರ ಮೂಲ, ಭೌಗೋಳಿಕ ವ್ಯಾಪ್ತಿ, ಜಾತ್ರೆ, ಉತ್ಸವಗಳು, ದೈವಗಳು, ಆರಾಧನೆ, ಉದ್ಯೋಗ ಸಾಮಾಜಿಕ, ಆರ್ಥಿಕ ವಿಚಾರಗಳ ಬಗೆಗೆ ಸಮಗ್ರವಾದ ಅಧ್ಯಯನದ ಕೊರತೆಯಿತ್ತು. ಅಂಥ ಕೊರತೆಯನ್ನು ವಾಯ್.ಕೆ.ಗುಂಡಕರ್ಜಿ ಅವರು 'ಹಂಡೆ ಕುರುಬರು: ಒಂದು ಅಧ್ಯಯನ' ಎಂಬ ಮಹಾ ಪ್ರಬಂಧದ ಮೂಲಕ ತುಂಬಿಕೊಟ್ಟಿದ್ದಾರೆ. ೨೦೦೨ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧವಿದು.

ಹಂಡೆ ಕುರುಬರು: ಒಂದು ಅಧ್ಯಯನ - ವೈ.ಕೆ.ಗುಂಡಕರ್ಜಿ (೨೦೦೨)

ಈ ಕೃತಿಯು ಹತ್ತು ಅಧ್ಯಾಯಗಳನ್ನು ಹೊಂದಿದೆ. ಕುರುಬರ ಮೂಲ ಉಪಪಂಗಡಗಳು, ಹಂಡೆ ಕುರುಬರು ಅವರ ಕುಟುಂಬ ಜೀವನ, ವೃತ್ತಿ ಜೀವನ, ಧಾರ್ಮಿಕ ಆಚರಣೆಗಳು, ಇತರ ಆಚರಣೆಗಳು ಸಂಸ್ಕಾರಗಳು ಹಂಡೆ ಕುರುಬರ ಇತಿಹಾಸ, ಆ ವಂಶದ ಗೌಡಕಿ ಮನೆತನಗಳು, ಅಲ್ಲದೆ ಸಂಗಮೇಶ್ವರ ಜಾತ್ರೆ, ಎಡಹಳ್ಳಿ ಗ್ರಾಮದ ಹಂಡೆ ಕುರುಬರವಾಡೆ, ಗುಡದಳ್ಳಿ ಗ್ರಾಮದ ಶ್ರೀ ರಂಗನಾಥ ಸ್ವಾಮಿಯ ದೇವಾಲಯ, ಮೈಲಾರಲಿಂಗ ದೇವರ ಬೆಳಕು ಹೊರಡಿಸುವ ಆಚರಣೆ, ವೀರಭದ್ರ ದೇವರ ಗುಗ್ಗಳ, ಆಚರಣೆ ಗಳನ್ನು ಕರ್ನಾಟಕದಾದ್ಯಂತ ಕ್ಷೇತ್ರಕಾರ್ಯ ನಡೆಸಿ ಹೊಸ ಆಕರಗಳಿಂದ (ಕೈಫಿಯತ್ತು ಶಾಸನ, ಜಾತ್ರೆಯ ಪದ, ಸಾಂಸ್ಕೃತಿ ಪದ) ಬಹುಮುಖ್ಯ ವಿಚಾರಗಳನ್ನು ಈ ಕೃತಿಯು ಪ್ರಸ್ತುತಪಡಿಸುತ್ತದೆ.

ಆರಂಭದ ಮೂರು ಅಧ್ಯಾಯಗಳಲ್ಲಿ ಭಾರತದ ಇತರ ಪ್ರದೇಶಗಳಲ್ಲಿ ಕುರುಬರ ಜನಸಾಂದ್ರತೆ, ಕುರುಬ ಪದದ ಅರ್ಥ, ಭೌಗೋಳಿಕ ಪ್ರಸಾರ, ಉಪಪಂಗಡಗಳು, ಜನನ-ಮರಣಗಳ ವಿಧಿ-ವಿಧಾನಗಳು, ಹತ್ತಿಕಂಕಣ-

ಉಣ್ಣೆಕಂಕಣ ಕುರುಬರು, ಒಡೆಯರು, ಜೇನು ಕುರುಬರು, ಬೆಟ್ಟಕುರುಬರು ಮುಂತಾದ ವಿವರಗಳನ್ನು ಸಂಗ್ರಹಿಸಲಾಗಿದೆ.

ಪುರಾಣಗಳ ಆಧಾರದಿಂದ ಹಂಡೆ ಕುರುಬ ಪದದ ಅರ್ಥ, ವಿವಿಧ ವಿದ್ವಾಂಸರ ಅಭಿಪ್ರಾಯಗಳಿಂದ ಮತದ ಭೌಗೋಳಿಕ ಪ್ರಸಾರ, ಪ್ರಾದೇಶಿಕವಾಗಿ ನಾಮವಿಶ್ಲೇಷಣೆ ಮತ್ತು ಅಂಕಿತನಾಮಗಳು ಧಾರ್ಮಿಕ ಆಚರಣೆ, ಉದ್ಯೋಗ, ಮದುವೆ ಸಂಪ್ರದಾಯ, ಹಣೆಗೆ ನಾಮ ಹಚ್ಚುವ ಮೊದಲಾದ ವಿಷಯಗಳೊಂದಿಗೆ ಹಂಡೆ ಕುರುಬರು ಇನ್ನುಳಿದ ಕುರುಬರೊಂದಿಗೆ ಹೊಂದಿದ ಸಾಮ್ಯತೆಯನ್ನು ನಾಲ್ಕನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಐದನೆಯ ಅಧ್ಯಾಯವು ಕೌಟುಂಬಿಕ ವ್ಯವಸ್ಥೆ, ಕುಟುಂಬಕ್ಕೆ ಸಂಬಂಧಿಸಿದ ಶಿಷ್ಟಾಚಾರಗಳು, ಸ್ತ್ರೀಯ, ಚಿಕ್ಕಮಕ್ಕಳ ಸ್ಥಾನಮಾನಗಳನ್ನು ಚರ್ಚಿಸಲಾಗಿದೆ. ಪಾಳೆಗಾರರ ವಸತಿಗಳ ಮಾದರಿ, ವಸತಿಗಳಲ್ಲಿಯ ಎರಡು ಪ್ರಕಾರಗಳು ಒಂದು ಅರಸೊತ್ತಿಗೆ ಕಾಲದಿಂದ ಇಂದಿನವರೆಗೆ ವಸತಿಗಳ ಮಾದರಿ ಎರಡನೆಯದು ಸಾಮಾನ್ಯರಂತೆ ಇರುವವರ ವಸತಿಗಳ ಮಾದರಿಗಳ ವಿವರಗಳಾಗಿವೆ. ಮೂಲತಃ ಶೈವ ಧರ್ಮೀಯರಾದ ಹಂಡೆ ಕುರುಬರ ಶಾಖಾಹಾರ ಪದ್ಧತಿ, ಹಬ್ಬಹರಿದಿನ, ಮದುವೆ, ಮುಂಜಿವೆ ಕ್ರಿಯಾಚರಣೆಗಳನ್ನು ಚರ್ಚಿಸಲಾಗಿದೆ. ವೀರಶೈವ ಧರ್ಮದ ಪ್ರಭಾವಕ್ಕೆ ಒಳಗಾಗಿ ಹಂಡೆಯ ಪಾಳೆಯಗಾರರು ಸಲ್ಲಾಪುರ ಸಿದ್ಧರಾಮನನ್ನು ಆರಾಧ್ಯದೈವವಾಗಿ ಪೂಜಿಸುವ, ಆಚಾರ-ವಿಚಾರಗಳನ್ನು ಸ್ಪಷ್ಟಪಡಿಸಲು ಶಾಸನ ಕೈಫಿಯತ್ತುಗಳಂಥ ದಾಖಲೆಗಳನ್ನು ಆಕರಗಳನ್ನಾಗಿ ಬಳಸಲಾಗಿದೆ. ಪ್ರಾಚೀನ ಕಾಲದಲ್ಲಿ ಆಯುಧಗಳನ್ನು ಹೊಂದಿದ ಅರಸರಲ್ಲಿ ಸೈನಿಕ ವೃತ್ತಿ ಕೈಕೊಂಡ, ಸ್ತ್ರೀಯರ ಹೈನದ ವ್ಯವಹಾರ, ಮತ, ಜಾತಿ ಪಂಚಾಯತಿ ಸಂಘ, ಚಿತ್ರದುರ್ಗದ ಮದಕರಿನಾಯಕನ ಆಡಳಿತದಲ್ಲಿ ತಿಮ್ಮರಾವುತನ ಘಟನೆ ಮತ್ತು ಇಕ್ಕೇರಿ ಶಿವಪ್ಪನಾಯಕನ ಕುರಿತು ಚರ್ಚಿಸಲಾಗಿದೆ. ಗೌರಮ್ಮನಕೊಳ್ಳ, ಖಾನಗೌಡ ಹುಲಿಯೊಂದಿಗೆ ನಡೆಸಿದ ಹೋರಾಟ, ಪಾಳೆಯಗಾರರ ಕಾಲದಲ್ಲಿ ನಡೆದ ಪವಾಡಗಳು ಇಂಥ ಹಲವಾರು ಐತಿಹ್ಯಗಳನ್ನು ವಿಮರ್ಶಿಸಲಾಗಿದೆ.

ಕರ್ನಾಟಕದಲ್ಲಿ ಹಂಡೆಕುರುಬರು ಪೂಜಿಸುವ ದೇವರುಗಳು (ಮೊದಲಸ್ಥಾನ ಪುರುಷದೇವರದಾದರೆ ಎರಡನೆಯ ಸ್ಥಾನ ಸ್ತ್ರೀ ದೇವತೆಗಳಿಗೆ) ಮೈಲಾರಲಿಂಗ, ವೀರಭದ್ರ ದೇವರನ್ನು ಕುಲದೇವರೆಂದು ಪೂಜಿಸುವ ದೇವರ ಭಕ್ತಿಪ್ರಧಾನ ಪದಗಳು (ಪುಟ ೧೫೦) ಒಡಪುಗಳು, ಹಾಗೂ ದೇವರಿಗೆ ಸಲ್ಲಿಸುವ ಪಲ್ಲಕ್ಕಿ ಉತ್ಸವ ಉಟಗಿ ಉಡುವ ಸಂಪ್ರದಾಯ, ಹಡಲಗಿ ತುಂಬಿಸುವ ಕಾರ್ಯ ಮೊದಲಾದ ವಿಷಯಗಳನ್ನು ಆರನೆಯ ಅಧ್ಯಾಯವು ಚರ್ಚಿಸುತ್ತದೆ.

ಏಳನೆಯ ಅಧ್ಯಾಯವು ಜನನ, ಜಾತಕ, ಸೆಟಿಗೆವ್ವನ (ಗೌರಿ) ಪೂಜೆ, ನಾಮಕರಣ, ಋತುಮತಿ, ಶೋಭಾನೆ ಪದ (ಪುಟ ೧೭೮), ಮದುವೆ, ಬೆಡಗುಗಳು, ವಧು ಪರೀಕ್ಷೆ, ಮದುವೆಯ ಸಂಪ್ರದಾಯಗಳಲ್ಲಿಯ

ಒಳಕಲ್ಲು ಪೂಜೆ, ಎದುರುಗೊಳ್ಳುವ ಪದ್ಧತಿ, ಗಂಡಿನವರನ್ನ ಜರೆಯುವ ಹಾಡು, ಅರಿಷಿಣ ಕಾರ್ಯಮಾಡುವ ಹೀಗೆ ಜನನದಿಂದ ಮರಣದವರೆಗಿನ ಸಂಸ್ಕಾರ ಸಂಪ್ರದಾಯ ಆಚರಣೆಗಳ ವಿಷಯವನ್ನು ಹೊಂದಿದೆ.

ಹಂಡೆಕುರುಬರ ರಾಜಕೀಯ ವಿಷಯ ಕುರಿತಾಗಿ ಎಂಟನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಶಾತವಾಹನ, ಹೊಯ್ಸಳರ ಕಾಲದಲ್ಲಿ, ಹಂಡೆ ಕುರುಬರ ರಾಜಕೀಯ ಚಟುವಟಿಕೆಗಳು(೧೫೬೭-೧೮೮೯), ಹಂಡೆ ಕುರುಬ ಪಾಳೆಯಗಾರರ ಮೂಲ ಇತಿಹಾಸ, ಬಂಕಾಪುರದ ಆಡಳಿತ, ಬಳ್ಳಾರಿಯ ಬಲದ ಹನುಮಪ್ಪನಾಯಕ ಪಾಳೆಯಗಾರನಾಗಿ ಆಡಳಿತ ಮಾಡಿದ ವಿವರಗಳು, ಬಲದ ಹನುಮಪ್ಪನಾಯಕನ ಮಕ್ಕಳಲ್ಲಿ ಪ್ರದೇಶ ಹಂಚಿಕೆ, ಅನಂತಪುರದ ಪಾಳೆಯಗಾರ, ಪವಾಡಪ್ಪನಾಯಕ (೧೬೬೦-೧೭೨೦) ಇಮ್ಮಡಿ ಪವಾಡಪ್ಪನಾಯಕ (೧೬೫೫-೧೬೭೧), ಬಳ್ಳಾರಿಯಲ್ಲಿ ಆಡಳಿತ ಮಾಡಿದ ಹಂಡೆ ವಂಶಸ್ಥರು, ದ್ಯಾವಪ್ಪನಾಯಕನ ದೊರೆತನ ಮತ್ತು ಆಡಳಿದಲ್ಲಿಯ ಎರಡು ಸಾಮಾಜಿಕ ಕಾರ್ಯಗಳು. ನೀಲಮ್ಮನ ದೊರೆತನ ಮತ್ತು ಅವಳ ದಾನಶಾಸನ (ಪು. ೨೦೧), ದೊಡ್ಡ ತಲೆಯ ರಾಮಪ್ಪನಾಯಕನ ಸಾಮಾಜಿಕ ಕಾರ್ಯಗಳು, ಮತ್ತು ಆತನು ತನ್ನ ಸಂಬಂಧಿಕರಿಗೆ ದ್ರೋಹ ಬಗೆದುದು, ಹನುಮಪ್ಪನಾಯಕ(ಶಾ.ಶ. ೧೬೮೭), ಶಿದ್ದಮ್ಮ ಮತ್ತು ಪದ್ಮಮ್ಮರ ಸ್ವಾರ್ಥ ಸಾಧನೆ, ದೊಡ್ಡಪ್ಪನಾಯಕನ ದೊರೆತನ(ಶಾ.ಶ.೧೬೯೭), ಬಳ್ಳಾರಿ ಪಾಳೆಯಗಾರ ಮತ್ತು ಹೈದರಾಲಿಯ ಯುದ್ಧ, ಬಳ್ಳಾರಿ ಪಾಳೆಯಗಾರ ಮತ್ತು ಹೈದರಬಾದಿನ ನಿಜಾಮರ ಯುದ್ಧ, ಬಳ್ಳಾರಿ ಕೋಟೆ ಹೈದರಾಲಿಯ ವಶವಾದುದು, ಬಳ್ಳಾರಿಯಲ್ಲಿ ಹೈದರಾಲಿ ಮಾಡಿದ ಸುಧಾರಣೆಗಳು, ಬಳ್ಳಾರಿಯಲ್ಲಿ ಟಿಪ್ಪು ಸುಲ್ತಾನನ ಆಡಳಿತ, ಅನಂತಪುರದಲ್ಲಿ ಆಡಳಿತ ಮಾಡಿದ ಹಂಡೆ ಪಾಳೆಯಗಾರ, ಸಿದ್ದಪ್ಪನಾಯಕನ ದೊರೆತನ, ಬಳ್ಳಾರಿಯಲ್ಲಿ ಬ್ರಿಟಿಷರ ಆಡಳಿತ, ಬ್ರಿಟಿಷರ ಭೂಕಂದಾಯ ನಿಯಮಾವಳಿಗಳು, ವಂಶಾವಳಿಯ ಸಂಗ್ರಹ ಮೊದಲಾದ ವಿಷಯ ವ್ಯಾಪ್ತಿ ಬಂದಿರುವುದು. ಗ್ರಾಮದ ಗೌಡಕಿ ಮನೆತನದಿಂದ ಪ್ರಾಚೀನ ಮಧ್ಯಕಾಲೀನ ಹಾಗೂ ಆಧುನಿಕ ಹಂಡೆಕುರುಬರ ರಾಜಕೀಯ ವಿದ್ಯಮಾನಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಬಿಜಾಪುರ, ಬಾಗಲಕೋಟೆ, ಧಾರವಾಡ, ಹಾವೇರಿ, ಬೆಳಗಾಂವ, ಗದಗ, ಚಿಕ್ಕಮಗಳೂರು ಮೊದಲಾದ ಜಿಲ್ಲೆಗಳಲ್ಲಿ ಸ್ವಾತಂತ್ರ್ಯಾನಂತರ ಹಂಡೆಕುರುಬರ ಗೌಡಕಿ ಮನೆತನಗಳು ಪ್ರಜಾಪ್ರಭುತ್ವದಲ್ಲಿ ಈ ಸಮುದಾಯದ ರಾಜಕೀಯ ಪಾತ್ರ, ಅವರ ಸ್ಥಿತಿಗತಿ ಮತ್ತು ಸಮಸ್ಯೆಗಳನ್ನು ಒಂಭತ್ತನೆಯ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಹೀಗೆ ಚಾರಿತ್ರಿಕ, ರಾಜಕೀಯ, ಪೌರಾಣಿಕ ವಿಷಯಗಳನ್ನು ಈ ಮಹಾಪ್ರಬಂಧ ಚರ್ಚಿಸುತ್ತದೆ. ಹಂಡೆ ಕುರುಬರು ವೀರಶೈವರನ್ನು ಅನುಸರಿಸಿದರೂ ಕೆಲವು ಆಚಾರ-ವಿಚಾರಗಳಲ್ಲಿ ತಮ್ಮತನವನ್ನು ಈಗಲೂ ಉಳಿಸಿಕೊಂಡಿದೆ. ಹಂಡೆ ಎಂಬ ಪದ ಜಾತಿವಾಚಕವಾದರೆ ವಜೀರ ಎನ್ನುವದು ಹುದ್ದೆಯನ್ನು ತಿಳಿಸುವುದಾಗಿದೆ. ಇವರು ತಮ್ಮನ್ನು ಪಂಚಮಶಾಲಿ, ಲಿಂಗವಂತ, ಹಂಡೆ ವಜೀರ ಎಂದು ಕರೆದುಕೊಂಡು ಕುರುಬ ಎಂಬ ಪದವನ್ನು ಬಳಸಲು ಇಚ್ಛಿಸುವುದಿಲ್ಲ. ಕುರುಬರ ಉಪಖಂಡಗಳಲ್ಲಿ ಒಂದಾದ ಹಂಡೆ ಕುರುಬರ ಮೂಲ ದೊಂದಿಗೆ ಸಾಂಸ್ಕೃತಿಕ ಚರ್ಚೆಗಳನ್ನು ಸಮಗ್ರವಾಗಿ ಒಂದೆಡೆ ಕಟ್ಟಿಕೊಡುವ ಪ್ರಯತ್ನ ಈ ಮಹಾಪ್ರಬಂಧದ

ಮೂಲಕ ನಡೆದಿದೆ. ಹೀಗಿದ್ದೂ ಹಂಡೆ ಕುರುಬರು ತಮ್ಮನ್ನು ಪ್ರತ್ಯೇಕ ಸಂದರ್ಭದಲ್ಲಿ 'ಹಂಡೆ ವಜೀರ'ರೆಂದು ಕರೆದುಕೊಂಡು ಲಿಂಗಾಯತ ಸಮುದಾಯದ ಜೊತೆ ಗುರುತಿಸಿಕೊಳ್ಳುತ್ತಿದ್ದಾರೆ. ಈ ಅಧ್ಯಯನವನ್ನು ಅವಲೋಕಿಸಿದಾಗ ಇವರು ಕುರುಬರ ಸಮುದಾಯದಿಂದ ಬಂದವರೆಂಬುದು ಸ್ಪಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ಇನ್ನೂ ವ್ಯಾಪಕ ಅಧ್ಯಯನವನ್ನು ಕೈಗೊಳ್ಳುವ ಅವಶ್ಯಕತೆಯಿದೆ.

೨. ಕಾಡು ಕುರುಬರು

ಕರ್ನಾಟಕದ ಪ್ರಾಚೀನ ಬುಡಕಟ್ಟು ಸಮುದಾಯಗಳಲ್ಲಿ ಒಂದಾದ 'ಕಾಡು ಕುರುಬರು' ಕೊಡಗಿನ ಪರಿಸರದಲ್ಲಿ ವಾಸಮಾಡಿದ್ದಾರೆ. ಇವರಲ್ಲಿ ಜೇನು ಕುರುಬರು ಮತ್ತು ಬೆಟ್ಟ ಕುರುಬರು ಎಂಬ ಎರಡು ಪಂಗಡಗಳಿವೆ. ಈ ಬುಡಕಟ್ಟಿನ ಬಗೆಗೆ ಎಂಥೋವನ್, ಥರ್ಸ್ಟನ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರು ತಮ್ಮ ಗ್ರಂಥಗಳಲ್ಲಿ ದಾಖಲಿಸಿದ್ದಾರೆ. ರತನ್ ಸಭಾಪತಿ ಅವರು ಜೇನು ಕುರುಬರ ಬಗೆಗೆ (A Discriptive Analysis of Jenu Kuruba (1981) ಎಂಬ ಮಹಾಪ್ರಬಂಧದಲ್ಲಿ ವಿವರವಾಗಿ ವಿಶ್ಲೇಷಿಸಿದ್ದಾರೆ. ನಂತರದಲ್ಲಿ ಕಿಕ್ಕೇರಿ ನಾರಾಯಣ (ಜೇನು ಕುರುಬರು ೧೯೭೮), ರಾಜಮಣಿ ಎಂ.ಬಿ. (ಕಾಡು ಕುರುಬರು ೧೯೭೮) ಅಲ್ಲದೆ ೧೯೭೬ರಲ್ಲಿ ಈ ಸಮುದಾಯದ ಸಂಸ್ಕೃತಿ ಕುರಿತು ಎ.ಸಿ.ಲಲಿತಾ ಅವರು ಕ್ಷೇತ್ರಾಧಾರಿತ ವಾದ ಕೃತಿಯೊಂದನ್ನು ಪ್ರಕಟಿಸಿದ್ದಾರೆ. ಇದು ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ಉಪ ಸಂಸ್ಕೃತಿಗಳ ಅಧ್ಯಯನ ಯೋಜನೆ'ಯಡಿ ಹೊರಬಂದಿದೆ. ೧೭೨ ಪುಟಗಳಲ್ಲಿ ಕಾಡುಕುರುಬರ ಸಮಗ್ರ ಪರಿಚಯ ಹಾಗೂ ಅವರ ಸಾಹಿತ್ಯವನ್ನು ದಾಖಲಿಸಲಾಗಿದೆ.

ಕಾಡು ಕುರುಬ ಮತ್ತು ಜೇನು ಕುರುಬರ ಸಂಸ್ಕೃತಿ - ಎ.ಸಿ.ಲಲಿತಾ (೧೯೭೨)

ಪ್ರಧಾನ ಸಂಪಾದಕರಾದ ಬರಗೂರು ರಾಮಚಂದ್ರಪ್ಪ ಅವರ ೪೮ ಪುಟಗಳ ಪ್ರಸ್ತಾವನೆಯಲ್ಲಿ ಸಂಸ್ಕೃತಿಯ ಕುರಿತಾಗಿ ಹಲವಾರು ವಿದ್ವಾಂಸರಿಂದ ವ್ಯಾಖ್ಯಾನಗಳನ್ನು ಸಂಗ್ರಹಿಸಿ ವಿಮರ್ಶಿಸಲಾಗಿದೆ. ಅಲ್ಲದೆ ಉಪಸಂಸ್ಕೃತಿ ಯನ್ನು ವಿವರಿಸುತ್ತಾ "ಒಟ್ಟು ಮನುಷ್ಯ ಸಂಸ್ಕೃತಿಯಲ್ಲಿ ಒಂದು ಸಂಸ್ಕೃತಿ ಉಸಿರಾಡುತ್ತಲೆ ಇರುವ ವೈರುಧ್ಯ ಒಂದು ಒಪ್ಪಿತ ಸಂಗತಿಯಾಗಿದೆ. ಉಪಸಂಸ್ಕೃತಿಯ ಪರಿಕಲ್ಪನೆ ಪ್ರಸ್ತುತವಾಗುವುದು ಈ ನೆಲೆಯಲ್ಲೇ ಎಂಬ ತಿಳುವಳಿಕೆ ನನ್ನದು. ಮನುಷ್ಯ ಸಂಸ್ಕೃತಿಯು ರೂಪುಗೊಳ್ಳುತ್ತಿರುವಾಗ ವಿವಿಧ ಕಾರಣಗಳಿಂದ ವಿಂಗಡನೆಗೊಳ ಗಾದ ಮನುಷ್ಯ ಸಮಾಜ ತನ್ನ ವಿಭಜಿತ ನೆಲೆಗಳಿಗನುಗುಣವಾಗಿ ವಿಭಿನ್ನ ಸಂಸ್ಕೃತಿಗಳನ್ನು ರೂಪಿಸಿಕೊಳ್ಳುತ್ತ ಬಂದದ್ದು ಒಂದು ಚಾರಿತ್ರಿಕ ಸಂಗತಿಯೇ ಆಗಿದೆ. ಮನುಷ್ಯ ಸಮಾಜದ ಬೆಳವಣಿಗೆಯ ಹಿಂದೆ ಒಂದು ನಿರ್ದಿಷ್ಟ ಚರಿತ್ರೆಯಿರುವುದರಿಂದ ಸಂಸ್ಕೃತಿಯ ಉಪವಿಭಾಗೀಕರಣಕ್ಕೂ ಒಂದು ಚರಿತ್ರೆಯಿದೆ."[೧೯] ಸಂಸ್ಕೃತಿಯಲ್ಲಿಯೇ ಉಪಸಂಸ್ಕೃತಿಯ ಹುಡುಕಾಟವಿದೆ. ವಿದ್ವಾಂಸರಾದ ಡಿ.ವಿ.ಜಿ., ಡಿ.ಡಿ.ಕೋಸಾಂಬಿ, ಎಫ್.ಬೋಯಸ್, ಟಿ.ಎಸ್.ಎಲಿಯಟ್ ಮೊದಲಾದ ಚಿಂತಕರ ಮುಖ್ಯವಾದ ವ್ಯಾಖ್ಯಾನಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ನಾಲ್ಕು ಅಧ್ಯಾಯಗಳ ಈ ಕೃತಿಯು ಕಾಡುಕುರುಬ ಮತ್ತು ಜೇನು ಕುರುಬರ ಹಿನ್ನೆಲೆ, ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ, ಭಾಷೆ-ಸಾಹಿತ್ಯಗಳ ಸಂಗ್ರಹ, ಕಲೆ ಮೊದಲಾದ ವಿಷಯಗಳ ವಿಶ್ಲೇಷಣೆಗೆ ವಿಶೇಷ ಗಮನ ಕೊಡಲಾಗಿದೆ.

ಮೊದಲ ಅಧ್ಯಾಯದಲ್ಲಿ ಬುಡಕಟ್ಟುಗಳ ಪಟ್ಟಿ, ಕರ್ನಾಟಕ ೧೮ ರಾಜ್ಯಗಳ ಬುಡಕಟ್ಟು ಜನರ ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನಸಂಖ್ಯೆ, ಕಾಡುಕುರುಬ ಮತ್ತು ಜೇನು ಕುರುಬರ ಜೀವನ ವಿಧಾನ, ಸಾಮಾಜಿಕ ವ್ಯವಸ್ಥೆ, ಭಾಷೆ ಕ್ರೀಡೆಗಳು ಮತ್ತು ಸಾಮಾಜಿಕ ಪರಿವರ್ತನೆ ಸಂದರ್ಭದಲ್ಲಿ ಅಪಾರ ಪಾತ್ರ ಇತ್ಯಾದಿಗಳನ್ನು ವಿವರಿಸಲಾಗಿದೆ.

ಮೈಸೂರಿನ ಅರಣ್ಯ ಪ್ರದೇಶಗಳಾದ ಬಂಡೀಪುರ, ಹುಣಸೂರು, ಪಿರಿಯಾಪಟ್ಟಣ, ನಾಗರಹೊಳೆ, ಹೆಗ್ಗಡೆ ದೇವನಕೋಟೆ ಅರಣ್ಯಗಳಲ್ಲಿ ಜೇನುಕುರುಬ ಮತ್ತು ಬೆಟ್ಟಕುರುಬರು ಹೆಚ್ಚಾಗಿ ವಾಸವಾಗಿದ್ದು ೧೯೮೧ರ ಜನಗಣತಿಯ ಪ್ರಕಾರ ಜೇನು ಕುರುಬರ ಸಂಖ್ಯೆ ೩೪,೩೪೭ ಮತ್ತು ಕಾಡುಬೆಟ್ಟ ಕುರುಬರ ಸಂಖ್ಯೆ ೨೦, ೯೬೭೭. ಈ ಎರಡು ಗುಂಪುಗಳು ಒಂದೇ ಭೌಗೋಳಿಕ ಪರಿಸರದಲ್ಲಿದ್ದುಕೊಂಡೇ ವಿಭಿನ್ನ ಸಂಸ್ಕೃತಿಯ ಜೀವನ ವಿಧಾನದಿಂದ ಬದುಕುವ ಕುರಿತಾಗಿ ಮತ್ತು 'ಕುರು' ಪದದ ಅರ್ಥವನ್ನು ವಿಶ್ಲೇಷಣೆ ಮಾಡಲಾಗಿದೆ.

ಎರಡನೆಯ ಅಧ್ಯಾಯವು ಕಾಡುಕುರುಬರ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಚರ್ಚಿಸಲಾಗಿದೆ. ಕಾಡುಕುರುಬ ಮತ್ತು ಜೇನು ಕುರುಬರ ದೇಹರಚನಾ ಕ್ರಮ, ಹಾಡಿಗಳೆಂದು ಕರೆಯಲ್ಪಡುವ ಇವರು ವಾಸಕ್ಕಾಗಿ ಗುಡಿಸಲು ನಿರ್ಮಿಸಲು ಬಳಸುವ ಸಾಮಗ್ರಿಗಳು, ಜೀವನ ವಿಧಾನ, ದಿನನಿತ್ಯದ ಬಳಕೆಗೆ ಉಪ ಯೋಗಿಸಲ್ಪಡುವ ವಸ್ತುಗಳು, ಉಡಿಗೆ ಊಟ, ಎರಡೂ ಕುರುಬರ ನಡುವಿನ ಸೌಹಾರ್ದಯುತ ಸಂಬಂಧಗಳು, ಸಾಮಾಜಿಕ ಸಂಬಂಧ ಪ್ರತ್ಯೇಕ ಪೂಜಾವಿಧಾನ, ದೇವತಾರಾಧನೆಯಲ್ಲಿ ಅಣಾಪನೂರಾಲ್ ಒಡೆಯನ ಬಗ್ಗೆ ಇರುವ ಕಲ್ಪನೆ ಮತ್ತು 'ಕರಿಹೈದ'ರ ಮಹತ್ವ ಇತ್ಯಾದಿಗಳನ್ನು ಚರ್ಚಿಸಲಾಗಿದೆ. ಹಾಡು ಗಳಲ್ಲಿಯ ಬಂಜೆಪಾಡು (ಒಂದು ವಿಧ) ದೇವರ ಪದ, ಜಾತ್ರೆ, ಉತ್ಸವ, ಜನನ, ಮರಣ, ಮದುವೆ ಋತುಮತಿ 'ಕಾಡರಸ್‌ಮಕ್ಕನಂಗ' ಎಂದು ಕರೆಯಲ್ಪಡುವ ನಾಯಕನ ಜವಾಬ್ದಾರಿ, ಕರ್ತವ್ಯ, ಬಿಡುವಿನ ವೇಳೆಯಲ್ಲಿ ಮನರಂಜನೆಯ ಕಾರ್ಯಕ್ರಮಗಳು, ನಾಟಿಮದ್ದುಗಳ ಬಳಕೆ ಹೀಗೆ ಹಲವಾರು ವಿಷಯಗಳ ಚರ್ಚೆಯು ಹಾಲುಮತ ಸಂಸ್ಕೃತಿ ಅಧ್ಯಯನಕ್ಕೆ ಬಹುಮುಖ್ಯ ಕೊಡುಗೆಯಾಗಿದೆ.

ಮೂರು ಮತ್ತು ನಾಲ್ಕನೆಯ ಅಧ್ಯಾಯದಲ್ಲಿ ಕಾಡುಕುರುಬರ ಭಾಷೆ, ಸಾಹಿತ್ಯಕ್ಕೆ ಸಂಬಂಧಿಸಿದ 'ಕಾಡರಸ್‌ಮಕ್ಕನಂಗ' ಎನ್ನುವ ತಮ್ಮದೇ ಆದ ಭಾಷೆಯನ್ನು ಹೆಮ್ಮೆಯಿಂದ 'ಸಂಗಭಾಷೆ' ಎಂದು ಕರೆಯಲಾಗಿದೆ. ಇತರ ಭಾಷೆಗಳಾದ ತಮಿಳು ಮಲಯಾಳಂಗಳ ಶಬ್ದಗಳು ಇವರ ಭಾಷೆಯೊಂದಿಗೆ ಸೇರಿ

ಸ್ವತಂತ್ರವಾದ ಕುರುಬರ ಭಾಷೆಯಾಗಿ ಬಳಕೆಯಾಗಿದೆ. ಅಲ್ಲದೆ ದಿನನಿತ್ಯ ಬಳಕೆಯಾಗುವ ಗಾದೆ ಒಗಟುಗಳನ್ನು ಉದಾಹರಣೆಗಳೊಂದಿಗೆ ಚರ್ಚಿಸಲಾಗಿದೆ.

ಗದ್ಯ ಸಾಹಿತ್ಯಕ್ಕಿಂತ ಪದ್ಯಸಾಹಿತ್ಯವನ್ನು ಹೇರಳವಾಗಿ ಬಳಸುತ್ತಾರೆ. ಬಂಡೀಪುರ ಮತ್ತು ಹೆಗ್ಗಡದೇವನ ಕೋಟೆ ತಾಲೂಕು ಬುಡಕಟ್ಟುಗಳಲ್ಲಿ ಅನೇಕ ಪದಗಳನ್ನು ಎ.ಸಿ.ಲಲಿತಾ ಅವರು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಸಂಗ್ರಹಿಸಿ ಅವುಗಳ ಪಠ್ಯವನ್ನು ನೀಡಿದ್ದಾರೆ. ಮುಖ್ಯವಾಗಿ ಸೋಬಾನೆ ಪದ, ಅತ್ತೆ-ಸೊಸೆ ಪದ, ರಂಗೋಲಿ ಪದ, ರಾಗಿಕಲ್ಲು ಪದ, ನಾಟಿ ಪದ, ತೆನೆ ಪದ (ದಿದ್ದಿಮಲೆ) ಜೇನುಪದ, ಕೋಲುಪದ, ಕೊಂತಿ ಪದ ಮೊದಲಾದವು ಕುರುಬರ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಉದಾಹರಣೆಗಾಗಿ ಕೊರವಂಜಿಯ ಕೋಲುಪದ ಹೀಗಿದೆ.

ಯಾರೆಲೋ ಕೊರವಂಜಿ

ಬಾರೆಲೋ ಮನೆಗೆ

ಬಾಳೆಯ ಮರದಡುತ

ಕುಂತಿದ್ದಾಳೆ ಕೊರವಂಜಿ

ಯಾರಲೋ

....

ಬಾಳೆಯ ಮರದಡುತ

ಕುಂತಿದ್ದಾಳೆ ಕೊರವಂಜಿ

ಯಾರಲೋ (ಕೋಲುಪದ ೨, ಪುಟ ೮೨)

ತೋಡಪದ (ಇಲಿಪದ) ಕಾಡುಬೆಕ್ಕುಪದ, ಮುಚ್ಚನ (ಕಾಡು ಮುಚ್ಚನ ಆಟ) ಪದ, ಕಾಡುಕೋಳಿಪದ, ನಳ್ಳಿಪದ ಮೊದಲಾದವು ಪ್ರಾಣಿಪಕ್ಷಿಗಳ ಕುರಿತು, ಬಂಜೆ ಪಾಡುಗ (ಕಾಡುಕುರುಬ) ಪದ, ದೇವರ ಪದ, ಹಸರು ಪದ, ಸಂಘದ ಹಾಡು, ವಿರಾಮದ ಹಾಡು, ಬುರುಡೆ ಪದ, ಇಂಥ ಹಲವಾರು ಹಾಡುಗಳು ಬಹುಮುಖೀ ಹಿನ್ನೆಲೆಯ ಸಂಸ್ಕೃತಿಯನ್ನು ಅಧ್ಯಯನಕ್ಕೊಳಪಡಿಸುತ್ತವೆ. ಜೇನುಪದಗಳನ್ನು ಗಂಡಸರು ಹಾಡಿದರೆ ದೇವರ ಪದಗಳನ್ನು ಹೆಂಗಸರು ಹಾಡುತ್ತಾರೆ. ಅಂತ್ಯದಲ್ಲಿ ಸಂಗ್ರಹಿಸಿದ ಛಾಯಾಚಿತ್ರಗಳು ವಿಷಯ ಮನದಟ್ಟಾಗುವಲ್ಲಿ ಪೂರಕವಾಗಿವೆ.

ಒಟ್ಟಾರೆ ಕಾಡುಕುರುಬ ಮತ್ತು ಜೇನು ಕುರುಬರ ಅಭಿವೃದ್ಧಿಗಾಗಿ ಸರಕಾರ ಹಮ್ಮಿಕೊಂಡ ಪ್ರಗತಿಶೀಲ ಕಾಯ್ದೆಗಳಿಂದ ಗೊಂದಲ, ತಮ್ಮ ಮುಗ್ಧತೆಗಳಿಂದ ತೊಂದರೆಯನ್ನೇ ಹೆಚ್ಚಾಗಿ ಅನುಭವಿಸಿ ಅತಂತ್ರ ಸ್ಥಿತಿಯಲ್ಲಿ ಉಳಿಯುವಂತಾಗಿದೆ. ನಗರೀಕರಣದ ಭರದಲ್ಲಿ ಅವರ ಸ್ವಾತಂತ್ರ್ಯಕ್ಕೆ ಭಂಗ ಬರುವಂತಿದ್ದು, ಸಂಕ್ರಮಣ

ವ್ಯವಸ್ಥೆಯಲ್ಲಿ ಜೀವನ ನಡೆಸಬೇಕಾಗಿದೆ. ಕಾಡು ಜನಾಂಗ ಕಾಯ್ದೆ ಕಾನೂನುಗಳನ್ನು ವ್ಯವಸ್ಥಿತ ರೀತಿಯಲ್ಲಿ ಬಳಸಿಕೊಳ್ಳಲು ವಿಫಲರಾಗುತ್ತಿದ್ದಾರೆ. ಕಾರಣ ಶಿಕ್ಷಣದ ಕೊರತೆ, ಆಧುನಿಕತೆಯಿಂದ ದೂರ ಉಳಿಯುವ ನಿರ್ಧಾರಗಳು ಮುಖ್ಯವಾಗುತ್ತವೆ. ಉಪಸಂಸ್ಕೃತಿಯಲ್ಲಿ ಬದುಕುತ್ತಿರುವ ಜನರ ವಿಭಿನ್ನ ಕತೆ, ಕಾವ್ಯ, ಪುರಾಣಗಳು ಪ್ರಕಟಗೊಂಡರೆ ಹೆಚ್ಚಿನ ಅಧ್ಯಯನಗಳು ನಡೆಯುವ ಸಾಧ್ಯತೆಗಳಿವೆ. ಹೀಗೆ ಹಲವಾರು ಅಂಶಗಳಲ್ಲಿ ಈ ಕೃತಿ ಕಾಡುಕುರುಬ ಮತ್ತು ಜೇನು ಕುರುಬರ ಸಮಗ್ರ ಸಂಸ್ಕೃತಿಯನ್ನು ಪರಿಚಯಿಸುತ್ತದೆ.

೩. ಅಲೆಮಾರಿ ಕುರುಬರು

ಕುರಿಗಳ ಪಾಲನೆ ಪೋಷಣೆಗಾಗಿ ಕುರುಬರು ಊರಿಂದೂರಿಗೆ ತಮ್ಮ ಕುರಿಮಂದಿಯೊಂದಿಗೆ ಅಲೆಯುತ್ತಾರೆ. ಅಂಥ ಕುರುಬರಿಗೆ 'ಅಲೆಮಾರಿ ಕುರುಬರು' ಎಂದು ಕರೆಯುತ್ತಾರೆ. ಬೆಳಗಾವಿ ಜಿಲ್ಲೆಯ ನಿಪ್ಪಾಣಿ, ಸಂಕೇಶ್ವರ, ಚಿಕ್ಕೋಡಿ ತಾಲೂಕಿನ ಕುರುಬರಲ್ಲಿ ಬಹುತೇಕರು 'ಅಲೆಮಾರಿ'ಗಳಾಗಿದ್ದಾರೆ. ಇವರು ತಮ್ಮ ಕುರಿ ಮೇಕೆ ಗಳೊಂದಿಗೆ ಆಹಾರ ನೀರನ್ನು ಹುಡುಕುತ್ತ ಧಾರವಾಡ, ಕೊಪ್ಪಳ, ಬಳ್ಳಾರಿ ಜಿಲ್ಲೆಗಳತ್ತ ವರ್ಷಗಟ್ಟಲೆ ಪ್ರಯಾಣ ಮಾಡುತ್ತಾರೆ. ಅಂಥ ಅಲೆಮಾರಿ ಕುರುಬರ ಬಗೆಗೆ ಕನ್ನಡದಲ್ಲಿ ಈವರಗೆ ಸಮಗ್ರವಾದ ಅಧ್ಯಯನ ನಡೆದಿರಲಿಲ್ಲ. ಈ ಕೊರತೆಯನ್ನು ಗಮನಿಸಿದ ಡಾ. ಯರ್ರಪ್ಪ ಅವರು 'ಅಲೆಮಾರಿ ಕುರುಬ' ಎಂಬ ಗ್ರಂಥದ ಮೂಲಕ ಅಲೆಮಾರಿ ಕುರುಬರ ಬಗೆಗೆ ಮೊದಲ ಬಾರಿಗೆ ವಿಸ್ತೃತವಾದ ಅಧ್ಯಯನವನ್ನು ನಡೆಸಿರುವದು ಮೆಚ್ಚಬೇಕಾದ ಸಂಗತಿಯಾಗಿದೆ.

ಅಲೆಮಾರಿ ಕುರುಬ - ಡಾ. ಡಿ.ಯರ್ರಪ್ಪ (೨೦೦೭)

ಕನ್ನಡ ಪುಸ್ತಕ ಪ್ರಾಧಿಕಾರದಿಂದ 'ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ'ಯಲ್ಲಿ ಅಲೆಮಾರಿ ಕುರುಬ ಎಂಬ ಕೃತಿಯು ಡಿ.ಯರ್ರಪ್ಪ ಅವರಿಂದ ರಚನೆಯಾಗಿದೆ. ೨೫೪ ಪುಟಗಳ ಈ ಕೃತಿಯು ೧೦ ಅಧ್ಯಾಯಗಳಲ್ಲಿ ವಿಸ್ತಾರ ಪಡೆದಿದೆ. ಹೆಚ್ಚಿನ ಪ್ರಮಾಣದಲ್ಲಿ ಕೋಷ್ಟಕ ಮತ್ತು ವೃತ್ತಚಿತ್ರಗಳನ್ನು ಅಳವಡಿಸಿ ವಿಷಯ ಗ್ರಹಿಸಲು ಅನುಕೂಲವಾಗಿದೆ. ಈ ಕೃತಿಯನ್ನು ಬಳ್ಳಾರಿ ಜಿಲ್ಲೆಯ ವ್ಯಾಪ್ತಿಗೊಳಪಟ್ಟ ಭೂಪ್ರದೇಶದ ೨೦೦೪-೨೦೦೫ನೇ ಸಾಲಿನಲ್ಲಿ ಅಲೆದಾಡಿದ ಅಲೆಮಾರಿ ಕುರುಬ ಸಮುದಾಯವನ್ನು ಅಧ್ಯಯನಕ್ಕೊಳ ಪಡಿಸಲಾಗಿದೆ. ಅಲೆಮಾರಿ ಜನಾಂಗಗಳ ಸ್ಥಿತಿಗತಿ ಕುರಿತು ಪ್ರಸ್ತಾವನೆಯಲ್ಲಿ ಡಾ. ಕೆ.ಎಂ.ಮೈತ್ರಿಯವರು "ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳ ಅಗಾಧವಾದ ಪ್ರಾಕೃತಿಕ ಜ್ಞಾನ ಕಲೆ ಮತ್ತು ಶ್ರಮವನ್ನು ಸರಕಾರ ಮತ್ತು ಸಮಾಜಗಳು ಕಾಲಾಂತರದಲ್ಲಿ ಗೌರವಪೂರ್ಣವಾಗಿ ಗೌರವಿಸಲಿಲ್ಲ. ಜಾಗತೀಕರಣ ಮತ್ತು ಆಧುನಿಕರಣದ ಗುಂಗಿನಲ್ಲಿ ಜನರು ಪರ್ಯಾಯ ವ್ಯವಸ್ಥೆಗಳತ್ತ ಮುಖಮಾಡಿದರು. ಅಲೆಮಾರಿಗಳ ಮೌಖಿಕ ಕಾವ್ಯಕಲೆ, ನೃತ್ಯಗಳು, ನೆಲಕಚ್ಚಿದವು. ಕಲೆಗಳು ಕಳೆಗುಂದಿ ಬಿಕ್ಷಾಟನೆಗೆ ಎಡೆಮಾಡಿದವು. ಇವುಗಳ ವಿಮೋಚನೆಯು ಸಮುದಾಯಗಳ ಮತ್ತು ಸರಕಾರದ ಇಚ್ಛಾಶಕ್ತಿಯ ಕೊರತೆಯಿಂದ ವಿಳಂಬವಾಗುತ್ತಿದೆ. ಸಮಾಜ ಪಾರಂಪರಿಕ ಜ್ಞಾನ ಶಾಖೆಗಳನ್ನೇ ಕಳೆದುಕೊಳ್ಳುತ್ತಿದೆ"[೨೦] ಎಂಬ ಅಭಿಪ್ರಾಯ ಸೂಚಿಸಿದ್ದಾರೆ.

ಭಾರತೀಯ ವಿಮುಕ್ತ ಮತ್ತು ಅಲೆಮಾರಿ ಸಮುದಾಯಗಳು, ಅಲೆಮಾರಿ ಬುಡಕಟ್ಟುಗಳ ಪಟ್ಟಿ, ಇತರೆ ಬುಡಕಟ್ಟುಗಳ ಪಟ್ಟಿ, ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳ ಸಮಸ್ಯೆಗಳು ಮತ್ತು ಸರಕಾರದಿಂದ ಆಗಬೇಕಾದ ಕೆಲಸ ಮೊದಲಾದ ವಿಷಯಗಳನ್ನು ಕೂಲಂಕಷವಾಗಿ ಪ್ರಸ್ತಾವನೆಯಲ್ಲಿ ಚರ್ಚಿಸಲಾಗಿದೆ.

ಅಲೆಮಾರಿ ಕುರುಬರೆಂದರೇನು? ಅವರ ಜೀವನಕ್ರಮ, ಇದುವರೆಗೆ ಕುರುಬ ಜನಾಂಗ ಕುರಿತು ಪ್ರಕಟಗೊಂಡ ಕೃತಿಗಳು, ಕುರುಬ ಪದದ ನಿಷ್ಪತ್ತಿ, ಪೌರಾಣಿಕ-ಚಾರಿತ್ರಿಕ-ಧಾರ್ಮಿಕ ಹಿನ್ನೆಲೆಗಳು, ಪಂಗಡಗಳು ಮುಂತಾದ ವಿಷಯಗಳನ್ನು ಮೊದಲ ಅಧ್ಯಾಯವು ಹೊಂದಿದೆ.

ಎರಡನೇ ಅಧ್ಯಾಯದಲ್ಲಿ ೧೯೬೦ರ ನಂತರದ ದಿನಗಳಲ್ಲಿ ಅರೆಅಲೆಮಾರಿಗಳು ವರ್ಷಪೂರ್ಣ ಅಲೆಮಾರಿಗಳಾಗಲು ಕಾರಣಗಳು, ಬಳ್ಳಾರಿ ಜಿಲ್ಲೆಯ ಅಲೆಮಾರಿ ಕುರುಬ ಕುಟುಂಬಗಳ ಜನಸಂಖ್ಯಾ ಕೋಷ್ಟಕ (ಪುಟ.೨೩), ಬಳ್ಳಾರಿ ರಾಯಚೂರು ಕೊಪ್ಪಳ, ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳಲ್ಲಿ ತುಂಗಭದ್ರ ನದಿಯಿಂದ ನೀರಿನ ಸೌಲಭ್ಯದಿಂದ ಬೇಸಿಗೆ ಕಾಲದಲ್ಲಿ ಕುರಿ-ಮೇಕೆಗಳಿಗೆ ಸಾಕಷ್ಟು ಮೇವು, ನೀರು ಪೂರೈಕೆ, ಅಲೆಮಾರಿ ಕುರುಬರ ವಲಸೆ ಮಾರ್ಗಗಳನ್ನು ರೇಖಾನಕ್ಷೆಯಿಂದ ಸ್ಪಷ್ಟಪಡಿಸಿ ಅನೇಕ ಸಂಗತಿಗಳನ್ನು ಚರ್ಚಿಸಲಾಗಿದೆ. ಅಲೆಮಾರಿ ಕುರುಬರ ವಸತಿಗಾಗಿ ಅವರು ಒಂದು ಅನುಕೂಲಕರ ಸ್ಥಳದಲ್ಲಿ ಗುಡಾರ ಹೂಡುವ, ಮೇವು -ನೀರುಗಳ ಕೊರತೆಯಿಂದ ಗುಡಾರ ಬದಲಾಯಿಸುವ ವಿಧಾನ, ಸ್ಥಳಾವರಣ ಮತ್ತು ಬ್ರಹ್ಮಾಂಡದ ಕಲ್ಪನೆಯಲ್ಲಿ ಕುರಿಗಳ ಉಗಮ ಮೊದಲಾದವನ್ನು ಮೂರನೆಯ ಅಧ್ಯಾಯದಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ಬಂಧುತ್ವ ಮತ್ತು ವಿವಾಹ ಎಂಬುದಾಗಿದೆ. ಅಲೆಮಾರಿ ಕುರುಬರ ಅವಿಭಕ್ತ ಕುಟುಂಬ ಮತ್ತು ಬಂಧುತ್ವ ಸಂಘಟನೆ, ಅಲೆಮಾರಿ ಕುರುಬರು ನೆಂಟಸ್ಥಿಕೆಯಲ್ಲಿ ಬಳಸುವ ಬೆಡಗುಗಳ ಮಹತ್ವ, ಮದುವೆ ಕಾರ್ಯದ ಪ್ರಾಥಮಿಕ ಶಸ್ತ್ರಾಚರಣೆಗಳು, ಕುರಿಬೇಟೆ, ಸಂಗಾತಿಯ ಆಯ್ಕೆಯಲ್ಲಿಯ ಆಚಾರಗಳು, ನಿಶ್ಚಿತಾರ್ಥ(ಬಾಟಿಗೆ), ಲಕ್ಷ್ಮೀಪೂಜೆ, ಹಂದರ ಹಾಕುವ, ಶಾಶಿಕಟ್ಟೆಯ ಆಚರಣೆ, ಹಾಲಗಂಬ ತರುವ, ಎದುರುಗೊಳ್ಳುವ, ಪಲ್ಲಕ್ಕಿ ತರುವ, ಐರಾಣಿ ತರುವ, ಕಂಕಣ ಕಟ್ಟುವ, ಅರಿಷಿಣ ನೀರು, ಅಕ್ಕಿಕಾಳು ಹಾಕುವ ದಿನದ ಕಾರ್ಯದಲ್ಲಿ ಅಲೆಯುವ, ಬಲಿ, ಗುಗ್ಗಳ, ಐರೇನಿ ತರೋದು, ಸುರಿಗೆ ನೀರು, ಬಾಸಿಂಗ ಕಟ್ಟುವ, ತಾಳಿ ಕಟ್ಟುವ, ಒಡಪುಕಟ್ಟಿ ಗಂಡನ ಹೆಸರು ಹೇಳುವ, ಉಂಗುರ ಹುಡುಕಾಟ, ಅಡಿಕೆ ಆಟ, ಗೊಂಬಿ ಆಟ, ದೈವದ ಊಟದಲ್ಲಿ ಬೀರದೇವನ ಭಕ್ತರು ಮಾಂಸದೂಟ ಮಾಡಿಸಿದರೆ ಮಾಳಿಂಗರಾಯನ ಭಕ್ತರು ಸಿಹಿ ಊಟ ಹಾಕಿಸುವದು (ಹೊಸ ವಿಚಾರ), ಅಳಿಯನ ಕಾಲು ತೊಳೆಯುವ, ಹೆಣ್ಣನ್ನು ಧಾರೆ ಎರೆಯುವ, ಬಹು ಪತ್ನಿತ್ವ, ವಿಧವಾ ವಿವಾಹ ಮೊದಲಾದ ಆಚರಣಾತ್ಮಕ ವಿಷಯಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ಆರಾಧನೆ-ಆಚರಣೆ-ನಂಬಿಕೆ ಎಂಬ ಐದನೇ ಅಧ್ಯಾಯವು ಜನನ, ನಾಮಕರಣ, ಋತುಮತಿ, ಮರಣ, ಜುಟ್ಟು ಬಿಡುವ(ಪಿಳ್ ಜುಟ್ಟು), ನಿಸರ್ಗದ ಮೂಲಕ ಮಳೆ ಬರುವ ೧೦ ಸಂಕೇತಗಳನ್ನು ಗುರುತಿಸುವ,

ಬೀರೇಶ, ಮಾಳಿಂಗರಾಯ ಚಿಂಚಲಿ ಮಾಯವ್ವರ ಪೌರಾಣಿಕ ಚಾರಿತ್ರಿಕ ದಾಖಲೆಗಳು ಮತ್ತು ಧಾರ್ಮಿಕ ವಿಧಿ ವಿಧಾನಗಳು, ಯುಗಾದಿ, ಹಿರಿಯರ ಹಬ್ಬ, ನಾಗರ ಪಂಚಮಿ, ಶಿವನ ಸೋಮವಾರ, ಮಹಾನವಮಿ, ದೀಪಾವಳಿ, ವಿಶೇಷ ಆಚರಣೆಗಳಾದ ಹಿಸ್ಕಾಳೆ, ಅಮವಾಸ್ಯೆ, ಮಲಪುರಿಹಬ್ಬ, ಕತ್ತೆ ಬಿಡುವ(ನಿರೀಕ್ಷೆಗೆ ಮೀರಿದ ಪ್ರತಿಫಲ ದೊರೆತಾಗ), ನಾಟಿ ಔಷಧಿಯಿಂದ ಕುರಿ ರೋಗಗಳನ್ನು ನಿಯಂತ್ರಿಸುವ, ಕುರಿಯ ಕಾಲು, ಕೊಂಬು ಮುರಿದರೆ ಕಟ್ಟುವ, ಕಾಡುವಾಸಿ ಮಾನವನ ಔಷದೋಪಚಾರ ಹೀಗೆ ಅಲೆಮಾರಿ ಜನಾಂಗದ ಸಂಸ್ಕೃತಿ ಮತ್ತು ಪ್ರಾಣಿಪಕ್ಷಿ ಮಾನವರ ನಾಟಿ ಔಷಧಿಯ ಮುಂಜಾಗರೂಕತೆಗಳನ್ನು ತಿಳಿಸುತ್ತದೆ.

ಒಳಾಡಳಿತ ವ್ಯವಸ್ಥೆಯಲ್ಲಿ ಅಲೆಮಾರಿ ಜನಾಂಗದ ಕುಲ ಪಂಚಾಯ್ತಿ ವಿವಾದಗಳ ಬಗೆಗಳು ಮತ್ತು ನ್ಯಾಯನಿರ್ಣಯ ನಡೆಯುವ ಸ್ಥಳಗಳ ವಿವರ, ಆರ್ಥಿಕ ಜೀವನದಲ್ಲಿ ಅಲೆಮಾರಿ ಕುರುಬರ ಪಶುಸಂಪತ್ತುಗಳ ಕನಿಷ್ಠ ಗರಿಷ್ಠ ಪ್ರಮಾಣಗಳು, ಅಲೆಮಾರಿ ಕುರುಬರ ಪಶುಸಂಪತ್ತುಗಳ ಕೋಷ್ಟಕ(೯೫), ಅಲೆಮಾರಿ ಕುರುಬರ ಪಶುಸಂಪತ್ತುಗಳ ಶೇಕಡಾವಾರು ವೃತ್ತಚಿತ್ರ(೯೬), ಕುರಿ-ಮೇಕೆಗಳ ಮಾರಾಟ, ಮಾರಾಟದ ಹಂತದ ರೇಖಾಚಿತ್ರ, ಕಸಾಯಿಖಾನೆ ಸೇರಿದ ಕುರಿ-ಮೇಕೆಗಳ ಸಂಖ್ಯೆ, ಕುರಿ ತಬ್ಬುವಿಕೆ (ಗೊಬ್ಬರ) ಭತ್ಯೆ, ಕುರಿ-ಮೇಕೆಗಳ-ಗೊಬ್ಬರದ ಮಹತ್ವ, ಕುರಿಯ ಉಪ ಉತ್ಪನ್ನವಾದ ಉಣ್ಣೆಯನ್ನು ಕತ್ತರಿಸುವ ವಿಧಾನ, ಕಂಬಳಿ ತಯಾರಿಕಾ ವಿಧಾನಗಳು, ನೂಲುವದು, ಅಂಬಲಿ ತಯಾರಿಕೆ, ಹಾಸು ಹೊಯ್ಯುವ, ಮಗ್ಗಕ್ಕೆ ಏರಿಸುವ, ಗದ್ದುಗೆ ಕಂಬಳಿ, ಕರಿಯಕಂತೆ, ಭಂಡಾರವನ್ನು ಆರ್ಥಿಕ ಮತ್ತು ಧಾರ್ಮಿಕ ದೃಷ್ಟಿಕೋನದಲ್ಲಿ ಅರ್ಥೈಸುವಿಕೆ, ಅಲೆಮಾರಿ ಕುರುಬರ ಇತರೆ ಖರ್ಚುಗಳಾದ ಮೆಟ್ಟು(ಚಪ್ಪಲಿ), ಅಡಿಕೆ ಚೀಲ, ಹೊಟ್ಟೆಚೀಲ, ಕುದುರೆ ಜಾಳಿಗೆ, ಕುರಿಗಾರರೊಂದಿಗೆ ಕಟುಕರ ವ್ಯವಹಾರ ಕ್ರಮ ಮುಂತಾದ ಸಣ್ಣ, ದೊಡ್ಡ ವಿಷಯಗಳನ್ನು ಸವಿಸ್ತಾರವಾಗಿ ಚರ್ಚಿಸಿದ್ದಾರೆ.

ಎಂಟನೆಯ ಅಧ್ಯಾಯವು ಸಾಹಿತ್ಯ, ಕಲೆ ಮತ್ತು ಭಾಷೆಗೆ ಸಂಬಂಧಿಸಿದೆ. ಡೊಳ್ಳಿನ ಉಗಮ, ರಚನೆ, ಕುಣಿತ, ಬಡಿತದ ವಿಧಾನಗಳು, ಹಾಡುಗಳ ಸ್ವರೂಪ, ಹಾಡಿನ ಸೃಷ್ಟಿ, ಹಾಡಿನ ಗೋಷ್ಠಿ (ದಿಮ್ಮು ಇಡುವುದು) ಮೊದಲಾದವನ್ನು ವಿವರಿಸಲಾಗಿದೆ. ಕುರಿ-ಮೇಕೆಗಳ ಶರೀರದಲ್ಲಿಯ ಭಿನ್ನತೆಯ ಅಂಶಗಳಿಂದ ಹೆಸರಿಟ್ಟು ಗುರುತಿಸುವಿಕೆ, ಕುರಿಗಳಿಗೆ ಬಳಸುವ ಭಾಷೆ, ವೇಷಭೂಷಣ, ಆಭರಣ, ಧಾನ್ಯಗಳು ಅಲೆಮಾರಿ ಕುರುಬರ ಭಾಷೆಯ ಪಟ್ಟಿ ಹೀಗೆ ಹಲವಾರು ವಿಷಯಗಳನ್ನು ವಿಶ್ಲೇಷಿಸಲಾಗಿದೆ. 'ಕುರಿಸಂಗೋಪನೆ'ಯು ಒಂಬತ್ತನೆಯ ಅಧ್ಯಾಯವಾಗಿದೆ. ಕುರಿಯ ಮೂಲ, ಇತಿಹಾಸ, ಹರಡುವಿಕೆ, ಕರ್ನಾಟಕದ ಕುಲಗಳು, ವಾಯುಗುಣ, ಕರ್ನಾಟಕ ರಾಜ್ಯದ ಜಿಲ್ಲಾವಾರು ವಾಯುಗುಣ, ಮತ್ತು ಮಳೆಯ ಪ್ರಮಾಣ, ಕುರಿತಳಿಗಳ ವಿಧಗಳು (ಡೆಕ್ಕನಿ ತಳಿ, ಹಾಸನ ತಳಿ, ಬನ್ನೂರು ತಳಿ, ಕೆಂಗುರಿ ತಳಿ, ಯು.ಎಸ್.ಎ.ತಳಿ) ಲಕ್ಷಣ ಮತ್ತು ಉತ್ಪಾದನೆ, ಮರಿಗಳ ಆಹಾರ ಮತ್ತು ಆರೈಕೆ, ಬೀಜದ ಟಗರಿನ ಆಯ್ಕೆ, ಆಹಾರ, ಸಂತಾನಾಭಿವೃದ್ಧಿ ಮತ್ತು ಸಂವರ್ಧನೆ, ರೋಗದ ೯ ಮುಂಜಾಗ್ರತಾ ಕ್ರಮಗಳು ಹೀಗೆ ಅನೇಕ ವಿಷಯಗಳನ್ನು ವಿಮರ್ಶಿಸಲಾಗಿದೆ.

ಹತ್ತನೆಯ ಅಧ್ಯಾಯವು 'ಸಮಸ್ಯೆ-ಸಂಘಟನೆ-ಪರಿಹಾರ' ಎಂಬ ಶೀರ್ಷಿಕೆ ಹೊಂದಿದೆ. ಅಲೆಮಾರಿ ಕುರುಬರ ಸಮಸ್ಯೆಗಳು, ಹುಲ್ಲುಗಾವಲುಗಳ ಕೊರತೆ, ಗಣಿಗಾರಿಕೆ, ನೈಸರ್ಗಿಕ ವಿಕೋಪಗಳು, ಕುರಿಗಳ ಚಿಕಿತ್ಸೆಯಲ್ಲಿ ಅರ್ಹತೆಯ ಜ್ಞಾನದ ಕೊರತೆ, ಮಾರುಕಟ್ಟೆಯ ಸಮಸ್ಯೆಗಳು, ಕುರಿಗಳ ಭದ್ರತೆಯ ಕೊರತೆ, ಮೂಲಭೂತ ಸೌಕರ್ಯಗಳಿಂದ ವಂಚಿತರಾಗುವದು, ಜನರ ಆರೋಗ್ಯ, ಉತ್ತಮ ತಳಿ ಕೊರತೆ, ಕಡಿಮೆ ಗುಣಮಟ್ಟದ ಉಣ್ಣೆ, ಶೈಕ್ಷಣಿಕ ಸ್ಥಿತಿಗತಿ, ಅಲೆಮಾರಿ ಕುರುಬರ ಸಾಕ್ಷರತೆಯ ಪ್ರಮಾಣಗಳ ಕೋಷ್ಠಕ (೧೦೪) ಅಲೆಮಾರಿ ಕುರುಬರ ಸಾಕ್ಷರತೆಯ ಶೇಕಡಾವಾರು ಪ್ರಮಾಣದ ವೃತ್ತಚಿತ್ರ, ಅಲೆಮಾರಿ ಕುರುಬರ ಶೈಕ್ಷಣಿಕ ಮಟ್ಟದ ಕೋಷ್ಠಕ ಮತ್ತು ಶೇಕಡಾವಾರು ವೃತ್ತಚಿತ್ರ, ಮಹಿಳೆಯರ ಶಿಕ್ಷಣ, ರಾಜಕೀಯ ಸ್ಥಿತಿಗತಿಗಳ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳನ್ನು ಸೂಚಿಸಲಾಗಿದೆ. ಹುಲ್ಲುಗಾವಲು ಮೀಸಲಿಡುವುದು, ಕುಡಿಯುವ ನೀರಿನ ವ್ಯವಸ್ಥೆ, ರಾಜ್ಯಮಟ್ಟದ ಬಂದೂಕು ಪರವಾನಗಿ ನೀಡುವದು, ಎಲ್ಲೆಲ್ಲಿ ವಲಸೆಯೋ ಅಲ್ಲಿ ಶಾಲೆ, ಕುರಿ-ಮೇಕೆಗಳ ಮಾರುಕಟ್ಟೆ ಸೌಲಭ್ಯ, ರೋಗ ನಿರೋಧಕ ಲಸಿಕೆ, ಅಲೆಮಾರಿ ಕುರುಬರಿಗೆ 'ಜನಶ್ರೀ ವಿಮಾ' ಮತ್ತು ಕುರಿಗಳಿಗೆ 'ಸಮಗ್ರ ವಿಮಾ' ಯೋಜನೆ ಜಾರಿಗೊಳಿಸುವದು. ಅಲೆಮಾರಿ ಕುರುಬರ ಮಹಿಳೆಯರಿಗೆ ಸ್ತ್ರೀಶಕ್ತಿ ಯೋಜನೆಯಡಿ ಪ್ರಾಮುಖ್ಯತೆ, ಕುರಿ ಸಾಕಣೆ ಸಂಶೋಧನಾ ಕೇಂದ್ರ ಸ್ಥಾಪನೆ, ಅರಣ್ಯದೊಳಗೆ ಕುರಿ ಮೇಯಿಸಲು ಪಡಿತರ ಚೀಟಿ ವಿತರಣೆ ಹೀಗೆ ಅಲೆಮಾರಿ ಜನಾಂಗದ ಕುರಿತು ಹತ್ತು ಹಲವಾರು ನೆಲೆಯಲ್ಲಿ ಚರ್ಚಿಸಲಾಗಿದೆ. ಅಂತ್ಯದಲ್ಲಿ ಅಲೆಮಾರಿ ಕುರುಬರ ನೆಲೆಗಳವಾರು ಮತ್ತು ಜನಸಂಖ್ಯೆಯ ಅಂಕಿ ಅಂಶಗಳ ಪಟ್ಟಿಯೊಂದಿಗೆ ಲೇಖಕರ ಕ್ಷೇತ್ರಕಾರ್ಯದಲ್ಲಿ ಸಂದರ್ಶಿಸಿದ ಮಾಹಿತಿದಾರರ ವಿವರಗಳನ್ನು ನೀಡಿದ್ದಾರೆ.

ಒಟ್ಟಿನಲ್ಲಿ ಸರಳವಾದ ಭಾಷೆಯಲ್ಲಿ ಅಲೆಮಾರಿ ಕುರುಬರ ಬಗೆಗೆ ಅನೇಕ ವಿಷಯಗಳನ್ನು ತಿಳಿಸುವಲ್ಲಿ ಕೃತಿಯು ಯಶಸ್ವಿಯಾಗಿದೆ. ಕಾಡಿನೊಂದಿಗೆ ಒಡನಾಟವಿರಿಸಿಕೊಂಡ ಅಲೆಮಾರಿಗಳ ಧಾರ್ಮಿಕ, ಚಾರಿತ್ರಿಕ, ಸಾಂಸ್ಕೃತಿಕ ರಂಗಗಳಲ್ಲಿ ಪಾತ್ರ, ನಿರಾಶ್ರಿತರಾದರೂ ನಿರಾತಂಕವಾಗಿ ಬದುಕುವವರ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು ಅಲೆಮಾರಿಗಳ ಬಾಳಿಗೆ ಬೆಳಕು ತೋರುತ್ತವೆ. ಎಂತಹ ಜಟಿಲ ಸಮಸ್ಯೆಗಳ ಮಧ್ಯೆ ವೃತ್ತಿಬಿಡದೆ ತಮ್ಮದೇ ಆದ ಪರಿಸರದಲ್ಲಿ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ಅಲೆಮಾರಿ ಕುರುಬರ ಬಗೆಗೆ ತಿಳಿದುಕೊಳ್ಳುವದಕ್ಕೆ ಈ ಗ್ರಂಥ ಪ್ರಮುಖವಾದ ಆಕರವಾಗಿದೆ. ಸಂಶೋಧಕರ ಶ್ರಮ ಶ್ರದ್ಧೆಗಳನ್ನು ಕೃತಿಯುದ್ದಕ್ಕೂ ಕಾಣಬಹುದು.

೪. ಒಡೆಯರು

ಒಡೆಯರು ಕುರುಬ ಸಮಾಜದ ಒಂದು ಪ್ರಮುಖ ಉಪಪಂಗಡ. ಕುರುಬರ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳು ಒಡೆಯರ ನೇತೃತ್ವದಲ್ಲಿಯೇ ನಡೆದುಕೊಂಡು ಬರುತ್ತವೆ. ಮದುವೆ ಮರಣಗಳಂಥ ಸಂದರ್ಭಗಳಲ್ಲಿ ಒಡೆಯರು ಪುರೋಹಿತರಂತೆ ನಿಂತು ಕಾರ್ಯವನ್ನು ನಿರ್ವಹಿಸುತ್ತಾರೆ. ಈ ಒಡೆಯರು

ಕಳೆದ ಹನ್ನೆರಡನೆಯ ಶತಮಾನದಿಂದ ಅಸ್ತಿತ್ವಕ್ಕೆ ಬಂದರೆಂಬುದಕ್ಕೆ ಕಾವ್ಯ, ಪುರಾಣ, ಹಾಗೂ ಶಾಸನಗಳು ವಿವರವಾಗಿ ತಿಳಿಸುತ್ತವೆ. ಇಂಥ ವಿಶಿಷ್ಟ ಪರಂಪರೆಯನ್ನು ಹೊಂದಿದ ಒಡೆಯರ ಸಂಪ್ರದಾಯ, ಆಚರಣೆ, ಕುರುಬರೊಂದಿಗಿನ ಸಂಬಂಧ, ಧಾರ್ಮಿಕ ಚಟುವಟಿಕೆಗಳ ಕುರಿತು ಮೊದಲು ಅಧ್ಯಯನ ಮಾಡಿದವರು ಸೊಶೋಧಕರಾದ ಎಂ.ಚಿದಾನಂದಮೂರ್ತಿಯವರು. ಐನೋರು ಮತ್ತು ಕಾಲಿಲ್ಲದ ಐನೋರು (ಗ್ರಾಮೀಣ, ೧೯೭೭) ಹಾಗೂ ಕುರುಬ ಜಾತಿಯ ಒಡೆಯರು ಮತ್ತು ಒಡೇರಮ್ಮ (ಪಗರಣ ೧೯೮೪) ಎಂಬ ಎರಡು ಲೇಖನಗಳನ್ನು ಪ್ರಕಟಿಸುವದರ ಮೂಲಕ ಒಡೆಯರ ಸಮುದಾಯದ ಅಧ್ಯಯನಕ್ಕೆ ಶ್ರೀಕಾರ ಹಾಕಿದರು. ಈ ಎರಡು ಲೇಖನಗಳಲ್ಲಿ ಒಡೆಯರ ಮೂಲ, ಆಚರಣೆ, ಸಂಪ್ರದಾಯಗಳನ್ನು ಚರ್ಚಿಸುತ್ತ "ಕಾಲಿಲ್ಲದ ಐನೋರು" ಎಂಬ ವಿಶಿಷ್ಟ ಸಂಪ್ರದಾಯಗಳ ಬಗೆಗೆ ದೀರ್ಘವಾಗಿ ವಿವರಿಸಲಾಗಿದೆ. ಕಾಲಿಲ್ಲದ ಐನೋರು ಅಂದರೆ ವಿಭೂತಿ ಗಟ್ಟಿಯ ಮೂಲಕ ಕುರುಬರು ಧಾರ್ಮಿಕ ಕಾರ್ಯಗಳನ್ನು ನೆರವೇರಿಸುವ ಪದ್ಧತಿಯುಂಟು. ಅಂಥ ಎಲ್ಲ ಪದ್ಧತಿಯ ವಿವರಗಳನ್ನು ಕ್ಷೇತ್ರಕಾರ್ಯದ ಮೂಲಕ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಿರುವುದು ಈ ಲೇಖನಗಳ ವಿಶೇಷತೆಯಾಗಿದೆ.

"ಒಡೇರಮ್ಮ" ಅಂದರೆ ಒಡೆಯರ ಹೆಂಡತಿ. ಒಡೆಯರು ನಿಧನರಾದ ನಂತರ ಕುರುಬರು ನಡೆಸುತ್ತಿದ್ದ ಎಲ್ಲ ಧಾರ್ಮಿಕ ಕಾರ್ಯಗಳು ಒಡೇರಮ್ಮ ನೇತೃತ್ವದಲ್ಲಿ ನಡೆಯುತ್ತವೆ. ವಿಧವೆಯಾದರೂ ಆಕೆ ಮುತ್ತೈದೆ. ಶುಭ ಸಂಕೇತಗಳಾದ ತಾಳಿ, ಬಳೆ, ಕುಂಕುಮ ಇತ್ಯಾದಿಗಳನ್ನು ತೆಗೆಯುವಂತಿಲ್ಲ. ಕುರುಬ ಸಮಾಜ ಮಹಿಳೆಗೆ ನೀಡಿದ ಈ ಗೌರವವನ್ನು ವಿಶ್ವದ ಯಾವುದೇ ಸಮಾಜ ನೀಡಿಲ್ಲವೆಂಬುದನ್ನು ಚಿದಾನಂದಮೂರ್ತಿಯವರು ಸ್ಪಷ್ಟವಾಗಿ ಹೇಳಿರುವುದರಲ್ಲಿ ಸತ್ಯಾಂಶವಿದೆ.

ಹೀಗೆ ಈ ಸಮುದಾಯ ಕುರಿತು ಇತ್ತೀಚೆಗೆ ವಿಸ್ತೃತವಾದ ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಎಫ್.ಟಿ. ಹಳ್ಳಿಕೇರಿ ಅವರು ಸಂಪಾದಿಸಿದ 'ಕುರುಬರ ಗುರು ಒಡೆಯರು' ಹಾಗೂ ಬಿ.ಜಿ.ಬಿರಾದಾರ ಅವರ 'ಕುರುಬರ ಗುರು ಒಡೆಯರು : ಸಾಂಸ್ಕೃತಿಕ ಅಧ್ಯಯನ' ಬಹುಮುಖ್ಯವಾದ ಕೃತಿಗಳಾಗಿವೆ. ಅವುಗಳ ವಿಶೇಷತೆಯನ್ನು ಕುರಿತು ಈಗ ನೋಡಬಹುದು.

ಕುರುಬರ ಗುರು ಒಡೆಯರು (ಸಂ) ಡಾ. ಎಫ್.ಟಿ.ಹಳ್ಳಿಕೇರಿ (೨೦೦೭)

'ಕುರುಬ ಗುರು ಒಡೆಯರು' ಎಂಬ ಕೃತಿಯನ್ನು ಹೊಸಪೇಟೆಯ ವಿಕಾಸ ಪ್ರಕಾಶನದಿಂದ ಪ್ರಕಟಿಸಲಾಗಿದೆ. ಬಿಜಾಪುರದಲ್ಲಿ ೧೫-೫-೨೦೦೫ರಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಂಡಿತವಾದ ಸಂಪ್ರಬಂಧಗಳ ಸಂಪುಟವಿದು. ಅನೇಕ ವಿದ್ವಾಂಸರು ಒಡೆಯರ ಸಮಗ್ರ ಪರಿಚಯವನ್ನು ಈ ಕೃತಿಯ ಮೂಲಕ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರಸ್ತಾವನೆಯಲ್ಲಿ ಸಂಪಾದಕರಾದ ಎಫ್.ಟಿ.ಹಳ್ಳಿಕೇರಿ ಅವರು ಒಡೆಯರ ಪೂರ್ವೇತಿಹಾಸವನ್ನು ಹೀಗೆ ತಿಳಿಸಿದ್ದಾರೆ. "ರೇವಣಸಿದ್ದೇಶ್ವರ, ಸಿದ್ಧರಾಮೇಶ್ವರ, ಅಮೋಘಸಿದ್ದೇಶ್ವರ, ಬೀರೇಶ್ವರ, ಗೊಲ್ಲಾಳೇಶ್ವರ ಮೊದಲಾದವರು ಈ ಸಮಾಜದ ಆರಾಧ್ಯ ದೈವವಾಗಿದ್ದಾರೆ. ಹೀಗಾಗಿ ಇವರು ಶೈವ

ಸಂಪ್ರದಾಯದ ಶಿವನ ಆರಾಧಕರೆಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಇವರನ್ನು ಹಾಲುಮತದವರು ಎಂದು ಕರೆಯುತ್ತಾರೆ. ಕುರುಬರ ಗುರು ಪರಂಪರೆಯಲ್ಲಿ ಮುಖ್ಯವಾಗಿ ಮೂರು ಸಂಪ್ರದಾಯಗಳಿವೆ. ಒಂದು ರೇವಣಸಿದ್ಧ ಸಂಪ್ರದಾಯ, ಇನ್ನೊಂದು ಸಿದ್ಧರಾಮ ಸಂಪ್ರದಾಯ, ಮತ್ತೊಂದು ಅಮೋಘಸಿದ್ಧ ಸಂಪ್ರದಾಯ. ಈ ಮೂರು ಸಂಪ್ರದಾಯಗಳ ಮುಂದುವರಿಕೆಯಾಗಿ ಒಡೆಯರು ಹೆಸರಿನ ಗುರುಗಳು ಕರ್ನಾಟಕದಾದ್ಯಂತ ಇದ್ದಾರೆ."[೨]

ಕುರುಬರ ಇತಿಹಾಸ, ಸಮಾಜ ಸಂರಚನೆ, ಕುರುಬರ ಗುರು ಒಡೆಯರ ಶಾಖೆಗಳು, ಒಡೆಯರ ಮಹಾಪುರುಷರು, ಒಡೆಯರ ಆಧುನಿಕ ಗಣ್ಯರು, ಒಡೆಯರ ಭೌಗೋಳಿಕ ವ್ಯಾಪ್ತಿ, ಒಡೆಯರ ಸಂಪ್ರದಾಯ ಮತ್ತು ಆಚರಣೆಗಳು, ಒಡೆಯರ ಹೇಳಿಕೆಗಳು, ಒಡೆಯರ ಇಂದಿನ ಸ್ಥಿತಿಗತಿ, ಮುಂದಿನ ಭವಿಷ್ಯ ಇತ್ಯಾದಿಗಳನ್ನು ಸಮಗ್ರವಾಗಿ ಪರಿಚಯಿಸುವ ಮೊದಲ ಕೃತಿಯಾಗಿದೆ. ಪ್ರೊ. ಬಿ.ಬಿ.ಪಾಟೀಲರು 'ಕುರುಬರ ಇತಿಹಾಸ' ಎಂಬ ವಿಷಯವನ್ನು ಅನೇಕ ಆಕರಗಳಿಂದ ಸ್ಪಷ್ಟಪಡಿಸುತ್ತ ಕುರುಬ ಮತವು ವೇದಪೂರ್ವದಲ್ಲಿಯ ಮೊದಲ ಮತವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಡಾ. ಬಿ.ಜಿ.ಬಿರಾದಾರ ಅವರು ಕುರುಬ ಸಮಾಜ ಸಂರಚನೆ ಎಂಬ ಸಂಪ್ರಬಂಧವು ಕುರುಬ ಕುಲದ ಒಳಪಂಗಡಗಳಾದ ಹತ್ತಿಕಂಕಣ, ಉಣ್ಣೆ ಕಂಕಣ, ಹಂಡೆ ಕುರುಬರು ಮತ್ತು ಒಡೆಯರ ಉಗಮ ಅವುಗಳಲ್ಲಿ ಸಾಮ್ಯತೆ, ಭಿನ್ನತೆ, ಹೀಗೆ ಅನೇಕ ವಿಷಯಗಳನ್ನು ಹಲವಾರು ನೆಲೆಯಲ್ಲಿ ಗುರುತಿಸಿದ್ದಾರೆ.

'ಕುರುಬರ ಗುರು ಒಡೆಯರ ಶಾಖೆಗಳು' ಎಂಬ ವಿಷಯವನ್ನು ಪ್ರೊ. ಚೆನ್ನಪ್ಪ ಕಟ್ಟಿಯವರು ಚರ್ಚಿಸಿದ್ದಾರೆ. ಕುರುಬ ಕುಲವು ಲಿಂಗಾಯತ ಮತದೊಂದಿಗೆ ಹೊಂದಿದ ಸಂಬಂಧಗಳನ್ನು ಆಕರ್ಷಣೆಯ ನೆಲೆ, ವಿಕರ್ಷಣೆಯ ನೆಲೆ, ಒಡಂಬಡಿಕೆಯ ನೆಲೆ ಎಂದು ಮೂರು ಭಾಗಗಳಲ್ಲಿ ಗುರುತಿಸಲಾಗಿದೆ. ಕುರುಬರ ಪುರೋಹಿತ ಒಡೆಯರನ್ನು ರೂಪಿಸುವ ಅಮೋಘಸಿದ್ಧ, ಶಾಂತಮುತ್ತಯ್ಯ, ಮತ್ತು ಸಿದ್ಧಮಂಕ ಸಂಪ್ರದಾಯಗಳ ಒಡೆಯರನ್ನು ಚರ್ಚೆಗೆ ಒಳಪಡಿಸಲಾಗಿದೆ.

ಶ್ರೀರಾಮ ಇಟ್ಟಣ್ಣವರ ಅವರು 'ಒಡೆಯರ ಶಾಖೆಯ ಮಹಾಪುರುಷರು' ಎಂಬ ವಿಷಯವನ್ನು ಚರ್ಚಿಸಿದ್ದಾರೆ. ವಿವಿಧ ಪರಂಪರೆಯ ಒಡೆಯರುಗಳಲ್ಲಿ ವ್ಯತ್ಯಾಸ, ರೇವಣಸಿದ್ಧ, ಅಮೋಘಸಿದ್ಧನ ಹುಟ್ಟು ಸಂತತಿ, ಒಡೆಯರ ಪವಾಡಗಳೊಂದಿಗೆ ಸಾಮಾಜಿಕ ಕಾಳಜಿ, ಇಂಥ ಹಲವಾರು ಹೊಸ ಸಂಗತಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಬಿಳಿಯಾನಿಸಿದ್ಧನ (ಅಮೋಘಸಿದ್ಧನ ಎರಡನೆಯ ಮಗ) ಪವಾಡಗಳು, ಮಹಾಸಿದ್ಧನ (ಅಮೋಘಸಿದ್ಧನ ಪುಣ್ಯದ ಮಗ) ಪವಾಡಗಳು, ಅಮೋಘಸಿದ್ಧನ ಪುಣ್ಯದ ಮತ್ತು ಧರ್ಮದ ಮಕ್ಕಳಲ್ಲಿಯ ವೈಮನಸ್ಸು ಹೀಗೆ ಹಲವಾರು ಹೊಸ ಮಾಹಿತಿಗಳನ್ನು ಚರ್ಚಿಸಿ ಅಮೋಘಸಿದ್ಧನ ಜನಪ್ರಿಯತೆಯನ್ನು ವ್ಯಕ್ತಪಡಿಸಲಾಗಿದೆ.

'ಒಡೆಯರ ಶಾಖೆಯ ಆಧುನಿಕ ಗಣ್ಯರು' ಎಂಬ ಲೇಖನದಲ್ಲಿ ಗುರುಪರಂಪರೆಯ ಎಂಟು ಜನ ಆಧುನಿಕ ಗಣ್ಯರನ್ನು ಪರಿಚಯಿಸಲಾಗಿದೆ. ವೇದಮೂರ್ತಿ ಸಿದ್ದಪ್ಪಯ್ಯ ಒಡೆಯರ ಅವರ (೧೮೪೭) ಸಮಾಜಿಕ ಕಳಕಳಿ, ವೇದಮೂರ್ತಿ ರಾಮಪ್ಪಯ್ಯ ಸ್ವಾಮಿ (೧೮೭೦-೧೯೫೧) ಹಾಲುಮತ ಸಮಾಜದ ಧಾರ್ಮಿಕ-ಸಾಮಾಜಿಕ -ಶೈಕ್ಷಣಿಕ ಪ್ರಗತಿಗಾಗಿ ದುಡಿದ, ಜಗದ್ಗುರು ವಿರೂಪಾಕ್ಷಯ್ಯ ಒಡೆಯರು (೧೯೨೯) ಹಾಲುಮತ ಮಹಾಸಭೆಯ ಅಧ್ಯಕ್ಷತೆ ವಹಿಸಿ ಭಾಷಣದಲ್ಲಿ ಸಮಾಜವನು ಎಚ್ಚರಿಸುವ, ಬೆಳಗಾಂವ ಜಿಲ್ಲೆಯ ಸಂಗ್ರೇಶಕೊಪ್ಪದ ಶ್ರೀ ಗುರುಸಿದ್ದಯ್ಯ ಸ್ವಾಮಿಗಳ ೨ನೆಯ ಹಾಲುಮತ ಮಹಾಸಭೆಯ ಅಧ್ಯಕ್ಷತೆಯ ಭಾಷಣ, ತುಮಕೂರಿನ ಶ್ರೀ ಸಿರಿಯಪ್ಪ ಒಡೆಯರ (೧೯೧೨ -೧೯೯೨) ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಸೇವೆಗಳು, ಆಧುನಿಕ ಸಿದ್ದಯ್ಯ ಒಡೆಯರ, ಶ್ರೀ ಚೆನ್ನಯ್ಯ ಒಡೆಯರರ ಅನಕ್ಷರತೆ ಮತ್ತು ಮೌಢ್ಯತೆಯಿಂದ ಒದಗುವ ದುಷ್ಪರಿಣಾಮ, ಶ್ರೀ ಶಂಕರಗೌಡ ಚೆನ್ನಮಲ್ಲಪ್ಪಗೌಡ ಮಾಲಿಪಾಟೀಲರ (ಒಡೆಯರ) ಹಾಲುಮತ ಪ್ರಚಾರಕಾರ್ಯದಲ್ಲಿ ವಹಿಸಿದ ಪಾತ್ರ ಮೊದಲಾದ ವಿವರಗಳನ್ನು ಇಲ್ಲಿ ದಾಖಲಿಸಲಾಗಿದೆ.

'ಒಡೆಯರು : ಭೌಗೋಳಿಕ ವ್ಯಾಪ್ತಿ' ಕುರಿತಾಗಿ ಎಫ್.ಟಿ.ಹಳ್ಳಿಕೇರಿಯವರು ಲೇಖನವೊಂದರಲ್ಲಿ ಚರ್ಚಿಸಿದ್ದಾರೆ. ಕರ್ನಾಟಕದ ಹಾಲುಮತ ಮಠಗಳು, ಒಡೆಯರು ಹೆಚ್ಚಿನ ಸಂಖ್ಯೆಯಲ್ಲಿ (ಕರ್ನಾಟಕದ ಮಧ್ಯಭಾಗದಲ್ಲಿ) ವಾಸವಾಗಿರುವ ಜಿಲ್ಲಾವಾರು ಪಟ್ಟಿ, ಒಡೆಯರ ಸ್ಥಿತಿಗತಿ, ಸಮಾಜದ ಅಭಿವೃದ್ಧಿಗಾಗಿ ಜಾಗೃತಿಗಾಗಿ ಒಡೆಯರು ರೂಪಿಸಬೇಕಾದ ನೀಲನಕ್ಷೆ ಮೊದಲಾದ ಮಹತ್ವದ ವಿಚಾರಗಳತ್ತ ಗಮನ ಹರಿಸಲಾಗಿದೆ. 'ಒಡೆಯರ ಸಂಪ್ರದಾಯ ಮತ್ತು ಆಚರಣೆಗಳ' ಬಗೆಗೆ ಸಿ.ಕೆ.ಪರಶುರಾಮಯ್ಯ ಅವರು ತಮ್ಮ ಸಂಪ್ರಬಂಧದಲ್ಲಿ ಸೋದಾಹರಣವಾಗಿ ವಿವರಿಸಿದ್ದಾರೆ. ಕರ್ನಾಟಕ ಕುರುಬ ಜನಾಂಗದ ಪ್ರಾಚೀನತೆ ಮತ್ತು ವೈಶಿಷ್ಟ್ಯಗಳನ್ನು ಪ್ರಸ್ತಾಪಿಸುತ್ತ 'ತಗರ ಪವಾಡ' ಮತ್ತು 'ಸಿದ್ಧಮಂಕಚರಿತೆ'ಯಲ್ಲಿ ಹಾಲುಮತದ ಪ್ರಾಚೀನ ಗುರುಪರಂಪರೆಯ ವಿಶೇಷತೆಯನ್ನು ಗುರುತಿಸಿದ್ದಾರೆ. ಮುಖ್ಯವಾಗಿ ಒಡೇರಮ್ಮ ಮತ್ತು ಒಡೆಯರ ಆಚಾರ-ವಿಚಾರ ಮತ್ತು ಸ್ಥಾನ-ಮಾನಗಳನ್ನು ವಿಶೇಷವಾಗಿ ವಿವರಿಸಲಾಗಿದೆ.

ಎಂ.ಎಂ.ಪಡಶೆಟ್ಟಿಯವರು 'ಒಡೆಯರ ಹೇಳಿಕೆಗಳು' ಕುರಿತಾಗಿ ಚರ್ಚಿಸಿದ್ದಾರೆ. ಜನಪದರು ವಂಶ ಪರಂಪರಾನುಗತ ಜ್ಞಾನ ಅನುಭವಗಳಿಂದ ನಿಸರ್ಗದ ಸೂಕ್ಷ್ಮ ನಿರೀಕ್ಷಣೆಯಿಂದ ಪ್ರಾಣಿಪಕ್ಷಿಗಳ ವರ್ತನೆ ಯಲ್ಲಿಯ ಬದಲಾವಣೆಯಿಂದ ಮುಂದೆ ನಡೆಯುವ ಘಟನೆಗಳನ್ನು ಒಗಟಿನ ರೂಪದಲ್ಲಿಯ ಹೇಳಿಕೆಗಳನ್ನು ಉದಾಹರಣೆ ಸಹಿತ ವಿಶ್ಲೇಷಿಸಿದ್ದಾರೆ. ಮಳೆ-ಬೆಳೆ, ರಾಜಕೀಯ ಸ್ಥಿತ್ಯಂತರ, ರೋಗ-ರುಜಿನಗಳು, ಮಾಟ -ಮಂತ್ರ-ದೆವ್ವಗಳ ಕುರಿತಾಗಿರುವ ಹೇಳಿಕೆಗಳ ಆಶಯಗಳನ್ನು ವಿವರಿಸಿದ್ದಾರೆ.

ಒಡೆಯರ ಸ್ಥಿತಿಗತಿ ಮತ್ತು ಭವಿಷ್ಯಗಳ ವಿವರಗಳನ್ನು ಒಡೆಯರು ಪ್ರಗತಿಗಾಗಿ ಅನುಸರಿಸಬೇಕಾದ ೧೦ ಸೂಚನೆಗಳ ಪಟ್ಟಿಯನ್ನು ಚಂದ್ರಪ್ಪ ಸೂಬಟಿ ನೀಡಿದ್ದಾರೆ. ಹೀಗೆ ಕುರುಬ ಸಮುದಾಯದ ಧಾರ್ಮಿಕ ಮತ್ತು

ಸಾಮಾಜಿಕ ಸಂದರ್ಭದಲ್ಲಿ ಮುಖ್ಯ ನೇತೃತ್ವವನ್ನು ವಹಿಸುವವರು ಒಡೆಯರು. ಈ ಒಡೆಯರ ಸಮಗ್ರ ಸಂಸ್ಕೃತಿಯನ್ನು ತಿಳಿಸಿಕೊಡುವ ಮೊದಲ ಗ್ರಂಥ ಇದಾಗಿದೆ.

ಕುರುಬರ ಗುರು ಒಡೆಯರು : ಸಾಂಸ್ಕೃತಿಕ ಅಧ್ಯಯನ (೨೦೦೮)

ಬಿ.ಜಿ.ಬಿರಾದಾರ ಅವರ 'ಕುರುಬರ ಗುರು ಒಡೆಯರು : ಸಾಂಸ್ಕೃತಿಕ ಅಧ್ಯಯನ' ಕೃತಿಯು ೨೦೧೧ರಲ್ಲಿ ಹೊಸಪೇಟೆಯ ವಿಕಾಸ ಪ್ರಕಾಶನದಿಂದ ಪ್ರಕಟಗೊಂಡಿದೆ. ಇದು ೨೦೦೮ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅವರ ಸಂಶೋಧನ ಮಹಾಪ್ರಬಂಧವಾಗಿದೆ. ಒಟ್ಟು ೮ ಅಧ್ಯಾಯಗಳ ವಿಸ್ತಾರವನ್ನು ಹೊಂದಿದೆ. ಕುರುಬರ ಗುರು ಒಡೆಯರ ಪರಂಪರೆಗಳು, ಕುರುಬರ ಗುರು ಒಡೆಯರ ಭೌಗೋಳಿಕ ಪ್ರಸಾರ, ಕುರುಬ ಗುರು ಒಡೆಯರ ಸಾಂಸ್ಕೃತಿಕ ಅಧ್ಯಯನ, ಗುರು ಪರಂಪರೆಯ ಮಹಾಪುರುಷರು ಎಂಬ ಶೀರ್ಷಿಕೆಗಳನ್ನು ಹೊಂದಿದೆ.

ವಿದ್ವಾಂಸರ ಹೇಳಿಕೆಗಳಿಂದ ಹಾಲುಮತದ ಉಗಮವನ್ನು ಸ್ಪಷ್ಟಪಡಿಸಿದ್ದಾರೆ. ಅಲ್ಲದೆ ತಮ್ಮ ವೃತ್ತಿಗಾಗಿ ಕುರಿ ಮತ್ತು ದನಗಳನ್ನು ಆಶ್ರಯಿಸಿದ, ತಮ್ಮ ವಾಸಕ್ಕಾಗಿ ಸೂಕ್ತ ಪ್ರದೇಶವನ್ನು ನಿರ್ಧರಿಸಿ ವಾಸ ಪ್ರಾರಂಭಿಸಿದ ವಿಷಯ ವಿವರಣೆಗಳನ್ನು ಗುರುತಿಸಬಹುದು. ಒಡೆಯರ ಆಚಾರ ವಿಚಾರ ಸ್ಥಾನಮಾನಗಳು, ಸ್ತ್ರೀಯರಿಗೆ ಸಮಾಜದಲ್ಲಿ ಇರುವ ಮರ್ಯಾದೆ ಗೌರವಗಳು, ಕುರುಬ ಜನಾಂಗದವರ ಗುರು ಪರಂಪರೆ, ಪ್ರಾಚೀನತೆ, ಮಹಾಗುರು ರೇವಣಸಿದ್ಧ, ಶಾಂತಮುತ್ತಯ್ಯ, ಅಮೋಘಸಿದ್ಧರ ಪರಂಪರೆಯನ್ನು, ಸಂಪ್ರದಾಯಗಳನ್ನು ಅವರು ಬಾಳಿದ ಕಾಲಮಾನ ಹೀಗೆ ಹೊಸ ವಿಷಯಗಳ ಕುರಿತಾಗಿ ಸವಿವರಗಳನ್ನು ಸಂಗ್ರಹಿಸಲಾಗಿದೆ. ಮತ್ತು ಇತ್ತೀಚಿನ ಕನಕದಾಸರ ಗುರುಪೀಠ ಸ್ಥಾಪನೆಯ ಮೂಲ ಪ್ರಶ್ನೆಯನ್ನು ಇಲ್ಲಿ ಚರ್ಚಿಸಿರುವುದು ಸಮಂಜಸವಾಗಿದೆ.

ಹಾಲುಮತದ ಪ್ರಾಚೀನ ಕಾವ್ಯ ಪುರಾಣಗಳನ್ನು, ಶಾಸನಗಳನ್ನು, ಹಕ್ಕು ಪತ್ರ, ಸುರಳಿಪತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಿ ಹಾಲುಮತದ ಪ್ರಾಚೀನತೆಗೆ ಪೂರಕ ಮಾಹಿತಿಗಳನ್ನು ದೊರಕಿಸಿಕೊಟ್ಟಿರುವರು. ಚರಿತ್ರೆಯನ್ನು ತಿಳಿಯಲು ಮಹತ್ವದ ದಾಖಲೆಗಳನ್ನು ಬಳಸಲಾಗಿದೆ. ಡೊಳ್ಳಿನ ಹಾಡುಗಳು ಸಹ ಹಾಲುಮತದ ಇತಿಹಾಸವನ್ನು ತಿಳಿದುಕೊಳ್ಳಲು ಮಹತ್ವದ ಆಕರಗಳಾಗಿವೆ ಎಂಬುದನ್ನು ಸಕಾರಣವಾಗಿ ತಿಳಿಸಲಾಗಿದೆ.

ಒಡೆಯರ ಸಮಗ್ರ ಪರಿಚಯವನ್ನು ವಿ.ಆರ್.ಹನುಮಂತಯ್ಯನವರ ಕುರುಬರ ಚರಿತ್ರೆ(೧೯೨೬), ಡಾ.ಎಂ. ಚಿದಾನಂದಮೂರ್ತಿ ಅವರ 'ಗ್ರಾಮೀಣ ಪಗರಣ ಮತ್ತು ಇತರ ಪ್ರಬಂಧಗಳು'(೧೯೭೭), ಸಿ.ಕೆ. ಪರಶುರಾಮಯ್ಯನವರ ಲೇಖನ ಕುರುಬ ಜನಾಂಗದ ಒಂದು ಪ್ರಚಲಿತ ಪ್ರಾಚೀನ ಸಂಪ್ರದಾಯ: ಕರಿಯ ಕಂಥೆ(ಪಾವನ: ಸಂಸ್ಮರಣ ಗ್ರಂಥ ೧೯೯೨), ಎಸ್.ಜಿ.ಸಿದ್ಧರಾಮಯ್ಯನವರ ಜನಪದ ಕವಿ ಕಂಡ ರೇವಣಸಿದ್ಧ(ಪಾವನ ಸಂಸ್ಮರಣ ಗ್ರಂಥ ೧೯೯೨), ಎಂ.ಎಂ.ಕಲಬುರ್ಗಿಯವರ ಕುರುಬರ ಗುರು ಶಾಂತ ಮುತ್ತಯ್ಯ(೨೦೦೪ ಮಾರ್ಚ-೪), ಎಫ್.ಟಿ.ಹಳ್ಳಿಕೇರಿಯವರ ಲೇಖನ ರೇವಣಸಿದ್ಧ ಪರಂಪರೆಯ ಹಾಲುಮತ

ಮಠಗಳು (೨೦/೨೦೦೭ ಇತಿಹಾಸ ದರ್ಶನ) ಮೊದಲಾದವುಗಳಿಂದ ಚರ್ಚೆಗೆ ಒಳಪಡಿಸಲಾಗಿದೆ. ಕುರುಬರ ಗುರು ಶಾಂತಮುತ್ತಯ್ಯ ಎಂಬ ವಿಷಯವನ್ನು ಕೆಲವು ದಾಖಲೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ರೇವಣಸಿದ್ಧ, ಸಿದ್ಧರಾಮೇಶ್ವರ ಮತ್ತು ಅಮೋಘಸಿದ್ಧ ಇವರು ಕುರುಬ ಜನಾಂಗದ ಗುರುಪರಂಪರೆಯವ ರೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಕುರುಬರ ಚರಿತ್ರೆ, ಕುರುಬ ಎಂಬ ನಾಮ ನಿಷ್ಪತ್ತಿ, ಇವರು ಮೂಲತಃ ಆರ್ಯರೋ ಅಥವಾ ದ್ರಾವಿಡರೋ ಇವರು ಶಿವೋಪಾಸಕರೇ ಮುಂತಾದ ವಿಚಾರಗಳನ್ನು ಎರಡನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಎಂ. ಜೈಕುಮಾರರು ತಮ್ಮ ಕೃತಿ 'ನಡೆಯನುಡಿ'ಯಲ್ಲಿ ಹಾಲುಮತ ಉಗಮವನ್ನು ಹೊಸ ರೀತಿಯಲ್ಲಿ ವಿವರಿಸಿದ್ದಾರೆ. ಮೂಲತಃ ಕುರುಬರು ಕಾಪುಗಳು ಅವರ ಪೂರ್ವಜರು ಮಾಸಿರೆಡ್ಡಿ ಮತ್ತು ನೀಲಮ್ಮ. ಇವರು ಸೌದೆ ಮಾರಿ ಜೀವಿಸುತ್ತಿದ್ದರು. ಈಶ್ವರನ ಆಶೀರ್ವಾದದಿಂದ ಜನಿಸಿದ ಹಾಲುಮತದ ಉದಯ ಮುಂದುವರೆದು ಉಂಡಾಡು ಪದ್ಮಣ್ಣನಿಂದ ಹಾಲುಮತ ಹುಟ್ಟಿ ನಂತರದ ಕಥೆಯು ಎಲ್ಲ ಕಾವ್ಯ ಪುರಾಣಗಳ ಕಥೆಯನ್ನು ಹೋಲುತ್ತದೆ. ವಿ.ಆರ್.ಹನುಮಂತಯ್ಯ, ಗುಸ್ತವ ಓಪರ್ಟರ, ಶಂಬಾರ, ಎಚ್.ಜೆ.ಲಕ್ಕಪ್ಪಗೌಡರ ಹೇಳಿಕೆಗಳನ್ನು ದಾಖಲಿಸಿ ಕ್ರಿ.ಶ. ಪೂರ್ವದಿಂದ ಹಾಲುಮತದ ಉಗಮವಾಗಿದೆ ಎಂಬ ಅಂಶಗಳನ್ನು ಮನಗಾಣಿಸಿದ್ದಾರೆ.

ಕುರುಬ ಜನಾಂಗದ ಆಚರಣೆ, ಸಂಪ್ರದಾಯ, ದೇವತಾರಾಧನೆ, ಹಬ್ಬ, ಉತ್ಸವ, ಜಾತ್ರೆ ಮೊದಲಾದ ಸಂದರ್ಭದಲ್ಲಿ ಆಚರಿಸಿಕೊಂಡು ಬಂದಂಥ ಸಂಪ್ರದಾಯಗಳನ್ನು ವಿವರಿಸಲಾಗಿದೆ. ಒಡೆಯರ ಒಳಪಂಗಡ ಗಳನ್ನು ರೇಖಾಚಿತ್ರದ (ಪುಟ.೮೦) ಮುಖಾಂತರ ಗುರುತಿಸಲಾಗಿದೆ.

ಕುರುಬರ ಗುರು ಪರಂಪರೆ

ರೇವಣಸಿದ್ಧೇಶ್ವರ	ಸಿದ್ಧರಾಮೇಶ್ವರ	ಅಮೋಘಸಿದ್ಧೇಶ್ವರ
ಶಾಂತಮುತ್ತಯ್ಯ	ಸಿದ್ಧಮಂಕ	ಅಮೋಘಸಿದ್ಧ
ಶಾಂತೊಡೆಯರು	ಮಂಕೊಡೆಯರು	ಒಡೆಯರು

ರೇವಣಸಿದ್ಧ ಸಂಪ್ರದಾಯದ ಒಡೆಯರು ಕುರುಬರಿಗೆ ಗುರುಗಳಾದ ಸಂಗತಿಯನ್ನು ಶಾಸನಗಳಂಥ ದಾಖಲೆಗಳ ಮೂಲಕ ಸ್ಪಷ್ಟಪಡಿಸಿರುವರು.

ಮಂಕೊಡೆಯರ ಕುರಿತಾದ ಕೆಲವು ಮಾಹಿತಿಗಳನ್ನು ವೈ.ಸಿ.ಭಾನುಮತಿ ಮತ್ತು ಎಂ.ಎಂ.ಕಲಬುರ್ಗಿಯವರ 'ಸಿದ್ಧಮಂಕ ಚರಿತೆ' ಮತ್ತು ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿಯವರು ಪ್ರಕಟಿಸಿದ 'ಹಾಲುಮತ ಪುರಾಣ'ದಲ್ಲಿ ಗುರುತಿಸಲಾಗಿದೆ. ಅಮೋಘಸಿದ್ಧನ ದೇವಾಲಯಗಳು ಮತ್ತು ಮಠಗಳು ಕರ್ನಾಟಕದ ವಿಜಾಪುರ, ಬೆಳಗಾಂವ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿಯ ನೆರೆಯ ಮಹಾರಾಷ್ಟ್ರದ ಗಡಿ ಪ್ರದೇಶದ ಜಿಲ್ಲೆಗಳಾದ ಸೊಲ್ಲಾಪುರ, ಸಾಂಗಲಿ, ಸಾತಾರ ಜಿಲ್ಲೆಗಳಲ್ಲಿ ಹರಡಿಕೊಂಡದ್ದು ಡಾ. ಎಚ್.ತಿಪ್ಪೇರುದ್ರಸ್ವಾಮಿಯವರ 'ಅಮುಗಿದೇವಯ್ಯನ

ಸಾಂಗತ್ಯ'ದಲ್ಲಿ ಅಮೋಘಸಿದ್ಧ ಮತ್ತು ಅಮುಗಿದೇವಯ್ಯ ಅಭಿನ್ನರೆಂಬ ಹೊಸ ವಿಚಾರವನ್ನು (ಪುಟ ೬೦) ವಿವರಿಸಲಾಗಿದೆ. ಪುಳಂಜೆಯ ಶಾಸನದಲ್ಲಿ (೧೨೦೦) ಅಮುಗಿದೇವಯ್ಯನಿಗೆ ಕೊಟ್ಟಿರುವ "ಸಿದ್ಧ ಕುಲಾರ್ಣವ ಪ್ರವರ್ಧನ ಸುಧಾಕರ" ಎಂಬ ವಿಶೇಷಣದಿಂದ ಮತ್ತು ಅಮುಗಿದೇವಯ್ಯನ ವಚನದ ಅಂಕಿತ 'ಸಿದ್ಧ ಸೋಮನಾಥ' ಎಂಬುದು ಮೇಲಿನ ಹೇಳಿಕೆಗೆ ಪುಷ್ಟಿ ನೀಡುತ್ತವೆ. ಅಮೋಘಸಿದ್ಧನ ವಂಶಾವಳಿಯ ಪಟ್ಟಿಯಲ್ಲಿ (ಪುಟ ೬೩) ಅವನ ದೊಡ್ಡ ಸಂಖ್ಯೆಯ ವಂಶಾಭಿವೃದ್ಧಿಯನ್ನು ಗುರುತಿಸಬಹುದು. ಸುಮಾರು ೩೭ ಕೃತಿಗಳನ್ನು ಆಳವಾದ ಅಧ್ಯಯನಕ್ಕೊಳಪಡಿಸಿ ವಿಮರ್ಶಿಸಲಾಗಿದೆ.

ರೇವಣಸಿದ್ಧ ಸಂಪ್ರದಾಯದ ಒಡೆಯರು ಉತ್ತರ ಕರ್ನಾಟಕದ ಬೀದರ, ಬಿಜಾಪುರ, ಬೆಳಗಾವಿ, ಹಾವೇರಿ, ಕಲಬುರ್ಗಿ, ಬಾಗಲಕೋಟೆ, ಧಾರವಾಡ, ರಾಯಚೂರು ಜಿಲ್ಲೆಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಮಂಕೊಡೆಯರು ಬಿಜಾಪುರ ಜಿಲ್ಲೆಯ ಸರೂರು, ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿಯಲ್ಲಿ ಕಂಡುಬರುತ್ತಾರೆ. ಅಮೋಘಸಿದ್ಧ ಸಂಪ್ರದಾಯದ ಒಡೆಯರು ಉತ್ತರ ಕರ್ನಾಟಕದ ವಿಜಾಪುರ, ಬೆಳಗಾಂವ, ಕಲಬುರ್ಗಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಮಾತ್ರ ಇರುವರು. ಮಧ್ಯ ಮತ್ತು ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲಿ ಈ ಸಂಪ್ರದಾಯದ ಒಡೆಯರು ಕಂಡುಬರುವುದಿಲ್ಲ.

ಭಾರತದಲ್ಲಿ ವಿಶಿಷ್ಟ ಸಂಪ್ರದಾಯ ಹೊಂದಿದ ಒಡೆಯರು ಸಸ್ಯಾಹಾರಿಗಳು ಮತ್ತು ಲಿಂಗಧಾರಿಗಳಾಗಿರುವರು. ಒಡೇಯರಲ್ಲಿ ಮತ್ತು ಜಂಗಮರಲ್ಲಿ ಯಾವುದೇ ವ್ಯತ್ಯಾಸವಿರದೆ ಕೇವಲ ನಾಮಭಿನ್ನತೆ ಹೊಂದಿರುವರು. ಆದರೆ ಲಿಂಗಾಯತ ಜಂಗಮರು ಒಡೆಯರನ್ನು ತಮ್ಮ ಸಮಾನವೆಂದು ಒಪ್ಪಿಕೊಳ್ಳುವುದಿಲ್ಲ. ಕುರುಬರಲ್ಲೇ ಪ್ರತ್ಯೆಕವಾದ ಗುಂಪಾದ ಒಡೆಯರು ಪ್ರತ್ಯೇಕ ಜಾತಿಯವರಾಗುವುದಿಲ್ಲ. ಏಕೆಂದರೆ ಸಗೋತ್ರ ವಿವಾಹ ನಡೆಯುವುದಿಲ್ಲ (ಒಡೆಯರೆಲ್ಲರೂ ಸಹೋದರರೆಂಬ ಭಾವ) ಅವರು ಸಂಬಂಧವನ್ನು ಕುರುಬರೊಂದಿಗೆ ಬೆಳೆಸುತ್ತಾರೆ. ಸ್ತ್ರೀಗೆ ಅತಿ ಹೆಚ್ಚಿನ ಸ್ಥಾನಮಾನಗಳನ್ನು ನೀಡಿದ್ದಾರೆ. ಅವರು ವಿಧವೆಯರಾದರೂ ಸುಮಂಗಲಿಯರಂತೆ ಮಾಂಗಲ್ಯ, ಹೂ, ಕುಂಕುಮ, ಕಾಲುಂಗರವನ್ನು ಧರಿಸಿಯೇ ಇರುತ್ತಾರೆ. ಅಲ್ಲದೆ ಒಡೆಯರ ಅನುಪಸ್ಥಿತಿಯಲ್ಲಿ ಒಡೇರಮ್ಮ (ವಿಧವೆಯಾದರೂ) ಜನನ ಮರಣದಂಥ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ಒಡೆಯರ ಮತ್ತು ಒಡೇರಮ್ಮ ಇಬ್ಬರ ಅನುಪಸ್ಥಿತಿಯಲ್ಲಿ ಅವರು ಮಂತ್ರಿಸಿಕೊಟ್ಟ ಒಂದು ವಿಭೂತಿ ಘಟ್ಟಿ (ಕಾಲಿಲ್ಲದ ಐನೋರು) ಅವರ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತದೆ. ವ್ಯಾಜ್ಯ ಪರಿಹಾರ, ಶುದ್ಧೀಕರಣ, ಸ್ತ್ರೀಯರ ಸ್ಥಾನಮಾನಗಳು ಮೊದಲಾದವು ಇತರ ಜನಾಂಗಗಳಿಂದ ವಿಭಿನ್ನ ಸಂಸ್ಕೃತಿಯನ್ನು ಹೊಂದಿದ್ದು ಪುರೋಹಿತ ವರ್ಗಕ್ಕೆ ಸವಾಲೆಸೆಯುತ್ತವೆ. ಶಾಂತೊಡೆಯರ ಮತ್ತು ಮಂಕೊಡೆಯರ ಮದುವೆ ಸೀಮಂತ ಕಾರಣ ಜನನ ಸಂದರ್ಭದಲ್ಲಿಯ ಆಚರಣೆ, ಋತುಮತಿಯಾದಾಗ ಮಾಡುವ ವಿಧಿಗಳು, ಒಡೆಯರಲ್ಲಿಯ ವಿಧವಾ ವಿವಾಹದ ನಿಷಿದ್ಧಗಳು, ಅವರ ಶವಸಂಸ್ಕಾರ ವಿಧಾನ ಮೊದಲಾದ ಸವಿವರಗಳನ್ನು ಸಂಗ್ರಹಿಸಲಾಗಿದೆ. ಗುರುಪರಂಪರೆಯ

ಮಹಾಪುರುಷರಾದ ರೇವಣಸಿದ್ಧರ ಮಹಿಮೆ, ಪವಾಡಗಳನ್ನು ಪೌರಾಣಿಕ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಶಾಂತಮುತ್ತಯ್ಯನ ವಿವರಗಳನ್ನು ಅನೇಕ ಶಾಸನಗಳ ಮೂಲಕ ಸಂಗ್ರಹಿಸಲಾಗಿದೆ. ಶರಣ ಅಮುಗಿದೇವಯ್ಯ ಮತ್ತು ಅಮೋಘಸಿದ್ಧರು ಅಭಿನ್ನರು ಎಂದು ಉದಾಹರಣೆಯೊಂದಿಗೆ ಸ್ಪಷ್ಟಪಡಿಸಲಾಗಿದೆ. ಆಧುನಿಕ ಒಡೆಯರ ಮಹಾಪುರುಷರ ಸಾಧನೆ ಕುರಿತಾಗಿ ಮಾಹಿತಿಯ ಚರ್ಚೆಯನ್ನು ನೀಡಿದ್ದಾರೆ. ಸಿದ್ದಪ್ಪಯ್ಯ ಒಡೆಯರು, ರಾಯಪ್ಪಯ್ಯ ಸ್ವಾಮಿ, ವಿರೂಪಾಕ್ಷಯ್ಯ ಒಡೆಯರು, ಗುರುಸಿದ್ಧಯ್ಯ ಸಂಗ್ರೇಶಕೊಪ್ಪ, ಸಿರಿಯಪ್ಪ ಒಡೆಯರ, ಚೆನ್ನಯ್ಯ ಒಡೆಯರ, ಸಿದ್ದಯ್ಯ ಒಡೆಯರ, ಶಂಕರಗೌಡ ಮಾಲಿಪಾಟೀಲ ಮೊದಲಾದವರ ಸಿದ್ಧಿ ಸಾಧನೆಗಳನ್ನು ಪರಿಚಯಿಸಲಾಗಿದೆ. ಹಾಲುಮತದ ಅಭಿವೃದ್ಧಿಗಾಗಿ ಸಾಮಾಜಿಕ, ಆರ್ಥಿಕ, ಸ್ಥಿತಿಗತಿಗಳು ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರೋಪಾಯಗಳನ್ನು ಸಹ ಸೂಚಿಸಿದ್ದಾರೆ.

ಲಿಖಿತ ಮತ್ತು ಅಲಿಖಿತ ಡೊಳ್ಳು ಹಾಡು ಮೊದಲಾದವುಗಳ ಸಹಾಯದಿಂದ ಶರಣರ ಕಾಲದಲ್ಲಿ ಒಡೆಯರು ಜೀವಿಸಿರಬಹುದೆಂದು ನಿರ್ಧರಿಸಲಾಗುತ್ತದೆ. ರೇವಣಸಿದ್ಧ, ಸಿದ್ಧರಾಮ, ಅಮೋಘಸಿದ್ಧರನ್ನು ಅನುಸರಿಸಿ ನಂತರದ ಕಾಲಮಾನದಲ್ಲಿ ಒಡೆಯರಲ್ಲಿ ಮೂರು ಪ್ರಬೇಧಗಳಾಗಿ ಕವಲೊಡೆದಿವೆ. ಈ ಮೂರು ಸಂಪ್ರದಾಯ ಗಳ ಒಡೆಯರಲ್ಲಿ ಸಾಮ್ಯತೆ, ಭಿನ್ನತೆ ಮತ್ತು ವೈಶಿಷ್ಟ್ಯತೆಗಳನ್ನು ಈ ಗ್ರಂಥದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಹೀಗೆ ಒಡೆಯರ ಕುರಿತಾದ ವಿಭಿನ್ನ ದೃಷ್ಟಿಕೋನದ ಹಿನ್ನೆಲೆಯಲ್ಲಿ ಸಮಗ್ರ ಅಧ್ಯಯನವನ್ನು ನಡೆಸಿದ ಮಹಾಪ್ರಬಂಧವಾಗಿದೆ. ಸಂಶೋಧಕರಾದ ಬಿ.ಜಿ. ಬಿರಾದಾರ ಅವರ ವ್ಯಾಪಕ ಕ್ಷೇತ್ರಕಾರ್ಯ, ತಲಸ್ಪರ್ಶಿ ಅಧ್ಯಯನವನ್ನು ಈ ಮಹಾಪ್ರಬಂಧದಲ್ಲಿ ಕಾಣಬಹುದಾಗಿದೆ. ಕುರುಬರ ಗುರು ಪರಂಪರೆಯಲ್ಲಿ ಬರುವ ರೇವಣಸಿದ್ಧ, ಸಿದ್ಧರಾಮ ಹಾಗೂ ಅಮೋಘಸಿದ್ಧರ ಸಂಪ್ರದಾಯವನ್ನು ಕುರಿತು ಪ್ರತ್ಯೇಕ ಹಾಗೂ ಸ್ವತಂತ್ರ ಅಧ್ಯಯನ ಕೈಕೊಳ್ಳಲು ಈ ಮಹಾಪ್ರಬಂಧವು ಸೂಚನೆಯನ್ನೂ ನೀಡುತ್ತದೆ.

೫. ಗೊಂಡರು

ಕುರುಬ ಸಮುದಾಯದ ಉಪಪಂಗಡಗಳಲ್ಲಿ ಒಂದಾದ ಗೊಂಡರು ಬೀದರ ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಬುಡಕಟ್ಟು ಸಮುದಾಯವೆಂದು ಗುರುತಿಸಲ್ಪಡುವ ಈ ಪಂಗಡದಲ್ಲಿ ರಾಜಗೊಂಡರು, ಲಾಳಗೊಂಡರೆಂಬ ಒಳ ಪ್ರಭೇದಗಳಿವೆ. ಈ ಸಮುದಾಯ ಕುರಿತು ವ್ಯಾಪಕ ಅಧ್ಯಯನ ಮಾಡಿದವರು ಕೆ.ಎಂ.ಮೇತ್ರಿಯವರು. "ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ" ಮಹಾಪ್ರಬಂಧದ ಮೂಲಕ ಈ ಸಮುದಾಯದ ಸಮಗ್ರ ಅಧ್ಯಯನಕ್ಕೆ ನಾಂದಿ ಹಾಡಿದ್ದಾರೆ. ಅಲ್ಲದೆ ರಾಜಗೊಂಡ ಬುಡಕಟ್ಟು, ರಾಜಗೊಂಡ ಬುಡಕಟ್ಟಿನ ಚರಿತ್ರೆ, ಗೊಂಡರು, ಲಾಳಗೊಂಡರು, ಸಿಂದಿಗೇರಿ ನೀಲಮ್ಮನ ಚರಿತ್ರೆ ಎಂಬ ಲೇಖನಗಳ ಮೂಲಕ ಗೊಂಡರ ಮೂಲ, ಆಚರಣೆ, ಸಂಪ್ರದಾಯ, ಹಬ್ಬಹರಿದಿನಗಳು, ಸಾಹಿತ್ಯ, ಭೌಗೋಳಿಕ ನೆಲೆ, ಉದ್ಯೋಗ, ಆರ್ಥಿಕ ವಿಚಾರಗಳನ್ನು ದಾಖಲಿಸಿದ್ದಾರೆ.

೧. ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ- ಡಾ. ಕೆ.ಎಮ್.ಮೇತ್ರಿ (೧೯೯೪)

ಈ ಕೃತಿಯು ೧೯೯೪ರಲ್ಲಿ ಪಿ.ಹೆಚ್.ಡಿ ಪದವಿಗಾಗಿ ಸಾದರ ಪಡಿಸಿದ ಮಹಾಪ್ರಬಂಧವಾಗಿದೆ. ಎಂಟು ಅಧ್ಯಾಯಗಳ ಈ ಮಹಾಪ್ರಬಂಧವು ೬೧೭ ಪುಟಗಳ ವಿಸ್ತಾರವನ್ನು ಪಡೆದಿದೆ. ಗೊಂಡರ ಪರಿಸರ, ಹಿನ್ನೆಲೆ, ಬೀದರ ಜಿಲ್ಲೆಯ ಗೊಂಡರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನ, ಧರ್ಮ ಪುರಾಣ ಮತ್ತು ಐತಿಹ್ಯಗಳು, ಸಂಪ್ರದಾಯ, ನಂಬಿಕೆ, ಸಮಸ್ಯೆಗಳು, ಸಂಘಟನೆಗಳು ಮತ್ತು ಸೌಲಭ್ಯಗಳು ಈ ಮೊದಲಾದ ವಿಚಾರಗಳನ್ನು ಕೂಲಂಕಷವಾಗಿ ಚರ್ಚಿಸಲಾಗಿದೆ. ಅಲ್ಲದೆ ವಿಷಯ ಸ್ಪಷ್ಟತೆಗಾಗಿ ಹಲವಾರು ಕೋಷ್ಟಕ, ಛಾಯಾಚಿತ್ರ, ಭೂಪಟ, ರೇಖಾಚಿತ್ರಗಳನ್ನು ಅಳವಡಿಸಿ ಮಾಹಿತಿಗಳನ್ನು ಸ್ಥೂಲವಾಗಿ ಸ್ಪಷ್ಟವಾಗಿ ಪರಿಚಯಿಸ ಲಾಗಿದೆ.

ದ್ರಾವಿಡ ಮೂಲದ ಗೊಂಡರ ಉಗಮ, ಸಂಸ್ಕೃತಿ, ಗೊಂಡರ ಜನನ, ಋತುಮತಿ, ಮದುವೆ, ಮರಣ, ಮೊದಲಾದ ನೈಸರ್ಗಿಕ ಕ್ರಿಯೆಗಳನ್ನು ಮತ್ತು ಅವುಗಳಲ್ಲಿಯ ಭಿನ್ನತೆ ಸಾಮ್ಯತೆಗಳನ್ನು ವಿವರಿಸಲಾಗಿದೆ. ಗೊಂಡ ಮತ್ತು ರಾಜಗೊಂಡ ಆದಿವಾಸಿಗಳ ಪ್ರಗತಿಗಾಗಿ ಸಲಹೆ ಸೂಚನೆಗಳನ್ನು ಕೊನೆಯಲ್ಲಿ ಸಂಶೋಧಕರು ನೀಡಿದ್ದಾರೆ. ಈ ಸಲಹೆಗಳು ಗೊಂಡ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ದಿಕ್ಸೂಚಿಯಂತಿವೆ.

ಲೇಖನಗಳು

೧. ರಾಜಗೊಂಡ ಬುಡಕಟ್ಟು -ಡಾ.ಕೆ.ಎಂ.ಮೇತ್ರಿ (೧೯೯೯) (ಕರ್ನಾಟಕ ಬುಡಕಟ್ಟುಗಳು - ಸಂ. ಎಚ್.ಜೆ. ಲಕ್ಕಪ್ಪಗೌಡ (೧೯೯೯)

ಸುಮಾರು ೪೦ ಪುಟಗಳ ಈ ಲೇಖನವು ರಾಜಗೊಂಡರ ಸಂಪೂರ್ಣ ಪರಿಚಯ ಮಾಡಿಕೊಡುತ್ತದೆ. ಪೀಠಿಕೆಯಲ್ಲಿ ಮೂಲನಿವಾಸಿಗಳ ಉಗಮ, ಗೊಂಡರ ಕುರಿತಾಗಿ ಇದುವರೆಗಿನ ಅಧ್ಯಯನ, ಕೃತಿಗಳ ಪಟ್ಟಿ, ಗೊಂಡ ಪದದ ನಿಷ್ಪತ್ತಿ ಹಾಗೂ ಅರ್ಥವನ್ನು ಹಲವಾರು ವಿದ್ವಾಂಸರ ಹೇಳಿಕೆಗಳಿಂದ ಸ್ಪಷ್ಟಪಡಿಸಲಾಗಿದೆ. ಭಾರತದಲ್ಲಿ ರಾಜಗೊಂಡರ ನೆಲೆಗಳು ಮತ್ತು ಜನಸಂಖ್ಯೆಯ ಕೋಷ್ಟಕ, ರಾಜಗೊಂಡ ಕುಟುಂಬಗಳ ವಿವರ, ಕುಟುಂಬಗಳ ಗಾತ್ರ, ಲಿಂಗ ಪ್ರಮಾಣಗಳನ್ನು ಚರ್ಚಿಸಲಾಗಿದೆ. ಬುಡಕಟ್ಟಿನ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಹಿನ್ನೆಲೆ, ಗೊಂಡರ ನೆಲೆ, ವಲಸೆ ಕುಲಗೋತ್ರಗಳ ಕೋಷ್ಟಕ(ಪುಟ ೨೫೧), ವಂಶೋತ್ಪತ್ತಿ ವಿಚಾರ, ಮನೆ, ಕೊಟ್ಟಿಗೆ, ಹಟ್ಟಿ, ಹಾಡಿ, ಕ್ರಿಯಾವಿಧಿಯ ಸ್ಥಳಾವರಣ, ಬಂಧುತ್ವ, ಮದುವೆ, ಕುಲ, ಬಳಿ ಬೆಡಗು, ಶಕ್ತಿ ಆರಾಧನೆ, ಮಾಟ-ಮಂತ್ರ-ನಂಬಿಕೆಗಳು ಮುಂತಾದ ಸಂಗತಿಗಳನ್ನು ಸವಿವರವಾಗಿ ಪರಿಚಯಿಸಲಾಗಿದೆ. ಒಳಾಡಳಿತ ವ್ಯವಸ್ಥೆಯಲ್ಲಿ ನ್ಯಾಯ ಪಂಚಾಯತಿ ರಚನೆ, ಪಂಚಾಯತಿ ಕಾರ್ಯಗಳು, ನ್ಯಾಯ ನಿರ್ಣಯ, ಶಿಕ್ಷೆಗಳ ವಿವರ, ಋತುಶಾಂತಿ(ಪ್ರೊಟನಾಶನ), ಮರಣ, ಧಾರ್ಮಿಕ ವಿಧಿವಿಧಾನಗಳು, ಧಾರ್ಮಿಕ ಕೇಂದ್ರಗಳು, ಸಾಂಸ್ಕೃತಿಕ ವೀರನಾಯಕರು, ಸಂಪ್ರದಾಯ, ಸೀಮಂತ, ಗೊಂಡ-ರಾಜಗೊಂಡರಲ್ಲಿ ಶಿಕ್ಷಿಸುವ ವಿಧಾನಗಳು,

ಬುಡಕಟ್ಟಿನ ಆರ್ಥಿಕ ಜೀವನ ವ್ಯವಸ್ಥೆ, ಕಸುಬಿನ ಬಗೆಗೆ ನಂಬಿಕೆಗಳು, ಬೇಟೆ, ಕೃಷಿ, ಆಹಾರ ಸಂಗ್ರಹಣೆ, ಜನಪದ ನೃತ್ಯ, ಮೇಳ, ವಾದ್ಯ ಮೊದಲಾದವುಗಳ ಸ್ಥೂಲ ಪರಿಚಯ ಮಾಡಿಕೊಡಲಾಗಿದೆ.

೨. ರಾಜಗೊಂಡ ಬುಡಕಟ್ಟಿನ ಚರಿತ್ರೆ -ಡಾ. ಕೆ.ಎಂ.ಮೇತ್ರಿ (೨೦೦೧)

ಇದು ಮೇಲಿನ ಲೇಖನದ ಸಂಕ್ಷಿಪ್ತ ರೂಪವಾದರೂ ಹಲವು ಹೊಸ ಮಾಹಿತಿಗಳನ್ನು ಒದಗಿಸುತ್ತದೆ. ಈ ಲೇಖನವು ೨೦೦೧ರಲ್ಲಿ ಬೆಂಗಳೂರಿನ ಇತಿಹಾಸ ದರ್ಶನ(ಸಂಪುಟ ೧೬)ದಲ್ಲಿ ಪ್ರಕಟವಾಗಿದೆ.

ಗೊಂಡರಿಂದ ಕವಲೊಡೆದ ರಾಜಗೊಂಡರ ಮಾತೃಭಾಷೆ ದ್ರಾವಿಡ ಮೂಲದ 'ಗೊಂಡಿ' ಭಾಷೆಯಾಗಿದೆ. ಅವರು ಮಧ್ಯಭಾರತದ ರಾಜಮನೆತನದವರಾಗಿದ್ದು ಕೋಟೆಗಳನ್ನು ಕಟ್ಟಿ ಆಳಿ, ಪ್ರಕೃತಿ ಆರಾಧಕರಾಗಿ ನಿಸರ್ಗದ ವನಸ್ಪತಿಗಳ ನಿಗೂಢ ಶಕ್ತಿಯನ್ನು ಅರಿತವರಾದ ರಾಜವೈದ್ಯರಾಗಿದ್ದರು. ಮುಸ್ಲಿಂರ ಆಕ್ರಮಣದಿಂದ ನಿರ್ಗತಿಕರಾದ ಇವರು ಕಾಲಾಂತರದಲ್ಲಿ ಸಾಮಾನ್ಯ ಜನರ ಆಯುರ್ವೇದದ ವೈದ್ಯರಾಗಿ ಬದಲಾವಣೆ ಹೊಂದಿ ರಾಜವೈದ್ಯರು ರಾಜಗೊಂಡರೆನಿಸಿದುದನ್ನು ಗುರುತಿಸಬಹುದು. ಇದುವರೆಗಿನ ಅಧ್ಯಯನಗಳ ಪಟ್ಟಿಯೊಂದಿಗೆ ಅವರ ಮುಖ್ಯ ನೆಲೆಗಳನ್ನು ರಾಜ್ಯ ಜಿಲ್ಲೆ ತಾಲೂಕುಗಳಲ್ಲಿ ಗುರುತಿಸಲಾಗಿದೆ. ೨೦೦೦-೧೦,೦೦೦ವರೆಗಿನ ಸಂಖ್ಯೆಯಷ್ಟು ಗೊಂಡರಿರುವುದನ್ನು ಊಹಿಸಲಾಗಿದೆ. ರೇಲ್ವೆ ನಿಲ್ದಾಣಗಳನ್ನೇ ತಂಗುದಾಣಗಳಾಗಿ ಆಶ್ರಯಿಸುತ್ತಾ ಅಲೆಮಾರಿ ಜೀವನ ನಡೆಸುವ ಇವರ ಬಿಗಿಯಾದ ಸಾಮಾಜಿಕ ರಚನೆಯಲ್ಲಿ ಚಾರದೇವ(೪ ದೇವ), ಪಂಚದೇವ (೫ ದೇವ), ಸಾದೇವ (೬ದೇವ) ಮತ್ತು ಸಾತದೇವರುಗಳ (೭ ದೇವ) ಎಂಬ ನಾಲ್ಕು ವಿಭಾಗಗಳಿವೆ. ಈ 'ದೇವ'ಗಳೇ ರಾಜಗೊಂಡ ಮೂಲ ಬಂಧುತ್ವದ ಸಂಕೇತಗಳಾಗಿವೆ. ಒಂದೇ ದೇವಗಳಲ್ಲಿಯ ವಿವಾಹ ನಿಷೇಧ ಬೆಸ ದೇವರಲ್ಲಿಯ ವಿವಾಹ ಸಂಬಂಧಗಳನ್ನು ವಿವರವಾಗಿ ಚರ್ಚಿಸಲಾಗಿದೆ.

ದೈವಾರಾಧನೆಯಲ್ಲಿಯ ೧೨ ಕುಲದೈವ, ೭೫೦ ಕುಲಗೋತ್ರ, ಮತ್ತು ೨೨೫೦ ಕುಲಚಿಹ್ನೆ, ಶಿವರಾತ್ರಿ -ದಸರಾ-ಹೋಳಿ ಹಬ್ಬಗಳನ್ನು ಆಚರಿಸುವ ವಿವರ ಇಂದಿನ ಅವರ ಹೀನಾಯ ಪರಿಸ್ಥಿತಿ ಮೊದಲಾದವನ್ನು ವಿವರಿಸಿ ಅಂತ್ಯದಲ್ಲಿ ಪರಿಹಾರೋಪಾಯಗಳನ್ನು ತಿಳಿಸಲಾಗಿದೆ.

೩. ಗೊಂಡರು ಲಾಳಗೊಂಡರು - ಡಾ. ಕೆ.ಎಂ.ಮೇತ್ರಿ - ಹಾಲತೊರೆ (೨೦೦೩)

ಗೊಂಡರ ಮತ್ತು ಲಾಳಗೊಂಡರ ಕುರಿತಾದ ಹಿನ್ನೆಲೆ, ಅರ್ಥ, ಲಾಳಗೊಂಡರ ಪ್ರಭೇದಗಳು, ಲಾಳಗೊಂಡರು ಲಿಂಗಾಯತ -ವೈಷ್ಣವ -ಕ್ರೈಸ್ತರಾಗಲು ಕಾರಣಗಳು, ಶೈವ-ವೈಷ್ಣವ ದೈವಾರಾಧನೆ, ಲಾಳಗೊಂಡರ ವಿಸ್ತಾರ ಮತ್ತು ಜನಸಂಖ್ಯೆ, ಗೊಂಡರಿಂದ ಲಾಳಗೊಂಡರಾದುದು, ಅವರ ದೈವಗಳು, ಕಂಬಳಿ ಮತ್ತು ಕಂಕಣಗಳ ಬಳಕೆ, ಭಂಡಾರದಿಂದ ವಿಭೂತಿ ಬಳಕೆ, ಲಿಂಗಾಯತರಾದ ಲಾಳಗೊಂಡರು, ಗೊರವ>ದಾಸ>ಒಡೆಯ >ಜಂಗಮ ವಿವರ, ಜಂಗಮರು ಪಡೆಯುವ ಮಹತ್ವ ಮೊದಲಾದ ವಿಚಾರಗಳನ್ನು ವಿವರಿಸಲಾಗಿದೆ. ನೀಲಮ್ಮ, ದೊಡ್ಡ ಬಸವೇಶ್ವರ ಮೈಲಾರ ಮುಂತಾದ ದೇವರುಗಳ ಆರಾಧನೆ, ಗೊಂಡ ಕೂಡುಒಕ್ಕಲಿಗ-ಲಾಳಗೊಂಡ

ರಲ್ಲಿಯ ಸಾಮ್ಯತೆಗಳನ್ನು ಗುರುತಿಸಲಾಗಿದೆ. ಲೇಖಕರು ಗೊಂಡರಲ್ಲಿಯ ಬದಲಾವಣೆಯ ಹಂತಗಳನ್ನು ಹೀಗೆ ಗುರುತಿಸಿದ್ದಾರೆ. "ಬೇಟೆ ಮೂಲದ ಲಾಳಗೊಂಡರು ತಮ್ಮ ಪೂರ್ವ ಚರಿತ್ರೆ ಮರೆತು ಪಶುಪಾಲನೆಯ ಘಟ್ಟದಿಂದ ಮಾತ್ರ ಇತಿಹಾಸ ಕಟ್ಟಿಕೊಡಬಲ್ಲ ಪಳೆಯುಳಿಕೆಗಳನ್ನು ತನ್ನೊಡಲಲ್ಲಿಟ್ಟುಕೊಂಡು ಬಂದಿದ್ದಾರೆ. ಸಂಸ್ಕೃತೀಕರಣಕ್ಕೊಳಪಟ್ಟು ಅವಶ್ಯಕತೆಗಳಿಗೆ ತಕ್ಕಂತೆ ತಮ್ಮನ್ನು ತಾವು ಬದಲಿಸಿಕೊಂಡಿದ್ದಾರೆ. ಗೊಂಡರಾಗಿದ್ದ ಇವರು ಲಾಳಗೊಂಡರಾಗಿ ಲಿಂಗಾಯತರಾದ ಮೇಲೆ ಆದಿಬಣಜಿಗ, ಬಣಜಿಗ, ಪಂಚಮಶಾಲಿ ಕೂಡು ಒಕ್ಕಲಿಗರೊಂದಿಗೆ ವಿವಾಹ ಸಂಬಂಧ ಬೆಳೆಸಲಾರಂಭಿಸಿದ್ದಾರೆ."

೪. ಸಿಂದಿಗೇರಿ ನೀಲಮ್ಮನ ಚರಿತೆ - ಡಾ. ಕೆ.ಎಂ.ಮೇತ್ರಿ (ಇತಿಹಾಸ ದರ್ಶನ- ಸಂಪುಟ ೧೮, ೨೦೦೩)

ಇತಿಹಾಸ ದರ್ಶನ(ಸಂಪುಟ ೧೮)ದಲ್ಲಿ ಕೆ.ಎಂ.ಮೇತ್ರಿಯವರ 'ಸಿಂದಿಗೇರಿ ನೀಲಮ್ಮನ ಚರಿತೆ' ಎಂಬ ಲೇಖನವು ಬಹುಮುಖ್ಯ ವಿಚಾರಗಳನ್ನು ತಿಳಿಸುತ್ತದೆ. ನಿರ್ಲಕ್ಷಿತ ಚರಿತ್ರೆಯ ಲಾಳಗೊಂಡ ನೀಲಮ್ಮಳ ಎಳೆಗಳು ಬಳ್ಳಾರಿಯ ಹಂಡೆ ಕುರುಬರ ಬಾಲದ ಹನುಮಪ್ಪನಾಯಕ, ಮೈಸೂರಿನ ಹೈದರಅಲಿ ಟಿಪ್ಪುಸುಲ್ತಾನ ಮತ್ತು ಕೊಟ್ಟೂರು ಸ್ವಾಮಿಗಳೊಂದಿಗೆ ಕುರಿತಾದ ದಂಥಕಥೆಗಳು, ಐತಿಹ್ಯಗಳು, ಕಾವ್ಯಗಳು, ಜನಪದ ಗೀತೆಗಳು, ಹೆಳವರ ದಾಖಲೆಗಳು, ನೀಲಮ್ಮನ ಹೆಸರಿನ ಮಠಗಳು-ಹೀಗೆ ಅನೇಕ ದಾಖಲು ಮತ್ತು ಮೌಖಿಕ ಮಾಹಿತಿಗಳು ಅವಳ ಜೀವನ ಮತ್ತು ಪವಾಡಗಳನ್ನು ಅರಿಯಲು ಸಹಾಯಕವಾಗಿವೆ.

ತಂದೆಯ ಹೆಸರು ಕೆಂಚನಗೌಡ, ತಾಯಿ-ಪೋರಮ್ಮ. ತನ್ನ ಏಳನೇ ವಯಸ್ಸಿನಲ್ಲಿ ನೀಲಮ್ಮಳಾದಳು. ಕದಡಿ ನೀಲಮ್ಮ, ಸಿಂಧಿಗೇರಿ ನೀಲಮ್ಮ, ಕುರುಗೋಡು ನೀಲಮ್ಮ ಎಂಬ ವಿವಿಧ ನಾಮಗಳಿಂದ ಕರೆಯಲ್ಪಡುವ ನೀಲಮ್ಮಳ ಪ್ರಭಾವ ಈ ಮೂರು ಸ್ಥಾನಗಳಲ್ಲಿ ಹರಡಿದೆ. ನೀಲಮ್ಮ ಹುಟ್ಟಿದ್ದು ಸಿಂಧಿಗೇರಿ, ಸಾಧನೆಗೈದುದು ಕುರುಗೋಡು, ಕೈವಲ್ಯವಾದುದು ಗದಗಿನ ಕದಡಿಯಲ್ಲಿ. ಈ ಊರುಗಳಲ್ಲಿ ಲಾಳಗೊಂಡರ ಸಮುದಾಯದವರು ವಾಸವಾಗಿದ್ದಾರೆ. ನೀಲಮ್ಮನ ಮನೆಯ ಸ್ನಾನ ಮಾಡುವ ಬಚ್ಚಲು ಕಲ್ಲು ಇಂದು ಪೂಜಿಸಲ್ಪಡುತ್ತಿದೆ. ಐತಿಹ್ಯವೊಂದರ ಹಿನ್ನೆಲೆಯಿಂದ ಬಳ್ಳಾರಿ ತಾಲ್ಲೂಕಿನ ಗಣೆಕೆಹಾಳದಲ್ಲಿ ಲಾಳಗೊಂಡರು ಹೈನು ಮಾರುವುದಿಲ್ಲ. ಅಲ್ಲದೆ ತಮ್ಮ ಸಮುದಾಯದವರು ಮರಣ ಹೊಂದಲು ಶವ ಸಂಸ್ಕಾರದ ಕುಣಿಯನ್ನು ತಮ್ಮವರೇ ತೋಡುವ ಸಂಪ್ರದಾಯವಿರುವುದನ್ನು ವಿವರಿಸಲಾಗಿದೆ.

ವಿ.ಆರ್.ಹನುಮಂತಯ್ಯನವರ ಭಾರತ ದೇಶದ ಕುರುಬರ ಚರಿತ್ರೆ(೧೯೫೮), ದೇವರಕೊಂಡಾರೆಡ್ಡಿಯವರ ಕೊಟ್ಟೂರುಸ್ವಾಮಿ ಮಠದ ಸನ್ನದು, ಕಲಬುರ್ಗಿಯವರ ಕರ್ನಾಟಕದ ಕೈಫಿಯತ್ತುಗಳಲ್ಲಿ ಇವಳ ಚರಿತ್ರೆಯ ಎಳೆಗಳನ್ನು ಕಂಡು ಹಿಡಿಯಲು ಪ್ರಯತ್ನಿಸಿದ್ದಾರೆ. ಮೌಖಿಕವಾಗಿ ಕಥನಕಾವ್ಯ, ನಾಟಕ, ಐತಿಹ್ಯ, ನಂಬಿಕೆ ಆಚರಣೆಗಳಲ್ಲಿ ನೀಲಮ್ಮಳ ಪವಾಡಗಳು ಹೆಣೆದುಕೊಂಡಿವೆ. ಹಂಪಿಯ ವಿರೂಪಾಕ್ಷ ದೇವಾಲಯದ ಪೂರ್ವದಲ್ಲಿ ನೀಲಮ್ಮಳ ಮಠ ಎಂದು ಕರೆಯುವ ಕಟ್ಟಡ, ಕಂಪ್ಲಿ ಪಟ್ಟಣದ ಸಮೀಪದ ಮುದ್ದಾಪುರದಲ್ಲಿ ನೀಲಮ್ಮ ಬಾಳಿದ ಊರು, ಅಲ್ಲಿ ಅವಳ ಮಠ, ಬಳ್ಳಾರಿಯ ಕುಡುತಿನಿಯಲ್ಲಿ ನೀಲಮ್ಮಳ ಮಠ ಹೀಗೆ

ಹಲವಾರು ಮಠಗಳು ಬಳ್ಳಾರಿಯ ಪರಿಸರದಲ್ಲಿರುವುದನ್ನು ಗುರುತಿಸಲಾಗಿದೆ. ಹಾಲುಮತದ ಲಾಳಗೊಂಡರು, ಶೈವರಾಗಿ, ವೀರಶೈವರಾಗಿ, ಲಿಂಗಾಯತರಾದ ವಿವರವನ್ನು ಸಾದ್ಯಂತವಾಗಿ ಚರ್ಚಿಸಲಾಗಿದೆ. ನೀಲಮ್ಮ ಲಾಳಗೊಂಡ ಸಮುದಾಯದವಳೆಂಬುದಕ್ಕೆ ಅನೇಕ ಸಾಕ್ಷ್ಯಾಧಾರಗಳನ್ನು ಲೇಖಕರು ಸಂಗ್ರಹಿಸಿದ್ದಾರೆ.

ಈ ವರೆಗೆ ಚರ್ಚಿಸಿದ ಕೃತಿ ಮತ್ತು ಲೇಖನಗಳು ಗೊಂಡ -ಲಾಳಗೊಂಡ -ರಾಜಗೊಂಡರಲ್ಲಿಯ ಭಿನ್ನತೆ -ಸಾಮ್ಯತೆಗಳನ್ನು ಸ್ಥೂಲವಾಗಿ ಚರ್ಚಿಸಿ ಸಮಗ್ರವಾಗಿ ವಿವರಿಸಲಾಗಿದೆ. ಇವು ಹಾಲುಮತದ ಉಪಪಂಗಡವಾದ ಗೊಂಡರ ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ ಮಹತ್ವದ ಆಕರಗಳಾಗಿ ನೆರವಾಗುತ್ತವೆ.

ಈವರೆಗೆ ಬಂದ ಕುರುಬರ ಉಪಪಂಗಡಗಳಲ್ಲಿ ಕಾಡುಕುರುಬರು, ಹಂಡೆ ಕುರುಬರು, ಅಲೆಮಾರಿ ಕುರುಬರು, ಒಡೆಯರು, ಗೊಂಡರ ಸಂಸ್ಕೃತಿ ಬಗೆಗೆ ಅಧ್ಯಯನಗಳನ್ನು ಕೈಕೊಳ್ಳಲಾಗಿದೆ. ಆದರೆ ಇನ್ನುಳಿದ ಉಪಪಂಗಡಗಳ ಬಗೆಗೆ ಅಧ್ಯಯನ ನಡೆಯಬೇಕಾಗಿದೆ ಎಂಬುದು ಈವರೆಗಿನ ಅವಲೋಕನದಿಂದ ತಿಳಿದು ಬರುತ್ತದೆ. ಈ ಕೊರತೆಯನ್ನು 'ಹಾಲುಮತ ವ್ಯಾಸಂಗ-೨' (ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦) ಕೃತಿಯ ಕುರುಬರ ಒಟ್ಟು ೧೬ ಒಳಪಂಗಡಗಳನ್ನು ಒಟ್ಟಾಗಿ ಒಂದೆಡೆ ಸಂಕ್ಷಿಪ್ತದಲ್ಲಿ ಪರಿಚಯಿಸುತ್ತದೆ.

೬. ಆಚರಣೆ-ಸಂಪ್ರದಾಯ-ಕಲೆಗಳು

ವಿಭಿನ್ನ ಮತಧರ್ಮವನ್ನು ಹೊಂದಿದ ಭಾರತವು ತನ್ನದೇ ಆದ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದೆ. ಏಕತೆಯಲ್ಲಿ ವಿಭಿನ್ನತೆಯನ್ನು ಹೊಂದಿದ ಪ್ರಕ್ರಿಯೆಯನ್ನು ಪ್ರತಿ ಮತಬಾಂಧವರಲ್ಲಿ ಕಾಣಬಹುದು. ಈ ಪ್ರಕ್ರಿಯೆ ದೇಸೀಯತೆ ಜಾನಪದ ಕಲೆಗಳಲ್ಲಿ ಮಾತ್ರ ಉಳಿದುಕೊಂಡಿದೆ. ಇಂದಿನ ಅತಿ ವೇಗದ ಪ್ರಗತಿಪರ ಎನ್ನುವ ಧೋರಣೆಯಲ್ಲೂ ಅನಕ್ಷರಸ್ಥ ಹಳ್ಳಿಗರ ಜೀವನಾಡಿಯಾಗಿದೆ. ಜನಪದ ಕಲೆಗಳು ಕೆಲವು ಮನರಂಜನೆಗಾಗಿ ರೂಪಿತವಾದರೆ ಹಲವು ಜೀವನಾಧಾರವನ್ನು ಹೊಂದಿವೆ. ಅದರಲ್ಲಿ ಪ್ರದರ್ಶನಾತ್ಮಕ ಆಚರಣೆ ಕಲೆಗಳು ಮುಖ್ಯ ಪಾತ್ರವಹಿಸುತ್ತವೆ.

ಇತರೆ ಮತಗಳಿಗಿಂತ ಕುರುಬ ಜನಾಂಗದಲ್ಲಿ ಹೆಚ್ಚಿನ ಪ್ರಮಾಣದ ಮತಾಚರಣೆ, ಕಲೆ, ಸಂಪ್ರದಾಯಗಳು ಹಾಸುಹೊಕ್ಕಾಗಿವೆ. ದಳವಾಯಿ ಕುಣಿತ, ದೋಣಿ ಸೇವೆ, ಗೊರವರ ಕುಣಿತ, ಕಂಥಾಧಾರಣ ಸೇವೆ, ತೋಪು ಜಾತ್ರೆ, ಮದುವೆಯ ಆಚರಣೆ, ದಟ್ಟಿ ಕುಣಿತ, ಡೊಳ್ಳು ಕಲೆ, ಕಾರಣಿಕ, ಹೇಳಿಕೆಗಳು ಹೀಗೆ ತಮ್ಮದೇ ಆದ ಹಲವಾರು ಆಚರಣಾಕ್ರಮಗಳನ್ನು ಕುರುಬರು ಇಂದಿಗೂ ನಡೆಸಿಕೊಂಡು ಬಂದಿದ್ದಾರೆ.

ಆಚರಣೆಗಳು

ಹಾಲುಮತದ ಆಚರಣೆಗಳಲ್ಲಿ 'ದೋಣಿ ಸೇವೆ'ಯೂ ಪ್ರಮುಖವಾಗಿದೆ. ಪ್ರೊ. ಪರಮೇಶ ಅವರ 'ದೋಣಿ ಸೇವೆ : ವಿಶಿಷ್ಟ ಜಾನಪದ ಮೇಳ' (ಗುರುವಂದನ ೨೦೦೭ ಪುಟ ೨೭೫) ಲೇಖನವು ಗೊರವರ ಕುರಿತಾಗಿ ಅವರ ವೃತ್ತಿ ವೇಷಭೂಷಣ, ವರ್ತಮಾನದ ಸ್ಥಿತಿಗತಿ ಮೊದಲಾದವನ್ನು ವಿವರಿಸುತ್ತದೆ. ಮೂಲತಃ ಲಾಕುಳ

ಪಂಥಕ್ಕೆ ಸೇರಿದ ಗೊರವರ ಸಂಪ್ರದಾಯ, ಗೊರವ ಶಬ್ದದ ನಾನಾರ್ಥಗಳು, ೬೧೩ರ ಶಾಸನ, ೧೧೩೨ರ ಸೊರಬದ ೯ಳನೆಯ ಶಾಸನ, ಕವಿರಾಜಮಾರ್ಗ, ಪಂಚತಂತ್ರ, ಅನಂತನಾಥ ಪುರಾಣ, ಇತ್ಯಾದಿ ಶಾಸನ ಮತ್ತು ಕೃತಿಗಳಲ್ಲಿ ಚಾರಿತ್ರಿಕವಾಗಿ ಗೊರವರ ಪರಂಪರೆಯನ್ನು ಪ್ರಾಚೀನತೆಯನ್ನು ಗುರುತಿಸಲಾಗಿದೆ. ಅವರ ವಾಸಸ್ಥಳ, ಇತರ ಜನಾಂಗದವರು ಗೊರವರಾಗುವ, ಗೊರವ ದೀಕ್ಷೆ ಕೊಡುವ ವಿವರಗಳನ್ನು ಪರಿಚಯಿಸಲಾಗಿದೆ. ಮೈಲಾರಲಿಂಗನ ಮುಖ್ಯ ಕ್ಷೇತ್ರವಾದ ದೇವರಗುಡ್ಡ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ನಡೆಯುವ ದೋಣಿಸೇವೆಯು ವಿಶಿಷ್ಟ ಒಂದು ಜಾನಪದ ಆಚರಣೆಯಾಗಿದೆ. ವಗ್ಗಸೇವೆ (ವ್ಯಾಘ್ರಸೇವೆ) ಎಂದು ಕರೆಯುವ ಈ ಆಚರಣೆ ಮಹಾನವಮಿ, ಯುಗಾದಿ ಹಬ್ಬಗಳಂದು ಮುಡುಕುತೂರೆ ಮತ್ತು ದೇವರಗುಡ್ಡದಲ್ಲಿ ನಡೆಯುವ ಆಚರಣಾ ಕ್ರಮಗಳನ್ನು ವಿವರಿಸಲಾಗಿದೆ. ಗೊರವರ ಕುಣಿತವು ಒಂದು ಆಚರಣಾ ಕ್ರಮವೇ ದೋಣಿ ಸೇವೆಯಾಗಿದೆ. ಕವಡೆ ಮಣಿಗಳಿಂದ ಅಲಂಕೃತವಾದ, ಉಣ್ಣೆಯ ನೀಲುವಂಗಿ, ಮೂರು ಕವಡೆಸರ(ಗೊರವರ ಲಾಂಛನ), ಗಾಸೆ ಧರಿಸಿ, ಹಣೆಗೆ ಭಸ್ಮ, ನಡುನಡುವೆ ಭಂಡಾರದ ತಿಲಕ, ತಲೆಗೆ ಕರಡಿ ಕೂದಲ ಟೊಪ್ಪಿಗೆ, ಹೆಗಲಲ್ಲಿ ಹಿತ್ತಾಳೆ ಇಲ್ಲವೆ ಮರದ ಮರಗಿ, ಎಡಗೈಯಲ್ಲಿ ತ್ರಿಶೂಲ, ಕಾಲಿಗೆ ಗೆಜ್ಜೆ, ಸೊಂಟಕ್ಕೆ ನಡುಕಟ್ಟು, ಗಗ್ಗರ ಕಟ್ಟಿಕೊಂಡು ಡಮರುಗ ಕೊಳಲನ್ನು ಬಲಗೈಯಲ್ಲಿ ಹಿಡಿದ ಇವರು ನೋಡಲು ಭಯಾನಕವಾಗಿ ಕಾಣುವ, ವಗ್ಗಯ್ಯ ಗೊಗ್ಗಯ್ಯ ಎಂದು ಕರೆಯುವ ಮೊದಲಾದ ವಿಷಯಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

ಕರಿಯ ಕಂಬಳಿ ಗದ್ದುಗೆ ಮೇಲೆ ದೋಣಿಯನ್ನು (ದೊಣ್ಣೆಯಾಕಾರದ ಅಥವಾ ಮರದ ಪಾತ್ರೆ) ಚೌಕಾಕಾರದಲ್ಲಿ ಇರಿಸಲಾದ, ಮೇಲಂಗಿಯನ್ನು ತೆಗೆದಿಟ್ಟು ಕಚ್ಚೆ ಪಂಚೆಯನ್ನು ಎತ್ತಿ ಕಟ್ಟಿ, ತಮ್ಮ ಗಡಬಗ್ಗನ್ನು ನುಡಿಸುತ್ತಾ ಜುಟ್ಟನ್ನು ಬಿಚ್ಚಿ ಕೆದರಿಕೊಂಡು ಒಬ್ಬರ ಹಿಂದೆ ಒಬ್ಬರು ಸುಮಾರು ೮-೧೦ ಜನ ಆವೇಶಭರಿತರಾಗಿ ಕಂಬಳಿಯ ಸುತ್ತ ಸುತ್ತುತ್ತಾ ನರ್ತಿಸುತ್ತಾ ಅರ್ಭಟಿಸಲು ತೊಡಗುವ, ನರ್ತಿಸುತ್ತಾ ದೇವಸ್ಥಾನದ ಒಳಗೆ ಹೋಗಿ ನಮಸ್ಕರಿಸಿ ದೇವರ ಆಶೀರ್ವಾದದೊಂದಿಗೆ ಪುನಃ ಭಂಡಾರ ಬಳಿದು ಭಾವಾವೇಶಭರಿತರಾಗಿ ಅರ್ಭಟಿಸುತ್ತಾ ನರ್ತಿಸುವ, ದೋಣಿಯಲ್ಲಿ ಹಾಕಿದ ಹಾಲು ಹಣ್ಣು ತಿನ್ನುವ ನೆಪದಲ್ಲಿ ಒಬ್ಬರ ಮೇಲೆ ಮತ್ತೊಬ್ಬರು ಬೀಳಲು ಹವಣಿಸುವ ಸನ್ನಿವೇಶವು ಹುಲಿಯನ್ನು ನೆನಪಿಸುವ, ದೋಣಿಯಲ್ಲಿ ಉಳಿದ ರಸಾಯನವನ್ನು ಗೊರವರ ಮನೆಯವರು ಅಥವಾ ಅವರ ಬಂಧುಗಳು ಪ್ರಸಾದವೆಂದು ಸ್ವೀಕರಿಸುವ ಸಂಗತಿಗಳನ್ನು ವಿವರಿಸಲಾಗಿದೆ. ಹೀಗಾಗಿ ಜಾನಪದ ಮೇಳವಾದ ದೋಣಿ ಸೇವೆಯು ಹಾಲುಮತದ ವಿಶಿಷ್ಟ ಆಚರಣೆಗಳಲ್ಲಿ ಒಂದಾಗಿದೆ.

ತೋಪು ಜಾತ್ರೆಯು ದಕ್ಷಿಣ ಕರ್ನಾಟಕದಲ್ಲಿ ಏಳು ದಿನಗಳ ಪ್ರಮುಖ ಆಚರಣೆಯ ಪ್ರಕಾರ ಗಳಲ್ಲೊಂದಾಗಿದೆ. ಮುಖ್ಯವಾಗಿ ಶಿವಮೊಗ್ಗ, ಹಾಸನ, ಕೋಲಾರ, ಮಂಡ್ಯ, ಮೈಸೂರು, ಚಿತ್ರದುರ್ಗಗಳಲ್ಲಿ ನಡೆಯುತ್ತದೆ. ಜಾತ್ರೆಯ ಆಚರಣೆ ವಿಧಾನಗಳನ್ನು ಎಫ್.ಟಿ.ಹಳ್ಳಿಕೇರಿ ಮತ್ತು ಎಸ್.ಚಂದ್ರಪ್ಪ ಅವರು

ತಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಿದ್ದಾರೆ. ಬೀರದೇವರ ತೋಪು ಜಾತ್ರೆಯ ಆಚರಣೆಗಳು' (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೨೦೦೯) ಲೇಖನವು ಬೀರದೇವರ ಆಚರಣೆಗಳನ್ನು ಸಮಗ್ರವಾಗಿ ಕಟ್ಟಿಕೊಡುತ್ತದೆ.

ಬೀರಲಿಂಗೇಶ್ವರನ ಧ್ವಜಾರೋಹಣ, ರೇವಣಸಿದ್ದೇಶ್ವರನ ಪಲ್ಲಕ್ಕಿ ಆಗಮನ, ಸಾಂಕೇತಿಕ ರೂಪದ ೪೦ ಅಡಿ ಎತ್ತರದ ಕೆಂಪು ವರ್ಣದ ಧ್ವಜ ಕಳುಹಿಸುವ, ಪಂಜುಸೇವೆ, ಅಂಗಸೇವೆ, ಬೀರಲಿಂಗ ರಾಜಬೀದಿಯ ಮುಖಾಂತರ ಎಲ್ಲಾ ದೈವಗಳ ಪಲ್ಲಕ್ಕಿಯೊಂದಿಗೆ ರೇವಣಸಿದ್ಧನನ್ನು ಕರೆತರುವ, ಒಡೆಯರ-ದಳವಾಯಿ -ಕೋಲ್ಕಾರರ ಉಡುಪುಗಳು, ರೇವಣಸಿದ್ಧರ ಪಲ್ಲಕ್ಕಿ ಕಾಯುವ ಕೋಲಾರರು, ದಾರಿಯುದ್ದಕ್ಕೂ ಮಡಿವಾಳರು ಹಾಸಿದ ಬಿಳಿ ವಸ್ತ್ರದ ಮೇಲೆ ರೇವಣಸಿದ್ಧ ಬರುವ ಸಂಭ್ರಮ, ದಳವಾಯಿ ಎತ್ತಿನ ಮೇಲೆ ಡಮರುಗಳನ್ನು ಹೇರಿಕೊಂಡು ಅದನ್ನು ಬಡಿಯುವ, ರೇವಣಸಿದ್ಧ ಬೀರಪ್ಪನ ಗದ್ದುಗೆ ಮೇಲೆ ಕುಳಿತರೆ ಬೀರಪ್ಪ ಹೊರಗೆ ಉಳಿಯುವ, ಈರಗಾರರ ಅಲಗಸೇವೆ, ಪಲ್ಲಕ್ಕಿಗಳು ಒಟ್ಟಾಗಿ ಸೇರಿ ಕುಣಿಯುವ, ದಳವಾಯಪ್ಪನ ಮುಂದಾಳತ್ವದಲ್ಲಿ ನಡೆಯುವ ಗಂಗೆ ಪೂಜೆ, ಗೂಡೆ ಹೊರುವ, ಹುಲಿಮನೆ ಕುಣಿತ, ಗೂಡೆಯ ಮೇಲಿನ ತೆಂಗಿನ ಮರದ ಹೊಂಬಾಳೆ ಹೂವ(ಹಸುವಿನ ಸಂಕೇತ), ಕಂಬಳಿ ಮೇಲಿನ ತುಪ್ಪ ಮತ್ತು ಬಾಳೆಹಣ್ಣಿಗಾಗಿ ಹುಲಿಯಂತೆ ಕುಣಿಯುತ್ತ ಪ್ರಸಾದವನ್ನು ಎಂಜಲು ಮಾಡುವ, ಪಟ್ಟಕಟ್ಟುವ, ಹೊಳೆಪೂಜೆ, ಕಾಳಪೂಜೆ ಈರಗಾರ ಅಲಗ ಹಾಯುವ, ಪೂಜೆ ಮುಗಿಯುವ ಸಮಯದಲ್ಲಿ ಭಕ್ತಾದಿಗಳು ರೊಚ್ಚಿಗೆದ್ದು ಜೀವಂತ ಕುರಿಗಳನ್ನು ತೋಳದಂತೆ ಕಚ್ಚಿ ಕಚ್ಚಿ ರಕ್ತ ಕುಡಿಯುವ ಭಯಾನಕ ದೃಶ್ಯಗಳ ವಿವರಗಳು ವಿಭಿನ್ನ ನೆಲೆಯಲ್ಲಿ ಅಧ್ಯಯನಕ್ಕೆ ತೊಡಗಲು ಪೂರಕ ಮಾಹಿತಿಯನ್ನು ಒದಗಿಸುತ್ತವೆ. ಗ್ರಾಮದೇವರುಗಳನ್ನು ಆಗಮನ ಮಾಡಿಕೊಳ್ಳುವ, ನವಗ್ರಹಪೂಜೆ, ದೈವಕ್ಕೆ ಮೀಸಲು ಒಪ್ಪಿಸುವ, ಧಾರ್ಮಿಕ ಸಭೆ, ಕೆಂಡಾರ್ಚನೆ, ಕಾಚಿಬೀರನ ಸೇವೆ ಮೊದಲಾದವನ್ನು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕು ಹಿರೇನಲ್ಲೂರ ಗ್ರಾಮದ ಯರೇಬೀರಲಿಂಗೇಶ್ವರ ತೋಪು ಜಾತ್ರೆಯನ್ನು ಆಧಾರವಾಗಿಟ್ಟು ಕೊಂಡು ಚರ್ಚಿಸಲಾಗಿದೆ. ಹಲವಾರು ಶತಮಾನಗಳ ಕಾಲಮಾನದ ಅಂತರವುಳ್ಳ ಬೀರಪ್ಪ ಮತ್ತು ರೇವಣಸಿದ್ಧರನ್ನು ಒಟ್ಟಾಗಿ ಪೂಜಿಸಲಾಗುತ್ತಿದೆ. ಆದರೆ ಇಲ್ಲಿರೇವಣಸಿದ್ಧರ ಸಮಕಾಲೀನ ಶಾಂತಮುತ್ತಯ್ಯನ ಪ್ರಸ್ತಾಪವೇ ಬರುವುದಿಲ್ಲ. ಈ ಬಗ್ಗೆ ಶೋಧಿಸಬೇಕಾಗಿದೆ.

ಕುರುಬ ಜನಾಂಗದ ಪ್ರಾಚೀನ ಸಂಪ್ರದಾಯಗಳಲ್ಲಿ ಕಂಥಾಧಾರಣಸೇವೆಯೂ ಒಂದಾಗಿದೆ. ಇದಕ್ಕೆ ಸಿ.ಕೆ.ಪರಶುರಾಮಯ್ಯ ಅವರ 'ಕುರುಬ ಜನಾಂಗದ ಒಂದು ಪ್ರಚಲಿತ ಪ್ರಾಚೀನ ಸಂಪ್ರದಾಯ: ಕರಿಯ ಕಂತೆ, (ಗುರುವಂದನ ೨೦೦೭ ಪುಟ ೨೮೨) ಲೇಖನವು ವಿಶೇಷ ಮಾಹಿತಿಯನ್ನು ಒದಗಿಸುತ್ತದೆ. ರೇವಣಸಿದ್ಧೇಶ್ವರರಿಗೆ ಸಂಬಂಧಿಸಿದ ಕರಿಯ ಕಂತೆಯ ತಯಾರಿಕಾ ವಿಧಾನ, ಹಾಲುಮತದ ಸಂಕೇತವಾದ ಕಂಬಳಿಯ ಮಹತ್ವ, 'ಕಂತೆ' ಎನ್ನುವ ಪದದ ಅರ್ಥ, ತಯಾರಿಸ್ಪಟ್ಟ ಕರಿಯ ಕಂತೆಯನ್ನು ರೇವಣಸಿದ್ದೇಶ್ವರರಿಗೆ ಅರ್ಪಿಸುವ ದಿನದ ಸಡಗರ ಸಂಭ್ರಮ, ಹಬ್ಬದ ವಾತಾವರಣಗಳನ್ನು ಇಲ್ಲಿ ಚರ್ಚಿಸಲಾಗಿದೆ. ಅಚ್ಚಬಿಳಿಯ

ಉಣ್ಣೆಯಿಂದ ಮಾಡಿದ ಗದ್ದುಗೆ ಧಾವಳಿಯ, ಕೃಷ್ಣಾಜನದಂತೆ ಬಳಸುವ, ತಯಾರಿಕಾಕ್ರಮ, ಇತರ ಜನಾಂಗಗಳಲ್ಲಿ ಪವಿತ್ರಭಾವ ಹೊಂದಿದ ಕರಿ ಮತ್ತು ಬಿಳಿ ದಾರಗಳ ಮಹತ್ವ ಹೀಗೆ ಪರಂಪರೆಯ ಹಾಗೂ ಆಚರಣೆಗಳನ್ನು ಚರ್ಚಿಸಿ ಹಾಲುಮತದ ಸಂಸ್ಕೃತಿಯನ್ನು ಈ ಲೇಖನವು ಕ್ರಮಬದ್ಧವಾಗಿ ನಿರೂಪಿಸುತ್ತದೆ.

ಸಂಪ್ರದಾಯ

ಹಾಲುಮತದ ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ ಆಚಾರ-ವಿಚಾರ ಸಂಪ್ರದಾಯ ಕಲೆಗಳು ಬಹುಮುಖ್ಯ ಪಾತ್ರ ವಹಿಸುತ್ತವೆ. ಈ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಎಂ. ಜೈಕುಮಾರ ಅವರ 'ಕುರುಬ ಜನಾಂಗ ಸಾಂಸ್ಕೃತಿಕ ಪರಂಪರೆ' (ನಡಮಡಿ ೧೯೮೦ ಪುಟ ೧೨) ಮತ್ತು ಎಸ್.ಜಿ.ಸಿದ್ಧರಾಮಯ್ಯ ಅವರ 'ಹತ್ತಿ ಕಂಕಣದ ಕುರುಬರಲ್ಲಿ ಮದುವೆ ಆಚರಣೆ' (ಯಡಕುಂಟೆ ಗೆಣೆಸಾಲು ೧೯೯೫ ಪುಟ. ೧೪೫) ಎಂಬ ಎರಡು ಲೇಖನಗಳನ್ನು ಇಲ್ಲಿ ಅವಲೋಕಿಸಲಾಗಿದೆ.

ಎಂ. ಜಯಕುಮಾರರು ದಕ್ಷಿಣ ಕರ್ನಾಟಕದ ಹಾಲುಮತ ಸಂಸ್ಕೃತಿಯನ್ನು ತಮ್ಮ ಲೇಖನದ ಮುಖಾಂತರ ತಲಸ್ಪರ್ಶಿ ಚರ್ಚೆಗೆ ಒಳಪಡಿಸಿದ್ದಾರೆ. ಅನೇಕ ಕಾವ್ಯ ಪುರಾಣಗಳಲ್ಲಿಯ ಪೌರಾಣಿಕ ಮತ್ತು ಚಾರಿತ್ರಿಕ ನೆಲೆಯ ಹಾಲುಮತದ ಉಗಮ, ಹತ್ತಿಕಂಕಣ, ಉಣ್ಣೆಕಂಕಣ, ಮತ್ತು ಅಂಡೆ ಕುರುಬರ ಪ್ರಸ್ತಾಪ ಮತ್ತು ಗೋತ್ರಗಳ ವಿವರಗಳನ್ನು ಚರ್ಚಿಸಲಾಗಿದೆ.

ಸಾಮಾಜಿಕ ನೆಲೆಯಲ್ಲಿ ಮದುವೆ ಉದ್ದೇಶ, ಕಾರಣ, ಚಿಕ್ಕವೀಳ್ಯೆ ಶಾಸ್ತ್ರ, ಒಪ್ಪು ಮಾತು, ದೊಡ್ಡ ವಿಳ್ಯೇಶಾಸ್ತ್ರ, ಮಳೆ ಮಲಾರ ಪೂಜಿಸಿ ಐದು ಜನ ಮುತ್ತೈದೆಯರಿಗೆ ಬಳೆತೊಡಿಸುವ ಬಳೆಶಾಸ್ತ್ರ, ಅರಿಷಿಣ ಹಚ್ಚುವ ಶಾಸ್ತ್ರ, ಬೀಸುವ ಕಲ್ಲು ಮತ್ತು ಒಳಕಲ್ಲು ಪೂಜಾಶಾಸ್ತ್ರ, ಸ್ನಾನದ ಮನೆಯಲ್ಲಿ ಹೆಣ್ಣುಗಂಡಿಗೆ ಮಾಡುವ ಸರಕ್ಕಿಶಾಸ್ತ್ರ(ನೀವಾಳಿ ತೆಗೆಯುವ ಶಾಸ್ತ್ರ), ಕಂಕಣ ಕಟ್ಟುವ ಬಿಂಕನು ಬಿಡಿಸುವ, ಗಂಡಿನ ಕಡೆಯವರನ್ನು ಹೆಣ್ಣಿನ ಕಡೆಯವರು ಎದುರುಗೊಳ್ಳುವ ಬ್ರಾಹ್ಮಣ ಪ್ರಭಾವದ ಅರುಂಧತಿ ಮತ್ತು ಕಾಳಿ ಪೂಜೆ, ಐರಣಿ ಪೂಜೆ, ಹಂದರದೂಟ, ಹಾಲುಗಂಬ (ಅರಳಿ ಮರದ ಗೊನೆ) ನೆಟ್ಟು ಪೂಜಿಸುವ ಬುವ್ವದ ಶಾಸ್ತ್ರ(ಉಣ್ಣುವ ಶಾಸ್ತ್ರ), ಈಡು ಹಾಕುವ, ಗುಳ್ಳು ಹಾಕುವ, ಶೋಭನ, ಸೀಮಂತ, ಜನನ, ಶವ ಸಂಸ್ಕಾರ ಮೊದಲಾದ ವಿವರಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಗಳಿಂದ ವಿಶ್ಲೇಷಿಸಲಾಗಿದೆ. ಬಳ್ಳಾರಿ ಮತ್ತು ಮೈಸೂರು ಪರಿಸರದ ವಿಧವಾ ವಿವಾಹದ ಆಚರಣಾ ಪದ್ಧತಿ, ಹಿರಿಯರ ಪೂಜೆ, ಬೀರಪ್ಪ, ಉಲಿಗೆಮ್ಮ, ಮಲ್ಲಪ್ಪ, ಸುಂಕಾಲಮ್ಮ, ಹೊಂಬಳಮ್ಮ, ಚಿಕ್ಕಯ್ಯ, ದೊಡ್ಡಯ್ಯ, ಜುಂಜಪ್ಪ, ಮೊದಲಾದ ದೇವತಾರಾಧನೆ, ತಲೆಯ ಮೇಲೆ ತೆಂಗಿನಕಾಯಿ ಒಡೆಸಿಕೊಳ್ಳುವ, ಉತ್ತರ ಅರ್ಕಾಟನ ಕುಲದ ವೀರನಪೂಜೆ, ಮೈಲಾರಲಿಂಗನ ಸರಪಳಿ ಪೂಜೆ, ವೀರಶೈವ ಪ್ರಭಾವಕ್ಕೆ ಒಳಗಾದ ಹಾಲುಮತ, ಥರ್ಸ್ಟನ್‌ನ ಬೀರದೇವರ ಪ್ರಾಚೀನ ಮೂರ್ತಿ ವಿವರ, ಈಗಲೂ ಐದು ಕಲ್ಲುಗಳನ್ನು ತೊಳೆದು ಲಿಂಗವೆಂದು ಪೂಜಿಸುವ ಪೂರಕ ಮಾಹಿತಿ, ವೀರಶೈವರ ಸಾತ್ವಿಕ ಪೂಜೆಗಿಂತ ಭಿನ್ನವಾದ ಆವೇಶ, ಆರ್ಭಟ, ಆಕ್ರೋಶಗಳ ಪೂಜಾವಿಧಿಗಳನ್ನು

ದಾಖಲಿಸಲಾಗಿದೆ. ಹೀಗೆ ದಕ್ಷಿಣ ಕರ್ನಾಟಕದ ಹಾಲುಮತದ ಸಂಪ್ರದಾಯಗಳ ಸಂಪೂರ್ಣ ಮಾಹಿತಿಗಳನ್ನು ಸಂಕ್ಷಿಪ್ತದಲ್ಲಿ ಸಮಗ್ರವಾಗಿ ದಾಖಲಿಸುವ ಪ್ರಯತ್ನ ಈ ಲೇಖನದಲ್ಲಿದೆ.

ಎಸ್.ಜಿ.ಸಿದ್ದರಾಮಯ್ಯ ಅವರ 'ಹತ್ತಿ ಕಂಕಣದ ಕುರುಬರಲ್ಲಿಯ ಮದುವೆಯ ಆಚರಣೆ' ಎಂಬ ಲೇಖನವು ಹಾಲುಮತದ ಸಂಪ್ರದಾಯಗಳನ್ನು ಸವಿವರವಾಗಿ ವಿವರಿಸುತ್ತದೆ. ಸಮಾಜ ಒಪ್ಪಿತವಾಗುವ ಮದುವೆಯ ಕಾರಣಗಳು, ಸಾಂಸ್ಕೃತಿಕ ಕ್ರಿಯೆಯಾಗಿ ಮದುವೆಯ ಮಹತ್ವ, ಕುರುಬರಲ್ಲಿಯ ಎರಡು ಒಳಪಂಗಡಗಳು ಮತ್ತು ಅವುಗಳಲ್ಲಿಯ ೫೦-೬೦ ಉಪಪಂಗಡಗಳ ವಿವರಗಳು ಇಲ್ಲಿವೆ. ಉಣ್ಣೆ ಕಂಕಣದವರು ಹೆಚ್ಚಾಗಿ ವಾಸವಾಗಿರುವ ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಮಂಡ್ಯ ಜಿಲ್ಲೆಗಳ, ಕೊಲ ಅಥವಾ ಬಣ ಎಂದು ಕರೆಯುವ, ಮಲ್ಲಿಗೆ, ಸ್ಯಾವಂತಿಗೆ, ದಂಡೆ, ಹಂಡೆ, ಆನೆ, ಹೋರಿ ಸೆರಗೆ, ತೆಕ್ಕೆ ಎಂಬ ಒಳಪಂಗಡಗಳ ವಿವರಗಳನ್ನು ತಿಳಿಯಬಹುದು. ಉಣ್ಣೆ ಕಂಕಣದ ಕುರುಬರ ಪ್ರಧಾನ ದೈವ ರೇವಣಸಿದ್ಧ ಮತ್ತು ಇನ್ನಿತರ ದೇವತೆಗಳಾದ ಮೈಲಾರಲಿಂಗ, ಬೀರದೇವರು, ಪೂಜಾರಿ, ಗುರುವಯ್ಯಗಳು, ೧೨ನೆಯ ಶತಮಾನದ ಶೈವ ಸಂಪ್ರದಾಯದ ಮೇಲೆ ವೀರಶೈವ ಸಂಪ್ರದಾಯದ ಪ್ರಭಾವ, ಸಾಂಸ್ಕೃತಿಕ ಆಚರಣೆಗಳಲ್ಲಿ ಗುರುವಿನವರಾಗಿ ಒಡೆಯರ ಪಾತ್ರ, ರಾಯಚೂರು ಸಿಂಧನೂರು ಪರಿಸರದ ಪುರೋಹಿತರು, ಈ ಪ್ರದೇಶದ ಒಡೆಯರು ಕುರುಬರೊಡನೆ ವಿವಾಹ ಸಂಬಂಧ ಬೆಳಸದೆ ತಮ್ಮ ತಮ್ಮಲ್ಲೇ ನಡೆಸುವ, ಬನಿ ಬೇರೆಯಾಗಿದ್ದರೆ ಕನ್ಯೆಯನ್ನು ಎತ್ತಿಕೊಡುವ(ಗಂಡಿನ ವಶಕ್ಕೆ ಒಪ್ಪಿಸುವ), ಎಡವಟ್ಟಿನವ(ನವಳು) ಎಂಬ ಹೊಸ ವಿಚಾರಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಕೆಲವು ಕಡೆ ಗಂಡನ್ನು ಎತ್ತಿಕೊಡುವ, ಚಟ್ಟು ಬಡಿಯುವ, ಬಾಗಿಲು ತಡೆಯುವ ಇಪ್ಪತ್ತೈದು ವರ್ಷ ವಯಸ್ಸಿನೊಳಗಡೆಯ ಯುವಕರಿಗೆ ಮದುವೆಗೆ ಮುನ್ನ ಮಾಡುವ ಪಟ್ಟಾಚರಣೆಯ ವಿಧಿವಿಧಾನಗಳ ವಿವರಗಳು ಕುತೂಹಲಕಾರಿಯಾಗಿವೆ. ಮದುವೆಯಾಗುವ ಹುಡುಗ ಕನ್ಯೆಯನ್ನು ನೋಡುವುದಕ್ಕೆ ಮುಂಚೆ ಆಚರಿಸುವ ಮುನೀರ್ಲು (ಮನೆರ್ಲು) ಮಾಡುವ, ಕುರಿ ಬಲಿಕೊಟ್ಟ ನಂತರ ವರ 'ಧೀರ'ನಾಗುವ, ಕನ್ಯೆ ನೋಡುವ ಸಮಯದ ದಾರಿ ಶಕುನ, ಕನ್ಯೆಯ ಲಕ್ಷಣ, ಪರೀಕ್ಷೆ, ಹೆಣ್ಣಿನವರಿಗೆ ವರನ ಮನೆಯವರು ತೆರಕೊಡುವ ಪದ್ಧತಿಗಳು ಇಂದಿಗೂ ರೂಢಿಯಲ್ಲಿವೆ. ಅಲ್ಲದೆ ನಿಶ್ಚಿತಾರ್ಥ, ವರನ ಮನೆಯಲ್ಲಿ ಮದುವೆ ಮುಂಚೆ ಮಾಡುವ ಲಕ್ಷ್ಮೀಪೂಜೆ, ಲಗ್ನ ಪತ್ರ ಕಟ್ಟಿಸುವ, ಕನ್ಯೆಯ ಮನೆಯಲ್ಲಿ ನಡೆಯುವ ತುಪ್ಪದ ಊಟ, ಗಂಡಿನ ಮನೆಯಲ್ಲಿ ದೇವರ ಊಟ, ಒಳಕಲ್ಲು ಮತ್ತು ಬೀಸುವಕಲ್ಲಿನ ಪೂಜೆ, ಹಂದರದ ಪೂಜೆ, ಚಟ್ಟು ಬಡಿಯುವ, ಹಾಲುಗಂಬ ತರುವ ಆಚರಣೆಗಳನ್ನು ವಿವರಿಸಲಾಗಿದೆ. ಬಣ್ಣದ ಐರಣಿ ತರುವ, ಕಳಸವಾದ್ಯ ಸಮೇತರಾಗಿ ಐರಾಣಿ ಪೂಜಿಸಿ ಕುಂಬಾರನಿಗೆ ಕೊಡಬೇಕಾದ ಚಾಜ ಕೊಟ್ಟು ಗಡಿಗೆಗಳನ್ನು ತರುವ ಸಮಯದಲ್ಲಿ ಹಾಡುವ ಗೀತೆಯೊಂದು ಹೀಗಿದೆ.

> ಒಂದೆಲೆ ಒಂದಡಿಕೆ ಒಂದೆ ಗಂಧದ ಬಟ್ಟು
> ತಂದಿನಿ ಗುಂಡಣ್ಣಾ ನಿನ ಚಾಜ ||ಸೋ||

ತಂದಿನಿ ಗುಂಡಣ್ಣ ನಿನ ಚಾಜ ತಗಂಡು

ಬರದ ಕೊಡು ನಮಗೆ ಐರಣೆ (ಪುಟ ೧೬೮)

ಕಂಕಣ ಕಟ್ಟುವ, ಗಂಗೆ ತರುವ, ಸುರಿಗೆ ಸುತ್ತುವ, ಒಣಕೆ ಮೇಲೆ ವಧೂವರರನ್ನು ಕೂಡಿಸಿ ಅರಿಶಿಣ ನೀರಿನಿಂದ ಸ್ನಾನ ಮಾಡಿಸುವ, ಬಾಸಿಂಗ ಕಟ್ಟುವ, ಒಡೆಯರ ಸಮ್ಮುಖದಲ್ಲಿ ತಾಳಿ ಕಟ್ಟುವ, ಜೀವನ ಜವಾಬ್ದಾರಿ ಹೊರಲು ಅರ್ಹರು ಎಂಬುದಕ್ಕೆ ಸಾಂಕೇತಿಕವಾಗಿ ಭೂಮಿ ತುಳಿಯುವ, ಹೆಣ್ಣೊಪ್ಪಿಸುವ, ಮದುವೆಯಾದ ಹಂದರದ ಅಡಿಯಲ್ಲಿ ಕುರಿ ಕೊಯ್ದು ಅದರ ರಕ್ತದಲ್ಲಿ ಗಂಡು ಹೆಣ್ಣಿನ ಬಲಗಾಲ ಹೆಬ್ಬೆರಳನ್ನು ಅದ್ದಿಸುವ, ಗಂಡಿನವರ ಮಾಂಸದೂಟದ, ವಧೂವರರಿಗೆ 'ವಾರದ ನೀರು' ಹಾಕುವ ಇಂಥ ಹಲವಾರು ಹತ್ತಿಕಂಕಣದ ಕುರುಬರ ಸಂಪ್ರದಾಯಗಳನ್ನು ಲೇಖಕರು ಸಮಗ್ರವಾಗಿ ಸಂಗ್ರಹಿಸಿ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕ ಮಾಹಿತಿ ಒದಗಿಸಿದ್ದಾರೆ.

ಕಲೆಗಳು

ಮಾನವನು ತನ್ನ ಬಿಡುವಿನ ವೇಳೆಯಲ್ಲಿ ಮನರಂಜನೆಗಾಗಿ ಕೆಲವು ಕಲೆಗಳನ್ನು ಸೃಷ್ಟಿಸಿಕೊಂಡನು. ಅಂಥ ಕಲೆಗಳಲ್ಲಿ ಕುರುಬರಿಗೆ ಸಂಬಂಧಿಸಿದವುಗಳು ವಿಶಿಷ್ಟವಾಗಿವೆ. ಡೊಳ್ಳು ಕುಣಿತ, ದಟ್ಟಿ ಕುಣಿತ, ಗೊರವರ ಕುಣಿತ, ಬೀರನ ಕುಣಿತಗಳು, ಕುರುಬರ ಸಾಂಸ್ಕೃತಿಕ ಅನನ್ಯತೆಯನ್ನು ತಿಳಿಸುತ್ತವೆ. ಈ ಕಲೆಗಳ ಬಗೆಗೆ ಬಿಡಿ ಬಿಡಿ ರೂಪದಲ್ಲಿ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಅಂಥ ಅಧ್ಯಯನಗಳ ಅವಲೋಕನ ಇಲ್ಲ ಮಾಡಲಾಗಿದೆ.

ಕೆ.ವೆಂಕಣ್ಣಾಚಾರ್ ಅವರ 'ಮೈಲಾರಲಿಂಗನ ಆರಾಧನಾ ಕಲೆ -ಗೊರವರ ಕುಣಿತ' (ಹಾಲತೊರೆ ೨೦೦೩ ಪುಟ: ೧೬೨) ಲೇಖನವು ಗೊರವರ ಸಮಗ್ರ ಪರಿಚಯ ಮಾಡಿದೆ. ಮೈಲಾರಲಿಂಗನ ಭಕ್ತ, ಶಿವಭಿಕ್ಷುಗಳೆಂದು ಕರೆಸಿಕೊಳ್ಳುವವರು ಪ್ರಧಾನವಾಗಿ ಕುರುಬರು ಇದ್ದರೆ, ಜೊತೆಗೆ ನಾಯಕರು, ಉಪ್ಪಾರರು, ಲಿಂಗಾಯತರು, ರೆಡ್ಡಿಗಳು, ಬ್ರಾಹ್ಮಣರು, ಮುಸಲ್ಮಾನ ಮೊದಲಾದ ಸಮುದಾಯದವರ ಪಾತ್ರದ ಬಗೆಗೆ ಚರ್ಚಿಸಲಾಗಿದೆ. ಶಿವಮೊಗ್ಗ, ಚಿತ್ರದುರ್ಗ, ಕೋಲಾರ, ಧಾರವಾಡ, ಮಂಡ್ಯ, ತುಮಕೂರು ಮೊದಲಾದ ಕ್ಷೇತ್ರಗಳ ವಿವರ, ಗೊರವರ ಮಂಟೇಸ್ವಾಮಿ, ಬೀರೇಶ್ವರ, ಪಾರ್ವತಿ ಇಲ್ಲಿ ಮೊದಲಾದ ಬಣಗಳಲ್ಲಿಯ ವೇಷಭೂಷಣ, ನಡೆ -ನುಡಿ, ಆಚಾರ ಸಂಪ್ರದಾಯಗಳನ್ನು ಪರಿಚಯಿಸಲಾಗಿದೆ. ಪ್ರಾದೇಶಿಕ ಭಿನ್ನತೆ, ಕಲೆಯ ಹಿನ್ನೆಲೆ, ಆಶಯಗಳಲ್ಲಿನ ಏಕರೂಪತೆಗಳಂಥ ಹಲವಾರು ವಿವರಗಳು ಇಲ್ಲಿವೆ. ಗೊರವ ದೀಕ್ಷೆಯ ವಿಧಿವಿಧಾನ, ದೋಣಿ ಸೇವೆ, ಕಾರಣಿಕ ನುಡಿಯುವ, ಕಾಲಿಗೆ ಬಗನಿಗೂಟವನ್ನು ಬಡಿಸಿಕೊಳ್ಳುವ, ಗಂಡಕಾರಿ ಮುಳ್ಳುಗಳನ್ನು ಜೋಡಿಸಿ ಅದನ್ನು ಕಾಲಿನ ಮೀನ ಖಂಡಗಳ ಮೂಲಕ ಹಾಯಿಸಿ ಅತ್ತಿತ್ತ ಎಳೆದಾಡಿಸಿಕೊಳ್ಳುವ, ದೀಪದ ಕಂಬಗಳ ಹರಿತವಾದ ಕಾಲುಗಳನ್ನು ಮುಂಗೈಯಲ್ಲಿ ಇಳಿಸಿ ದೇವರಿಗೆ ಆರತಿ ಎತ್ತುವ, ಬಾಯಿಗೆ ಬೀಗ ಜಡಿದುಕೊಳ್ಳುವ, ಮುಳ್ಳು ಹಾವುಗೆಗಳ ಮೇಲೆ ತಾಸುಗಟ್ಟಲೆ ನಿಲ್ಲುವ ಬಲವಾದ ಸರಪಳಿಗಳನ್ನು ಜಗ್ಗಿ

ಹರಿಯುವ ಮೊದಲಾದ ಆಚರಣಾ ವಿಧಾನಗಳನ್ನು ಪರಿಚಯಿಸಲಾಗಿದೆ. ದೋಣಿಸೇವೆ, ಪವಾಡ ದರ್ಶನ, ಹರಕೆ ಸಲ್ಲಿಕೆ ಮೊದಲಾದ ವ್ರತ ನೇಮಗಳು, ಧಾರವಾಡ ಜಿಲ್ಲೆಯ ದೇವರ ಗುಡ್ಡದ ವಿವರ ಮುಂತಾದ ಸಂಗತಿಗಳನ್ನು ಸಮಗ್ರವಾಗಿ ಪರಿಚಯಿಸಲಾಗಿದೆ. ಹೀಗೆ ಮೈಲಾರಲಿಂಗನ ಸಂಪ್ರದಾಯ ಕುರಿತು ತಿಳಿದುಕೊಳ್ಳಲು ಈ ಲೇಖನ ತುಂಬ ಸಹಾಯಕಾರಿಯಾಗುತ್ತದೆ.

ಕುರುಬರ ಕುಣಿತಗಳಲ್ಲಿ ದಟ್ಟಿಕುಣಿತವೂ ಬಹುಮುಖ್ಯವಾಗಿದೆ. ಈ ಜಾನಪದ ನೆಲೆಯ ಕುಣಿತದ ಕುರಿತಾಗಿ ಮಹಾಲಿಂಗ ಮಂಗಿ, ನಿಂಗಣ್ಣ ಸಣ್ಣಕ್ಕಿ ಮುಂತಾದವರು ಅನೇಕ ವಿಷಯಗಳನ್ನು ಸಂಗ್ರಹಿಸಿದ್ದಾರೆ. ನಿಂಗಣ್ಣ ಸಣ್ಣಕ್ಕಿ ಅವರ 'ದಟ್ಟಿ ಕುಣಿತ: ಕಲೆ ಮತ್ತು ಪ್ರದರ್ಶನ' (ಹಾಲತೊರೆ ೨೦೦೩) ಎಂಬ ಲೇಖನವು ಸಮಗ್ರ ಮಾಹಿತಿಯನ್ನು ನೀಡುತ್ತದೆ. ಮೊದಲು ಆಳು ಮಕ್ಕಳ ಕುಣಿತವೆಂದು ಕರೆಯಲ್ಪಟ್ಟು ನಂತರ ದೇವರ ಸೇವಾ ಕುಣಿತವೆಂದು ಕರೆಯುವ ಈ ಕಲೆಯ ಬಗೆಗೆ ವಿವರವಾದ ಚರ್ಚೆಯನ್ನು ಮಾಡಲಾಗಿದೆ. ಮೊದಲ ಬಾರಿಗೆ ಬೆಟಗೇರಿ ಕೃಷ್ಣಶರ್ಮರು ದಟ್ಟಿ ಕುಣಿತದ ಕಲೆಯ ಬಗ್ಗೆ ಆಸಕ್ತಿ ತಳೆದವರು. ಈ ಕುಣಿತದ ಕಲಿಕೆಯ ಪದ್ಧತಿ, ಹಿಂಗಾಗಿ ಮುಂಗಾನಿ ಲಾಗ ಹಾಕುವ, ಅಡ್ಡಲಾಗಿ ಜಿಗಿಯುವ, ದುಂಡಾಗಿ ಸುತ್ತು ತಿರುಗುವ ಸಂಗತಿಗಳನ್ನು ಲೇಖಕರು ಪರಿಚಯಿಸಿದ್ದಾರೆ. ದಟ್ಟಿ ಕುಣಿತದ ವೇಷಭೂಷಣಗಳ ಬಗೆಗೆ ಹೇಳುತ್ತಾ 'ದಟ್ಟಿ' ಎನ್ನುವ ಪದದ ಅರ್ಥ, ವಾದಕರ ಕೈ ಪೆಟ್ಟು, ತಾಳು, ಸನಾದಿ, ಕೊಳಲು, ಮೊದಲಾದ ಬಹುಮುಖ್ಯ ವಾದ್ಯಗಳು ಬಳಕೆಯಾಗುವ ವಿಧಾನಗಳನ್ನು ತಿಳಿಸಲಾಗಿದೆ. ದಟ್ಟಿ ಆಟವನ್ನು ಮಳೆ ಕರೆಯಿಸುವ ಆಟವೆಂದು ಸಹ ಕರೆಯುತ್ತಾರೆ. ಬೆಳಗಾವ ಜಿಲ್ಲೆಯ ಗೋಕಾವಿ ನೆಲದ ದಟ್ಟಿ ನೃತ್ಯದ ತಂಡಗಳು, ಮೈಸೂರು ದಸರಾ, ಹಂಪೆ, ದೆಹಲಿ, ಕೇರಳ ಮೊದಲಾದ ಉತ್ಸವಗಳಲ್ಲಿ ಪ್ರದರ್ಶನ ನೀಡುವ, ಕೈ ಪೆಟ್ಟು, ಬಂಕ ಕಟ್ಟುವ, ತಲೆಯ ಮೇಲೆ ಉದ್ದವಾದ ದೀಪ ಹೊತ್ತು ಸಾಲಾಗಿ ನರ್ತಿಸುವ ದೀಪ ನೃತ್ಯ ಮೊದಲಾದ ದಟ್ಟಿ ಕುಣಿತದ ವಿಧಗಳನ್ನು ಈ ಲೇಖನವು ವಿವರಿಸುತ್ತದೆ.

ಎಲ್ಲ ಮತಗಳು ತಮ್ಮದೇ ಆದ ವಿಶಿಷ್ಟ ಕಲಾಮೇಳಗಳನ್ನು ಹೊಂದಿರುವುದನ್ನು ಜಾನಪದ ಅಧ್ಯಯನದಲ್ಲಿ ಗುರುತಿಸಬಹುದು. ಡೊಳ್ಳಿನ ಕುರಿತಾಗಿ ಜನಪದ ಮೌಖಿಕ ಆಕರಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ಸಿದ್ದಣ್ಣ ಜಕಬಾಳ, ನಿಂಗಣ್ಣ ಸಣ್ಣಕ್ಕಿ, ಶೇಖರ ಕತ್ತಿಗೆ, ಎಂ.ಕೆ.ಲತಾ ಮೊದಲಾದವರು ಪ್ರಮುಖವಾಗಿ ಡೊಳ್ಳು ಕುಣಿತದ ಬಗ್ಗೆ ಅಧ್ಯಯನ ಕೈಕೊಂಡಿದ್ದಾರೆ.

ಶೇಖರ ಕತ್ತಿಗೆ ಅವರ 'ಬೀರೇಶ್ವರನ ಭಕ್ತರ ಡೊಳ್ಳು ಕುಣಿತ' (ಜಾನಪದ ಜಗತ್ತು ಸಂಪುಟ ೧೨ /೩ ೧೯೯೨) ಲೇಖನವು ಜಾನಪದೀಯ ಹಿನ್ನೆಲೆಯಲ್ಲಿ ವಿವರಿಸಲ್ಪಟ್ಟಿದೆ. ಗೊಲ್ಲಾಳನ ಕಥೆಯಂತೆ ಅಲ್ಪಸ್ವಲ್ಪ ಬದಲಾವಣೆಯಿಂದ ಬೀರಪ್ಪನ ಕಥೆ ಇಲ್ಲಿ ನಿರೂಪಿಸಲ್ಪಟ್ಟಿದೆ. ಶಿವನ ದರ್ಶನವಾಗದೇ ಬೇಸತ್ತ ಬೀರಪ್ಪ ಶಿವನಿ ಮರದ ಕೆಳಗೆ ಮಲಗಿರಲು ಬಂಧುಗಳು ಅವನನ್ನು ಎಬ್ಬಿಸಲು ನಾನಾ ಪ್ರಯತ್ನಗಳನ್ನು ಮಾಡಿ ವಿಫಲರಾಗುತ್ತಾರೆ. ಕೊನೆಗೆ ಶಿವನಿ ಮರವನ್ನು ಕಡಿದು ಅದರಿಂದ ತಮಟೆ ತಯಾರಿಸಿ ಕುರಿಚರ್ಮ ಹದ ಮಾಡಿ ತಮಟೆಗೆ ಹೊದಿಸಿ, ಉಣ್ಣೆಯಿಂದ ಹಗ್ಗವನ್ನು ಹೊಸೆದು ತಮ್ಮಟೆಗೆ ಬಿಗಿದು, ಕುರಿಗಳ ಕಾಲುಗಳನ್ನು

ಕೋಲುಗಳಾಗಿ ಬಳಸಿ ಬಡಿಯಲು ಪ್ರಾರಂಭಿಸುತ್ತಾರೆ. ಆಗ 'ಡೊಳ್' ಎಂಬ ಪದ ಉದ್ಭವದಿಂದ ಡೊಳ್ಳು ಎಂದು ಕರೆಯಲಾರಂಭಿಸಿದ ವಿವರಗಳನ್ನು ತಿಳಿಸಲಾಗಿದೆ. ಡೊಳ್ಳು ಶಬ್ದದಿಂದ ಎಚ್ಚರಗೊಂಡ ಬೀರಪ್ಪನಿಗೆ ಶಿವ ದರ್ಶನಕೊಟ್ಟು ತನ್ನೊಂದಿಗೆ ಕೈಲಾಸ್ಕೆ ಕರೆದೊಯ್ಯುತ್ತಾನೆ. ಕುರುಬ ಜನಾಂಗವನ್ನು ಉದ್ಧಾರ ಮಾಡಿದ ಕಾರಣ ಬೀರಪ್ಪ ಆರಾಧ್ಯದೈವವಾಗಿ ಪೂಜೆಗೊಳ್ಳುವ, ಬಳ್ಳಾರಿ ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪ್ರಚಾರದಲ್ಲಿರುವ ಡೊಳ್ಳು ಕುಣಿತ ಇತ್ತೀಚೆಗೆ ವಿಶ್ವದಾದ್ಯಂತ ಮೆಚ್ಚುಗೆ ಪಡೆದಿರುವ ಚರ್ಚೆಯನ್ನು ಹೊಂದಿದೆ.

ಒಟ್ಟಿನಲ್ಲಿ ಡೊಳ್ಳು ಮೂಲತಃ ಕುರುಬರ ಕಲೆ, ಆದರೆ ಇಂದು ಎಲ್ಲ ಸಮುದಾಯದವರು ಹಬ್ಬಹರಿ ದಿನಗಳಲ್ಲಿ, ಸಾಮಾಜಿಕ ರಾಜಕೀಯ ಕಾರ್ಯಕ್ರಮಗಳಲ್ಲಿ ಪ್ರದರ್ಶನಗೊಳ್ಳುವ ಜನಪ್ರಿಯ ಕಲೆಯಾಗಿದೆ. ಇಂಥ ಎಲ್ಲ ಸಂಗತಿಗಳನ್ನು ಈ ಲೇಖನದಲ್ಲಿ ಕಾಣಬಹುದು.

ನಿಂಗಣ್ಣ ಸಣ್ಣಕ್ಕಿಯವರ 'ಡೊಳ್ಳು ಕಲೆ ಮೇಳ' (ಕುರುಬ ಜನಪದ ೧೯೯೭ ಪುಟ ೮೯) ಲೇಖನವು ಡೊಳ್ಳಿನ ರಚನೆಯ ವಿವಿಧ ಆಕಾರಗಳ, ಡೊಳ್ಳು ಬಾರಿಸುವವರ ಬಗೆಗೆ ವಿವರವಾಗಿ ತಿಳಿಸುತ್ತದೆ. ಕುರುಬ ಜನಾಂಗದ ಬೀರದೇವ, ಹಾಲಪ್ಪ, ಕರಿಸಿದ್ಧ, ಅಮೋಘಸಿದ್ಧ, ರೇವಣಸಿದ್ಧ, ಮಾಳಿಂಗರಾಯ, ಬನಸಿದ್ಧ ಇತ್ಯಾದಿ ದೈವಗಳ ಉತ್ಸವಗಳಲ್ಲಿ ಡೊಳ್ಳಿನೋಲಗ ಏರ್ಪಡಿಸುತ್ತಾರೆ. ಡೊಳ್ಳು ಮೇಳದ ಸಾಮೂಹಿಕ ಊಟೋಪಚಾರ, ಎದೆಗೆ ಕವಚದಂತೆ ಅರಿಷಿಣ ಬಣ್ಣದ ಬಟ್ಟೆಕಟ್ಟಿ, ಡೊಳ್ಳನ್ನು ವ್ಯಕ್ತಿಗೆ ಭದ್ರವಾಗಿ ಕಟ್ಟುವ ವಿಧಾನಗಳು, ಎರಡೂ ಕೈಗಳಿಗೆ ಕುರಿ ಉಣ್ಣೆಯ ಕಂಕಣ ಕಟ್ಟುವ, ಕೊರಳಲ್ಲಿ ಶಿವನ ಶಂಖ, ಹಣೆಗೆ ಹಳದಿ ಬಣ್ಣದ ಚುಂಗ ಬಿಟ್ಟು ಸುತ್ತುವ ರುಮಾಲು, ಹಣೆಗೆ ಭಂಡಾರ ಅಥವಾ ವಿಭೂತಿ ಧರಿಸುವ, ಕಾಲುಗಳಿಗೆ ಉಣ್ಣೆಯ ಎಳೆಯಿಂದ ಪೋಣಿಸಿದ ಗೆಜ್ಜೆ ಸರವನ್ನು ಕಟ್ಟುವ ಒಂದರಿಂದ ಏಳು ತಾಳ ಲಯಗಳ, ಮರಗಾಲನ್ನು ಕಟ್ಟಿಕೊಂಡು ಡೊಳ್ಳು ಬಾರಿಸುವ, ಬಾಗುವ, ಏಳುವ, ಡೊಳ್ಳು ಕಲಾವಿದನ ಶಕ್ತಿ ಸಾಮರ್ಥ್ಯಗಳ ಮನರಂಜನಾ ಕಲೆಯ ಡೊಳ್ಳು ಕಟ್ಟಿಕೊಂಡು ಹಂಗಾನಿ ಮುಂಗಾನಿ ಲಾಗಗಳನ್ನು ಹೊಡೆಯುವ, 'ನುಡಿ' ನುಡಿಯುವ, ಡೊಳ್ಳಿನ ಮೇಳ ಕಲಾ ಪ್ರದರ್ಶನದ ಅಂತ್ಯದಲ್ಲಿ 'ಜಲಗದ ಭಂಡಾರ ಒಡೆಯುವ' ಹೀಗೆ ಅನೇಕ ವಿಷಯಗಳನ್ನು ಚರ್ಚಿಸಲಾಗಿದೆ.

ಎಂ.ಕೆ.ಲತಾ ಅವರ 'ಡೊಳ್ಳು ಕಂಸಾಳೆ ಚೌಡಿಕೆ' (ಹಾಲತೊರೆ ೨೦೦೩ ಪುಟ ೧೭೪) ಲೇಖನವು ಮೂರು ವಸ್ತು ವಿಷಯಗಳನ್ನು ವಿವರಿಸುತ್ತದೆ. ಅಧ್ಯಯನದ ವ್ಯಾಪ್ತಿ ಉದ್ದೇಶದಿಂದ ಡೊಳ್ಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಡೊಳ್ಳಿನ ಉಗಮ, ಡೊಳ್ಳಿನ ಹಾಡುಗಳ ಪ್ರಾರಂಭ (ಸ್ವಾಮಿ ನಮ್ಮಯ ದೇವರ ಬಂದಾನೆ ಬನ್ನಿರೆ), ಡೊಳ್ಳು ತಯಾರಿಕಾ ವಿಧಾನ, ಡೊಳ್ಳು ಬಾರಿಸುವ ಕ್ರಮ, ಲಾಗ ಹಾಕುವ, ಹಾರುವ, ನೆಗೆಯುವ, ಜಿಗಿಯುವ, ಮಂಡಿಯೂರಿ ಬಾರಿಸುವ, ಮರಗಾಲ ಕಟ್ಟಿಕೊಂಡು ಬಾರಿಸುವ, ತುಂಬಿದ ಬಿಂದಿಗೆಯ ಮೇಲೆ ನಿಂತು ಅದರ ಸುತ್ತ ಸುತ್ತುತ್ತ ಬಾರಿಸುವ, ಎರಡು ಗುಂಪುಗಳಾಗಿ ಹಿಂದೆ-ಮುಂದೆ ಹೆಜ್ಜೆ ಹಾಕುತ್ತಾ ಪಟ್ಟು

ಬದಲಿಸುತ್ತಾ ಬಾರಿಸುವ ಹಾಗೆ ವಿವಿಧ ಭಂಗಿಗಳ ಕುಣಿತಗಳನ್ನು ಪರಿಚಯಿಸಲಾಗಿದೆ. ಧಾರ್ಮಿಕ ಶುಭಕಾರ್ಯಗಳಲ್ಲಿ ಬಾರಿಸುವ ಡೊಳ್ಳು ವೀರಶೂರತ್ವದ ಪ್ರತೀಕವಾಗಿ ವಿಶ್ವಮಾನ್ಯತೆ ಪಡೆದಿದೆ.

ಒಟ್ಟಿನಲ್ಲಿ ಇಂದಿನ ವ್ಯವಹಾರಿಕ, ನಾಗಾಲೋಟದ ಜೀವನದಲ್ಲಿ ಆಚರಣೆ, ಸಂಪ್ರದಾಯ ಕಲೆಗಳು ಕಣ್ಮರೆಯಾಗುತ್ತಿವೆ. ಇಂಥ ಸಂಸ್ಕೃತಿಯು ಕಣ್ಮರೆಯಾಗುವುದಕ್ಕಿಂತ ಮೊದಲು ಅವುಗಳ ಕುರಿತು ಸಂಶೋಧನೆ, ನಡೆಸುವದು ಅವಶ್ಯಕವಾಗಿದೆ. ಆಡಿಯೋ ವಿಡಿಯೊ ಮಾಧ್ಯಮಗಳಿಂದ ಅವುಗಳ ಜೀವಂತಿಕೆಯನ್ನು ಸೆರೆ ಹಿಡಿಯುವ ಕಾರ್ಯ ತುರ್ತಾಗಿ ನಡೆಯಬೇಕಿದೆ.

೭. ಸಂಸ್ಮರಣ ಮತ್ತು ಅಭಿನಂದನ ಸಂಪುಟಗಳು

ಆಧುನಿಕ ಕನ್ನಡ ಸಾಹಿತ್ಯ ಸಂಸ್ಕೃತಿ ಸಂದರ್ಭದಲ್ಲಿ ಸೃಜನಶೀಲ ಕೃತಿಗಳ ಜೊತೆಗೆ ಕೆಲವು ಸಂಕೀರ್ಣ ಬರಹದ ಕೃತಿಗಳು ಪ್ರಕಟಗೊಂಡಿವೆ. ಅವುಗಳಲ್ಲಿ ಅಭಿನಂದನ ಗ್ರಂಥಗಳು, ಸ್ಮರಣ ಸಂಪುಟಗಳು ಸಮಾವೇಶಗೊಳ್ಳುತ್ತವೆ. ಕುರುಬ ಸಮುದಾಯದ ಕೆಲವು ಮಹನೀಯರನ್ನು ಅಭಿನಂದಿಸುವ ಸ್ಮರಿಸುವ ಸಂದರ್ಭದ ಸವಿನೆನಪಿಗಾಗಿ ಗ್ರಂಥಗಳನ್ನು ಪ್ರಕಟಿಸಲಾಗಿದೆ. ಅಂಥವುಗಳಲ್ಲಿ ವಿದ್ಯಾನಿಧಿ ಪ್ರಕಾಶನದ ಮೈಲಾರಪ್ಪ ಮೆಣಸಗಿ ಅವರ ಸ್ಮರಣ ಗ್ರಂಥ 'ಕಾಯಕಯೋಗಿ', ಕುರುಬರ ಗುರು ಒಡೆಯರಾದ ಶ್ರೀ ಚೆನ್ನಯ್ಯ ಒಡೆಯರ ಅವರ ಅಭಿನಂದನ ಗ್ರಂಥ 'ಗುರುವಂದನ', ಮುಖ್ಯವಾದವುಗಳಾಗಿವೆ. ಅಲ್ಲದೆ ಕನಕ ಗುರು ಪೀಠ ಸ್ಥಾಪನೆಯ ಸ್ಮರಣೆ ಗ್ರಂಥ ಪಾವನ, ಕನಕ ಜಯಂತಿ ಉತ್ಸವದ ನೆನಪಿನ ಸಂಪುಟ ಕುರುಬ ಜನಪದ ಹೀಗೆ ಹಲವಾರು ಸಂಪುಟಗಳನ್ನು ಇಲ್ಲಿ ಹೆಸರಿಸಬೇಕು. ಈ ಸಂಪುಟ ಸಂಚಿಕೆಗಳಲ್ಲಿ ಕುರುಬ ಸಮುದಾಯಕ್ಕೆ ಸಂಬಂಧಿಸಿದಂತೆ ಸಂಶೋಧನೆ, ವಿಮರ್ಶೆ ಹಾಗೂ ವಿಶ್ಲೇಷಣಾ ರೂಪದ ಲೇಖನಗಳನ್ನು ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸಲಾಗಿದೆ. ಆ ಮೂಲಕ ಕುರುಬ ಸಮಾಜ ಸಂಸ್ಕೃತಿ ಚರಿತ್ರೆ, ಕಲೆ ಆಚರಣೆಗಳ ವಿವರಗಳನ್ನು ದಾಖಲೀಕರಿಸಿ ವಿಶ್ಲೇಷಣೆಗೊಳಪಡಿಸಿರುವುದು ಗಮನಿಸತಕ್ಕ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಈ ವರೆಗೆ ಪ್ರಕಟವಾದ ಅಭಿನಂದನ ಹಾಗೂ ಸ್ಮರಣ, ಸಂಚಿಕೆಗಳ ವಿಷಯ ವೈವಿಧ್ಯತೆಯನ್ನು ಇಲ್ಲಿ ಅವಲೋಕಿಸಲಾಗುವುದು.

೧. ಕನಕ (೧೯೭೦)

ಕನಕದಾಸರ ಜಯಂತಿ ಅಂಗವಾಗಿ ೧೯೭೦ರಲ್ಲಿ ಬೆಂಗಳೂರಿನ ಕಾಳಿದಾಸ ಎಜ್ಯುಕೇಷನ್ ಸೊಸೈಟಿಯು ಈ ಸಂಪುಟವನ್ನು ಹೊರತಂದಿದೆ. ಸಿ.ಕೆ.ಪರಶುರಾಮಯ್ಯ ಅವರು ಈ ಕೃತಿಯನ್ನು ಸಂಪಾದಿಸಿದ್ದಾರೆ.

ಕನಕದಾಸರ ಜೀವನ ಮತ್ತು ಕೃತಿಗಳ ಪರಿಚಯ, ಕಾಳಿದಾಸ, ಸಂಗೊಳ್ಳಿ ರಾಯಣ್ಣನ ಬಂಡಾಯ, ಅಹಲ್ಯಾಬಾಯಿ ಹೊಳ್ಕರ್, ಕುರುಬ ಜನಾಂಗದ ಸಿದ್ಧ ಪುರುಷರು, ಆದಿಚುಂಚನಗಿರಿ ಕುರುಬತಿ ಮಾಳವ್ವ, ಕನ್ನಡನಾಡಿನ ಧರ್ಮಸಮನ್ವಯತೆ, ಋಗ್ವೇದ ಕಾಲಕ್ಕೂ ಪ್ರಾಚೀನವಾದ ಉಣ್ಣೆ ಉದ್ಯಮ, ಕುರಿಗಾರರ

ಐತಿಹಾಸಿಕ ವೈಭವ, ಹಿಂದೂ ಸಮಾಜಕ್ಕೆ ದಕ್ಷಿಣ ಭಾರತದ ಕುರುಬರ ಕೊಡುಗೆ, ಕುರುಬರ ನಾಳಿನ ಕನಸು, ಕೊಡಗಿನಲ್ಲಿ ಕುರುಬರು, ಚರಕದ ಹುಟ್ಟು ಮತ್ತು ಬೆಳವಣಿಗೆ, ಕರಿಯ ಕನ್ನೆ, ಗದ್ದುಗೆ ಧಾವಳಿ, ಉತ್ತಮ ಭವಿಷ್ಯದ ಉಣ್ಣೆ ಉದ್ಯೋಗ, ಹಿರಿಯರ ಸ್ಮರಣೆ, ಸಮಾಜ ಮನ್ನಣೆ ಪಡೆದ ಲೇಖಕರ ಕಲಾವಿದರ ಪರಿಚಯ ಹೀಗೆ ಹಾಲುಮತ ಸಮುದಾಯದ ಇತಿಹಾಸ ಉದ್ಯೋಗ ಆಚರಣೆಗಳಂಥ ಹಲವಾರು ವಿಷಯಗಳನ್ನು ಪರಿಚಯಿಸಿರುವದು ಈ ಕೃತಿಯ ವಿಶೇಷತೆ.

೨. ಕನಕ (೧೯೮೯)

ಮಹಾತ್ಮಾ ಕನಕದಾಸರ ೫೦೦ ನೆಯ ಜಯಂತೋತ್ಸವ ಸಮಾರಂಭದ ಅಂಗವಾಗಿ ೨೮-೫-೧೯೮೯ ರಂದು ಗುಲಬರ್ಗಾದ ಹೈದ್ರಾಬಾದ ಕರ್ನಾಟಕ (ಕುರುಬ) ಗೊಂಡ ಸಂಘದಿಂದ ಚಂದ್ರಕಾಂತ ವಗ್ಗಯ್ಯ ಅವರು ಈ ಕೃತಿಯನ್ನು ಸಂಪಾದಿಸಿದ್ದಾರೆ.

ಹಾಲುಮತದ ಮುಖ್ಯ ಮಹನೀಯರು, ಸಂಪ್ರದಾಯ ಮತ್ತು ಆಚಾರ ವಿಚಾರಗಳು, ಕನಕದಾಸರ ಇತಿವೃತ್ತ ವಿಚಾರ, ಹಾಲುಮತ ಧರ್ಮದ ಜಾನಪದ ಕನಸು, ಭಾರತ ದೇಶದ ಕುರುಬರ ಚರಿತ್ರೆ, ಗಾದೆ ಮಾತು, ಕನಕದಾಸರ ಮಾನವೀಯ ಮಿಡಿತಗಳು, ಡೊಳ್ಳಿನ ಹಾಡು, ಜಾತಿ -ವರ್ಗ ಸಂಘರ್ಷದ ಸಂಗತಿಗಳು, ಕಾಳಿದಾಸ, ಸಂಗೊಳ್ಳಿ ರಾಯಣ್ಣ, ಗುರುನಾಥ ಕರಿಯಪ್ಪ, ಬೊಮ್ಮಗೊಂಡೇಶ್ವರ ಚರಿತ್ರೆ, ಸೃಷ್ಟಿ ಮೂಲ ತತ್ವ, ಶ್ರೀರಾಮಧಾನ್ಯ ಚರಿತ್ರೆ, ಹರಿಜನ ಗಿರಿಜನ ಮತ್ತು ದುರ್ಬಲ ವರ್ಗದ ಏಳಿಗೆ, ಜೀವನದಲ್ಲಿ ಉತ್ತೇಜಕವಾದ ೨೦ ಪ್ರಮುಖ ಸಲಹೆಗಳು, ಕುರುಬತಿ ಮಾಳವ್ವ, ಯಲ್ಲಾಲಿಂಗ ಮಹಾರಾಜರ ಸಂಕ್ಷಿಪ್ತ ಪರಿಚಯ, ಭಾವಚಿತ್ರ ಬರೆದ ಬಹದ್ದೂರ, ಹೈದ್ರಾಬಾದ ಕರ್ನಾಟಕ ಕುರುಬ ಗೊಂಡ ಸಂಘವು ನಡೆದು ಬಂದ ದಾರಿ ಹೀಗೆ ಕುರುಬ ಸಮುದಾಯದ ಚರಿತ್ರೆ, ಕಲೆ, ಆಚರಣೆ, ಉದ್ಯೋಗ ಸಂಘಟನೆ ಮೊದಲಾದ ಸಂಗತಿಗಳ ಸಮಗ್ರ ಪರಿಚಯವನ್ನು ಈ ಕೃತಿ ಒಳಗೊಂಡಿದೆ.

೩. ಪಾವನ (೧೯೯೨)

ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠದ ಸ್ಥಾಪನೆ ಹಾಗೂ ಜಗದ್ಗುರು ಶ್ರೀ ಬೀರೇಂದ್ರ ಕೇಶವ ತಾರಕಾನಂದಪುರಿ ಮಹಾಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವದ ಅಂಗವಾಗಿ ಸಂಸ್ಮರಣ ಸಂಚಿಕೆಯನ್ನು ೯-೨-೧೯೯೨ರಂದು ಎಂ. ಜೈಕುಮಾರ ಅವರು ಕಾಗಿನೆಲೆ ಪ್ರಸಾರಾಂಗದಿಂದ ಪ್ರಕಟಿಸಿದ್ದಾರೆ. ಹಲವಾರು ಗಣ್ಯ ವ್ಯಕ್ತಿಗಳ ಶುಭ ಸಂದೇಶಗಳನ್ನು ಕೃತಿಯ ಪ್ರಾರಂಭದಲ್ಲಿ ಕಾಣಬಹುದು.

ಈ ಕೃತಿಯು ವಂದನ, ಚಂದನ, ನಮನ ಎಂಬ ಮೂರು ಭಾಗಗಳನ್ನು ಹೊಂದಿದೆ. ಮೊದಲ ಭಾಗದಲ್ಲಿ ಕಾಗಿನೆಲೆಯ ಐತಿಹಾಸಿಕತೆ, ಗುರುಪೀಠದ ಸ್ವರೂಪ ಮತ್ತು ಮಹತ್ವ, ಕಾಗಿನೆಲೆಯ ಕ್ರುತುಶಕ್ತಿ ಎಂಬ ವಿಷಯಗಳನ್ನು ಚರ್ಚಿಸಲಾಗಿದೆ.

ಎರಡನೆಯ ಭಾಗದಲ್ಲಿ ಕುರುಬ ಜನಾಂಗದ ಐತಿಹಾಸಿಕ ಹಿನ್ನೆಲೆ, ಭಾರತೀಯ ಕುರುಬರ ಸಾಮಾಜಿಕ ಮತ್ತು ರಾಜಕೀಯ ಹಿನ್ನೆಲೆಯ ಕಿರುಪರಿಚಯ, ಕರ್ನಾಟಕ ಕುರುಬ ಜನಾಂಗದ ಸಾಮಾಜಿಕ ಅಧ್ಯಯನ, ಹಾಲುಮತ ಸಮುದಾಯದ ಪ್ರಸಿದ್ಧ ಮಹಿಳೆಯರು, ಜನಪದ ಕವಿ ಕಂಡ ರೇವಣಸಿದ್ಧ, ಕುರುಬ ಜನಾಂಗದ ಒಂದು ಪ್ರಚಲಿತ ಪ್ರಾಚೀನ ಸಂಪ್ರದಾಯ, ಬ್ರಹ್ಮಶ್ರೀ ರಾಮಲಿಂಗ ಕವಿಯ ಕನಕದಾಸರ ಚರಿತ್ರೆ, ಕುರುಬ ಜನಾಂಗದ ಇತಿಹಾಸ ಮತ್ತು ಕಲೆ ಚಿಂತನೆಗಳು, ಶಿಕ್ಷಣ-ಉದ್ಯೋಗ ರಂಗದಲ್ಲಿ ಕುರುಬರು, ಕುರುಬ ಜನಾಂಗದ ಭಕ್ತ ವರ್ಗ, ಬೆಟ್ಟ ಕುರುಬರು-ಜೇನು ಕುರುಬರು ಮೊದಲಾದ ವಿಷಯಗಳನ್ನು ವಿವರಿಸಲಾಗಿದೆ. ಅಲ್ಲದೆ ಗಟ್ಟಿಹಳ್ಳಿ ಅಂಜನಪ್ಪ ಸ್ವಾಮಿಗಳ ಹಾಲುಮತವನ್ನು ಬಡಿದೆಬ್ಬಿಸುವ (ಏಳಿ ಎದ್ದೇಳಿ ಗುರಿ ತಲುಪುವವರೆಗೂ ನಿಲ್ಲಬೇಡಿ) ಲೇಖನ ಹೀಗೆ ವಿಭಿನ್ನ ಹಿನ್ನೆಲೆಯಿಂದ ಕುರುಬ ಸಮುದಾಯದ ಅನನ್ಯತೆಯನ್ನು ಈ ಸಂಪುಟದಲ್ಲಿ ಕಟ್ಟಿಕೊಡಲಾಗಿದೆ.

ಮೂರನೆಯ ಭಾಗವು ಕುರುಬ ಸಮುದಾಯದ ಸಾಧಕರ ಪರಿಚಯವನ್ನು ಒಳಗೊಂಡಿದೆ. ಭಾರತದ ಸಹಕಾರಿ ಆಂದೋಲನಕ್ಕೆ ಶ್ರೀ ಸಿದ್ಧನಗೌಡ ಪಾಟೀಲರ ಕಾಣಿಕೆ. ಕುರುಬರ ಬೋಣಿಗೆ, ಧೀಮಂತ ಇತಿಹಾಸಕಾರ ವಿ.ಆರ್.ಹನುಮಂತಯ್ಯ, ಆದರ್ಶ ರಾಜಕಾರಣಿ ಟಿ.ಮರಿಯಪ್ಪನವರು, ಜನಾಂಗದ ಪ್ರಾಚೀನ ಶಾಸನ ಕವಿ ಕವಿರಾಜ ಬಾಂಧವಮಲ್ಲ, ಹಿರಿಯ ಜೀವ ದಿ.ಹನುಮಂತಪ್ಪ ಕುರುಡಗಿ, ಕುರುಬ ಕುಲದ ತಂದೆ ನೀಲಗಿರಿ ಸಂಜೀವಯ್ಯನವರು, ಕರ್ನಾಟಕ ಪ್ರದೇಶ ಕುರುಬರ ಸಂಘ, ಕಾಳಿದಾಸ ಗೆಳೆಯರ ಬಳಗ ಸೇವಾ ಸಂಸ್ಥೆ, ಕಾಳಿದಾಸ ಸಾಂಸ್ಕೃತಿಕ ಸಂಘ ಒಂದು ಟಿಪ್ಪಣಿ, ಕಲ್ಪತರು ಸೀಮೆಯ ಕಾಳಿದಾಸ ವಿದ್ಯಾಸಂಸ್ಥೆ ಮೊದಲಾದ ವಿವಿಧ ನೆಲೆಯ ವಿಷಯಗಳನ್ನು ಪರಿಚಯಿಸಲಾಗಿದೆ. ಕೃತಿಯ ಅಂತ್ಯದಲ್ಲಿ ಛಾಯಾಚಿತ್ರಗಳೊಂದಿಗೆ ವಿವಿಧ ಸಮಿತಿ ಮತ್ತು ಲೇಖಕರ ವಿಳಾಸಗಳನ್ನು ಮೂರು ಅನುಬಂಧಗಳಲ್ಲಿ ದಾಖಲಿಸಲಾಗಿದೆ.

ಒಟ್ಟಾರೆ ಹಾಲುಮತ ಇತಿಹಾಸ, ಪರಂಪರೆ, ಪ್ರಾಚೀನತೆ, ಪ್ರಮುಖ ವ್ಯಕ್ತಿಗಳ ಪರಿಚಯ, ಸೇವಾ ಸಂಸ್ಥೆಗಳು, ಸಂಘ ಸಂಸ್ಥೆಗಳು, ಒಳಪಂಗಡಗಳು ಹೀಗೆ ಹಲವಾರು ವಿಷಯಗಳ ಸಮಗ್ರ ಪರಿಚಯವನ್ನು ಈ ಕೃತಿಯಲ್ಲಿ ಕಾಣಬಹುದು.

೪. ಕುರುಬ ಜನಪದ (೧೯೯೭)

ಸಿಂದಗಿ ತಾಲೂಕಿನ ಕುರುಬ ಸಮಾಜದವರು ೧೯೯೭ರಂದು ಕನಕದಾಸರ ಜಯಂತಿ ಅಂಗವಾಗಿ ಸಂಚಿಕೆಯೊಂದನ್ನು ಹೊರತರಲು ನಿರ್ಣಯಿಸಿ ಕುರುಬರ ದೇಸೀಯತೆಯನ್ನು, ಸಂಸ್ಕೃತಿಯನ್ನು ಪರಿಚಯಿಸುವ ಉದ್ದೇಶದಿಂದ ಈ ಕೃತಿಯನ್ನು ಸಿದ್ಧಪಡಿಸಲಾಗಿದೆ. ಪ್ರೊ. ಚೆನ್ನಪ್ಪ ಕಟ್ಟಿ ಮತ್ತು ಪ್ರೊ. ಆರ್.ಎಸ್.ವಾಡೇದ ಅವರು ಈ ಕೃತಿಯನ್ನು ಸಂಪಾದಿಸಿದ್ದಾರೆ.

ಕುರುಬ ಜನಾಂಗದ ಐತಿಹಾಸಿಕ ಹಿನ್ನೆಲೆ, ಆರಾಧ್ಯ ದೇವತೆಗಳು, ಮತಾಚರಣೆಗಳು, ಗೋಲಗೇರಿಯ ಗೊಲ್ಲಾಳ, ಕನಕದಾಸರು ಮತ್ತು ಅವರ ಕಾವ್ಯ, ಕೀರ್ತನೆಗಳ ವಿವರ, ಕೀರ್ತನೆಗಳಲ್ಲಿನ ಸಾಮಾಜಿಕ ಪ್ರಜ್ಞೆ,

ಡೊಳ್ಳಿನ ಹಾಡುಗಳು, ಡೊಳ್ಳು ಕಲೆ-ಮೇಳ, ಕುರುಬರ ರ್‍ಯಾಣಗಳು, ಒಡೆಯರ ಹೇಳಿಕೆಗಳು ಮೊದಲಾದವನ್ನು ವಿವರಿಸಲಾಗಿದೆ. ಸಂಸ್ಕೃತಿ ಮತ್ತು ಉಪಸಂಸ್ಕೃತಿಗಳ ಆಚಾರ-ವಿಚಾರ, ನಡೆ-ನುಡಿ, ಹವಣಿಕೆಯಲ್ಲಿ ಪಾಲ್ಗೊಂಡ ದಾರ್ಶನಿಕರು, ಇತಿಹಾಸ ಪುರುಷರು ಮೊದಲಾದವನ್ನು ಚರ್ಚೆಗೆ ಒಳಪಡಿಸಿ, ಭೂತದ ಬೆಳಕಿನಲ್ಲಿ ವರ್ತಮಾನ ಮತ್ತು ಭವಿಷ್ಯವನ್ನು ರೂಪಿಸುವ ಉತ್ಸಾಹವನ್ನು ಈ ಕೃತಿಯಲ್ಲಿ ಗುರುತಿಸಬಹುದಾಗಿದೆ.

೫. ಹಾಲಕೆನೆ (೨೦೦೨)

ಬಿಜಾಪುರ ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆಯ ಬೆಳ್ಳಿಹಬ್ಬದ ಅಂಗವಾಗಿ ೨೦೦೨ರಲ್ಲಿ ಹಾಲಕೆನೆ ಎಂಬ ಕೃತಿಯನ್ನು ಶ್ರೀರಾಮ ಇಟ್ಟಣ್ಣವರ ಅವರು ಪ್ರಧಾನ ಸಂಪಾದಕರಾಗಿ ಪ್ರಕಟಿಸಿದ್ದಾರೆ.

ಈ ಕೃತಿಯು ಜನಾಂಗದ ಮೂಲ, ಹಾಲುಮತದ ಪೌರಾಣಿಕ ನೆಲೆಗಳು, ಬೀರಪ್ಪನ ಜನನ; ತಂದೆ -ತಾಯಿ ಮತ್ತು ಇತರ ವಿಷಯಗಳು, ಶಾಸನಗಳಲ್ಲಿ ಕುರುಬರು, ಮೈಲಾರ; ಮದುವೆ, ವಾಸ್ತು ಜಾತ್ರೆ ಮತ್ತು ಚರಿತ್ರೆ, ದೇವರಗುಡ್ಡ: ಒಂದು ಅವಲೋಕನ, ರೇವಣಸಿದ್ಧೇಶ್ವರ, ಸಿದ್ಧಪರಂಪರೆಯಲ್ಲಿ ಅಮೋಘಸಿದ್ಧ, ಹುಲಜಂತಿ ಮಾಳಿಂಗರಾಯ: ಚಾರಿತ್ರಿಕ ಅಂಶಗಳು, ಬಾಗೇನಾಡಿನ ಅಲಕನೂರಿನ ಕರಿಸಿದ್ಧೇಶ್ವರ, ಹುಲ್ಲಪ್ಪ -ಚಂದಪ್ಪ: ಒಂದು ಪರಿಚಯ, ಗೋಲಗೇರಿ ಗೊಲ್ಲಾಳ: ಆಚರಣೆಗಳು, ಮೈಲಾರಲಿಂಗ-ಖಂಡೋಬಾ: ಆಚರಣೆಗಳ ವೈಶಿಷ್ಟ್ಯ, ಕುರುಬರ ಗೋತ್ರಗಳು ಹಾಗೂ ಬೆಡಗುಗಳು, ಕುರುಬ ಜನಾಂಗದ ಒಳಪಂಗಡಗಳು, ಐನೋರು ಮತ್ತು ಕಾಲಿಲ್ಲದ ಐನೋರು, ಹೊರನಾಡ ಕುರುಬರು, ಕುರುಬರು-ಗೊಲ್ಲರು: ತೌಲನಿಕ ಟಿಪ್ಪಣಿಗಳು, ಕುರುಬರು-ಬೇಡರು: ತೌಲನಿಕ ಟಿಪ್ಪಣಿಗಳು, ರಸ್ತಾಪುರ ಭೀಮಕವಿ ಸಾಹಿತ್ಯ ಸಾಧನೆ, ಜನಪದ ಹಾಲುಮತ ಮಹಾಕಾವ್ಯಗಳಲ್ಲಿ ಸ್ತ್ರೀಪಾತ್ರಗಳು, ಕನಕದಾಸರ ಕೀರ್ತನೆಗಳಲ್ಲಿ ತಲ್ಲಣಗಳು, ಡೊಳ್ಳಿನ ಹಾಡುಗಳ ವೈವಿಧ್ಯ, ದಟ್ಟಿ ಕುಣಿತ: ಕಲೆ ಮತ್ತು ಪ್ರದರ್ಶನ, ಮುಳುಗಡೆಯಾದ ಬೀರದೇವರ ಗುಡಿಗಳು ಇತ್ಯಾದಿ ವಿಷಯಗಳು ಕುರುಬ ಜನಾಂಗದ ಸಂಸ್ಕೃತಿ, ಸಂಪ್ರದಾಯ ಹಾಗೂ ಪರಂಪರೆಗಳನ್ನು ತಿಳಿಸುತ್ತವೆ. ಲೇಖಕರ ಆಳವಾದ ಅಧ್ಯಯನ ಮತ್ತು ಪರಿಶ್ರಮಗಳು ಓದುಗರನ್ನು ವಿಭಿನ್ನ ದೃಷ್ಟಿಕೋನದಲ್ಲಿ ವಿಚಾರಿಸಲು ಎಡೆಮಾಡಿಕೊಡುತ್ತದೆ.

೬. ಕಾಯಕ ಯೋಗಿ (೨೦೦೨)

ಮೈಲಾರಪ್ಪ ಮಲ್ಲಪ್ಪ ಮೆಣಸಗಿಯವರ ಸಂಸ್ಮರಣ ಗ್ರಂಥವನ್ನು ೮-೧೨-೨೦೦೨ರಲ್ಲಿ ಗದುಗಿನ ವಿದ್ಯಾನಿಧಿ ಪ್ರಕಾಶನದ ರಜತ ಮಹೋತ್ಸವದ ಅಂಗವಾಗಿ ಎ.ಬಿ.ಹಿರೇಮಠ ಮತ್ತು ನಿಂಗಣ್ಣ ಸಣ್ಣಕ್ಕಿ ಅವರು ಸಂಪಾದಿಸಿದ್ದಾರೆ. ಸಿದ್ದಣ್ಣ ಜಕಬಾಳ, ಎನ್.ಎಂ.ಅಂಬಲಿಯವರ ಮತ್ತು ಎಸ್.ಎನ್.ವೆಂಕಟಾಪೂರ ಅವರು ಸಹ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ೬೬೮ ಪುಟಗಳ ವ್ಯಾಪ್ತಿಯಲ್ಲಿ ಎರಡು ಮುಖ್ಯ ಭಾಗಗಳನ್ನು ಹೊಂದಿ ಉಪವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆ.

ಮೊದಲ ಭಾಗವು ಜೀವನ ದರ್ಶನ, ಪರಿವಾರ ದರ್ಶನ, ಕಾಯಕ ದರ್ಶನ, ಪ್ರಕಾಶನ ದರ್ಶನ, ಸಮಾಜ ದರ್ಶನ, ಕನಕ ದರ್ಶನ ಮತ್ತು ಪುಣ್ಯ ಪುರುಷರ ದರ್ಶನ ಎಂಬ ಏಳು ಉಪ ವಿಭಾಗಗಳನ್ನು ಹೊಂದಿದೆ. ಮೈಲಾರಪ್ಪನವರ ಕುರಿತಾದ ಅಭಿಪ್ರಾಯ, ಮೇಣಸಗಿಯವರ ಕಾಯಕ ಸ್ನೇಹ, ಛಲ, ಸಮಾಜ ಚಿಂತನೆ, ಶಿಕ್ಷಣ ಪ್ರೇಮ, ಶ್ರಮ ಮೊದಲಾದ ವಿಷಯಗಳನ್ನು ವಿವರಿಸಲಾಗಿದೆ. ಸಮಾಜದ ಪರಂಪರೆ, ಸಂಸ್ಕೃತಿ, ಸಂಪ್ರದಾಯಗಳನ್ನು ಸಮಾಜ ದರ್ಶನ ಪರಿಚಯಿಸುತ್ತದೆ. ಕನಕ ದರ್ಶನವು ಕನಕದಾಸರ ಇತಿವೃತ್ತ ವಿಚಾರ, ಅವನ ಕೃತಿಗಳು ಹಾಗೂ ಕೀರ್ತನೆಗಳ ಸಮಗ್ರ ಪರಿಚಯ ಮಾಡಿಕೊಡುತ್ತದೆ. ಹಾಲುಮತದ ದೈವಗಳು, ಸಿದ್ಧಿ ಪುರುಷರು, ಜನಪದ ಹಾಡುಗಾರ ಸಿದ್ದಪ್ಪ ಮೇಟಿ, ಚೆನ್ನಯ್ಯ ಒಡೆಯರ, ವರ್ಣಶಿಲ್ಪಿ ಪಿ.ಆರ್. ತಿಪ್ಪೇಸ್ವಾಮಿ, ಶಿಕ್ಷಣ ತಜ್ಞ ಬಿ.ಎಫ್.ದಂಡಿನ, ಸಾಹಿತಿ ಎಚ್.ಜೆ.ಲಕ್ಕಪ್ಪಗೌಡರ ಪರಿಚಯ, ತತ್ವಜ್ಞಾನಿ ಹೊನಕುಪ್ಪಿಯ ಶ್ರೀಕೃಷ್ಣ ಪುಗಶೆಟ್ಟಿಯವರ ಬದುಕು-ಬರಹ ಮೊದಲಾದ ವಿಷಯಗಳನ್ನು ಪುಣ್ಯಪುರುಷ ದರ್ಶನವು ವಿವರಿಸುತ್ತದೆ.

ಎರಡನೆಯ ಭಾಗವು ಸಂಕೀರ್ಣ ದರ್ಶನವಾಗಿದ್ದು, ಕನ್ನಡ ಸಾಹಿತ್ಯ ಕುರಿತು ವಿವಿಧ ವಿಷಯಗಳನ್ನು ಹೊಂದಿದೆ. ಒಟ್ಟಾರೆ ಈ ಕೃತಿಯು ಹಾಲುಮತದ ಪ್ರಾಚೀನತೆ, ಪರಂಪರೆ, ದೈವ, ಹಾಲುಮತದ ಮಹನೀಯರು ಮುಂತಾದ ವಿಭಿನ್ನ ನೆಲೆಯ ವಿಷಯಗಳ ಸವಿಸ್ತಾರ ಪರಿಚಯ ಮಾಡಿಕೊಡುತ್ತದೆ.

೭. ಹಾಲತೊರೆ (೨೦೦೩)

ಎಂ.ಕರಿಯಪ್ಪ ಅವರು ೨೦೦೩ರಲ್ಲಿ ದಾವಣಗೆರೆಯ ನಗರ ಕುರುಬರ ಸಂಘದಿಂದ ಪ್ರಕಟಿಸಿದ್ದಾರೆ. ೩೪೫ ಪುಟಗಳ ಈ ಕೃತಿಯು ಆರು ಭಾಗಗಳನ್ನು ಹೊಂದಿದೆ.

ಮೊದಲ ಭಾಗವು ರೇವಣಸಿದ್ದೇಶ್ವರ, ತಗರ ಪವಾಡ, ಗುರುಪರಂಪರೆ, ಹುಲಜಂತಿ ಮಾಳಿಂಗರಾಯ, ಕಾಗಿನೆಲೆ ಕನಕ ಗುರುಪೀಠದ ಸ್ಥಿತಿ-ಗತಿ, ಚಂದ್ರಗಿರಿ ಮಠದ ಸದ್ಗುರು ಪರಮಹಂಸ ವಿದ್ಯಾವರೇಣ್ಯರು, ಸಜ್ಜಲಗುಡ್ಡದ ಶಿವಶರಣೆ, ಹರಿಹರದ ಬ್ರಹ್ಮಾನಂದಾಶ್ರಮ, ತ್ರಿಮೂರ್ತಿ ಅವತಾರಿ ದತ್ತ ಸದಾನಂದರು ಪರಮಹಂಸ ಘಟ್ಟಹಳ್ಳಿ ಅಂಜನಪ್ಪಸ್ವಾಮಿ, ಮುಗಳಖೋಡದ ಶ್ರೀ ಯಲ್ಲಾಲಿಂಗ ಮಹಾರಾಜರು ಮೊದಲಾದವರ ಆಧ್ಯಾತ್ಮಿಕ ಸಾಧನೆಯ ವಿವರಗಳನ್ನು ಒಳಗೊಂಡಿದೆ.

ಕನಕದಾಸ, ಕಾಳಿದಾಸ, ಸಂಗೊಳ್ಳಿರಾಯಣ್ಣ, ಅಹಲ್ಯಾಬಾಯಿ ಮೊದಲಾದವರ ಚರಿತ್ರೆ, ಸಾಹಿತ್ಯ ಸಾಧನೆ, ಪರಂಪರೆ, ರಾಷ್ಟ್ರಪ್ರೇಮ ತ್ಯಾಗ ಬಲಿದಾನಗಳನ್ನು ಎರಡನೆಯ ಭಾಗವು ಪರಿಚಯಿಸುತ್ತದೆ. ದಕ್ಷಿಣ ಭಾರತದಲ್ಲಿ ಕುರುಬರ ವ್ಯಾಪ್ತಿ ವಿಜಯನಗರದ ಸಂಸ್ಥಾಪಕರು ಹಾಲುಮತದ ಹಕ್ಕಬುಕ್ಕರು, ಗೊಂಡ-ಲಾಳಗೊಂಡರು, ಕುರುಬ ಮೂಲದ ಕುಂಚಟಿಗರ ಸಾಂಸ್ಕೃತಿಕ ವೀರ, ವಿನಾಶದ ಅಂಚಿನಲ್ಲಿ ಉಣ್ಣೆ ಉದ್ಯಮ, ಗೊರವರ ಕುಣಿತ, ದಟ್ಟಿಕುಣಿತ ಮುಂತಾದ ವಿಷಯಗಳನ್ನು ಅಧ್ಯಾಯ ಮೂರರಲ್ಲಿ ಗುರುತಿಸಬಹುದು.

ನಾಲ್ಕನೆಯ ಭಾಗದಲ್ಲಿ ಹಿಂದು ಧರ್ಮ ಮತ್ತು ಇತರ ಧರ್ಮಗಳೊಂದಿಗೆ ಇಸ್ಲಾಂ ಧರ್ಮದ ದಾನದ ಪರಿಕಲ್ಪನೆ, ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ವ್ಯಕ್ತಿತ್ವ, ಧರ್ಮ ಮತ್ತು ಸಂಸ್ಕೃತಿ, ಪುಟಾಣಿಗಳಿಗಾಗಿ ಆರೋಗ್ಯ ಮತ್ತು ಶಿಕ್ಷಣ, ಮಠಗಳಿಂದ ಲೋಕಕಲ್ಯಾಣ, ಆದರ್ಶದ ಅಮರವಾಣಿ ಹೀಗೆ ಭಿನ್ನ ಹಿನ್ನೆಲೆಯ ವಿಷಯಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಐದನೆಯ ಭಾಗವು ದಾವಣಗೆರೆ ಜಿಲ್ಲೆಯ ಧಾರ್ಮಿಕ ನೆಲೆಗಳು, ಬೀರದೇವರು, ಐತಿಹಾಸಿಕ ಚಿತ್ರದುರ್ಗದ ಚಿನ್ನದ ಗರಿಗಳು, ಕುರುಬರು ಗೌಡಿಕೆ ಹಕ್ಕನ್ನು ದಿವ್ಯದ ಮೂಲಕ ಗೆದ್ದುಕೊಂಡ ಶಾಸನಮುಂತಾದ ವಿಷಯಗಳನ್ನು ಪ್ರಸ್ತಾಪಿಸುತ್ತದೆ. ಆರನೆಯ ಭಾಗದಲ್ಲಿ ಬೀರೇಶ್ವರ ವ್ಯಾಯಾಮಶಾಲೆ ನಡೆದು ಬಂದ ದಾರಿ, ಕಲ್ಯಾಣ ಮಂಟಪಕ್ಕೆ ಸ್ಪೂರ್ತಿ ನೀಡಿದ ಮಾಗೋಡು ಈರಮ್ಮ, ಕುರುಬ ಸಂಘದ ಕಾರ್ಯಕಾರಿ ಸಮಿತಿ ಇತ್ಯಾದಿ ವಿವರಗಳನ್ನು ದಾಖಲಿಸಲಾಗಿದೆ.

೮. ಗುರುವಂದನ (೨೦೦೭)

ವೇ.ಮೂ.ಚನ್ನಯ್ಯ ಒಡೆಯರ್ ಅವರ ಅಭಿನಂದನ ಗ್ರಂಥವನ್ನು ೨೦೦೭ರಲ್ಲಿ ದಾವಣಗೆರೆಯ ಶ್ರೀ ಬೀರೇಶ್ವರ ವಿದ್ಯಾರ್ಥಿ ನಿಲಯದಿಂದ ಎಚ್.ಜೆ.ಲಕ್ಕಪ್ಪಗೌಡ, ಸುಧಾಕರ, ಪರಮೇಶ ಹರ್ತಿಕೋಟೆ, ನಾ.ಲೋಕೇಶ ಒಡೆಯರ್, ಸಿ.ಕೆ.ಪರಶುರಾಮಯ್ಯ, ಎಂ.ಕರಿಯಪ್ಪ ಅವರು ಸಂಪಾದಿಸಿದ್ದಾರೆ.

ಈ ಕೃತಿಯು ಮೂರು ಭಾಗಗಳಲ್ಲಿ ವಿಭಾಗಿಸಲ್ಪಟ್ಟಿದೆ. ಮೊದಲ ಭಾಗ ಗುರುದರ್ಶನವು ವೇ.ಮೂ. ಚೆನ್ನಯ್ಯ ಒಡೆಯರ ಅವರ ಸಮಗ್ರ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. ಸಂಸಾರಿಕ, ಪ್ರಾಮಾಣಿಕ, ರಾಜಕೀಯ, ಬಂಧು ಪ್ರೇಮ, ಮಾನವತಾವಾದ, ಅಜಾತಶತ್ರು, ಪ್ರೇರಕ ಶಕ್ತಿ, ಸ್ಮರಣೀಯ ವ್ಯಕ್ತಿ, ಸಜ್ಜನಿಕೆ ಹೀಗೆ ಹಲವಾರು ದೃಷ್ಟಿಕೋನಗಳಲ್ಲಿ ಚೆನ್ನಯ್ಯ ಒಡೆಯರ ಅವರ ಜೀವನ ಮತ್ತು ಸಾಧನೆಗಳನ್ನು ಪರಿಚಯಿಸಲಾಗಿದೆ.

ಎರಡನೆಯ ಭಾಗವು ಹಾಲುಮತದ ಪರಂಪರೆ, ಸಿದ್ಧಪುರುಷರು ಮತ್ತು ಅವರ ಸಾಧನೆಯ ಅನನ್ಯತೆಯನ್ನು ಗುರುತಿಸುವಲ್ಲಿ ಯಶಸ್ವಿಯಾಗಿದೆ. ಮೂರನೆಯ ಭಾಗವು ಭಾರತೀಯ ಕುರುಬರ ಸಾಮಾಜಿಕ, ಜನಾಂಗದ ಐತಿಹಾಸಿಕ ಹಿನ್ನೆಲೆ, ಶಿಕ್ಷಣ ಮತ್ತು ಉದ್ಯೋಗ, ಒಡೆಯರ ಸಂಪ್ರದಾಯದ ಪ್ರಾಚೀನತೆ, ಸಮಾಜ ಪರಿವರ್ತನೆ, ಧೀಮಂತ ಇತಿಹಾಸಕಾರ ವಿ.ಆರ್.ಹನುಮಂತಯ್ಯ, ಕುರುಬ ಜನಾಂಗದ ಪ್ರಾಚೀನತೆ, ಮೈಲಾರಲಿಂಗನ ಗೊರವಯ್ಯಗಳು, ರಾಜಕೀಯ ಧ್ರುವೀಕರಣ, ದೋಣಿ ಸೇವೆ: ವಿಶಿಷ್ಟ ಜಾನಪದ ಮೇಳ, ಕರಿಯಕಂತೆ, ಕುರುಬರು ಹುಟ್ಟುಲಿಂಗದೋರು -ಲಿಂಗಾಯತರು ಕಟ್ಟುಲಿಂಗದೋರು, ಕುರುಬ ಜನಾಂಗದ ಭಕ್ತವರ್ಗ, ಆರ್ಥಿಕ ಚಿಂತನೆ, ಕಂಬಳಿ ಉದ್ಯಮ, ಕುರುಬ ಕುಲದ ತಂದೆ ನೀಲಗಿರಿ ಸಂಜೀವಯ್ಯನವರು, ಜನಸಂಘಟನೆ -ಗುರುಪೀಠಗಳು ಮುಂತಾದ ವಿಷಯಗಳನ್ನು ಚರ್ಚಿಸಲಾಗಿದೆ. ಅಂತ್ಯದಲ್ಲಿ ಕುರುಬರ ಧರ್ಮಗುರುಗಳ

ವಿಳಾಸವನ್ನು ಉಲ್ಲೇಖಿಸಲಾಗಿದೆ. ಹೀಗೆ ಕುರುಬ ಸಮುದಾಯದ ಚರಿತ್ರೆ, ಕಲೆ, ಆಚರಣೆ, ಉದ್ಯೋಗ ಮುಂತಾದ ಸಂಗತಿಗಳತ್ತ ಈ ಕೃತಿಯ ಲೇಖನಗಳು ಓದುಗರ ಗಮನವನ್ನು ಸೆಳೆಯುತ್ತವೆ.

೮. ಸಂಕೀರ್ಣ ಕೃತಿಗಳು

ಹಾಲುಮತ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ಕೃತಿ ಮತ್ತು ಲೇಖನಗಳನ್ನು ವಿಷಯಾನುಸಾರ ವರ್ಗೀಕರಿಸಿ ಆಯಾ ಶೀರ್ಷಿಕೆಯಡಿ ಈವರೆಗೆ ಚರ್ಚಿಸಲಾಗಿದೆ. ಯಾವದೇ ವಿಷಯದ ಶೀರ್ಷಿಕೆಗೆ ಒಳಪಡದ ಕೃತಿಗಳನ್ನು 'ಸಂಕೀರ್ಣ ಕೃತಿಗಳು' ಎಂದು ಪರಿಗಣಿಸಿ ಅವಲೋಕನಕ್ಕೆ ಒಳಪಡಿಸಲಾಗಿದೆ.

೧. ನಡೆಮಡಿ -ಎಂ.ಜೈಕುಮಾರ (೧೯೮೦)

ಎಂ.ಜೈಕುಮಾರ ಅವರು ವೃತ್ತಿಯಲ್ಲಿ ಸರಕಾರಿ ಅಧಿಕಾರಿಗಳು, ಪ್ರವೃತ್ತಿಯಲ್ಲಿ ಸಾಹಿತ್ಯ ಸಾಂಸ್ಕೃತಿಕ ಚಿಂತಕರು. ಹಾಗಾಗಿ ಅವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಹಾಲುಮತ ಸಾಂಸ್ಕೃತಿಕ ಅಧ್ಯಯನದ 'ನಡೆಮಡಿ' ಕೃತಿಯು ೧೯೮೦ರಲ್ಲಿ ಪ್ರಕಟಗೊಂಡಿದೆ. ೫೬ ಪುಟಗಳ ಲಘು ಕೃತಿಯು ದಕ್ಷಿಣ ಕರ್ನಾಟಕ ಮುಖ್ಯವಾಗಿ ಹಾಸನ ಮತ್ತು ಮೈಸೂರು ಪರಿಸರದ ಕುರುಬರ ಸಂಸ್ಕೃತಿಯನ್ನು ಸವಿವರವಾಗಿ ಪರಿಚಯಿಸುತ್ತದೆ. ಲೇಖಕರು ಹಲವಾರು ಪಾಶ್ಚಾತ್ಯ ಕೃತಿಗಳನ್ನು ಪರಾಮರ್ಶಿಸಿ ವಿಶಿಷ್ಟ ಸಂಪ್ರದಾಯ, ಆಚಾರ, ವಿಚಾರಗಳನ್ನು ಚರ್ಚೆಗೆ ಒಳಪಡಿಸಿದ್ದಾರೆ. ಮುನ್ನುಡಿಯಲ್ಲಿ ಲೇಖಕರು ಹಿಂದುಳಿದ ಜನಾಂಗದ ಸುಧಾರಣಾ ಭರದ ಅನುಕರಣೆಯ ಸಂಸ್ಕೃತಿ ಕುರಿತಾಗಿ ಹೀಗೆ ತಿಳಿಸಿದ್ದಾರೆ. "...... ಅವರಲ್ಲಿ ಕೀಳರಿಮೆ ಜಾಸ್ತಿಯಾಗಿ ಮೇಲು ಜಾತಿಯವರ ಅನುಕರಣೆಗೆ ತೊಡಗುತ್ತಾರೆ. ತಮ್ಮ ಜಾತಿಯ ಆಚಾರ ವಿಚಾರಗಳನ್ನು ಮರೆತು ಅವರ ಆಚಾರಗಳನ್ನು ಅನುಸರಿಸುವ ಎಡಬಿಡಂಗಿ ಅವಸ್ಥೆಯನ್ನು ತಲುಪುತ್ತಾರೆ. ಇಲ್ಲಿಯೂ ಸಲ್ಲ ಅಲ್ಲಿಯೂ ಸಲ್ಲ ಎಂಬ ಈ ಅವಸ್ಥೆ 'ಸಾಂಸ್ಕೃತಿಕ ಆತ್ಮಹತ್ಯೆಗೆ' ಅವಕಾಶ ನೀಡುತ್ತದೆ"[೨೨]

ಲಿಂಗಪೂಜೆಯ ಪ್ರಾಚೀನತೆ, ಧರ್ಮ, ದೇವರಕಲ್ಪನೆ, ಅತೀ ಪ್ರಾಚೀನ ಕಾಲದ ಕಲ್ಲು ಪೂಜೆ, ಚಿಕ್ಕಬರ್ಗೀಯ ಜೇನುಕುರುಬರ ವಾಸ, ಉಡುಪು, ಆಹಾರ ದೇವರು ಕರೆಯುವ, ಆಚಾರ-ವಿಚಾರ ಮೊದಲಾದ ವಿಷಯಗಳನ್ನು ವಿವರಿಸಲಾಗಿದೆ. ಹಾಲುಮತದ ಪೌರಾಣಿಕ ಹಿನ್ನೆಲೆಯ ಉಗಮ, ಸಂಪ್ರದಾಯಗಳಾದ ಮದುವೆ ಒಪ್ಪುಮಾತು, ಚಪ್ಪರದಟ್ಕಿ, ವಿಳ್ಳೇಶಾಸ್ತ್ರ, ಬಳೆಶಾಸ್ತ್ರ, ಎಣ್ಣೆ-ಅರಿಷಿಣಶಾಸ್ತ್ರ, ಕುಟ್ಟುವಶಾಸ್ತ್ರ, ಸರಕ್ಕಿಶಾಸ್ತ್ರ, ಕಂಕಣ ಕಟ್ಟುವ, ಬಿಂಕ ಬಿಡಿಸುವ(ಸುರಿಗೆ ಸುತ್ತಿ ನಿವಾಳಿ ತೆಗೆಯುವ), ಎದುರುಗೊಳ್ಳುವ, ಹೆಣ್ಣನ್ನು ಧಾರೆ ಎರೆಯುವ, ಬುವ್ವದ ಶಾಸ್ತ್ರ, ಶವಸಂಸ್ಕಾರ, ಹಿರಿಯ ಪೂಜೆ, ದೇವ್ರ ಕೇಳುವ ಪೂಜೆ, ತಲೆಯ ಮೇಲೆ ತೆಂಗಿನಕಾಯಿ ಒಡೆಯುವ ಉತ್ತರ ಆರ್ಕಾಟನ ಆಚರಣೆ, ಮೂಲ ಬೀರದೇವರ (ಐದು ಕಲ್ಲುಗಳ) ವಿವರ, ಶೈವ ಧರ್ಮವು, ವೀರಶೈವ ಧರ್ಮದ ಪ್ರಭಾವಕ್ಕೆ ಒಳಗಾದ ಹೀಗೆ ಹಲವಾರು ವಿಶೇಷ ಸಂಗತಿಗಳನ್ನು ವಿವರಿಸಲಾಗಿದೆ. ಅಂತ್ಯದಲ್ಲಿ ಅಕ್ಕಿಪಡಿ, ಉಂಗುರುದಾರ, ಉಂಗುರದ ಶಾಸ್ತ್ರ, ಗುಳ್ಳು ಹಾಕುವ ಚಳೇವು, ಚಟ್ಟ, ಜಾಗರ ಪೂಜೆ, ತಣೆಗೆ ಬಡಿಯುವ, ತಲೆಕೊಳ್ಳಿ ಹಿಡಿಯುವ, ಕೊಳ್ಳೆಗಾಲದ ಪೂಜಾರಿ ತಮಡಪ್ಪ,

ತೊಟ್ಟಿಲು ತೂಗುವ, ದುಬ್ಬಿನ ಹುಡಿಸುವ, ಐರಣಿ ತರುವ ಸಮಯದಲ್ಲಿ ಮಡಿವಾಳ ದಾರಿಯುದ್ದಕ್ಕೂ ಬಟ್ಟೆಹಾಸುವ (ನಡೆಮಡಿ) ಆಚರಣೆ, ಬಾಗಿಲು ತಡೆಯುವ, ಬಾಗಿಲು ಭತ್ತ, ವಿಳ್ಯ ಹಂಚುವ ಮೊದಲಾದ ಟಿಪ್ಪಣಿಗಳೊಂದಿಗೆ ದ್ರಾವಿಡರ ನರಬಲಿಯಂಥ ವಿಶೇಷ ಆಚರಣೆಯನ್ನು ಈ ಕೃತಿ ಪರಿಚಯಿಸುತ್ತದೆ. ಹೀಗೆ ಕುರುಬ ಸಂಸ್ಕೃತಿಯ ಸಂಪ್ರದಾಯ ಆಚರಣೆಗಳ ಸ್ವರೂಪವನ್ನು ದಾಖಲಿಸುವಲ್ಲಿ ಈ ಕೃತಿಯ ಮಹತ್ವ ಹೆಚ್ಚಿದೆ.

೨. ಮೇಷ ವಿಜಯ - ಎಂ.ಕರಿಯಪ್ಪ (೨೦೦೧)

ಎಂ.ಕರಿಯಪ್ಪ ಅವರು ಈ ಕೃತಿಯನ್ನು ೨೦೦೧ರಲ್ಲಿ ರಚಿಸಿ ಸಾಮಾಜಿಕ ಕಳಕಳಿ ಹೊಂದಿದ ರಾಜಕೀಯ ಧೀಮಂತ ವ್ಯಕ್ತಿ ದಿ.ದೇವರಾಜ ಅವರಿಗೆ ಸಮರ್ಪಿಸಿದ್ದಾರೆ. ೨೮೫ ಪುಟಗಳಲ್ಲಿ ಶಿಕ್ಷಣ ಮತ್ತು ಉದ್ಯೋಗ ರಂಗದಲ್ಲಿ ಕುರುಬರ ಪಾತ್ರ, ಕರ್ನಾಟಕ ಕುರುಬ ಜನಾಂಗದ ಪಕ್ಷಿನೋಟ, ಭಾರತದಾದ್ಯಂತ ಕುರುಬರ ವ್ಯಾಪ್ತಿ ಹೀಗೆ ವಿವರಗಳನ್ನು ಈ ಕೃತಿಯು ಹೊಂದಿದೆ. ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಚಿಕ್ಕಮಗಳೂರು, ಕೊಡಗು, ಬೆಂಗಳೂರು, ಕೋಲಾರ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಬೆಳಗಾಂವ, ಧಾರವಾಡ, ಗದಗ, ಹಾವೇರಿ, ಬಿಜಾಪುರ, ಬಾಗಲಕೋಟೆ, ಗುಲಬರ್ಗಾ, ಬೀದರ, ರಾಯಚೂರು, ಕುಷ್ಟಗಿ, ಬಳ್ಳಾರಿ ಮೊದಲಾದ ಜಿಲ್ಲೆಗಳ ರಾಜಕೀಯ ಪ್ರಾತಿನಿಧ್ಯದ ಪಕ್ಷಿನೋಟವನ್ನು ದಾಖಲಿಸಲಾಗಿದೆ. ಕ್ಷೇತ್ರವಾರು, ಲೋಕಸಭಾ ಚುನಾವಣಾ ವಿಶ್ಲೇಷಣೆ, ಚುನಾಯಿತ ಪ್ರತಿನಿಧಿಗಳ ವ್ಯಕ್ತಿ ವಿವರ, ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿ ಪರ ಮತ್ತು ವಿರೋಧದ ಕಾರಣಗಳನ್ನು ಅಂಕಿಅಂಶಗಳೊಂದಿಗೆ ಚರ್ಚಿಸಲಾಗಿದೆ. ಜೊತೆಗೆ ಫಕೀರಗೌಡ ಪಾಟೀಲ ಹರ್ಲಾಪುರ ಅವರ ಭಾಷಣವನ್ನು ಪ್ರಕಟಿಸಿದ್ದಾರೆ. ಆ ಮೂಲಕ ಕಳೆದ ಶತಮಾನದ ಕುರುಬ ಸಮುದಾಯದ ಸಂಘಟನೆಯ ವಿವರಗಳು ತಿಳಿಯುವಂತೆ ಮಾಡಿದ್ದಾರೆ.

೧೯೫೨ರಿಂದ ೧೯೯೯ರವರೆಗೆ ವಿಧಾನಸಭಾ ಚುನಾವಣೆಯಲ್ಲಿ ವಿಜಯಿಯಾದವರ ಪಟ್ಟಿ, ಈ ವರೆಗಿನ ಸಚಿವರುಗಳು, ವಿವಿಧ ಕ್ಷೇತ್ರಗಳಿಂದ ವಿಧಾನಸಭೆಗೆ ಆಯ್ಕೆಯಾದವರು, ೧೯೫೨ರಿಂದ ೧೯೯೯ರವರೆಗೆ ವಿವಿಧ ಕ್ಷೇತ್ರಗಳಿಂದ ವಿಧಾನಸಭೆಗೆ ಅಭ್ಯರ್ಥಿಗಳು ಸಾಧಿಸಿರುವ ವಿಜಯ ಮತ್ತು ವಿಜಯ ದೊರಕಿಸಿಕೊಟ್ಟ ಕ್ಷೇತ್ರಗಳು, ವಿಧಾನಸಭೆ ಮತ್ತು ವಿಧಾನ ಪರಿಷತ್ತು, ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರ ಜನ್ಮ ದಿನಾಂಕ, ಶಿಕ್ಷಣ ಇತ್ಯಾದಿ ವಿವರಗಳು, ೧೯೫೨ರಿಂದ ೧೯೯೯ರವರೆಗೆ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಚುನಾವಣೆ ಗಳಲ್ಲಿ ಸ್ಪರ್ಧಿಸಿದ ವಿವರಗಳು, ಸ್ವಾತಂತ್ರಪೂರ್ವ ಮತ್ತು ಸ್ವಾತಂತ್ರ್ಯಾನಂತರದ ವಿವಿಧ ಜನಾಂಗದ ಜಾತಿ ಶಿಕ್ಷಣ ಉದ್ಯೋಗ ಮತ್ತಿತರ ವಿವರ, ೧೯೩೧ರ ಜನಗಣತಿ ಆಧಾರದ ಮೇಲೆ ೧೯೬೦ರಲ್ಲಿ ಡಾ.ಆರ್. ನಾಗನಗೌಡ ಅವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯ ವರದಿ, ನ್ಯಾಯಮೂರ್ತಿ ಓ.ಚಿನ್ನಪ್ಪರೆಡ್ಡಿ ಅಧ್ಯಕ್ಷತೆಯ ಮೂರನೆಯ ಹಿಂದುಳಿದ ವರ್ಗಗಳ ಆಯೋಗವು ೧೯೯೦ರಲ್ಲಿ ವಿವಿಧ ಜಾತಿಯ ಆಧಾರದ ಮೇಲಿನ ವಿವರಗಳು, ರಾಜ್ಯದಲ್ಲಿ ಜಾತಿವಾರು ನೌಕರರು ಎ.ಬಿ.ಸಿ.ಡಿ. ವರ್ಗಗಳಲ್ಲಿ ೧-೧೧-೧೯೮೮ ರಂದು

ಇದ್ದಂತ ವಿವರ, ಅಖಿಲ ಭಾರತ ಮಟ್ಟದಲ್ಲಿ ೧೯೪೮ರಲ್ಲಿ ವಿವಿಧ ಸ್ಥರಗಳಲ್ಲಿ ವಿವಿಧ ಜಾತಿಗಳವರು ಶಿಕ್ಷಣ, ಉದ್ಯೋಗ ಮತ್ತಿತರ ರಂಗಗಳಲ್ಲಿ ಪಾಲುದಾರಿಕೆ, ಭಾರತ ಸರಕಾರದ ವಿವಿಧ ಇಲಾಖೆಗಳಲ್ಲಿ ಒ.ಬಿ.ಸಿ ವರ್ಗಗಳ ನೇಮಕಾತಿ ವಿವರ, ರಾಜ್ಯದಲ್ಲಿ ಅನೇಕ ಬಾರಿ ವಿಧಾನಸಭೆ ಹಾಗೂ ಪರಿಷತ್ತಿನ ಸದಸ್ಯರಾಗಿರುವ ವಿವರ ಮೊದಲಾದವುಗಳನ್ನು ಅನುಬಂಧದಲ್ಲಿ ದಾಖಲಿಸಲಾಗಿದೆ.

ಒಟ್ಟಾರೆ ರಾಜಕೀಯ, ಸಾಮಾಜಿಕ, ಸಮಸ್ಯೆಗಳು ಮತ್ತು ಸವಲತ್ತುಗಳ ಅಂಕಿ-ಅಂಶಗಳ ದಾಖಲೆ, ಕ್ಷೇತ್ರಾಧಾರಿತ ಚರ್ಚೆ ಮೊದಲಾದ ವಿಷಯಗಳನ್ನು ಬಹುಮುಖೀ ನೆಲೆಯಲ್ಲಿ ವಿವರಿಸಲಾಗಿದೆ. ಹೀಗೆ ಈ ಕೃತಿಯು ಕುರುಬ ಸಮುದಾಯದ ರಾಜಕೀಯ ಕ್ಷೇತ್ರದ ಹಿನ್ನೆಲೆ ಅಭಿವೃದ್ಧಿ ಮುನ್ನೆಡೆಯಬಹುದಾದ ದಾರಿಗಳು ಮತ್ತು ಸಲಹೆಗಳನ್ನು ಸೂಚಿಸಲಾಗಿದೆ.

೩. ಹಾಲುಮತ ಕುರುಬ ಜನಾಂಗದ ಅಭಿವೃದ್ಧಿ ಸಮಸ್ಯೆಗಳು- ಪ್ರೊ.ಒಡೆಯರ್ ಡಿ.ಹೆಗ್ಗಡೆ (೨೦೦೩)

ಒಡೆಯರ್ ಡಿ.ಹೆಗ್ಗಡೆಯವರ ೧೨೮ ಪುಟಗಳ ಈ ಲಘು ಕೃತಿಯು ೨೦೦೩ರಲ್ಲಿ ಪ್ರಕಟಗೊಂಡಿದೆ. ಕುರುಬ ಜನಾಂಗದ ಸಂಕ್ಷಿಪ್ತ ಪರಿಚಯ, ಕುರುಬ ಜನಾಂಗದ ಅಭಿವೃದ್ಧಿ ಸಮಸ್ಯೆ, ಕುರುಬ ಜನಾಂಗದ ಅಭಿವೃದ್ಧಿಯ ಆದ್ಯತೆಗಳು, ಹಾಲುಮತ ಕುರುಬ ಜನಾಂಗದ ರಾಜಕೀಯ ಸಂಘಟನೆಯ ಅಗತ್ಯ ಮತ್ತು ಮಹತ್ವ, ಅಂತ್ಯದಲ್ಲಿ ಅನೇಕ ಸಾಹಿತಿಗಳ ಅಭಿಪ್ರಾಯಗಳನ್ನು ಈ ಕೃತಿಯಲ್ಲಿ ಗಮನಿಸಬಹುದು.

ಒಟ್ಟಾರೆ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಪ್ರೇರಣೆ ನೀಡುವ ಅಂಶಗಳು, ಪರಂಪರಾನುಗತವಾದ ಉದ್ಯೋಗಗಳನ್ನು ಆಧುನಿಕಗೊಳಿಸುವ, ವಿವಿಧ ಉಪಕಸಬುಗಳನ್ನು ಸೃಷ್ಟಿಸುವ ಆದಾಯ ಮೂಲವಾಗಿ ಪರಿವರ್ತಿಸುವ, ಅರ್ಥಶಾಸ್ತ್ರದ ಸಂಗತಿಗಳು, ಅಸಂಘಟಿತ ಜನಾಂಗಿಕ ಬದುಕಿನ ಏಳು-ಬೀಳುಗಳು, ಆರ್ಥಿಕಾಭಿವೃದ್ಧಿಯ ಸಮಸ್ಯೆಗಳು -ಹೀಗೆ ಈ ಜನಾಂಗದ ಅಭಿವೃದ್ಧಿಯ ಸಮಸ್ಯೆಗಳು, ಹೀಗೆ ಕುರುಬ ಜನಾಂಗದ ಅಭಿವೃದ್ಧಿಯ ಅನೇಕ ವಿಷಯಗಳನ್ನು ಹೊಸ ದಿಕ್ಕಿನಲ್ಲಿ ಚರ್ಚೆಗೆ ಒಳಪಡಿಸುವಲ್ಲಿ ಈ ಕೃತಿ ಯಶಸ್ವಿಯಾಗಿದೆ.

೪. ಕವಲು ದಾರಿಯಲ್ಲಿ ಕರ್ನಾಟಕದ ಕುರುಬ ಜನಾಂಗ -ಪ್ರೊ.ಒಡೆಯರ್ ಡಿ.ಹೆಗ್ಗಡೆ (೨೦೦೩)

ಜನಾಂಗದ ಸಾಮಾಜಿಕ, ರಾಜಕೀಯ, ಆರ್ಥಿಕ ವಿಷಯಗಳ ಪರಿಚಯಾತ್ಮಕ ಕೃತಿಯಾಗಿದೆ. ೮೪೦ ಪುಟಗಳ ವ್ಯಾಪ್ತಿ ಪಡೆದಿದ್ದು ೨೦೦೩ರಲ್ಲಿ ಪ್ರಕಟಗೊಂಡಿದೆ. ಈ ಕೃತಿಯು ಮುಖ್ಯವಾಗಿ ಎರಡು ಭಾಗಗಳನ್ನು ಹೊಂದಿದೆ. ಮೊದಲ ಭಾಗವು 'ಹಾಲುಮತ ಕುರುಬ ಜನಾಂಗದ ಅಭಿವೃದ್ಧಿ ಸಮಸ್ಯೆಗಳು' ಎಂಬ ಪ್ರೊ. ಒಡೆಯರ್ ಡಿ.ಹೆಗ್ಗಡೆಯವರ ಮೊದಲ ಕೃತಿಯನ್ನು ಪುನಃ ಈ ಕೃತಿಯಲ್ಲಿ ಅಳವಡಿಸಲಾಗಿದೆ. ಅದನ್ನು ಈ ಮುಂಚೆ ಪರಿಚಯಿಸಲಾಗಿದೆ. ಎರಡನೆಯ 'ಹಾಲುಮತ ರತ್ನಗಳು' ಎಂಬ ಶೀರ್ಷಿಕೆಯಲ್ಲಿ ಕುಲಬಾಂಧವರ ಪರಿಚಯ ಮತ್ತು ವಿಷಯ ಸ್ಪಷ್ಟತೆಗಾಗಿ ಮತಬಾಂಧವರ ಛಾಯಾಚಿತ್ರಗಳನ್ನು ದಾಖಲಿಸಲಾಗಿದೆ. ರಾಜಕೀಯ ನಾಯಕರು,

ಮಂತ್ರಿಗಳು, ಶಾಸಕರು, ಸಂಸದರು, ಸಾಹಿತಿಗಳು, ವೈದ್ಯರು, ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಮತ್ತು ವಿದ್ವಾಂಸರು, ಶಾಲಾ ಶಿಕ್ಷಕರು, ಶಿಕ್ಷಣಾಧಿಕಾರಿಗಳು, ಇಂಜಿನಿಯರ್‌ಗಳು, ಗುತ್ತಿಗೆದಾರರು, ಸರ್ಕಾರಿ ಅಧಿಕಾರಿಗಳು, ವಕೀಲರು, ಜಿಲ್ಲೆ ತಾಲೂಕು ಮಟ್ಟದ ಸಹಕಾರಿಗಳು, ರಾಜಕೀಯ ನಾಯಕರು, ರಾಜ್ಯ-ರಾಷ್ಟ್ರಮಟ್ಟದ ಕ್ರೀಡಾಪಟುಗಳು, ಪತ್ರಕರ್ತರು, ಹವ್ಯಾಸಿ ಛಾಯಾಗ್ರಾಹಕರು, ಸಮಾಜಸೇವೆ, ಯುವಶಕ್ತಿ ಮೊದಲಾದವರ ವಿವರಗಳನ್ನು ಸಂಕ್ಷಿಪ್ತದಲ್ಲಿ ಸಂಗ್ರಹಿಸಲಾಗಿದೆ. ಹೀಗಾಗಿ ಸಮಕಾಲೀನ ಕುರುಬ ಸಮಾಜದ ಸ್ವರೂಪವನ್ನು ತಿಳಿದುಕೊಳ್ಳಲು ಈ ಕೃತಿ ನಮಗೆ ನೆರವಾಗುತ್ತದೆ.

೫. ಅಹಿಲ್ಯಾಬಾಯಿ ಹೋಳಕರ - ಚಂದ್ರಕಾಂತ ಬಿಜ್ಜರಗಿ (೨೦೦೩)

ಕುರುಬರ ರಾಜಪರಂಪರೆಯಲ್ಲಿ ಹೋಳಕರ ಮನೆತನವೂ ಒಂದು. ಈ ಮನೆತನದಲ್ಲಿ ಅಹಿಲ್ಯಾಬಾಯಿ ಪ್ರಸಿದ್ಧ ರಾಣಿ. ಈ ರಾಣಿಯ ಇತಿವೃತ್ತ ವಿಚಾರದೊಡನೆ ಹೋಳ್ಕರ ಮನೆತನದ ಸಮಗ್ರ ಇತಿಹಾಸವನ್ನು ಪರಿಚಯಿಸಲು ಚಂದ್ರಕಾಂತ ಬಿಜ್ಜರಗಿ ಅವರು 'ಅಹಿಲ್ಯಾಬಾಯಿ ಹೋಳಕರ' ಎಂಬ ಕೃತಿಯನ್ನು ರಚನೆಮಾಡಿದ್ದಾರೆ. ೪೨೪ ಪುಟಗಳ ಈ ಕೃತಿಯು ಮೂವತ್ತಾರು ವಿಭಾಗಗಳನ್ನು ಹೊಂದಿದೆ. ಕೃತಿಯನ್ನು ಕುರಿತು ಮುನ್ನುಡಿಯಲ್ಲಿ ಮಲ್ಲಿಕಾ ಘಂಟಿ ಅವರು ಹೀಗೆ ಅಭಿಪ್ರಾಯಪಟ್ಟಿದ್ದಾರೆ. "....ಮಹಿಳಾ ಚರಿತ್ರೆ ಬರೆಯುವವರಿಗೆ ಮತ್ತು ಬದುಕಿನ ಧಾವಂತಗಳಲ್ಲಿ ನಲುಗಿ ಹೋಗಿರುವ ಮಹಿಳೆಯರಿಗೆ ಆತ್ಮಗೌರವ, ಬದುಕಿನ ಬಗೆಗೆ ಪ್ರೀತಿ, ಪ್ರಯತ್ನಶೀಲತೆಯನ್ನು ಈ ಕೃತಿ ತಂದುಕೊಡುತ್ತದೆ."[೨೩] ಅಧ್ಯಯನಕ್ಕೆ ಪೂರಕವಾಗಿ ಇಂದೂರ ಮನೆತನಕ್ಕೆ ಸಂಬಂಧಿಸಿದ ಅನೇಕ ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ.

ಮಲ್ಹಾರರಾವ ಹೋಳಕರ, ಅಹಲ್ಯಾಬಾಯಿಯ ಜನ್ಮ ಮತ್ತು ಬಾಲ್ಯ, ವಿವಾಹ, ಶಿಕ್ಷಣ, ದಾಂಪತ್ಯ, ರಾಜಕುಮಾರ, ಖಂಡೇರಾವನ ಮೃತ್ಯು, ರಾಜಕುಮಾರ ಮಾಲೇರಾಯನ ಆಳ್ವಿಕೆಯ ಮಹತ್ವ ಘಟನೆಗಳು, ಹೀಗೆ ಚರಿತ್ರೆಯ ಪುಟಗಳಲ್ಲಿ ಹಾಲುಮತದ ಮಹಿಳೆಯ ಸಾಧನೆಯನ್ನು ಇಲ್ಲಿ ದಾಖಲಿಸಲಾಗಿದೆ. ಇಂದೋರಿನ ಹೋಳ್ಕರ ಮನೆತನದ ಕುರಿತು ಕವಿ ಇತಿಹಾಸಕಾರರ ಅಭಿಪ್ರಾಯ, ರಾಣಿಯ ಖಾಸಗಿ ಆಸ್ತಿ ಆಡಳಿತ ವ್ಯವಸ್ಥೆ, ದಾನ -ಧರ್ಮಗಳು, ದಾಸೋಹ, ಇಚ್ಛಾಭೋಜನ, ನೂತನ ಮಂದಿರಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ, ತವರೂರಿನಲ್ಲಿ ನಿರ್ಮಿಸಿದ ಮಂದಿರಗಳು, ನಾಸಿಕ ಪ್ರದೇಶದ ಮಂದಿರಗಳು, ಜೇಜೂರಿ ಕ್ಷೇತ್ರದ ಮಂದಿರಗಳು, ರಾಣಿ ನಿರ್ಮಿತ ಇತರ ಮಂದಿರಗಳು, ಪೀಠ ಮತ್ತು ದರ್ಗಾಗಳಿಗೆ ದತ್ತಿ, ಜ್ಯೋತಿರ್ಲಿಂಗಗಳ ಜೀರ್ಣೋದ್ಧಾರ, ಕೆರೆ, ಬಾವಿ, ಕುಂಡಗಳು, ರಾಣಿ ನಿರ್ಮಿತ ರಾಜವಾಡೆ ಮತ್ತು ಸೇತುವೆಗಳು, ಲೋಕಕಲ್ಯಾಣ ಕಾರ್ಯಗಳು, ರಾಣಿಯ ಅಂತಿಮ ದಿನಗಳು ಮೊದಲಾದ ವಿಷಯಗಳ ಸಮಗ್ರ ಪರಿಚಯವನ್ನು ಈ ಕೃತಿ ಮಾಡಿಕೊಡುತ್ತದೆ.

ಕೇವಲ ಭಾವನಾತ್ಮಕ ಮತ್ತು ಪೌರಾಣಿಕ ನೆಲೆಯ ಚರಿತ್ರೆಯಲ್ಲಿ ಗಟ್ಟಿತನ ಉಳಿಸಲು ಸಾಧ್ಯವಿಲ್ಲ. ಆದರೆ ಬಿಜ್ಜರಗಿ ಅವರ ಕೃತಿಯು ಸಂಶೋಧನಾತ್ಮಕ, ವೈಜ್ಞಾನಿಕ ನೆಲೆಗಟ್ಟಿನಲ್ಲಿ ರಚನೆಗೊಂಡಿದುದನ್ನು ಅವರ ಪರಾಮರ್ಶನ ಆಕರಗಳಿಂದ, ಕೈಕೊಂಡ ಕ್ಷೇತ್ರಕಾರ್ಯಗಳಿಂದ ಗುರುತಿಸಬಹುದು. ಸರಳ ನಿರೂಪಣೆಯ ಸ್ತ್ರೀಶಕ್ತಿ,

ಜಾಣ್ಮೆ, ಚಾಕಚಕ್ಯತೆ, ಮೌಢ್ಯ ನಿವಾಕರಣೆ, ಸಮಯೋಚಿತ ನಿರ್ಧಾರ, ಧಾರ್ಮಿಕ ಮತ್ತು ಸಾಮಾಜಿಕ ಕಲ್ಯಾಣ, ಸೇವಾ ಮನೋಭಾವ ಮೊದಲಾದ ಗುಣಗಳ ಅಹಿಲ್ಯಾಬಾಯಿ ಚರಿತ್ರೆ ಇಂದಿನ ಕ್ರಿಯಾಶೀಲ ಯುವ ಜನಾಂಗಕ್ಕೆ ಮುಖ್ಯವಾಗಿ ಯುವತಿಯರಿಗೆ ದಾರಿದೀಪವಾಗುವಲ್ಲಿ ಸಂದೇಹವಿಲ್ಲ.

೬. ಹಾಲುಮತ ವ್ಯಾಸಂಗ-೧ ಡಾ. ಎಫ್.ಟಿ.ಹಳ್ಳಿಕೇರಿ (೨೦೦೯)

ಅಲಕ್ಷ್ಯಕ್ಕೆ ಒಳಗಾದ ಸಂಸ್ಕೃತಿಯನ್ನು ಮತ್ತೆ ಕಟ್ಟಿಕೊಡುವ ಕಾರ್ಯ ಇಂದಿನ ವಿಶ್ವವಿದ್ಯಾಲಯಗಳಲ್ಲಿ ಭರದಿಂದ ಸಾಗುತ್ತಿದೆ. ಜಾಗತೀಕರಣ, ಅಭಿವೃದ್ಧಿಯ ವಿರುದ್ಧ ಚಲಿಸಿ ದೇಸೀಯ ಜಾನಪದ ಕಲೆ, ಸಾಹಿತ್ಯ, ಆಚರಣೆ ಸಂಪ್ರದಾಯಗಳನ್ನು ದಾಖಲಿಸುವ, ಹುಡುಕುವ, ವಿಡಿಯೋ ಆಡಿಯೋಗಳಲ್ಲಿ ಸೆರೆಹಿಡಿಯುವ ಅಗತ್ಯತೆ ತುಂಬಾ ಇದೆ. ಇದಕ್ಕೆ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಹೊರತಾಗಿಲ್ಲ. ಅನೇಕ ಅಧ್ಯಯನ ಪೀಠಗಳನ್ನು ಸ್ಥಾಪಿಸಿ ಜನಾಂಗೀಯ ಅಧ್ಯಯನಕ್ಕೆ ಅಣಿಗೊಳಿಸಿದೆ. ಅಂಥವುಗಳಲ್ಲಿ ಪ್ರಾಚೀನ ಪರಂಪರೆಯ ಹಾಲುಮತದ ಅಧ್ಯಯನದ ಅನುಕೂಲತೆಗಾಗಿ ೨೦೦೬ರಲ್ಲಿ ಹಾಲುಮತ ಅಧ್ಯಯನ ಪೀಠ ಸ್ಥಾಪನೆಯಾಗಿದೆ. ಸಂಚಾಲಕರಾದ ಡಾ. ಎಫ್.ಟಿ.ಹಳ್ಳಿಕೇರಿ ಅವರ ಅನೇಕ ಉದ್ದೇಶ, ಗುರಿ ಕನಸುಗಳನ್ನು ಹೊತ್ತು ಹಲವಾರು ಯೋಜನೆಗಳಿಂದ ಗುರಿ ತಲುಪುವ ಪ್ರಯತ್ನ ಶ್ಲಾಘನೀಯವಾದುದು. ಈವರೆಗೆ (೨೦೧೦) ಮೂರು ಹಾಲುಮತ ಸಮ್ಮೇಳನಗಳನ್ನು ಗದಗ, ಚಳ್ಳಕೆರೆ ಮತ್ತು ತುಮಕೂರಿನಲ್ಲಿ ಯಶಸ್ವಿಯಾಗಿ ನಡೆಸಲಾಗಿದೆ. ಅಲ್ಲದೆ ಹಾಲುಮತ ಸಾಹಿತ್ಯ ಸಂಸ್ಕೃತಿ ವಿಶೇಷ ಉಪನ್ಯಾಸ ಕಾರ್ಯಕ್ರಮಗಳು, ಡೊಳ್ಳು ತರಬೇತಿ ಶಿಬಿರಗಳನ್ನು ಏರ್ಪಡಿಸಿ ಮರೆತು ಹೋದ ಸಂಸ್ಕೃತಿಯನ್ನು ದಾಖಲಿಸುವಲ್ಲಿ ಈ ಪೀಠ ಮುನ್ನಡೆದಿದೆ.

ಹಾಲುಮತ ವ್ಯಾಸಂಗ-೧ ಕೃತಿಯು ೨೦೦೯ರಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಪ್ರಕಟಗೊಂಡಿದೆ. ಗದುಗಿನಲ್ಲಿ ಏರ್ಪಡಿಸಿದ ಹಾಲುಮತ ಸಂಸ್ಕೃತಿ ಸಮ್ಮೇಳನದಲ್ಲಿ ಮಂಡಿಸಲಾದ ಸಂಪ್ರಬಂಧಗಳ ಸಂಕಲನವಿದು. ಕಾವ್ಯ ಪುರಾಣಗಳು, ದಾಖಲೆಗಳು, ಮೌಖಿಕ ಆಕರಗಳು, ಪುರಾತತ್ತ್ವ, ಭಾಷಿಕ ಆಕರಗಳು ಎಂಬ ವಿಷಯಗಳನ್ನು ಹಾಲುಮತ ಅಧ್ಯಯನದ ಆಕರಗಳು ಎಂಬ ಭಾಗದಲ್ಲಿ ವಿವರಿಸಲಾಗಿದೆ. ಹಾಲುಮತ ಸಾಂಸ್ಕೃತಿಕ ವೀರರು ಎಂಬ ಭಾಗವು ಬೀರಲಿಂಗೇಶ್ವರ, ಮಾಳಿಂಗರಾಯ, ಮೈಲಾರಲಿಂಗೇಶ್ವರ, ವೀರಗೊಲ್ಲಾಳ ಮುಂತಾದವರ ಚರ್ಚೆಯನ್ನು ಹೊಂದಿದೆ. ರೇವಣಸಿದ್ಧೇಶ್ವರ, ಅಮೋಘಸಿದ್ಧೇಶ್ವರ, ಸಿದ್ಧರಾಮೇಶ್ವರ, ಇಟಗಿ ಭೀಮಾಂಬಿಕೆ ಹಾಲುಮತ ದೈವಗಳನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ. ಸಹಕಾರ ಚಳುವಳಿಯ ಹರಿಕಾರ ಸಿದ್ಧನಗೌಡ ಪಾಟೀಲ, ಸಮಾಜ ಸುಧಾರಕ ಗವಿಸಿದ್ದಪ್ಪ ಬೆಳವಡಿ, ಶೈಕ್ಷಣಿಕ ಸುಧಾರಕ ಸಿದ್ದಪ್ಪಯ್ಯ ಒಡೆಯರ, ಸ್ವಾತಂತ್ರ್ಯ ಹೋರಾಟಗಾರ ಕೂಗನೂರು ನಿಂಗಪ್ಪ ಅವರ ಸಾಧನೆಯನ್ನ ಭಾಗ ನಾಲ್ಕರಲ್ಲಿ ಪರಿಚಯಿಸಲಾಗಿದೆ. ಅಂತ್ಯದಲ್ಲಿ ಜ್ಯೋತಿ ಹೊಸೂರ ಅವರ ಸಾಹಿತ್ಯ ಸಾಧನೆಯನ್ನು ಪರಿಚಯಿಸಲಾಗಿದೆ. ಒಟ್ಟಾರೆ ಹಾಲುಮತದ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕ ಆಕರಗಳನ್ನು ಒದಗಿಸುವ ಕೃತಿ ಇದಾಗಿದೆ.

೭. ಹಾಲುಮತ ವ್ಯಾಸಂಗ-೨ - ಡಾ. ಎಫ್.ಟಿ.ಹಳ್ಳಿಕೇರಿ (೨೦೧೦)

ಚಳ್ಳಕೆರೆಯಲ್ಲಿ ನಡೆದ ಎರಡನೆಯ ಹಾಲುಮತ ಸಂಸ್ಕೃತಿ ಸಮ್ಮೇಳನದಲ್ಲಿ ಮಂಡಿತವಾದ ಸಂಪ್ರಬಂಧಗಳ ಸಂಪುಟ 'ಹಾಲುಮತ ವ್ಯಾಸಂಗ-೨, ೨೦೧೦ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಿಸಲಾಗಿದೆ. ಆರು ಭಾಗಗಳನ್ನೊಳಗೊಂಡ ಈ ಸಂಪುಟದಲ್ಲಿ ಸಮ್ಮೇಳನದ ಉದ್ಘಾಟನೆ ಕಾರ್ಯಕ್ರಮದ ವಿವರ, ಕುರುಬರ ಒಳಪಂಗಡಗಳು, ಚಿತ್ರದುರ್ಗ ಪರಿಸರದ ಕುರುಬರ ಸಂಸ್ಕೃತಿ, ವಿಶೇಷ ಉಪನ್ಯಾಸ, ಸಮಾರೋಪ ಭಾಷಣ ಎಂಬ ಐದು ಭಾಗಗಳಿವೆ. 'ಕುರುಬರ ಒಳಪಂಗಡಗಳು' ಹೆಸರಿನ ಎರಡನೆಯ ಭಾಗ ಈ ಸಂಪುಟದ ವಿಶೇಷತೆಯಾಗಿದೆ.

ಪ್ರಾಚೀನ ಪರಂಪರೆಯನ್ನು ಹೊಂದಿದ ಹಾಲುಮತ ಸಮುದಾಯದಲ್ಲಿ ಹಲವಾರು ಉಪಪಂಗಡಗಳಿವೆ. ಕಾಡುಕುರುಬರು, ಅಲೆಮಾರಿ ಕುರುಬರು, ಹತ್ತಿಕಂಕಣ, ಉಣ್ಣೆಕಂಕಣ, ಗವಳಿಗರು, ಹಂಡೆ ಕುರುಬರು ಮೊದಲಾಗಿ ೧೭ ಉಪಪಂಗಡಗಳನ್ನು ಕುರಿತಾಗಿ ಚರ್ಚಿಸಲಾಗಿದೆ. ಇದು ಈ ಸಂಪುಟದ ಬಹುಮುಖ್ಯ ಭಾಗ.

ಕಾಡು ಕುರುಬರು ಪದ ನಿಷ್ಪತ್ತಿ, ಜನಸಂಖ್ಯೆ, ವಾಸ್ತವ್ಯ, ಅಲೆಮಾರಿ ಕುರುಬರು- ವಲಸೆಗೆ ಕಾರಣ ಗುರುತಿಸುವಿಕೆ, ಗುಡಾರ, ಆದಾಯ ಕುರಿತಬ್ಬುವಿಕೆ, ಗೊಬ್ಬರದ ಹಿಕ್ಕೆ ಮಹತ್ವ, ಹಬ್ಬ -ಆಚರಣೆಗಳು, ಒಡೆಯರು ಪದದ ಅರ್ಥ, ಗುರು ಪರಂಪರೆ, ಸಿದ್ಧರಾಮೇಶ್ವರ ಸಂಪ್ರದಾಯ, ಅಮೋಘಸಿದ್ಧ ಸಂಪ್ರದಾಯ, ಗುರು ಒಡೆಯರುಗಳ ಆಚರಣೆಗಳು, ಸಾಂಸ್ಕೃತಿಕ ಶಿಷ್ಟಾಚಾರಗಳು, ಒಡೇರಮ್ಮನ ಸಾಮಾಜಿಕ ಸ್ಥಾನಮಾನ, ಒಡೆಯರ ವಿಭೂತಿಗಟ್ಟಿ, ಒಡೆಯರ ಹೇಳಿಕೆಗಳು, ಗುರು ಒಡೆಯರು ಮತ್ತು ಆಧುನಿಕ ಪರಂಪರೆ ಮೊದಲಾದ ವಿಷಯಗಳನ್ನು ವಿವರಿಸಲಾಗಿದೆ. ಗವಳಿಗರ ಕುರಿತಾಗಿ -ಮೂಲ, ಭೌಗೋಳಿಕ ವ್ಯಾಪ್ತಿ, ಚರಿತ್ರೆಯ ಪುಟಗಳಲ್ಲಿ ಗವಳಿಗರು, ಬೆಡಗುಗಳು, ವೇಷಭೂಷಣ, ಊಟೋಪಚಾರ, ಉದ್ಯೋಗ, ಕೌಟುಂಬಿಕ ವ್ಯವಸ್ಥೆ, ಆಚರಣೆ ಸಂಪ್ರದಾಯಗಳು, ಆರ್ಥಿಕ ಪರಿಸ್ಥಿತಿ, ಶೈಕ್ಷಣಿಕ ಸಂಘಟನೆ ಸೌಲಭ್ಯಗಳನ್ನು ಚರ್ಚಿಸಲಾಗಿದೆ. ಹೆಗ್ಗಡೆಗಳ ಮೂಲ ಮತ್ತು ಹಂಚಿಕೆ, ಹೆಗ್ಗಡೆಗಳ ಜನಾಂಗಿಕ ಮೂಲ, ಜನಪದ ವಿಶ್ಲೇಷಣೆ, ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನ, ಶಿಕ್ಷಣ, ಮತ್ತು ಆಧುನೀಕರಣ, ಮಹಿಳಾ ಸ್ಥಾನಮಾನ ಇತ್ಯಾದಿ ವಿಷಯಗಳಿಂದ ಒಡೆಯರ ಸಮಗ್ರ ಪರಿಚಯವನ್ನು ಪಡೆಯಬಹುದು. ಗೊಂಡ ಕುರುಬರ ಕುರಿತಾದ ಕರ್ನಾಟಕ ಗೊಂಡ, ರಾಜಗೊಂಡ, ಜಿಲ್ಲಾವಾರು ಜನಸಂಖ್ಯೆ ವಿವರ, ಹಿನ್ನೆಲೆ, ವಲಸೆಯ ನೆಲೆಗಳು, ಸಾಮಾಜಿಕ ರಚನೆ, ಬಂಧುತ್ವ, ದೈವಾರಾಧನೆ, ಇಂಥ ಹಲವಾರು ವಿಷಯಗಳನ್ನು ಹೊಂದಿದೆ. ಕುಡುವೊಕ್ಕಲಿಗರು, ಕುಂಚಿಟಿಗರು, ಗೊಲ್ಲರು, ನೊಣಬರು, ಕ್ರೈಸ್ತ ಕುರುಬರು ಪರಿವರ್ತನೆ ಹೊಂದಲು ಕಾರಣಗಳು, ನಂಬಿಕೆಗಳು, ಬಡತನ, ಶಿಕ್ಷಣ, ಮದುವೆ, ಆಹಾರ, ಕೌಟುಂಬಿಕ ವ್ಯವಸ್ಥೆ, ಜೀವನ, ಶವಸಂಸ್ಕಾರ, ಆರ್ಥಿಕ ಸ್ಥಿತಿಗತಿ ಮೊದಲಾದವನ್ನು ವಿವರಿಸಲಾಗಿದೆ. ಸಾದ

ಕುರುಬರು, ಸಾದಲಿಂಗಾಯತರ ೩೮೦ ಬೆಡಗುಗಳ ಪಟ್ಟಿ, ದಾಸಕುರುಬರು, ಝುಂಡೆ ಕುರುಬರು, ಹೀಗೆ ಒಟ್ಟು ೧೭ ಕುರುಬರ ಒಳಪಂಗಡಗಳನ್ನು ಸಮಗ್ರವಾಗಿ ಪರಿಚಯಿಸಲಾಗಿದೆ.

ಚಿತ್ರದುರ್ಗ ಪರಿಸರದ ಕುರುಬ ಸಮುದಾಯದ ಧಾರ್ಮಿಕ ಸಾಮಾಜಿಕ ಜಾನಪದ ಆರ್ಥಿಕ ಸಂಗತಿಗಳನ್ನು ಮೂರನೆಯ ಭಾಗದಲ್ಲಿ ಅವಲೋಕಿಸಲಾಗಿದೆ. ನಾಲ್ಕನೆಯ ಭಾಗದಲ್ಲಿ ಸಮ್ಮೇಳನಾಧ್ಯಕ್ಷರಾದ ಬ.ಪ.ನಾಯ್ಕರ ಅವರ ಜೀವನ ಸಾಧನೆ ಮತ್ತು ಸಾಹಿತ್ಯ ಕುರಿತು ಸಂಪ್ರಬಂಧವಿದೆ. ಐದನೆಯ ಭಾಗದಲ್ಲಿ ಕರ್ನಾಟದ ವಿಭಿನ್ನ ಜಾತಿ, ಉಪಜಾತಿ, ಬುಡಕಟ್ಟು ಹಾಗೂ ಬೆಡಗುಗಳ ಅಧ್ಯಯನಗಳ ಉದ್ದೇಶ, ಉಪಯುಕ್ತತೆಯನ್ನು ಕುರಿತು ತೀ.ನಂ.ಶಂಕರನಾರಾಯಣ ಅವರ ಚಿಂತನಗಳು ಕುತೂಹಲಕಾರಿಯಾಗಿವೆ.

ಒಟ್ಟಿನಲ್ಲಿ ಹಾಲುಮತದ ಒಳಪಂಗಡಗಳ ಅಧ್ಯಯನಕ್ಕೆ ಬಹುಮುಖ್ಯವಾದ ಆಕರಗ್ರಂಥ ಇದಾಗಿದೆ. ಇಲ್ಲಿನ ಪ್ರತಿಯೊಂದು ಒಳಪಂಗಡಗಳ ಕುರಿತ ಲೇಖನಗಳು ವಿಸ್ತೃತವಾದ ಅಧ್ಯಯನಕ್ಕೆ ಮಾರ್ಗಸೂಚಿಯಾಗಿವೆ. ಹೀಗಾಗಿ ಕುರುಬರ ಒಳಪಂಗಡಗಳ ಕುರಿತಾದ ಸಮಗ್ರಕೃತಿ ಎಂಬ ಕೀರ್ತಿಗೆ ಈ ಸಂಪುಟ ಭಾಜನವಾಗಿದೆ.

೮. ಹಾಲುಮತ ಅಧ್ಯಯನ-೧ - ಡಾ. ಎಫ್.ಟಿ.ಹಳ್ಳಿಕೇರಿ (೨೦೧೦)

'ಹಾಲುಮತ ಅಧ್ಯಯನ-೧' ಎಂಬ ಕೃತಿಯನ್ನು ಹಾಲುಮತ ಅಧ್ಯಯನ ಪೀಠದ ಸಂಚಾಲಕರಾದ ಎಫ್.ಟಿ.ಹಳ್ಳಿಕೇರಿ ಅವರು ೨೦೧೦ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಿಸಿದ್ದಾರೆ.

ಕನ್ನಡ ವಿಶ್ವವಿದ್ಯಾಲಯದ ಹಾಲುಮತ ಅಧ್ಯಯನ ಪೀಠವು ೨೧, ಫೆಬ್ರವರಿ ೨೦೧೦ರಿಂದ ಮಾರ್ಚ್ ೨ರವರೆಗೆ ಬಳ್ಳಾರಿ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ಆಯೋಜಿಸಿದ ಹಾಲುಮತ ಸಾಹಿತ್ಯ ಸಂಸ್ಕೃತಿ ಕುರಿತು ಏಳು ದಿನಗಳ ಕಾಲ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಂಡಿಸಲ್ಪಟ್ಟ ಸಂಪ್ರಬಂಧಗಳ ಸಂಕಲನವಿದು. ಪ್ರಸ್ತುತ ಸಂಪುಟದಲ್ಲಿ ಹಾಲುಮತ ಪರಂಪರೆಯನ್ನು ಪರಿಚಯಿಸುವ ಕಾವ್ಯ ಪುರಾಣಗಳನ್ನು ಅಭ್ಯಾಸ ಮೊದಲ ಭಾಗದಲ್ಲಿ ಅವಲೋಕಿಸಲಾಗಿದೆ. ತಗರ ಪವಾಡ, ಸಿದ್ಧಮಂಕ ಚರಿತೆ, ಜನಪದ ಹಾಲುಮತ ಮಹಾಕಾವ್ಯ, ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ, ಮಾಳಿಂಗರಾಯನ ಕಾವ್ಯ, ಚೆನ್ನಬಸವ ವಿರಚಿತ ಹಾಲುಮತ ಪುರಾಣ, ಮರುಳಸಿದ್ದೇಶ್ವರ ಚರಿತೆ ಮುಂತಾದ ಕಾವ್ಯ ಪುರಾಣಗಳ ಸಮಗ್ರ ಪರಿಚಯವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಎರಡನೆಯ ಭಾಗವು ಹಾಲುಮತ ಸಮಾಜದ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಕುರಿತು ನಡೆಸಿದ ಅಧ್ಯಯನಾತ್ಮಕ ಲೇಖನಗಳನ್ನು ಒಳಗೊಂಡಿದೆ. ಚರಿತ್ರೆಯ ಪುಟಗಳಲ್ಲಿ ಕುರುಬರು, ಕುರುಬರ ಗುರು ಪರಂಪರೆ, ಕುರಿಗಾರರ ಕಾಲಜ್ಞಾನ, ಸಹಕಾರಿ ಪಿತಾಮಹ ಸಿದ್ಧನಗೌಡ ಪಾಟೀಲ, ಹಾಲುಮತ ಸಂಸ್ಕೃತಿ ಕುರಿತಾಗಿ ಶಂಬಾ ಜೋಶಿ ಅವರ ಚಿಂತನೆಗಳು, ಕುರುಬ ಸಮುದಾಯದ ಅಭಿವೃದ್ಧಿ ಕೆಲವು ಸಂಗತಿಗಳನ್ನು ಎರಡನೆಯ ಭಾಗದಲ್ಲಿ ಚರ್ಚಿಸಲಾಗಿದೆ. ಲಿಖಿತ ಮತ್ತು ಮೌಖಿಕ ಪರಂಪರೆಯ ಹಾಲುಮತ ಕಾವ್ಯ ಪುರಾಣಗಳನ್ನು

ಒಂದೆಡೆ ಚರ್ಚೆಗೆ ಒಳಪಡಿಸಿ ಹಾಲುಮತ ಸಾಂಸ್ಕೃತಿಕ ಅಧ್ಯಯನಕ್ಕೆ ಅನುಕೂಲ ಮಾಡಿಕೊಟ್ಟಿರುವುದು ಈ ಸಂಪುಟದ ಮಹತ್ವವಾಗಿದೆ.

೯. ಕುರುಬ ಸಮುದಾಯ ಭಾಷೆ: ಮಾನವ ಭಾಷಾಶಾಸ್ತ್ರ ಅಧ್ಯಯನ - ಡಾ. ಎಸ್.ಎಸ್.ಅಂಗಡಿ (೨೦೦೯)

ಡಾ. ಎಸ್.ಎಸ್.ಅಂಗಡಿಯವರು ಕುರುಬ ಸಮುದಾಯದ ಭಾಷೆ ಎಂಬ ಕೃತಿಯನ್ನು ಮಾನವ ಭಾಷಾಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಮಲ್ಲಾಡಿಹಳ್ಳಿಯ ಆನಂದಕಂದ ಗ್ರಂಥ ಮಾಲೆಯ ಪ್ರಕಾಶನದಿಂದ ಈ ಕೃತಿ ೨೦೦೯ರಲ್ಲಿ ಪ್ರಕಟಗೊಂಡಿದೆ. ೨೬೦ ಪುಟಗಳಿದ್ದು ೧೬ ವಿಭಾಗಗಳಲ್ಲಿ ವಿಸ್ತೃತಗೊಂಡಿದೆ.

ಭಾಷಾ ವಿದ್ವಾಂಸರಾದ ಎಸ್.ಎಸ್.ಅಂಗಡಿಯವರು ತಮ್ಮ ಕೃತಿ ರಚನೆಗೆ ಪ್ರಚೋದನೆ, ಬಾಲ್ಯದ ಪ್ರಭಾವ, ವ್ಯಾಪಕವಾದ ಕ್ಷೇತ್ರಕಾರ್ಯದ ಅನುಭವ, ಕುರುಬ ಸಮುದಾಯದೊಂದಿಗಿನ ಒಡನಾಟ ಇಂಥ ಅನೇಕ ವಿಚಾರಗಳನ್ನು ವಾಚಕರೊಂದಿಗೆ ಮುಕ್ತಮನಸ್ಸಿನಿಂದ ಅರಿಕೆಯಲ್ಲಿ ಹಂಚಿಕೊಂಡಿದ್ದಾರೆ. ಲೇಖಕರು ಈ ಗ್ರಂಥವನ್ನು ಹಾಲುಮತ ಅಧ್ಯಯನದ ಪ್ರವರ್ತಕರಾದ ಶಂಬಾ ಜೋಶಿ ಅವರಿಗೆ ಅರ್ಪಿಸಿ ಕುರುಬ ಸಮುದಾಯವನ್ನು ಕುರಿತು ಹೀಗೆ ಹೇಳಿದ್ದಾರೆ: "ಹಟ್ಟಿಕಾರ ಸಮುದಾಯದ ಅನನ್ಯತೆ ಬಗ್ಗೆ ತಜ್ಞರ ಗಮನಕ್ಕೆ ತಂದವರು ಶಂಬಾ ಅವರೇ. ಪಶುಪಾಲಕರಾದ ಹಟ್ಟಿಕಾರರು ಭಾರತದ ಮೂಲ ನಿವಾಸಿಗಳು ಎಂದು ಅವರು ಹೂಡಿದ ವಾದಗಳು ಗಟ್ಟಿ ಆಧಾರದ ಮೇಲೆ ನಿಂತಿವೆ. ಈ ಗ್ರಂಥವನ್ನು ಅವರಿಗೆ ಅರ್ಪಿಸಿರುವುದು ಮುಖ್ಯ ಕಾರಣ ಅದೇ ಆಗಿದೆ. ಆಯಾ ಕ್ಷೇತ್ರದಲ್ಲಿ ದುಡಿದ ಮಹನೀಯರಿಗೆ ಆ ಕ್ಷೇತ್ರದಲ್ಲಿ ನಿಮ್ಮ ಕೆಲಸವನ್ನು ಮುಂದುವರಿಸಿದ್ದೇವೆ ಎಂದು ಹೇಳುವುದು ಅವರಿಗೆ ತೋರುವ ದೊಡ್ಡ ಗೌರವ."[೨೪]

ಭಾಷೆಯ ಮಾನವಶಾಸ್ತ್ರೀಯ ನೆಲೆ, ಮಾನವ ವಿಕಾಸ ಕ್ರಮದ ನಾಲ್ಕು ಅವಸ್ಥೆಗಳು, ಆಹಾರಕ್ಕಾಗಿ ಅಲೆದಾಡುವ ಬೇಡರು, ಪಶುಗಳನ್ನು ಸಾಕುವ ಸಲುವಾಗಿ ಅಲೆದಾಡುವ ಧನಗರರು, ವೃಕ್ಷ-ವನಸ್ಪತಿಗಳನ್ನು ಬೆಳೆಸುವ ಒಕ್ಕಲಿಗ ಕುಟುಂಬಗಳು, ವ್ಯಾಪಾರ, ಉದ್ಯೋಗ ಮತ್ತು ರಾಜಕಾರಣದ, ಮಾನವನು ಅಲೆಮಾರಿ ಯಾದುದಕ್ಕೆ ಕಾರಣ, ಅವನ ವಸತಿಗಾಗಿ ಹುಟ್ಟಿಕೊಂಡ ಹಟ್ಟಿಯ ವಿವರಗಳನ್ನು ಸವಿಸ್ತಾರವಾಗಿ ವಿವರಿಸಲಾಗಿದೆ.

ಕುರುಬರ ಆಚಾರ-ವಿಚಾರ ದೈವ ಸ್ವಭಾವ, ಕುರುಬರದ್ದೇ ಆದ ಡೊಳ್ಳು ಹಾಡುಗಳು, ಉಗಮ ಭಾಷಾ ಬದಲಾವಣೆ, ಧ್ವನಿರಚನೆ, ಪದರಚನೆಯಲ್ಲಿ ಕಾಣಿಸಿಕೊಂಡ ಪ್ರತ್ಯೇಕ ಉಪಭಾಷೆಗಳ ಹುಟ್ಟು, ಧ್ವನಿ ಪರಿವರ್ತನೆ ಮುಂತಾದವನ್ನು ಉದಾಹರಣೆಗಳ ಮೂಲಕ ದೃಢಪಡಿಸಿದ್ದಾರೆ. ಕುರುಬರ ಸಾಮಾಜಿಕ, ಸಂಸ್ಕೃತಿಕ ಚೌಕಟ್ಟಿನ ಗಾದೆಮಾತುಗಳು, ಒಗಟುಗಳು, ಹಾಲುಮತ ಸಮುದಾಯ ಸಂಸ್ಕೃತಿಯನ್ನು ಹೆಸರುಗಳ ಹಿನ್ನೆಲೆಯಲ್ಲಿ ಗುರುತಿಸುವ (ಬೀರಪ್ಪ, ಸಿದ್ದಮ್ಮ, ಇಟ್ಟಪ್ಪ), ಉತ್ತರ ಕರ್ನಾಟಕ ಕುರುಬರ ಮೇಲೆ ಲಿಂಗಾಯತ ಸಂಸ್ಕೃತಿಯ ಪ್ರಭಾವ, ಕಂಬಳಿ ಮಹತ್ವ, ಹಬ್ಬಗಳು, ಜನಪದ ಕಲೆಗಳಾದ ಸೋಬಾನ ಹಾಡುಗಳು, ಕರಡಿ ಮಜಲು,

ಡೊಳ್ಳು ಕುಣಿತ ಮುಂತಾದವುಗಳ ಕುರಿತು ಸಾಧ್ಯಂತವಾಗಿ ಸಮಾಲೋಚಿಸಲಾಗಿದೆ. ಭಾಷಾಶಾಸ್ತ್ರ, ಸಮಾಜಶಾಸ್ತ್ರ, ಮನಃಶಾಸ್ತ್ರ ಇವುಗಳ ನೆರವಿನಿಂದ ಕರ್ನಾಟಕ ಕುರುಬರ ಭಾಷೆಯನ್ನು ಪರಿಚಯಿಸಲಾಗಿದೆ. ಕಾಡು ಕುರುಬರ ಮತ್ತು ಜೇನು ಕುರುಬರ ರೂಪ, ಬಣ್ಣ, ವಾಸ(ಹಾಡಿ), ಆಹಾರ, ವೃತ್ತಿ ಒಳಾಡಳಿತ ವ್ಯವಸ್ಥೆ, ದೈವತಾರಾಧನೆ, ಪ್ರಾದೇಶಿಕ ಮತ್ತು ಸಾಮಾಜಿಕ ಎಂಬ ಉಪಭಾಷೆಗಳು, ಕನ್ನಡ ತಮಿಳು, ಮಲಯಾಳಂ ಭಾಷೆಗಳ ಮಿಶ್ರಣದಿಂದ ವಿಶಿಷ್ಟವಾಗಿ ಬಳಕೆಯಾಗುವ ನಂಗ ಭಾಷೆ, ಬಂಧುವಾಚಕ ಪದಗಳು ಆಡುರೂಪಗಳು, ಕರ್ನಾಟಕದಲ್ಲಿ ವಾಸಿಸುವ ಕಾಡು ಕುರುಬರ ಭಾಷಾ ಸ್ವರೂಪ (ಪುಟ ೬೮) ಮುಂತಾದವನ್ನು ಉದಾಹರಣೆಯೊಂದಿಗೆ ವಿವರಿಸಲಾಗಿದೆ. ಕಾಡುಕುರುಬರ ಭಾಷಾವ್ಯವಹಾರದ ವ್ಯತ್ಯಾಸ, ಜೇನು ಕುರುಬರ ವೃತ್ತಿ ಸಂಬಂಧಿತ ಪದಗಳ ಚರ್ಚೆಯಲ್ಲಿ ಜೇನು ಕಡಿದಾಗ ಬಳಸುವ ಔಷಧ(ಗಜ್ಜುಗ), ಜೇನುಗೂಡನ್ನು ನೋಡಲು ಮತ್ತು ತೆಗೆಯಲು ಬಳಸುವ ಬಿದಿರು(ಗಳ), ಜೇನುಗಳ ವಾಸನೆ(ತಿಂಗು)ಯಿಂದ ಗೂಡು ಎಲ್ಲಿದೆ ಎಂದು ಪತ್ತೆ ಹಚ್ಚುವ, ಜೇನು ನೆಲಕ್ಕೆ ಬೀಳದಂತೆ ಬುಟ್ಟಿ ಆಕಾರದ ಸಾಧನ(ಜೇನು ತಟ್ಟಿ), ಜೇನು ಕೀಳುವ ಕ್ರಿಯೆ(ಜೇನುಕಳೆ), ಜೇನು ಗೂಡಿನ ಬಳಿ ಕೂಡುವ ಉಪಕರಣ(ಅಟ್ಟಣಗೆ), ಜೇನು ಕುರುಬರ ಪದ, ಕೋಲು ಪದ (ಪುಟ ೭೮) ಮುಂತಾದವನ್ನು ಸವಿಸ್ತಾರವಾಗಿ ದಾಖಲಿಸಿ ಪರಿಚಯಿಸಲಾಗಿದೆ. ಅಲೆಮಾರಿಗಳ ಅಲೆದಾಟದಲ್ಲಿ ಆಯಾ ಪರಿಸರದ ಭಾಷೆ ಕಲಿಯುವ ಪ್ರವೃತ್ತಿ, ಮರಾಠಿ ಪ್ರಭಾವ, ಕುರುಬರ ಹೇಳಿಕೆಗಳನ್ನು ಮನೋಭಾಷಿಕ ವಿಶ್ಲೇಷಣೆಯಿಂದ ಗುರುತಿಸಲಾಗಿದೆ. ಪೀಠಿಕೆ ರೂಪದ ಇಂದ್ರಿಯಾನುಭವ ಸಂವೇದನೆ, ಪ್ರತ್ಯಕ್ಷಾನುಭವ ಇವುಗಳನ್ನು ಉದಾಹರಣೆಯೊಂದಿಗೆ ಸ್ಪಷ್ಟಪಡಿಸಲಾಗಿದೆ.

ಕರಿ ಹೊಲದಾಗ ಬಿಳಿ ಹಾದಿss
ಕಂಚಿ ಮಾರಿ ಬೀರಪ್ಪ
ಕರಿ ಕಂಬಲಿ ಹಾಕೊಂಡ
ಸರೋ ಹೊವನ್ಯಾಗ ಹೊಂಟನಾ
ಇದರ ಬಂದ್ರ ಭರಾ ಇಂಗಿಸ್ತಾನ
ಭಂಡಾರ ಹಿಡಿರಿಲೆ (ಪುಟ ೧೧೭)

ಇಂಥ ಅನೇಕ (ಕುರುಬರ) ಹೇಳಿಕೆಗಳಲ್ಲಿಯ ಬೀರಪ್ಪ ಅಂಬಲಿ, ಭಂಡಾರ ಎನ್ನುವ ಪದಗಳು ಹಾಲುಮತ ಸಂಸ್ಕೃತಿಗೆ ಪೂರಕ ಮಾಹಿತಿಯನ್ನು ಒದಗಿಸುತ್ತವೆ. ಹೇಳಿಕೆಗಳ ಭಾಷಾ ಕೌಶಲ್ಯ, ಪ್ರಾಸ, ಸಂಕ್ಷಿಪ್ತತೆ, ಪದ ರಚನೆಯ ಅರ್ಥ, ಪ್ರದೇಶದ ವ್ಯವಹಾರಿಕ ಕನ್ನಡದ ಆಡುರೂಪಗಳನ್ನು ಉದಾಹರಣೆಯೊಂದಿಗೆ ವಿವರಿಸಲಾಗಿದೆ. ಕುರುಬರ ಹೆಸರುಗಳ ಸಾಮಾಜಿಕ ಭಾಷಾಧ್ಯಯನಗಳಲ್ಲಿ ಸ್ಥಳನಾಮ ಮತ್ತು ವ್ಯಕ್ತಿಗಳನ್ನು ವಯಸ್ಸು ಲಿಂಗ, ಆರ್ಥಿಕ ಸ್ಥಿತಿ ಮುಂತಾದವನ್ನು ವಿಭಿನ್ನ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕುಟುಂಬ ನಾಮಗಳ ಆರು ವರ್ಗೀಕರಣ(ಸ್ಥಳವಾಚಿ, ವೃತ್ತಿವಾಚಿ, ಜಾತಿವಾಚಿ, ವ್ಯಕ್ತಿವಾಚಿ, ವಸ್ತುವಾಚಿ,

ಸಂಕೀರ್ಣ)ಗಳನ್ನು ಉದಾಹರಣೆಯೊಂದಿಗೆ ಅಧ್ಯಯನಕ್ಕೊಳಪಡಿಸಲಾಗಿದೆ. ಕುಟುಂಬನಾಮಗಳ ಬದಲಾವಣೆ, ಕುರುಬರಿಗೆ ಸಂಬಂಧಿಸಿದ ನೆಲೆಗಳನ್ನು ವಿವರಿಸುತ್ತ ಸ್ಥಳನಾಮದ ಮಹತ್ವವನ್ನು ಲೇಖಕರು ಹೀಗೆ ಗುರುತಿಸಿದ್ದಾರೆ: "ಒಂದು ಸಮುದಾಯದ ವಾಸ, ಮೂಢನಂಬಿಕೆ, ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿ ಇವುಗಳ ಬಗೆಗೆ ಮಹತ್ವದ ವಿಚಾರಗಳು, ಅಂದಿನ ಜನರ ವೃತ್ತಿ, ನೈಸರ್ಗಿಕ ಸಂಪತ್ತು, ಭಾಷಾ ಚರಿತ್ರೆ, ಮಾನವಶಾಸ್ತ್ರ ಮುಂತಾದ ಅನೇಕ ವಿಷಯಗಳನ್ನು ತನ್ನ ಉದರದಲ್ಲಿ ಅಡಗಿಸಿಕೊಂಡಿರುತ್ತದೆ. ಆದುದರಿಂದ ಸ್ಥಳನಾಮ ಅಧ್ಯಯನ ಭಾಷಾಶಾಸ್ತ್ರ ದೃಷ್ಟಿಯಿಂದ ಮಾತ್ರವಲ್ಲದೆ ಸಮಾಜಶಾಸ್ತ್ರ, ಮಾನವಶಾಸ್ತ್ರ ಅಧ್ಯಯನ ದೃಷ್ಟಿಯಿಂದಲೂ ಅಗತ್ಯವಿದೆ. ನಿಷ್ಪತ್ತಿಯನ್ನು ಕುರಿತು ಅರ್ಥ ವಿವರಣೆಯನ್ನು ನೀಡುವುದು ಸ್ಥಳನಾಮ ಅಧ್ಯಯನದಲ್ಲಿ ಪ್ರಮುಖ ಭಾಗವಾಗಿರುತ್ತದೆ"(ಪುಟ. ೧೩೪). ಕುರುಬ ಸಮುದಾಯದ ವ್ಯಕ್ತಿನಾಮಗಳ ಸ್ಥೂಲವಾದ ಪಟ್ಟಿಯನ್ನು ಅನುಬಂಧದಲ್ಲಿ ಮೊದಲಬಾರಿಗೆ ನೀಡಲಾಗಿದೆ(ಪುಟ. ೧೪೦).

'ಡೊಳ್ಳು ಹಾಡುಗಳು: ಭಾಷಾ ಸ್ವರೂಪ' ಎಂಬ ಭಾಗವು ಡೊಳ್ಳಿನ ಸಮಗ್ರ ಪರಿಚಯವನ್ನು ಮಾಡಿಕೊಡುತ್ತದೆ. ಅಲ್ಲದೆ ಮೊದಲ ಬಾರಿಗೆ ದೇಸಿ ಪದಗಳು ರೂಪ ಮತ್ತು ಅರ್ಥದ ದೃಷ್ಟಿಯಿಂದ ನಾನಾ ರೀತಿಯ ಪ್ರಯೋಗಕ್ಕೆ ಒಳಗಾಗುವುದನ್ನು ಉದಾಹರಣೆ ಸಹಿತ ವಿವರಿಸಲಾಗಿದೆ(ಪುಟ ೧೪೪). ಜನಪದ ಸಾಹಿತ್ಯದಲ್ಲಿ ಡೊಳ್ಳು ಪದಗಳ ಮಹತ್ವ, ಭಾಷಾ ವೈಶಿಷ್ಟ್ಯ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯ ಮುಂತಾದವುಗಳನ್ನು ಗುರುತಿಸಲಾಗಿದೆ. ಡೊಳ್ಳು ಹಾಡುಗಳ ಛಂದೋಲಯ, ರಚನಾಕ್ರಮ, ವಿನ್ಯಾಸ, ತಂತ್ರ, ಲಕ್ಷಣಗಳನ್ನು ಸಮಾಲೋಚಿಸಲಾಗಿದೆ. ಜನಪದ ಹಾಲುಮತ ಮಹಾಕಾವ್ಯ, ಮೈಲಾರಲಿಂಗನ ಕಾವ್ಯ, ಮಾಳಿಂಗರಾಯನ ಕಾವ್ಯಗಳ ದೇಸಿ ಶೈಲಿ, ಪಾದ, ಗಣ, ಸಂಯೋಜನೆ, ಆಡುಮಾತಿನ ಔಚಿತ್ಯ, ಕಾವ್ಯದ ಅಂತರಿಕ ರಚನೆಯ ಭಾಷಿಕ ವೈಲಕ್ಷಣ, ಸ್ವಭಾವೋಕ್ತಿ, ರೂಪಕ, ಶಬ್ದಚಿತ್ರ, ಬಂಧ ವಿನ್ಯಾಸ ಮುಂತಾದವನ್ನು ವಿವರಿಸಲಾಗಿದೆ. 'ಹಟ್ಟಿ' ಎಂಬ ಪದವನ್ನು ವಿಶಾಲಾರ್ಥದ ಮಾನವಸಾಶ್ತ್ರೀಯ ವಿವೇಚನೆಯಲ್ಲಿ ಅರ್ಥೈಸಲಾಗಿದೆ.

ಅಡವಿಬಡ್ಡಿಪೂಜೆ, ಅರಿವಾಣ, ಆಳುಮಕ್ಕಳು, ಈರಮುಖದ ಆಟ, ಏಳಟ್ಟಿನದವ, ಒಡೆಮುರಿ, ಒಡೆಯರು/ಒಡೆರಮ್ಮ, ಕಂಬಳಿ, ಕರಡಿ ಮಜಲು, ಕರಿಕಂತೆ, ಕಾಲಿಲ್ಲದ ಐನೋರು, ಕುರುಬರ ಬೋಣಿಗೆ, ಕುರಿ ಪೂಜೆ, ಕುರಿ ಹಟ್ಟಿ/ದೊಡ್ಡಿ, ಕೊಪ್ಪರಿಕೆ, ಕೌಲ ಕೇಳುವದು, ಗದ್ದುಗೆ ಧಾವಳಿ, ಗುಗ್ಗರಿ ಎಡೆ, ಗುಡ್ಡ, ಡೊಳ್ಳು, ದಟ್ಟಿ ಆಟ, ದೇವರಸಿ, ದೈವದವರು, ಪಲ್ಲಕ್ಕಿ ಮಾನೆ, ಭಂಡಾರ, ಮಳೆರಾಯನ ಪೂಜೆ, ಮೈಮೇಲೆ ದೇವರು, ಹಟ್ಟಿಪೂಜೆ, ಹಸರಂಬಲಿ, ಹಾದಿಲಂಬಲಿ, ಹಾಲುಕ್ಕಿಸು, ಹೇಳಿಕೆಗಳು, ಹೊನ್ನಾಟ ಮುಂತಾದ ಹಾಲುಮತ ಸಂಸ್ಕೃತಿಯ ವಿಶಿಷ್ಟ ಪದಗಳ ಅರ್ಥದೊಂದಿಗೆ ಸಮಗ್ರ ಪರಿಚಯವನ್ನು ಮಾಡಿಕೊಡಲಾಗಿದೆ.

ಒಟ್ಟಾರೆ ಕುರುಬ ಸಮುದಾಯದ ಭಾಷಿಕ ಸ್ತರ ವಿನ್ಯಾಸವನ್ನು ಅಧ್ಯಯನ ಶಿಸ್ತುಗಳ ನೆಲೆಯಲ್ಲಿ ಗಮನಿಸಲಾಗಿದೆ. ಉಪಪಂಗಡಗಳ ಸಾಮಾಜಿಕ ಸ್ತರ ವಿನ್ಯಾಸದಲ್ಲಿ ಭಾಷೆಯ ಪಾತ್ರವನ್ನು ಗುರುತಿಸಲಾಗಿದೆ. ಕುರುಬರ ಹೇಳಿಕೆಗಳನ್ನು ಭಾಷೆ-ಮನಸ್ಸು-ಆಲೋಚನೆ ಅಂತಹ ಮನೋಭಾಷಾಶಾಸ್ತ್ರದ ನೆಲೆಯಲ್ಲಿ

ವಿಶ್ಲೇಷಿಸಲಾಗಿದೆ. ಕುರುಬ ಸಮುದಾಯದ ಗ್ರಾಮ ನಾಮಗಳು, ವ್ಯಕ್ತಿನಾಮಗಳ, ಕುಟುಂಬ ನಾಮಗಳಲ್ಲಿ ಅಡಕವಾಗಿರುವ ಭಾಷಿಕ ಆಕೃತಿಗಳನ್ನು ಸಂಸ್ಕೃತಿಕವಾಗಿ ವಿವೇಚಿಸಲಾಗಿದೆ. ಕುರುಬ ಸಮುದಾಯದಲ್ಲಿ ಬಳಕೆಯಾದ ಕೆಲವು ಭಾಷಾ ರೂಪಗಳಾದ ಭಂಡಾರ, ಕಂಬಳಿ, ಹಸರಂಬಲಿ ಮುಂತಾದವು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಅವುಗಳನ್ನು ಸಾಮಾಜಿಕ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಅಭ್ಯಸಿಸುವುದರ ಜೊತೆಗೆ ಸಮಾಜೋ ಸಾಂಸ್ಕೃತಿಕ ವೈಶಿಷ್ಟ್ಯಗಳ ಆಧಾರದ ಮೇಲೆ ಪರಿಭಾವಿಸಲಾಗಿದೆ. ಅಲೆಮಾರಿ ಕುರುಬರ ಭಾಷೆಯ ಸ್ವೀಕರಣ ಅವರು ಮೂಲಭಾಷೆಯನ್ನು ಉಳಿಸಿಕೊಳ್ಳುವ ಭಾಷಾ ಸಂಗೋಪನೆಯ ಪ್ರಕ್ರಿಯೆಯನ್ನು ವಿಶ್ಲೇಷಿಸಿರುವದು ಈ ಕೃತಿಯ ವಿಶಿಷ್ಟಗಳಲ್ಲೊಂದು. ಹಾಗೆಯೇ ಡೊಳ್ಳು ಹಾಡುಗಳಲ್ಲಿರುವ ಅಚ್ಚಗನ್ನಡ ಲಯಗಳನ್ನು ಮತ್ತು ಪದರಚನೆಗಳನ್ನು ಮೊದಲಬಾರಿಗೆ ಗುರುತಿಸಲಾಗಿದೆ.

ಕುರುಬ ಸಮುದಾಯದ ಭಾಷಾಧ್ಯಯನ ಕನ್ನಡ ಸಂಸ್ಕೃತಿಗೆ ಮತ್ತು ಭಾಷೆಗೆ ಎಂತಹ ಕೊಡುಗೆ ನೀಡಬಲ್ಲದು, ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಒಂದು ಭಾಷೆಯನ್ನು ಅರ್ಥಮಾಡಿಕೊಳ್ಳಲು ಅದು ಹೇಗೆ ನೆರವಾಗಬಲ್ಲದು ಎಂಬುದನ್ನು ಈ ಕೃತಿಯ ಮೂಲಕ ಮನದಟ್ಟು ಮಾಡಲಾಗಿದೆ. ತನ್ಮೂಲಕ ಭಾಷಾಧ್ಯಯನದ ಬಗೆಗೆ ಸಂಪ್ರದಾಯಕ ತಿಳುವಳಿಕೆಯನ್ನು ವರ್ತಮಾನದ ಸಂದರ್ಭಕ್ಕೆ ತಕ್ಕಂತೆ ಪರಾಮರ್ಶಿಸುವ ಹೊಸಚಿಂತನೆಯನ್ನೂ ಈ ಕೃತಿಯಲ್ಲಿ ಕಾಣಬಹುದು. ಭಾಷಾಶಾಸ್ತ್ರ, ಜಾನಪದಶಾಸ್ತ್ರ, ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರಗಳ ಅಧ್ಯಯನ ಶಿಸ್ತುಗಳ ಸಹಾಯದಿಂದ ಅಂತರಶಿಸ್ತೀಯ ಅಧ್ಯಯನ ನೆಲೆಯಲ್ಲಿ ಸಮುದಾಯಗಳ ಭಾಷಾಧ್ಯಯನ ಕುರಿತು ಅಧ್ಯಯನ ನಡೆಯಬೇಕಾಗಿದೆಯೆಂದೂ ಸೂಚಿಸಿ ಅಂತಹ ಅಧ್ಯಯನಕ್ಕೆ ಈ ಕೃತಿ ಪ್ರವೇಶಿಕೆ ರೂಪದ ಮಾಹಿತಿಗಳನ್ನು ಸೈದ್ಧಾಂತಿಕ ಚೌಕಟ್ಟನ್ನು ಒದಗಿಸುವ ಮಾರ್ಗಸೂಚಿಯಾಗಿದೆ. ಸಮುದಾಯದ ಭಾಷಾ ಬಳಕೆಯನ್ನು ಕುರಿತು ಅನ್ವಯಿಕ ನೆಲೆಯಲ್ಲಿ ವಿವೇಚಿಸಿರುವ ಕ್ರಮ ಹೊಸತು. ಈ ಹಿನ್ನೆಲೆಯಲ್ಲಿ ಈ ಕೃತಿಯು ಕುರುಬ ಸಮುದಾಯದ ಉಪಪಂಗಡಗಳ ಭಾಷೆ ವ್ಯಕ್ತಿನಾಮ-ಅಡ್ಡಹೆಸರು -ಸ್ಥಳನಾಮ ಮತ್ತು ಗ್ರಾಮನಾಮಗಳ ಅಭ್ಯಾಸಕ್ಕೆ ಇಲ್ಲಿ ಮಾದರಿಗಳಿವೆ. ಕುರುಬರ ಸ್ಥಳನಾಮಗಳು, ಕುರುಬರ ವ್ಯಕ್ತಿನಾಮಗಳು, ಕುಟುಂಬ ನಾಮಗಳ ಕುರಿತು ಹೆಚ್ಚಿನ ಅಧ್ಯಯನ ಕೈಕೊಳ್ಳಲು ಈ ಕೃತಿ ನಮಗೆ ದಾರಿಯನ್ನು ತೋರಿಸುತ್ತದೆ.

೧೦. ಹಾಲುಮತ ಅಧ್ಯಯನಗಳು - ಡಾ. ಎಫ್.ಟಿ.ಹಳ್ಳಿಕೇರಿ (೨೦೧೦)

'ಹಾಲುಮತ ಅಧ್ಯಯನ' ಎಂಬ ಕೃತಿಯನ್ನು ಎಫ್.ಟಿ.ಹಳ್ಳಿಕೇರಿ ಅವರು ಸಂಪಾದಿಸಿ ೨೦೧೦ರಲ್ಲಿ ಹೊಸಪೇಟೆಯ ವಿಕಾಸ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಈ ಕೃತಿಯು ಎಂ.ಎಂ.ಕಲಬುರ್ಗಿ ಅವರ ಕುರುಬ ಸಮುದಾಯದ ಸಂಸ್ಕೃತಿ ಮತ್ತು ಚರಿತ್ರೆಗೆ ಸಂಬಂಧಿಸಿದ ಹದಿಮೂರು ಸಂಶೋಧನ ಸಂಪ್ರಬಂಧಗಳನ್ನು ಹೊಂದಿದೆ.

ರೇವಣಸಿದ್ಧ, ಸಿದ್ಧರಾಮ, ಬೀರಪ್ಪ, ಮೈಲಾರಲಿಂಗ, ಶಾಂತಮುತ್ತಯ್ಯ ಮೊದಲಾದ ಹಾಲುಮತದ ಚಾರಿತ್ರಿಕ ನಾಯಕರು ಇಂದು ದೈವತ್ವಕ್ಕೇರಿಸಿ ಪೂಜಿಸಲ್ಪಡುತ್ತಿದ್ದಾರೆ. ಇದಕ್ಕೆ ಪೂರಕ ಮಾಹಿತಿ ನೀಡುವಂಥ ಬಹು ಪ್ರಮಾಣದ ಕೃತಿಗಳು ಪ್ರಕಟಗೊಂಡಿವೆ. ಆದರೆ ಇಲ್ಲಿನ ಸಂಪ್ರಬಂಧಗಳು ವೈಚಾರಿಕ ನೆಲೆಯಲ್ಲಿ ಚರ್ಚಿಸಿ ಚಾರಿತ್ರಿಕವಾಗಿ ಗುರುತಿಸಿಕೊಳ್ಳುವತ್ತ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಶೈವ ವೀರಶೈವ ಮತಗಳು ಕುರುಬ ಸಂಸ್ಕೃತಿಯ ಪರಿಷ್ಕೃತ ರೂಪಗಳಾಗಿರುವ ಚರ್ಚೆ ಇಂದಿನ ವೀರಶೈವದ ಉಜನೀಪೀಠದ ಪ್ರಾಚೀನ ಪರಂಪರೆಯನ್ನು ಅನೇಕ ದಾಖಲೆಗಳೊಂದಿಗೆ ಸ್ಪಷ್ಟಪಡಿಸಿ ವಿಮರ್ಶೆಗೆ ಒಳಪಡಿಸಲಾಗಿದೆ.

ಸಂಪಾದಕರು ಸವಿಸ್ತಾರವಾದ ಪ್ರಸ್ತಾವನೆಯನ್ನು ಬರೆದು ವಿಭಿನ್ನ ಆಯಾಮಗಳಲ್ಲಿ ಚರ್ಚಿಸಿದ್ದಾರೆ. ಮೂಲತಃ ಕುರುಬ ಸಮುದಾಯಕ್ಕೆ ಸೇರಿದ ರೇವಣಸಿದ್ಧ, ಸಿದ್ಧರಾಮ, ಮಂಕೊಡೆಯ ಸಂಪ್ರದಾಯದ ಮರಳುಸಿದ್ಧ, ಕುರುಬರ ಕುಲ ಗುರು ಶಾಂತಮುತ್ತಯ್ಯನ ಪ್ರಾಚೀನತೆ, ಶಾಂತ ಸಂಪ್ರದಾಯ(ಶಾಂತಮುತ್ತಯ್ಯ), ಮಂಕ ಸಂಪ್ರದಾಯ(ಸಿದ್ಧಮಂಕ), ಬೀರಪ್ಪನ ಪರಿಷ್ಕೃತ ರೂಪ, ವೀರಭದ್ರವಾಗಿರುವ ಕನಕದಾಸರ ಬಗೆಗಿನ ಕೆಲವು ಗೊಂದಲಗಳು ಇಂಥ ಅನೇಕ ವಿಷಯಗಳನ್ನು ವಿಮರ್ಶಿಸಿ "ಒಟ್ಟಾರೆ ಸಮಾಜ ಸಂಸ್ಕೃತಿಯಲ್ಲಿ ಸಂಭವಿಸಿದ ಸಹಜ ಕೃತಕ ಬದಲಾವಣೆಗಳನ್ನು ಕಲಬುರ್ಗಿ ಅವರು ತಮ್ಮ ಶೋಧಗಳ ಮೂಲಕ ಸರಿಪಡಿಸುವ ಕಾರ್ಯಕ್ಕೆ ಮುಂದಾಗಿರುವುದು ಕುರುಬ ಸಮುದಾಯದ ಭಾಗ್ಯವೆನ್ನಬೇಕು" (ಪುಟ ೧೭) ಎಂಬ ಕಲಬುರ್ಗಿ ಅವರ ಸಮಾಜ ಸಂಸ್ಕೃತಿ ಶೋಧಗಳ ಮಹತ್ವವನ್ನು ಗುರುತಿಸಿದ್ದಾರೆ. ಹೀಗಾಗಿ ಇಲ್ಲಿನ ಬಹುತೇಕ ಲೇಖನಗಳು ವಿಸ್ತೃತವಾದ ಅಧ್ಯಯನಕ್ಕೆ ಪೀಠಿಕಾರೂಪದಲ್ಲಿವೆ. ಇಲ್ಲಿನ ಒಂದೊಂದು ಲೇಖನಗಳು ಒಂದೊಂದು ಸಂಶೋಧನ ಪ್ರಬಂಧಕ್ಕೆ ಮಾರ್ಗಸೂಚಿಯಾಗಿವೆ. ಆಸಕ್ತ ಸೊಶೋಧಕರು ಇತ್ತ ಗಮನಹರಿಸಬಹುದಾಗಿದೆ.

೧೧. ಕುರುಬರ ಕುರುಹುಗಳು - ಹೆಚ್.ಚಂದ್ರಪ್ಪ ಅಜ್ಜಂಪುರ (೨೦೧೧)

ಹೆಚ್.ಚಂದ್ರಪ್ಪ ಅಜ್ಜಂಪುರ ಅವರ 'ಕುರುಬರ ಕುರುಹುಗಳು' ಎಂಬ ಕೃತಿಯು ೨೦೧೧ರಲ್ಲಿ ವಿದ್ಯಾನಿಧಿ ಪ್ರಕಾಶನದಿಂದ ಪ್ರಕಟವಾಗಿದೆ. ೩೫೦ ಪುಟಗಳ ಈ ಕೃತಿಯು ಕುರುಬರ ಸಮಗ್ರ ಮಾಹಿತಿಯನ್ನು ಸಂಕ್ಷಿಪ್ತದಲ್ಲಿ ನೀಡುವಲ್ಲಿ ಯಶಸ್ವಿಯಾಗಿದೆ.

ಕದಂಬರು, ಪಲ್ಲವರು, ಜಿಂಜಿ ಮತ್ತು ಕೃಷ್ಣಗಿರಿಯ ರಾಜರು, ಹೆಗ್ಗಡದೇವನಕೋಟೆ, ಬರೋಡದ ಗಾಯಕವಾಡರು, ಮಾಂಡು ಮತ್ತು ಮಗಧ, ಶಿವಾಜಿ, ರಾಷ್ಟ್ರಕೂಟರು, ನೀಲಗಿರಿಯ ಕುರುಬರು, ಕಾಡು ಕುರುಬರ ದೇವರು ನಂಬಿಕೆಗಳು ಮತ್ತು ಹಬ್ಬಗಳು, ಕಾಡು ಕುರುಬ -ಜೇನು ಕುರುಬ, ಗಿರಿಜನರು, ನಂಬಿಕೆಗಳು ಹಾಗೂ ಅಭ್ಯಾಸಗಳು, ಜೇನು ಕುರುಬರ ಪೌರಾಣಿಕ ಹಿನ್ನೆಲೆ, ದಳವಾಯಿ ದಂತಕಥೆಗಳು ಮುಂತಾದ ವಿಷಯಗಳಿಂದ ಜನಾಂಗದ ಐತಿಹಾಸಿಕ ಹಿನ್ನೆಲೆಯನ್ನು ಸಮಗ್ರವಾಗಿ ಪರಿಚಯಿಸಲಾಗಿದೆ.

ಗೋತ್ರ, ಕುಲಗಳು, ಕೊಂಡೇರ, ಕೋಶಲ, ಕಾಲ-ಖಂಡೇಲ-ಗಣಕ ಬೆಡಗುಗಳು(೮೬೭), ಇನ್ನುಳಿದ ಬೆಡಗು ಕುಳಿ ಕುಲಗಳು(೪೨೬), ಒಕ್ಕಲಿಗರ ಒಳಪಂಗಡಗಳು, ಗಂಗಡಿಕಾರ ಒಕ್ಕಲಿಗರ ಬೆಡಗುಗಳು,

ದಕ್ಷಿಣ ಒಕ್ಕಲಿಗರ ಒಳಪಂಗಡಗಳು, ಮರಾಠರ ಕುಲ/ಬೆಡಗುಗಳು(೯೬) ಮೊದಲಾದ ಕುರುಬರಲ್ಲಿನ ಕುಲಗೋತ್ರಗಳ ವಿವರಗಳನ್ನು ಒಂದೆಡೆ ದಾಖಲಿಸಲಾಗಿದೆ. ವಿವಾಹ ಪದ್ಧತಿ, ಅರಿಶಿನಕೊಂಬಿನ ಶಕುನಗಳು, ಹೇನಿನ ಶಕುನ, ಮನೆ ದೇವರ ಅಪ್ಪಣೆ, ಆರಣೆ (ಗಡಿಗೆ) ತರುವ, ಶವಸಂಸ್ಕಾರ ಮುಂತಾದ ವಿಶೇಷ ಸಂಪ್ರದಾಯ ಆಚರಣೆಗಳನ್ನು ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಪರಿಚಯಿಸಲಾಗಿದೆ. ವೀರ-ಬೀರ ಶಬ್ದದ ನಿಷ್ಪತ್ತಿ, ಗಾಡಿ ಚಕ್ರದ ಬಡಿತ, ಆಗುರುಬರು (ಸಣ್ಣ ಕುರುಬರು ಉಣ್ಣೆ-ಕಂಕಣದವರು), ಬೀರದೇವರ ಐತಿಹಾಸಿಕ ಮತ್ತು ಪೌರಾಣಿಕ ಚಿಂತನೆ, ಮೀಸಲು ಪಟ್ಟಗಳ ಆಯ್ಕೆ ಮತ್ತು ದೀಕ್ಷೆ, ದಳವಾಯಿ ಪಟ್ಟ, ಉತ್ಸವ, ಗಾವು ಸಿಗಿಯುವುದು, ಈರೂಟ, ತರೀಕೆರೆ ಮತ್ತು ಹೋಳಲ್ಕರೆ ಪರಿಸರದ ತೋಪುಜಾತ್ರೆ, ಪೂಜಾರರು ಮತ್ತು ಈರಗಾರರ ಪಟ್ಟದೀಕ್ಷೆ, ಬೀರದೇವರ ಉತ್ಸವ, ಉಯ್ಯಾಲೆ, ಓಕಳಿ, ಹಲ್ಲು ಮರಿ ಸಿಗಿಯುವುದು ಬೀರದೆವರ ಜಾತ್ರೆ, ದಳವಾಯಿ ಆಯ್ಕೆ, ದಳವಾಯಿ ಪಟ್ಟದೀಕ್ಷೆ, ದಳವಾಯಿಯ ಸಾಮಾಜಿಕ ವೈವಾಹಿಕ ಜೀವನ, ಈರಗಾರನ ವೀರತ್ವ, ಪೂಜಾರರ ಸಾಮಾಜಿಕ ಮತ್ತು ಧಾರ್ಮಿಕ ಜೀವನ, ಒಡೆಯರು ಒಡೇರಮ್ಮ, ಕಾಲಿಲ್ಲ ಐನೋರು, ಋತುಮತಿ, ಒಡೆಯರ ವಿವಾಹ, ಶವಸಂಸ್ಕಾರ, ಒಡೆಯರ ಹಿನ್ನೆಲೆ(ಹೊಸ ವಿಚಾರ), ರೇವಣಸಿದ್ಧ, ಏಳೂರು ದೇವರುಗಳ ಕಾಳಗದ ವಿವರ(ಪು. ೧೭೧), ಗೂಡೆ ಪೂಜೆ, ಹಂಡೆ ವಜೀರರು, ಗುಡದಹಳ್ಳಿಯ ತಾಮ್ರಶಾಸನಗಳ ನಿರೂಪದ ಕುರಿತಾಗಿ ವಿವರ, ತರೀಕೆರೆ ತಾಲೂಕು ಅಜ್ಜಂಪುರ ಹೋಬಳಿ ಗುಡ್ಡದಹಳ್ಳಿ ಶ್ರೀ ರಂಗನಾಥಸ್ವಾಮಿ ಅರ್ಚಕ ರಂಗಪ್ಪ ಅವರ ಮನೆಯಲ್ಲಿ ದೊರೆತ ಮೂರು ತಾಮ್ರ ಶಾಸನಗಳ ಮತ್ತು ಒಂದು ಕಾಗದದ ನಿರೂಪದ ಪರಿಚಯ, ಶಾಸನದ ಭಾಷೆ, ಲಿಪಿ, ಸ್ವರೂಪ ಶಾಸನೋಕ್ತ ಸ್ಥಳಗಳು, ಹೊಯ್ಸಳ ಪಾಳೆಗಾರರ ತಾಮ್ರ ಶಾಸನ, ಅರ್ವಾಚೀನ ತಾಮ್ರ ಶಾಸನ, ಮೈಸೂರು ಅರಸರ ಕಾಗದದ ನಿರೂಪ, ತಗರ ಪವಾಡದ ಸಂಕ್ಷಿಪ್ತ ಕಥಾಸಾರ, ಹಾಲುಮತ ಪುರಾಣಗಳ ಪರಿಚಯ ಮತ್ತು ಕಥಾಸಾರ, ಕಂಬಳಿ ನಾಗದೇವನ ವಿವರ, ಹೆಳವರು, ಕುರುಬರ ರಟ್ಟಮತಶಾಸ್ತ್ರ, ಕುರುಬರ ಆರಾಧ್ಯ ದೇವರುಗಳು, ಕಾಗೆ ಪರೇವು, ಗಡಿಹಳ್ಳಿ ಹೊಸೂರು- ಸೊಲ್ಲಾಪುರ-ಮುಗಳಿ, ಬೀರದೇವರುಗಳು, ಚೀರನಹಳ್ಳಿ ಕುರುಬರು, ಗುಡಿಕಟ್ಟು, ಮೂಲಸ್ಥಾನ, ಅನುವನಹಳ್ಳಿ ಗೋನೆಕೆರೆ ಸಿದ್ದಯ್ಯ, ಅಜ್ಜಂಪುರದ ಬೀರದೆವರು, ಚಳ್ಳಕೆರೆ ಅಯ್ಯ ತಡಗ, ಆಸಂದಿ ಎರೆ ಬೀರದೇವರು, ಖೇಲು, ಶಿವನಿಯ ಬೀರದೇವರು ಮುಂತಾದವುಗಳ ಪರಿಚಯವನ್ನು ಮಾಡಲಾಗಿದೆ. ಸೊಲ್ಲಾಪುರ, ಮಾಚಿಘಟ್ಟ, ಹಿರೇನಲ್ಲೂರ, ಅಂಬಳೆ, ಆಸಂದಿ, ಮುಗಳಿಕಟ್ಟೆ ಚೌಳಹಿರಿಯೂರು, ಚಿಕ್ಕ ಬಾಸೂರು ಮುಂತಾದ ಊರುಗಳ ಗುಡಿಕಟ್ಟು ಮತ್ತು ಐತಿಹ್ಯಗಳು, ನಿಂಗಪ್ಪ ದೇವರ (ಒಡೆಯರ) ಮಠ, ತಾಳಿಕಟ್ಟೆ ಹಿರಿಯಯ್ಯ, ಆಮ್ಲಿಹಳ್ಳಿ ಕುರುಬರು(ಹಾಲಿನ ಕುರುಬರು), ಬಾನದ ಸೋರೆ, ಬಾನಗುರಿ ಮುಂತಾದವುಗಳಿಂದ ಸಂಪೂರ್ಣ ಪರಿಚಯವನ್ನು ಕಟ್ಟಿಕೊಡುವ ಕುರುಬರ ಕೈಪಿಡಿಯಾಗಿದೆ.

ಕಟ್ಟಿಮನೆ, ತಾಮ್ರಶಾಸನಗಳು, ಸಾಸುವೆ ಪ್ರಸಾರ, ಕುರುಬರ ಬೋಣಿ, ಚೌಟುಗಳು, ಕಲ್ಲುಬಾಣ, ಕೆಂಗುರುಬರು, ಕೂಡಿಕೆ ಮದುವೆ, ಮುಡಿದಂಡೆ, ಬಿಂಗಯ್ಯ, ಹಾಲುಮತದ ಉಗಮ, ಕರಿಯಕಂತೆ, ಉಂಡಾಡು

ಪದ್ಮಣ್ಣ, ಒಡೇರಮ್ಮ, ತಮಡಪ್ಪ, ಓಕುಳಿ, ಹಚ್ಚೆ, ಈರೂಟ, ಬಂಗಿಹೊಂಡ, ಟಗರುಗಲ್ಲು, ವಿಭೂತಿ ಗುಂಡಿ, ಕ್ಯಾತೆಲಿಂಗನಗುಂಡಿ (ಕಾಟಲಿಂಗ), ಗುಡಿಕಟ್ಟು ಕುಲಗೋತ್ರಗಳು, ಕರುಣಗೋತ್ರ, ಇತಾರ ತಾಳಿ (ಹಿರಿಯರ ತಾಳಿ), ಕಂಟ್ಲಿ ಎತ್ತು, ಕಂಟ್ಲಿ ಮರಿ, ಕುರಿಹಿಕ್ಕೆಯ ಲಿಂಗ, ಅಕ್ಕಿಕಾಳು, ಮುಂತಾದವುಗಳ ಟಿಪ್ಪಣಿಗಳನ್ನು ಅನುಬಂಧ-೧ರಲ್ಲಿ ವಿವರಿಸಲಾಗಿದೆ. ಕುರುಬರು ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಭಿನ್ನ ಹೆಸರುಗಳಿಂದ ಕರೆಯಲ್ಪಡುವ ಹೆಸರುಗಳ ಪಟ್ಟಿ, ಗುಡ್ಡದ ಹಳ್ಳಿಯ ತಾಮ್ರದ ಶಾಸನದ ಪಾಠಾಂತರ, ಕುಲಗಳು, ಉತ್ತರ, ಮಧ್ಯ, ಪಶ್ಚಿಮ ಭಾರತದ ಗೋತ್ರಗಳು, ಬೆಡಗುಗಳು, ೫೧ ಬಿರುದಾವಳಿಗಳ ಲಾಂಛನಗಳು (ರಾಕ್ಷಸಿಯನ್ನು ಕೊಂದು ಅವಳ ಅವಯವಗಳಿಂದ ತಯಾರಿಸಿ ಬಂಕಾಪುರದಲ್ಲಿರಿಸಿದ ಬಿರುದಾವಳಿ ಗಳಾಗಿರಬಹುದೇ?) ೫೪ ಹಿತೋಕ್ತಿಗಳು, ಕುರುಬ ಪರಂಪರೆಯ ಸಂಸ್ಕೃತಿ, ಆಚಾರ ಮತ್ತು ದೇವರುಗಳು, ಕುರುಹುಗಳು ದೊರೆತ ಸ್ಥಳ ಮತ್ತು ಸಾಂಸ್ಕೃತಿಕ ಮಹತ್ವ ಪಡೆದ ಛಾಯಾಚಿತ್ರಗಳನ್ನು ಅನುಬಂಧ ೨ರಲ್ಲಿ ಲೇಖಕರು ದಾಖಲಿಸಿದ್ದಾರೆ.

ಹೀಗೆ ಕುರುಬ ಸಮುದಾಯದ ಇತಿಹಾಸದ ಜೊತೆಗೆ ಅಲ್ಲಲ್ಲಿ ನಡೆಯುವ ಆಚರಣೆ ಸಂಪ್ರದಾಯ, ಉತ್ಸವಗಳನ್ನು ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಿರುವುದು ಈ ಕೃತಿಯ ವಿಶೇಷತೆಯಾಗಿದೆ. ಲೇಖಕರ ವ್ಯಾಪಕವಾದ ಕ್ಷೇತ್ರಕಾರ್ಯ, ಮಾಹಿತಿ ಸಂಗ್ರಹಿಸುವಲ್ಲಿನ ಶ್ರಮ, ತಾಳ್ಮೆ ಮೆಚ್ಚುವಂತಹದು. ವಿಶೇಷವಾಗಿ ದಕ್ಷಿಣ ಕರ್ನಾಟಕದ ಕುರುಬರ ಸಂಸ್ಕೃತಿ ಬಗೆಗೆ ವಿವರವಾದ ಮಾಹಿತಿಗಳನ್ನು ಸಂಗ್ರಹಿಸಿ ಒಂದೆಡೆ ದಾಖಲಿಸಲಾಗಿದೆ. ಸಂಗ್ರಹಿಸಿದ ಆಕರಗಳನ್ನು ವ್ಯವಸ್ಥಿತವಾಗಿ ಜೋಡಿಸಿ ವಿಶ್ಲೇಷಣೆಗೊಳಪಡಿಸಿದ್ದರೆ ಈ ಕೃತಿಯ ಮಹತ್ವ ಇನ್ನೂ ಹೆಚ್ಚುತ್ತಿತ್ತು. ಅದೇನೆ ಇದ್ದರೂ ಕುರುಬ ಸಂಸ್ಕೃತಿಯ ಮಾಹಿತಿಗಳ ಕಣಜದಂತೆ ಈ ಕೃತಿಯನ್ನು ಸಂಶೋಧಕರು ಬಳಸಿಕೊಳ್ಳಬಹುದು.

೯. ನಿಯತಕಾಲಿಕೆಗಳು

೧. ಪೀಠಿಕೆ

ಸಾಮಾಜಿಕ ಜಾಗೃತಾ ಪ್ರಜ್ಞೆಯ ಉಗಮವನ್ನು ೧೯ನೆಯ ಶತಮಾನದ ಆದಿಭಾಗದಲ್ಲಿ ಗುರುತಿಸಬಹುದು. ರೇಡಿಯೋ, ದೂರದರ್ಶನ, ನಿಯತಕಾಲಿಕೆ, ನಾಟಕ, ಚಿತ್ರರಂಗ ಮೊದಲಾದ ಮಾಧ್ಯಮಗಳ ಮೂಲಕ ಆಚಾರ, ಸಂಪ್ರದಾಯ, ನೀತಿ, ನಡಾವಳಿ, ಜಾತ್ರೆ, ಉತ್ಸವ, ಪ್ರಾಚೀನತೆ, ಪರಂಪರೆಗಳ ಮೂಲಕ ದೇಶದ ವಿವಿಧ ಮತಗಳು ಸಂಸ್ಕೃತಿಯನ್ನು ಪುನಃ ಕಟ್ಟಿಕೊಳ್ಳಲು ಸಿದ್ಧವಾದವು. ಅಲ್ಲದೆ ತಮ್ಮ ಇತಿಹಾಸವನ್ನು ಚಾರಿತ್ರಿಕ, ಪೌರಾಣಿಕ, ಸಾಮಾಜಿಕ ನೆಲೆಗಳಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿರುವುದು ಸಾಹಿತ್ಯ ಅವಲೋಕನದಿಂದ ಗಮನಿಸಬಹುದು.

ಮೊಟ್ಟಮೊದಲು ಪತ್ರಿಕಾ ಪರಂಪರೆ ಬಂಗಾಳದಲ್ಲಿ ಹುಟ್ಟಿಕೊಂಡಿತು. 'ಬಂಗಾಲ ಗೆಜೆಟ್' ಮತ್ತು 'ಸಮಾಚಾರ ದರ್ಪಣ' ಎಂಬ ವಂಗಭಾಷೆಯ ಪತ್ರಿಕೆಯ ನಂತರ ೧೮೨೧ರಲ್ಲಿ ರಾಜಾರಾಮ ಮೋಹನರಾಯರ

ಸಂಪಾದಕತ್ವದಲ್ಲಿ 'ಸಂವಾದ ಕೌಮುದೀ' ಪ್ರಕಟಗೊಂಡಿತು. ಕಾರಣ ರಾಜಾರಾಮ ಮೋಹನರಾಯರನ್ನು ಭಾರತೀಯ ಪತ್ರಿಕೋದ್ಯಮದ ಆದ್ಯ ಪ್ರವರ್ತಕರೆಂದು ಕರೆಯಬಹುದು. ಶ್ರೀರಾಮಪುರದ ಮಿಷನರಿಗಳು ಮೊದಲು 'ಸಮಾಚಾರ ದರ್ಪಣ' ಪ್ರಕಟಿಸಿದರು. ಮದ್ರಾಸ್ ಸ್ಕೂಲ್ ಬುಕ್ ಆಫ್ ಸೊಸೈಟಿಯ ಮಿಷನರಿಗಳು ೧೯೩೧ರಲ್ಲಿ ಮೊಟ್ಟಮೊದಲು ತಮಿಳು ಪತ್ರಿಕೆ ಹೊರಡಿಸಿದರು. ಹತ್ತೊಂಬತ್ತನೆಯ ಶತಮಾನದ ಪತ್ರಿಕೆಗಳು ಶೈಕ್ಷಣಿಕ, ರಾಜಕೀಯ, ಧಾರ್ಮಿಕ, ಸಾಹಿತ್ಯಿಕ ಎಂಬ ನಾಲ್ಕು ಬಗೆಯ ಉದ್ದೇಶಗಳನ್ನು ಹೊಂದಿವೆ. ಇಂಥ ಜಾಗೃತಿಯು ಅನೇಕ ರಾಜ್ಯಗಳಲ್ಲಿ ಹರಡಿಕೊಂಡಿತು. ಮೊದಲಿಗೆ 'ವೀರಶೈವ ಮತ ಪ್ರಕಾಶಿಕಾ', ೧೮೯೨ರಲ್ಲಿ ಎಂ.ಎ.ರಾಮಾನುಜಯ್ಯಂಗಾರರ 'ಕರ್ನಾಟಕ ಕಾವ್ಯ ಮಂಜರಿ', ಎಚ್.ಎಸ್.ಶಿವಲಿಂಗಶಾಸ್ತ್ರಿಗಳ ಸಂಪಾದಕತ್ವದ 'ಧರ್ಮ ತರಂಗಿಣಿ', ೧೯೧೮ರಲ್ಲಿ ಬೆಳಗಾಂವನಲ್ಲಿ ಶಿ.ಶಿ.ಬಸವನಾಳರ 'ಪ್ರಭೋದ', ಆಲೂರು ವೆಂಕಟರಾಯರ ಸಂಪಾದಕತ್ವದಲ್ಲಿ 'ಜಯಕರ್ನಾಟಕ', ೧೯೨೮ರಲ್ಲಿ ಫ.ಗು.ಹಳಕಟ್ಟಿ ಅವರ 'ಶಿವಾನುಭವ' ಪತ್ರಿಕೆಯು ಪ್ರಕಟಗೊಂಡವು. ಈ ಹಿನ್ನೆಲೆಯಲ್ಲಿ ಕುರುಬ ಸಮುದಾಯದ ಸಂಸ್ಕೃತಿ ಮತ್ತು ಅಭಿವೃದ್ಧಿಗಾದಿ ಪ್ರಕಟಗೊಂಡ ನಿಯತಕಾಲಿಕೆಗಳ ಕುರಿತು ಈಗ ವಿವೇಚಿಸಬಹುದು.

೨. ಕುರುಬರ ಪತ್ರಿಕೆಗಳು

ಕುರುಬ ಜನಾಂಗದ ಶ್ರೇಷ್ಠತೆಯನ್ನು ಮೂಲ ರೂಪವನ್ನು ಸಮಾಜಕ್ಕೆ ತೋರಿಸಿ ಆತ್ಮಾಭಿಮಾನದೊಂದಿಗೆ ಸ್ವಾಭಿಮಾನದ ಬದುಕನ್ನು ಬಾಳಲು ಕರೆ ನೀಡುವ ಉದ್ದೇಶಗಳಿಗಾಗಿ ೧೯ನೆಯ ಶತಮಾನದ ಆದಿಭಾಗದಲ್ಲಿ ಅನೇಕ ಹಾಲುಮತಕ್ಕೆ ಸಂಬಂಧಿಸಿದ ಪತ್ರಿಕೆಗಳು ಜನ್ಮತಳೆದವು.

ಜಗತ್ಪಾವನ ಪತ್ರಿಕೆಯ ಅವಲೋಕನದಿಂದ ಇತರ ಕುಲಸಂಬಂಧಿ ಪತ್ರಿಕೆಗಳು ಪರಿಚಯವಾಗುತ್ತವೆ.

೧. ಎಂ.ಎನ್.ಲಿಂಗಪ್ಪ ಅವರು ಕುರುವಿಜಯ(ವಾರ ಪತ್ರಿಕೆ)ವನ್ನು ೧೯೧೪ರಲ್ಲಿ ಪ್ರಾರಂಭಿಸಿದರು. ಈ ಪತ್ರಿಕೆಯ ಉದ್ದೇಶಗಳನ್ನು ಅವರೇ ಒಂದೆಡೆ ಹೀಗೆ ಹೇಳಿದ್ದಾರೆ. "....ಕುರುಬರ ಜಾತಿ ಕೇವಲ ನಿಕೃಷ್ಟವಾದದ್ದೆಂದು ಭಾವಿಸಿರುವ ಅವಗಾಹನೆಗಾಗಿ ಕುರುಬರ ಜಾತಿ ಎಂತಹದ್ದು, ಇವರ ಮೂಲ ಪಿತೃಗಳ ಚರಿತ್ರೆಗಳೇನು ಇತ್ಯಾದಿ ವಿಷಯಗಳನ್ನು ನಮ್ಮ ಕನ್ನಡ ನಾಡಿನಲ್ಲಿರುವ ಮಹಾಜನಗಳ ಅವಗಾಹನೆಗೆ ತರಬೇಕೆಂಬ ಸದುದ್ದೇಶದಿಂದ ೧೯೧೪ನೇ ಇಸವಿಯಲ್ಲಿ 'ಕುರುವಿಜಯ'ವೆಂಬ ವಾರ ಪತ್ರಿಕೆಯನ್ನು ಪ್ರಾರಂಭಿಸಿದೆವು". ಈ ವಾರ ಪತ್ರಿಕೆಗೆ ಸ್ವಂತ ಪ್ರಿಂಟಿಂಗ್ ಆಫೀಸು ಇಲ್ಲದ ಕಾರಣ ಮತ್ತೊಬ್ಬರ ಛಾಪಾಕಾನೆಯಲ್ಲಿ ಒಂದು ವರ್ಷದವರೆಗೂ ಪ್ರಿಂಟಾಗುತ್ತಾ ಬಂದು ನಂತರ ನಿಂತಿತು(೧೯೩೨ ಮಾರ್ಚ್ ಪುಟ ೨೧).

೨. 'ಕುರುಕುಲ ದರ್ಪಣ' ಎಂಬ ದೊಡ್ಡ ಪುಸ್ತಕದ ಮುದ್ರಣಕ್ಕಾಗಿ ಹಣದ ಕೊರತೆಯನ್ನು ಓದುಗರ ಗಮನಕ್ಕೆ ತರಲಾಗಿದೆ. (೧೯೩೫ ಮಾರ್ಚ್, ಪುಟ ೧೪)

೩. 'ಕುರುಕುಲ ಪ್ರಭಾ' ಎಂಬ ಮತಗ್ರಂಥ ಅಚ್ಚುಹಾಕಿಸುವ ಮನದಾಸೆಯನ್ನು ಸಂಪಾದಕರು ಓದುಗರೊಂದಿಗೆ ಹಂಚಿಕೊಂಡಿದ್ದಾರೆ.

೪. 'ಕುರುಬರ ಕುಲಕೀರ್ತಿ' ಎಂಬ ವಾರ ಪತ್ರಿಕೆಯನ್ನು ೧೯೩೪ರಿಂದ ಹೊರತರಲು ಸಾಕಷ್ಟು ಪ್ರಯತ್ನಿಸಿರುವುದಾಗಿ ಸಂಪಾದಕರು ತಿಳಿಸಿದ್ದಾರೆ. (೧೯೩೫ ಜನವರಿ ಪುಟ ೨೧)

೫. 'ಸ್ವಮತ ಬಂಧು' ಎಂಬ ಮಾಸ ಪತ್ರಿಕೆಯು ಕೆ.ಜವರಯ್ಯನವರ ಸಂಪಾದಕತ್ವದಲ್ಲಿ ೧೯೨೯ ಮೇ ತಿಂಗಳಲ್ಲಿ ಪ್ರಕಟಗೊಂಡಿತು.

ಹೀಗೆ ಕುರುಬ ಜನಾಂಗದ ಚರಿತ್ರೆ ಸಂಸ್ಕೃತಿ ಸಾಮಾಜಿಕ ಸಂಗತಿಗಳನ್ನು ದಾಖಲಿಸಿ ಜನರಿಗೆ ತಲುಪಿಸುವ ಕೆಲವು ಪತ್ರಿಕೆಗಳು ಪ್ರಕಟವಾಗುತ್ತಿದ್ದುದನ್ನು ಜಗತ್ಪಾವನ ಪತ್ರಿಕೆಯಿಂದ ತಿಳಿಯಬಹುದು.

೩. ಕುರುಬರ ಜಗತ್ಪಾವನ ಪತ್ರಿಕೆ: ನಡೆದು ಬಂದ ದಾರಿ

'ಕುರುಬರ ಜಗತ್ಪಾವನ ಪತ್ರಿಕೆ'ಯು ಸ್ವಾತಂತ್ರ್ಯ ಪೂರ್ವದಲ್ಲಿಯೂ ಕುರುಬ ಸಮುದಾಯದ ಸಂಘಟನೆಯನ್ನು ಅತೀವ ಮತಾಭಿಮಾನವನ್ನು, ಜಾಗೃತಾಭಾವವನ್ನು ಪ್ರತಿಬಿಂಬಿಸುವ ಆದ್ಯ ನಿಯತಕಾಲಿಕೆಯಾಗಿದೆ. ಮತದ ಶ್ರೇಯೋಭಿವೃದ್ಧಿಗಾಗಿ ಎಮ್.ಎನ್.ಲಿಂಗಪ್ಪ ಅವರು ೧೯೨೬ ನವೆಂಬರಿನಲ್ಲಿ 'ಜಗತ್ಪಾವನ'ವೆಂಬ ಮಾಸಪತ್ರಿಕೆಯನ್ನು ಬೆಂಗಳೂರಿನಿಂದ ಪ್ರಕಟಿಸಿದರು. ವಿಭಿನ್ನ ದೃಷ್ಟಿಕೋನದ ಉದ್ದೇಶಗಳನ್ನು ಇಟ್ಟುಕೊಂಡು ಪತ್ರಿಕೆಯ ಮುಖಾಂತರ ಗುರಿ ಸಾಧಿಸಲು ಹೊರಟಿದುದು, ಹಾಲುಮತ ಚರಿತ್ರೆಯ ದಾಖಲೆಗಳಲ್ಲೊಂದಾಗಿದೆ. ಮತ ಸಂಬಂಧಿ, ಪುರಾಣ, ಚರಿತ್ರೆ, ವೈಭವದ ಇತಿಹಾಸ, ಸಮಕಾಲೀನ ಸಮಸ್ಯೆಗಳು, ಘಟನಾವಳಿಗಳು, ಜಾಹಿರಾತುಗಳು, ಮತಬಾಂಧವರ ಪರಿಚಯ, ಮತ ಸುಧಾರಣಾ ಸೂಚನೆಗಳು ಹೀಗೆ ಭಿನ್ನ ಹಿನ್ನೆಲೆಯ ವಿಷಯಗಳನ್ನು ಓದುಗರ ಗಮನಕ್ಕೆ ತರುವಲ್ಲಿ ಈ ಪತ್ರಿಕೆ ತುಂಬ ನೆರವಾಗಿದೆ.

ಮೂಲತಃ ಗಂಭೀರ ಚಿಂತನಶೀಲರಾದ ಎಮ್.ಎನ್.ಲಿಂಗಪ್ಪ ಅವರು ವಿಷಯ ನಿರೂಪಣೆಯಲ್ಲಿ ನಿಷ್ಠುರತೆ, ಪ್ರಾಮಾಣಿಕತೆ, ಖಚಿತತೆ, ಸ್ಪಷ್ಟತೆ ಹೊಂದಿದವರು. ಮತಬಾಂಧವರು ಪ್ರಜ್ಞಾವಂತರಾಗಿ ವೈಚಾರಿಕತೆಯನ್ನು ಬೆಳಸಿಕೊಳ್ಳಬೇಕೆಂದು ಇವರ ಎಲ್ಲ ಲೇಖನಗಳ ಆಶಯವಾಗಿದ್ದಿತು. ಪತ್ರಿಕಾ ಪ್ರಕಟಣೆಗಿಂತ ಮೊದಲು ಅನೇಕ ಚಾರಿತ್ರಿಕ ದಾಖಲೆಗಳನ್ನು ಒದಗಿಸಿರುವುದಾಗಿ ಸ್ವತಃ ಲೇಖಕರು ಹೇಳಿಕೊಂಡಿದ್ದಾರೆ. ೧೯೧೧ರಲ್ಲಿ ಮೂರು ವರ್ಷಗಳ ಕಾಲ ನಡೆದ ಜಗಳವನ್ನು ಸಿಟಿ ಮ್ಯಾಜಿಸ್ಟ್ರೇಟ್ ವಿ.ಎಸ್.ರಾಣೋಜಿರಾವ್ ಅವರು ಕೋರ್ಟಿನಲ್ಲಿ ತೀರ್ಪು ನೀಡಿದ ವಿಷಯವನ್ನು ೧೯೧೭ರಲ್ಲಿ ಪ್ರಕಟಗೊಂಡ 'ಕುರುಬರ ಕೈಪಿಡಿ' ವಿವರಿಸುತ್ತದೆ. ಈ ವಿಚಾರವನ್ನು ಮೊದಲ ಬಾರಿಗೆ ಜಗತ್ಪಾವನ ಪತ್ರಿಕೆಯ ಸಂಪಾದಕರಾದ ಎಮ್.ಎನ್.ಲಿಂಗಪ್ಪ ಪ್ರಕಟಿಸಿದುದು ಮೊದಲ ಚಾರಿತ್ರಿಕ ದಾಖಲೆಯೆನ್ನಬಹುದು. ಈ ವಿಷಯ ಉಲ್ಲೇಖವನ್ನು ೧೯೩೧ರ ಡಿಸೆಂಬರ ಸಂಚಿಕೆಯ ಪುಟ ೧೧ರಲ್ಲಿ ಉಲ್ಲೇಖಿಸಲಾಗಿದೆ. ೧೯೧೪ರಲ್ಲಿ 'ಕುರು

ವಿಜಯ' ಹೀಗೆ ಅನೇಕ ಪತ್ರಿಕೆಗಳೊಂದಿಗೆ ಇನ್ನೊಂದು ಪತ್ರಿಕೆ 'ಕುರುಬರ ಕುಲಕೀರ್ತಿ' ಪ್ರಕಟಿಸುವ ಅವರ ಆಶಾದಾಯಕ ಮನೋಭಾವವನ್ನು ಮೆಚ್ಚುವಂತಹದ್ದಾಗಿದೆ.

ಒಂದು ನಿಶ್ಚಿತ ಉದ್ದೇಶದೊಂದಿಗೆ ಜಗತ್ಪಾವನ ಪತ್ರಿಕೆ ಹುಟ್ಟಿಕೊಂಡಿತು. ಲಿಂಗಪ್ಪ ಅವರ ಅಂತರ್ವಾಣಿ ಜಾಗೃತಗೊಂಡು ಹಾಲುಮತಧರ್ಮ ಎಂತಹದು ಎಂದು ತೋರಿಸಬೇಕೆಂಬ ಉತ್ಕಟವಾದ ಛಲಹೊತ್ತು ನವೆಂಬರ ೧೯೨೭ರಂದು ಪ್ರಾರಂಭವಾಯಿತು. ೧೯೨೮ರವರೆಗೆ ಯಾವದೇ ಅಡೆತಡೆಯಿಲ್ಲದೆ ಪ್ರಕಟವಾಗುತ್ತಿತ್ತು. ೧೯೨೮ರಿಂದ ೧೯೩೧ರ ವರೆಗೆ ಕಣ್ಣಿನ ತೊಂದರೆಯಿಂದಾಗಿ ಸಂಪಾದಕರು ಉಪ್ಪಾರರ ಕುರಿತ ವಿಷಯಗಳನ್ನು ಮುದ್ರಿಸಿರುವುದಾಗಿ ತಿಳಿಸಿದ್ದಾರೆ. ಈ ವಿಷಯವನ್ನು ಅಪರಾಧಿ ಭಾವದೊಂದಿಗೆ ತಮ್ಮ ಅಸಹಾಯಕತೆಯನ್ನು ಓದುಗರ ಗಮನಕ್ಕೆ ಪುನಃ ಪುನಃ ತಂದಿರುವುದು ಅವರ ಧಾರ್ಮಿಕ ಪ್ರಜ್ಞೆಯನ್ನು ಎತ್ತಿ ತೋರಿಸುತ್ತದೆ. ಅಲ್ಲದೆ 'ಮಲ್ಹಾರಿರಾವ್ ಹೋಳ್ಕರ' ಎಂಬ ಕುರುಬರ ರಾಜವಂಶದ ಹೆಸರನ್ನು ಮುದ್ರಣಾಲಯಕ್ಕೆ ಇಟ್ಟಿದುದು ಅವರ ಮತಾಭಿಮಾನವನ್ನು ವ್ಯಕ್ತಪಡಿಸುತ್ತದೆ.

ದೀರ್ಘವಾದ ಲೇಖನಗಳನ್ನು ಪ್ರತಿ ಸಂಚಿಕೆಯಲ್ಲಿ ಮುಂದುವರಿಸಿದುದನ್ನು ಗಮನಿಸಬಹುದು. ಒಂದು ಶತಮಾನದಷ್ಟು ಹಿಂದೆಯೇ ಶಿಸ್ತಿನ ಚೌಕಟ್ಟಿನಲ್ಲಿ ಪತ್ರಿಕೆ ಪ್ರಕಟಗೊಂಡಿರುವುದನ್ನು ಮುಖಪುಟ ಮತ್ತು ಸಂಚಿಕೆಗಳ ವಿಷಯ ಪಟ್ಟಿಯ ವಿವರಣೆಯಿಂದ ತಿಳಿಯಬಹುದು. ಭಾಷಾ ದೃಷ್ಟಿಯಿಂದ ಹಳಗನ್ನಡ ಅಕ್ಷರಗಳ ಉಪಯೋಗ ಮತ್ತು ಒತ್ತಕ್ಷರಗಳ ಬದಲಾಗಿ ಸೊನ್ನೆಯನ್ನು ಬಳಸಲಾಗಿದೆ. ಹಾಲುಮತ ಸಮಾಜ ಸರಿಯಾಗಿ ಸಂಘಟನೆಯ ಸ್ವರೂಪ ಪಡೆಯದೇ ಇರುವ ಸಂದರ್ಭದಲ್ಲಿ ಜಗತ್ಪಾವನ ಪತ್ರಿಕೆ ಹುಟ್ಟಿಕೊಂಡಿತು. ಆರ್ಥಿಕ ತೊಂದರೆಗೆ ಮೇಲಿಂದ ಮೇಲೆ ಒಳಗಾಗಲು ಅನೇಕ ಸಾರಿ ಓದುಗರಿಗೆ ಸಹಾಯ ಕೋರಿ ವಿನಂತಿ ಮಾಡಿಕೊಂಡರು. ೧೯೨೭ರಿಂದ ೧೯೩೪ರ ಸಂಚಿಕೆಗಳು ಲಭ್ಯವಾಗಿದ್ದು ಪತ್ರಿಕೆ ಸ್ಥಗಿತಗೊಂಡ ಕಾಲವನ್ನು ನಾವಿಂದು ಗುರುತಿಸಬೇಕಾಗಿದೆ.

ಪತ್ರಿಕೆಯು ಸಮಾಜಕ್ಕಾಗಿ ದುಡಿದ ಮಹನೀಯರ ಪರಿಚಯ, ಮೀಟಿಂಗು, ಸಭೆ-ಸಮಾರಂಭಗಳು, ಸಾಮಾಜಿಕ ಸಮಸ್ಯೆಗಳ ಚರ್ಚೆ, ಸಲಹೆ, ಸೂಚನೆ, ಮತಬಾಂಧವರ ನಿಧನಕ್ಕೆ ಸಂತಾಪ, ಪ್ರಚಾರಕ್ಕಾಗಿ ಜಾಹಿರಾತುಗಳ ಪ್ರಕಟಣೆ, ಸೂರ್ಯವಂಶ ಮತ್ತು ಚಂದ್ರವಂಶಗಳ ವಿವರ, ಚಾರಿತ್ರಿಕ ಹಿನ್ನೆಲೆಯ ಕುರುಬರ ರಾಜವಂಶಗಳು, ಶ್ರೇಷ್ಠತೆಯನ್ನು ಸಾಧಿಸಲು ಜನಾಂಗದವರ ಕರ್ತವ್ಯಗಳು, ಪತ್ರಿಕೆ ಕುರಿತು ಪ್ರೋತ್ಸಾಹಿಸಿದವರಿಗೆ ವಂದನೆ ತಿಳಿಸುವುದು, ಸ್ವಧರ್ಮೋಪದೇಶ ಇಂಥ ಹಲವಾರು ವಿಚಾರಗಳನ್ನು ಸಮಾಜಕ್ಕೆ ತಲುಪಿಸುವಲ್ಲಿ ಯಶಸ್ವಿಯಾದ ಸಂಪಾದಕರು ತಮ್ಮ ಸಂತೋಷವನ್ನು ಹೀಗೆ ಹಂಚಿಕೊಂಡಿದ್ದಾರೆ. "ನಮ್ಮ ಜಗತ್ಪಾವನ ಪತ್ರಿಕೆಗೆ ಈಗಾಗಲೇ ಬಹು ಜನರ ಆರ್ಡರುಗಳೂ ಬರಲಾರಂಭಿಸಿವೆ. ಇದಕ್ಕಾಗಿ ನಾವು ಸಂತೋಷಪೂರ್ವಕವಾಗಿ ಇನ್ನೂ ಹೆಚ್ಚು ವಿಷಯಗಳನ್ನು ಬರಿಯಲಾರಂಭಿಸಲು ಮುಂದಿನ ಸಂಚಿಕೆಯಿಂದ ಈಗಿನ ೩೨ ಪುಟವನ್ನು ೪೦ಕ್ಕೆ ಹೆಚ್ಚಿಸುತ್ತೇವೆ"(೧೯೨೭ ಡಿಸೆಂಬರ ಪುಟ ೩೦).

ಜಗತ್ಪಾವನ ಮಾಸಪತ್ರಿಕೆ ೧೯೨೭ ನವೆಂಬರರಂದು ಅನ್ಯರ ಛಾಪಾಕಾನೆಯಲ್ಲಿ ಹುಟ್ಟಿಕೊಂಡು ಅಕ್ಟೋಬರ ೧೯೨೮ರಲ್ಲಿ ಸ್ವಂತ ಛಾಪಾಕಾನೆಯಲ್ಲಿ ಮುದ್ರಿಸಲ್ಪಟ್ಟಿತು. ಹಣದ ತೊಂದರೆಯೊಂದಿಗೆ ಮುದ್ರಣದ ಕಷ್ಟಸಾಧ್ಯತೆಯನ್ನು ಗಮನಕ್ಕೆ ತಂದುಕೊಳ್ಳಬಹುದು. "..... ನಾವು ಸ್ಥಾಪಿಸಲಿಕ್ಕಿರುವ ಸ್ವಂತ ಛಾಪಾಕಾನೆಯ ಬಂಡವಾಳಕ್ಕಾಗಿ ಮೊದಲಿನಿಂದಲೂ ಮಾಸಪತ್ರಿಕೆಗಳನ್ನು ತೆಗೆದುಕೊಳ್ಳುತ್ತಿರುವ ನಮ್ಮ ಮತಾಭಿಮಾನಿಗಳು ತಮ್ಮ ಮೊದಲನೇ ವರ್ಷದ ಚಂದಾ....ಗಳನ್ನು ಬೇಬಾಕಿ ಕಳುಹಿಸಬೇಕೆಂದು ಪ್ರಾರ್ಥಿಸುವೆವು"

ಕೆಲವು ಸಂಚಿಕೆಗಳಲ್ಲಿನ ಅಭಿಪ್ರಾಯಗಳು ಮತ್ತು ಲೇಖನಗಳು ಪುನರುಕ್ತಿಗೊಂಡರೂ ಅವು ಆಯಾ ಸಂದರ್ಭಕ್ಕೆ ಅನಿವಾರ್ಯವೂ ಔಚಿತ್ಯವೂ ಆಗಿವೆ ಎಂದೇ ಹೇಳಬೇಕು.

೪. ಪತ್ರಿಕೆಯ ವಿಶೇಷತೆ

ಕೆಲವು ಅಡೆತಡೆಗಳಿಂದಾಗಿ ಪತ್ರಿಕೆ ತಡವಾಗಿ ಪ್ರಕಟಗೊಳ್ಳಲು ಸಂಪಾದಕರು ನಿಂದೆಗೆ ಗುರಿಯಾದುದನ್ನು 'ದುರಾಭಿಮಾನಿಗಳ ಹೇಳಿಕೆ' ಎಂಬ ಶೀರ್ಷಿಕೆ(೧೯೨೭ರ ನವೆಂಬರ ಡಿಸೆಂಬರ ಸಂಚಿಕೆಯಲ್ಲಿ)ಯಲ್ಲಿ ಸ್ಪಷ್ಟಪಡಿಸಿದ್ದಾರೆ. "...... ಅಸೂಯಾಪರರು ಜಗತ್ಪಾವನ ಪತ್ರಿಕೆಯು ನಿಂತೇ ಹೋಯಿತು ಎಂದು ಅಲ್ಲಲ್ಲಿ ಗುಬಾರು ಹುಟ್ಟಿಸಿದ್ದಾರಂತೆ? ಪತ್ರಿಕೆಗಳನ್ನು ನಡೆಸುವ ವ್ಯಥೆಯು ಅಂತಹ ನರಾಧಮರಿಗೆ ಹೇಗೆ ತಿಳಿಯಬೇಕು" ಎಂಬ ಸಂಪಾದಕರ ಮಾತುಗಳಲ್ಲಿ ಪತ್ರಿಕೆಯನ್ನು ನಡೆಸುವ ಪ್ರಯಾಸವನ್ನು ಅರಿಯಬಹುದು. ಮತ್ತೊಂದೆಡೆ "ಪ್ರಿಯ ಗ್ರಾಹಕರಿರಾ ತಮ್ಮಗಳ ಅನುಗ್ರಹದಿಂದಲೂ ಈ ನಮ್ಮ 'ಜಗತ್ಪಾವನ'ವೆಂಬ ಬಾಲಾರಿಷ್ಟ ಮುಂತಾದ ಯಾವ ವಿಪತ್ತಿಗೂ ಜಗ್ಗದೇ ತನ್ನ ಮೊದಲನೇ ವರ್ಷದ ವರ್ಧಂತಿಯ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ಪೂರೈಸಿ ಈಗ ೨ನೇ ವರ್ಷದ ಸುದಿವಸಗಳಲ್ಲಿ ತನ್ನ ಪಾದಾರ್ಪಣೆಯನ್ನು ಮಾಡುವುದರ ಮೂಲಕ ನಮ್ಮ ಪ್ರಿಯ ಬಂಧುಗಳಾದ ತಮ್ಮೆಲ್ಲರ ಪ್ರೀತಿ ವಿಶ್ವಾಸಗಳನ್ನು ಜ್ಞಪ್ತಿಪಡಿಸಲು ಈಗ ೨ನೆಯ ವರ್ಷದ .... ಸಂಚಿಕೆಯಾಗಿ ಹೊರಟಿದೆ" ಎಂದು ಸಮಾಧಾನ ಸಂತೋಷಗಳನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಮೊದಲ ವರ್ಷದ ೧೨ ಸಂಚಿಕೆಗಳನ್ನು ತುಂಬ ಪ್ರಯಸದಿಂದ ಲಿಂಗಪ್ಪನವರು ಪ್ರಕಟಿಸಿದ್ದಾರೆ.

ಅತಿ ಕಡಿಮೆ ಅವಧಿಯಲ್ಲಿ ತನ್ನ ಜನಪ್ರಿಯತೆಯಿಂದ ಗಣ್ಯರ ಸದಭಿಪ್ರಾಯಗಳನ್ನು ಪಡೆಯಲು ಪತ್ರಿಕೆ ಅರ್ಹವಾಯಿತು. ೧೯೨೭ರ ಡಿಸೆಂಬರ ಸಂಚಿಕೆಯ ಪುಟ ೩೦ ರಲ್ಲಿ "ಕುರುಬ ಮಹಾಜನಗಳ ಅಭಿವೃದ್ಧಿಗಾಗಿ ಬಹಳ ಪ್ರಯತ್ನ ಪಡುತ್ತಲಿರುವ ಮ|| ಎಂ.ಎಸ್.ಲಿಂಗಪ್ಪನವರು ಆರ್ಯಾವರ್ತ ದೇಶವನ್ನು ಅಧೋಗತಿಗೆ ತರುತ್ತಲಿರುವ ಜಾತಿಭೇದವೆಂಬ ಮೂಢತ್ವವನ್ನು ಖಂಡನೆ ಮಾಡಿ ಜಗದಾದಿ ಕಾಲದಿಂದಲೂ ಐಶ್ವರ್ಯ ವಿದ್ಯಾ, ವಿವೇಕ, ವಿನಯ, ಐಕ್ಯತೆ, ಘನತೆ, ಪಾಲಿಶುದ್ಧತೆ, ಸಕಲಶಾಸ್ತ್ರ ವಿಜ್ಞಾನ ಸಂಪನ್ನತೆ ಮುಂತಾದ ಅತ್ಯುತ್ತಮ ನಾಗರಿಕತೆಯ ಶಿಖರಕ್ಕೇರಿ ಮೆರೆಯುತ್ತಿದ್ದ ಈ ಭರತ ಖಂಡಸ್ಥ ಆರ್ಯೋತ್ತಮರಾದ ಕುರುಬ ಮತದ ಜನರಿಗೆ ಪ್ರಕೃತದಲ್ಲಿ ಪ್ರಾಪ್ತವಾಗಿರುವ ಹೀನಸ್ಥಿತಿಯನ್ನು ತಪ್ಪಿಸಲು ಮನೋನಿಶ್ಚಯ ಮಾಡಿಕೊಂಡು ಜಗತ್ಪಾವನವೆಂಬ ಮಾಸಪತ್ರಿಕೆಯನ್ನು ಪ್ರಕಟಿಸಲು ಪ್ರಾರಂಭ ಮಾಡಿರುವರು ಅಜ್ಞಾನ ನಿವಾರಣೆ, ಸ್ವಾರ್ಥತೆ, ಮತ್ತು

ಪರದೂಷಣೆಯ ಖಂಡನೆ, ಸ್ವತಂತ್ರ ಜೀವನದ ಅವಶ್ಯಕತೆಯ ನಿರೂಪಣೆ, ಈ ಜಾತಿಯ ಮಹೀಪಾಲಕರ ಜೀವನದ ಚರಿತ್ರೆಗಳ ಪ್ರಕಟಣೆ ಇವೇ ಮೊದಲಾದ ಮಾರ್ಗಗಳಲ್ಲಿ ಇವರು ತಮ್ಮ ಸದುದ್ದೇಶವನ್ನು ನೆರವೇರಿಸಬೇಕೆಂದಿರುವರು. ಇವರ ಪ್ರಯತ್ನಗಳಿಗೆ ದೇವರು ವಿಜಯವನ್ನುಂಟು ಮಾಡಲೆಂದು ನಾವು ಕೋರುತ್ತೇವೆ" ಎಂಬ ಹೇಳಿಕೆಯಿಂದ ಪತ್ರಿಕೆಯ ಉದ್ದೇಶ ಗುರಿ ಮತ್ತು ಸಾಧನೆಗಳು ಗಮನಕ್ಕೆ ಬರುತ್ತವೆ. ಅಲ್ಲದೆ ಪತ್ರಕರ್ತರು, ಚಿತ್ರದುರ್ಗದ ಪಾಳೆಯಗಾರರು, ಕರ್ನಾಟಕ ಬ್ರಾಹ್ಮಣರ ಚಲುವಯ್ಯನವರು, ಒಕ್ಕಲಿಗರ ಪಾಳ್ಯ ಮುನಿಯಪ್ಪನವರು ಮತ್ತು ಕರಿಸಿದ್ದಪ್ಪ ಒಡೆಯರ ಅವರು ಪ್ರೋತ್ಸಾಹಿಸಿದುದನ್ನು (೧೯೨೬ ಡಿಸೆಂಬರ ಪುಟ, ೨೩ರಲ್ಲಿ) ಉಲ್ಲೇಖಿಸಿದ್ದಾರೆ. ಪತ್ರಿಕೆಯ ಸ್ವರೂಪ ಕಲ್ಪನೆ ದೃಷ್ಟಿಯಿಂದ ಸಂಚಿಕೆಯಲ್ಲಿ ಬಂದ ಪ್ರಕಟಣೆಗಳು ಪ್ರಸ್ತುತವಾಗಿವೆ. ಸಂಪಾದಕರ ಉನ್ನತ ವಿಚಾರಗಳನ್ನು ಅವರ ಬರಹಗಳು ಪ್ರತಿಬಿಂಬಿಸುತ್ತವೆ.

ಕುರುಬರ ಇತಿಹಾಸದಲ್ಲಿ ನಡೆದ ಘಟನೆಗಳನ್ನು ತಿಳಿಯುವದು ಮುಖ್ಯವಾದುದರಿಂದ ಶಾಸನಗಳನ್ನು ವೇದ ಪುರಾಣಗಳನ್ನು ಲೇಖನ ರೂಪದಲ್ಲಿ ಪ್ರಕಟಿಸಿದ್ದಾರೆ. ಇದು ಪ್ರಾಚೀನ ಸಾಮಾಜಿಕ ಪರಿಸ್ಥಿತಿ ಹೇಗಿತ್ತೆಂದು ಪರಿಚಯಿಸುತ್ತದೆ. ಚಾರಿತ್ರಿಕ ಲೇಖನಗಳನ್ನು ವ್ಯಕ್ತಿ ಚರಿತ್ರೆಗಳನ್ನು ಮತ ಸಂಬಂಧಿ ಮಹತ್ವದ ಸುದ್ದಿಗಳನ್ನು ಪ್ರಕಟಿಸಿ ಸಾರ್ವಜನಿಕರ ಗಮನವನ್ನು ಸೆಳೆದರು. ಟೀಕೆ, ಟಿಪ್ಪಣಿ, ಸ್ಫುಟ ವಿಚಾರಗಳು, ಹೃದ್ಗತ ಆತ್ಮ ವಿವರಣೆ ಹೆಸರಿನಲ್ಲಿ ಸಂಪಾದಕೀಯ ಜಗತ್ಪಾವನದಲ್ಲಿ ಪ್ರಕಟಿಸುತ್ತಾ ಬಂದಿದ್ದಾರೆ. ಪ್ರಚಲಿತ ಪರಿಸ್ಥಿತಿಗೆ ಸಂಬಂಧಪಟ್ಟ ಸಾಮಾಜಿಕ, ಧಾರ್ಮಿಕ, ಐತಿಹಾಸಿಕ ಲೇಖನಗಳಿಗೆ ಇಂಬು ಕೊಡಲಾಗಿದೆ.

೫. ಪತ್ರಿಕೆಯ ವಿಷಯ ವೈವಿಧ್ಯ

ವೇದಗಳ ನೆಲೆಯಲ್ಲಿ ಸ್ತ್ರೀ ಪುರುಷರ ವಿವಾಹವಯೋನಿರ್ಣಯ, ದ್ರೋಣ ಅಶ್ವತ್ಥಾಮರ ವಿಚಾರ, ಶೃಂಗೇರಿ ಮಠದೊಂದಿಗೆ ಕುರುಬ ಜನಾಂಗದ ಸಂಬಂಧ, ಕೊಹಿನೂರ್ ರತ್ನದ ಪ್ರಭಾವ ಮತ್ತು ಮಹತ್ವ, ಕುರುಬ ಜನಾಂಗವು ಪೂರ್ವದ ಶ್ರೇಷ್ಠತೆಯ ಜೀವನ ಪಡೆಯಲು ಕೈಕೊಳ್ಳಬೇಕಾದ ಕೆಲಸಗಳು, ಕುರುಬರಲ್ಲಿಯ ಒಳಜಗಳಗಳು, ಉಣ್ಣೆಕಂಕಣ-ಹತ್ತಿಕಂಕಣ-ಮಿಶ್ರಕಂಕಣಗಳೆಂಬ ಮೂರು ಒಳಬೇಧಗಳು, ೧೯೨೮ ಜುಲೈ ೧ರ 'ಕುರುಬರ ಪತ್ರಿಕೆ'ಯಲ್ಲಿ 'ಕುರುಬರು ಏಕೆ ಲಿಂಗವನ್ನು ಕಟ್ಟಿಕೊಳ್ಳಬೇಕು' ಎಂಬ ವಿ.ಆರ್. ಹನುಮಂತಯ್ಯನವರ ಲೇಖನದ ಮಾಹಿತಿ, ವೇದ ಪುರಾಣಗಳ ಮೂಲಕ ಪ್ರಕ್ಷಿಪ್ತ ಶ್ಲೋಕಗಳನ್ನು ಸೇರಿಸಿ, ಕುರುಬರನ್ನು ಅನಾರ್ಯರೆಂದು, ಚಾಂಡಾಲರೆಂದು ಚಿತ್ರಿಸಲು ಪ್ರಯತ್ನಿಸಿರುವ ನೀಚ ಕಾರ್ಯಗಳ ಖಂಡನೆ, ಸೂರ್ಯವಂಶ, ಚಂದ್ರವಂಶ ಮತ್ತು ಯದುವಂಶಗಳಿಂದ ಹುಟ್ಟಿದ ಕುರುಬ ಕುಲದ ವಿವರ, ಇಂಥ ಪೌರಾಣಿಕ ಹಿನ್ನೆಲೆಯ ಸಂಗತಿಗಳನ್ನು ಓದುಗರ ಗಮನಕ್ಕೆ ತರಲು ಪ್ರಯತ್ನಿಸಲಾಗಿದೆ.

ಸಮಾಜದ ಮುಖಂಡರು, ಮತಬಾಂಧವರು ಶಿವಾಧೀನರಾಗಲು ಅವರಿಗೆ ಪತ್ರಿಕೆಯ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸಲಾಗಿದೆ. ಬಾಲ್ಯವಿವಾಹ ಖಂಡನೆ, ಜನಾಂಗದ ಸ್ತ್ರೀ ಪುರುಷರು ಗಮನಿಸಬೇಕಾದ ಮುಖ್ಯ ವಿಚಾರಗಳನ್ನು ಸಮಾಜಕ್ಕೆ ತಲುಪಿಸುವ ಪ್ರಯತ್ನವನ್ನು ಹೊಂದಿದ್ದಿತು.

'ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ' ಎಂಬ ಕೃತಿಯಲ್ಲಿ ಡಾ. ವೆಂಕಟಸುಬ್ಬಯ್ಯನವರು ಬಿಜ್ಜಳನು ಶಿವಪೂಜಕನಾದ, ಶೈವನೇ ಹೊರತು ಜೈನನಲ್ಲ ಎಂದು ನಿರ್ಣಯಿಸಿದುದನ್ನು ೧೯೩೧ರ ಡಿಸೆಂಬರ ಸಂಚಿಕೆಯ ಪುಟ ೧೩ರಲ್ಲಿ ಉಲ್ಲೇಖಿಸಲಾಗಿದೆ. ವೈಷ್ಣವ ಮತ ಸ್ಥಾಪಕರಾದ ೧೨ನೆಯ ಶತಮಾನದ ರಾಮಾನುಜಾಚಾರ್ಯರು, ಪಲ್ಲವರಾದ ದ್ರೋಣ ಅಶ್ವತ್ಥಾಮರು, ರೈಸ್, ಫ್ಲೀಟ್, ವಿಲ್‌ಸನ್, ಎಂಥೋವನ್, ವೆಂಕಟರಂಗೋ ಕಟ್ಟಿ ಮೊದಲಾದ ಪಂಡಿತರ ಕುರುಬರ ಮೂಲದ ಚರ್ಚೆ, ಚರಿತ್ರೆಯಲ್ಲಿ ಕಾಳಿದಾಸ, ಕೋಲ ಎಂಬ ಕುರುಬನಿಂದ ಚೋಳ ವಂಶದ ಉಗಮ, ಆನೆಗೊಂದಿಯ ಕದಂಬರು ಮೂಲತಃ ಕುರುಬರು ಎಂಬ ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಚಾಲುಕ್ಯರು, ಪಲ್ಲವರು, ದ್ವಾರಾವತಿಯ ಯಾದವರು ಹೊಯ್ಸಳ ಬಲ್ಲಾಳ ಮೊದಲಾದ ರಾಜವಂಶಗಳ ಮೂಲ ಕುರುಬಕುಲ ಎಂದು ಹೀಗೆ ದೃಢಪಡಿಸಲಾಗಿದೆ. "ಯಾಕೆಂದರೆ ಕುರುಬರೆಂಬ ಪ್ರಸಿದ್ಧರಾದ ಗಹಲೋಕರೆಂಬ ಕ್ಷತ್ರೀಯ ಪಂಗಡದಲ್ಲಿ ಸಾಲಂಕಿ(ಚಾಲುಕ್ಯ)ಯವರು, ರಾಠೋಡ ಕ್ಷತ್ರೀಯರು, ತೋಮರ್ (ಇವರಲ್ಲಿ ಜಯಚಂದನೆಂಬ ಅಮೀರದ ಅರಸನು ಪ್ರಸಿದ್ಧನು)ರೂ, ಚಹ್ವಾನ (ಇವರೆಲ್ಲ ಡಿಲ್ಲಿಯ ಪೃಥ್ವಿರಾಜನು ಪ್ರಸಿದ್ಧನು), ಶಿಸೋದಿಯಾ (ಇವರೆಲ್ಲ ಮೇವಾರದ ರಾಣಾ ಹಾಗೂ ಛತ್ರಪತಿ ಶಿವಾಜಿ ಇವರುಗಳು ಪ್ರಸಿದ್ಧರು) ಮುಂತಾದ ಒಳಭೇದಗಳಿರುವವೆಂದು ಜಾತಿ ಅನ್ವೇಷಣ ಪುಸ್ತಕದ ೧೧೬ ಪುಟದಲ್ಲಿ ವಿಶದೀಕರಿಸಲ್ಪಟ್ಟಿದೆ. ಈಗ ಗಹಲೋಕ್ ಕ್ಷತ್ರಿಯರು ಕುರುಬ (ಷಪ್ಪರ್ಡ) ರೆಂಬುದಾಗಿ ಮಿ॥ ಟಾಡ್ ದೊರೆಯವರು ರಾಜಸ್ಥಾನ ಇತಿಹಾಸದ ಲನೇ ಪುಟದಲ್ಲಿ ಬರೆದಿರುವರು." ಹಂಪಿಯ ವಿಜಯನಗರವು ಕುರುಬರಾದ ಹಕ್ಕಬುಕ್ಕರಿಂದ ಪ್ರಾರಂಭವಾದ ಮಾಹಿತಿ ನೀಡುತ್ತದೆ. ಮ.ಎಸ್.ಕೃಷ್ಣಸ್ವಾಮಿ ಐಯ್ಯಂಗಾರ್ ಎಂ.ಎ. ಅವರು "ದಿ ಸೋರ್ಸ್ ಆಫ್ ವಿಜಯನಗರ"ವೆಂಬ ಕೃತಿಯ ೩೦೩ನೆಯ ಪುಟದಲ್ಲಿ ಒಂದು ಶಾಸನವನ್ನು ದಾಖಲಿಸಿ ಅದರಲ್ಲಿ "ಅತ್ತಲುತ್ತರದೇಶದೊಳ್ ತುಂಗಭದ್ರಾ ತೀರದೋಳ್ ವಿದ್ಯಾನಗರಿಯನಾಳ್ದ ಬುಕ್ಕರ್ಮೊದಲಾದ ಕುರುಂಬರಾಯರು" ಎಂಬ ಹೇಳಿಕೆಯಿಂದ ವಿಜಯನಗರದ ಸಾಮ್ರಾಜ್ಯದ ಮೊದಲ ರಾಜರು ಕುರುಬರು ಎಂಬ ವಿಚಾರವನ್ನು ವಿವರಿಸಲಾಗಿದೆ(೧೯೨೭ ಜುಲೈ-ಅಕ್ಟೋಬರ ಪುಟ ೩೦).

ಪತ್ರಿಕೆಯ ಪ್ರಚಾರಕ್ಕೆ ತೊಡಗಿಸಿಕೊಂಡ ಮತಾಭಿಮಾನಿಗಳ ಪಾತ್ರದ ಪ್ರಕಟಣೆ, ಸಂಪಾದಕರ ಆಶ್ವಾಸನೆ, ಆದ್ಯ ಆರ್ಯ ಜನಾಂಗದಲ್ಲಿ ಕುರುಬರೇ ಅತಿ ಉತ್ತಮಸ್ಥಿತಿಯಲ್ಲಿದ್ದರೆಂಬುದನ್ನು ದಾಖಲೆಗಳ ಮೂಲಕ ಸ್ಪಷ್ಟಪಡಿಸಲಾಗಿದೆ. ಹಾಲುಮತದ ಪ್ರಾಚೀನ ಕೇಂದ್ರವಾದ ಸರೂರು, ಅಲ್ಲಿಯ ಶಾಂತಮುತ್ತಯ್ಯ, ಪದ್ಮಗೊಂಡನಿಂದ ಉಗಮಗೊಂಡ ಹಾಲುಮತ, ಪಲ್ಲವರು, 'ಆಂಧ್ರರಾಜರು ಹಂಡೇ ಕುರುಬರಲ್ಲವೇ' ಎಂಬ ಲೇಖನಗಳನ್ನು ಆಧಾರ ಸಹಿತ ಪ್ರಕಟಿಸಿರುವುದನ್ನು ಈ ಪತ್ರಿಕೆಯಲ್ಲಿ ಕಾಣಬಹುದು.

೬. ಸಮಕಾಲೀನ ಸಂದರ್ಭದ ಘಟನೆಗಳು

ಸಮಾಜದ ಪ್ರಚಲಿತ ಪರಿಸ್ಥಿತಿಗಳನ್ನು ಪ್ರಚಾರ ಮಾಡುವದು ಪತ್ರಿಕೆಯ ಉದ್ದೇಶಗಳಲ್ಲಿ ಒಂದಾಗಿದೆ.

ಮತಬಾಂಧವರಾದ ಮಹದೇವಪ್ಪಯ್ಯ ಒಡೆಯರವರ ಭಾವಚಿತ್ರಗಳನ್ನು, ವಂಶಚರಿತೆಯನ್ನು, ಜೀವಮಾನ ಚರಿತ್ರೆಯನ್ನು ಪ್ರಕಟಿಸುವುದಾಗಿ ಎಮ್.ಎನ್.ಲಿಂಗಪ್ಪನವರು (೧೯೨೭ ಜುಲೈ-ಅಕ್ಟೋಬರ್ ಪುಟ ೪೯) ತಿಳಿಸಿದ್ದಾರೆ. ೧೧-೧೧-೧೯೨೭ ರಂದು ಕುರುಬರ ಸಂಘದಿಂದ ಜಿ.ಮುನಿಯಪ್ಪನವರು ಸಂಪಾದಕ ಎಮ್.ಎನ್. ಲಿಂಗಪ್ಪನವರಿಗೆ ಬರೆದ ಕ್ಷಮಾಪಣಾ ಪತ್ರವನ್ನು ಒಂದೆಡೆ ಉಲ್ಲೇಖಿಸಲಾಗಿದೆ. ಡಿ.ಎಚ್.ದೊಡ್ಡಯ್ಯನವರು ಬಿ.ಎ.ವಿದ್ಯಾರ್ಥಿಯಾಗಿರುವಾಗಲೇ ನಾಲ್ಕೈದು ಕಥೆಗಳನ್ನು ಮತ್ತು ನಾಟಕಗಳನ್ನು ಬರೆದುದನ್ನು ಜಗತ್ಪಾವನ ಪತ್ರಿಕೆ ಹೇಳುತ್ತದೆ. 'ಕಹಳೆಯ ಕೂಗು' ಎಂಬ ೧೨ ಪದ್ಯಗಳ ಭಾಮಿನಿಷಟ್ಪದಿ ಕಾವ್ಯವನ್ನು ೧೯೨೭ ಜುಲೈ ಅಕ್ಟೋಬರ ಪತ್ರಿಕೆಯ ಪುಟ ೫೧ರಲ್ಲಿ ದಾಖಲಿಸಲಾಗಿದೆ. ಕುರುಬ ಕುಲದ ಭೂತಕಾಲದ ವೈಭವಪೂರಿತ ಚರಿತ್ರೆಯನ್ನು ಕಾವ್ಯದಲ್ಲಿ ಕಟ್ಟಿಕೊಟ್ಟು ಜಾಗೃತಿಗಾಗಿ ಕವಿ ಕರೆ ನೀಡಿದುದಕ್ಕೆ ಕೆಳಗಿನ ಪದ್ಯದ ಉದಾಹರಣೆಯಾಗಿದೆ.

ತೆರೆದು ನಿಮ್ಮಯ ಕಣ್ಗಳಂ ಅವ
ಸರದಿ ನೋಡಿರಿ ನಿಮ್ಮ ಕುಲದೊಳು
ಹಿರಿಯ ತೆರೆಯೊಳು ಮೆರೆದ ಮನುಜರ ಜನ್ಮ ಚರಿತೆಯನು
ಅರಿತುಕೊಳ್ಳುತ ಲವರ ಜನ್ಮಸು
ಚರಿತನು ಬಿಡದೋದುತಲಿ ಅವ
ದೊರೆವ ಮಾರ್ಗದಿ ನಡೆದು ಪೋದೊಡೆಸುವೆವು ಕಾಬುವುದೈ ||೫|| (ಪುಟ ೫೧)

ಅನುನಯದಿ ಕೇಳಿ 'ಜಗತ್ಪಾ
ವನ'ವು ನಮ್ಮೀ ಕುರುಬವಂಶದ
ಜನರ ನಿದ್ರೆಯ ಕಳೆಯ ಬೆಳಗಿನ ಕಹಳೆಯಂದದಲಿ
ಇನನು ಉದಯಿಸಿಯೆ ರಜನಿಕಾಂತೆಯ
ಬಿನದ ಪೋಡತ್ತೆ ಏಳಿ ಕೇಳಿರಿ
ಜನರೆ ನಿದ್ರೆಯ ದೂರ ಮಾಡಿರೆಸುತ್ತ ದೊರೆಯುವದು ||೧|| (ಪುಟ ೫೩)

೧೯೨೭ ಜುಲೈ-ಅಕ್ಟೋಬರ ಪುಟ ೭೫ರಲ್ಲಿ ಕೋಹಿನೂರ ವಜ್ರದ ಚರ್ಚೆಯೊಂದಿಗೆ ಅದು ಬ್ರಿಟಿಷ ಪ್ರಭುಗಳವರ ಆಭರಣಗಳ ಜತೇರಿ ಲಂಡನ್ ಟವರಿನಲ್ಲಿರುವದನ್ನು ವಿವರಿಸಲಾಗಿದೆ. ಸಂಘದ ಮೀಟಿಂಗನ ವಿಷಯ ಕುರಿತಾಗಿ ತಾ ४-३-೨೮ನೇ ಭಾನುವಾರದ ಪ್ರಾತಃಕಾಲ ೮ ಘಂಟೆಯ ಸಮಯದಲ್ಲಿ ಬೆಂಗಳೂರು ಕುರುಬರ ಸಂಘದಲ್ಲಿ ಮೀಟಿಂಗ ಸೇರಿದ ಶ್ರೀ ಜಿ.ಸಂಜೀವಯ್ಯನವರು, ಜಿ.ಮುನಿಯಪ್ಪನವರು, ಎಂ. ಮುನಿಸಾಯಪ್ಪನವರು, ಎಂ.ಎಲ್ಲಪ್ಪನವರು, ಬಿ.ವೆಂಕಟಪ್ಪನವರು, ಸೀಲಿ ವೆಂಕಟಪ್ಪನವರು ಮುಂತಾದವರ ನೇತೃತ್ವದಲ್ಲಿ ಕುರುಬರ ವಿ.ಆರ್.ಹನುಮಂತಯ್ಯನವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದನ್ನು ತಿಳಿಸಲಾಗಿದೆ.

ಅಲ್ಲದೆ ವಿ.ಆರ್.ಹನುಮಂತಯ್ಯನವರು ಕುರುಬರ ಸಂಘಕ್ಕೆ ಲೈಫ ಮೆಂಬರರಾಗಲು ೧೫೦ ರೂಗಳಿಗೆ ಬದಲಾಗಿ ೨೦೦ ಕುರುಬರ ಚರಿತ್ರೆಯ ಪ್ರತಿಗಳನ್ನು ಕೊಡುವುದಾಗಿ ಬರೆದಿದ್ದ ಕಾಗದವನ್ನು ಓದಿ ವಂದನೆ ಸಲ್ಲಿಸಿ ಅವರನ್ನು ಸಂಘಕ್ಕೆ ಲೈಫ ಮೆಂಬರರನ್ನಾಗಿ ಸೇರಿಸಿಕೊಳ್ಳಲ್ಪಟ್ಟ ವಿವರ ಹೊಂದಿದೆ. "ನಮ್ಮ ಕುರುಬ ಜಗದ್ಗುರುಗಳವರು ನಮಗೆ ದಯಪಾಲಿಸಿದ ಶ್ರೀಮುಖ" ಎಂಬ ಶೀರ್ಷಿಕೆಯಲ್ಲಿ ಸರೂರ ಶಾಂತಮುತ್ತಯ್ಯ ಒಡೆಯರ ಕರಿಸಿದ್ದಪ್ಪಯ್ಯ ಒಡೆಯರ, ಚಳ್ಳಕೆರೆ ತಾ. ದೊಡ್ಡೇರಿ ಸಿಂಹಾಸನಾಧಿಪತಿಗಳಾದ ರಂಗಾಪುರದ ಮಠದ ಶ್ರೀ ದೊಡ್ಡ ರೇವಪ್ಪಯ್ಯ ಒಡೆಯರ ಮುಂತಾದವರ ವಿಷಯಗಳನ್ನು ಚರ್ಚಿಸಲಾಗಿದೆ(೧೯೨೬ ಡಿಸೆಂಬರ ಪುಟ೨೦). ಪ್ರಾಚೀನ ಒಡೆಯರುಗಳಾದ ಸರೂರಿನ ಶಾಂತಮುತ್ತಯ್ಯನ ಹೆಸರು ಹೇಳಿಕೊಂಡು ಚಂದಾ ವಸೂಲಿ ಮಾಡಿರುವ ಮೋಸದ ಪ್ರಕರಣವನ್ನು ಓದುಗರ ಗಮನಕ್ಕೆ ತಂದು ಸಮಾಜಬಾಂಧವರನ್ನು ಎಚ್ಚರಿಸಲಾಗಿದೆ. ಸಂಪಾದಕರು ಕುರುಬರ ವೈಭವ ಕರ್ತವ್ಯಗಳನ್ನು ಚರ್ಚಿಸಿ ಸತ್ಯಶುದ್ಧರಾಗಿ ಬದುಕಲು ಕರೆ ನೀಡಿ ಕುರುಬ ಜನಾಂಗದ ಸ್ತ್ರೀ ಪುರುಷರೆಲ್ಲರೂ ಗಮನದಲ್ಲಿಡಬೇಕಾದ ಅನೇಕ ವಿಚಾರಗಳನ್ನು ಲೇಖನ ರೂಪದಲ್ಲಿ ನೀಡಿದ್ದಾರೆ. ಇಂಥ ಅನೇಕ ಸಮಕಾಲೀನ ಘಟನೆಗಳನ್ನು ದಾಖಲಿಸಿರುವದು ಈ ಪತ್ರಿಕೆಯ ವಿಶೇಷವಾಗಿದೆ.

ಸಂಪಾದಕರ ಗುರಿ ಇಷ್ಟಕ್ಕೆ ನಿಲ್ಲದೆ ಜನಾಂಗ ಪ್ರಜ್ಞೆಗಳನ್ನು ಸಂವರ್ಧಿಸುತ್ತ ನಾಡಿನ ಸರ್ವಾಂಗೀಣ, ಪ್ರಗತಿಗೆ ದುಡಿಯಬೇಕು. ಜನತೆ ಸರ್ವತೋಮುಖ ಏಳಿಗೆ ಪಡೆಯಬೇಕು. ಪ್ರಜ್ಞಾವಂತ ಪ್ರಜೆಗಳಾಗಿ ಬದುಕಿನ ವಿವಿಧ ರಂಗಗಳಲ್ಲಿ ವಿಕಾಸಹೊಂದಿ ಪ್ರಗತಿಗೆ ಸಿದ್ಧರಾಗಬೇಕು. ಸಮಕಾಲೀನ ಜೀವನದ ಎಲ್ಲಾ ಆಯಾಮಗಳನ್ನು ಸಾರಭೂತವಾಗಿ ಅರ್ಥೈಸಿಕೊಳ್ಳಬೇಕು. ಸಾಮಾಜಿಕ, ರಾಜಕೀಯ ಜಾಗೃತಿ ಹೊಂದಬೇಕು ಎಂಬಿತ್ಯಾದಿ ಘನವಾದ ಉದ್ದೇಶದಿಂದ ಪ್ರೇರಿತವಾಗಿ ತಮ್ಮ ಈ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ಎಂ.ಎನ್.ಲಿಂಗಪ್ಪನವರ ಜಗತ್ಪಾವನ ಪತ್ರಿಕೆ ನೆರವಾಗಿದೆ.

೭. ಅವಲೋಕನ

ಲಭ್ಯವಾದ ಒಂದು ದಶಕದ ಸಂಚಿಕೆಗಳಿಂದ ಅದು ನಡೆದು ಬಂದ ಹಾದಿಯಲ್ಲಿ ತನ್ನ ಶ್ರೇಷ್ಠತೆಯ ಮಟ್ಟವನ್ನು ಕಾಯ್ದುಕೊಂಡಿರುವದು ಅಸಾಮಾನ್ಯವೇ ಸರಿ. ತನ್ನ ಇತಿಮಿತಿಯೊಳಗೆ ಒಂದು ಮತದ ಪ್ರಾಚೀನತೆ, ಪರಂಪರೆ, ಇತಿಹಾಸ, ಸಾಂಸ್ಕೃತಿಕ ವಿಚಾರಗಳು, ಸಮಕಾಲೀನ ಸಂದರ್ಭದ ಸಮಸ್ಯೆ ಮತ್ತು ಪರಿಹಾರೋಪಾಯಗಳು ಹೀಗೆ ವಿಭಿನ್ನ ದೃಷ್ಟಿಕೋನದ ವಿಚಾರಗಳನ್ನು ಸಮಾಜದ ಗಮನಕ್ಕೆ ತರುವಲ್ಲಿ ಯಶಸ್ವಿಯಾಗಿದೆ. ಮತೋದ್ಧಾರಕ್ಕಾಗಿ ಜನ್ಮತಳೆದು ತನ್ನ ಉದ್ದೇಶ ಗುರಿ ಸಾಧಿಸಿ ಹಾಲುಮತದ ಪತ್ರಿಕಾರಂಗಕ್ಕೆ ದೀಪಸ್ತಂಭವಾಗಿದೆ.

ಹಾಲುಮತ ಧರ್ಮ ಸಂಸ್ಕೃತಿ, ಸಮಾಜ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳನ್ನು ಒಳಗೊಂಡು ತನ್ಮೂಲಕ ಧರ್ಮವನ್ನು ಪ್ರಚಾರ ಮಾಡಿತು. ಮತದ ಮಹಾಪುರುಷರ, ಧರ್ಮ ಸಂಬಂಧಿಸಿದ ರಾಜಮನೆತನ, ಶಾಸನ

ಲೇಖನಗಳನ್ನು ಛಾಪಿಸಿ ನೂತನ ಸಂಶೋಧನೆಗೆ ಅವಕಾಶ ಮಾಡಿಕೊಟ್ಟಿತು. ಅನೇಕ ಹೊಸ ಹೊಸ ಸಂಗತಿಗಳ ಅಮೂಲ್ಯ ಸಾಹಿತ್ಯವನ್ನು ಬೆಳಕಿಗೆ ತಂದಿತು. ಧರ್ಮ ಸಾಹಿತ್ಯ ಕುರಿತ ಸ್ವತಂತ್ರ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಿಸಿ ಪ್ರಚುರಪಡಿಸಿತು. ಅನೇಕ ಸಂಶೋಧಕರನ್ನು, ಕವಿಗಳನ್ನು ಸಾಹಿತಿಗಳನ್ನು ಬೆಳಕಿಗೆ ತಂದು ಲೋಕಕ್ಕೆ ಪರಿಚಯಿಸಿತು.

ಅಂದಿನ ದಿನಗಳಲ್ಲಿ ಉಪೇಕ್ಷೆಗೆ ಒಳಗಾಗಿದ್ದ ವಿ.ಆರ್.ಹನುಮಂತಯ್ಯ, ಶಂಬಾ ಜೋಶಿ, ಎಮ್.ಎನ್.ಲಿಂಗಪ್ಪ ಮೊದಲಾದವರು ಸತ್ಯದ ಪ್ರಚಾರಕ್ಕಾಗಿ ತಮ್ಮ ಜೀವಮಾನವನ್ನೇ ತೇಯ್ದವರು. ಅವರ ಕ್ರಿಯಾಶೀಲ ಬದುಕು ಇಂದಿನ ಯುವ ಜನತೆಗೆ ಮಾದರಿಯಾಗಿ ನಿಲ್ಲಬಲ್ಲದು. ಮತಬಾಂಧವರಲ್ಲಿ ಶ್ರೀಮಂತ ಚರಿತ್ರೆಯನ್ನು, ಸತ್ಯಾಂಶಗಳನ್ನು ತಲುಪಿಸಲು ಅನೇಕ ಕಷ್ಟನಷ್ಟ ಅನುಭವಿಸಿದರೂ ಕುಂಟುತ್ತ ಬೀಳುತ್ತ ಸ್ಥಗಿತಗೊಳ್ಳದೆ ಆಯ್ದ ಮಾರ್ಗದಲ್ಲಿ ಪ್ರಯತ್ನಗಳನ್ನು ನಡೆಸಿತು. ಪತ್ರಿಕೆಯ ಸಂಚಿಕೆಗಳನ್ನು ಪರಿಶೀಲಿಸಿದಾಗ ಈ ಪತ್ರಿಕೆಯು ಸಮಾಜ ಮತ್ತು ಜನರ ನಡುವಿನ ಕೊಂಡಿಯಾಗಿ ಕೆಲಸ ನಿರ್ವಹಿಸಿವೆಯೆಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಎಮ್.ಎನ್ ಲಿಂಗಪ್ಪ ಅವರಲ್ಲಿ ಪ್ರೌಢವಾದ, ವಿಶಾಲವಾದ, ಪರಾಮರ್ಶೆಯನ್ನು ಕಾಣುತ್ತೇವೆ. ಪತ್ರಿಕೆಯ ಏಳ್ಗೆಗಾಗಿ ಅವರು ಪಟ್ಟ ಶ್ರಮ ಅಮೋಘವಾದುದು. ಪ್ರಗತಿಪರ ದೃಷ್ಟಿಯಿಂದ ಸ್ವತಂತ್ರ ವಿಚಾರ ಸರಣಿಯಿಂದ ಲೇಖನಗಳನ್ನು ಪ್ರಕಟಿಸಲಾಗುತ್ತಿತ್ತು. ಪ್ರತಿ ಸಂಚಿಕೆಯಿಂದ ಟಿಪ್ಪಣಿಗಳನ್ನು ಗಮನಿಸಿದಾಗ ಸಂಪಾದಕರ ಸಾಮಾಜಿಕ ಕಳಕಳಿ, ರಾಜಕೀಯ ವಿವೇಚನೆ, ಮತೀಯ ಹಿತರಕ್ಷಣೆ, ಜನಕಲ್ಯಾಣ ದೃಷ್ಟಿ. ಸುವ್ಯಕ್ತವಾಗುತ್ತದೆ. ನಿರೀಕ್ಷಿತ ಮಟ್ಟದ ಜಾಗೃತಿ ಕಂಡು ಬಾರದಿದ್ದಾಗ ಎಮ್.ಎನ್.ಲಿಂವಗಪ್ಪನವರು ನಿರ್ಭೀತವೂ, ಉದಾತ್ತವೂ ಆದ ರೀತಿಯಲ್ಲಿ ತಮ್ಮ ವಿಚಾರಧಾರೆಯನ್ನು ಪತ್ರಿಕೆಗಳಲ್ಲಿ ಮಾಡಿಸುತ್ತಿದ್ದರು.

'ಎಲ್ಲ ದಾರಿಗಳು ರೋಮನ ಕಡೆಗೆ' ಎಂಬಂತೆ ಎಲ್ಲ ಕೆಲಸಗಳು ಮತೋದ್ಧಾರಕ್ಕಾಗಿ ಎಂದು ಲಿಂಗಪ್ಪ ಅವರು ಈ ನಿಟ್ಟಿನಲ್ಲಿ ಅನೇಕ ಪ್ರಾಯೋಗಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನೇಕ ಕಷ್ಟನಷ್ಟಗಳ ಮಧ್ಯೆಯೂ ಎದೆಗುಂದದೆ ಶ್ರದ್ಧೆ-ನಿಷ್ಠೆ -ಛಲಗಳನ್ನು ಹೊಂದಿದ್ದರು. ಪತ್ರಿಕಾಕ್ಷೇತ್ರವಿನ್ನೂ ಪ್ರಬುದ್ಧವಾಗಿ ಬೆಳೆಯದೇ ಇದ್ದ ಕಾಲದಲ್ಲಿ ಈ ಪತ್ರಿಕೆ ಹುಟ್ಟಿಕೊಂಡಿತು. ಇಂದಿನ ಪ್ರಕಟಣಾ ಸೌಲಭ್ಯ ಸುಮಾರು ನೂರು ವರ್ಷಗಳ ಹಿಂದೆ ಇದ್ದಿರಲಿಲ್ಲ. ಕಾಲಕಾಲಕ್ಕೆ ಎಡರುತೊಡರುಗಳು ಬಂದರೂ ಅಂಥ ಪರಿಸ್ಥಿತಿಗಳನ್ನು ಲೆಕ್ಕಿಸದೆ 'ಜಗತ್ಪಾವನ ಪತ್ರಿಕೆ' ಬೆಳವಣಿಗೆ ಹೊಂದಿತು.

ವಿ.ಆರ್.ಹನುಮಂತಯ್ಯನವರ ಭರತ ಪುತ್ರ, ಕುರುವಿಜಯ, ಕುರುಬರ ಕುಲದರ್ಪಣ, ಕುರುಕುಲಪ್ರಭಾ, ಕುರುಬರ ಕುಲಕೀರ್ತಿ, ಸ್ವಮತಬಂಧು ಇಂಥ ಅನೇಕ ಪತ್ರಿಕೆಗಳ ಮೂಲಕ ಪುರಾತನ ಪರಂಪರೆಯನ್ನು ಪರಿಚಯಿಸಿ, ಮತ ಬಾಂಧವರನ್ನು ಕೀಳರಿಮೆಯಿಂದ ಹೊರಬರುವಂತೆ ಕರೆನೀಡಿ ಸ್ವಾಭಿಮಾನ ತುಂಬಲು ಪ್ರಯತ್ನಿಸಿರುವದನ್ನು ಈ ಪತ್ರಿಕೆಯ ಮೂಲಕ ತಿಳಿದು ಬರಬಹುದು.

ವಿಷಯಗಳನ್ನು ವೇದ, ಪುರಾಣ, ಚರಿತ್ರೆ ಮೊದಲಾದವುಗಳಿಂದ ಸಾಕ್ಷಾಧಾರಗಳನ್ನು ನೀಡಿ ಸ್ಪಷ್ಟಪಡಿಸಿದ್ದಾರೆ. ಧರ್ಮ ಜಾಗೃತಿಯಲ್ಲಿ ಧಾರ್ಮಿಕ ಕೃತಿಗಳ ಪಾತ್ರಗಳಿಂದ ಮನದಟ್ಟು ಮೂಡಿಸುವಲ್ಲಿ ಸಂಪಾದಕರು ಸಫಲರಾಗಿದ್ದಾರೆ. ಹಲವಾರು ಪತ್ರಿಕೆಗಳ ವಿಮರ್ಶೆ, ಶಾಸನಗಳ ಸಂಗ್ರಹ, ಆಧ್ಯಾತ್ಮ ಮುಂತಾದವುಗಳ ವಿವೇಚನೆ ಇಲ್ಲಿದೆ. ಸಂಪಾದಕರ ಆರೋಗ್ಯಕರ ಮನಸ್ಸು ಸಮಾಜದ ಹಿತಚಿಂತನೆ ಕಾಪಾಡುವ ತೀವ್ರವಾದ ಕಳಕಳಿಯನ್ನು ಗಮನಿಸಬಹುದು. ಒಟ್ಟಾರೆ ಪತ್ರಿಕಾ ಪ್ರಪಂಚಕ್ಕೆ ಲಿಂಗಪ್ಪನವರು ಕೊಟ್ಟ ಕೊಡುಗೆ ಮಹತ್ತರವಾದುದು. ವಿಜ್ಞಾಪನೆ, ವಿನಂತಿ, ಕೋರಿಕೆ, ಚಂದಾವಿವರ ಹೀಗೆ ಅನೇಕ ಅಂಶಗಳನ್ನು ಸಂಪಾದಕರು ಸಂದರ್ಭಾನುಸಾರ ವಾಚಕರ ಗಮನಕ್ಕೆ ತಂದು ಪತ್ರಿಕೆಯು ಸಂಘಟನಾ ಮನೋಭಾವದೊಂದಿಗೆ ತನ್ನ ಹಿಡಿತವನ್ನು ಕಳೆದುಕೊಳ್ಳದಂತೆ ಎಚ್ಚರವಹಿಸಿದ್ದಾರೆ. ಹಲವು ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡ ಪತ್ರಿಕೆ ತನ್ನ ಗುರಿ ತಲುಪಲು ಅನೇಕ ಮಾರ್ಗಗಳನ್ನು ಕಂಡುಕೊಂಡಿರುವುದು ಚರಿತ್ರೆಯಿಂದ ಅರಿಯಬಹುದು.

ಇಂಥ ಮಹತ್ವವುಳ್ಳ ಕುರುಬರ ಜಗತ್ಪಾವನ ಪತ್ರಿಕೆಯ ಬಗೆಗೆ ಈವರೆಗೆ ದಾಖಲಿಸದಿರುವುದು ವಾಸ್ತವಿಕ ಸತ್ಯಕ್ಕೆ ಮಾಡಿದ ದೊಡ್ಡ ಅಪಚಾರವೇ ಸರಿ. ಹಾಲುಮತದ ಸಾಹಿತ್ಯವನ್ನು ಅವಲೋಕಿಸಲಾಗಿ ಸ್ವಾತಂತ್ರ್ಯ ಪೂರ್ವದಲ್ಲಿದ್ದ ಮತಶ್ರದ್ಧೆ, ಮತಾಭಿಮಾನಗಳು, ಸಂಘಟನೆ ಸ್ವಾತಂತ್ರ್ಯಾನಂತರದಲ್ಲಿ ರಾಜಕೀಯ ಮತ್ತು ಧಾರ್ಮಿಕ ಮುಖಂಡರ ಹಿಡಿತಕ್ಕೆ ಸಿಕ್ಕು ತಮ್ಮ ಕಾವನ್ನು ಕಳೆದುಕೊಂಡವೆಂದೇ ಹೇಳಬಹುದು. ಪುನಃ ೨೦ನೆಯ ಶತಮಾನದ ಆದಿಯಲ್ಲಿ ಅಲ್ಪಸ್ವಲ್ಪ ಜಾಗ್ರತಾಭಾವ ಮೂಡಿ ಅನೇಕ ಮತಸಂಬಂಧಿ ಕೃತಿಗಳು ಪತ್ರಿಕೆಗಳು ಪ್ರಕಟಗೊಳ್ಳುತ್ತಿರುವದು ಆಶಾದಾಯಕವಾಗಿದೆ.

೨. ಸ್ವಮತಬಂಧು

ಜಗತ್ಪಾವನ ಮಾಸ ಪತ್ರಿಕೆಯ ಮಾದರಿಯಲ್ಲಿಯೇ ೧೯೨೯ ಮೇ ತಿಂಗಳಲ್ಲಿ ಕುರುಬ ಜನಾಂಗದ ಏಳಿಗೆಗಾಗಿ "ಸ್ವಮತ ಬಂಧು" ಮಾಸಪತ್ರಿಕೆ ಪ್ರಕಟಗೊಂಡಿತು. ಇದು ೨೪ ಪುಟಗಳನ್ನು ಹೊಂದಿದೆ. ಕುರುಬರ ಶ್ರೇಯೋಭಿವೃದ್ಧಿಗಾಗಿ ನೀತಿ, ಕೃಷಿ, ಕಲಾ, ವಾಣಿಜ್ಯ, ಧರ್ಮ, ಮತ ಮುಂತಾದ ಲೇಖನಗಳನ್ನು ಪ್ರಕಟಿಸುವ ಉದ್ದೇಶ ಹೊಂದಿರುವುದಾಗಿ ಸಂಪಾದಕ ಕೆ.ಜವರಯ್ಯ ಅವರು ಮೇಲಿಂದ ಮೇಲೆ ತಿಳಿಸಿದ್ದಾರೆ. ಅಲ್ಲದೆ, ವಿದ್ಯೆ, ವ್ಯಾಪಾರ, ವ್ಯವಸಾಯ, ಕೈಗಾರಿಕೆ, ನೀತಿ ಮುಂತಾದವುಗಳನ್ನು ಪ್ರಕಟಿಸಿ ಜಾಗೃತಿಯನ್ನು ಮೂಡಿಸುವ, ಪ್ರಗತಿಯನ್ನು ಸಾಧಿಸುವ ಕನಸನ್ನು ಹೊಂದಿದ್ದಿತು. ಈ ಸಂಚಿಕೆಯು ಕುರುಬರು ಮುಂದುವರಿಯಬೇಕಾದ ಕ್ರಮ, ಕುರುಬರ ಅವನತಿ ಮತ್ತು ಉನ್ನತಿಯ ಉಪಾಯಗಳು, ಕಣ್ಣುಗಳ ರಕ್ಷಣೆ, ಬೀಡಿ ಸಿಗರೇಟು ಸೇದುವುದರ ದುಷ್ಪರಿಣಾಮಗಳು, ಕನ್ನಡಕ ಧರಿಸುವ ಉಪಯುಕ್ತತೆ, ಹಳ್ಳಿಯ ರೈತರು ಸುಧಾರಿಸಬೇಕಾದ ಕ್ರಮಗಳು, ಗರ್ಭಿಣಿಯರಿಗೆ ಎಚ್ಚರಿಕೆಯ ಸಲಹೆಗಳು, ಕುರುಬ ಜಾತಿಯ ಮೂಲ, ಸುಧಾರಣಾ ಕ್ರಮಗಳು ಹೀಗೆ ಅನೇಕ ವಿಷಯಗಳನ್ನು ವಿವರಿಸಲಾಗಿದೆ. ಮುಂದಿನ ಸಂಚಿಕೆಯಲ್ಲಿ ರೇವಣಸಿದ್ಧ, ಗುರುವರ್ಗ, ಶಿಲಾಶಾಸನ, ತಾಮ್ರಶಾಸನ ಈ ವಿಷಯಗಳನ್ನು ಮುದ್ರಿಸುವುದಾಗಿ ಓದುಗರಲ್ಲಿ ಮನವಿ ಮಾಡಿಕೊಂಡಿದ್ದಾರೆ(ಪುಟ ೨೪).

'ಜಗತ್ಪಾವನ' ಪತ್ರಿಕೆಯ ವಿಷಯಗಳಿಗಿಂತ ಬೇರೆಯಾದ ವಿಚಾರಗಳನ್ನು 'ಸ್ವಮತಬಂಧು' ಪತ್ರಿಕೆಯು ಚರ್ಚಿಸುತ್ತದೆ. ಈ ಪತ್ರಿಕೆಯ ಮೊದಲ ಸಂಚಿಕೆ ಮಾತ್ರ ಲಭ್ಯವಾಗಿದ್ದು ಇನ್ನುಳಿದ ಸಂಪುಟಗಳು ಸಂಚಿಕೆಗಳು ಎಷ್ಟು ಬಂದಿವೆ ಎನ್ನುವುದರ ಬಗ್ಗೆ ಮಾಹಿತಿ ಸಿಗುತ್ತಿಲ್ಲ.

ಹೀಗೆ ಪ್ರಕಟವಾದ ಕುರುಬರ ಪತ್ರಿಕೆಗಳು ಸ್ವಾತಂತ್ರ್ಯಾನಂತರದಲ್ಲಿ ಬರದಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಈ ಕಾರಣದಿಂದ ಕನಕದಾಸರ ಹೆಸರಿನಲ್ಲಿ ಕಾಗಿನೆಲೆಯಲ್ಲಿ ಕುರುಬ ಸಮಾಜ ಪೀಠವನ್ನು ಸ್ಥಾಪನೆ ಮಾಡಿತು. ಮೇಲಾಗಿ ಕನಕದಾಸರ ಜಯಂತಿಯನ್ನು ನಾಡಿನಾದ್ಯಂತ, ಜಿಲ್ಲೆ, ತಾಲೂಕು, ಗ್ರಾಮಮಟ್ಟದಲ್ಲಿ ಆಚರಿಸಲು ಆರಂಭಿಸಿದರು. ಹೀಗಾಗಿ ಕನಕದಾಸರ ಹೆಸರಿನಲ್ಲಿ ಕುರುಬರ ಸಂಘಟನೆ, ಸಹಕಾರ ಸಂಘ, ಬ್ಯಾಂಕ, ಯುವಕ ಸಂಘ, ಅಧ್ಯಯನ ಪೀಠ ಮೊದಲಾದವು ಆರಂಭವಾದವು. ಹೀಗಾಗಿ 'ಕನಕ'ನ ಹೆಸರಿನಲ್ಲಿ ಮಾಸಿಕ -ತ್ರೈಮಾಸಿಕ ಪತ್ರಿಕೆಗಳು ಪ್ರಕಟಗೊಂಡವು. ಇವುಗಳಲ್ಲಿ ಕನಕಸ್ಫೂರ್ತಿ, ಕನಕಕಿರಣ, ಕನಕರಶ್ಮಿ ಹೆಸರಿಸಬಹುದಾಗಿದೆ. ಈ ಪತ್ರಿಕೆಗಳಲ್ಲಿ ಸಮಾಜ ಸಂಸ್ಕೃತಿ ಬಗೆಗಿನ ಚಿಂತನಾತ್ಮಕ ವೈಚಾರಿಕ ಲೇಖನಗಳು ಕಂಡುಬರುವುದಿಲ್ಲ. ಬದಲಾಗಿ ಸಮಕಾಲೀನ ಸಂದರ್ಭದ ಜಾತ್ರೆ-ಉತ್ಸವ-ಮದುವೆ -ಮರಣಗಳಂಥ ವಿಷಯಗಳ ನಿರೂಪಣೆಗೆ ಹೆಚ್ಚು ಮಹತ್ವ ಕೊಡಲಾಗಿದೆ. ಜೊತೆಗೆ ಕಿಕ್ಕಿರಿದು ತುಂಬಿದ ಜಾಹೀರಾತುಗಳು ಪತ್ರಿಕೆಯ ಮಹತ್ವವನ್ನು ಕುಂಠಿತಗೊಳಿಸುತ್ತಿವೆ ಈ ಹಿನ್ನೆಲೆಯಲ್ಲಿ ಹಾಲುಮತ ಸಮಾಜ-ಸಂಸ್ಕೃತಿ-ಚರಿತ್ರೆ-ಜನಪದ-ಧರ್ಮ-ಆರ್ಥಿಕ ವಿಚಾರಗಳನ್ನು ಸಂಶೋಧನಾತ್ಮಕ ನೆಲೆಯಲ್ಲಿ ಚರ್ಚಿಸುವ, ವಿಶ್ಲೇಷಿಸುವುದಕ್ಕಾಗಿ ಒಂದು ಮಾಸಿಕ ಅಥವಾ ತ್ರೈಮಾಸಿಕ ನಿಯತಕಾಲಿಕೆಗಳ ಅಗತ್ಯವಿದೆ ಎಂಬುದನ್ನು ಇಲ್ಲಿ ಒತ್ತಿ ಹೇಳಬಹುದು.

ಕೊನೆ ಟಿಪ್ಪಣಿಗಳು

೧. ಹನುಮಂತಯ್ಯ ವಿ.ಆರ್., ಕುರುಬರ ಚರಿತ್ರೆ, ೧೯೨೬, ಪುಟ ii

೨. ಯಲ್ಲನಗೌಡ. ಫ. ಅತಿಕೊಳ್ಳ, ಹಾಲುಮತದ ಚರಿತ್ರೆ, ೧೯೪೯, ಪುಟ ೨

೩. ಅದೇ, ಪುಟ ೧

೪. ಹನುಮಂತಯ್ಯ ವಿ.ಆರ್. ಭಾರತ ದೇಶದ ಕುರುಬರ ಚರಿತ್ರೆ, ೧೯೫೮, ಪುಟ i

೫. ಹಳ್ಳಿಕೇರಿ ಎಫ್.ಟಿ., ಇತಿಹಾಸ ದರ್ಶನ, ಸಂಪುಟ ೨೪, ೨೦೦೯, ಪುಟ ೩೦೮

೬. ಶಂಬಾ ಜೋಶಿ, ಕರ್ನಾಟ ಸಂಸ್ಕೃತಿ, ಸಂಪುಟ ೩, ಪುಟ ೮

೭. ಅದೇ, ಪುಟ xxvi

೮. ಶಂಬಾ ಜೋಶಿ, ಕಂನಡ ಕಂನುಡಿ, ಸಂಪುಟ ೩, ಪುಟ ೧೮

೯. ಶಂಬಾ ಜೋಶಿ, ಕರ್ನಾಟ ಸಂಸ್ಕೃತಿ, ಸಂಪುಟ ೩, ಪುಟ xxvi

೧೦. ಅಂಗಡಿ ಎಸ್.ಎಸ್., ಹಾಲುಮತ ಸಂಸ್ಕೃತಿ ಶಂಬಾ ಜೋಶಿ ಅವರ ಚಿಂತನೆಗಳು, ಹಾಲುಮತ ಅಧ್ಯಯನ ೧, ಪುಟ ೧೩೩

೧೧. ಚಂದ್ರಕಾಂತ ಬಿಜ್ಜರಗಿ, ಕುರುಬರ ಹೆಜ್ಜೆಗಳು, ಪುಟ ix

೧೨. ಹಾಲತೊರೆ, ೨೦೦೩, ಪುಟ ೨೩

೧೩ ಗುರುವಂದನ, ೨೦೦೭, ಪುಟ ೧೮೫

೧೪. ಶ್ರೀರಾಮ ಇಟ್ಟಣ್ಣನವರ, ಕೊಣ್ಣೂರು ಶ್ರೀ ಕರಿಸಿದ್ಧೇಶ್ವರ ದೇವಸ್ಥಾನ, ೧೯೯೫, ಪುಟ ೬

೧೫. ದೊಡ್ಡಣ್ಣ ಗದ್ದನಕೇರಿ, ಬೀರದೇವರ ಸಂಪ್ರದಾಯ ಮತ್ತು ಆಚರಣೆಗಳು, ೨೦೦೨, ಪುಟ ೬

೧೬. ಜ್ಯೋತಿ ಹೊಸೂರ, ಬೀರಪ್ಪದೇವನ ಉಪಾಸಕರ ಮಾದರಿಗಳು ಮತ್ತು ಕ್ಷೇತ್ರಗಳು, ೨೦೦೭, ಪುಟ ೧೪

೧೭. ಹಳ್ಳಿಕೇರಿ ಎಫ್.ಟಿ., ಜಾನಪದ ಕರ್ನಾಟಕ, ಸಂಪುಟ ೬, ಸಂಚಿಕೆ ೨, ೨೦೦೭

೧೮. ಹಳ್ಳಿಕೇರಿ ಎಫ್.ಟಿ., ಹಾಲುಮತ ವ್ಯಾಸಂಗ ೨, ೨೦೧೦, ಪುಟ ೩೦೮

೧೯. ಲಲಿತಾ ಎ.ಸಿ., ಕಾಡು ಕುರುಬರ ಮತ್ತು ಜೇನು ಕುರುಬರ ಸಂಸ್ಕೃತಿ, ೧೯೯೨, ಪುಟ ೧೬

೨೦. ಯರ‍್ರಪ್ಪ ಡಿ., ಅಲೆಮಾರಿ ಕುರುಬರು, ೨೦೦೭, ಪುಟ xii

೨೧. ಹಳ್ಳಿಕೇರಿ ಎಫ್.ಟಿ., ಕುರುಬರ ಗುರು ಒಡೆಯರು, ೨೦೦೭, ಪುಟ iii

೨೨. ಜೈಕುಮಾರ ಎಂ., ನಡೆಮುಡಿ, ೧೯೮೦, ಪುಟ vi

೨೩. ಚಂದ್ರಕಾತ ಬಿಜ್ಜರಗಿ, ಅಹಲ್ಯಾಬಾಯಿ ಹೋಳಕರ, ೨೦೦೩ (ಮುನ್ನುಡಿಯಿಂದ)

೨೪. ಅಂಗಡಿ ಎಸ್.ಎಸ್., ಕುರುಬ ಸಮುದಾಯ ಭಾಷೆ ಮಾನವ ಭಾಷಾ ಶಾಸ್ತ್ರ ಅಧ್ಯಯನ, ೨೦೦೯, (ಅರಿಕೆಯಿಂದ)

ಅಧ್ಯಾಯ ೬

ಹಾಲುಮತ ಅಧ್ಯಯನ
ವಿವಿಧ ವಿದ್ವಾಂಸರ ಕೊಡುಗೆ

ಅಧ್ಯಾಯ ೬

ಹಾಲುಮತ ಅಧ್ಯಯನ
ವಿವಿಧ ವಿದ್ವಾಂಸರ ಕೊಡುಗೆ

ಹಾಲುಮತ ಅಧ್ಯಯನವು ೨೦ನೆಯ ಶತಮಾನದ ಪೂರ್ವಭಾಗದಲ್ಲಿ ಪ್ರಾಮುಖ್ಯತೆಯನ್ನು ಪಡೆದು ಕೊಂಡಿತು. ಆ ಕಾಲದಲ್ಲಿ ಅನೇಕ ಮಹನೀಯರು ವಿಭಿನ್ನ ನೆಲೆಯಲ್ಲಿ ಹಾಲುಮತವನ್ನು ಅಧ್ಯಯನಕ್ಕೆ ಒಳಪಡಿಸಿದರು. ಶಂಬಾ ಅವರು ಹಾಲುಮತವನ್ನು ವೇದಗಳ ಕಾಲದ ಹಿನ್ನೆಲೆಯಲ್ಲಿ ಮತ್ತು ಸ್ಥಳನಾಮಗಳ ಮೂಲಕ ಹುಡುಕಲು ಮೊದಲು ಮಾಡಿದರು. ಕಲಬುರ್ಗಿ ಅವರು ಹಾಲುಮತದ ಪರಂಪರೆಗಳನ್ನು ಮತ್ತು ಕುಲಗುರುಗಳು ಶೈವದಿಂದ ವೈದಿಕದತ್ತ ತಿರುಗಿಸಿದ ಸಂಗತಿಗಳನ್ನು ಆಕರಗಳ ಮೂಲಕ ಚರ್ಚೆಗೆ ಒಳ ಪಡಿಸಿದ್ದಾರೆ. ವಿ.ಆರ್.ಹನುಮಂತಯ್ಯನವರು ಚಾರಿತ್ರಿಕವಾಗಿ ಹಾಲುಮತದ ಉಗಮವನ್ನು ಗುರುತಿಸಿದ್ದಾರೆ. ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರು ಧಾರ್ಮಿಕ ನೆಲೆಯಲ್ಲಿ ಚರ್ಚಿಸಿ ಸಭೆ, ಮಹಾಸಭೆಗಳ ಮೂಲಕ ಜನಮಾನಸರಲ್ಲಿ ಜಾಗೃತಿಯನ್ನು ಉಂಟು ಮಾಡಲು ಯತ್ನಿಸಿದ್ದಾರೆ. ಶಿವಾನಂದ ಗುಬ್ಬಣ್ಣನವರ ಅವರು ಹನುಮಂತಯ್ಯನವರ ಅಧ್ಯಯನದ ಮುಂದುವರಿಕೆಯಾಗಿ ಕುರುಬರ ಚರಿತ್ರೆಯನ್ನು ರಚಿಸಿದ್ದಾರೆ. ಜೊತೆಗೆ ಡೊಳ್ಳಿನ ಹಾಡುಗಳನ್ನು ಸಂಗ್ರಹಿಸಿ ಸಾಂಸ್ಕೃತಿಕ ಅಧ್ಯಯನಕ್ಕೆ ಮಹತ್ವದ ಮೌಖಿಕ ಆಕರಗಳನ್ನು ಒದಗಿಸಿದ್ದಾರೆ. ಚಾರಿತ್ರಿಕ, ಧಾರ್ಮಿಕ, ಸಾಮಾಜಿಕ ಹೀಗೆ ಒಟ್ಟಾರೆ ಎಲ್ಲ ವಿಷಯಗಳನ್ನು ವೈಚಾರಿಕ ದೃಷ್ಟಿಕೋನದಿಂದ ಚರ್ಚೆಗೆ ಒಳಪಡಿಸಿ ಅನೇಕ ಮಹತ್ವದ ವಿಷಯಗಳನ್ನು ತಿಳಿಸಿದ್ದಾರೆ. ಅನೇಕ ಪಾಶ್ಚಾತ್ಯ ವಿದ್ವಾಂಸರ ಕೃತಿಗಳು ಸಹ ಹಾಲುಮತದ ಪ್ರಮುಖ ಆಕರಗಳಾಗಬಲ್ಲವು. ಸೊಂತೈಮರ ಅವರು ಪಶುಪಾಲನಾ ಸಮುದಾಯಗಳ ಕುರಿತು ಕ್ಷೇತ್ರಕಾರ್ಯ ಕೈಕೊಂಡು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಆ ಮೂಲಕ ಪ್ರಾಚೀನ ಪರಂಪರೆಯ ಕುರುಬ ಕುಲದ ಸಂಸ್ಕೃತಿಯನ್ನು ಪರಿಚಯಿಸಿದ್ದಾರೆ. ಶ್ಯಾಂಸಿಂಗ ಶಶಿ ಅವರು ಪ್ರಪಂಚದ ಪಶುಪಾಲಕ ಸಮುದಾಯಗಳನ್ನು ಕುರಿತು ಹಾಲುಮತದ ಐತಿಹಾಸಿಕ, ಧಾರ್ಮಿಕ ಪರಂಪರೆಯನ್ನು ಪರಿಚಯಿಸಿದ್ದಾರೆ. ಇಂಥ ಅನೇಕ ಇಂಗ್ಲೀಷ್ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದರೆ ಸಾಮಾಜಿಕ ಸಂಶೋಧನೆಗೆ ಅನೇಕ ಮಹತ್ವದ ಹೊಸ ಸಂಗತಿಗಳು ಆಕರಗಳಾಗಬಲ್ಲವು. ಇಂಥ ಕೆಲಸದ ಅಗತ್ಯತೆಯನ್ನು ವಿಶ್ವವಿದ್ಯಾಲಯಗಳು, ವಿದ್ವಾಂಸರು ಪೂರೈಸುವ ಅವಶ್ಯಕತೆ ತುರ್ತಾಗಿ ಆಗಬೇಕಿದೆ. ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯ ೨೦೦೬ರಲ್ಲಿ

ಹಾಲುಮತ ಅಧ್ಯಯನ ಪೀಠವನ್ನು ಆರಂಭಿಸಿದೆ. ಡಾ. ಎಫ್.ಟಿ.ಹಳ್ಳಿಕೇರಿ ಅವರ ನಿರ್ದೇಶನದಲ್ಲಿ ಈಗಾಗಲೇ ಪೀಠವು ಅನೇಕ ರಚನಾತ್ಮಕ ಯೋಜನೆಗಳನ್ನು ರೂಪಿಸಿಕೊಂಡು ಮುನ್ನಡೆಯುತ್ತಿದೆ. ಹಾಲುಮತ ಸಂಸ್ಕೃತಿ ಸಮ್ಮೇಳನ, ಡೊಳ್ಳಿನ ಹಾಡುಗಳ ತರಬೇತಿ ಶಿಬಿರ, ವಿಶೇಷ ಉಪನ್ಯಾಸ ಸರಣಿ ಹಾಲುಮತ ವ್ಯಾಸಂಗ, ಹಾಲುಮತ ಅಧ್ಯಯನ ಸಂಪುಟಗಳ ಪ್ರಕಟಣೆ, ಹಾಲುಮತ ಮೇಲುದೀಪ ಹೆಸರಿನ ಗ್ರಂಥಾಲಯ, ಹಾಲುಮತ ಭಂಡಾರ ಹೆಸರಿನ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದೆ.

ಈ ಅಧ್ಯಾಯದಲ್ಲಿ ಹಾಲುಮತ ಸಾಹಿತ್ಯ, ಸಂಸ್ಕೃತಿ ಅಧ್ಯಯನ ಸಂಶೋಧನೆಯಲ್ಲಿ ದುಡಿದ ವಿದ್ವಾಂಸರ ಸಾಧನೆಗಳನ್ನು ಸಂಕ್ಷೇಪವಾಗಿ ಅವಲೋಕಿಸಲಾಗುವುದು.

೧. ವಿ.ಆರ್.ಹನುಮಂತಯ್ಯ

'ಹಾಲುಮತ ಪಿತಾಮಹ' ಎಂಬ ಹೆಗ್ಗಳಿಕೆಗೆ ಪಾತ್ರರಾದ ವಿ.ಆರ್.ಹನುಮಂತಯ್ಯನವರು ೧೮೭೬ ರಲ್ಲಿ ಬೆಂಗಳೂರಿನ ಉತ್ತರ ತಾಲೂಕು ಹೆಸರಘಟ್ಟ ಹೋಬಳಿಯ ವಿಶ್ವನಾಥಪುರದಲ್ಲಿ ಜನಿಸಿದರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಬೆಂಗಳೂರಿನ ಕಾಟನ್‌ಪೇಟೆಯ ಶಾಲೆಯಲ್ಲಿ ಮುಗಿಸಿದರು. ತಂದೆ ಬೀದಿಮನೆಯ ರಂಗಣ್ಣ, ತಾಯಿ-ತಿಮ್ಮಕ್ಕ, ಹೆಂಡತಿ-ಅಕ್ಕಮ್ಮ, ಮಗ-ರಂಗಸ್ವಾಮಿ. ಒಟ್ಟು ೧೨ ಜನ ಮೊಮ್ಮಕ್ಕಳು. ಅವರಲ್ಲಿ ಆರು ಜನ ಗಂಡುಮಕ್ಕಳಿಗೆ ವಿಜಯನಗರದ ಅರಸರ ಹೆಸರನ್ನು ಇಟ್ಟಿರುವುದು ಅವರ ಮತಾಭಿಮಾನವನ್ನು ಪ್ರಕಟಿಸುತ್ತದೆ.

ಎರಡು ದಶಕಗಳ ಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿದ ಹನುಮಂತಯ್ಯನವರ ವಿಸ್ತೃತವಾದ ಓದು, ಆಳವಾದ ಚಿಂತನೆ ಅವರನ್ನು ಪ್ರಭುತ್ವಕ್ಕೇರಿಸಿದ್ದವು. ಕಾರಣ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು. ಸಂಸ್ಕೃತಿ, ಚರಿತ್ರೆಯಂಥ ಸಂಶೋಧನ ಕ್ಷೇತ್ರದತ್ತ ಆಸಕ್ತರಾಗಿದ್ದರು. ಕನ್ನಡ, ಸಂಸ್ಕೃತ, ಇಂಗ್ಲಿಷ್, ಹಿಂದಿ, ತೆಲುಗು, ತಮಿಳು ಮತ್ತು ಮರಾಠಿ ಒಟ್ಟು ಏಳು ಭಾಷೆಗಳನ್ನು ಬಲ್ಲವರಾಗಿದ್ದರು.

ಶಾಸನ, ಸನ್ನದು, ಕಾವ್ಯ, ಪುರಾಣ, ಗೆಝೇಟಿಯರ್, ನಿಘಂಟು ಮೌಖಿಕ ಆಕರಗಳ ಜೊತೆಗೆ ಸ್ವದೇಶಿ ಮತ್ತು ವಿದೇಶಿ ವಿದ್ವಾಂಸರ ಅಭಿಪ್ರಾಯಗಳನ್ನು ಪೂರಕವಾಗಿ ಬಳಸಿಕೊಂಡು ಜನಾಂಗಿಕ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ರಚಿಸಿದರು. ಅನೇಕ ಆಕರ ಗ್ರಂಥಗಳನ್ನು ಅಭ್ಯಾಸಮಾಡಿ ಹನುಮಂತಯ್ಯನವರು ಕುರುಬರ ಚರಿತ್ರೆ- ೧೯೨೬(The History of sheperds), ಸಂಕ್ಷಿಪ್ತ ವಿಜಯನಗರ ಚರಿತ್ರೆ, ವಿಜಯನಗರ ಸಾಮ್ರಾಜ್ಯ ಚರಿತ್ರೆ- ೧೯೩೨(The History of Vijayanagar Empire), ಭಾರತದ ಕುರುಬರ ಚರಿತ್ರೆ- ೧೯೩೮(The History of the Shepherds of India), ಆನೆಗೊಂದಿ ಮಹಾಸಂಸ್ಥಾನ ಚರಿತ್ರೆ, ಭೋಜರಾಜ ಕಾಳಿದಾಸ ಚರಿತ್ರೆ- ೧೯೬೧, ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ.

ಅಂದಿನ ನಿಯತಕಾಲಿಕೆಗಳಲ್ಲಿ ಸಂಶೋಧನಾತ್ಮಕ ಲೇಖನಗಳನ್ನು ಸಹ ಹನುಮಂತಯ್ಯನವರು ಪ್ರಕಟಿಸಿದ್ದಾರೆ. 'ಶ್ರೀ ಕನಕದಾಸರು ಕುರುಬರಲ್ಲವೇ?' ಎಂಬ ಲೇಖನವನ್ನು ಜಯಕರ್ನಾಟಕ ಪತ್ರಿಕೆ (ಸಂ ೨೦, ೪ ಏಪ್ರಿಲ್ ೧೯೪೨ ಪುಟ ೧೮೧-೧೮೬) ಮತ್ತು ಸುಬೋಧ ಪತ್ರಿಕೆ(ಸಂ. ೧೯-೧೧, ಪುಟ ೩೭೨-೩೭೫)ಯಲ್ಲಿ ಪ್ರಕಟಿಸಿದ್ದರು. ಕನಕದಾಸರ ಮತವಿಚಾರವನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಅಂದು ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ 'ಕುರುಬರ ಪತ್ರಿಕೆ'(೧-೭-೧೯೨೮ ರ ಸಂಚಿಕೆ)ಯಲ್ಲಿ "ಕುರುಬರು ಏಕೆ ಲಿಂಗ ಕಟ್ಟಿಕೊಳ್ಳಬೇಕು?" ಎಂಬ ಲೇಖನವನ್ನು ಪ್ರಕಟಿಸಿದ್ದರು. ಈ ಲೇಖನಕ್ಕೆ ಡಂಬಳ ಐಯ್ಯಪ್ಪಸ್ವಾಮಿ ಗುರುವಿನ ಹಾಗೂ ಲಕ್ಷ್ಮೇಶ್ವರದ ಬ.ನೀ.ಹಳವಳ್ಳಿ ಅವರು ೧೫-೭-೧೯೨೮ರ (ಒಂದು ವಾರದ ನಂತರ) ಸಂಚಿಕೆಯಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ.

'The cowherd who helped a king new light on the History of Golkonda Fort' ಎಂಬ ಲೇಖನವನ್ನು ಫತುಲ್ಲಾಖಾನರು ಸಂಡೇ ಪತ್ರಿಕೆಯಲ್ಲಿ ಪ್ರಕಟಿಸಿದ್ದರು.

ಒಬ್ಬ ಕುರುಬರ (ಗೊಲ್ಲರ) ಗುರುವಿನ ಮಹತ್ವದ ಸನ್ನದು ಎಂಬ ಹೆಸರಿನಿಂದ ಅನುವಾದಗೊಳಿಸಿದ ಈ ಲೇಖನವನ್ನು ಜಯಕರ್ನಾಟಕ ಪತ್ರಿಕೆ(ಸಂ ೨೩-೫ ಏಪ್ರಿಲ್ ೧೯೪೨, ಪುಟ ೧೮೧-೧೮೬)ಯಲ್ಲಿ ಪ್ರಕಟಿಸಿದ್ದಾರೆ. "....ಹಿಂದೆ ಇದಕ್ಕೆ ಮೊದಲು ಯಾವ ಇತಿಹಾಸಕಾರನಾಗಲೀ ಪ್ರವಾಸಿಗಳಾಗಲೀ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸದ ಹಾಗೂ ಯಾರಿಗೂ ಗೊತ್ತಿಲ್ಲದ ಸುಮಾರು ೩೦೦ ವರ್ಷಗಳ ಅತಿಪ್ರಾಚೀನವಾದ ಒಬ್ಬ ಕುರುಬ (ಗೊಲ್ಲರ)ರ ಗುರು ಧನಗಾರ (cowherd) ಕೊಂಡಯ್ಯನೆಂಬಾತನಿಗೆ ಕೊಡಲ್ಪಟ್ಟಂಥ ಸನ್ನದು ಆತನ ವಂಶದವನೊಬ್ಬರಲ್ಲಿದ್ದುದು ನನಗೀಗ ದೊರೆತಿರುತ್ತದೆ. ಈ ಸನ್ನದಿಗೆ ೧೬೨೬ರಿಂದ ೧೬೭೨ರವರೆಗೆ ಆಳಿದ ಗೋಲ್ಕೊಂಡ(ಗೊಲ್ಲಕೊಂಡ)ದ ಖುತುಬಶಾಹೀ ವಂಶದ ೭ನೆಯ ಸುಲ್ತಾನ್ ಅಬ್ದುಲ್ ಖುತುಬ್‌ಶಾಹ ನೆಂಬ ರಾಜನ ಸೀಲು ಮುದ್ರೆ ಇರುತ್ತದೆ.

"ಈ ಸನ್ನದು (AD 1035-1083H) ಜಮಾದಿ ಉಲ್‌ಅವ್ವಲ್ ೧೦೭೧ನೇ ಹಿಜ್ರೀ ಸಂವತ್ಸರದಲ್ಲಿ ಕೊಡಲ್ಪಟ್ಟಿರುತ್ತದೆ" ಎಂಬ ಅಭಿಪ್ರಾಯವನ್ನು ಪ್ರಸ್ತಾವನೆಯಲ್ಲಿ ಹನುಮಂತಯ್ಯನವರು ತಿಳಿಸಿದ್ದಾರೆ. ಮೂಲ ಲೇಖಕರ ಅಭಿಪ್ರಾಯಗಳಿಗೆ ಧಕ್ಕೆ ಬರದ ಹಾಗೆ ಲೇಖನವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

'ಭರತಪುತ್ರ' ಎಂಬ ಪತ್ರಿಕೆಗೆ ಸಂಪಾದಕರಾಗಿ ಹತ್ತು ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಆದರೆ ಈ ಪತ್ರಿಕೆ ಇಲ್ಲಿಯವರೆಗೂ ದೊರೆತಿಲ್ಲ.

ಸಂಪೂರ್ಣವಾಗಿ ತಮ್ಮ ಜೀವನವನ್ನು ಮತಕ್ಕಾಗಿ ಧರ್ಮಕ್ಕಾಗಿ ಮುಡುಪಾಗಿಟ್ಟು ಹಾಲುಮತದ ಚರಿತ್ರೆಯನ್ನು ಒಂದೆಡೆ ಸಮಗ್ರವಾಗಿ ಪ್ರಕಟಿಸಿದ ಕೀರ್ತಿ ಇವರದಾಗಿದೆ. ಸಾಮಾನ್ಯರನ್ನು ಗಮನದಲ್ಲಿಟ್ಟುಕೊಂಡು ಸರಳ ನಿರೂಪಣೆಯ ಬರಹದಿಂದ ಕೃತಿಗಳನ್ನು ರಚಿಸಿದ್ದಾರೆ. ವೈಚಾರಿಕ, ತಾತ್ವಿಕ, ನಿಲುವಿನಲ್ಲಿ ಮೊಟ್ಟ ಮೊದಲ ಬಾರಿಗೆ ಕುರುಬ ಸಮುದಾಯದ ಪ್ರಾಚೀನತೆ, ಆಚಾರ, ವಿಚಾರ, ಸಂಪ್ರದಾಯಗಳು, ಗುರುಪರಂಪರೆ

ಮೊದಲಾದ ವಿಚಾರಗಳನ್ನು ಆಧಾರ ಸಹಿತವಾಗಿ ಸ್ಪಷ್ಟಪಡಿಸಿದ್ದಾರೆ. ಒಟ್ಟಾರೆ ಮರೆತು ಹೋದ ಕುರುಬರ ಇತಿಹಾಸ ಮತ್ತು ಸಂಸ್ಕೃತಿಯನ್ನು ತಮ್ಮ ಕೃತಿಗಳ ಮೂಲಕ ತಲಸ್ಪರ್ಶಿ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಆ ಮೂಲಕ ಹಾಲುಮತ ಸಂಸ್ಕೃತಿ ಅಧ್ಯಯನಕ್ಕೆ ನಾಂದಿ ಹಾಡಿದ್ದಾರೆ.

೨. ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ

ಹಾಲುಮತ ಸಮುದಾಯದ ಪ್ರಸ್ತುತ ಪರಿಸ್ಥಿತಿಯನ್ನು ಕಂಡು ಕಳವಳವನ್ನು ಅನುಕಂಪವನ್ನು ಒಟ್ಟಾಗೇ ಅನುಭವಿಸಿದವರು ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿಯವರೂ ಒಬ್ಬರು. ಭವ್ಯ ಪರಂಪರೆಯನ್ನು ತಿಳಿಸಲು ಸಮುದಾಯದ ಜಾಗೃತಿಗಾಗಿ ಅನೇಕ ಸುಧಾರಣಾಕ್ರಮಗಳನ್ನು ಜಾರಿಗೆ ತಂದವರಲ್ಲಿ ಮೊದಲಿಗರು. ಅವರು ತಮ್ಮ ಕೃತಿ 'ಬೀರೇಶ್ವರನ ಚರಿತ್ರೆ'ಯಲ್ಲಿ ಉಲ್ಲೇಖಿಸಿದ ದಿನಾಂಕಗಳ ಪ್ರಕಾರ ಸುಮಾರು ಹತ್ತೊಂಬತ್ತನೆಯ ಶತಮಾನದ ಎಪ್ಪತ್ತರ ದಶಕದಲ್ಲಿ ಜನಿಸಿರಬಹುದು. ಇವರ ಸಮಕಾಲೀನರಾಗಿ ವಿ.ಆರ್.ಹನುಮಂತಯ್ಯ (೧೮೭೬), ಶಂಬಾ ಜೋಶಿ (೧೮೯೬) ಕೆ.ಜವರಯ್ಯ, ಎಮ್.ಎನ್.ಲಿಂಗಪ್ಪ ಇವರು ಹಾಲುಮತದ ಚರಿತ್ರೆಯನ್ನು ಕಟ್ಟಿಕೊಟ್ಟವರಲ್ಲಿ ಪ್ರಮುಖರು. ತಾಳೆಗರಿಯ ಲೇಖನ ಸಹಾಯದಿಂದ ೧೯೧೦ರಲ್ಲಿ ಹಾಲುಮತ ಪುರಾಣ(ಮರುಳಸಿದ್ಧ ಚರಿತ್ರೆ)ವನ್ನು ಸಂಗ್ರಹಿಸಿ ಅದೇ ವರ್ಷ ಲಕ್ಷ್ಮೇಶ್ವರದಲ್ಲಿ ಅಕ್ಟೋಬರ್ (೨೩, ೨೪, ೨೫) ತಿಂಗಳಲ್ಲಿ ನಡೆದ ಹಾಲುಮತ ಧರ್ಮೋತ್ತೇಜಕ ಮಹಾಸಭೆಯಲ್ಲಿ ಪುಕ್ಕಟೆಯಾಗಿ ಹಂಚಿದರು. ಈ ಕೃತಿಯನ್ನು ೧೯೫೨ರಲ್ಲಿ ಪುನಃ ಮುದ್ರಿಸಿರುವುದಾಗಿ ಬೀರೇಶ್ವರ ಚರಿತ್ರೆಯ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ.

ಬಂಕಾಪುರದ ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರು ಹಾಲುಮತದ ಸರ್ವಾಂಗೀಣ ಅಭಿವೃದ್ಧಿಗಾಗಿ ೧೯೫೪ರ ತಮ್ಮ ಇಳಿ ವಯಸ್ಸಿನಲ್ಲಿ (ಸುಮಾರು ೮೦ ವರ್ಷ) ಬೀರೇಶ್ವರನ ಚರಿತ್ರೆಯನ್ನು ರಚಿಸಿದ್ದಾರೆ. ೫೦ ಪುಟಗಳ ಈ ಕೃತಿಯು ಸಂಕ್ಷಿಪ್ತ ಮತ್ತು ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತದೆ. ಕಥಾಹಂದರದಲ್ಲಿ ಅಲ್ಪಸ್ವಲ್ಪ ಬದಲಾವಣೆಯಿದ್ದರೂ ಮೂಲ ಕಥೆಗೆ ಧಕ್ಕೆ ಬರುವುದಿಲ್ಲ.

ಕುರುಬ ಸಮಾಜವನ್ನು ಸಂಘಟಿಸುವಲ್ಲಿ ಹಳವಳ್ಳಿ ಅವರು ಬಹಳಷ್ಟು ಶ್ರಮಿಸಿದ್ದಾರೆ. ಪ್ರತಿಯೊಂದು ಹಳ್ಳಿಹಳ್ಳಿಗೆ ಹೋಗಿ ಹಾಲುಮತದ ಧರ್ಮ, ಸಂಸ್ಕೃತಿ, ಸಾಹಿತ್ಯದ ಬಗ್ಗೆ ಜನರಿಗೆ ತಿಳಿಹೇಳುವುದರ ಮೂಲಕ ಜಾಗೃತಿಯನ್ನುಂಟು ಮಾಡಲು ಪ್ರಯತ್ನಿಸಿದ್ದಾರೆ. ಕಳೆದ ಶತಮಾನದ ಆರಂಭದಲ್ಲಿ (೧೯೧೦) ಹಾಲುಮತದ ಮಹಾಸಭೆ, ಸಮ್ಮೇಳನಗಳನ್ನು ಆಯೋಜಿಸಿ ನಾಡಿನಾದ್ಯಂತ ಸಮಾಜದ ಗಣ್ಯ ವ್ಯಕ್ತಿಗಳನ್ನು ಆಹ್ವಾನಿಸಿ ಅವರಿಂದ ಉಪನ್ಯಾಸ ಕೊಡಿಸಿದ್ದಾರೆ. ಅಲ್ಲದೆ ತಾವೂ ಕೂಡ ಅಂಥ ಸಭೆ ಸಮ್ಮೇಳನಗಳಲ್ಲಿ ವಿಚಾರ ಪೂರ್ಣವಾದ ಉಪನ್ಯಾಸವನ್ನು ಮಾಡಿದ ಬಗ್ಗೆ ದಾಖಲೆಗಳಿವೆ. "ಸತ್ಯಶೀಲರೆಂಬ ಹಾಲುಮತದ ಮಹನೀಯರೇ, ತಾವೆಲ್ಲರೂ ಈ ಮಹಾಸಭೆಗೆ ಆಗಮಿಸಿ ನಮ್ಮ ಮತದಲ್ಲಿರುವ ದುರ್ನಡತೆಗಳನ್ನು ಹೋಗಲಾಡಿಸುವುದಕ್ಕೋಸ್ಕರವಾಗಿ ಬರೋಣವಾಯಿತಷ್ಟೆ. ಈಗ ಬಂದಿರುವ ನಮ್ಮ ಮತದ ಶ್ರೀ ಗುರುಗಳ ದರ್ಶನದಿಂದಲೂ ಹಾಗೂ ನಮ್ಮ ಹಾಲುಮತದ ಸಭ್ಯಗೃಹಸ್ಥರ ದರ್ಶನದಿಂದಲೂ ನಾನು ಸಂತೋಷವೆಂಬ ಸಾಗರದಲ್ಲಿ ಮುಳುಗಿ

ಧನ್ಯನಾದೆನು. ಮತ್ತು ನಾನೊಂದು ಉಪನ್ಯಾಸ ಮಾಡಬೇಕೆಂದು ತಮ್ಮೆಲ್ಲರ ಆಜ್ಞೆ ಬೇಡಿಕೊಳ್ಳುವೆನು. ನನ್ನನ್ನು ಉದ್ಧಾರ ಮಾಡುವ ಸದ್ಗುರುಗಳೇ ಹಾಗೂ ಹಾಲುಮತದ ಬಂಧುಗಳೇ ಸನ್ಮಿತ್ರರೇ, ಸದ್ಧರ್ಮ ನಿಷ್ಠರೇ ಸದ್ಧರ್ಮಕ್ಕೆ ಮನಸ್ಸು ಹಾಕಿರಿ. ಚಂದ್ರನು ಮೋಡವೆಂಬ ಮುಸುಕಿನಿಂದಾ ಕಡೆಗೆ ಬಂದು ಪ್ರಜ್ವಲಿಸುವಂತೆ ನಮ್ಮ ಮತದಲ್ಲಿ ಸೇರಿರುವ ದುರ್ನಡತೆಗಳನ್ನು ದೂರ ಮಾಡಿ ಸದ್ಧರ್ಮವೆಂಬ ಸುವಿಚಾರದಿಂದ ಪ್ರಜ್ವಲಿಸುವಂತೆ ಮಾಡಬೇಕೆಂದು ಸರ್ವರಿಗೂ ಬೇಡಿಕೊಳ್ಳುವೆನು"[೧] ಹೀಗೆ ಲಕ್ಷ್ಮೇಶ್ವರದಲ್ಲಿ ೧೯೧೦ ಅಕ್ಟೋಬರ ೨೩, ೨೪, ೨೫ರಂದು ನಡೆದ 'ಹಾಲುಮತ ಧರ್ಮೋತ್ತೇಜಕ ಮಹಾಸಭೆ'ಯಲ್ಲಿ ವ್ಯಕ್ತಪಡಿಸಿದರು. ಈ ಸಭೆಯಲ್ಲಿ ಹಳವಳ್ಳಿ ಅವರು ವಂದನಾರ್ಪಣೆ ಮಾಡುತ್ತ "ಸಭೆ ಕೂಡಿದ ಮಹಾತ್ಮರೇ, ನೀವಾದರೂ ಇದರಂತೆ ನಿಮ್ಮ ನಿಮ್ಮ ದೇಶಗಳಲ್ಲಿ ಮಹಾಸಭೆಗಳನ್ನೂ ಗ್ರಾಮಗಳಲ್ಲಿ ಉಪಸಭೆಗಳನ್ನೂ ಮಾಡಿ ಕೀರ್ತಿಯನ್ನು ಪಸರಿಸಿ ಮತೋದ್ಧಾರ ಮಾಡಬೇಕೆಂದು ಹೇಳುವ ನನ್ನ ಅಲ್ಪಮತೀಯ ಮಾತನ್ನು ಲಕ್ಷ್ಯದಲ್ಲಿಡತಕ್ಕದ್ದೆಂದು ಬೇಡಿಕೊಳ್ಳುತ್ತೇನೆ" ಎಂದು ಸಭೆಯನ್ನುದ್ದೇಶಿಸಿ ವಿನಂತಿಸಿಕೊಂಡರು.[೨] ಹೀಗೆ ತಮ್ಮ ಜೀವನವನ್ನು ಜನಾಂಗದ ಜಾಗೃತಿಗಾಗಿ ಏಳ್ಗೆಗಾಗಿ ವಿನಿಯೋಗಿಸಿ ಹಾಲುಮತಕ್ಕೆ ಮಹನೀಯರಾಗಿದ್ದಾರೆ.

೩. ಶಂಬಾ ಜೋಶಿ

ಶಂಬಾ ಎಂದೇ ಪ್ರಖ್ಯಾತರಾದ ಶಂಕರ ಬಾಳದೀಕ್ಷಿತ ಜೋಶಿ ಅವರು ೧೮೯೬ ಜನವರಿ ೪ರಂದು ಬೆಳಗಾಂವ ಜಿಲ್ಲೆಯ ಸವದತ್ತಿ ತಾಲೂಕಿನ ಗುರ್ಲಹೊಸೂರು ಎಂಬಲ್ಲಿ ಜನಿಸಿದರು. ತಂದೆ ಬಾಳದೀಕ್ಷಿತ, ತಾಯಿ ಉಮಾದೀಕ್ಷಿತ.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಗುರ್ಲಹೊಸೂರಿನಲ್ಲಿ ನಂತರ ಧಾರವಾಡದಲ್ಲಿ ಮುಗಿಸಿದರು. ಚಿಕ್ಕೋಡಿಯಲ್ಲಿ ೧೯೧೯ರಲ್ಲಿ ಶಿಕ್ಷಕರಾಗಿ ನೇಮಕಗೊಂಡರು. ೧೯೨೪ರಲ್ಲಿ ಬೆಳಗಾಂವದಲ್ಲಿ ನಡೆದ ಮೊದಲ ಕರ್ನಾಟಕ ಏಕೀಕರಣ, ಸಂಘಟನೆಯ ಕಾರ್ಯದರ್ಶಿಯಾಗಿ ಸೇವೆಸಲ್ಲಿಸಿದರು. ೧೯೨೮ರಿಂದ ೧೯೪೬ರವರೆಗೆ ವಿಕ್ಟೋರಿಯಾ ಹೈಸ್ಕೂಲ್‌ನಲ್ಲಿ ಕನ್ನಡ ಶಿಕ್ಷಕರಾಗಿ ಸೇವೆಸಲ್ಲಿಸಿದರು. ೧೯೮೧ರಲ್ಲಿ ನಡೆದ ೫೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ೧೯೯೧ ಸೆಪ್ಟೆಂಬರ ೨೮ರಂದು ದೈವಾಧೀನ ರಾದರು.

ಶಂಬಾ ಅವರು ಸಂಸ್ಕೃತಿ ಅಧ್ಯಯನಕ್ಕೆ ಮಹತ್ವವಾದ ಕೊಡುಗೆಯನ್ನು ನೀಡಿದ್ದಾರೆ. ಭಾರತೀಯ ಸಂಸ್ಕೃತಿಯ ಮೂಲಕೇಂದ್ರ ಕರ್ನಾಟಕ ಸಂಸ್ಕೃತಿ ಎಂಬ ಊಹೆಯನ್ನು ವ್ಯಕ್ತಪಡಿಸಿದರು. ಋಗ್ವೇದಸಾರ, ನಾಗಪ್ರತಿಮಾ ವಿಚಾರ, ಪ್ರವಾಹಪತಿತರ ಕರ್ಮ ಹಿಂದೂ ಎಂಬ ಧರ್ಮ, ಭಗವದ್ಗೀತೆಯಲ್ಲಿ ಹುದುಗಿರುವ ರಾಜಯೋಗದ ಸ್ವರೂಪ, ವೈವಸ್ವಿತ ಮನುಪ್ರಕಾಶಿತ ಮಾನವ ಧರ್ಮದ ಆಕೃತಿ, ಬುಧನ ಜಾತಕ, ಬಿತ್ತಿದ್ದನ್ನು ಬೆಳಕೋ ಎಂಬ ಕೃತಿಗಳು ಒಟ್ಟು ಮಾನವ ನೆಲೆಯನ್ನು ಹಲವು ದಿಕ್ಕುಗಳಲ್ಲಿ ಗುರುತಿಸುವ ಪ್ರಯತ್ನ ಮಾಡುತ್ತವೆ.

ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದಂತೆ ಶಂಬಾ ಅವರು ಕಂನಡ -ಕಂನುಡಿ(ಸಂಪುಟ -೨)ಯಲ್ಲಿ ಕನ್ನಡದ ನೆಲೆ(೧೯೩೯), ಎಡೆಗಳು ಹೇಳುವ ಕಂನಾಡ ಕತೆ(೧೯೪೭), ಕಂನುಡಿಯ ಹುಟ್ಟು(೧೯೭೭), ಕನ್ನಡಿಯ ಜೀವಾಳ(೧೯೪೦) ಎಂಬ ಕೃತಿಗಳು, ಮತ್ತು ಕರ್ನಾಟಕ ಸಂಸ್ಕೃತಿ(ಸಂಪುಟ-೩)ಯಲ್ಲಿಯ ಹಾಲುಮತ ದರ್ಶನ(೧೯೬೦), ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ ಭಾಗ-೨ (೧೯೭೭) ಎಂಬ ಕೃತಿಗಳು ಮುಖ್ಯ ವಾಗಿವೆ.

ಈ ಕೃತಿಗಳು ಕನ್ನಡ ಸಂಸ್ಕೃತಿ ವಿಚಾರಧಾರೆಯ ಮೂಲಗಾಮಿ ಚರ್ಚೆಗಳನ್ನು ಮತ್ತು ಭಾಷೆಯ ಹಲವು ಬಗೆಯ ನಂಟುಗಳ ವಿಶಿಷ್ಟ ನೆಲೆಗಳನ್ನು ಚರ್ಚಿಸುತ್ತವೆ. ಕಣ್ಮರೆಯಾದ ಕಂನಡ, ಒಂದೇ ಭಾಷಿಕರ ಒಳಪಂಗಡಗಳು, ವೀರಹಟ್ಟಿಕಾರ, ಧನಗಾರರು, ಇನ್ನೂ ಸ್ವಲ್ಪ ನೀರ: ಹಾಲ ವಿಚಾರ ಮೊದಲಾದ ಹಾಲುಮತದ ವಿವರಗಳನ್ನು ಹಾಲುಮತದರ್ಶನ ಎಂಬ ಕೃತಿ ಪರಿಚಯಿಸುತ್ತದೆ. ಸಂಸ್ಕೃತಿಯು ಆರಂಭವಾದ ಬಗೆ, ಕರ್ನಾಟ ಸಂಸ್ಕೃತಿ, ಕುರುಬರು: ಧನಗಾರರು, ಕರ್ನಾಟ ಸಂಸ್ಕೃತಿ ಮತ್ತು ನರ್ಮದಾ ಪರಿಸರ, ಕಂನುಡಿ ಮತ್ತು ಮರಾಠಿ ಇಂಥ ಅನೇಕ ವಿಚಾರಗಳನ್ನು ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ ಕೃತಿಯು ವಿಶ್ಲೇಷಣೆಗೆ ಒಳಪಡಿಸುತ್ತದೆ.

ವೇದೋಪನಿಷತ್ತು, ಪುರಾಣ, ಸ್ಮೃತಿ, ಸ್ಥಳವ್ಯಾಸಂಗ ಮುಂತಾದ ಸಂಗತಿಗಳನ್ನು ಶಂಬಾ ಅವರು ತಲಸ್ಪರ್ಶಿ ಯಾಗಿ ಚರ್ಚಿಸಿದ್ದಾರೆ. ಮರಾಠಿಗೆ ಮೂಲ ಕನ್ನಡ ಮತ್ತು ಎಲ್ಲ ಜನಾಂಗಗಳ ಮೂಲ ಕುರುಬ ಜನಾಂಗ ಎಂಬ ಅಭಿಪ್ರಾಯಗಳನ್ನು ಸಾಕ್ಷಾಧಾರಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಅವರ 'ಕರ್ನಾಟ ಸಂಸ್ಕೃತಿ ಪೂರ್ವ ಪೀಠಿಕೆ' ಎಂಬ ಕೃತಿಗೆ ೧೯೭೦ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 'ಕಂನುಡಿಯ ಹುಟ್ಟು' ಕೃತಿಯು ಕನ್ನಡ ಭಾಷೆಯ ಒಳಸುಳಿಗಳನ್ನು ಗುರುತಿಸುವ ಭಾಷಾಶಾಸ್ತ್ರ ವ್ಯಾಸಂಗದ ಹಿನ್ನೆಲೆಯಲ್ಲಿ ವಿವರಿಸುತ್ತದೆ. 'ಹಾಲುಮತ ದರ್ಶನ' ಕೃತಿಯಲ್ಲಿ ಶೈವ ಮತ್ತು ವೈಷ್ಣವ ಧರ್ಮದ ಮೂಲವನ್ನು ಹಾಲುಮತದ ಮೂಲಕ ಹುಡುಕಲಾಗಿದೆ.

ಮೂಲತಃ ಸಾಂಸ್ಕೃತಿಕ ವ್ಯಾಸಂಗಿಯಾದ ಶಂಬಾ ಅವರು 'ವಿಚಾರವೇ ಜೀವನದ ಬೆಳಕು' ಎಂಬ ಪ್ರಜ್ಞೆಯನ್ನು ಹೊತ್ತವರು. ಶಾಸನ ಕಾವ್ಯಗಳಿಂದ ಸಂಸ್ಕೃತಿ ಅಧ್ಯಯನ ನಡೆಯುತ್ತಿದ್ದ ಕಾಲದಲ್ಲಿ ಆಚಾರ, ಸಂಪ್ರದಾಯ, ಸಂಚಿಕೆಗಳಲ್ಲಿಯ ಜಾನಪದ ಆಕರಗಳನ್ನು ಬಳಸಿಕೊಂಡು ಸಂಸ್ಕೃತಿ ಅಧ್ಯಯನಕ್ಕೆ ಒಂದು ಹೊಸ ಮಾರ್ಗವನ್ನು ಹುಡುಕಿದರು. ದೈವತಶಾಸ್ತ್ರ, ಪುರಾತತ್ವಶಾಸ್ತ್ರ, ಮನಃಶಾಸ್ತ್ರ, ಭಾಷಾಶಾಸ್ತ್ರ, ಜೀವಶಾಸ್ತ್ರ, ಇತಿಹಾಸಶಾಸ್ತ್ರ ಹೀಗೆ ಬಹುಮುಖೀ ಹಿನ್ನೆಲೆಯ ಸಾಂಸ್ಕೃತಿಕ ಅಧ್ಯಯನವನ್ನು ತಾತ್ವಿಕವಾಗಿ ಮತ್ತು ವೈಚಾರಿಕವಾಗಿ ಕಟ್ಟಿಕೊಟ್ಟರು.

ತಮ್ಮ ಜೀವನದುದ್ದಕ್ಕೂ ಸಂಶೋಧನೆಯನ್ನು ನಡೆಸಿ ಬದುಕನ್ನು ಸಾರ್ಥಕಪಡಿಸಿಕೊಂಡರು. ಪೌರಾಣಿಕ ಪ್ರತಿಮೆಗಳಿಗೂ ಇಂದಿನ ಸಾಮಾಜಿಕ ಜೀವನಕ್ಕೂ ಇರುವ ಸಂಬಂಧಗಳನ್ನು ತಮ್ಮ ಸಂಶೋಧನೆಯ ಮೂಲಕ ಸ್ಪಷ್ಟಪಡಿಸಿದ್ದಾರೆ. ಒಟ್ಟಿನಲ್ಲಿ ಇತಿಹಾಸ, ಕನ್ನಡಭಾಷಾಶಾಸ್ತ್ರ, ಜನಪದ ಸಾಹಿತ್ಯ, ಸಂಸ್ಕೃತಿ, ಹಿಂದೂ ಧರ್ಮ,

ಋಗ್ವೇದಸಾರ, ಅನುವಾದ ಮತ್ತು ಇತರೆ ಕ್ಷೇತ್ರಗಳಲ್ಲಿ ಸಾಂಸ್ಕೃತಿಕ ಸಾಹಿತ್ಯದ ಫಸಲನ್ನು ಬೆಳೆಸಿದ್ದಾರೆ. ಈ ಎಲ್ಲ ಚರ್ಚೆಗಳನ್ನು ಹಾಲುಮತ ಸಾಂಸ್ಕೃತಿಯ ಮೂಲಕ ಕಂಡುಕೊಳ್ಳುವ ಪ್ರಯತ್ನವನ್ನು ಶಂಬಾ ಅವರ ಕೃತಿಗಳಲ್ಲಿ ನಾವು ಕಾಣಬಹುದಾಗಿದೆ.

೪. ಎಂ.ಎಂ.ಕಲಬುರ್ಗಿ

ಕರ್ನಾಟಕ ಸಂಶೋಧನ ಕ್ಷೇತ್ರದಲ್ಲಿ ಕಲಬುರ್ಗಿ ಅವರ ಹೆಸರು ಬಹುಮುಖ್ಯವಾದುದು. ಶಾಸನ, ಪ್ರಾಚೀನ ಸಾಹಿತ್ಯ, ವಚನ ಸಾಹಿತ್ಯ, ಹಸ್ತಪ್ರತಿ ಗ್ರಂಥಸಂಪಾದನೆ, ಜನಪದ ಮುಂತಾದ ಕ್ಷೇತ್ರಗಳಲ್ಲಿ ಅವರು ಸಂಶೋಧನೆ ಕೈಕೊಂಡು ೫೦ಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಮಾರ್ಗ ಹೆಸರಿನ ಆರು ಸಂಪುಟಗಳು ಅವರ ಸಂಶೋಧನ ವ್ಯಾಪ್ತಿ ಮತ್ತು ಮಹತ್ವವನ್ನು ತಿಳಿಸುತ್ತವೆ. ಮಾರ್ಗ-೪ ಸಂಪುಟಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭಿಸಿದೆ.

ಇತ್ತೀಚಿನ ವರ್ಷಗಳಲ್ಲಿ ಸಂಶೋಧನೆಯಿಂದ 'ಸಮಾಜದ ಶುದ್ಧೀಕರಣ'ವಾಗಬೇಕೆಂಬ ಮಾತು ಕೇಳಿ ಬರುತ್ತದೆ. ಕಲಬುರ್ಗಿ ಅವರು ಹೇಳುವಂತೆ "ಇತ್ತೀಚೆಗೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ ರಾಜಕೀಯ ಧಾರ್ಮಿಕ ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು, ನಿಜ ಇತಿಹಾಸವನ್ನು ಶೋಧಿಸಿ ಕೊಡುವುದು. ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವ ವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನದ ಕಾಲವನ್ನು ಸರಿಪಡಿಸುವುದಾಗಿದೆ".[೨] ಈ ಹಿನ್ನೆಲೆಯಲ್ಲಿ ಕಲಬುರ್ಗಿ ಅವರು ಲಿಂಗಾಯತ-ಹಾಲುಮತ ಸಮಾಜಗಳ ಇತಿಹಾಸ, ಸಾಹಿತ್ಯ ಧರ್ಮ ಕುರಿತಂತೆ ಸಂಶೋಧನ ಲೇಖನಗಳನ್ನು ಹಾಗೂ ಕೃತಿಗಳನ್ನು ಪ್ರಕಟಿಸಿದ್ದಾರೆ. ವಿಶೇಷವಾಗಿ ಕುರುಬರ ಗುರು ಪರಂಪರೆಯನ್ನು ತಿಳಿಸುವ 'ತಗರ ಪವಾಡ' ಮತ್ತು 'ಸಿದ್ಧಮಂಕ ಚರಿತೆ' ಎಂಬ ಪ್ರಾಚೀನ ದೇಸೀ ಕಾವ್ಯಗಳನ್ನು ಶೋಧಿಸಿ ಪರಿಷ್ಕರಿಸಿದ್ದಾರೆ. ಕಲ್ಯಾಣದಲ್ಲಿ ಸತ್ತ ಕುರಿಯನ್ನು ಹಾಲಿನ ಕಂಬಿಯ ಮೇಲೆ ಹೊತ್ತು ತಂದ ವಿಷಯವನ್ನು ಈ ಎರಡೂ ಕೃತಿಗಳು ವಿವರಿಸುತ್ತವೆ. ವಿಷಯ ಒಂದೇ ಆದರೂ ಕುರುಬ ಸಮುದಾಯದ ಎರಡು ಭಿನ್ನ ಸಂಪ್ರದಾಯಗಳನ್ನು ಈ ಕೃತಿಗಳು ಪರಿಚಯಿಸುತ್ತವೆ. ತಗರಪವಾಡದಲ್ಲಿಯ ಶಾಂತೊಡೆಯರ ಪರಂಪರೆ ಮತ್ತು ಸಿದ್ಧಮಂಕ ಚರಿತೆಯು ಮಂಕೊಡೆಯರ ಪರಂಪರೆಗಳು ಪ್ರಸ್ತುತ ಸಂದರ್ಭದಲ್ಲಿ ಅಧ್ಯಯನದ ಅನಿವಾರ್ಯ ವಿಷಯಗಳಾಗಿವೆ.

ಕುರುಬ ಸಮುದಾಯವನ್ನು ಕುರಿತಂತೆ ಎಂ.ಎಂ.ಕಲಬುರ್ಗಿ ಅವರ ಹದಿಮೂರು ಲೇಖನಗಳು ಪ್ರಕಟ ಗೊಂಡಿವೆ. ಅವು ಈಗ "ಹಾಲುಮತ ಅಧ್ಯಯನಗಳು" ಹೆಸರಿನಿಂದ ಪುಸ್ತಕ ರೂಪದಲ್ಲಿ ಒಂದೆಡೆ ಪ್ರಕಟ ಗೊಂಡಿವೆ.[೪] ರೇವಣಸಿದ್ಧ, ಸಿದ್ಧರಾಮ, ಶಾಂತಮುತ್ತಯ್ಯ, ಮರಳುಸಿದ್ಧರು ಕುರುಬರ ಗುರುಪರಂಪರೆಯಲ್ಲಿ

ಬರುವ ಪ್ರಮುಖ ದೈವಗಳು. ಈ ದೈವಗಳ ಬಗೆಗೆ ಮೊದಲ ಬಾರಿಗೆ ಕಲಬುರ್ಗಿ ಅವರು ತಮ್ಮ ಲೇಖನಗಳ ಮೂಲಕ ಹೊಸ ಸಂಗತಿಗಳನ್ನು ತಿಳಿಸಿದ್ದಾರೆ. ಇದಕ್ಕೆ ಅವರು ಶಾಸನ, ಪ್ರಾಚೀನ ಕಾವ್ಯ, ಪುರಾಣ ಹಾಗೂ ಮೌಖಿಕ ರೂಪದ ಆಕರಗಳನ್ನು ಆಧಾರಸಹಿತವಾಗಿ ಸ್ಪಷ್ಟಪಡಿಸಿದ್ದಾರೆ. ಸಿದ್ಧರಾಮ ಶಿವಯೋಗಿ ಯಾದದ್ದು, ರೇವಣಸಿದ್ಧನನ್ನು ಶಿವಾಚಾರ್ಯನನ್ನಾಗಿ ಮಾಡಿದ್ದು, ರೇವಣಸಿದ್ಧ ಚರಿತ್ರೆಯ ಎರಡು ಸಂಪ್ರದಾಯ ಗಳು, ಕುರುಬರ ಗುರು ಶಾಂತಮುತ್ತಯ್ಯ, ಮರುಳಸಿದ್ಧನ ನೆಲೆ ಉಜ್ಜನೀಪೀಠದ ಮೂಲ ಹೀಗೆ ಕುರುಬರ ಗುರು ಪರಂಪರೆಯ ಬಗೆಗೆ ಮೊದಲ ಬಾರಿಗೆ ಹೊಸ ಸಂಗತಿಗಳನ್ನು ಇಲ್ಲಿ ಹೇಳಿದ್ದಾರೆ.

ಇನ್ನು ಬೀರಪ್ಪ-ವಿರೂಪಾಕ್ಷ-ವೀರಭದ್ರ ಈ ಮೂರು ಹೆಸರುಗಳ ಹಿನ್ನೆಲೆಯನ್ನು ಚರ್ಚಿಸಿ ವೀರಭದ್ರನ ಮೂಲ ರೂಪ ಬೀರಪ್ಪನೆಂದು ಸೋದಾಹರಣವಾಗಿ ವಿಶ್ಲೇಷಿಸುತ್ತಾ "ಬಹುಶಃ ಹಂಪಿಯ ವಿರೂಪಾಕ್ಷ ದೇವಾಲಯವನ್ನು ಅಲ್ಲಿಯ ಆಚಾರಗಳನ್ನು ಪರಿಶೀಲಿಸಿದರೆ ಕುರುಬರಿಗೆ ಸಂಬಂಧಿಸಿದ ಬೇರೆ ಕೆಲವು ಆಧಾರಗಳು ಅಲ್ಲಿ ಸಿಗಬಹುದು"[೫] ಎಂಬ ಸೂಚನೆಗಳನ್ನು ಸಹ ನೀಡಿದ್ದಾರೆ. ಈ ಸೂಚನೆಗಳನ್ನು ಸಂಶೋಧಕರು ಗಮನಿಸಿ ಆ ಪ್ರದೇಶದಲ್ಲಿ ಸಂಶೋಧನೆ ಕೈಕೊಳ್ಳಬೇಕಾಗಿದೆ.

ಮುದಿಮಲ್ಲಯ್ಯ-ಮುದಿವೀರಣ್ಣ-ಮುದಿ ಸಂಗಯ್ಯ ಎಂಬ ಲೇಖನವು ಕುತೂಹಲಕಾರಿಯಾಗಿದೆ. ಬೀರಪ್ಪನು ಮುದಿ ವೀರಣ್ಣ>ವೀರಭದ್ರನಾಗಿದ್ದನ್ನು ಅನೇಕ ಆಧಾರಗಳ ಸಹಿತ ಪ್ರಸ್ತುತ ಪಡಿಸಿದ್ದಾರೆ. ಕುರುಬ ಸಮಾಜ ಮತ್ತು ಲಿಂಗಾಯತ ಸಮಾಜಗಳಲ್ಲಿ ಸಮಾನತೆಯಿರುವುದನ್ನು ಚರ್ಚಿಸುತ್ತ "ಕುರುಬ ಸಂಸ್ಕೃತಿಯ ಪರಿಷ್ಕೃತ ರೂಪವೇ ಶೈವ ವೀರಶೈವ ಸಂಸ್ಕೃತಿಯಾಗಿದೆ"[೬] ಎಂದು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಇಲ್ಲಿನ ಪ್ರತಿಯೊಂದು ಲೇಖನಗಳು ವಿಸ್ತೃತವಾದ ಅಧ್ಯಯನಕ್ಕೆ ದಿಕ್ಸೂಚಿಯಂತಿವೆ.

ಹೀಗೆ ಕುರುಬರ ಗುರುಪರಂಪರೆ, ಇತಿಹಾಸ, ಉದ್ಯೋಗ, ಸಂಸ್ಕೃತಿ, ಶೈವಮತಗಳು (ಕುರುಬ ಜನಾಂಗ) ಕಾರಣಾಂತರಗಳಿಂದ ವೀರಶೈವದಲ್ಲಿ ವಿಲೀನಗೊಂಡ ಪ್ರಮುಖ ವಿಷಯಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಮೂಲತಃ ಕುರುಬ ಸಮುದಾಯದವರಾದ ಶಾಂತಮುತ್ತಯ್ಯ, ರೇವಣಸಿದ್ಧ, ಸಿದ್ಧರಾಮ, ಬೀರಪ್ಪ, ಮರುಳಸಿದ್ಧ ಮೊದಲಾದವರು ಕಾಲಾಂತರದಲ್ಲಿ ಲಿಂಗಾಯತ ಮತ್ತು ಇತರೆ ಸಮಾಜಗಳಲ್ಲಿ ಆರಾಧಕರಾಗಿರುವುದನ್ನು ಚಾರಿತ್ರಿಕ ಹಾಗೂ ವೈಚಾರಿಕವಾಗಿ ನೋಡಿದ್ದಾರೆ.

ಒಟ್ಟಾರೆ ಕುರುಬ ಸಮುದಾಯದ ಧಾರ್ಮಿಕ, ಸಾಮಾಜಿಕ, ಚಾರಿತ್ರಿಕ ವಿಷಯಗಳನ್ನು ಸಮಾಜಕ್ಕೆ ತಿಳಿಸಿ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ.

೫. ಶಿವಾನಂದ ಗುಬ್ಬಣ್ಣನವರ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದ ಡಾ. ಶಿವಾನಂದ ಗುಬ್ಬಣ್ಣನವರ ಅವರು ಸಾಹಿತ್ಯಿಕ ಕ್ಷೇತ್ರದಲ್ಲಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಕುರುಬ ಸಮಾಜ, ಲಿಂಗಾಯತ ಧರ್ಮ ಕಾವ್ಯ ಹೀಗೆ ವಿಭಿನ್ನ ವಿಷಯಗಳ ಬಗೆಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ.

ಹಾಲುಮತ ಕುರಿತಾಗಿ ಕರ್ನಾಟಕದ ಕುರುಬರು, ದೇವರ್ ಬಂದಾವ್ ಬನ್ನಿssರೇ ಭಾಗ ೧-೨ ಕೃತಿಗಳನ್ನು ರಚಿಸಿದ್ದಾರೆ. 'ಕರ್ನಾಟಕದ ಕುರುಬರು' ಎಂಬ ಕೃತಿಯನ್ನು ೧೯೯೩ರಲ್ಲಿ ರಚಿಸಿದ್ದಾರೆ. ಕುರುಬರ ಚರಿತ್ರೆಯ ಹಿನ್ನೆಲೆ, ಭಾಷೆ, ಉಪಜಾತಿ, ಸಾಮಾಜಿಕ ಸಂಘಟನೆ, ಧಾರ್ಮಿಕ ಕೃತಿಗಳು, ಪೌರಾಣಿಕ ಹಿನ್ನೆಲೆ, ಕಂಬಳಿ ನೇಯ್ಗೆ, ಕಲೆ ಮತ್ತು ಸಾಹಿತ್ಯ, ರಾಜಕೀಯ ಚರ್ಚೆ ಇಂಥ ಬಹುಮುಖೀ ನೆಲೆಯ ವಿಷಯಗಳನ್ನು ತಲಸ್ಪರ್ಶಿ ಅಧ್ಯಯನಕ್ಕೆ ಒಳಪಡಿಸಿದ್ದಾರೆ.

'ದೇವರ್ ಬಂದಾವ್ ಬನ್ನಿssರೇ' (೧೯೭೯) ಭಾಗ-೧ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ದೇವರ್ ಬಂದಾವ್ ಬನ್ನಿರೇ' ಭಾಗ-೨ (೧೯೮೦) ಎಂಬ ಎರಡು ಕೃತಿಗಳು ಡೊಳ್ಳಿನ ಹಾಡುಗಳು ಬೆಳೆದು ಬಂದ ಪರಂಪರೆ, ಕುರುಬರ ಪಂಗಡಗಳು, ಬೀರಲಿಂಗನ ವೃತ್ತಾಂತ, ಕುರುಬ ಜನಾಂಗದ ಆಚಾರ -ವಿಚಾರ, ಭೀಮಾರ್ಜುನರ ಗರ್ವಭಂಗ, ಏಳುಕೊಳ್ಳದ ಎಲ್ಲಮ್ಮ, ಹಾಲುಮತದ ಹಿರಿಮೆ ಮೊದಲಾದ ವಿಷಯಗಳನ್ನು ಪೌರಾಣಿಕ, ನೈತಿಕ, ಚಾರಿತ್ರಿಕ ಎಂಬ ಭಾಗಗಳಲ್ಲಿ ವಿಂಗಡಿಸಿ ಹಾಡುಗಳನ್ನು ಪರಿಚಯಿಸಿದ್ದಾರೆ. ಹಾಲುಮತದ ಪರಂಪರೆ, ಪ್ರಾಚೀನತೆ, ದೈವ, ಆಚಾರ, ವಿಚಾರ, ಪುರಾಣ, ಐತಿಹ್ಯಗಳನ್ನು ಪರಿಚಯಿಸುವಲ್ಲಿ ಈ ಎರಡು ಡೊಳ್ಳಿನ ಪದಗಳ ಕೃತಿಗಳು ಮಹತ್ವದ್ದಾಗಿವೆ.

ಒಟ್ಟಾರೆ ಜನಪದರಿಂದ ಸಂಗ್ರಹಿಸಿದ ಕುರುಬರ ಪ್ರಾಚೀನ ಪರಂಪರೆ, ವಿಚಾರ, ಆಚಾರ, ದೈವ, ಪುರಾಣ, ಚರಿತ್ರೆ, ವೃತ್ತಿ, ಸಮಾಜ, ರಾಜಕೀಯ, ಧಾರ್ಮಿಕ, ಮುಂತಾದವುಗಳನ್ನು ಚರ್ಚೆಗೆ ಒಳಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಗುಬ್ಬಣ್ಣನವರ ಅವರು ವಿ.ಆರ್.ಹನುಮಂತಯ್ಯನವರ ಮುಂದುವರಿಕೆಯ ಕೆಲಸವನ್ನು ಅಚ್ಚುಕಟ್ಟಾಗಿ ಪೂರೈಸಿದ್ದಾರೆ. ಅಲ್ಲದೆ ಕುರುಬ ಜನಾಂಗದ ಹೊಸ ವಿಚಾರಗಳನ್ನು ಸಮಾಜಕ್ಕೆ ಮತ್ತು ಶ್ರೀ ಸಾಮಾನ್ಯರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

೬. ಡಾ. ಎಫ್.ಟಿ. ಹಳ್ಳಿಕೇರಿ

ಹಾಲುಮತ ಸಂಸ್ಕೃತಿ ಸಾಹಿತ್ಯವನ್ನು ಕುರಿತಂತೆ ಸಂಶೋಧನೆ ಕೈಕೊಂಡವರಲ್ಲಿ ಎಫ್.ಟಿ. ಹಳ್ಳಿಕೇರಿ ಅವರು ಒಬ್ಬರು. ಕಳೆದ ಹತ್ತು ವರ್ಷಗಳಿಂದ ಹಾಲುಮತ ಸಮುದಾಯದ ಪರಂಪರೆ, ಇತಿಹಾಸ, ಆರಾಧ್ಯ ದೈವಗಳು, ಗುರುಪರಂಪರೆ ಹಾಲುಮತ ಕಾವ್ಯ ಪುರಾಣಗಳು, ಮೌಖಿಕ ಆಕರಗಳು ಹೀಗೆ ಅನೇಕ ವಿಷಯಗಳ ಬಗ್ಗೆ ಅಧ್ಯಯನ ಮಾಡಿ ಸಂಶೋಧನಾತ್ಮಕ ಲೇಖನ ಮತ್ತು ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ಹಾಲುಮತ ವ್ಯಾಸಂಗ, ಹಾಲುಮತ ಅಧ್ಯಯನ ಸಂಪುಟಗಳನ್ನು ಕನ್ನಡ ವಿಶ್ವವಿದ್ಯಾಲಯದ ಹಾಲುಮತ ಅಧ್ಯಯನ ಪೀಠದಿಂದ ಪ್ರಕಟಿಸಿದ್ದಾರೆ. ಈ ಪೀಠದ ಮುಖಾಂತರ ಹಾಲುಮತ ಆಕರಗಳ ಸಂಗ್ರಹ ಸಂಶೋಧನೆ ಮತ್ತು ಪ್ರಕಟಣಾ ಕಾರ್ಯವನ್ನು ವ್ಯಾಪಕವಾಗಿ ಕೈಕೊಂಡಿದ್ದಾರೆ. ಹಾಲುಮತ ಸಮಾಜ ಸಂಸ್ಕೃತಿಗೆ ಸಂಬಂಧಿಸಿದಂತೆ ಈವರೆಗೆ ೨೫ ಸಂಪ್ರಬಂಧಗಳನ್ನು ವಿವಿಧ ವಿಚಾರ ಸಂಕೀರ್ಣಗಳಲ್ಲಿ ಮಂಡಿಸಿದ್ದಾರೆ. ಹಾಲುಮತ ಸಂಸ್ಕೃತಿಯು ಶಾಸನಗಳಲ್ಲಿ ನಿರೂಪಗೊಂಡ ಬಗೆಯನ್ನು ಶಾಸನಗಳಲ್ಲಿ ಕುರುಬರು, ಕುರುಬರ ಗುರುಪರಂಪರೆಗೆ

ಸಂಬಂಧಿಸಿದ ತುರುವೆಕೆರೆ, ದೇವಲಾಪುರದ ಶಾಸನಗಳ ವಸ್ತುವೈವಿಧ್ಯವನ್ನು ಕುರಿತಂತೆ ಚರ್ಚಿಸಿದ್ದಾರೆ. ಕುರುಬರ ಗುರು ಪರಂಪರೆಯಲ್ಲಿ ಬರುವ ರೇವಣಸಿದ್ಧ, ಸಿದ್ಧರಾಮ, ಅಮೋಘಸಿದ್ಧ, ಮರಳುಸಿದ್ಧರ ಇತಿವೃತ್ತ ವಿಚಾರ ಈ ಪರಂಪರೆಯಲ್ಲಿರುವ ಮಠ ದೇವಾಲಯಗಳ ಭೌಗೋಳಿಕ ವ್ಯಾಪ್ತಿ, ಅಲ್ಲಿ ನಡೆಯುವ ಜಾತ್ರೆ, ಉತ್ಸವ ಹಾಗೂ ಆಚರಣೆಗಳ ವಿಶೇಷತೆಯನ್ನು ವಿವಿಧ ಲೇಖನಗಳಲ್ಲಿ ಚರ್ಚೆಗೆ ಒಳಪಡಿಸಿದ್ದಾರೆ. ಅಲ್ಲದೆ ಈ ಪರಂಪರೆಯಲ್ಲಿ ಬರುವ ಒಡೆಯರ ಸ್ಥಿತಿಗತಿ, ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಕ್ಷೇತ್ರಕಾರ್ಯದ ಮುಖಾಂತರ ಸ್ಪಷ್ಟಪಡಿಸಿದ್ದಾರೆ. ೧೯೯೨ರಲ್ಲಿ ಕಾಗಿನೆಲೆಯಲ್ಲಿ ಕನಕದಾಸರ ಹೆಸರಿನಲ್ಲಿ ಗುರುಪೀಠವನ್ನು ಸ್ಥಾಪಿಸಿದ್ದು ಸರಿಯಾದ ಕ್ರಮವಲ್ಲವೆಂಬುದು ಡಾ. ಎಫ್.ಟಿ. ಹಳ್ಳಿಕೇರಿ ಅವರ ಖಚಿತವಾದ ಅಭಿಪ್ರಾಯವಾಗಿದೆ. ಇದಕ್ಕೆ ಕೊಡುವ ಕಾರಣಗಳು ಹೀಗಿವೆ: ಕುರುಬರು ಶೈವ ಸಂಸ್ಕೃತಿಯಿಂದ ಬಂದವರು. ಶೈವ ಸಂಪ್ರದಾಯದ ಗುರುಪರಂಪರೆಯನ್ನು ಪ್ರಾಚೀನ ಕಾಲದಿಂದಲೂ ಹೊಂದಿದ್ದಾರೆ. ರೇವಣಸಿದ್ಧ, ಶಾಂತಮುತ್ತಯ್ಯ, ಸಿದ್ಧರಾಮ, ಸಿದ್ಧಮಂಕ, ಅಮೋಘಸಿದ್ಧ ಈ ಪರಂಪರೆಯ ಆದ್ಯರು. ಈ ಪರಂಪರೆಯ ಹೆಸರಿನಲ್ಲಿ ದಕ್ಷಿಣ ಭಾರತದಾದ್ಯಂತ ಮಠ ದೇವಾಲಯಗಳು ಇಂದಿಗೂ ಅಸ್ತಿತ್ವದಲ್ಲಿವೆ. ಹೀಗಾಗಿ ವೈದಿಕ ಪರಂಪರೆಯ ಕನಕ ಗುರುಪೀಠದ ಸ್ಥಾಪನೆ ಈ ಸಮುದಾಯಕ್ಕೆ ಅಗತ್ಯವಿದ್ದಿಲ್ಲ. ಹೀಗೆ ಅನೇಕ ಕಾರಣಗಳನ್ನು ಡಾ. ಎಫ್.ಟಿ. ಹಳ್ಳಿಕೇರಿ ಅವರು ಕೊಡುತ್ತಾರೆ.

ಆರಾಧ್ಯ ದೈವಗಳಾದ ಬೀರಪ್ಪ, ಇಟ್ಟಪ್ಪ, ಬುಳ್ಳಪ್ಪರ ಇತಿವೃತ್ತ ವಿಚಾರ, ನೆಲೆಗಳು, ಆಚರಣೆ ಸಂಪ್ರದಾಯಗಳನ್ನು ಕೆಲವು ಲೇಖನಗಳಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಹಾಲುಮತ ಅಧ್ಯಯನಕ್ಕೆ ಪೂರಕ ಆಕರಗಳನ್ನು ಸಂಗ್ರಹಿಸುವಲ್ಲಿ ವಿಶೇಷ ಗಮನವಹಿಸಿದ್ದಾರೆ. ಶಾಸನ, ಕೈಫಿಯತ್ತು, ಸನದು, ನಿರೂಪ, ವರದಿ, ಭಾಷಣಗಳಿಂದ ದಾಖಲಾತ್ಮಕ ಆಕರಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಹಾಲುಮತ ಸಮುದಾಯದ ಗಣ್ಯಮಾನ್ಯರು ಕಳೆದ ಶತಮಾನದ ಆರಂಭದಲ್ಲಿ ಏರ್ಪಡಿಸಿದ ಹಾಲುಮತ ಮಹಾಸಭೆ, ಸಮ್ಮೇಳನಗಳನ್ನು ಆಯೋಜಿಸಿದ್ದಾರೆ. ಈ ಮಹಾಸಭೆ ಸಮ್ಮೇಲನಗಳ ವರದಿ ಭಾಷಣಗಳು ಅಂದು ಪ್ರಕಟಗೊಂಡಿದ್ದವು. ೧೯೧೦ರಲ್ಲಿ ಲಕ್ಷ್ಮೇಶ್ವರದಲ್ಲಿ ನಡೆದ ಮೊದಲ ಹಾಲುಮತ ಮಹಾಸಭೆಯ ವರದಿ ಹಾಗೂ ಭಾಷಣಗಳು ಕಳೆದ ಶತಮಾನದಲ್ಲಿ ಆರಂಭದ ದಶಕಗಳಲ್ಲಿ ಕುರುಬರ ಜಾಗೃತಿ ಸಂಘಟನೆಯ ಸ್ವರೂಪವನ್ನು ತಿಳಿದುಕೊಳ್ಳಲು ನೆರವಾಗುತ್ತವೆ. ಅಂಥ ಎಲ್ಲ ದಾಖಲೆಗಳನ್ನು ಸಂಗ್ರಹಿಸಿ "ಹಾಲುಮತ ಮಹಾಸಭೆ: ವರದಿಗಳು ಭಾಷಣಗಳು" ಎಂಬ ಸಂಪುಟದ ಮೂಲಕ ಪ್ರಕಟಿಸಿ ಹಾಲುಮತ ಚರಿತ್ರೆಯ ರಚನೆಗೆ ನೆರವಾಗಿದ್ದಾರೆ.

ಹೀಗೆ ಡಾ. ಎಫ್. ಟಿ. ಹಳ್ಳಿಕೇರಿ ಅವರು ವಿ.ಆರ್. ಹನುಮಂತಯ್ಯ, ಶಂಬಾ ಜೋಶಿ, ಎಂ.ಎಂ. ಕಲಬುರ್ಗಿ, ಶಿವಾನಂದ ಗುಬ್ಬಣ್ಣನವರ ಮೊದಲಾದ ವಿದ್ವಾಂಸರ ಮುಂದುವರಿಕೆಯಾಗಿ ಹಾಲುಮತ ಸಂಸ್ಕೃತಿಯನ್ನು ವಿವಿಧ ಆಯಾಮಗಳಲ್ಲಿ ಅಧ್ಯಯನಕ್ಕೊಳಪಡಿಸುವಲ್ಲಿ ಪ್ರಮುಖರೆನಿಸಿದ್ದಾರೆ.

೭. ಡಾ. ಶ್ಯಾಂಸಿಂಗ್ ಶಶಿ

ಶ್ಯಾಂಸಿಂಗ್ ಶಶಿ ಅವರು ಉತ್ತರ ಪ್ರದೇಶದ ಹರಿದ್ವಾರದ ಗ್ರಾಮದವರು. ಮೂರು ದಶಕಗಳಿಗಿಂತ ಹೆಚ್ಚು ಕಾಲ ಸಮಾಜವಿಜ್ಞಾನ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಪಶುಪಾಲಕ ಸಮುದಾಯದ ಅನೇಕ ವಿಷಯಗಳಲ್ಲಿ ಆಳವಾದ ಅಧ್ಯಯನ ಕೈಕೊಂಡು ಅಪಾರವಾದ ಕ್ಷೇತ್ರಕಾರ್ಯಗಳಿಂದ ವಿಷಯಗಳನ್ನು ವಸ್ತುನಿಷ್ಠವಾಗಿ ಚರ್ಚಿಸಿದ್ದಾರೆ. ಇವರ ವಿಷಯುಗಳಿಗೆ ಸಂಬಂಧಪಟ್ಟಂತೆ ೫೦ಕ್ಕೂ ಹೆಚ್ಚು ಸಂಶೋಧನ ಪ್ರಬಂಧಗಳು ರಚನೆಗೊಂಡಿವೆ. ಶಶಿ ಅವರು ಬಾಬಾ ಸಾಹೇಬ ಅಂಬೇಡ್ಕರ ಬರಹಗಳ ಪ್ರಕಟಣೆಯ ಮುಖ್ಯ ಸಂಪಾದಕರಾಗಿದ್ದರು. ಅವರ ಸಾಹಿತ್ಯಿಕ ಸೇವೆಗಾಗಿ ೧೯೯೦ರಲ್ಲಿ ಭಾರತ ಸರಕಾರವು ಪದ್ಮಶ್ರೀ ಪ್ರಶಸ್ತಿಯನ್ನು ನೀಡಿತು. ಇವರು ೩೦೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಹಿಮಾಲಯ, ಸೋಷಿಯಲ್ ರಿಸರ್ಚ್, ಕಾಂಟೆಂಪರರಿ ಸೋಷಿಯಲ್ ಸೈನ್ಸಸ್, ಸೈನಿಕ್ ಸಮಾಚಾರ ಮೊದಲಾದ ನಿಯತಕಾಲಿಕೆಗಳ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇವರ ಕೃತಿಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯನ್ನು ಹೊಂದಿವೆ. ಡಾ. ಶಶಿ ಅವರು ವಿಶ್ವದ ಪಶುಪಾಲಕ ಸಮುದಾಯಗಳನ್ನು ಕುರಿತಂತೆ ವಿಶೇಷ ಅಧ್ಯಯನ ಮಾಡಿದ್ದಾರೆ. Nomads of the Himalayans, Gaddi Tribe, Roma, The Gypsy world, The world of Nomads, The shepperds of the world, ಮೊದಲಾದ ಗ್ರಂಥಗಳಲ್ಲಿ ಶಶಿ ಅವರ ಸಂಶೋಧನ ಶ್ರಮ ಮತ್ತು ಕ್ರಮಗಳನ್ನು ಗುರುತಿಸಬಹುದು. ವಿಶೇಷವಾಗಿ ಭಾರತದ ಕುರುಬರ ಬಗ್ಗೆ Sheppereds of India ಹೆಸರಿನ ಗ್ರಂಥವನ್ನು ಇಂಗ್ಲಿಷಿನಲ್ಲಿ ರಚನೆ ಮಾಡಿದ್ದಾರೆ. ಆ ಮೂಲಕ ಜಾಗತಿಕಮಟ್ಟದಲ್ಲಿ, ಕುರುಬ ಸಮುದಾಯದ ಇತಿಹಾಸ, ಸಂಸ್ಕೃತಿ, ಆಚರಣೆ ಸಂಪ್ರದಾಯ, ಧಾರ್ಮಿಕ ಪರಂಪರೆಯನ್ನು ಪರಿಚಯಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

The shepperds of India ಕೃತಿಯು ೧೯೭೮ರಲ್ಲಿ ಪ್ರಕಟಗೊಂಡಿದೆ. ಈ ಕೃತಿಯನ್ನು ೨೦೦೫ರಲ್ಲಿ 'ಭಾರತದ ಕುರುಬರು' ಎಂದು ಡಾ. ಬಿ.ಕೆ.ರವಿ ಅವರು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಭಾರತದ ಕುರುಬರ ಸಾಮಾಜಿಕ ಸ್ಥಿತಿಗತಿಯನ್ನು ಮೊದಲ ಬಾರಿಗೆ ರಾಷ್ಟ್ರಮಟ್ಟದಲ್ಲಿ ಪರಿಚಯಿಸಿದ ಕೃತಿಯಾಗಿದೆ. ಸಮಾಜೋ ಸಾಂಸ್ಕೃತಿಕ ಅಧ್ಯಯನಕ್ಕೆ ಈ ಕೃತಿಯು ಪ್ರಮುಖ ಆಕರವಾಗಿದೆ.

ಕುರುಬರ ವಾಸ, ನಾಮ ನಿಷ್ಪತ್ತಿ, ವಿವಿಧ ರಾಜ್ಯಗಳಲ್ಲಿಯ ಕುರುಬರ ರಾಜವಂಶಗಳು(ಪುಟ ೩೧), ಅವುಗಳನ್ನು ಕರೆಯಲ್ಪಡುವ ಹೆಸರುಗಳು ಮೊದಲಾದ ವಿಚಾರಗಳನ್ನು ಮೊದಲನೆಯ ಅಧ್ಯಾಯ ವಿವರಿಸುತ್ತದೆ. ಎರಡನೆಯ ಅಧ್ಯಾಯವು ಮೂಲ ನಿವಾಸಿ, ವೈದಿಕಯುಗ, ಮಧ್ಯಂತರಯುಗ, ಕುರಿ ಜೀವನದ ಒಂದು ತತ್ವಶಾಸ್ತ್ರ ಇತ್ಯಾದಿಗಳನ್ನು ಚರ್ಚೆಗೆ ಒಳಪಡಿಸುತ್ತದೆ. ಜನತೆ, ವಿವಾಹ ಮತ್ತು ಇತರ ಸಂಪ್ರದಾಯಗಳು, ಧರ್ಮ ಮತ್ತು ಯಕ್ಷಿಣಿ, ಅಂತ್ಯ ಸಂಸ್ಕಾರ, ಆಚಾರ, ಗೋತ್ರ ವ್ಯವಸ್ಥೆ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ, ಇಂದೋರ್ ಮತ್ತು ಮಹಾರಾಷ್ಟ್ರದ ಧನಗರಗಳು, ವಸತಿ ಮತ್ತು ಕಸಬು, ಉಪಜಾತಿಗಳು,

ಬಧ್ಯಮುರ್ಲಿ ಎಂಬ ದೇವತೆ, ಸಾಮಾಜಿಕ ಆರ್ಥಿಕ ಸ್ಥಿತಿ, ಧನಗರ ಸೇನೆ, ಕರ್ನಾಟಕದ ಕುರುಬರ ಸಮಗ್ರ ಪರಿಚಯ, ಕುರುಬರು (ತಮಿಳುನಾಡು), ಗೋಪಾಲರು, ರಬಾರಿಗಳು, ಅಹಿರ್‌ಗಳು, ಹಿಮಾಚಲ ಪ್ರದೇಶದ ಗಡ್ಡಿಗಳು, ವಲಸೆ ಹೋಗುವ ಸಂಚಾರಿಗಳು, ಗಡ್ಡಿಸೈನ್ಯ, ಪ್ರಧಾನ ದೇವತೆ, ದೇವತೆಗಳು ಮತ್ತು ಭೂತಗಳು, ಬಂಗತಾಡ್‌ಗಳು, ಶಾಸ್ತ್ರ ವಿಧಿಗಳು ಮತ್ತು ಬಲಿಗಳು, ಯಕ್ಷಣೀ ವಿಧಗಳು, ಪರವಶನಾಗುವ ಚೇಲ, ಅಲೆಮಾರಿತನಕ್ಕೆ ಕಾರಣಗಳು, ಹೊಂದಾಣಿಕೆಯ ತೊಂದರೆಗಳು ಮತ್ತು ಸೂಚನೆಗಳು ಮುಂತಾದ ವಿಚಾರಗಳನ್ನು ಮೂರನೆಯ ಅಧ್ಯಾಯವು ವಿವರಿಸುತ್ತದೆ. ಅಲೆಮಾರಿ ಕುರುಬರ ಸಾಮಾಜಿಕ ಆರ್ಥಿಕ ಸಮೀಕ್ಷೆಯ ೧೦ ಪಟ್ಟಿಗಳ (ಪುಟ ೮೪) ಉಲ್ಲೇಖಗಳನ್ನು ನಾಲ್ಕನೆಯ ಅಧ್ಯಾಯವು ಚರ್ಚೆಗೆ ಒಳಪಡಿಸುತ್ತದೆ. ಐದನೆಯ ಅಧ್ಯಾಯವು ರಾಷ್ಟ್ರದ ಕರ್ತವ್ಯ, ಪ್ರಗತಿ ಮತ್ತು ಭವಿಷ್ಯ, ಅಂತ್ಯದಲ್ಲಿ ಉತ್ತರ ಭಾರತದ ಕುರುಬರ ಗೋತ್ರಗಳು (ಅನುಬಂಧ-೧), ಕುರುಬರ ಜಾನಪದ ಗೀತೆ ಹಾಗೂ ನೃತ್ಯಗಳು (ಅನುಬಂಧ-೨) ವಿವಿಧ ಭಾಷೆಯಲ್ಲಿಯ ಕುರುಬರ ಹೆಸರುಗಳು(ಅನುಬಂಧ-೩), ಸಮಾಜ ಸಂಸ್ಥೆ(ಅನುಬಂಧ-೪), ೧೮೭೨ರ ಬಂಗಾಳ ಜನಗಣತಿಯ ವರದಿ(ಅನುಬಂಧ-೫), ಕರ್ನಾಟಕ ಕುರುಬರ ಸ್ಥಿತಿಗತಿ ಒಂದು ಪಕ್ಷಿನೋಟ (ಅನುಬಂಧ-೬) ಹೀಗೆ ಆರು ಅನುಬಂಧಗಳಲ್ಲಿ ಭಾರತದ ಕುರುಬರ ಸಂಸ್ಕೃತಿಯನ್ನು ತಲಸ್ಪರ್ಶಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆದ ಕಾರಣ ಶ್ಯಾಂಸಿಂಗ್ ಶಶಿ ಅವರು ಈ ಕೃತಿಯು ಹಾಲುಮತದ ಪ್ರಮುಖ ಆಕರಗಳಲ್ಲೊಂದಾಗಿದೆ.

೮. ಸೊಂತೈಮರ್

ಪಶುಪಾಲನಾ ಸಮುದಾಯಗಳನ್ನು ಕುರಿತಂತೆ ವ್ಯಾಪಕವಾದ ಅಧ್ಯಯನ ಮಾಡಿದ ಪಾಶ್ಚಾತ್ಯ ವಿದ್ವಾಂಸರಲ್ಲಿ ಗುಂಥರ ಸೋಂಥೈಮರ್ ಪ್ರಮುಖರು. ದಕ್ಷಿಣ ಏಷ್ಯಾದ ಧರ್ಮದ ಇತಿಹಾಸ, ತತ್ವಶಾಸ್ತ್ರ, ಸಂಪ್ರದಾಯಿಕವಾದ ಹಿಂದೂ ಕಾನೂನು, ಭಾರತದ ಜನಪದ ಸಂಸ್ಕೃತಿ, ಮೌಖಿಕ, ಸಂಪ್ರದಾಯ, ಧರ್ಮ ಪಶುಪಾಲನಾ ಸಮುದಾಯಗಳ ಬಗ್ಗೆ ಕ್ಷೇತ್ರಕಾರ್ಯ ಕೈಕೊಂಡು ಅನೇಕ ಗ್ರಂಥಗಳನ್ನು ರಚನೆಮಾಡಿದ್ದಾರೆ. ವಿಶೇಷವಾಗಿ ಮಹಾರಾಷ್ಟ್ರ ಕರ್ನಾಟಕ, ಆಂಧ್ರಪ್ರದೇಶದ ಪಶುಪಾಲನ ಸಮುದಾಯಗಳ ಬಗ್ಗೆ ಅನೇಕ ವರ್ಷಗಳ ಕಾಲ ಸಂಶೋಧನೆ ಕೈಗೊಂಡು ಹೊಸ ವಿಷಯಗಳನ್ನು ಪರಿಚಯಿಸಿದ್ದಾರೆ.

ಇವರ ಬಹುತೇಕ ಬರಹಗಳಲ್ಲಿ ಪಶುಪಾಲನ ಸಮುದಾಯಗಳಲ್ಲಿ ಪ್ರಮುಖ ಜನಾಂಗವಾದ ಕುರುಬರಿಗೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸಿದ್ದಾರೆ. Biroba Mhaskoba Khandoba, Postoral Deities in western India, King of Hunters warriors and shepherds, essays on Khandoba ಮೊದಲಾದವು ಇವರ ಪ್ರಮುಖವಾದ ಗ್ರಂಥಗಳು. ಈ ಗ್ರಂಥಗಳಲ್ಲಿ ಕುರುಬ ಸಮುದಾಯದ ಭೌಗೋಳಿಕ ಪರಿಸರ, ಅವರ ಮೂಲ ನೆಲೆ, ಉದ್ಯೋಗ, ಆಹಾರ ಪದ್ಧತಿ, ಉಡುಗೆ ತೊಡುಗೆಗಳು, ವೇಷಭೂಷಣಗಳು, ಆಚರಣೆ ನಂಬಿಕೆಗಳು, ಆರಾಧನಾ ಪದ್ಧತಿ, ಕುರುಬರ ದೈವವಾದ ಬೀರದೇವರು ಇತ್ಯಾದಿ ವಿಷಯಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ತಮ್ಮದೇ ಆದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಮಹಾರಾಷ್ಟ್ರದ ಧನಗರ

(ಕುರುಬ) ಸಮುದಾಯದ ಚರಿತ್ರೆ, ವೃತ್ತಿ ಮತ್ತು ಒಳಪಂಗಡಗಳು ಮೊದಲಾದ ವಿಷಯಗಳನ್ನು, ಸಂಶೋಧನಾತ್ಮಕ ಲೇಖನಗಳನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ್ದಾರೆ. ಆ ಮೂಲಕ ಪ್ರಾಚೀನ ಸಂಸ್ಕೃತಿಯನ್ನು ಹೊಂದಿದ ಕುರುಬ ಸಮುದಾಯದ ವಿಶಿಷ್ಟತೆಯನ್ನು ಪ್ರಪಂಚಕ್ಕೆ ಪರಿಚಯಿಸಿದ್ದಾರೆ

೯. ಮುನ್ನಾಲಾಲ್ ಚಂದೇಲ

ಉತ್ತರ ಭಾರತದಲ್ಲಿ ಕುರುಬರನ್ನು ಧನಗಾರರು, ಪಾಲ್ ಕ್ಷತ್ರೀಯರು, ಗಢಾರಿಯ, ಗಡ್ಡಿ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತದೆ. ಈ ಹಿನ್ನೆಲೆಯಲ್ಲಿ ಆಗ್ರಾ ಪಟ್ಟಣದಲ್ಲಿ ಪ್ರೆಸ್ ಮ್ಯಾನೇಜರ್‌ರಾಗಿದ್ದ ಮುನ್ನಾಲಾಲ್ ಚಂದೇಲ ಅವರು Ethnographical account of the Dhanagars of palkshattriyas ಎಂಬ ಗ್ರಂಥವನ್ನು ೧೯೩೩ರಲ್ಲಿ ಪ್ರಕಟಿಸಿದ್ದಾರೆ. ೩೩ ಅಧ್ಯಾಯಗಳಲ್ಲಿ ಧನಗರ್ ಸಮುದಾಯದ ಮೂಲಗಳು, ಪಾಲ್ ಅರಸು ಮನೆತನ, ಭಾರತದ ಶೇಕ್ಸ್‌ಪೀಯರ್ ಕಾಳಿದಾಸ, ಧನಗರರ ಗೋತ್ರಗಳು, ಇಂದೋರಿನ ಹೋಳ್ಕರ್ ಮನೆತನದ ಇತಿಹಾಸ, ಪಾಲ್, ಬ್ರಜ, ಗೂರ್ಜರ, ಅಭೀರ್ ಮೊದಲಾದ ಪದಗಳ ಮೂಲ ಅರ್ಥವನ್ನು ವಿವಿಧ ಆಕರಗಳ ನೆರವಿನಿಂದ ಚರ್ಚಿಸಿದ್ದಾರೆ. ಈ ಗ್ರಂಥ ರಚನೆಗಾಗಿ ವೇದ, ಪುರಾಣ, ವಿಶ್ವಕೋಶಗಳು, ಪ್ರವಾಸಕಥನಗಳು, ಶಾಸನ ಸಂಪುಟಗಳು, ಇಂಡಿಯನ್ ಎಂಟಿಕ್ವರಿ, The calcutta Raviewಗಳಂಥ ನಿಯತಕಾಲಿಕೆಗಳು ಹೀಗೆ ಅನೇಕ ಲಿಖಿತ ಮತ್ತು ಮೌಖಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ.

ಹೀಗೆ ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದಂತೆ ಸ್ವದೇಶಿ ಹಾಗೂ ವಿದೇಶಿ ವಿದ್ವಾಂಸರು ಕೈಕೊಂಡ ಅಧ್ಯಯನಗಳ ಸ್ವರೂಪವನ್ನು ಅವಲೋಕಿಸಲಾಗಿದೆ. ಉಲ್ಲೇಖಿತ ವಿದ್ವಾಂಸರಲ್ಲದೆ ಇನ್ನೂ ಅನೇಕರು ಗ್ರಂಥ ಹಾಗೂ ಲೇಖನ ರೂಪದಲ್ಲಿ ಹಾಲುಮತದ ಬಗೆಗೆ ಅಧ್ಯಯನ ಕೈಕೊಂಡಿರುವ ನಿದರ್ಶನಗಳಿವೆ. ಹೀಗಾಗಿ ಈ ವಿಷಯವನ್ನು ಪ್ರತ್ಯೇಕವಾಗಿ ಸವಿವರವಾಗಿ ಅವಲೋಕಿಸುವ ಅಗತ್ಯತೆಯೂ ಇದೆ.

ಕೊನೆ ಟಿಪ್ಪಣಿಗಳು

೧. ಎಫ್.ಟಿ. ಹಳ್ಳಿಕೇರಿ (ಸಂ) ಹಾಲುಮತ ಮಹಾಸಭೆ ವರದಿಗಳು, ಭಾಷಣಗಳು ಪುಟ ೬

೨. ಅದೇ, ಪುಟ ೩೩

೩. ಎಂ.ಎಂ.ಕಲಬುರ್ಗಿ, ಮಾರ್ಗ-೪, ಪುಟ ೨ (ಮುನ್ನುಡಿ)

೪. ಎಫ್.ಟಿ.ಹಳ್ಳಿಕೇರಿ (ಸಂ) ಹಾಲುಮತ ಅಧ್ಯಯನಗಳು

೫. ಅದೇ, ಪುಟ ೪೧

೬. ಅದೇ, ಪುಟ ೪೪

ಅಧ್ಯಾಯ ೭

ಸಮಾರೋಪ

ಅಧ್ಯಾಯ ೭

ಸಮಾರೋಪ

ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸಂಶೋಧನೆಯ ಸ್ವರೂಪದಲ್ಲಿ ಮಹತ್ವದ ಬದಲಾವಣೆಗಳಾಗುತ್ತಿರುವುದನ್ನು ನಾವು ಕಾಣಬಹುದು. ಪ್ರಧಾನ ಸಂಸ್ಕೃತಿಗೆ ಬದಲಾಗಿ ಪ್ರತಿ ಸಂಸ್ಕೃತಿಯ ಚರ್ಚೆ, ಸಮುದಾಯಗಳ ಸಾಂಸ್ಕೃತಿಕ ದಾಖಲೀಕರಣ ಮತ್ತು ಅಧ್ಯಯನಗಳು ಇಂದು ಬಹುಮುಖ್ಯವಾಗಿ ನಡೆಯುತ್ತಿವೆ. ಎಂ.ಎಂ. ಕಲಬುರ್ಗಿ ಅವರು ಹೇಳುವಂತೆ "ಪುಸ್ತಕದ ಅಧ್ಯಯನವು ಎಷ್ಟು ಮುಖ್ಯವಾಗಿದೆಯೋ ಸಮಾಜದ ಅಧ್ಯಯನವೂ ಅಷ್ಟೇ ಪ್ರಮುಖವಾಗಿದೆ. ಇವೆರಡನ್ನು ಮೈಗೂಡಿಸಿಕೊಂಡು ಅಧ್ಯಯನದಲ್ಲಿ ತೊಡಗಿದಾಗ ಮಾತ್ರ ಸಮಾಜಮುಖಿ ಚಿಂತನೆ ಬರಲು ಸಾಧ್ಯ". ಈ ಹಿನ್ನೆಲೆಯಲ್ಲಿ ಕರ್ನಾಟಕದ ಬುಡಕಟ್ಟು ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಘಟನೆಗೆ ಸಂಬಂಧಿಸಿದ ಆಕರಗಳನ್ನು ಸಂಗ್ರಹಿಸುವುದು ಆಯಾ ಸಮಾಜದ ನಿಜ ಇತಿಹಾಸವನ್ನು ರಚಿಸುವುದು ಆ ಮೂಲಕ ಸಮಾಜದ ಶುದ್ಧೀಕರಣ ಕಾರ್ಯವನ್ನು ಮಾಡುತ್ತಿರುವುದು ಇಂದಿನ ಸಂಶೋಧನೆಯ ಬಹುಮುಖ್ಯ ಉದ್ದೇಶಗಳಾಗಿವೆ.

ಈ ಉದ್ದೇಶಕ್ಕೆ ಅನುಗುಣವಾಗಿ ಪ್ರಸ್ತುತ ಮಹಾಪ್ರಬಂಧದಲ್ಲಿ ಹಾಲುಮತ ಸಮಾಜ ಸಂಸ್ಕೃತಿ ಸಾಹಿತ್ಯ ಚರಿತ್ರೆ ಕುರಿತು ಬಂದಿರುವ ಆಕರಗಳನ್ನು ಶೋಧಿಸಿ ಕ್ರಮಬದ್ಧವಾಗಿ ವಿಶ್ಲೇಷಣೆಗೊಳಪಡಿಸುವ ಪ್ರಯತ್ನವನ್ನು ಮಾಡಲಾಗಿದೆ. ಇಲ್ಲಿಯ ಆಕರ ಸಂಪತ್ತನ್ನು ಅಧ್ಯಯನದ ಅನುಕೂಲಕ್ಕಾಗಿ ಪ್ರಾಚೀನ ಕವಿ ಸಾಹಿತ್ಯ, ದಾಖಲು ಸಾಹಿತ್ಯ, ಮೌಖಿಕ ಸಾಹಿತ್ಯ ಹಾಗೂ ಆಧುನಿಕ ಸಾಹಿತ್ಯವೆಂದು ವರ್ಗೀಕರಿಸಲಾಗಿದೆ.

ಪ್ರಾಚೀನ ಕವಿ ಸಾಹಿತ್ಯ ಅಧ್ಯಾಯದಲ್ಲಿ ಹಾಲುಮತ ಸಮುದಾಯ ಕುರಿತು ರಚನೆಗೊಂಡಿರುವ ಶಿಷ್ಟ ಕಾವ್ಯ ಮತ್ತು ಪುರಾಣಗಳನ್ನು ಅವಲೋಕಿಸಲಾಗಿದೆ. ತಗರ ಪವಾಡ, ಸಿದ್ಧಮಂಕ ಚರಿತೆ, ಮರುಳಸಿದ್ಧೇಶ್ವರ ಚರಿತೆ, ಹಾಲುಮತ ಪುರಾಣ, ಹಾಲುಮತೋತ್ತೇಜಕ ಪುರಾಣ, ಕರಿಸಿದ್ಧೇಶ್ವರ ಪುರಾಣ, ಮುದ್ದುಲಿಂಗೇಶ್ವರ ಪುರಾಣ ಮೊದಲಾದವುಗಳು ವಿವಿಧ ಕವಿಗಳಿಂದ ರಚನೆಗೊಂಡಿವೆ. ಈ ಎಲ್ಲ ಕಾವ್ಯ ಪುರಾಣಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಹಾಲುಮತ ಸಮುದಾಯದ ಗುರು ಪರಂಪರೆ, ಸಾಂಸ್ಕೃತಿಕ ವೀರರು ಹಾಗೂ ಆ ಸಮುದಾಯದ ಪರಂಪರಾನುಗತ ಕಲೆ-ಆಚರಣೆ-ಸಂಪ್ರದಾಯಗಳನ್ನು ಕಾವ್ಯಾತ್ಮಕವಾಗಿ ವಿವರಿಸಲಾಗಿದೆ. ಗುರು ಪರಂಪರೆಯಲ್ಲಿ ಬರುವ ರೇವಣಸಿದ್ಧ, ಶಾಂತಮುತ್ತಯ್ಯ, ಸಿದ್ಧರಾಮ, ಸಿದ್ಧಮಂಕ (ಮರುಳಸಿದ್ಧ)

ಆರಾಧ್ಯದೈವಗಳಾದ ಮುದ್ದಪ್ಪ, ಬೀರಪ್ಪ, ಮಾಳಿಂಗರಾಯರ ಚರಿತ್ರೆಗಳನ್ನು ನಿರೂಪಿಸಿರುವುದನ್ನು ಕಾಣಬಹುದು. ತಗರ ಪವಾಡ, ಸಿದ್ಧಮಂಕ ಚರಿತೆಗಳು ಕುರುಬರು ಸತ್ತ ಕುರಿ ಮಾಂಸವನ್ನು ಮಾರಿದ ಪ್ರಮಾದದಿಂದ ಕಲ್ಯಾಣ ಪಟ್ಟಣದಿಂದ ಹೊರಗೆ ಹಾಕಿದ ಘಟನೆಯನ್ನು ಚಿತ್ರಿಸುತ್ತದೆ. ತಗರ ಪವಾಡದಲ್ಲಿ ಶಾಂತಮುತ್ತಯ್ಯ ಮತ್ತು ಸಿದ್ಧಮಂಕ ಚರಿತೆಯಲ್ಲಿ ಸಿದ್ಧಮಂಕರು ಕಥಾ ನಾಯಕರಾಗಿದ್ದಾರೆ. ಈ ನಾಯಕರ ಮೂಲಕ ಕುರುಬರಿಗೆ ಬಸವಾದಿ ಪ್ರಮಥರ ನೇತೃತ್ವದಲ್ಲಿ ಲಿಂಗದೀಕ್ಷೆಯನ್ನು ನೀಡಿ ಗುರು ಪರಂಪರೆಯನ್ನು ಹಾಕಿ ಕೊಟ್ಟಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಈ ಎರಡೂ ಕಾವ್ಯಗಳ ರೀತಿಯಲ್ಲಿ ಮರುಳಸಿದ್ಧೇಶ್ವರ ಚರಿತೆ ರಚನೆಗೊಂಡಿದೆ. ಇನ್ನುಳಿದಂತೆ ಚನ್ನಬಸವ ಕವಿಯ ಹಾಲುಮತ ಪುರಾಣ, ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣಗಳು ಹಾಲುಮತ ಸಮುದಾಯದ ಸಮಗ್ರ ಚರಿತೆಯನ್ನು ನಿರೂಪಿಸುತ್ತವೆ. ಸಿದ್ಧಬೀರೇಶ್ವರ ಅಥವಾ ಕರಿಸಿದ್ಧೇಶ್ವರ ಪುರಾಣವು ಕುರುಬರ ಆರಾಧ್ಯ ದೈವವಾದ ಬೀರಪ್ಪನ ಲೀಲೆಗಳನ್ನು ವಿವರಿಸುವ ಕೃತಿಯಾಗಿದೆ. ಇದೇ ಮಾದರಿಯಲ್ಲಿ ಕುರುಬರ ಆದಿ ದೈವವಾದ ಮುದ್ದಪ್ಪನ ಚರಿತ್ರೆಯನ್ನು ಸ್ಥೂಲವಾಗಿ ಚಿತ್ರಿಸುತ್ತದೆ. ಒಟ್ಟಾರೆ ಈ ಎಲ್ಲಾ ಕಾವ್ಯಗಳ ಸ್ವರೂಪ ಕಥಾಸಾರ ಪಾತ್ರಗಳು ಸನ್ನಿವೇಶಗಳನ್ನು ವಿಶ್ಲೇಷಣೆಗೊಳಪಡಿಸಲಾಗಿದೆ. ಆ ಮೂಲಕ ಆಯಾ ಕಾವ್ಯಗಳ ಮೌಲ್ಯಮಾಪನವನ್ನು ತೌಲನಿಕವಾಗಿ ಕೈಕೊಂಡಿರುವುದು ಈ ಅಧ್ಯಾಯದ ವಿಶೇಷತೆಯಾಗಿದೆ. ಅಲ್ಲದೆ ಕೆಲವು ಕಾವ್ಯ ಪುರಾಣಗಳ ಪಠ್ಯಗಳು ಮರುಪರಿಷ್ಕರಣೆಗೊಳ್ಳಬೇಕಾಗಿದೆ. ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರು ತಾವು ಸಂಗ್ರಹಿಸಿದ ಕೃತಿಗೆ ಹಾಲುಮತ ಪುರಾಣವು ಎಂಬ ಶೀರ್ಷಿಕೆಯಿಂದ ಪ್ರಕಟಿಸಿದ್ದಾರೆ. ಆದರೆ ಈ ಕೃತಿಯ ನಿಜನಾಮ "ಮರುಳ ಸಿದ್ಧೇಶ್ವರ ಚರಿತೆ"ಯಾಗಿದೆ. ಮುಂದಿನ ದಿನಗಳಲ್ಲಿ ಈ ಕೃತಿಯನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಈ ತಪ್ಪನ್ನು ಸರಿಪಡಿಸಿಕೊಂಡು ಮುನ್ನಡೆಯಬೇಕಾಗಿದೆ.

ಇತ್ತೀಚಿನ ದಶಕಗಳಲ್ಲಿ ಶಿಷ್ಟ ಸಾಹಿತ್ಯದಂತೆ ದಾಖಲು ಸಾಹಿತ್ಯವು ಸಂಶೋಧನೆಯಲ್ಲಿ ಮಹತ್ವದ ಆಕರಗಳಾಗಿ ಪರಿಗಣಿಸಲ್ಪಡುತ್ತಿವೆ. ಶಾಸನಗಳಿಗೆ ದಾಖಲು ಸಾಹಿತ್ಯದಲ್ಲಿ ಅಗ್ರಸ್ಥಾನ. ಇನ್ನುಳಿದಂತೆ ಸನ್ನದು ಕೈಫಿಯತ್ತು, ನಿರೂಪ, ವರದಿಗಳಂಥ ಆಕರ ಸಾಮಗ್ರಿಯನ್ನು ಶೋಧಿಸಿ ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸುವ ಅಗತ್ಯವಿದೆ. ಚಾರಿತ್ರಿಕ ಮತ್ತು ಸಾಂಸ್ಕೃತಿಕ ಘಟನೆಗಳನ್ನು ಇಂಥ ದಾಖಲು ಸಾಹಿತ್ಯದಲ್ಲಿ ನಿರೂಪಿಸಿರುವುದನ್ನು ಕಾಣಬಹುದು. ಕುರುಬರ ಗುರು ಪರಂಪರೆಯಲ್ಲಿ ಬರುವ ರೇವಣಸಿದ್ಧ ಶಾಂತಮುತ್ತಯ್ಯ ಮತ್ತು ಸಿದ್ಧಮಂಕರ ಬಗ್ಗೆ ಶಾಸನಗಳು ಕೆಲವು ಮಹತ್ವದ ಸಂಗತಿಗಳನ್ನು ತಿಳಿಸುತ್ತವೆ. ತುರುವೇಕೆರೆಯ ತಾಮ್ರಶಾಸನವು ಕುರುಬರಿಗೆ ಶಾಂತಮುತ್ತಯ್ಯನು ಗುರು ಎಂದು ಪ್ರತಿಪಾದಿಸುವ ವಿಷಯ ಕುತೂಹಲಕಾರಿಯಾಗಿದೆ. ಕೊಣ್ಣೂರು ಶಾಸನವು ಕರಿಸಿದ್ಧೇಶ್ವರ ದೇವಸ್ಥಾನಕ್ಕೆ ದಾನದತ್ತಿ ಬಿಟ್ಟಿರುವುದನ್ನು ಉಲ್ಲೇಖಿಸುತ್ತದೆ. ಹೀಗೆ ನಾಡಿನಾದ್ಯಂತ ಈ ಸಮುದಾಯಕ್ಕೆ ಸಂಬಂಧಿಸಿದ ಶಾಸನಗಳನ್ನು ಸಂಗ್ರಹಿಸಿ ಸಂಪುಟಗಳ ರೂಪದಲ್ಲಿ ಪ್ರಕಟಿಸಬೇಕಾಗಿದೆ. ಅಂದಾಗ ಮಾತ್ರ ಶಾಸನಗಳ ಮೂಲಕ ಹಾಲುಮತ ಸಂಸ್ಕೃತಿಯನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಇತ್ತೀಚಿನ

ವರ್ಷಗಳಲ್ಲಿ ದಾಖಲು ಸಾಹಿತ್ಯದ ಇತರೆ ಪ್ರಕಾರಗಳಾದ ನಿರೂಪ ಸನದು ಕೈಫಿಯತ್ತು ಪತ್ರಗಳು ವರದಿ ಮತ್ತು ಭಾಷಣಗಳನ್ನು ಸಹಿತ ಸಂಶೋಧನೆಯಲ್ಲಿ ಆಕರಗಳಾಗಿ ಬಳಸಿಕೊಳ್ಳಲಾಗುತ್ತಿದೆ. ಇಂಥ ಆಕರಗಳಲ್ಲಿ ಹಾಲುಮತಕ್ಕೆ ಸಂಬಂಧಿಸಿದ ಕೆಲವು ಚಾರಿತ್ರಿಕ ಘಟನೆಗಳನ್ನು ದಾಖಲಿಸಲಾಗಿದೆ. ವಿಜಯನಗರದ ಅರಸರು ಕುರುಬ ರಾವುತ ವೀರನೊಬ್ಬನಿಗೆ ನೀಡಿದ ಮೂರು ನಿರೂಪಗಳು ಅನೇಕ ಸಂಗತಿಗಳನ್ನು ತಿಳಿಸುತ್ತವೆ. ಹಾಗೆ ಸನದುಗಳನ್ನು ಹೊರಡಿಸುವ ಮುಖಾಂತರ ಕುರುಬರ ಗುರು ಒಡೆಯರು ಸಮಾಜದ ಸ್ವಾಸ್ಥ್ಯ ಹಾಗೂ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ಕಳೆದ ಶತಮಾನದ ಆರಂಭದ ದಶಕಗಳಲ್ಲಿ ಹಾಲುಮತ ಮಹಾಸಭೆಗಳನ್ನು ಏರ್ಪಡಿಸಿದ ಬಗ್ಗೆ ವರದಿಗಳು, ಭಾಷಣಗಳು ಪ್ರಕಟಗೊಂಡಿವೆ. ಅಂಥ ವರದಿ ಭಾಷಣಗಳಿಂದ ಸಮಾಜದ ಸಂಘಟನೆ ಮತ್ತು ಅಭಿವೃದ್ಧಿ ನಡೆದು ಬಂದ ದಾರಿಯನ್ನು ತಿಳಿದುಕೊಳ್ಳಬಹುದು. ಇಂಥ ಎಲ್ಲ ದಾಖಲು ಸಾಹಿತ್ಯವನ್ನು ಶೋಧಿಸಿ ಅವುಗಳ ಮಹತ್ವವನ್ನು ವಿಶ್ಲೇಷಿಸುವ ಕಾರ್ಯವನ್ನು ಇಲ್ಲಿ ಕೈಗೊಳ್ಳಲಾಗಿದೆ. ಈ ವಿಶ್ಲೇಷಣೆಯಿಂದ ಹಾಲುಮತಕ್ಕೆ ಸಂಬಂಧಿಸಿದ ಬಿಡಿಬಿಡಿ ರೂಪದಲ್ಲಿರುವ ದಾಖಲು ಸಾಹಿತ್ಯವನ್ನು ಸಂಪುಟಗಳ ರೂಪದಲ್ಲಿ ಪ್ರಕಟಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ 'ಹಾಲುಮತ ಮಹಾಸಭೆ ವರದಿಗಳು ಭಾಷಣಗಳು' (ಸಂ. ಎಫ್.ಟಿ.ಹಳ್ಳಿಕೇರಿ) ಎಂಬ ಸಂಪುಟವು ಪ್ರಕಟವಾಗಿರುವುದು ಇಲ್ಲಿ ಗಮನಾರ್ಹ. ಇದೇ ಮಾದರಿಯಲ್ಲಿ 'ಶಾಸನಗಳಲ್ಲಿ ಕುರುಬರು' ಎಂಬ ಬೃಹತ್ ಸಂಪುಟವನ್ನು ಪ್ರಕಟಿಸಲು ಅವಕಾಶವಿದೆ. ಹಾಗೆಯೇ ಈ ಸಮುದಾಯಕ್ಕೆ ಸಂಬಂಧಿಸಿದ ನಿರೂಪಗಳು ಸನದುಗಳು ಕೈಫಿಯತ್ತುಗಳು ಹಾಗೂ ಪತ್ರಗಳನ್ನು ಸಂಪುಟಗಳ ರೂಪದಲ್ಲಿ ಪ್ರಕಟಿಸಿದಾಗ ಹಾಲುಮತ ಸಂಸ್ಕೃತಿ ಅಧ್ಯಯನಕ್ಕೆ ಅಗತ್ಯವಾದ ಆಕರ ಸಾಮಗ್ರಿಗಳನ್ನು ಒದಗಿಸಿದಂತಾಗುತ್ತದೆ. ಇಂಥ ಆಕರ ಸಾಮಗ್ರಿಗಳ ಶೋಧದತ್ತ ಸಂಶೋಧಕರು ಗಮನ ಹರಿಸಬೇಕಾಗಿದೆ.

ಲಿಖಿತ ಸಾಹಿತ್ಯದಂತೆ ಮೌಖಿಕ ಸಾಹಿತ್ಯ ಕುರಿತು ಇತ್ತೀಚೆಗೆ ವ್ಯಾಪಕವಾದ ಸಂಗ್ರಹ ಸಂಪಾದನೆ ಮತ್ತು ಅಧ್ಯಯನಗಳು ನಡೆಯುತ್ತಿವೆ. ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದಂತೆ ಮೌಖಿಕ ರೂಪದಲ್ಲಿ ಕಾವ್ಯ ಪುರಾಣ ಹಾಡು ಕಥೆ ಹೇಳಿಕೆಗಳು ಅಧಿಕ ಪ್ರಮಾಣದಲ್ಲಿವೆ. ಈಗಾಗಲೇ ಜನಪದ ಹಾಲುಮತ ಮಹಾಕಾವ್ಯ, ಮಾಳಿಂಗರಾಯನಕಾವ್ಯ, ಮೈಲಾರಲಿಂಗನ ಕಾವ್ಯ, ಏಳೂರು ದೇವರ ಕಾಳಗ ಪ್ರಕಟವಾಗಿವೆ. ಇದರ ಜೊತೆಗೆ ಕುರುಬರ ಅಭಿವ್ಯಕ್ತಿ ನೆಲೆಯಾದ ಡೊಳ್ಳಿನ ಹಾಡುಗಳ ಸಂಪುಟಗಳು ಕೆಲವು ಪ್ರಕಟವಾಗಿವೆ. ಇಷ್ಟನ್ನು ಬಿಟ್ಟರೆ ಮೌಖಿಕ ರೂಪದ ಈ ಸಮುದಾಯದ ಸಾಹಿತ್ಯ ಅಜ್ಞಾತವಾಗಿಯೇ ಇದೆ. ಈವರೆಗೆ ಪ್ರಕಟವಾದ ಕಾವ್ಯ ಪುರಾಣ ಡೊಳ್ಳಿನ ಹಾಡುಗಳ ಸ್ವರೂಪ ಮತ್ತು ಅವುಗಳ ಸಾಂಸ್ಕೃತಿಕ ಮಹತ್ವವನ್ನು ಈ ಮಹಾಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ. ಈ ಸಮುದಾಯದ ಬಹುಮುಖ್ಯ ಆಕರವಾದ ಡೊಳ್ಳಿನ ಹಾಡುಗಳ ಸಂಗ್ರಹ ಮತ್ತು ಪ್ರಕಟಣಾ ಕಾರ್ಯ ಕ್ರಮಬದ್ಧವಾಗಿ ನಡೆಯಬೇಕಾದ ಅವಶ್ಯಕತೆ ಇದೆ. ಇದಕ್ಕೆ ಸರ್ಕಾರ ಸಾರ್ವಜನಿಕ ಸಂಸ್ಥೆಗಳು ವಿಶ್ವವಿದ್ಯಾಲಯಗಳಂಥ ಶೈಕ್ಷಣಿಕ ಸಂಸ್ಥೆಗಳು ಕಾಲಬದ್ಧ ಯೋಜನೆಯನ್ನು ಹಾಕಿಕೊಂಡು ಶೀಘ್ರವಾಗಿ

ಪ್ರಕಟಿಸಲು ಮುಂದಾಗಬೇಕಾಗಿದೆ. ಹಾಗೆಯೇ ಕುರುಬರಿಗೆ ಸಂಬಂಧಿಸಿದ ಕಥೆ ಗಾದೆ ಒಗಟು ಮೊದಲಾದವು ಗಳನ್ನು ಸಂಗ್ರಹಿಸಿ ಸಮಗ್ರ ಅಧ್ಯಯನಕ್ಕೆ ಒಳಪಡಿಸುವ ಕೆಲಸವೂ ಆಗಬೇಕಾಗಿದೆ.

ಬ್ರಿಟಿಷರ ಆಗಮನದಿಂದ ಭಾರತೀಯರಿಗೆ ಐತಿಹಾಸಿಕ ಪ್ರಜ್ಞೆ ಮೂಡಿ ಬಂದಿತು ಎಂಬುದು ನಿರ್ವಿವಾದ. ಈ ಐತಿಹಾಸಿಕ ಪ್ರಜ್ಞೆ ಕಾರಣವಾಗಿ ಸಮಾಜ ಸಾಹಿತ್ಯ ಧರ್ಮ ಮೊದಲಾದ ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆಗಳು ನಡೆದವು. ವಿಶೇಷವಾಗಿ ಸಮುದಾಯಗಳ ಸಂಘಟನೆ ಅಭಿವೃದ್ಧಿಗಾಗಿ ಸಾಕಷ್ಟು ಚರ್ಚೆ ಪ್ರತಿಚರ್ಚೆಗಳು ೧೮-೧೯ನೆಯ ಶತಮಾನಗಳಲ್ಲಿ ನಡೆದುದಕ್ಕೆ ನಿದರ್ಶನಗಳಿವೆ. ಹೀಗಾಗಿ ಪ್ರತಿಯೊಂದು ಸಮುದಾಯದ ಪ್ರಾಚೀನತೆ ಸಂಪ್ರದಾಯ ಆಚರಣೆ ಉದ್ಯೋಗ ಶಿಕ್ಷಣ ಮೊದಲಾದ ವಿಷಯಗಳ ಬಗ್ಗೆ ಲಭ್ಯ ಆಕರಗಳನ್ನು ಬಳಸಿಕೊಂಡು ಸಾಹಿತ್ಯವನ್ನು ಸೃಷ್ಟಿಸಲಾಯಿತು. ಈ ಹಿನ್ನೆಲೆಯಲ್ಲಿ ಹಾಲುಮತ ಸಮುದಾಯಕ್ಕೆ ಸಂಬಂಧಿಸಿದಂತೆ ಕಳೆದ ಎರಡು ಶತಮಾನಗಳಲ್ಲಿ ಗ್ರಂಥ ಮತ್ತು ಲೇಖನಗಳ ರೂಪದಲ್ಲಿ ಕೃತಿಗಳು ಹೊರಬಂದವು. ಆ ಎಲ್ಲ ಕೃತಿ ರಾಶಿಯನ್ನು ಇಲ್ಲಿ ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಲಾಗಿದೆ. ಕುರುಬರ ಕೈಪಿಡಿ (೧೯೧೭) ಕೃತಿಯು ಹಾಲುಮತದ ಮೊದಲ ಚಾರಿತ್ರಿಕ ದಾಖಲೆಯನ್ನು ನೀಡುವ ಆಕರವಾಗಿದೆ. ಸಮುದಾಯದ ಸಮಗ್ರ ಪ್ರಗತಿಗಾಗಿ ಹುಟ್ಟಿಕೊಂಡ ಜಗತ್ಪಾವನ (೧೯೨೬) ಪತ್ರಿಕೆಯು ಸಮಕಾಲೀನ ಸಂದರ್ಭದ ಸಾಮಾಜಿಕ ಸಮಸ್ಯೆಗಳನ್ನು, ಅನುಸರಿಸಬೇಕಾದ ನೀತಿ ನಿಯಮಗಳನ್ನು ಹಾಗೂ ಪರಿಹಾರೋಪಾಯಗಳನ್ನು ಓದುಗರ ಗಮನಕ್ಕೆ ತರುವಲ್ಲಿ ಯಶಸ್ವಿಯಾಗಿದೆ.

ಕುರುಬರ ಇತಿಹಾಸ, ಗುರು ಪರಂಪರೆ, ರಾಜಕೀಯ ದೈವಗಳು, ಉಪಪಂಗಡಗಳು, ಆಚರಣೆ, ಸಂಪ್ರದಾಯ, ಕಲೆ, ಸಂಸ್ಮರಣ ಅಭಿನಂದನ ಗ್ರಂಥ, ಸಂಕೀರ್ಣ ಕೃತಿಗಳು, ನಿಯತಕಾಲಿಕೆಗಳು ಎಂದು ಉಪ ಅಧ್ಯಾಯಗಳನ್ನು ಮಾಡಿಕೊಂಡು ಐದನೆಯ ಅಧ್ಯಾಯದಲ್ಲಿ ಅವಲೋಕಿಸಲಾಗಿದೆ.

ಅಂದಾಜು ಒಂದು ನೂರು ವರ್ಷಗಳ ಅವಧಿಯ(೧೯೦೦-೨೦೧೦)ವರೆಗೆ ಈ ಸಮುದಾಯದ ದೈವಗಳು, ಗುರುಪರಂಪರೆ, ಪ್ರಾಚೀನತೆ, ಒಳಪಂಗಡಗಳು, ಆಚರಣೆ, ಸಂಪ್ರದಾಯ ಕಲೆಗಳ ಕುರಿತು ವಿ.ಆರ್. ಹನುಮಂತಯ್ಯ, ಶಂಬಾ ಜೋಷಿ, ಶಿವಾನಂದ ಗುಬ್ಬಣ್ಣನವರ, ಎಂ.ಎಂ.ಕಲಬುರ್ಗಿ, ಸುಧಾಕರ, ಜ್ಯೋತಿ ಹೊಸೂರ, ಎಂ.ಎಂ.ಪಡಶೆಟ್ಟಿ, ಎಫ್.ಟಿ.ಹಳ್ಳಿಕೇರಿ ಮೊದಲಾದ ವಿದ್ವಾಂಸರು ಸಂಶೋಧನೆ ಕೈಕೊಂಡು ಅನೇಕ ಹೊಸ ಸಂಗತಿಗಳನ್ನು ಶೋಧಿಸಿದ್ದಾರೆ. ರೇವಣಸಿದ್ಧನನ್ನೂ ಶಾಂತಮುತ್ತಯ್ಯ, ಸಿದ್ಧರಾಮ, ಮರುಳಸಿದ್ದೇಶ್ವರ ಕುರಿತು ಲಿಖಿತ ಮತ್ತು ಮೌಖಿಕ ರೂಪದ ಆಕರಗಳ ಶೋಧ ಸಂಗ್ರಹ ಮತ್ತು ವಿಮರ್ಶಾತ್ಮಕವಾಗಿ ಪ್ರಕಟಗೊಂಡ ಲೇಖನಗಳು, ಗ್ರಂಥಗಳು ಕುತೂಹಲಕಾರಿಯಾಗಿವೆ. ರೇವಣಸಿದ್ಧನು ರೇಣುಕಾಚಾರ್ಯನನ್ನಾಗಿ ಪಂಚಪೀಠದವರು ಮಾಡಿದ್ದು, ಸಿದ್ಧರಾಮನು ಶಿವಯೋಗಿಯಾಗಿದ್ದು, ಬೀರಪ್ಪನ ಪರಿಷ್ಕೃತ ರೂಪವೇ ವೀರಭದ್ರ ನಂತರ ವಿರೂಪಾಕ್ಷನಾಗಿದ್ದನೆಂದು ತಿಳಿದು ಬರುತ್ತದೆ. ಕಲೆ-ಆಚರಣೆ-ಸಂಪ್ರದಾಯಗಳ ವಿಶಿಷ್ಟತೆಯನ್ನು ತಿಳಿಸುವ ಕೆಲವು ಲೇಖನಗಳು ಅಧ್ಯಯನಾಸಕ್ತರ ಗಮನವನ್ನು ಸೆಳೆಯುತ್ತವೆ.

ರೇವಣಸಿದ್ದೇಶ್ವರನಿಗೆ ಅರ್ಪಿಸುವ ಕಂಥಾಧಾರಣ ಸೇವೆ, ಬೀರದೇವರ ತೋಪು ಜಾತ್ರೆ, ಮೈಲಾರನ ದೋಣಿ ಸೇವೆ, ದಟ್ಟಿ ಕುಣಿತ, ಬೀರನ ಕುಣಿತ, ಡೊಳ್ಳು ಕುಣಿತಗಳ ಬಗ್ಗೆ ಈವರೆಗೆ ನಡೆದ ಅಧ್ಯಯನಗಳು ಪರಿಚಯಾತ್ಮಕ ನೆಲೆಯಲ್ಲಿ ವಿಮರ್ಶಿಸಲಾಗಿದೆ. ಈ ಸಂಪ್ರದಾಯ ಕಲೆ ಆಚರಣೆಗಳನ್ನು ಆಡಿಯೋ ವಿಡಿಯೋ ಮೂಲಕ ದಾಖಲೀ ಕರಿಸಬೇಕಾದ ಅಗತ್ಯತೆ ಜರೂರಾಗಿದೆ.

ಹಾಲುಮತ ಸಾಹಿತ್ಯ ಸಂಸ್ಕೃತಿ ಕುರಿತು ಸ್ವದೇಶಿ ಹಾಗೂ ವಿದೇಶಿ ವಿದ್ವಾಂಸರು ಕೈಕೊಂಡ ಅಧ್ಯಯನಗಳ ಪರಿಚಯವನ್ನು ಸ್ಥೂಲವಾಗಿ 'ಹಾಲುಮತ ಅಧ್ಯಯನ: ವಿವಿಧ ವಿದ್ವಾಂಸರ ಕೊಡುಗೆ' ಎಂಬ ಅಧ್ಯಾಯದಲ್ಲಿ ವಿವೇಚಿಸಲಾಗಿದೆ. ಸ್ವದೇಶಿ ವಿದ್ವಾಂಸರಾದ ವಿ.ಆರ್.ಹನುಮಂತಯ್ಯ, ಶಂಬಾ ಜೋಶಿ, ಎಂ.ಎಂ.ಕಲಬುರ್ಗಿ, ಶಿವಾನಂದ ಗುಬ್ಬಣ್ಣನವರ, ಶ್ಯಾಂಸಿಂಗ್ ಶಶಿ, ಎಫ್.ಟಿ.ಹಳ್ಳಿಕೇರಿ ಹಾಗೂ ವಿದೇಶಿ ವಿದ್ವಾಂಸ ಸೊಂತೈಮರ್ ಅವರು ಕುರುಬ ಸಮುದಾಯ ಕುರಿತು ಸಂಶೋಧನೆ ನಡೆಸಿ ಗ್ರಂಥ ಹಾಗೂ ಲೇಖನಗಳ ರೂಪಗಳಲ್ಲಿ ತಮ್ಮ ವಿಚಾರಗಳನ್ನು ಪ್ರಚುರ ಪಡಿಸಿದ್ದಾರೆ. ಆ ಎಲ್ಲ ವಿಚಾರಗಳ ಅವಲೋಕನವನ್ನು ಸಂಕ್ಷಿಪ್ತವಾಗಿ ಈ ಅಧ್ಯಾಯದಲ್ಲಿ ಪರಿಚಯಿಸಲಾಗಿದೆ.

ಹೀಗೆ ಹಾಲುಮತಕ್ಕೆ ಸಂಬಂಧಿಸಿದ ಅಧ್ಯಯನಗಳ ಸ್ವರೂಪ ಮತ್ತು ವಿಶ್ಲೇಷಣೆಯನ್ನು ಸಮಗ್ರವಾಗಿ ಕೈಕೊಂಡ ಮಹಾಪ್ರಬಂಧ ಇದಾಗಿದೆ. ಆ ಆಕರಗಳನ್ನು ಬಳಸಿಕೊಂಡು ಹಾಲುಮತ ಸಾಹಿತ್ಯ ಸಮಾಜ ಸಂಸ್ಕೃತಿಗೆ ಸಂಬಂಧಿಸಿದಂತೆ ವಿಸ್ತೃತವಾದ ಅಧ್ಯಯನವನ್ನು ನಡೆಸಲು ಅವಕಾಶಗಳಿವೆ. ಅಂಥ ಅವಕಾಶಗಳನ್ನು ಯುವ ಸಂಶೋಧಕರು ಬಳಸಿಕೊಂಡು ಹಾಲುಮತ ಸಂಸ್ಕೃತಿಯ ಅನನ್ಯತೆಯನ್ನು ಗುರುತಿಸುವ ಮತ್ತು ದಾಖಲಿಸುವ ಕಾರ್ಯ ನಡೆಯಲಿ ಎಂದು ಹೇಳಬಯಸುತ್ತೇನೆ.

ಅನುಬಂಧಗಳು

೧. ಹಾಲುಮತ ಅಧ್ಯಯನ ಸೂಚಿ

೨. ಸಹಾಯಕ ಗ್ರಂಥಸೂಚಿ

೩. ಛಾಯಾಚಿತ್ರಗಳು

ಅನುಬಂಧಗಳು

೧. ಹಾಲುಮತ ಅಧ್ಯಯನ ಸೂಚಿ

೧. ಕಾವ್ಯ ಪುರಾಣಗಳು

ಅಡಿವೆಪ್ಪ ಮಾಳಪ್ಪ ಸೋಮುತ್ತೆ ಒಡೆಯರು

- ಸುಕ್ಷೇತ್ರ ಹುಲಜಂತಿ ಮಾಳಿಂಗರಾಯರ ಹಾಲುಮತ ಪುರಾಣ, ೧೯೯೩

ಅಣ್ಣಾಪ್ಪ ವಾಸುದೇವರಾಯ ಮುತ್ತೂರು, ನಿರೂಪಕ ಅಪ್ಪಣ್ಣ ಪೂಜಾರಿ

- ಶ್ರೀ ಸಿದ್ಧಬೀರೇಶ್ವರ ಅರ್ಥಾತ್ ಕರಿಸಿದ್ಧೇಶ್ವರ (ಹಾಲ್ಮತದ) ಪುರಾಣ, ೧೯೭೧

ಎಂ.ಎಂ.ಕಲಬುರ್ಗಿ, ವೈ.ಸಿ.ಭಾನುಮತಿ (ಸಂ)

- ಸಿದ್ಧಮಂಕ ಚರಿತೆ, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಮಠ, ಗದಗ, ೨೦೦೪

ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಎಫ್.ಟಿ.ಹಳ್ಳಿಕೇರಿ (ಸಂ)

- ತಗರ ಪವಾಡ, ವಿದ್ಯಾನಿಧಿ ಪ್ರಕಾಶನ ಗದಗ, ೨೦೦೪

ಗಂಗಾಧರ ದೈವಜ್ಞ (ಸಂ)

- ಅಡಿವೆಪ್ಪ ಒಡೆಯರು ಹಾಡಿದ ಮಾಳಿಂಗರಾಯನ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಚಂದ್ರಪ್ಪ ಎಚ್. ಅಜ್ಜಂಪುರ (ಸಂ)

- ಟಗರ ಪವಾಡ(ಸಂಗೀತ ನಾಟಕ), ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೦

ಚಕ್ಕೆರೆ ಶಿವಶಂಕರ

- ಮೈಲಾರಲಿಂಗ ಕಾವ್ಯ, ಕರ್ನಾಟಕ ಜಾನಪದ ಟ್ರಸ್ಟ್ ಬೆಂಗಳೂರು, ೧೯೮೭

ಚನ್ನಬಸವ ಕವಿ

- ಹಾಲುಮತದ ಪುರಾಣವು, ದಾವಣಗೆರೆ, ೧೯೫೯

ಚನ್ನಮಲ್ಲಿಕಾರ್ಜುನ

- ವೀರಶೈವ ಪಂಚಾಚಾರ್ಯ ಚರಿತ್ರೆ : ರೇವಣಸಿದ್ಧರು, ಶ್ರೀ ನಿರಂಜನ ಚನ್ನಬಸವಸ್ವಾಮಿ ಮುಪ್ಪಿನಸ್ವಾಮಿ ವಿರಕ್ತಮಠ, ಬ್ಯಾಡಗಿ, ೧೯೫೮

ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ

- ಹಾಲುಮತದ ಪುರಾಣವು, ಬಂಕಾಪುರ, ೧೯೧೦, ೧೯೯೨

ಭಾಗೂತನಯುನವಿಲೂ (ಸಂ)

- ರಸ್ತಾಪುರ ಭೀಮಕವಿ ವಿರಚಿತ ಶ್ರೀ ರೇವಣಸಿದ್ಧೇಶ್ವರ ಲೀಲಾ ಸಂಯುಕ್ತ ಹಾಲ್ಮತೋತ್ತೇಜಕ ಪುರಾಣ, ಶಶಿಕಲಾ ಪ್ರಕಾಶನ, ಬೆಂಗಳೂರು, ೧೯೮೨

ಭೀಮಕವಿ ಶಂಕರದಾಳ ರಸ್ತಾಪುರ

- ಹಾಲ್ಮತೋತ್ತೇಜಕ ಪುರಾಣ, ೧೯೧೭

ಮಂಜನಾಥ ಬೇವಿನಕಟ್ಟಿ (ಸಂ)

- ಮಲಾರಲಿಂಗನ ಕಾವ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯

ರಾಜಪ್ಪ ದಳವಾಯಿ (ಸಂ)

- ಏಳೂರು ದೇವರ ಕಾಳಗ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೪

ವೀರಣ್ಣ ದಂಡೆ (ಸಂ)

- ಸಿದ್ಧಪ್ಪ ಮೇಟಿ ಅವರು ಹಾಡಿದ ಜನಪದ ಹಾಲುಮತ ಮಹಾಕಾವ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

ಶಂಕರಾನಂದಪ್ಪ, ಎನ್ (ಅಂಬಾಸುತ)

- ಹಾಲುಮತ ಪುರಾಣ ಅಥವಾ ಮುದ್ದಲಿಂಗೇಶ್ವರ ಚರಿತ್ರೆ, ವಿದ್ಯಾನಿಧಿ ಪ್ರಕಾಶನ ಗದಗ,

ಶಾಂತವೀರಯ್ಯ ಹಿ.ಚಿ.

- ಗೊಲ್ಲಾಳಯ್ಯನ ಪುರಾಣ, ಮೋಹನ ಪ್ರಿಂಟರ್ಸ್, ಬೆಂಗಳೂರು, ೧೯೭೨

ಸದಾಶಿವ ಅಪ್ಪಣ್ಣ ಜುಮ್ಮಣ್ಣವರ (ಪೂಜಾರಿ), ಲೋಣಿ

- ಹಾಲುಮತ ಶ್ರೀ ಬೀರಲಿಂಗೇಶ್ವರ ಮಹಾಪುರಾಣ, ಬೀಲಿಂಗೇಶ್ವರ ಡೊಳ್ಳಿನ ಸಂಘ, ಲೋಣಿ, ಇಂಡಿ ತಾ, ಬಿಜಾಪುರ ಜಿಲ್ಲೆ, ೨೦೦೯

ಸಿದ್ದಣ್ಣ ಜಕಬಾಳ (ಸಂ)

- ಕುರುಬರ ರಟ್ಟಮತಶಾಸ್ತ್ರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪

ಹಳ್ಳಿಕೇರಿ ಎಫ್.ಟಿ. (ಸಂ)

- ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೮

೨. ಗ್ರಂಥಗಳು

ಅಂಗಡಿ ಎಸ್.ಎಸ್.

- ಕುರುಬ ಸಮುದಾಯದ ಭಾಷೆ, ಆನಂದಕಂದ ಗ್ರಂಥಮಾಲೆ ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ ೨೦೦೯

ಉಮೇಶ ಹ. ಹೊಸ್ಕೇರಿ

- ಶಾಂತಮುತ್ತಯ್ಯ ಮತ್ತು ಸಿದ್ಧರ ಪವಾಡಗಳು, ಪ್ರ.ಸಿದ್ಧಯ್ಯ ಶರಭಯ್ಯ ಗುರುವಿನ, ಹಾಲುಮತ ಗುರುಪೀಠಾಧಿಪತಿಗಳು, ಸರೂರ, ೨೦೦೮

ಎರೆಯಪ್ಪ ಡಿ.

- ಅಲೆಮಾರಿ ಕುರುಬರು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ ಬೆಂಗಳೂರು, ೨೦೦೮

ಒಡೆಯರ್ ಡಿ. ಹೆಗ್ಗಡೆ

- ಹಕ್ಕ ಬುಕ್ಕ, ತನುಮನ ಪ್ರಕಾಶನ, ಮೈಸೂರು, ೨೦೦೩,
- ಕವಲು ದಾರಿಯಲ್ಲಿ ಕುರುಬ ಜನಾಂಗದ ಇತಿಹಾಸ:ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ಅಧ್ಯಯನ, ಮಾನವಾಭಿವೃದ್ಧಿ ಅಧ್ಯಯನಗಳ ಕೇಂದ್ರ, ಮೈಸೂರು, ೨೦೦೩,
- ಕುರುಬ ಜನಾಂಗದ ರಾಜವಂಶಗಳು, ಅಖಿಲಾ ಏಜೆನ್ಸೀಜ್, ಮೈಸೂರು, ೨೦೦೫
- ಹಾಲುಮತ ಕುರುಬ ಜನಾಂಗದ ಇತಿಹಾಸ, ಅಖಿಲಾ ಏಜೆನ್ಸೀಜ್, ಮೈಸೂರು, ೨೦೦೫
- ಶ್ರೀ ರೇವಣಸಿದ್ಧೇಶ್ವರ ಮತ್ತು ಶ್ರೀ ಬೀರೇಶ್ವರರು, ಅಖಿಲಾ ಏಜೆನ್ಸೀಜ್, ಮೈಸೂರು, ೨೦೦೫, ೨೦೦೭

ಕರಿಯಪ್ಪ, ಎಂ. (ಸಂ)

- ಪಾಲ ದರ್ಶಿನಿ,೧೯೯೩
- ಹಾಲತೊರೆ, ನಗರ ಕುರುಬರ ಸಂಘ, ದಾವಣಗೆರೆ, ೨೦೦೦
- ಮೇಷ ವಿಜಯ, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರ, ೨೦೦೧,
- ಗುರುವಂದನ(ವೇ.ಮೂ.ಚನ್ನಯ್ಯ ಒಡೆಯರ ಅಭಿನಂದನ ಗ್ರಂಥ), ಶ್ರೀ ಚನ್ನಯ್ಯ ಒಡೆಯರ್ ಅಭಿನಂದನ ಸಮಿತಿ, ಶ್ರೀ ಬೀರೇಶ್ವರ ವಿದ್ಯಾರ್ಥಿ ನಿಲಯ, ಹದಡಿ ರಸ್ತೆ, ದಾವಣಗೆರೆ, ೨೦೦೭

ಚಂದ್ರಕಾಂತ ಪೋಕಳೆ (ಸಂ)

- ಶ್ರೀ ವಿಠಲ: ಒಂದು ಮಹಾಸಮನ್ವಯ(ಮೂಲ ಮರಾಠಿ. ರಾ.ಚಿಂ.ಢೇರೆ), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

ಚಂದ್ರಕಾಂತ ಬಿಜ್ಜರಗಿ

- ಕುರುಬ ದರ್ಪಣ, ಶೈಲಚಂದ್ರ ಪ್ರಕಾಶನ ಬಿಜಾಪುರ, ೨೦೦೪
- ಕುರುಬರ ಹೆಜ್ಜೆಗಳು, ಶೈಲಚಂದ್ರ ಪ್ರಕಾಶನ, ಬಿಜಾಪುರ, ೨೦೦೬
- ಶಿವಶರಣೆ ಮಹಾದಾಸೋಹಿಣಿ ಇಂದೂರ ರಾಣಿ ಅಹಿಲ್ಯಾಬಾಯಿ ಹೋಳಕರ, ಶೈಲಚಂದ್ರ ಪ್ರಕಾಶನ ಬಿಜಾಪುರ, ೨೦೦೭
- ಕುರುಬರ ಕುಲಗುರು ರೇವಣಸಿದ್ಧ, ಶೈಲಚಂದ್ರ ಪ್ರಕಾಶನ, ಬಿಜಾಪುರ, ೨೦೦೯

ಚಂದ್ರಪ್ಪ ಎಚ್. ಅಜ್ಜಂಪುರ

- ಕುರುಬರ ಕುರುಹುಗಳು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೧

ಚಕ್ಕೆರೆ ಶಿವಶಂಕರ

- ಗೊರವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

ಚನ್ನಪ್ಪ ಕಟ್ಟಿ, ವಾಡೇದ, ಆರ್. ಎಸ್. (ಸಂ)

- ಕುರುಬ ಜನಪದ, ಕನಕ ಜಯಂತ್ಯುತ್ಸವ ಸಮಿತಿ, ಸಿಂದಗಿ, ೧೯೯೭

ಜಯಕುಮಾರ ಎಂ

- ನಡೆಮಡಿ, ಶೃತಿ ಪ್ರಕಾಶನ, ಬೆಂಗಳೂರು, ೧೯೮೦

ಜ್ಯೋತಿ ಹೊಸೂರ

- ಬೀರಪ್ಪದೇವನ ಉಪಾಸಕರ ಮಾದರಿಗಳು ಮತ್ತು ಕ್ಷೇತ್ರಗಳು, ಕಾಲಗತಿ ಪ್ರಕಾಶನ ಬೆಳಗಾವಿ, ೨೦೦೭

ತೋಂಟಾಪುರ ಎಸ್. ಬಿ.

- ಉತ್ತರ ಕರ್ನಾಟಕದ ಗೊಂಡ ಅರ್ಥಾತ್ ಕುರುಬ, ಕರ್ನಾಟಕ ರಾಜ್ಯ ಗೊಂಡ ಸಂಘ, ಬೆಂಗಳೂರು, ೧೯೯೫

ದೊಡ್ಡಣ್ಣ ಗದ್ದನಕೇರಿ

- ಬೀರದೇವರ ಸಂಪ್ರದಾಯ ಮತ್ತು ಆಚರಣೆಗಳು, ಕಮಲ ಪ್ರಕಾಶನ, ಚಿತವಾಡಗಿ, ಹುನಗುಂದ, ೨೦೦೩

ನಾಯ್ಕರ, ಬ.ಫ.

- ಹಾಲುಮತಸ್ಥರು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೨

- ನಾವು ನಮ್ಮವರು, ವಿಜೇತ್ ಪ್ರಕಾಶನ, ಗದಗ, ೨೦೦೮

ಪಡಶೆಟ್ಟಿ,ಎಂ.ಎಂ.

- ಹೇಳಿಕೀ ಮಾಡ್ಯಾರ ಒಡೆಯರು, ನೆಲೆ ಪ್ರಕಾಶನ, ಸಿಂದಗಿ, ೧೯೯೩

ಪರಶುರಾಮಯ್ಯ ಸಿ.ಕೆ.

- ಚೌಡಿಕೆಯವರು: ಸಂಪ್ರದಾಯ ಮತ್ತು ಆಚರಣೆಯ ಅಧ್ಯಯನ, ಪರಶು ಪ್ರಕಾಶನ, ಬಿ.ಎಚ್.ರಸ್ತೆ, ಚಿಕ್ಕನಾಯ್ಕನಹಳ್ಳಿ, ೨೦೦೭

ಪರಶುರಾಮಯ್ಯ ಸಿ.ಕೆ. (ಸಂ)

- ಕನಕ, (ಕನಕದಾಸರ ಜಯಂತಿ ಸಂಸ್ಮರಣ ಸಂಪುಟ, ಕಾಳಿದಾಸ ಎಜುಕೇಷನ್ ಸೊಸೈಟಿ ಗಾಂಧಿನಗರ, ಬೆಂಗಳೂರು) ೧೯೭೦

ಪೊಲೀಸ ಪಾಟೀಲ ಹೊಳೆಯನಗೌಡ ಮಾನನಗೌಡ, ಝೂಲಗುಡ್ಡ ಲಿಂಗಸೂರ ತಾ.

- ಹಾಲ್ಮತ ಸಮಾಜ, ಜೀವದಯಾ ಸಂಘ, ಹುಬ್ಬಳ್ಳಿ, ೧೯೩೭

ಬಿರಾದಾರ ಬಿ.ಜಿ.

-ಕುರುಬರ ಗುರು ಒಡೆಯರು : ಸಾಂಸ್ಕೃತಿಕ ಅಧ್ಯಯನ , ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೦

ಬೋನಾ ಬಸವರಾಜ

- ಹಾಲುಮತದ ಹುಟ್ಟು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೦,

- ಭಗವಾನ್ ಬೀರೇಶ್ವರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪

ಮಲ್ಲಾಬಾದಿ ವೀರಭದ್ರಪ್ಪ

- ಹಾಲುಮತದ ಪುರಾಣ(ಅನುವಾದ), ಸಾಹಿತ್ಯ ಸಮಿತಿ ಪತ್ರಿಕೆ, ಸಂ. ೨,

ಮಾಳಪ್ಪ ಅಡಸಾರ

- ಮಹಾತ್ಮ ಬೊಮ್ಮಗೊಂಡೇಶ್ವರ, ಮಹಾಸಂಸ್ಥಾನ ಕನಕಗುರು ಪೀಠ, ಗುಲಬರ್ಗಾ ವಿಭಾಗ, ವೀರಗೋಟ, ದೇವದುರ್ಗ, ೨೦೦೮

ಯಲ್ಲನಗೌಡ ಫ. ಅತ್ತಿಕೊಳ್ಳ

- ಹಾಲುಮತದ ಚರಿತ್ರೆ, ಧಾರವಾಡ ೧೯೮೯

ರವಿ ಬಿ.ಕೆ. (ಅನು) (ಮೂಲ : ಶ್ಯಾಂಸಿಂಗ್ ಶಶಿ)

- ಭಾರತದ ಕುರುಬರು: ರಾಜಪರಂಪರೆಯ ಬುಡಕಟ್ಟು ಸಮಾಜೋ ಸಾಂಸ್ಕೃತಿಕ ಅಧ್ಯಯನ, ಅಂಕಿತ ಪುಸ್ತಕ, ಬೆಂಗಳೂರು, ೨೦೦೭

ಲಕ್ಕಪ್ಪಗೌಡ, ಹೆಚ್. ಜೆ. (ಸಂ)

- ಕುರುಬರು ಮತ್ತು ಉಣ್ಣೆ ನೇಕಾರರು

ಲಲಿತಾ ಎ.ಪಿ.

- ಕಾಡುಕುರುಬರು ಮತ್ತು ಜೇನು ಕುರುಬರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

ಲಿಂಗಪ್ಪ ಎಂ.ಎನ್.

- ಕುರುಬರ ಕೈಪಿಡಿ, ಇಂದಿರಾ ಪ್ರೆಸ್ ಬೆಂಗಳೂರ, ೧೯೧೭

ವಂಟಿಗೂಡಿ ಟಿ.ಎಸ್.

- ರಾಯಬಾಗ ತಾಲೂಕಿನ ಹಾಲುಮತದ ದೈವಗಳು, ವಿದ್ಯಾ ಪ್ರಕಾಶನ, ಹಿಡಕಲ್, ೨೦೧೦

ಶಂಕರ ಶಿ ಕಂಬಾರ

- ಹಾಲುಮತದ ಪ್ರಶ್ನೋತ್ತರ ಮಾಲೆ, ಬಸವ ಪ್ರಕಾಶನ ಕಬ್ಬೂರ, ೨೦೦೪

- ಬೀರೇಶ್ವರ ಮಾಳಿಂಗರಾಯರ ಡೊಳ್ಳಿನ ಪದಗಳು, ವಿದ್ಯಾನಿಧಿ ಪ್ರಕಾಶನ ಗದಗ, ೨೦೦೭

- ಹಾಲುಮತ ಪುರಾಣಗಳ ಬಿನ್ನಾಭಿಪ್ರಾಯಗಳು, ವಿಜೇತ್ ಪ್ರಕಾಶನ, ಗದಗ, ೨೦೦೭

- ಹಾಲುಮತದ ಶರಣರ ಚರಿತ್ರೆ ಹಾಗೂ ವಚನಗಳು, ವಿಜೇತ ಪ್ರಕಾಶನ ಗದಗ, ೨೦೦೮

ಶಂಬಾ ಜೋಶಿ

- ಹಾಲುಮತ ದರ್ಶನ, ಸವದತ್ತಿ, ೧೯೬೦, ೧೯೯೭(ಕನ್ನಡ ವಿ.ವಿ. ಪ್ರಕಟನೆ)

- ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ, ಸಮಾಜ ಪುಸ್ತಕಾಲಯ ಧಾರವಾಡ, ೧೯೬೭

ಶಿವಾನಂದ ಗುಬ್ಬಣ್ಣವರ

- ಕರ್ನಾಟಕದ ಕುರುಬರು, ಅಕ್ಷಯ ಪ್ರಕಾಶನ ಧಾರವಾಡ, ೧೯೯೩

ಶ್ರೀರಾಮ ಇಟ್ಟಣ್ಣವರ

- ಕೊಣ್ಣೂರು ಕರಿಸಿದ್ಧೇಶ್ವರ, ಪ್ರ. ಸಿದ್ಧಪ್ಪ ಪೂಜಾರ, ಕೊಣ್ಣೂರು, ೧೯೯೫

ಶ್ರೀರಾಮ ಇಟ್ಟಣ್ಣವರ, ವಿ.ಡಿ. ವಸ್ತ್ರದ, ಚನ್ನಪ್ಪ ಕಟ್ಟಿ (ಸಂ)

- ಹಾಲಕೆನೆ, ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ ಬಿಜಾಪುರ, ೨೦೦೨

ಷಣ್ಮುಖಪ್ಪ

- ಶರಣ ಕುರುಬ ಗೊಲ್ಲಾಳ, ಕನಕ ಗುರುಪೀಠ ಕಾಗಿನೆಲೆ, ೨೦೦೮

ಹನುಮಂತಯ್ಯ, ವಿ. ಆರ್.

- ಕುರುಬರ ಚರಿತ್ರೆ, ೧೯೨೬,

- ಭಾರತದ ಕುರುಬರ ಚರಿತ್ರೆ ೧೯೫೮

ಹಳ್ಳಿಕೇರಿ, ಎಫ್.ಟಿ., (ಸಂ)

- ಕುರುಬರ ಗುರು ಒಡೆಯರು, ವಿಕಾಸ ಪ್ರಕಾಶನ, ಶೋಧನ, ಶಿಕ್ಷಕರ ಬಡಾವಣೆ, ಎಂ.ಪಿ. ಪ್ರಕಾಶನಗರ, ಹೊಸಪೇಟೆ, ೨೦೦೮

- ಹಾಲುಮತ ವ್ಯಾಸಂಗ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ೨೦೦೯

- ಹಾಲುಮತ ಮಹಾಸಭೆ : ಭಾಷಣಗಳು-ವರದಿಗಳು, ವಿಕಾಸ ಪ್ರಕಾಶನ, ಶೋಧನ, ಶಿಕ್ಷಕರ ಬಡಾವಣೆ, ಎಂ.ಪಿ.ಪ್ರಕಾಶನಗರ, ಹೊಸಪೇಟೆ, ೨೦೦೯

- ಹಾಲುಮತ ವ್ಯಾಸಂಗ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ೨೦೧೦

- ಹಾಲುಮತ ಅಧ್ಯಯನ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ೨೦೧೦

- ಹಾಲುಮತ ಅಧ್ಯಯನಗಳು(ಎಂ.ಎಂ.ಕಲಬುರ್ಗಿ ಅವರ ಸಂಶೋಧನ ಲೇಖನಗಳು), ವಿಕಾಸ ಪ್ರಕಾಶನ ಹೊಸಪೇಟೆ, ೨೦೧೦

೩.ಲೇಖನಗಳು

ಅನ್ನಪೂರ್ಣ ಗೋಸ್ಬಾಳ

- ತಗರ ಪವಾಡ ಮತ್ತು ಸಿದ್ಧಮಂಕ ಚರಿತೆ, ಇತಿಹಾಸ ದರ್ಶನ, ಸಂ. ೨೫, ೨೦೧೦

ಈಶ್ವರಚಂದ್ರ ಚಿಂತಾಮಣಿ

-ವಿಜಾಪುರ ಜಿಲ್ಲೆಯ ಕುರುಬ ಜನಾಂಗದ ಸಿದ್ಧಪುರುಷರು,

ಕಾಯಕಯೋಗಿ(ಎಂ.ಎಂ.ಮೆಣಸಗಿ ಸಂಸ್ಮರಣ ಗ್ರಂಥ), ೨೦೦೨

ಕರಿಯಪ್ಪ, ಎಂ.

- ಕರ್ನಾಟಕದ ಕುರುಬ ಜನಾಂಗದ ಸಾಮಾಜಿಕ ಅಧ್ಯಯನ, ಪಾವನ(ಕಾಗಿನೆಲೆ ಕನಕ ಗುರುಪೀಠದ ಸ್ಥಾಪನೆಯ ಸಂಸ್ಮರಣ ಸಂಚಿಕೆ), ೧೯೯೨,

- ಶಿಕ್ಷಣ ಉದ್ಯೋಗ ರಂಗದಲ್ಲಿ ಕುರುಬರು, ಪಾವನ(ಕಾಗಿನೆಲೆ ಕನಕ ಗುರುಪೀಠದ ಸ್ಥಾಪನೆಯ ಸಂಸ್ಮರಣ ಸಂಚಿಕೆ), ೧೯೯೨

ಕಲಬುರ್ಗಿ, ಎಂ.ಎಂ.

- ಹುಕ್ಕ ಬುಕ್ಕ, ಸಂಶೋಧನ ವ್ಯಾಸಂಗ ೪-೫,

- ವಿರೂಪಾಕ್ಷ, ಸಂಶೋಧನ ವ್ಯಾಸಂಗ ೫-೧,

- ಕುರುಬರ ಗುರು ಶಾಂತಮುತ್ತಯ್ಯ, ಮಾರ್ಗ ಸಂ-೪, ೨೦೦೪,

- ಕುರುಬ ಸಮಾಜ ಮತ್ತು ಲಿಂಗಾಯತ ಸಮಾಜ, ಮಾರ್ಗ ಸಂ-೪, ೨೦೦೪,

- ಮಲ್ಲಯ್ಯ ಮುದಿಮಲ್ಲಯ್ಯ, ಮಾರ್ಗ ಸಂ-೪, ೨೦೦೪,

- ರೇವಣಸಿದ್ಧ, ಮಾರ್ಗ ಸಂ-೪, ೨೦೦೪

- ಸಿದ್ಧರಾಮ ಶಿವಯೋಗಿಯಾದ, ರೇವಣಸಿದ್ಧನನ್ನು ಶಿವಾಚಾರ್ಯ ಮಾಡಿದರು, ಲಿಂಗಾಯತ, ಜುಲೈ ೨೦೦೬

- ಶಾಂತ ಸಂಪ್ರದಾಯ, ಲಿಂಗಾಯತ, ಜುಲೈ ೨೦೦೮

- ರೇವಣಸಿದ್ಧನ ಚರಿತ್ರೆ: ಎರಡು ಸಂಪ್ರದಾಯಗಳು, ಲಿಂಗಾಯತ, ೩-೧೨, ಮಾರ್ಚ ೨೦೦೯

- ವೀರಶೈವ ಉಜ್ಜಯಿನಿ, ಮಾರ್ಗ ಸಂ : ೩, ೨೦೧೦

ಕೃಷ್ಣಯ್ಯ ಡಿ.ಎನ್

- ಕೊಡಗಿನಲ್ಲಿ ಕುರುಬರು, ಕನಕ (ಕನಕದಾಸರ ಜಯಂತಿ ಸಂಸ್ಮರಣ ಸಂಪುಟ, ಸಂ. ಸಿ.ಕೆ.ಪರಶುರಾಮಯ್ಯ, ಕಾಳಿದಾಸ ಎಜುಕೇಷನ್ ಸೊಸೈಟಿ ಗಾಂಧಿನಗರ, ಬೆಂಗಳೂರು) ೧೯೭೦

ಕಿಕ್ಕೇರಿ ನಾರಾಯಣ

- ಜೇನು ಕುರುಬರು, ಕರ್ನಾಟಕ ಬುಡಕಟ್ಟುಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮

ಗಣೇಶ ಎಚ್.ಎಂ.

- ಕಾಡು ಬೆಟ್ಟ ಕುರುಬರ ಆಹಾರ ಪದ್ಧತಿ, ಕರ್ನಾಟಕದ ಬುಡಕಟ್ಟು ಸಮುದಾಯಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ, ೨೦೧೦

ಗುಂಡಕರ್ಜಗಿ, ವೈ.ಕೆ.

- ಕುರುಬರು, ಕಾಯಕಯೋಗಿ(ಎಂ.ಎಂ.ಮೆಣಸಗಿ ಸಂಸ್ಮರಣ ಗ್ರಂಥ), ೨೦೦೨

ಗುರುಸಿದ್ಧಯ್ಯ ಒಡೆಯರ್, ಸಿ.ಆರ್.

- ಕುರುಬರ ಗುರು ಪರಂಪರೆ, ಕಾಯಕಯೋಗಿ(ಎಂ.ಎಂ.ಮೆಣಸಗಿ ಸಂಸ್ಮರಣ ಗ್ರಂಥ), ೨೦೦೨

- ಕರಿಯ ಕಂಥೆ ಗದ್ದುಗೆ ಧಾವಳಿ, ಕನಕ (ಕನಕದಾಸರ ಜಯಂತಿ ಸಂಸ್ಮರಣ ಸಂಪುಟ, ಸಂ. ಸಿ.ಕೆ.ಪರಶುರಾಮಯ್ಯ, ಕಾಳಿದಾಸ ಎಜುಕೇಷನ್ ಸೊಸೈಟಿ, ಗಾಂಧಿನಗರ, ಬೆಂಗಳೂರು) ೧೯೭೦

ಗೌಡ, ಹೆಚ್.ಎಮ್.ಆರ್.

- ಹಿಂದೂ ಸಮಾಜಕ್ಕೆ ದಕ್ಷಿಣ ಭಾರತದ ಕುರುಬರ ಕೊಡುಗೆ, ಕಾಯಕಯೋಗಿ (ಎಂ.ಎಂ. ಮೆಣಸಗಿ ಸಂಸ್ಮರಣ ಗ್ರಂಥ), ೨೦೦೨

ಚನ್ನಣ್ಣ ವಾಲಿಕಾರ

- ಉತ್ತರ ಕರ್ನಾಟಕದ ಕುರುಬರು, ಶಿಕ್ಷಣ ಪ್ರದೀಪ(ಬಿ.ಎಫ್. ದಂಡಿನ ಅಭಿನಂದನ ಗ್ರಂಥ), ೧೯೯೨

ಚಿದಾನಂದಮೂರ್ತಿ, ಎಂ.

- ಐನೋರು ಮತ್ತು ಕಾಲಿಲ್ಲದ ಐನೋರು, ಕಸ್ತೂರಿ, ಜನವರಿ-೧೯೯೫,

- ಕುರುಬ ಜಾತಿಯ ಒಡೆಯರು ಮತ್ತು ಒಡೇರಮ್ಮ, ಪಗರಣ, ೧೯೮೪

ಜಯಕುಮಾರ್ ಎಂ.

- ಕುರುಬ ಜನಾಂಗ ಮತ್ತು ಜೈನಧರ್ಮ, ಕನಕ ಸ್ಫೂರ್ತಿ ೧೦-೧೧, ೨೦೦೪

ಜವಳಿ ಬಿ.ಪಿ.

- ಬೀರದೇವರು, ಜಾನಪದ ಸಾಹಿತ್ಯ ದರ್ಶನ -೯, ೧೯೮೮

ತಳ್ಳಿಹಾಳ ಶಾಂ. ಶಿ.

- ಹಾಲುಮತ ದೇವತೆಗಳು, ಕಾಯಕಯೋಗಿ(ಎಂ.ಎಂ.ಮೆಣಸಗಿ ಸಂಸ್ಮರಣ ಗ್ರಂಥ), ೨೦೦೨

ತೇಜಸ್ವಿ ಕಟ್ಟಿಮನಿ

- ಕುರುಬರು ಮತ್ತು ಬೇಡರು: ತೌಲನಿಕ ಟಿಪ್ಪಣಿಗಳು, ಕಾಯಕಯೋಗಿ(ಎಂ.ಎಂ.ಮೆಣಸಗಿ ಸಂಸ್ಮರಣ ಗ್ರಂಥ), ೨೦೦೨

ನಾಗರಾಜ ಎಂ.ಕೆ.

- ಕುರುಬ ಸಮಾಜದ ಆರ್ಥಿಕ ಚಿಂತನೆ, ಕನಕ ಸ್ಫೂರ್ತಿ ೧೦-೧೧, ೨೦೦೪

ನಾವಲಗಿ ಸಿ.ಕೆ.

- ಕುರುಬರ ಹೇಳಿಕೆ, ಜಾನಪದ ಜಗತ್ತು,೨೦-೩, ೧೯೯೯

ನಿಂಗಣ್ಣ ಸಣ್ಣಕ್ಕಿ

- ಉತ್ತರ ಕರ್ನಾಟಕದ ಕುರುಬರ ಸಾಂಸ್ಕೃತಿಕ ನೆಲೆಗಳು, ಕಾಯಕಯೋಗಿ(ಎಂ.ಎಂ.ಮೆಣಸಗಿ ಸಂಸ್ಮರಣ ಗ್ರಂಥ), ೨೦೦೨

ನಿರಂಜನ ವಾನಳ್ಳಿ

- ಜೇನುಕುರುಬರ ಹಾಡಿಯಲ್ಲಿ ಕೃಷಿ ಹಾಡು, ಪ್ರಜಾವಾಣಿ, ೯.೨.೧೯೯೭

ಪರಮೇಶ್ವರಯ್ಯ ಎಚ್.ಎಂ.

- ಕುರಿಗಾರರ ಐತಿಹಾಸಿಕ ವೈಭವ, ಕನಕ (ಕನಕದಾಸರ ಜಯಂತಿ ಸಂಸ್ಮರಣ ಸಂಪುಟ, ಸಂ.ಸಿ.ಕೆ.ಪರಶುರಾಮಯ್ಯ ಕಾಳಿದಾಸ ಎಜುಕೇಷನ್ ಸೊಸೈಟಿ ಗಾಂಧಿನಗರ, ಬೆಂಗಳೂರು) ೧೯೭೦

ಪರಶುರಾಮಯ್ಯ ಸಿ.ಕೆ.

- ತಗರ ಪವಾಡ, ಪ್ರಬುದ್ಧ ಕರ್ನಾಟಕ ೪೪-೩, ೧೯೬೨,
- ಕುರುಬ ಜನಾಂಗದ ಒಂದು ಪ್ರಚಲಿತ ಪ್ರಾಚೀನ ಸಂಪ್ರದಾಯ-ಕರಿಯ ಕಂತೆ, ಪಾವನ(ಕಾಗಿನೆಲೆ ಕನಕ ಗುರುಪೀಠದ ಸ್ಥಾಪನೆಯ ಸಂಸ್ಮರಣ ಸಂಚಿಕೆ), ೧೯೯೨,
- ತಗರ ಪವಾಡ ಮತ್ತು ಗುರುಪರಂಪರೆ, ಹಾಲತೊರೆ,೨೦೦೩
- ಸಿದ್ಧಮಂಕ ಚರಿತೆ : ಕುರುಬರ ಗುರುಪರಂಪರೆಯನ್ನು ತಿಳಿಸುವ ಕೃತಿ, ಹಸ್ತಪ್ರತಿ ಅಧ್ಯಯನ ೪-೧, ಪುಟ. ೫೫, ಜುಲೈ-ಡಿಸೆಂಬರ್ ೨೦೦೬

ಪ್ರಭು ಖಾನಾಪುರೆ

- ಕುರುಬರ ಹೇಳಿಕೆ, ಫೇಕ್ ಪಟೆ, ಸಾಗರ ಪ್ರಕಾಶನ ಬೆಂಗಳೂರು, ೨೦೦೩

ಪಾಟೀಲ ಎಸ್.ಪಿ.

- ಅಮೋಘಸಿದ್ಧನ ಹೇಳಿಕೆಗಳು, ಜಾನಪದ ಜಗತ್ತು ೧೦-೫,೬, ೧೯೮೯,

ಪಾಟೀಲ ಬಿ.ಬಿ.

- ಕುರುಬ ಜನಾಂಗದ ಇತಿಹಾಸ : ಕೆಲ ಚಿಂತನೆಗಳು, ಪಾವನ(ಕಾಗಿನೆಲೆ ಕನಕ ಗುರುಪೀಠದ ಸ್ಥಾಪನೆಯ ಸಂಸ್ಮರಣ ಸಂಚಿಕೆ), ೧೯೯೨,

ಪಾರ್ವತಿ ನೇ.ರಾ.

- ಮದ್ದೂರು ತಾಲೂಕಿನ ಹಾಲುಮತಸ್ಥರ ವಿಶಿಷ್ಟ ಸಂಪ್ರದಾಯಗಳು, ಜಾನಪದ ಜಗತ್ತು ೨-೬, ೧೯೮೧,

ಪೂಜಾರ ಎಸ್.ಎಸ್.

- ಹಾಲುಮತದ ಹರಕೆಯ ಹಾಡು, ಕಾಲಗತಿ(ಸಂ. ಜ್ಯೋತಿ ಹೊಸೂರ, ರಾಯಭಾಗ),, ೨-೨, ೧೯೮
- ಡೊಳ್ಳಿನ ಹಾಡುಗಳಲ್ಲಿ ನಮ್ಮ ದೇವರು, ಗ್ರಂಥ ಸರಸ್ವತಿ(ಎನ್.ಡಿ.ಬಗರಿ ಅಭಿನಂದನ ಗ್ರಂಥ, ಪ್ರ.ಕೊಳದಮಠ ಸಂಸ್ಥಾನ, ಬೆಂಗಳೂರು),೧೯೮೦

ಬಸವರಾಜ ನೆಲ್ಲಿಸರ್

- ದಕ್ಷಿಣ ಕರ್ನಾಟಕದ ಕುರುಬ ಜನಾಂಗ: ಒಂದು ಜಾನಪದೀಯ ಅಧ್ಯಯನ, ಶಿಕ್ಷಣ ಪ್ರದೀಪ(ಬಿ.ಎಫ್. ದಂಡಿನ ಅಭಿನಂದನ ಗ್ರಂಥ), ೧೯೯೨

ಬಿರಾದಾರ ಬಿ.ಜಿ.

- ಹಾಲುಮತ ಪುರಾಣವು : ಒಂದು ಅವಲೋಕನ, ಹಸ್ತಪ್ರತಿ ಅಧ್ಯಯನ ಸಂ.೪ ಸಂ.೨, ೨೦೦೯

ಭರಮಪ್ಪ ಬಸಪ್ಪ ಹುನಗುಂದ

- ಸರೂರ ರೇವಣಸಿದ್ಧರು, ಕನಕರಶ್ಮಿ೧-೪, ೨೦೦೩,

ಮಲ್ಲಿಕಾ ಘಂಟಿ

- ಹಾಲುಮತದ ಮಹಿಳೆಯರ ಸಾಧನೆ ಸಿದ್ಧಿ, ಕಾಯಕಯೋಗಿ(ಎಂ.ಎಂ.ಮೆಣಸಗಿ ಸಂಸ್ಮರಣ ಗ್ರಂಥ), ೨೦೦೨

ಮಹದೇವ ಎಸ್.

- ಕುರುಬರ ದೇವರ ಕುಣಿತ: ಕಾವೇರಿ ನದಿ ತೀರದಲ್ಲಿನ ಪವಿತ್ರ ಕ್ಷೇತ್ರದ ಒಂದು ಮಾನವಶಾಸ್ತ್ರೀಯ ಅಧ್ಯಯನ, ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು, ಪ್ರಸಾರಾಂಗ, ಕನ್ನಡ ವಿ.ವಿ. ವಿದ್ಯಾರಣ್ಯ, ೨೦೧೦

ಮಹಾಲಿಂಗ ಮಂಗಿ

- ಕುರುಬರ ದಟ್ಟಿ ಆಟ, ಜಾನಪದ ಜಗತ್ತು೨-೬, ೧೯೮೧,

ಮಾದೇಗೌಡ

- ಕುರುಬರ ಸಮಾಜಿಕ ಮತ್ತು ರಾಜಕೀಯ ಹಿನ್ನೆಲೆಯ ಕಿರುಪರಿಚಯ, ಪಾವನ(ಕಾಗಿನೆಲೆ ಕನಕ ಗುರುಪೀಠದ ಸ್ಥಾಪನೆಯ ಸಂಸ್ಮರಣ ಸಂಚಿಕೆ), ೧೯೯೨,

ಮೀರಾಸಾಬಿಹಳ್ಳಿ ಶಿವಣ್ಣ

- ಕುರುಬ ಮೂಲದ ಕುಂಚಟಿಗರ ಸಾಂಸ್ಕೃತಿಕ ವೀರ, ಹಾಲತೊರೆ, ೨೦೦೩

ಮೈತ್ರಿ ಕಾಮಣ್ಣ

- ರಾಜಗೊಂಡ ಬುಡಕಟ್ಟಿನ ಚರಿತ್ರೆ, ಜಾನಪದ ಜಗತ್ತು ೨೨-೨, ೨೦೦೧,

- ಲಾಳಗೊಂಡರ ಚರಿತೆ, ಜಾನಪದ ಜಗತ್ತು ೨೩-೨,೩, ೨೦೦೨,

- ಬೀರಪ್ಪನ ಸುತ್ತಮುತ್ತ, ಕಾಯಕಯೋಗಿ(ಎಂ.ಎಂ.ಮೆಣಸಗಿ ಸಂಸ್ಮರಣ ಗ್ರಂಥ), ೨೦೦೨,

- ಗೊಂಡರು ಲಾಳಗೊಂಡರು, ಹಾಲತೊರೆ, ೨೦೦೩,

- ಬುಡಕಟ್ಟು ಕುಲಕಸಬುಗಳು, ೨೦೦೨, ಜೇನುಕುರುಬ, ಬುಡಕಟ್ಟು ಕುಲಕಸಬುಗಳು, ೨೦೦೨,

- ಸಿಂದಿಗೇರಿ ನೀಲಮ್ಮನ ಚರಿತ್ರೆ, ಇತಿಹಾಸ ದರ್ಶನ ೧೮, ೨೦೦೩

ಮೋಹನ ಕುಮಾರ

- ಜೇನು ಕುರುಬರ ಸಂಘಟನಾ ವ್ಯವಸ್ಥೆ, ಬುಡಕಟ್ಟು ಅಧ್ಯಯನ ಸಂ. ೪ ಸಂ. ೧,೨, ೨೦೦೭,

ರಾಜಪ್ಪ ದಳವಾಯಿ,

- ಕುರುಬ ಜನಾಂಗದ ಭಕ್ತವರ್ಗ, ಪಾವನ(ಕಾಗಿನೆಲೆ ಕನಕ ಗುರುಪೀಠದ ಸ್ಥಾಪನೆಯ ಸಂಸ್ಮರಣ ಸಂಚಿಕೆ), ೧೯೯೨

ರಾಜಮಣಿ ಎಂ.ಬಿ.

- ಕಾಡುಕುರುಬರು, ಕರ್ನಾಟಕ ಬುಡಕಟ್ಟುಗಳು, ೧೯೯೮,

ರಾಜಶೇಖರಪ್ಪ ಬಿ.

- ಕುರುಬರು ದಾವಣಗೆರೆಯ ಗೌಡಿಕೆಯ ಹಕ್ಕನ್ನು ದಿವ್ಯದ ಮೂಲಕ ಗೆದ್ದುಕೊಂಡ ಶಾಸನ, ಹಾಲತೊರೆ, ೨೦೦೩,

- ಇಮ್ಮಡಿ ಮದಕೇರಿನಾಯಕನ ಕಾಲದ ಒಂದು ತಾಮ್ರಪಟ, ನಿರಂತರ, ಲೋಕಪಾವನಿ ಪ್ರಕಾಶನ, ಪಾಂಡವಪುರ, ಮಂಡ್ಯ ಜಿಲ್ಲೆ, ೨೦೦೧,

- ವಿಜಯನಗರದ ಅರಸರು ಕುರುಬ ರಾವುತ ವೀರನೊಬ್ಬನಿಗೆ ನೀಡಿದವೆನ್ನಲಾದ ಮೂರು ನಿರೂಪಗಳು, ವಿಜಯನಗರ ಅಧ್ಯಯನ ಸಂ.೧೨, ೨೦೦೭

ರಾಜು ಜೆ.ಎಂ.

- ಜೇನು ಕುರುಬರ ಪರಂಪರೆ ಮತ್ತು ಆಧುನಿಕತೆ, ಬುಡಕಟ್ಟು ಅಧ್ಯಯನ ಸಂ.೪ ಸಂ.೧,೨, ೨೦೦೭,

ರೋಹಿಣಿ ಭೀಮಾಜಿ

-ಕುರುಬ ಜನಾಂಗದಲ್ಲಿ ಬದಲಾಗುತ್ತಿರುವ ಸಂಸ್ಕೃತಿ, ಕರ್ನಾಟಕದ ಬುಡಕಟ್ಟು ಸಮುದಾಯಗಳು, ಪ್ರಸಾರಾಂಗ ಕನ್ನಡ ವಿ.ವಿ, ವಿದ್ಯಾರಣ್ಯ, ೨೦೧೦

ಲಕ್ಕಪ್ಪಗೌಡ ಹೆಚ್. ಜಿ.,

- ಕುರುಬ ಜನಾಂಗದ ಐತಿಹಾಸಿಕ ಹಿನ್ನೆಲೆ, ಶಿಕ್ಷಣ ಪ್ರದೀಪ(ಬಿ.ಎಫ್. ದಂಡಿನ ಅಭಿನಂದನ ಗ್ರಂಥ), ೧೯೯೨

ಲೋಕೇಶ ಒಡೆಯರ್

- ಗುರುಪೀಠದ ಸ್ವರೂಪ ಮತ್ತು ಮಹತ್ವ, ಪಾವನ(ಕಾಗಿನೆಲೆ ಕನಕ ಗುರುಪೀಠದ ಸ್ಥಾಪನೆಯ ಸಂಸ್ಮರಣ ಸಂಚಿಕೆ), ೧೯೯೨,

ವಡಗಾವಿ ಜಿ. ಎಸ್.

-ಮಾಳಿಂಗರಾಯ, ಜಾನಪದ ದರ್ಶನ ಸಂ-೯, ೧೯೮೮,

ವಾಲಿ ಎ.ಪಿ.

-ಜನಪದರು ಕಂಡ ಜಗದ್ಗುರು ರೇವಣಸಿದ್ಧ ಸಂ-೧೬-೬, ಸೆಪ್ಟಂಬರ್ ೨೦೦೭,

ವೀರಣ್ಣ ದಂಡೆ

-ಹಾಲುಮತ ಪುರಾಣದ ಬೀರಪ್ಪ, ಕನ್ನಡ ಅಧ್ಯಯನ ೭-೨,

ಶಿವಪ್ಪ ನ. ನೀರಲಗಿ

-ಕುರುಬರೆ ವಿಜಯನಗರದ ಸಂಸ್ಥಾಪಕರು, ಹಾಲತೊರೆ, ೨೦೦೩

ಶಿವಕುಮಾರ ನೀರಲಗಿ ಮತ್ತು ಆಯ್. ಎಂ. ಕಂಬಳಿ

- ಜನಾಂಗದ ಪ್ರಾಚೀನ ಶಾಸನಕವಿ ಕವಿರಾಜ ಬಾಂಧವಮಲ್ಲ, ಪಾವನ(ಕಾಗಿನೆಲೆ ಕನಕ ಗುರುಪೀಠದ ಸ್ಥಾಪನೆಯ ಸಂಸ್ಮರಣ ಸಂಚಿಕೆ), ೧೯೯೨,

ಸಿದ್ಧರಾಮಯ್ಯ, ಎಸ್.ಜಿ.

- ಜನಪದ ಕವಿ ಕಂಡ ರೇವಣಸಿದ್ಧ, ಪಾವನ(ಕಾಗಿನೆಲೆ ಕನಕ ಗುರುಪೀಠದ ಸ್ಥಾಪನೆಯ ಸಂಸ್ಮರಣ ಸಂಚಿಕೆ), ೧೯೯೨,

- ಹತ್ತಿ ಕಂಕಣದ ಕುರುಬರಲ್ಲಿ ಮದುವೆಯ ಆಚರಣೆ, ಯಡೆಕುಂಟೆ ಗೆಣೆಸಾಲು, ೧೯೯೫

ಸುಧಾಕರ

- ರೇವಣಸಿದ್ಧೇಶ್ವರ, ಹಾಲತೊರೆ, ೨೦೦೩

ಸೂರ್ಯನಾಥ ಕಾಮತ್

ಕುರುಬರು -ಕೆಲವು ವಿಚಾರಗಳು, ಶಿಕ್ಷಣ ಪ್ರದೀಪ(ಬಿ.ಎಫ್. ದಂಡಿನ ಅಭಿನಂದನ ಗ್ರಂಥ), ೧೯೯೨

ಹನುಮಂತಯ್ಯ ವಿ.ಆರ್.

- ಒಬ್ಬ ಕುರುಬರ(ಗೊಲ್ಲರ) ಗುರುವಿನ ಮಹತ್ವದ ಸನ್ನದು(ಅನು), ಜಯಕರ್ನಾಟಕ, ೨೦-೪, ಪುಟ. ೧೮೧-೧೮೬,

- ಶ್ರೀ ಕನಕದಾಸರು ಕುರುಬರಲ್ಲವೇ?, ಜಯ ಕರ್ನಾಟಕ ೨೩-೫, ಪುಟ. ೧೦೮-೧೧೧, ಸುಬೋಧ ೨೩-೫, ಪುಟ. ೩೭೨-೩೭೫

- ಕುರುಬರು ಏಕೆ ಲಿಂಗ ಕಟ್ಟಿಕೊಳ್ಳಬೇಕು ?, ಕುರುಬರ ಪತ್ರಿಕೆ ೧-೭- ೧೯೨೮

ಹರೀಶ್ ಪಿ.ಎನ್.

- ಬೆಟ್ಟಕುರುಬರು, ಜೇನುಕುರುಬರು, ಪಾವನ(ಕಾಗಿನೆಲೆ ಕನಕ ಗುರುಪೀಠದ ಸ್ಥಾಪನೆಯ ಸಂಸ್ಮರಣ ಸಂಚಿಕೆ), ೧೯೯೨,

ಹಳ್ಳಿಕೇರಿ ಎಫ್.ಟಿ.

-ಶಾಸನಗಳಲ್ಲಿ ಕುರುಬರು, ಹಾಲಕೆನೆ, ೨೦೦೧

-ಕುರುಬರ ಗುರುಪರಂಪರೆಗೆ ಸಂಬಂಧಿಸಿದ ತುರುವೆಕೆರೆಯ ಶಾಸನ ಶೋಧ ಶಾಸನ ಅಧ್ಯಯನ -೨, ೨೦೦೪

- ಕುರುಬ ಲಿಂಗಾಯತ, ಕಂಠ ಪತ್ರ-೨, ೨೦೦೪

- ರೇವಣಸಿದ್ಧ ಪರಂಪರೆಯ ಹಾಲುಮತ ಮಠಗಳು, ಇತಿಹಾಸ ದರ್ಶನ ಸಂ.೨೧, ೨೦೦೫

- ಅಮೋಘಸಿದ್ಧ ಪರಂಪರೆಯ ಹಾಲುಮತ ಮಠಗಳು, ಇತಿಹಾಸ ದರ್ಶನ ಸಂ.೨೧, ೨೦೦೬

- ಇಟ್ಟಪ್ಪ : ಹಾಲುಮತ ಸಾಂಸ್ಕೃತಿಕ ವೀರ, ಇತಿಹಾಸ ದರ್ಶನ ಸಂ.೨೨, ೨೦೦೭

- ಕುರುಬರಿಗೆ ಸಂಬಂಧಿಸಿದ ವಿಜಯನಗರದ ಅಪ್ರಕಟಿತ ಶಾಸನ, ವಿಜಯನಗರ ಅಧ್ಯಯನ ಸಂ.೧೨, ೨೦೦೭

- ಬೀರದೇವರ ತೋಪುಜಾತ್ರೆಯ ಆಚರಣೆಗಳು, ಜಾನಪದ ಕರ್ನಾಟಕ ಸಂ.೬-೨, ೨೦೦೭

- ಸಿದ್ಧರಾಮ ಪರಂಪರೆಯ ಹಾಲುಮತ ಮಠಗಳು, ಇತಿಹಾಸ ದರ್ಶನ ಸಂ.೨೩, ೨೦೦೮

- ಕುರುಬರಿಗೆ ಸಂಬಂಧಿಸಿದ ದೇವಲಾಪುರದ ನಾಲ್ಕು ಅಪ್ರಕಟಿತ ತಾಮ್ರಪತ್ರಗಳು, ವಿಜಯನಗರ ಅಧ್ಯಯನ ಸಂ.೧೩, ೨೦೦೮

- ಇತಿಹಾಸ ಸಂಶೋಧಕ ವಿ.ಆರ್.ಹನುಮಂತಯ್ಯ, ಇತಿಹಾಸ ದರ್ಶನ ಸಂ.೨೪, ೨೦೦೯

- ಹಕ್ಕಬುಕ್ಕ ಇತಿವೃತ್ತ ವಿಚಾರ : ಕೆಲವು ಶೋಧಗಳು, ವಿಜಯನಗರ ಅಧ್ಯಯನ ಸಂ.೧೪, ೨೦೦೯

- ಹಾಲುಮತ ಅಧ್ಯಯನದ ಆಕರಗಳಾಗಿ ದಾಖಲೆಗಳು, ಹಾಲುಮತ ವ್ಯಾಸಂಗ ಸಂ. ೧, ೨೦೦೯

- ಬುಳ್ಳಪ್ಪ : ಕುರುಬ ಸಮುದಾಯದ ಸಾಂಸ್ಕೃತಿಕ ವೀರ, ಕನ್ನಡ ಸಾಹಿತ್ಯ ಪರಿಷ್ಪತ್ರಿಕೆ ಸಂ.೮೬, ೨೦೦೯

- ಅಲಿಖಿತ ಆಕರಗಳಲ್ಲಿ ರೇವಣಸಿದ್ಧೇಶ್ವರ, ಇತಿಹಾಸ ದರ್ಶನ ಸಂ.೨೫, ೨೦೧೦

- ದನಗರ ಗವಳಿಗರು, ಹಾಲುಮತ ವ್ಯಾಸಂಗ ಸಂ. ೨, ೨೦೧೦

- ಶಾಂತಮುತ್ತಯ್ಯನನ್ನು ಕುರಿತು ಒಂದು ಕಿರುಕೃತಿಯ ಶೋಧ, ಹಸ್ತಪ್ರತಿ ಅಧ್ಯಯನ ಸಂ. ೫-೧,೨, ೨೦೧೦

- ಹಾಲುಮತ ಮಹಾಸಭೆಯ ಭಾಷಣಗಳು ವರದಿಗಳು : ಅವಲೋಕನ, ಹಾಲುಮತ ಮಹಾಸಭೆ ಪ್ರಸ್ತಾವನೆ, ೨೦೦೯

- ಹಾಲುಮತ ಸಮಾಜ ಸಂಸ್ಕೃತಿ : ಎಂ.ಎಂ.ಕಲಬುರ್ಗಿ ಅವರ ಶೋಧಗಳು, ಹಾಲುಮತ ಅಧ್ಯಯನಗಳು, ಪ್ರಸ್ತಾವನೆ, ೨೦೧೦

- ಕುರುಬ ಸಮುದಾಯದ ಅಭಿವೃದ್ಧಿ : ಕೆಲವು ಸಂಗತಿಗಳು, ಹಾಲುಮತ ಅಧ್ಯಯನ ೧, ೨೦೧೦

ಹಿರೇಮಠ ಎಸ್.ಎಸ್.

- ಮೈಲಾರ : ಪ್ರಾಚೀನ ಶೈವಪಂಥವಾಗಿ, ಜನಪದ ಸಮಾಜ ಸಂಸ್ಕೃತಿ, ಸೂರ್ಯ ಪ್ರಕಾಶನ ಮಲ್ಲಾಡಿಹಳ್ಳಿ, ೨೦೦೫

ಹುಲಿಯಾರಪ್ಪ ಹೆಚ್.

- ಕುರುಬರ ಜನಾಂಗದ ವೀರ ಪರಂಪರೆ, ಕಾಯಕಯೋಗಿ (ಎಂ.ಎಂ.ಮೇಣಸಗಿ ಸಂಸ್ಮರಣ ಗ್ರಂಥ), ೨೦೦೨

೪. ಪಿಎಚ್.ಡಿ. ಮಹಾಪ್ರಬಂಧಗಳು

- **Rathan Sabhapati.**, A Descriptive Analysys of Jenu Kuruba (Kattu Nair), 1981

- **Mallappa A.B.**, A Linguastic Study of Kuruba Dailects of Bellary Dist, 2000

Basavarajappa K.H., Backward Caste and Class Movement in Karnataka : With Special reference to Kuruba

- **ಗುಂಡಕರ್ಜಗಿ ವಾಯ್.ಕೆ.**, ಹಂಡೆ ಕುರುಬರು , ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೨೦೦೨.

- ಮೈತ್ರಿ, ಕೆ.ಎಂ., ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ, ಮೈಸೂರು. ವಿ.ವಿ. ಮೈಸೂರು, ೧೯೯೪

- ವೆಂಕಟೇಶ ಜಿ., ಗುಡ್ಡದ ಮಲ್ಲಯ್ಯ(ಮೀನಗುಂದಿ ಮಲ್ಲಯ್ಯ)ಆಚರಣೆ : ಜಾನಪದೀಯ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೪
- ಪರಶುರಾಮ ಸಿ.ಡಿ., ಮೈಸೂರು ಪ್ರದೇಶದ ಕುರುಬರು, ಮೈಸೂರು ವಿಶ್ವವಿದ್ಯಾಲಯ ಮೈಸೂರು, ೨೦೦೬
- ಉಮೇಶ ಗುರಿಕಾರ, ಹೈದ್ರಾಬಾದ ಕರ್ನಾಟಕದ ಕುರುಬರ ಚಾರಿತ್ರಿಕ ಅಧ್ಯಯನ (ಕೊಪ್ಪಳ ಜಿಲ್ಲೆಯನ್ನು ಅನುಲಕ್ಷಿಸಿ), ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೭
- ಯರ್ರೆಪ್ಪ ಡಿ, ಅಲೆಮಾರಿ ಕುರುಬರು, ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೭
- ಬಿರಾದರ ಬಿ.ಜಿ., ಕುರುಬರಗುರು ಒಡೆಯರು : ಸಾಂಸ್ಕೃತಿಕ ಅಧ್ಯಯನ , ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೮
ಬಿರಾದರ ಡಿ. ಜಿ., ಹುಲಜಂತಿ ಮಾಳಿಂಗರಾಯ, ಶಿವಾಜಿ ವಿಶ್ವವಿದ್ಯಾಲಯ ಕೊಲ್ಹಾಪುರ, ೨೦೦೮
- ನಾಗರಾಜ ಎ., ಬೆಂಗಳೂರು ನಗರದ ಕುರುಬ ಜನಾಂಗ : ಜಾನಪದೀಯ ಅಧ್ಯಯನ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ೨೦೦೮
- ಹುಲಿಗೆಮ್ಮ ಬಿ, ಹಾಲುಮತ ಪುರಾಣಗಳು : ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯
- ಪ್ರಭಾಕರ ಲಗಮಣ್ಣವರ, ಬೆಳಗಾವಿ ಜಿಲ್ಲೆಯ ಕುರುಬರು : ಒಂದು ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೨೦೦೯
- ಚಂದ್ರಪ್ಪ ಸೊಬಟಿ., ಡೊಳ್ಳಿನ ಹಾಡುಗಳು : ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯
- ಚನ್ನಪ್ಪ ಕಟ್ಟಿ, ಅಮೋಘಸಿದ್ಧ ಪರಂಪರೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೧
- ಅನ್ನಪೂರ್ಣ ಗೋಸ್ಬಾಳ, ಹಾಲುಮತ ಅಧ್ಯಯನದ ಆಕರಗಳು : ಸ್ವರೂಪ ಮತ್ತು ವಿಶ್ಲೇಷಣೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೧

೫.ಎಂ.ಫಿಲ್. ಸಂಪ್ರಬಂಧಗಳು

- ಪಿ.ಕೃಷ್ಣಮೂರ್ತಿ, ಮುದಿಮಲ್ಲಪ್ಪನವರ ಜೀವನ ಹಾಗೂ ಸಾಧನೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೩
- ಡಿ.ಎನ್.ಹನುಮಂತಪ್ಪ., ಜಾನಪದ ಹಾಲುಮತ ಮಹಾಕಾವ್ಯದ ಸೃಷ್ಟಿ ಮತ್ತು ಸಂಸ್ಕೃತಿ , ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೭
- ವಿಜಯಶ್ರೀ ಇಟ್ಟಣ್ಣವರ., ಕಂಬಳಿ : ಒಂದು ಅಧ್ಯಯನ , ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೮
- ಒಂಟಿಗೋಡಿ ಟಿ.ಎನ್., ರಾಯಭಾಗ ತಾಲೂಕಿನ ಹಾಲುಮತ ದೈವಗಳು ,ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೮
- ರಾಜಶ್ರೀ ಪಾಟೀಲ, ಸರೂರ ಶಾಂತಮುತ್ತಯ್ಯ: ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯
- ರಾಜಶೇಖರ ಮಾರನೂರ,ಇಂಡಿ ತಾಲೂಕಿನ ಹಾಲುಮತ ದೈವಗಳು: ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೦

English Books and Articles

I.Books

Shonthmeir G.D.,

Pastroal Dities in western india, Oxford University Press, 1993

Nanjundaih H.

Kuruba Caste

Heidrun Bruckner, Anne Feldhaus, Aditya Malik (Ed),

Gunther Dietz Sontheimer, Essays on Religion Literature and Law, Indira Gandhi National Centre For The Arts NewDelhi & Manohar, 2004

Singh K.S. (Ed),

People of india Volumes, Anthropological Servey of india, East West Press Newdelhi, 2003

Moonna Lal chandail

An Ethnographical Account of The Dhangars or Pal Kshatriyas, 1933

II.Articles

M.L.K.Murthy

1. Ethnohistory of pastoralism : A Study of Kuruvas and Gollas, Studies in History, Vol No - IX-I, 19931
2. Beerappa And Mallanna : The Emergence of the Folk Gods In The Religion of Kuruvas and Gollas of Andhra pradesh, Bulletin of the Deccon College Post Graduate and Research Institute Pune,(Prof. S.M.Katre Felicitation Vollume) Vol No - 51-52, 1991-92

Veerathappa K.

The Cultural Trends of A Hill Tribe, Kadu Kurubas: Mysore, The Querterly Journal of the Mythic Society, Vol No -LV-1, April 1964

Chidananda Murthy M.

Notes on the Kuruba -Odeyar Community, The Querterly Journal of the Mythic Society, Vol No - LXXI-1, 1980

೨. ಸಹಾಯಕ ಗ್ರಂಥಸೂಚಿ

೧. ಉತ್ತರ ಕರ್ನಾಟಕ ಜಾನಪದ ಗೀತ ಮೇಳಗಳು: ಒಂದು ಸಾಂಸ್ಕೃತಿಕ ಅಧ್ಯಯನ, ವೀರೇಶ ಬಡಿಗೇರ, ವಿಮೋಚನಾ ಪ್ರಕಾಶನ, ಬೆಳಗಾವಿ.

೨. ಕನ್ನಡ ದಾಖಲು ಸಾಹಿತ್ಯ, ಕೆ.ರವೀಂದ್ರನಾಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦.

೩. ಕರ್ನಾಟಕದ ನಾಥ ಪಂಥ, ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೯.

೪. ಕರ್ನಾಟಕ ಬುಡಕಟ್ಟುಗಳು ಸಂಪುಟ ೨, ಎಚ್.ಜೆ.ಲಕ್ಕಪ್ಪಗೌಡ (ಸಂ) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ೨೦೦೦.

೫. ಕಾಯಕಯೋಗಿ, ಸಿಂಗಣ್ಣ ಸಣ್ಣಕ್ಕಿ, ಎ.ಬಿ.ಹಿರೇಮಠ, (ಸಂ) ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೨.

೬. ಗೊಂಡರ ರಾಮಾಯಣ, ಹಿ.ಚಿ.ಬೋರಲಿಂಗಯ್ಯ (ಸಂ) ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೧೯೯೯.

೭. ಗೊಂಡರ ಸಂಸ್ಕೃತಿ, ಸೈಯದ್ ಜಮೀರುಲ್ಲಾ ಷರಿಫ್ (ಸಂ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩.

೮. ಜಂಗಮದಿಂದ ಸ್ಥಾವರಕ್ಕೆ, ಡಾ. ಮೃತ್ಯುಂಜಯ ರುಮಾಲೆ (ಸಂ) ಸಾಯಿಮಣಿ ಪ್ರಕಾಶನ, ಹೊಸಪೇಟೆ ೨೦೦೯.

೯. ಜನಪದ ಕಾವ್ಯ, ಬೀರಪ್ಪ, ಲ. ಹಳಮನಿ, ವಾಸವಿ ಆಫ್‌ಸೆಟ್ ಪ್ರಿಂಟರ್ಸ್, ಬಾಗಲಕೋಟೆ, ೨೦೦೫.

೧೦. ಜಾನಪದ ಪ್ರಚಾರ, ನಿಂಗಣ್ಣ ಸಣ್ಣಕ್ಕಿ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೭.

೧೧. ಜಾನಪದ ಸಮ್ಮುಖ, ದೇವೇಂದ್ರಕುಮಾರ ಹಕಾರಿ, ಗಂಗಾಧರ ಧರ್ಮಪ್ರಚಾರಕ ಮಂಡಲ, ಮೂರುಸಾವಿರಮಠ, ಹುಬ್ಬಳ್ಳಿ, ೧೯೮೩.

೧೨. ಜಾನಪದ ಸಾಹಿತ್ಯದರ್ಶನ ಭಾಗ ೯, ದೇವೇಂದ್ರಕುಮಾರ ಹಕಾರಿ, (ಸಂ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೮೯.

೧೩. ಜಾನಪದ ಸಾಹಿತ್ಯ ದರ್ಶನ, ಭಾಗ ೧೩, ಮೈಲಾರಲಿಂಗ ಎಂ.ಬಿ.ಕೊಟ್ರಶೆಟ್ಟಿ (ಸಂ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪.

೧೪. ದಕ್ಷಿಣದ ದೇಶೀ ದೇವರು, ಮೂಲ ರಾ.ತಿಂ.ಡೇರೆ, (ಅನು) ರಾಮಕೃಷ್ಣ ಮರಾಠೆ, ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೩.

೧೫. ದೇವರ್ ಬಂದಾವ್ ಬನ್ನಿರೇ ಭಾಗ ೨, ಶಿವಾನಂದ ಗುಬ್ಬಣ್ಣನವರ (ಸಂ) ಒಕ್ಕಲ ಮಕ್ಕಳ ಪ್ರಕಾಶನ, ಯಳವತ್ತಿ ೧೯೮೦.

೧೬. ನಡೆಮಡಿ, ಎಂ.ಜೈಕುಮಾರ, ಶೃತಿ ಪ್ರಕಾಶನ, ೧೯೮೦.

೧೭. ನುಡಿ ನಮನ, ಎಸ್.ಎಫ್.ಜಕಬಾಳ, ತ್ವರಿತ ಮುದ್ರಣ, ಆಫ್‌ಸೆಟ್ ಪ್ರಿಂಟರ್ಸ್, ೨೦೦೬.

೧೮. ಷೇಕ್ ಪಟೆ, ಪ್ರಭು ಖಾನಾಪುರೆ, ಸಾಗರ ಪ್ರಕಾಶನ, ಬೆಂಗಳೂರು, ೨೦೦೩.

೧೯. ಬುಡಕಟ್ಟು ಕುಲಕಸುಬುಗಳು, ಕೆ.ಎಂ.ಮೇತ್ರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨.

೨೦. ಮಹಾಮಾರ್ಗ, ಸದಾನಂದ ಕನವಳ್ಳಿ, ವೀರಣ್ಣ ರಾಜೂರ, ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ ೧೯೯೮.

೨೧. ಮಾರ್ಗ ೩, ಎಂ.ಎಂ.ಕಲಬುರ್ಗಿ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೦.

೨೨. ಮಾರ್ಗ ೪, ಎಂ.ಎಂ.ಕಲಬುರ್ಗಿ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೪.

೨೩. ಮ್ಯಾಲಸಾ ಮಾರ್ತಾಂಡ ಭೈರವ ಪುರಾಣಂ, ಎನ್.ಎಸ್.ಜೋಷಿ, ಶ್ರೀಮಾಲತೇಶ ಪ್ರಕಾಶನ, ೨೦೧೧.
೨೪. ಮೈಲಾರ ದೇವರು, ಶ್ರೀನಿವಾಸ ರಿತ್ತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೦.
೨೫. ಮೈಲಾರ ಮಾಳಮ್ಮ ಮತ್ತು ನೀಲವೇಣಿ, ಚಕ್ಕರೆ ಶಿವಶಂಕರ, ಸಾಗರ ಪ್ರಕಾಶನ, ಬೆಂಗಳೂರು.
೨೬. ಮೈಲಾರಲಿಂಗ ಖಂಡೋಬಾ: ಒಂದು ಸಾಂಸ್ಕೃತಿಕ ಅಧ್ಯಯನ, ಎಂ.ಬಿ.ನೇಗಿನಹಾಳ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೨.
೨೭. ಮ್ಯಾಸ ಮಂಡಲ, ಮೀರಾಸಾಬಿಹಳ್ಳಿ ಶಿವಣ್ಣ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.
೨೮. ರಾಮಾಯಣ ಭಾರತ ಪುರಾಣ ಪ್ರಶ್ನಾವಳಿ, ಚಂದ್ರಕಾಂತ ಬಿಜ್ಜರಗಿ, ಶೈಲಚಂದ್ರ ಪ್ರಕಾಶನ, ಬಿಜಾಪುರ, ೨೦೦೮.
೨೯. ರಾಷ್ಟ್ರಕೂಟರ ತಮಿಳು ಶಾಸನಗಳು, ಎಸ್.ಸ್ವಾಮಿನಾಥನ್ (ಸಂ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.
೩೦. ಲಾವಣಿ ಹಾಡುಗಳು, ಶಂಕರ. ಶಿ.ಕಂಬಾರ, ವಿದ್ಯಾನಿಧಿ ಪ್ರಕಾಶನ, ೨೦೦೬.
೩೧. ವಿಠ್ಠಲ ಸಂಪ್ರದಾಯ, ಮೂಲ ರಾ.ಚಿಂ.ಢೇರೆ (ಅನು) ವಿಠ್ಠಲರಾವ್ ಗಾಯಕವಾಡ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೫.
೩೨. ವೀರಶೈವ ಪಂಚಾಚಾರ್ಯ ಚರಿತ್ರೆ, ಶ್ರೀ ಮಲ್ಲಿಕಾರ್ಜುನ ಸದ್ಧರ್ಮ ದೀಪಿಕೆಯ ಪ್ರಕಾಶಕ, ಮೈಸೂರು, ಶ್ರೀ ನಿರಂಜನ ಚನ್ನಬಸವ ಸ್ವಾಮಿಗಳವರು, ಮುಪ್ಪಿನಸ್ವಾಮಿ ವಿರಕ್ತಮಠ, ಬ್ಯಾಡಗಿ.
೩೩. ಶಂಬಾ ಕೃತಿ ಸಂಪುಟ-೨, ಕಂನಡ ಕಂನುಡಿ, (ಸಂ) ಮಲ್ಲೇಪುರಂ ಜಿ.ವೆಂಕಟೇಶ, ಕನ್ನಡ ಪುಸ್ತಕ ಪ್ರಾಧಿಕಾರ ೧೯೯೯.
೩೪. ಶಂಬಾ ಜೋಶಿ, ಸಂಪುಟ-೨ ಕರ್ನಾಟ ಸಂಸ್ಕೃತಿ, ಮಲ್ಲೇಪುರಂ ಜಿ.ವೆಂಕಟೇಶ, ಕನ್ನಡ ಪುಸ್ತಕ ಪ್ರಾಧಿಕಾರ ೧೯೯೯.
೩೫. ಶಿವಯೋಗಿ ಸಿದ್ಧರಾಮ ವಚನ-ನಿರ್ವಚನ, ಹಿರೇಮಠ ಎಸ್.ಎಂ., ವಿಧ್ಯಾನಿಧಿ ಪ್ರಕಾಶನ, ಗದಗ, ೨೦೦೭.
೩೬. ಸ್ತ್ರೀ ಶಿಕ್ಷಣ ಹರಿಕಾರ ಜ್ಯೋತಿಬಾ ಫುಲೆ, ಹಳೆಮನೆ ರಾಜಶೇಖರ, ೨೦೦೮.
೩೭. ಸಿದ್ಧಸಾಹಿತ್ಯ, ಕೃಷ್ಣಮೂರ್ತಿ ಮ.ಸು., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.
೩೮. ಸುವರ್ಣ ಜನಪದ ಕಾವ್ಯ, ಎಸ್.ಜಿ.ಸಿದ್ಧರಾಮಯ್ಯ, ಕೆ.ಆರ್.ಸಂಧ್ಯಾರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.
೩೯. ಸುವರ್ಣ ಜನಪದ ಲೇಖನಗಳು, ವೀರಣ್ಣ ದಂಡೆ, ಶ್ರೀಪಾದ ಶೆಟ್ಟಿ, ೨೦೦೬.
೪೦. ಹಾಲುಮತ ಪುರಾಣಗಳ ಭಿನ್ನಾಭಿಪ್ರಾಯಗಳು, ಶಂಕರ ಶಿ.ಕುಂಬಾರ, ವಿಜೇತ ಪ್ರಕಾಶನ, ೨೦೦೬.
೪೧. ಹುಲಕುಂದ ಭೀಮಕವಿಯ ಸಾಹಿತ್ಯ, ಡಾ. ಚೆನ್ನಕ್ಕ ಪಾವಟೆ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೭.


ಛಾಯಾಚಿತ್ರಗಳು



ಸರೂರ ಗ್ರಾಮದ ಶಾಸನ ಶಿಲ್ಪ




ತಾಮ್ರದ ಬಿಲ್ಲೆ


ಲಕ್ಷ್ಮೇಶ್ವರದಲ್ಲಿ

ಶ್ರೀ ಪಾಲುಮತ ಧರ್ಮೋತ್ತೇಜಕ

ಮಹಾಸಭೆಯ ರಿಪೋರ್ಟು

ಪಾಲುಮತ ಧರ್ಮೋತ್ತೇಜಕ ಪ್ರಥಮ ಮಹಾಸಭೆಯ ವರದಿಯ ಮುಖಪುಟ


ಶ್ರೀ

ಶ್ರೀ ಪರಬ್ರಹ್ಮಣೇನಮಃ.

ಕುರುಬರ ಕೈಪಿಡಿ.

ಕುರುಬರಿಗೂ, ಒಕ್ಕಲಿಗರಿಗೂ ಜಾತಿಸಂಬಂಧವಾದ ವ್ಯಾಜ್ಯವು
ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್‌ರವರ ಕೋರ್ಟಿನಲ್ಲಿ
ಜರುಗಿ ಗ್ರಂಥಗಳನ್ನು ಪರಿಶೀಲಿಸಿ ಘನವುಳ್ಳ ಮ್ಯಾಜಿ
ಸ್ಟ್ರೇಟರವರು ತೀರ್ಮಾನ ಮಾಡಿರುವದನ್ನು ಇಂ
ಗ್ಲೀಷಿನಿಂದ ಕನ್ನಡಕ್ಕೆ ಪಂಡಿತರ ಸಹಾಯದಿಂದ
ತರ್ಜುಮೆ ಮಾಡಿಸಿರುತ್ತೆ.

Edited by,

M N. LINGAPPA,

Kulachintamani, Editor Kuruvijaya.


1000 Copies.

Printed at the Indira Press Bangalore City.

(Registered Copyright)

1917.

ಕುರುಬರ ಕೈಪಿಡಿ ಪುಸ್ತಕದ ಮುಖಪುಟ



—(ಶ್ರೀ ಗುರು ರೇವಣಸಿದ್ಧೇಶ್ವರ ಪ್ರಸನ್ನ)—

ಶ್ರೀಮದ್ದಕ್ಷಿಣ ಕಾಶೀ ಅಮರ ಗಣಂಗಳ ನಿಜ
ಸಿಂಹಾಸನಾಧೀಶ ಚವುಡಯ್ಯ ದಾನಪುರ
ಸಂಸ್ಥಾನ, ಪಟ್ಟಾಭಿಷಿಕ್ತ, ವೇದತೀರ್ಥ, ಧರ್ಮ
ಭೂಷಣ, ವಿದ್ಯಾನಿಧಿ, ಪಂಡಿತ ಪದವೀಪ್ರತಿಷ್ಠಿತ
ಜಗದ್ಗುರು ಜಗದಾಚಾರ್ಯ ಸ್ವಾಮಿ ವಿರೂಪಾಕ್ಷ
ಒಡೆಯರವರ ಅಧ್ಯಕ್ಷತೆಯಲ್ಲಿ ಕೂಡಿದ,
ಶ್ರೀ ಹಾಲುಮತ (ಕುರುಬರ) ಮಹಾಸಭೆಯ

ರಿಪೋರ್ಟ.

ಅಬ್ಬೀಗೇರಿ
ತಾಲೂಕ ರೋಣ ಜಿಲ್ಲಾ ಧಾರವಾಡ.
ತಾ. ೨,-೩, ೪ ಸಪಟೆಂಬರ ೧೯೨೯ ನೇ ಇಸ್ವಿ.

ಇದನ್ನು
ಶ್ರೀ. ಮಹಾದೇವಪ್ಪ ಸಿದ್ದಪ್ಪ ಕಂಬಳಿ
ಚೇರಮನ್ನ ಸ್ವಾಗತ ಕಮೀಟಿ ಇವರು ಅಬ್ಬೀಗೇರಿ
ಶ್ರೀ ಹಾಲುಮತ ಮಹಾಸಭೆಯ ಸ್ವಾಗತ ಮಂಡಲದ
ಆಫೀಸಿನಲ್ಲಿ ಪ್ರಸಿದ್ಧ ಪಡಿಸಿದರು.

೧೯೨೯ರಲ್ಲಿ ನಡೆದ ಹಾಲುಮತ ಮಹಾಸಭೆಯ ವರದಿಯ ಮುಖಪುಟ

Reg. No. M. 2355

ಶ್ರೀಶಿವನ್ಯಾಸವಂಶೀಯರಾದ
ಕುರುಬರ
ಜಗತ್ಪಾವನ

ಎಂಬ ಮಾಸಪತ್ರಿಕೆ.

ಎಂ. ಏ. ಲಿಂಗಪ್ಪ ಎಡಿಟರ್.

ಸಂಪುಟ ೨. { ೧೯೨೭ನೇ ನವಂಬರು, ಡಿಶಂಬರು. } ಸಂ|| ೧-೨.



ಕುರುಬರ ಜಗತ್ಪಾವನ ಪತ್ರಿಕೆಯ ಮುಖಪುಟ

ಶ್ರೀ ಬೀರೇಶ್ವರಾಯ ನಮಃ.



ಕುರುಬರ ಜನಾಂಗದ

ಏಳಿಗೆಗಾಗಿ

ಹೊರಡುವ

ಸ್ವಮತಬಂಧು.

ತಿಳಿಗನ್ನಡ ಮಾಸಪತ್ರಿಕೆ.

ವರ್ಷ ೧] ಮೇ ೧೯೨೯ [ಸಂಚಿಕೆ ೧

ಸಂಪಾದಕ:
ಕೆ. ಜವರಯ್ಯ.
ಪ್ರಕಾಶಕ:
ಆರ್. ಬಸವರಾಜ್.
ಮೈಸೂರು:
ಶ್ರೀ ಸತ್ಯನಾರಾಯಣ ಪ್ರೆಸ್.

ಸ್ವಮತಬಂಧು ಪತ್ರಿಕೆಯ ಮುಖಪುಟ

ಭಾರತ ದೇಶದ ಕುರುಬರ ಚರಿತ್ರೆ

The History Of
THE SHEPHERDS OF INDIA.,

(IN FOUR PARTS, FULLY ILLUSTRATED)

ಅನೇಕ ಚಿತ್ರ, ಭಾವಚಿತ್ರಗಳಿಂದ ಕೂಡಿ
ನಾಲ್ಕು ಭಾಗಗಳುಳ್ಳ ಒಂದೇ ಪುಸ್ತಕ

ಗ್ರಂಥಕರ್ತ :

ವಿ. ಆರ್. ಹನುಮಂತಯ್ಯ

ಕೆಲವು ಬದಲಾವಣೆಗಳಿಂದ ವಿಸ್ತರಿಸಿ ಬರೆದಿರುವ
ದ್ವಿತೀಯ ಮುದ್ರಣ ಪ್ರತಿಗಳು 1000 ಮಾತ್ರ.

ಡಿಸೆಂಬರ್ 1958ನೇ ಇಸವಿ

ಬೆಲೆ: ರೂ. 3-00 ಅಂಚೆ ವೆಚ್ಚ ಬೇರೆ

ಮುದ್ರಕರು :
ವಿ. ಎನ್. ಕೆ. ಪ್ರಿಂಟರ್ಸ್,
ಅರಳೇಪೇಟೆ, ಬೆಂಗಳೂರು-2.

ಭಾರತ ದೇಶದ ಕುರುಬರ ಚರಿತ್ರೆಯ ಮೊದಲ ಪುಟ